UNIVERSAL
LIBRARY
OU_198034
UNIVERSAL
LIBRARY

K926 K 2650
S 52 K
[illegible]
[illegible]

OUP -23—4-4-69—5,000.

**OSMANIA UNIVERSITY LIBRARY**

Call No. K926 S52K1 Accession No. K2650

Author

Title

This book should be returned on or before the date last marked below.

೨೩ನೆಯ ವರ್ಷದ ೩–೪-ನೆಯ ಕುಡಿ

# ಯಂತ್ರಯೋಗಿ
# ಕಿರ್ಲೋಸ್ಕರ ಲಕ್ಷ್ಮಣರಾಯರು

★

ಲೇಖಕರು :
ಶ್ರೀ ಶಂಕರರಾವ ವಾ. ಕಿರ್ಲೋಸ್ಕರ

ಅನುವಾದಕರು :
ಸ್ವಾತಂತ್ರ್ಯಪ್ರಿಯ

★

ಮಿಂಚಿನಬಳ್ಳಿ ಕಾರ್ಯಾಲಯ,
ಧಾರವಾಡ

●

ಅಕ್ಷಯ್ಯತೃತೀಯೆ, ೧೮೮೩ ಪ್ಲವ.
೧೮–೪–೧೯೬೧

ಸಾದಾ ಪ್ರತಿ
ರೂ. ೪=೦೦

ಉತ್ತಮ ಪ್ರತಿ
ರೂ. ೫=೦೦

ಸಾಹಿತ್ಯ ಭಾಂಡಾರ

**ಮಿಂಚಿನಬಳ್ಳಿಯ ಸಹಾಯಕ ಮಂಡಳ :**

**ಶ್ರೀ ಸುರೇಂದ್ರ ದಾನಿ** ಬಿ. ಎ.

**ಶ್ರೀ ಅನಂತ ತಡಸ** ಬಿ. ಕಾಮ್.

**ಶ್ರೀ ಅನಂತ ಬುರ್ಲಿ** ಬಿ. ಎ.

---

## ಮುಂದೆ ಬರಲಿರುವ ಗ್ರಂಥಗಳು :

(೧) **ಶ್ರೀ ರವೀಂದ್ರರ ವಚನಗಳು**

—ನರೇಗಲ್ಲ ಪ್ರಲ್ಹಾದರಾಯರು ಎಂ. ಎ.

(೨) **ಪಂ. ಜವಾಹರಲಾಲ ನೆಹರು**

—ಡಾ. ನಾ. ಭೀ. ಕಬ್ಬೂರ ಎಂ. ಬಿ. ಬಿ. ಎಸ್.

(೩) **ಶ್ರೀಮತ್ ರಾಮಾನುಜಾಚಾರ್ಯರು**

—ಪ್ರಾ. ಯಾಮುನಾಚಾರ್ಯ, ಎಂ. ಎ.

(೪) **ವಿಜ್ಞಾನದ ಆಹ್ವಾನ**

—ಪ್ರಾ. ಸಿ. ಎಸ್. ಕುಲಕರ್ಣಿ, ಎಂ. ಎ.

ಇವಲ್ಲದೆ

**ಡಾ. ರಂ. ಶ್ರೀ. ಮುಗಳಿ ಮೊದಲಾದವರ ಗ್ರಂಥಗಳೂ ಬರಲಿವೆ.**

---

[ ಹಕ್ಕುಗಳು ಕಾದಿರಿಸಲ್ಪಟ್ಟಿವೆ. ]

ಪ್ರಕಾಶಕರು :
**ಬಿಂದುಮಾಧವ ಬುರ್ಲಿ**
ಮಿಂಚಿನಬಳ್ಳಿ ಕಾರ್ಯಾಲಯ,
ಧಾರವಾಡ.

ಮುದ್ರಕರು :
**ಎಮ್. ಜಿ. ಪಾಲೇಕರ**
ವಸಂತ ಮುದ್ರಣಾಲಯ,
ಧಾರವಾಡ.

# ಸಂಪಾದಕರ ನುಡಿ

★

ಋಂಚಿನಬಳ್ಳಿಯಲ್ಲಿ ಯಂತ್ರಯೋಗಿ ಕಿರ್ಲೋಸ್ಕರ ಲಕ್ಷ್ಮಣರಾಯರ ಚರಿತ್ರೆಯು ಪ್ರಕಟವಾಗುತ್ತಿರುವದು ಬಳ್ಳಿಗೆ ಭೂಷಣ. ಭಾರತದ ಔದ್ಯೋಗಿಕ ಕ್ಷೇತ್ರದಲ್ಲಿ ನವಮನ್ವಂತರವನ್ನುಂಟುಮಾಡಿದ ಮಹಾಪುರುಷರಿವರು, ಆದರ್ಶ ಜೀವಿಗಳು. ತಮ್ಮ ಕರ್ತೃತ್ವ ಶಕ್ತಿಯಿಂದ ಭಾರತಕ್ಕೇ ಕೀರ್ತಿತಂದ ಐತಿಹಾಸಿಕ ಪುರುಷರಿವರು. ಹೆಮ್ಮೆಯ ವಿಷಯವೆಂದರೆ, ಕಿರ್ಲೋಸ್ಕರರು ಕರ್ನಾಟಕಸ್ಥರು. ಇವರ ಚರಿತ್ರೆಯು ನಾಡಿನ ಯುವಕರಿಗೆ ಮಾರ್ಗದರ್ಶಕವಾಗಿದೆ, ಸ್ಫೂರ್ತಿ-ದಾಯಕವಾಗಿದೆ.

ಇದನ್ನು ಬರೆದವರು ಶ್ರೀ ಶಂಕರರಾವ ಕಿರ್ಲೋಸ್ಕರರು. ಇವರು ಪತ್ರಿಕಾ ಪ್ರಪಂಚದಲ್ಲಿ ಪ್ರಸಿದ್ಧರು. ನಿಷ್ಣಾತ ಮರಾಠಿ ಲೇಖಕರು. ಲಕ್ಷ್ಮಣರಾಯರ ಜೀವನವನ್ನು ಪ್ರತ್ಯಕ್ಷ ಕಂಡವರು. ಅವರ ಗರಡಿಯಲ್ಲಿ ಆಡಿದವರು. ಅವರ ಜೀವನದೊಡನೆ ಬೆರೆತು ದುಡಿದವರು. ಅಂದಮೇಲೆ ಕೇಳುವದೇನು ? ಕಬ್ಬಿನ ಮೇಲೆ ಜೇನಿಟ್ಟಂತೆ. ಈ ಚರಿತ್ರೆಯನ್ನು ಬರೆಯುವಾಗ ಶಂಕರರಾಯರು ತನ್ಮಯರಾಗಿದ್ದಾರೆ. ತಮ್ಮ ಹಿರಿಯರ ಚಿತ್ರವನ್ನು ಯಥಾಸ್ಥಿತವಾಗಿ, ರಸವತ್ತಾಗಿ, ಸ್ಫೂರ್ತಿದಾಯಕವಾಗಿ ಚಿತ್ರಿಸಿದ್ದಾರೆ. ಇಂತಹ ಗ್ರಂಥವು ಕನ್ನಡದಲ್ಲಿ ಬರುತ್ತಿರುವದು ಆನಂದದ ಸಂಗತಿ.

ನಾನು ಅಕಸ್ಮಾತ್ತಾಗಿ ಕರ್ನಾಟಕ ಆರೋಗ್ಯಧಾಮಕ್ಕೆ ಹೋದಾಗ ಶ್ರೀ. ಶಂಕರರಾಯರ ಪರಿಚಯವಾಯಿತು. ಅವರು ಈ ಚರಿತ್ರೆಯು ಕನ್ನಡದಲ್ಲಿ ಬರಬೇಕೆಂದರು. ಭಾರತೀಯ ಔದ್ಯೋಗಿಕ ಮಹಾಪುರುಷರ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಡಬೇಕೆಂದು ಆಲೋಚಿಸುತ್ತಿರುವಾಗ, ಈ ಸೂಚನೆ ಬಂದುದು ಈಶಸಂಕಲ್ಪವೆಂದು ಭಾವಿಸಿ, ಈ ಕಾರ್ಯಕ್ಕೆ ಕೈಹಾಕಿದೆ. ಇದು ಮರಾಠಿ ಗ್ರಂಥದ ಅನುವಾದವು. ಅದು ಇಂದು ಪೂರ್ಣವಾಗುತ್ತಿರುವದನ್ನು ಕಂಡು ಆನಂದವಾಗುತ್ತಿದೆ. ಈ ಗ್ರಂಥವು ಬಳ್ಳಿಯ ೩-೪ನೆಯ ಕುಡಿಯಾಗಿ ಹೊರಟಿದೆ.

ಪೂಜ್ಯರಾದ ದಿವಾಕರ ರಂಗರಾಯರು ಮುನ್ನುಡಿಯನ್ನು ಬರೆದು ಗ್ರಂಥದ ಮಹತ್ವವನ್ನು ಹೆಚ್ಚಿಸಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳು. ಗೆ. ಕೃಷ್ಣಶರ್ಮ ಬೆಟಗೇರಿಯವರು ಇದರಲ್ಲಿಯ ಮರಾಠಿ ಪದ್ಯಗಳನ್ನು ಕನ್ನಡಿಸಿ ಕೊಟ್ಟದ್ದಕ್ಕಾಗಿ ಋಣಿಯಾಗಿದ್ದೇನೆ. ಈ ಕಾರ್ಯದಲ್ಲಿ ನೆರವಾದ ಎಲ್ಲ ಮಹನೀಯರಿಗೂ ನಾನು ಋಣಿಯಾಗಿದ್ದೇನೆ. ಇದಕ್ಕೆ ಬೇಕಾಗುವ ಪಡಿಯಚ್ಚುಗಳನ್ನು ಒದಗಿಸಿ ಕೊಟ್ಟ ಕಿರ್ಲೋಸ್ಕರ ಕಂಪನಿಗೆ ಅಭಿನಂದನೆಗಳನ್ನು ಸಲ್ಲಿಸುವೆ. ಹೊತ್ತಿಗೆ ಸರಿಯಾಗಿ ಮುದ್ರಣವನ್ನು ಮುಗಿಸಿದ ಶ್ರೀ ಪಾಲೇಕರರಿಗೂ ಋಣಿಯಾಗಿರುವೆ.

ನಮ್ಮ ನಾಡಿನ ಯುವಕರು ಈ ಯಂತ್ರಯೋಗಿಗಳ ಚರಿತ್ರೆಯಿಂದ ಸ್ಫೂರ್ತಿಗೊಂಡು ಅವರ ಧ್ಯೇಯ–ಧೋರಣೆಗಳನ್ನು ಅನುಸರಿಸಲಿ ಎಂದು ದೇವರಲ್ಲಿ ಪ್ರಾರ್ಥಿಸುವೆ.

ಧಾರವಾಡ
ಅಕ್ಷಯ್ಯತೃತೀಯೆ, ೧೯೮೩

ತಮ್ಮ ನಮ್ರ ಸೇವಕ
**ಬುರ್ಲಿ ಬಿಂದುಮಾಧವ**

# ಮುನ್ನುಡಿ

★

ಶ್ರೀ. ಕಿರ್ಲೋಸ್ಕರ ಲಕ್ಷ್ಮಣರಾಯರು ಈ ಚರಿತ್ರೆಯ ನಾಯಕರು. ಅದನ್ನು ಬರೆದವರು ಕಿರ್ಲೋಸ್ಕರ ಶಂಕರರಾಯರು. ಇಬ್ಬರೂ ಪ್ರಸಿದ್ಧ ವ್ಯಕ್ತಿಗಳು. ಒಬ್ಬರು ಯಂತ್ರಯೋಗಿಗಳು, ಇನ್ನೊಬ್ಬರು ಪತ್ರಿಕಾ ವ್ಯವಸಾಯ ದಲ್ಲಿ ನಿಷ್ಣಾತರು, ಒಳ್ಳೆ ಲೇಖಕರು. ಆ ಮೂಲಕ ಈ ಜೀವನ ಚರಿತೆಗೆ ಒಳ್ಳೆ ಕಳೆಕಟ್ಟಿದೆ.

ಇತಿಹಾಸವೆಂಬುದು ದೇಶದ ಚರಿತ್ರೆ. ಆದರೆ ದೇಶದ ಚರಿತ್ರೆ ಕೂಡ ವ್ಯಕ್ತಿಗಳ ಚರಿತ್ರೆಯಿಂದಲೆ ತುಂಬಿಕೊಂಡಿರುತ್ತದೆ. ಅನೇಕ ವ್ಯಕ್ತಿಗಳ ಸಮೂಹವೇ ದೇಶ, ಜನಾಂಗ ಎನಿಸುವದು. ದೇಶದ ಚರಿತ್ರೆಯು ಎಷ್ಟು ಅವಶ್ಯವೋ ಅಷ್ಟೇ ವ್ಯಕ್ತಿಗಳ ಚರಿತ್ರೆಯೂ ಅವಶ್ಯ. ಎರಡಕ್ಕೂ ಸತ್ಯ ಸಂಗತಿಗಳೇ ಮೂಲ, ಸರಸ ಭಾಷೆಯೇ ಒಪ್ಪು. ಮಕ್ಕಳಿಗೆ, ತರುಣರಿಗೆ, ಮುಂದಿನ ಪೀಳಿಗೆಗೆ ಇವೆರಡರಿಂದಲೂ ಸ್ಫೂರ್ತಿ—ಮಾರ್ಗದರ್ಶನ ಇವು ದೊರೆ ಯುವವು.

ಕನ್ನಡದಲ್ಲಿ ವ್ಯಕ್ತಿಚರಿತ್ರೆಯ ಒಳ್ಳೆಯ ಪುಸ್ತಕಗಳು ಬಹಳ ಕಡಿಮೆ ಎಂದೇ ಹೇಳಬಹುದು. ಆ ದೃಷ್ಟಿಯಿಂದ ಈ ಪುಸ್ತಕವು ಸ್ವಾಗತಾರ್ಹವಿದೆ. ಇದು ಅನೇಕ ವಿವರಗಳಿಂದ ಕೂಡಿದೆ. ಸಣ್ಣಪುಟ್ಟ ಘಟನೆಗಳ ವರ್ಣನೆಯಿಂದ ತುಂಬಿದೆ. ಇದರಲ್ಲಿ ಶ್ರೀ ಲಕ್ಷ್ಮಣರಾಯರ ಸ್ವಭಾವಚಿತ್ರವು ಚನ್ನಾಗಿ ಬಣ್ಣಿಸಲಾಗಿದೆ. ಅವರ ಜೀವನದ ಪ್ರಗತಿಯ ಚಿತ್ರವು ಅಚ್ಚುಕಟ್ಟಾಗಿ ಇದರಲ್ಲಿ ಮೂಡಿದೆ. ಮೇಲಾಗಿ ಆಯಾ ಕಾಲದ ನಮ್ಮ ಸಮಾಜದ ಹಾಗೂ ರಾಷ್ಟ್ರದ ಪರಿಸ್ಥಿತಿಯೊಡನೆ ಚರಿತ್ರನಾಯಕನ ಜೀವನಚರಿತ್ರೆ ಅರಿಕೆ ಬೆರಿಕೆ ಯಾಗಿ ಹೊಂದಿಕೊಳ್ಳುವಂತೆ ಬರೆಯಲಾಗಿದೆ. ಭಾಷೆ ಸುಲಭ, ಸ್ಪಷ್ಟ ಇದ್ದು ರಸವತ್ತಾಗಿದೆ.

ಈ ಹೊತ್ತು ಭಾರತದ ಉದ್ಯೋಗ ಕ್ಷೇತ್ರದಲ್ಲಿ 'ಕಿರ್ಲೋಸ್ಕರ' ಎಂಬ ಹೆಸರು ಜನಜನಿತವಾಗಿದೆ. ಆದರೆ ಈ ಕೀರ್ತಿಸ್ತಂಭದ ಮೂಲಾಧಾರವೇನು,

ಇದರ ಅಡಿಗಲ್ಲನ್ನು ಯಾರು ಹಾಕಿದರು, ಅವರ ಗುಣಕರ್ಮಗಳಾವವು, ಅವರಿಗೆ ಬಂದ ಅಡ್ಡಿ ಅಡಚಣಿಗಳು ಯಾವವು, ಅವುಗಳನ್ನು ಅವರು ಯಾವ ಧೈರ್ಯ, ಸಾಹಸಗಳಿಂದ ಎದುರಿಸಿದರು, ಇವುಗಳ ಕತೆ ಎಲ್ಲರಿಗೂ ಗೊತ್ತಿರುವದು ಅವಶ್ಯವಿದ್ದರೂ ಈ ವರೆಗೆ ಸಾಧ್ಯವಾಗಿಲ್ಲ. ಆ ದೃಷ್ಟಿಯಿಂದ ಈ ಚರಿತ್ರೆಯು ಬಹಳ ಉಪಯುಕ್ತವೂ ಮಹತ್ವದ್ದೂ ಆಗಿದೆ.

ನನ್ನ ಸುದೈವದಿಂದ ಈ ಚರಿತ್ರನಾಯಕರು ನನಗೆ ತುಂಬಾ ಪರಿಚಿತರು. ನನ್ನ ಕಣ್ಣೆದುರಿಗೆಯೆ ಅವರು ಒಂದೊಂದು ಹೆಜ್ಜೆಯನ್ನು ಮುಂದಿಡುತ್ತಾ ತಮ್ಮ ಉದ್ಯೋಗದ ನಿಚ್ಚಣಿಕೆಯನ್ನು ಮೇಲೇರುತ್ತ ಹೋದರು. ಆಗಾಗ್ಗೆ ಅವರು ನನಗೆ ಭೆಟ್ಟಿಯಾಗುತ್ತಿದ್ದರು. ಅವರ ಸಾದಾ ಜೀವನ, ಪ್ರೇಮದ ಸ್ವಭಾವ, ಸತತೋದ್ಯೋಗಶೀಲತೆ, ಸ್ಥಿರಪ್ರತಿಜ್ಞರಾಗಿರುವ ಅವರ ದೃಢತೆ, ಇವು ನನ್ನ ಕಣ್ಣುಮುಂದೆ ಕಟ್ಟಿದಂತಿವೆ.

ಈ ಚರಿತ್ರಲೇಖಕರಾದ ಶ್ರೀ. ಶಂಕರರಾಯರೂ ನನಗೆ ತುಂಬಾ ಪರಿಚಿತರು. ಅವರು ಈ ಚರಿತ್ರೆಯನ್ನು ಇಷ್ಟು ಸುಂದರವಾಗಿ ಬರೆದು ನಮ್ಮೆಲ್ಲರ ಮೇಲೆ ಬಹಳ ಉಪಕಾರ ಮಾಡಿದ್ದಾರೆ. ಒಬ್ಬ ಮಹಾವ್ಯಕ್ತಿ ತನ್ನ ಜೀವನವನ್ನು ಉಚ್ಚ ಧ್ಯೇಯಕ್ಕಾಗಿ ಮೀಸಲಿಟ್ಟು ಅವತಾರ ಕಾರ್ಯವನ್ನು ಮುಗಿಸಿ ಕಾಲದ ಉದರದಲ್ಲಿ ಮಾಯವಾಗುತ್ತಾನೆ. ಅವನ ವ್ಯಕ್ತಿಪರಿಚಯವನ್ನು ಇತರರಿಗೆ ಮಾಡಿಕೊಡುವ ಭಾರ, ಆಯಾ ವ್ಯಕ್ತಿಯ ಮಹತ್ವ ಹಾಗೂ ಮಹತ್ತರ ಕಾರ್ಯ ಇವುಗಳನ್ನು ಬಲ್ಲವರ ಮೇಲೆಯೇ ಇರುವದು. ಆ ಹೊಣೆಯನ್ನು ಶ್ರೀ ಶಂಕರರಾಯರು ಚನ್ನಾಗಿ ಪೂರೈಸಿದ್ದಾರೆ. ಇದರ ಲಾಭವನ್ನು ಮರಾಠಿ ಭಾಷಾ ಭಾಷಿಗಳು ಈಗಾಗಲೆ ಉಂಡಿದ್ದಾರೆ ಈಗ ಅದನ್ನು 'ಮಿಂಚಿನ ಬಳ್ಳಿ'ಯ ಮುಖಾಂತರ ಕನ್ನಡ ಬಾಂಧವರಿಗೂ ನೀಡಲಾಗಿದೆ. ಕೀರ್ತಿಶೇಷರಾದ ಲಕ್ಷ್ಮಣರಾಯರು ಉಭಯ ಭಾಷೆಗಳನ್ನು ಬಲ್ಲವರು. ಅವರು ಕರ್ನಾಟಕ, ಮಹಾರಾಷ್ಟ್ರ ಎಂಬ ಭೇದಭಾವವಿಲ್ಲದೆ ಎಲ್ಲರಿಗೂ ತಮ್ಮ ಸೇವೆ ಸಲ್ಲಿಸಿದವರು. ಆ ಯಂತ್ರಯೋಗಿಗಳ ಈ ಚರಿತ್ರೆ ಸಕಲರಿಗೂ ಸಲ್ಲಲಿ, ಎಲ್ಲರೂ ಇದರಿಂದ ಪ್ರಯೋಜನ ಪಡೆಯಲಿ.

ಬೆಂಗಳೂರು<br>
೧೫-೬-೧೯೬೧

**ರಂಗನಾಥ ದಿವಾಕರ**

# ಪರಿವಿಡಿ


| | | |
|---|---|---|
| ೧. | ತಂದೆ—ಮಕ್ಕಳ ಸಂವಾದ | ೧ |
| ೨. | ರಾಯರ ಶಿಕ್ಷಣ | ೯ |
| ೩. | ಹೊಸ ಸಂಸಾರ | ೧೮ |
| ೪. | ಸ್ವಾತಂತ್ರ್ಯದತ್ತ | ೨೭ |
| ೫. | ದೈವವು ತೆರೆಯಿತು | ೩೩ |
| ೬. | ಕಬ್ಬಿಣ ರಂಟೆಯ ಜನನ | ೩೯ |
| ೭. | ಠಳಕವಾಡಿಯ ಸ್ಥಾಪನೆ | ೪೬ |
| ೮. | ಕಿರ್ಲೋಸ್ಕರವಾಡಿಯ ಸ್ಥಾಪನೆ | ೫೪ |
| ೯. | ಬೈಲುಗಂಬಾರನ ಸಾಮಾಜಿಕ ಕಾರ್ಯ | ೬೨ |
| ೧೦. | ಯುದ್ಧದ ಕಹಿ—ಸಿಹಿಗಳು | ೭೧ |
| ೧೧. | ಭಾವೀ ಯೋಜನೆಗಳ ಸಿದ್ಧತೆ | ೮೦ |
| ೧೨. | ಕಬ್ಬಿಣ ಹಾಗೂ ವಿದ್ಯುತ್ತಿನ ಶೋಧ | ೮೮ |
| ೧೩. | ಬೀಳು ಭೂಮಿಯಲ್ಲಿ ದ್ರಾಕ್ಷೆಯ ತೋಟ | ೯೪ |
| ೧೪. | ಮಂದತೆಯೊಡನೆ (ಇಳಿಕೆ) ಹೋರಾಟ | ೧೦೨ |
| ೧೫. | ಕನಸು ನನಸಾಯಿತು | ೧೦೯ |
| ೧೬. | ಮಾದರಿಯ ಲಗ್ನ ಸಮಾರಂಭ | ೧೧೮ |
| ೧೭. | ಕಿರ್ಲೋಸ್ಕರವಾಡಿಯಲ್ಲಿ ಚರಖಾ ಹಾಗೂ ರಾಜಕಾರಣ | ೧೨೭ |
| ೧೮. | ಕಾರಖಾನೆಯಿಂದ ದಿವಾಣಗಿರಿಗೆ | ೧೩೭ |
| ೧೯. | ಕಿರ್ಲೋಸ್ಕರವಾಡಿಯ ಮಮ್ಮಾ | ೧೫೪ |
| ೨೦. | ವ್ಯಕ್ತಿತ್ವದ ವಿವಿಧ ದರ್ಶನ | ೧೬೬ |
| ೨೧. | ಉದ್ಯೋಗವೃಕ್ಷದ ವಿಸ್ತಾರ | ೧೮೮ |
| ೨೨. | ತಾಟಸ್ಥ್ಯ ಧೋರಣೆ | ೨೦೭ |
| ೨೩. | ಕೂಲಿಕಾರರ ಪಪ್ಪಾ (ತಂದೆ) | ೨೨೩ |
| ೨೪. | ಕೊನೆಯ ಹಂತ | ೨೩೮ |
| | ಪರಿಶಿಷ್ಟ | ೨೫೬ |
| | ಚಿತ್ರಗಳು | |

# ಅಹಿಂಸಾ ಜೇನುತುಪ್ಪ

••••

## ಶುದ್ಧವಾದ ಜೇನುತುಪ್ಪ

- ಶಕ್ತಿಯನ್ನೂ ಉತ್ಸಾಹವನ್ನೂ ಕೊಡುತ್ತದೆ.
- ಅನೇಕ ವ್ಯಾಧಿಗಳಿಗೆ ಅಮೃತಸಮಾನವು.

**ಅಶುದ್ಧವಾದದ್ದು ವಿಷಸಮಾನವು.**

**ಅಹಿಂಸಾ ಜೇನುತುಪ್ಪವನ್ನೇ**

**ಉಪಯೋಗಿಸಿರಿ.**

ನಿಮ್ಮೂರಿನ ಖಾದೀಭಾಂಡಾರ ಮತ್ತು
ಔಷಧದ ಅಂಗಡಿಗಳಲ್ಲಿ ವಿಚಾರಿಸಿರಿ.

**ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ:**

ಮೈಸೂರು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ
ಮಂಡಳ

**ಪ್ರಾದೇಶಿಕ ಕಚೇರಿ, ಧಾರವಾಡ.**



**ಶ್ರೀ. ಲಕ್ಷ್ಮಣ ಕಾಶೀನಾಥ ಕಿರ್ಲೋಸ್ಕರ**

| ಜನನ | ಮರಣ |
| --- | --- |
| ೨೦ನೇ ಜೂನ ೧೮೬೯ ಗುರ್ಲಹೊಸೂರ | ೨೬ನೇ ಸಪ್ಟಂಬರ ೧೯೫೬ ಪುಣೆ |

ಹರಿಃ ಓಂ

# ಯಂತ್ರಯೋಗಿ
# ಕಿರ್ಲೋಸ್ಕರ ಲಕ್ಷ್ಮಣರಾಯರು

## ೧
## ತಂದೆ-ಮಕ್ಕಳ ಸಂವಾದ

ಸುಪ್ರಭಾತ ಸಮಯ. ಕಾಶೀನಾಥಪಂತರು ಸೂರ್ಯನಾರಾಯಣನಿಗೆ ಅರ್ಘ್ಯವನ್ನಿತ್ತು, ಜಪವನ್ನು ಮುಗಿಸಿ, ಗೀತೆಯ ಪಾರಾಯಣದಲ್ಲಿ ಮಗ್ನರಾಗಿದ್ದಾಗ "ಅಣ್ಣಾ, ನಾನು ನಾಳಿನಿಂದ ಶಾಲೆಗೆ ಹೋಗುವದಿಲ್ಲ" ಎಂಬ ಧ್ವನಿಯು ಕೇಳಬಂದಿತು. ಕತ್ತೆತ್ತಿ ನೋಡುತ್ತಾರೆ– ಹದಿನೈದು ವರುಷದ ಚಪಲನಾದ ಲಖು (ಲಕ್ಷ್ಮಣ) ! "ಶಾಲೆಯನ್ನು ಬಿಟ್ಟು ಏನು ಮಾಡುವವನಿರುವೆ ?" ಎಂದು ಕಾಶೀನಾಥಪಂತರು ಗಂಭೀರವಾಗಿ ವಿಚಾರಿಸಿದರು.

ಲಕ್ಷ್ಮಣನ ಉತ್ತರವು ಸಿದ್ಧವಿದ್ದಿತು.

"ಮುಂಬಯಿಗೆ ಹೋಗಿ ಚಿತ್ರಕಲೆಯ ಅಥವಾ ಯಂತ್ರಕಲೆಯ ಶಿಕ್ಷಣ ಪಡೆವ ಇಚ್ಛೆ ನನಗಿದೆ. ಈ ವಿಷಯಗಳು ನನಗೆ ಬಹಳ ಸೇರುತ್ತವೆ. ಈ ಮಾತನ್ನು ರಾಮೂ ಅಣ್ಣನಿಗೂ ತಿಳಿಸಿದ್ದೇನೆ. ಅವನಿಗೆ ಇದು ಪೂರ್ಣವಾಗಿ ಮನಸ್ಸಿಗೆ ಬಂದಿದೆ."

"ಒಳ್ಳೇಯದು. ನಿನ್ನ ಇಚ್ಛೆಯಂತೆಯೇ ಆಗಲಿ. ಆದರೆ ನಾವು ಎಷ್ಟು ಬಡವರಿರುವೆವೆಂಬ ಕಲ್ಪನೆಯು ನಿನಗೆ ಇದೆಯೇ ? ನನಗೆ ಬರುವ ಹನ್ನೆರಡು ರೂಪಾಯಿ ಮಾಸಿಕ ವೇತನದಲ್ಲಿ, ನಿನಗಾಗಿ ಬಹಳವಾದರೆ ಎರಡು ರೂಪಾಯಿಗಳನ್ನು ಮಾತ್ರ ಕೊಡಬಲ್ಲೆ."

"ಅಣ್ಣಾ, ಅದರ ಯೋಚನೆಯೇ ನಿನಗೆ ಬೇಡ. ನಾನು ಅದನ್ನು ನೋಡಿಕೊಳ್ಳುವೆ."

"ಸರಿ. ಹಾಗಾದರೆ ಮುಂದಿನ ಸಿದ್ಧತೆ ಮಾಡಿಕೋ. ನಿನ್ನ ಆರೋಗ್ಯದ ಕಡೆಗೆ ಲಕ್ಷ್ಯಕೊಡು. ಮೇಲಿಂದ ಮೇಲೆ ಓಲೆ ಬರೆಯುವದನ್ನು ಮಾತ್ರ ಮರೆಯಬೇಡ."

ತಂದೆ-ಮಕ್ಕಳ ಈ ಸಂವಾದವು ೧೮೮೮ ರಲ್ಲಿ ಧಾರವಾಡದ ನಾಲ್ಕು ಅಂಕಣದ ಒಂದು ಕೋಣೆಯಲ್ಲಿ ನಡೆಯಿತು. ಅದೇ ಲಖುವು (ಲಕ್ಷ್ಮಣ ರಾಯರು) ಇಂದು ಮಹಾರಾಷ್ಟ್ರದ ಆದ್ಯ ಯಂತ್ರಯೋಗಿಗಳೆಂದು ಭಾರತದಲ್ಲಿ ಪ್ರಸಿದ್ಧರಾಗಿದ್ದಾರೆ. ಲಕ್ಷ್ಮಣರಾವ ಕಿರ್ಲೋಸ್ಕರರ ಹೆಸರಿನಿಂದ ಅವರ ಮನೆ-ತನವು ಜಗತ್ತಿನಲ್ಲಿ ಕೀರ್ತಿಶಾಲಿಯಾಗಿದೆ. ಉದ್ಯಮಶೀಲ, ಯಂತ್ರಯೋಗಿ ಲಕ್ಷ್ಮಣರಾಯರು ಕಿರ್ಲೋಸ್ಕರ ಮನೆತನಕ್ಕೆ ಒಂದು ಬಗೆಯ ಐತಿಹಾಸಿಕ ಮಹತ್ವವನ್ನು ತಂದುಕೊಟ್ಟಿದ್ದಾರೆ. ಈ ಮಹಾಪುರುಷರ ಯೋಗದಿಂದ ಅವರ ಮನೆತನದ ಇತಿಹಾಸವನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವು ಜನರಲ್ಲಿ ಕೆರಳಿದರೆ ಆಶ್ಚರ್ಯವೇನಲ್ಲ!

## ಕಿರ್ಲೋಸ್ಕರ ಮನೆತನದ ಪರಿಚಯ

ಕಾಶೀನಾಥ ವಾಸುದೇವ ಕಿರ್ಲೋಸ್ಕರ ಎಂಬುದು ಅವರ ಪೂರ್ಣ ಹೆಸರು. ಧಾರವಾಡದಿಂದ ೩೫ ಮೈಲು ದೂರದಲ್ಲಿರುವ ಗುರ್ಲಹೊಸೂರು (ಗುರುಗಳ ಹೊಸೂರು) ಇವರು ಹುಟ್ಟಿದ ಊರು. ಮೂಲತಃ ಇವರ ಮನೆ-ತನವು ಕೊಂಕಣದ ಮಾಲವಣ ತಾಲೂಕಿನ ಕಿರ್ಲೋಸಿ ಎಂಬ ಹಳ್ಳಿಯದು. ಮೂರು ನಾಲ್ಕು ತಲೆಮಾರುಗಳ ಹಿಂದೆ, ತಮ್ಮ ದೈವವನ್ನು ತೆರೆದು ಕೊಳ್ಳುವದಕ್ಕಾಗಿ ಈ ಮನೆತನದವರು ಕರ್ನಾಟಕಕ್ಕೆ ಬಂದರು. ಇದರಿಂದ ಇವರ ಮೂಲ ಅಡ್ಡಹೆಸರಾದ ಕೋಣಕರ ಎಂಬುದು ಬದಲಾಗಿ ಕಿರ್ಲೋಸ್ಕರ ಎಂದಾಯಿತು. ಇವರು ಸತತೋದ್ಯೋಗದಿಂದ, ಕಷ್ಟ ಸಹಿಷ್ಣುತೆಯಿಂದ ತಮ್ಮ ಉತ್ಕರ್ಷವನ್ನು ಮಾಡಿಕೊಂಡರು. ಧನ ಕನಕಗಳಿಂದ ಸುಸಂಪನ್ನ ರಾದರು. ಊರಲ್ಲಿ ಒಳ್ಳೆಯ ಲೌಕಿಕವನ್ನು ಸಂಪಾದಿಸಿ, ಊರ ಪ್ರತಿಷ್ಠಿತ-ರೆನಿಸಿಕೊಂಡರು. ಊರಲ್ಲಿ ದೊಡ್ಡದೊಂದು ವಾಡೆಯನ್ನೇ ಕಟ್ಟಿಸಿದರು. ಉದ್ಯೋಗಶೀಲತೆ, ಕಷ್ಟಸಹಿಷ್ಣುತೆ, ಧೈರ್ಯಗಳು ಇವರ ಮನೆತನದಲ್ಲಿ ರಕ್ತಗತ ವಾಗಿ ಬೆಳೆದು ಬಂದಂತೆ ಕಾಣುತ್ತಿದೆ.

ಕೊಂಕಣದಿಂದ ಬಂದ ಈ ಮನೆತನದಲ್ಲಿ ರಂಗೋಪಂತರು ಅಪಾರವಾದ

ಸಂಪತ್ತನ್ನು ಗಳಿಸಿ, ಗುರುಗಳ ಕೃಪೆಗೆ ಪಾತ್ರರಾದರು. ಸದ್ಧರ್ಮ, ಸದಾಚಾರಗಳಲ್ಲಿ ಕಾಲವನ್ನು ಕಳೆಯುತ್ತ, ದಾನ-ಧರ್ಮಗಳನ್ನು ಮಾಡುತ್ತ ತಮ್ಮ ಕೊನೆಯ ದಿನಗಳನ್ನು ತಪೋನಿಷ್ಠರಾಗಿ ಕಾಶಿಯಲ್ಲಿ ಕಳೆಯಬೇಕೆಂದು ಬಯಸಿ, ಪ್ರಪಂಚದ ಮೋಹವನ್ನು ತೊರೆದು, ಕಾಶಿಗೆ ತೆರಳಿದರು. ಅಲ್ಲಿ ಕೆಲಕಾಲ ವಾಸಿಸಿದ ನಂತರ ಅವರು ಗಂಗೆಯಲ್ಲಿ ಜಲಸಮಾಧಿಯನ್ನು ಹೊಂದಿದರಂತೆ. ಹೀಗೆ ಈ ಮನೆತನದಲ್ಲಿ ಸರ್ವಸಂಗ ಪರಿತ್ಯಾಗ ಮಾಡುವ ಗುಣವೂ ಇದ್ದಂತಿದೆ. ಮಹಾರಾಷ್ಟ್ರದ ಆದ್ಯ ನಾಟಕಕಾರರೆಂದು ಪ್ರಸಿದ್ಧರಾದ ಶ್ರೀ ಬಳವಂತ ಪಾಂಡುರಂಗ ಉರ್ಫ ಅಣ್ಣಾಸಾಹೇಬರು ಗುರ್ಲಹೊಸೂರಿನ ಈ ಕಿರ್ಲೋಸ್ಕರ ಮನೆತನದವರೇ. "ಕನ್ನಡ ನಾಡಿನ ದೊಡ್ಡಾಟಗಳು, ನಾಟಕಗಳನ್ನು ಬರೆಯಲು ಸ್ಫೂರ್ತಿಯನ್ನಿತ್ತವು" ಎಂದು ಅವರೇ ಒಂದೆಡೆಯಲ್ಲಿ ಹೇಳಿದ್ದುಂಟು.

ಕಾಶೀನಾಥಪಂತರ ತಂದೆಯವರ ಆರ್ಥಿಕ ಸ್ಥಿತಿಯು ಅಷ್ಟಕಷ್ಟೆ. ಮನೆತನವು ದೊಡ್ಡದು. ಪೋಷಣೆಯ ಭಾರವೆಲ್ಲ ಕಾಶೀನಾಥಪಂತರ ಮೇಲೆ. ಆದುದರಿಂದ ಉದರ ಪೋಷಣೆಗಾಗಿ ಅವರು ಸರ್ವೇ ಖಾತೆಯ ನೌಕರಿಯಲ್ಲಿ ಸೇರಿದರು. ಆಗ ಈಗಿನಂತೆ ರೈಲುಗಳಿರಲಿಲ್ಲ. ಅವರು ಗುಜರಾಥದಿಂದ ಮೈಸೂರಿನ ವರೆಗೂ ಪ್ರಯಾಣ ಮಾಡಬೇಕಾಗುತ್ತಿದ್ದಿತು. ಈ ಪ್ರವಾಸವೆಲ್ಲ ಕುದುರೆಯ ಮೇಲೆಯೇ.

ಕಾಶೀನಾಥಪಂತರು ತಮ್ಮ ಕಾರ್ಯವನ್ನು ಅತ್ಯಂತ ಕುಶಲತೆಯಿಂದ ಅಧಿಕಾರಿಗಳ ಮನಮೆಚ್ಚುವಂತೆ ಮಾಡುತ್ತಿದ್ದರು; ಕ್ಯಾ. ಫನಿಂಗ ಎಂಬ ಅವರ ಮೇಲಧಿಕಾರಿಯು ಪಂತರ ಕಾರ್ಯಕುಶಲತೆಯನ್ನು ತುಂಬಾ ಹೊಗಳಿ ಆ ಬಗ್ಗೆ ೧೮೫೭ ರಲ್ಲಿ ಪ್ರಶಸ್ತಿಪತ್ರಿಕೆಯನ್ನು ಕೊಟ್ಟಿದ್ದಾನೆ.

ನಡಿಯಾದದಲ್ಲಿರುವಾಗ ಗುಜರಾಥಿ ಇಸಾಪನೀತಿಯು ಅವರ ಕಣ್ಣಿಗೆ ಬಿದ್ದಿತು. ಗುಜರಾಥದಲ್ಲಿಯೇ ೧೪ ವರ್ಷ ಕಳೆಯುವ ಪ್ರಸಂಗ ಬಂದುದರಿಂದ ಗುಜರಾಥಿ ಭಾಷೆಯು ಅವರಿಗೆ ಅವಗತವಾಗಿದ್ದಿತು. ಮರಾಠಿಯಂತೂ ಮಾತೃ ಭಾಷೆ. ಕನ್ನಡವು ಬಾಲ್ಯಭಾಷೆ. ಹೀಗೆ ಅವರು ತ್ರಿಭಾಷಿಗಳಾಗಿದ್ದರು. ಗುಜರಾಥಿ ಇಸಾಪನೀತಿಯು ಮರಾಠಿ ಬಂಧುಗಳಿಗೆ ಉಪಯೋಗವಾಗಲೆಂದು ಬಯಸಿ, ಸರಸ ಮರಾಠಿ ಭಾಷೆಯಲ್ಲಿ ಅದನ್ನು ಭಾಷಾಂತರಿಸಿದರು.

ಕಾಶೀನಾಥಪಂತರ ಪ್ರೀತಿಯ ವಿಷಯವೆಂದರೆ ವೇದಾಂತ. ಗುರ್ಲ-

ಹೊಸೂರಿಗೆ ಬಂದರೆಂದರೆ, ವೇದಾಂತಿಗಳೆಂದು ಪ್ರಖ್ಯಾತರಾದ ಶ್ರೀ ದಾದಾ ಗರ್ದೆಯವರಲ್ಲಿ ಪಂಚದಶಿಯನ್ನು ಅಭ್ಯಸಿಸುತ್ತಿದ್ದರು. ಮೆಲ್ಲಮೆಲ್ಲನೆ ಅದರಲ್ಲಿ ಪಾರಂಗತರಾದರು. ಅದರ ಬಗ್ಗೆ ಪ್ರವಚನವನ್ನು ಕೊಡಲೂ ಪ್ರಾರಂಭಿಸಿದರು. ಕಾಶೀನಾಥಪಂತರ ಪ್ರವಚನವೆಂದರೆ ತೀರಿತು. ಮುಮುಕ್ಷುಗಳೆಲ್ಲ ಸಕ್ಕರೆಗೆ ಮುಕುರುವ ಇರುವೆಗಳಂತೆ ಬಂದು ಸೇರುತ್ತಿದ್ದರು.

ನಿಜವಾದ ವೇದಾಂತಿಗೆ ತನ್ನ ಮನೋವೃತ್ತಿಯನ್ನು ಸ್ಥಿರವಾಗಿ ಇಟ್ಟುಕೊಳ್ಳಲು ಹೆಚ್ಚು ಸುಗಮವಾಗುತ್ತದೆ. ಅವನು ಸುಖದಿಂದ ಹಿಗ್ಗುವದಿಲ್ಲ. ದುಃಖದಿಂದ ತಗ್ಗುವದಿಲ್ಲ. ಅವನು ಎಂತಹ ಕಠಿಣ ಪ್ರಸಂಗದಲ್ಲಿಯೂ ತನ್ನ ಶಾಂತಿಯನ್ನು ಹೊಯ್ದಾಡಗೊಡುವದಿಲ್ಲ. ಕಾಶೀನಾಥಪಂತರು ಜೀವನದಲ್ಲಿ ಒಂದರಮೇಲೊಂದು ಬಂದೊದಗಿದ ವಿಪತ್ತುಗಳನೆಲ್ಲ ಎದುರಿಸಿ, ಶಾಂತತೆಯನ್ನು ಕಾಯ್ದುಕೊಂಡುದು ಈ ವೇದಾಂತದ ಬಲದಿಂದಲೇ.

ಅವರು ಗುಜರಾಥದಲ್ಲಿರುವಾಗ ತಂದೆ ಬೇನೆಬಿದ್ದ ಸುದ್ದಿ ಬಂದೊಡನೆಯೇ ಊರಿಗೆ ಮರಳಿದರು. ಆ ಬೇನೆಯಲ್ಲಿಯೇ ತಂದೆ ಕಾಲವಾದ ಮೂಲಕ ಮನೆಯ ಭಾರವೆಲ್ಲ ಕಾಶೀನಾಥಪಂತರ ಮೇಲೆಯೇ ಬಿದ್ದಿತು. ಇದರಿಂದ ಗುಜರಾಥದಂತಹ ದೂರದ ಪ್ರದೇಶದಲ್ಲಿ ನೌಕರಿ ಮಾಡುವದು ಅಸಾಧ್ಯವಾಗಿ ಮೈಸೂರ ಪ್ರಾಂತದಲ್ಲಿ ಸರ್ವೆ ನೌಕರಿಯನ್ನು ಹಿಡಿದರು. ಆದರೆ ಪ್ರವಾಸದ ಶ್ರಮವನ್ನು ತಾಳಿಕೊಳ್ಳುವದು ಆಗದ್ದರಿಂದ ಆ ಕೆಲಸಕ್ಕೂ ಶರಣು ಹೊಡೆದು ಧಾರವಾಡಕ್ಕೆ ಬಂದು "ಧಾರವಾಡ ವ್ಯಾಪಾರೋತ್ತೇಜಕ ಕಂಪನಿ" ಯಲ್ಲಿ ೧೫ ರೂಪಾಯಿ ಸಂಬಳದ ಮೇಲೆ ಕೆಲಸಕ್ಕೆ ನಿಂತರು.

ನರಗುಂದದ ಅಠಲೆ ಮನೆತನದ ಕನ್ಯೆಯೊಡನೆ ಕಾಶೀನಾಥಪಂತರ ಮದುವೆಯಾಗಿದ್ದಿತು. ಇವರ ಹೆಂಡತಿಯ ಹೆಸರು ಅನ್ನಪೂರ್ಣಾಬಾಯಿ. ಈ ದಂಪತಿಗಳಿಗೆ ೫ ಜನ ಮಕ್ಕಳು. ಬಟುಅಕ್ಕಾ, ರಾಮಚಂದ್ರ, ವಾಸುದೇವ. ಲಕ್ಷ್ಮಣ ಮತ್ತು ದುರ್ಗಾ. ಮುಪ್ಪಿನತಾಯಿ ಬೇರೆ. ಅಲ್ಲದೆ ತಮ್ಮನಾದ ಕೃಷ್ಣಾಜಿಪಂತನ ಗಂಗಾಧರ ಮತ್ತು ಚಂದ್ರಿ ಎಂಬ ಇಬ್ಬರು ಮಕ್ಕಳು. ಇಷ್ಟುದೊಡ್ಡ ಸಂಸಾರಕ್ಕೆ ದುಡಿಯುವ ಕೈಯು ಒಂದೇ ಇದ್ದರೂ ಉಣ್ಣುವ ಬಾಯಿಗಳಿಗೇನೂ ಕೊರತೆ ಇರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕಾಶೀನಾಥ ಪಂತರಿಗೆ ಮನೆಸಾಗಿಸುವದು ಎಷ್ಟು ಕಷ್ಟವಾಗುತ್ತಿರಬೇಕೆಂಬುದನ್ನು

ಈ ಅಲ್ಪ ಸುಖವೂ ಕೂಡ ದೈವದ ಮನಸ್ಸಿಗೆ ಬರಲಿಲ್ಲ. ಅನ್ನ ಪೂರ್ಣಾಬಾಯಿಯು ಕೊನೆಯ ಮಗುವನ್ನು ಹೆತ್ತಾಗ ಮೃತ್ಯುವಿಗೆ ತುತ್ತಾದಳು. ಪಂತರ ಸಂಸಾರವೇ ಕುಸಿದುಬಿದ್ದಿತು. ಅದೇ ಸಮಯಕ್ಕೆ ೧೮೭೭ ರಲ್ಲಿ ಡವಗೀಬರವು ರಾಷ್ಟ್ರದಲ್ಲಿ ಹಾಹಾಕಾರವನ್ನು ಉಂಟುಮಾಡಿತು. ಪಂತರ ಕುಟುಂಬವೂ ಸಂಕಟಕ್ಕೆ ಗುರಿಯಾಯಿತು. ಪಂತರ ಎರಡನೆಯ ಬಂಧುವಾದ ಗೋಪಾಳರಾಯನು ಗದುಗಿನಲ್ಲಿ ವಕೀಲಿಯನ್ನು ಮಾಡುತ್ತಿದ್ದನು. ಅಲ್ಲಿಗೆ ಇವರೆಲ್ಲ ಧಾವಿಸಿದರು. ಅಲ್ಲಿ ಅತ್ಯಂತ ಕಷ್ಟದಿಂದ ದಿನಗಳೆದು ಮರಳಿ ಧಾರವಾಡಕ್ಕೆ ಬಂದರು. ಆದರೆ ಇದಕ್ಕಿಂತಲೂ ಘೋರವಾದ ಇನ್ನೊಂದು ಸಂಕಟವು ಪಂತರಿಗಾಗಿ ಕಾದುಕುಳಿತಿತ್ತು.

ಪಂತರ ಚಿಕ್ಕ ತಮ್ಮನಾದ ಕೃಷ್ಣಾಜಿಪಂತನು ಪ್ರವಾಸದಲ್ಲಿ ಮಾಯವಾದ ಸುದ್ದಿಯು ಬಂದಿತು. ಕೃಷ್ಣಾಜಿಪಂತನ ನೆರವಿನಿಂದಲೇ ಸಂಸಾರ ನೌಕೆಯನ್ನು ಹಾಗೂ ಹೀಗೂ ಸಾಗಿಸುತ್ತಿದ್ದ ಕಾಶೀನಾಥಪಂತರಿಗೆ ಇದರಿಂದ ಸಿಡಿಲುಬಡಿದಂತಾಯಿತು. ಅವರ ಆಧಾರ ಸ್ತಂಭವೇ ಬಿದ್ದಂತಾಯಿತು. ಎಲ್ಲ ಕಡೆಗೂ ಹುಡುಕಲು ಪ್ರಾರಂಭಿಸಿದರು. ಆದರೆ ಎಲ್ಲಿಯೂ ಸುಳುವು ಹತ್ತಲಿಲ್ಲ. ಇದರಿಂದ ಮನೆಯ ಜನರೆಲ್ಲ ದಿಗ್ಭ್ರಾಂತರಾದರು. ವೃದ್ಧಮಾತೆಯು ಈ ಪುತ್ರವಿಯೋಗವನ್ನು ತಾಳಲಾರದೆ ಮೃತ್ಯುಮುಖಿಯಾದಳು.

ಕಾಶೀನಾಥಪಂತರು ತಮ್ಮನ ಶೋಧಕ್ಕಾಗಿ ಕಾಶಿಯ ವರೆಗೆ ಸುತ್ತಾಡಿ ಬಂದರು. ಅನೇಕ ಪತ್ರಗಳನ್ನು ಬರೆದರು. ಆದರೆ ಎಲ್ಲವೂ ವಿಫಲವಾಯಿತು. ಕಾಶೀನಾಥಪಂತರು ಕೃಷ್ಣಾಜೀಪಂತರಿಗೆ ಬರೆದ ಒಂದು ಪತ್ರವು ಅವರ ಹಳೆಯ ಕಾಗದ ಪತ್ರಗಳಲ್ಲಿದೆ. ಅದು ಅತ್ಯಂತ ಹೃದಯ ದ್ರಾವಕವಿದ್ದು, ಅದರ ಒಂದು ಭಾಗವನ್ನು ಕೆಳಗೆ ಕೊಡಲಾಗಿದೆ:

"ನಾವು ಮೂವರೂ ಅಣ್ಣತಮ್ಮಂದಿರು, ಯಾರೂ ಯಾರ ಮಾತನ್ನೂ ಮೀರುತ್ತಿರಲಿಲ್ಲ. ಇದರಿಂದ ನಾವು ಸಾಲಗಾರರಾಗದೆ ಸಂಸಾರವನ್ನು ಸರಾಗವಾಗಿ ನಡೆಸುತ್ತಿರುವದನ್ನು ಕಂಡು, ನೀವು ಕಲಿಯುಗದ ಅಣ್ಣ ತಮ್ಮಂದಿರಲ್ಲ ಕೃತಯುಗದವರು ಎಂದು ಜನರು ಮಾತನ್ನಾಡಿದಾಗ ನಮಗೆ ಹೆಮ್ಮೆ ಎನಿಸುತ್ತಿತ್ತಲ್ಲವೆ? ಆದರೆ ಇಂದು ನೀನು ಮಾತ್ರ ನಮ್ಮನ್ನು ವಿಚಾರಿಸದೇ ಹೊರಟು ಹೋದುದರಿಂದ ಜನರು ಅನೇಕ ತರ್ಕ ವಿತರ್ಕಗಳನ್ನು ಮಾಡಹತ್ತಿದ್ದಾರೆ. ಜನರ ಈ ಎಲ್ಲ ಸಂಶಯಗಳನ್ನು ದೂರ ಮಾಡುವದಕ್ಕಾಗಿಯಾದರೂ ನೀನು

ನನ್ನ ಮಾತು ಕೇಳಿ ಬೇಗನೆ ಬಾ..........ವಿರಕ್ತನಾಗಿ ಕೆಲವುದಿನ ಕಳೆಯಬೇಕೆಂದು ನಿನಗೆ ಅನಿಸುತ್ತಿದ್ದರೆ ಅದೂ ಒಳ್ಳೆಯದೇ. ಆದರೆ ನನ್ನನ್ನು ಕೇಳಿ ಮಾಡು. ಹೋಗುವ ಸಮಯವು ಯಾವುದೆಂಬುದನ್ನು ನಾನು ಹೇಳುವೆ. ನನ್ನ ಉದ್ದೇಶವೂ ಅದೇ ಇದೆ. ಆದುದರಿಂದ ನೀನು ಇಲ್ಲಿಗೆ ಬಂದರೆ, ಇಬ್ಬರೂ ಕೂಡಿ ವಿಚಾರಮಾಡಿ ನಿಶ್ಚಯಿಸೋಣ. ನಿನಗೆ ಯಾವ ರೀತಿಯಿಂದಲೂ ತಡೆಯುಂಟಾಗದಂತೆ ನಾನು ನೋಡಿಕೊಳ್ಳುವೆ. ನೀನು ಹೋಗುವವನೇ ಇದ್ದರೆ ನಾನೆಂತು ತಡೆಯಬಲ್ಲೆ ? ಆದರೆ ಜನ ಹಾಗೂ ಶಾಸ್ತ್ರಕ್ಕೆ ವಿರುದ್ಧವಾಗದಂತೆ ಏನನ್ನೂ ಮಾಡಬಹುದು. ಹೀಗೆ ಪತ್ರದಲ್ಲಿ ಎಷ್ಟೆಂದು ಬರೆಯಬೇಕು ? ಆದುದರಿಂದ ನನ್ನ ಪತ್ರಕ್ಕೆ ಮರ್ಯಾದೆಯನ್ನು ಕೊಟ್ಟು ಬೇಗನೆ ಮರಳಿ ಬಾ"

ಕೃಷ್ಣಾಜಿಪಂತರ ಕೈಯಲ್ಲಿ ಈ ಪತ್ರ ಸಿಕ್ಕಿದ್ದರೆ ಖಂಡಿತವಾಗಿಯೂ ಮರಳಿಬಾರದೆ ಇರುತ್ತಿದ್ದಿಲ್ಲ. ಆದರೆ ಬರಲು ಅವರು ಈ ಜಗತ್ತಿನಲ್ಲಿ ಜೀವಿಸಿದ್ದರೆಲ್ಲಿ ? ಗಾಣಗಾಪುರವನ್ನು ಬಿಟ್ಟನಂತರ ದಾರಿಯಲ್ಲಿ ಠಕ್ಕರು ಅವರನ್ನು ಕೊಂದಿರಬೇಕೆಂದು ಬಂದ ಸುದ್ದಿಗಳಿಂದ ಊಹಿಸಬೇಕಾಯಿತು.

ಜಗತ್ತಿನಲ್ಲಿ ಯಾವ ಸ್ಥಿತಿಯೂ ಸ್ಥಿರವಾಗಿ ಉಳಿಯಲಾರದು. ಹಗಲಿನ ನಂತರ ರಾತ್ರಿ, ರಾತ್ರಿಯ ನಂತರ ಹಗಲು ಹೀಗೆ ತಿರುಗುವುದೇ ಕಾಲಚಕ್ರದ ಧರ್ಮ. ಇಷ್ಟೆಲ್ಲ ಸಂಕಟ ಪರಂಪರೆಯಿಂದ ಬಳಲುತ್ತಿದ್ದ ಕಾಶೀನಾಥಪಂತರಿಗೆ ಉದ್ಯೋಗಶೀಲರಾದ ತಮ್ಮ ಮಕ್ಕಳನ್ನು ಕಂಡು, ತಮ್ಮ ಆಯುಷ್ಯದ ಕೊನೆಯ ದಿನಗಳಾದರೂ ಶಾಂತ ಹಾಗೂ ಸಮಾಧಾನದಿಂದ ಗತಿಸಬಹುದೆಂಬ ಸುಖ ಸ್ವಪ್ನಗಳು ಬೀಳಹತ್ತಿದವು.

ಎಲ್ಲಕ್ಕೂ ಹಿರಿಯ ಮಗನಾದ ರಾಮಚಂದ್ರ ಉರ್ಫ ರಾಮೂ ಅಣ್ಣಾನು ಮ್ಯಾಟ್ರಿಕ್ ಪಾಸಾಗಿ ತನ್ನ ಮೆಚ್ಚಿಗೆಯ ಶಿಕ್ಷಕ ವೃತ್ತಿಯನ್ನು ಕೈಕೊಂಡನು. ಆದರ್ಶ ಶಿಕ್ಷಕನೆಂದೂ ವಿದ್ಯಾರ್ಥಿಗಳ ಪ್ರೇಮ ಸಂಪಾದನೆಯಲ್ಲಿ ಇವರನ್ನು ಸರಿಗಟ್ಟುವವರು ಯಾರೂ ಇಲ್ಲೆಂದೂ ಹೆಸರುವಾಸಿಯಾದನು.

ಎರಡನೆಯ ಮಗನಾದ ವಾಸುದೇವರಾಯನು ಮುಂಬಯಿಯಲ್ಲಿ ಗ್ರ್ಯಾಂಡ ಮೆಡಿಕಲ್ ಕಾಲೇಜದಿಂದ ಎಲ್. ಎಂ. ಆ್ಯಂಡ ಎಸ್. ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಸೊಲ್ಲಾಪುರದಲ್ಲಿ ದವಾಖಾನೆಯನ್ನು ಪ್ರಾರಂಭಿಸಿದನು. ಇವನಿಗೆ ಯಂತ್ರಕಲೆಯಲ್ಲಿ ಅಭಿರುಚಿ ಇದ್ದುದರಿಂದ "ಶಿವಾಜಿ ವರ್ಕ್ಸ" ಎಂಬ

ಕಾರಖಾನೆಯನ್ನು ಇವನು ಸೊಲ್ಲಾಪುರದಲ್ಲಿಯೇ ಆರಂಭಿಸಿದನು. ಬುದ್ಧಿವಾದಿ; ಪುರೋಗಾಮಿ, ವಿಚಾರ ಸರಣಿಯ ಲೇಖಕನೆಂದು ಮಹಾರಾಷ್ಟ್ರಕ್ಕೆ ಇವನು ಚಿರಪರಿಚಿತನಾಗಿದ್ದಾನೆ. ಗಂಗಾಧರಪಂತನೂ ಕೂಡಾ ಮೆಡಿಕಲ್ ಕಾಲೇಜದಿಂದ ಹೊರಬಿದ್ದು ಹೈದರಾಬಾದದಲ್ಲಿ ದವಾಖಾನೆಯನ್ನು ತೆರೆದು ಆ ವ್ಯವಸಾಯದಲ್ಲಿ ಖ್ಯಾತಿಯನ್ನು ಪಡೆದನು.

ಲಕ್ಷ್ಮಣರಾಯರೇ ಎಲ್ಲಕ್ಕೂ ಚಿಕ್ಕವರು. ಗುರ್ಲಹೊಸೂರೇ ಇವರ ಜನ್ಮಸ್ಥಳ. ೧೮೬೯ ನೇ ಜೂನ ೨೦ ನೇ ದಿನಾಂಕದಲ್ಲಿ ಇವರು ಜನಿಸಿದರು. ಮೂರು–ನಾಲ್ಕು ವರುಷದವರಿರುವಾಗಲೇ ತಾಯಿಯನ್ನು ಕಳೆದುಕೊಂಡ ಇವರಿಗೆ ಮಾತೃಸುಖ ಎಷ್ಟು ದೊರೆತಿರಬೇಕು! ಧಾರವಾಡದ ಹನುಮನ ಗುಡಿಯಲ್ಲಿ ಭಾವೂಪಂತರೆಂಬುವವರು ತೆರೆದ ಶಾಲೆಯಲ್ಲಿ ಇವರ ಓ. ನಾ. ಮಾ. ಶಿಕ್ಷಣ ಪ್ರಾರಂಭವಾಯಿತು. ಹಣ್ಣಿನ ರುಚಿ ಹೀಚಿನಲ್ಲಿಯೇ ಕಂಡುಬರುವಂತೆ ಲಕ್ಷ್ಮಣನ ಲಕ್ಷ್ಯವು ಓದು–ಬರೆಹಗಳಿಗಿಂತ ಚಿತ್ರಗಳನ್ನು ತೆಗೆಯುವದಲ್ಲಿ ಆಟದ ಸಾಮಾನುಗಳನ್ನು ಸಿದ್ಧಪಡಿಸುವದರಲ್ಲಿ ಕಂಡುಬರಹತ್ತಿತು. ಅವನ ಕಲ್ಪಕತೆಯನ್ನು ಕಂಡು ಹಿರಿಯರು ಹಿಗ್ಗಿ ಬೆರಗಾಗುತ್ತಿದ್ದರು. ಆದರೆ ಅಭ್ಯಾಸ ಮಾಡದ ಮೂಲಕ ಗುರುಗಳಿಂದ ಆಗಾಗ ಬೈಗಳನ್ನೂ ಛಡಿಯ ಪ್ರಸಾದವನ್ನೂ ಪಡೆಯಬೇಕಾಗುತ್ತಿತ್ತು. ಲಕ್ಷ್ಮಣರಾಯರ ಪ್ರೀತಿಯ ವಿಷಯಗಳೆಂದರೆ ಭೂಮಿತಿ; ಹಾಗೂ ಭೂಗೋಲ. ಸಂಸ್ಕೃತವೆಂದರೆ ಇವರಿಗೆ ತಲೆಶೂಲಿ. ಅಭ್ಯಾಸದಲ್ಲಿ ಹಿಂದೆ ಬಿದ್ದರೂ ತನ್ನಲ್ಲಿರುವ ಹುಟ್ಟುಗುಣಗಳನ್ನು ಬೆಳೆಸಿಕೊಂಡು ತಾನು ಮುಂದೆ ಬರುವೆನೆಂಬ ಆತ್ಮವಿಶ್ವಾಸವು ಮಾತ್ರ ಬಾಲ್ಯದಲ್ಲಿಯೇ ಅವರಲ್ಲಿ ಉಂಟಾಗಿದ್ದಿತು. ಆದ್ದರಿಂದಲೇ ತಮ್ಮ ಮನದ ಬಯಕೆಯನ್ನು ಧೈರ್ಯದಿಂದ ತಂದೆಗೆ ತಿಳಿಸಿ, ಅವರ ಸಮ್ಮತಿಯನ್ನು ಪಡೆದ ವಿಷಯವನ್ನು ಈ ಮೊದಲೇ ವಿವೇಚಿಸಲಾಗಿದೆ.

ಕಾಶೀನಾಥಪಂತರ ಇಬ್ಬರೂ ಹೆಣ್ಣುಮಕ್ಕಳು ಮದುವೆಯಾಗಿ ಅತ್ತೆಯ ಮನೆಗೆ ಹೋಗಿದ್ದರು. ಈಗ ಅವರಿಗೆ ಮನೆಯ ಯಾವ ಚಿಂತೆಯೂ ಇರಲಿಲ್ಲ. ಪೂಜೆ, ಪುರಾಣ, ಪುಣ್ಯ ಕಥೆಗಳಲ್ಲಿ ಅವರು ಕಾಲ ಕಳೆಯುತ್ತಿದ್ದರು. ನಡುನಡುವೆ ನಾಲ್ಕಾರುದಿನ ಮಕ್ಕಳ ಕಡೆಗೆ ಹೋಗಿರುತ್ತಿದ್ದರು. ಹೀಗೆ ಕಾಲ ಕಳೆಯುತ್ತಿರುವಾಗ ಒಮ್ಮೆ ಸೊಲ್ಲಾಪುರದಲ್ಲಿರುವ ಮಗನ ಮನೆಗೆ ಹೋದಾಗ ಅಕಸ್ಮಾತ್ ಚಿಕ್ಕ ಅಪಘಾತವಾಗಿ ೧೮೯೨ ರಲ್ಲಿ ಮರಣ ಹೊಂದಿದರು.

ಇಂದು ಭಾರತದಲ್ಲೆಲ್ಲ ಪ್ರಸಿದ್ಧವಾದ "ಕಿರ್ಲೋಸ್ಕರ ಬ್ರದರ್ಸ ಲಿಮಿಟೆಡ್" ಎಂಬ ಕಾರಖಾನೆಯ ಜನಕರಾದ ಶ್ರೀ ಲಕ್ಷ್ಮಣರಾಯರು ಎಂತಹ ಕಷ್ಟಮಯ ಸ್ಥಿತಿಯಿಂದ ಉಚ್ಚ ಮಟ್ಟಕ್ಕೆ ಏರಿದರೆಂಬುದರ ಹಿನ್ನೆಲೆಯನ್ನು ತಿಳಿಸುವದಕ್ಕೋಸ್ಕರವಾಗಿ ಕಾಶೀನಾಥಪಂತರ ಜೀವನವನ್ನು ವಿಸ್ತಾರವಾಗಿ ವರ್ಣಿಸಲಾಗಿದೆ. ಇದನ್ನರಿಯದೆ ಶ್ರೀ ಲಕ್ಷ್ಮಣರಾಯರ ಉಜ್ವಲ ಕೀರ್ತಿಯ ಮೇಲೆ ಬೆಳಕು ಬೀಳಲಾರದು.

ಮಾನವನ ಜೀವನವನ್ನು ಅನೇಕ ಜನರು ನಾನಾ ಬಗೆಯಾಗಿ ಬಣ್ಣಿಸುತ್ತಾರೆ. ಬೇರೆ ಬೇರೆ ಉಪಮೆಗಳನ್ನು ಕೊಡುತ್ತಾರೆ. ನಮ್ಮ ಸುಭಾಷಿತಕಾರರು ಸಮುದ್ರದಲ್ಲಿ ತೇಲಾಡುವ ಕಟ್ಟಿಗೆಯ ತುಂಡೆಂದು ವರ್ಣಿಸಿದರೆ, ಸೆಕ್ಸಪಿಯರನು ರಂಗಭೂಮಿಯಲ್ಲಿಯ ನಟನೆಂದು ಬಣ್ಣಿಸಿದ್ದಾನೆ. ಮಾನವನಿಗೆ ತನ್ನ ಸುತ್ತುಮುತ್ತಲಿನ ಪರಿಸ್ಥಿತಿಯೊಡನೆ ಸತತವಾಗಿ ಹೋರಾಡಬೇಕಾಗುತ್ತಿರುವದರಿಂದ ಕೆಲವರು ಮಾನವನನ್ನು ಸೈನಿಕನೆಂದೂ ಕರೆದಿದ್ದಾರೆ.

ಈ ಉಪಮೆಗೆ ಇನ್ನೊಂದನ್ನು ಜೋಡಿಸಬಹುದು. ನಾವು ಯಾವುದೇ ಧರ್ಮದವರಿರಲಿ, ಪ್ರತಿಯೊಬ್ಬರಿಗೂ ತಮ್ಮದೇ ಆದ ಉಪಾಸ್ಯ ದೈವತವೊಂದು ಇದ್ದೇ ತೀರುವದು. ಅದನ್ನು ತಾನೇ ನಿಶ್ಚಯಿಸಿ ಕೊಳ್ಳಬೇಕಾಗುವದು. ಅದನ್ನು ಪಡೆಯಲು ದೀರ್ಘಯೋಗವನ್ನು ಕೈಕೊಳ್ಳಬೇಕಾಗುತ್ತದೆ. ಲಕ್ಷ್ಮಣರಾಯರು ಇಂತಹ ಒಬ್ಬ ಯೋಗಿಗಳು. **ಯಂತ್ರವೇ ಅವರ ಉಪಾಸ್ಯ ದೈವತವು.** ಅದರ ವರವನ್ನು ಪಡೆಯುವದಕ್ಕಾಗಿ ಅವರು ಬಹು ಕಷ್ಟಮಯವಾದ, ದೀರ್ಘವಾದ ಯೋಗವನ್ನು ಕೈಕೊಳ್ಳಬೇಕಾಯಿತು. ಅವರ ಸತತೋದ್ಯೋಗ, ನಿಶ್ಚಪ್ರಯತ್ನಗಳಿಗೆ ಮೆಚ್ಚಿ ಯಂತ್ರದೇವತೆಯು ಲಕ್ಷ್ಮಣರಾಯರಿಗೆ ದರ್ಶನ[illegible], ಕೀರ್ತಿಯ ಕಿರೀಟವನ್ನಿತ್ತಳು. ಈ ದೃಷ್ಟಿಯಿಂದ ಲಕ್ಷ್ಮಣರಾಯರ ದೀರ್ಘವಾದ ಯೋಗದ ವೃತ್ತಾಂತವು ತರುಣ ಭಾರತಕ್ಕೆ ಮಾರ್ಗದರ್ಶಕವೂ ಮನೋರಂಜಕವೂ ಆಗುವದರಲ್ಲಿ ಸಂಶಯವಿಲ್ಲ.

No 8 of 1856

Certificate

Off. of Supt. Rev. Survey & Assesst. in Goozerat Surat 31st October 1856

Casheenath Mahpoorkur has served under my orders in the Revenue Survey Department since August 1845. He is an industrious and very clever Measurer, and one of the best Mappers we have. He can Survey with either the Plane table or the Cross-staff.

Casheenath Mapoorkur bears a good character and is in all respects a very deserving man.

ಕಾಶೀನಾಥ ಪಂತರಿಗೆ
ತಾ. ೩೧-೧೦-೧೮೫೬
ನೇ ದಿನ ಕೊಟ್ಟ
ಕ. ಫ್ಯಾನಿಂಗನ
ಸರ್ಟಿಫಿಕೇಟ

ಕಾಶೀನಾಥ ಪಂತರು ಕೃಷ್ಣಾಜಿ ಪಂತರಿಗೆ ತಾ. ೨೮-೧೦-೧೮೭೭ನೇ ದಿನ ಬರೆದ ಪತ್ರ






ಲಕ್ಷ್ಮಣರಾಯರಿಗೆ ಕೆಲಸಕೊಡಿಸಿದ ನಕ್ಷೆಗಳು

## ೨

# ರಾಯರ ಶಿಕ್ಷಣ

ಚಿತ್ರ–ಯಂತ್ರಕಲೆಗಳ ಪಿಪಾಸೆಯಿಂದ ತರುಣ ಲಕ್ಷ್ಮಣರಾಯರು ಪ್ರವಾಸಕ್ಕೆ ತಕ್ಕಷ್ಟು ಹಣ, ಒಂದು ಚಿಕ್ಕ ಹಾಸಿಗೆಯೊಂದಿಗೆ ೧೮೮೨ ರಲ್ಲಿ ಧಾರವಾಡದಿಂದ ಹೊರಬಿದ್ದರು. ನಡುವೆ ಸೊಲ್ಲಾಪುರ, ಪುಣ್ಯಪಟ್ಟಣಗಳಲ್ಲಿ ಇಳಿದು ಮುಂಬಾಪುರಿಗೆ ಬಂದರು. ಅವರ ಜೀವನದಲ್ಲಿ ಇಷ್ಟು ದೂರ ಪ್ರವಾಸ, ಅವರಲ್ಲಿಯೂ ರೇಲ್ವೆಯ ಪ್ರವಾಸ ಕೈಕೊಂಡುದು ಇದೇ ಮೊದಲು.

ಮುಕ್ಕಾಲು ಶತಮಾನದ ಹಿಂದಿನ ಮುಂಬಯಿಗೂ ಈಗಿನ ಮುಂಬಯಿಗೂ ಅದೆಷ್ಟು ಅಂತರ! ಆ ವೇಳೆಯ ಮುಂಬಯಿಯ ವಿಸ್ತಾರವೂ ಅಷ್ಟಿರಲಿಲ್ಲ. ರಾಜ ಬೀದಿಗಳು ಅಳತೆಯಲ್ಲಿದ್ದವು. ಮುಖ್ಯ ಬೀದಿಗಳಲ್ಲಿ ಟ್ರಾಮ್ ಓಡಾಡುತ್ತಿದ್ದವು. ಆದರೆ ಅವು ಕುದುರೆಗಳಿಂದ ಎಳೆಯಲ್ಪಡುತ್ತಿದ್ದವೆಂಬ ಮಾತು ಈಗ ಅಚ್ಚರಿಯನ್ನುಂಟು ಮಾಡಬಹುದು. ಇನ್ನೂ ವಿದ್ಯುತ್ ಪ್ರಾರಂಭವಾಗಿರಲಿಲ್ಲ. ಗ್ಯಾಸುಗಳೇ ಬೀದಿಗಳನ್ನು ಬೆಳಗುತ್ತಿದ್ದವು. ಮೋಟಾರಿನ ಯುಗವು ಬಹು ದೂರವಿದ್ದಿತು. ಆದರೆ ಸಾಯಕಲ್ಲಿನ ಪರಿಚಯವು ಅದೇ ಆಗುವದರಲ್ಲಿತ್ತು. ಮುಂಬಯಿಯ ಹೌಸೀ ಜನರ ಸಾಯಂಕಾಲದ ತಿರುಗಾಟದ ಸ್ಥಾನವೆಂದರೆ ಸಮುದ್ರ ತೀರ.

ಲಕ್ಷ್ಮಣರಾಯರ ಹಿರಿಯ ಅಣ್ಣಂದಿರಾದ ವಾಸುದೇವರಾಯರು ಆಗ ಮುಂಬೈಯಲ್ಲಿ ಗೋಳೀಯವರ ವಾಡೆಯಲ್ಲಿ ವಾಸಿಸುತ್ತಿದ್ದರು. ಲಕ್ಷ್ಮಣರಾಯರು ಅಣ್ಣನಲ್ಲಿಯೇ ವಾಸ್ತವವನ್ನು ಮಾಡಿ, ಅವರೊಡನೆ ಖಾನಾವಳಿಯಲ್ಲಿ ಉಣ್ಣಹತ್ತಿದರು.

ಲಕ್ಷ್ಮಣರಾಯರು ಏನು ಕಲಿಯಬೇಕೆಂಬ ಬಗ್ಗೆ ಚರ್ಚೆಯಾಗಿ ಅದೇ ಪ್ರಾರಂಭವಾಗಿದ್ದ ಜೆ. ಜೆ. [redacted]ಸ್ಕೂಲ ಆಫ್ ಆರ್ಟ್ಸ್‌ನಲ್ಲಿ ಹೆಸರು ಹಚ್ಚಿದರು. ಗಣಪತ ಕೇಶಾರಿ ಎಂಬುವವರು ಶಿಕ್ಷಕರಾಗಿದ್ದರು. ಮಿಸ್ಟರ ಗ್ರಿಫಿತ್ ಎಂಬುವವರು ಹೆಡ್ಮಾಸ್ತರರು. ಚಿತ್ರಕಲೆಯೆಂದರೆ ಲಕ್ಷ್ಮಣರಾಯರಿಗೆ ಬಹು ಪ್ರೀತಿ. ಆದರೆ ಈ ಕಲೆಯನ್ನು ಕಲಿಸುವ ಪದ್ಧತಿಯು ಮಾತ್ರ ಬಹು ಬೇಸರ

ಬರುವಂತಹದ್ದಿತ್ತು. ಭಿನ್ನ ಭಿನ್ನ ರೇಖಾಕೃತಿಗಳನ್ನು ತೆಗೆಯುವದರಲ್ಲಿಯೇ ಎಷ್ಟೋ ತಾಸುಗಳನ್ನು ಕಳೆಯಬೇಕಾಗುತ್ತಿತ್ತು. ಆದರೂ ಲಕ್ಷ್ಮಣರಾಯರು ಮೊದಲಿನ ಮೂರು ತರಗತಿ (Third Gread)ಗಳನ್ನು ಮುಗಿಸಿ, ವರ್ಣ ಚಿತ್ರಗಳ (Painting) ವರ್ಗಕ್ಕೆ ಬಂದೊಡನೆಯೇ ಅವರಲ್ಲಿ ಅವರ ಮನಸ್ಸು ರಮಿಸಹತ್ತಿತು. ಆದರೆ ದುರ್ದೈವದಿಂದ ಅವರ ಕಣ್ಣುಗಳಲ್ಲಿ ಬಣ್ಣಗಳ ಸೂಕ್ಷ್ಮತೆಯನ್ನು ವಿಂಗಡಿಸುವ ಸಾಮರ್ಥ್ಯವಿರಲಿಲ್ಲ. ಅದರಿಂದ ಅವರು ನಿರುಪಾಯರಾಗಿ ಚಿತ್ರಕಲೆಯ ಅಭ್ಯಾಸವನ್ನು ಅಲ್ಲಿಗೇ ನಿಲ್ಲಿಸಬೇಕಾಯಿತು. ಆದರೆ ಲಕ್ಷ್ಮಣರಾಯರಿಗೆ ಇದು ಶಾಪವಾಗಿ ಪರಿಣಮಿಸಲಿಲ್ಲ. ಚಿತ್ರಕಲೆಯಂತೆ ಯಂತ್ರಕಲೆಯ ಕಡೆಗೂ ತಮ್ಮ ಒಲವು ಇದೆ ಎಂಬುದನ್ನು ಅರಿತ ಅವರು ಕೂಡಲೇ ಯಂತ್ರಕಲೆಯ ವ್ಯಾಸಂಗವನ್ನು ಕೈಕೊಂಡರು.

ಚಿತ್ರಶಾಲೆಯಲ್ಲಿ ಭವಾನಿ ಶಂಕರರೆಂಬ ಒಬ್ಬ ಕಂಚುಗಾರ ಮಿತ್ರರಿದ್ದರು. ಅವರ ಮನೆಯಲ್ಲಿ ಮುತ್ತಲ ಹೂಗಳ ಸೆರೆಯನ್ನು ಸೋಸಲು ಬೇಕಾಗುವ ಪಾತ್ರೆಗಳ ಒಂದು ಕಾರಖಾನೆ ಇದ್ದಿತು. ಅದಕ್ಕೆ ಬೇಕಾಗುವ ಯಂತ್ರಗಳು ಒಂದು ಪಡಸಾಲೆಯಲ್ಲಿ ಇದ್ದವು. ಇನ್ನೊಂದು ಪಡಸಾಲೆಯಲ್ಲಿ ತಾಮ್ರ–ಹಿತ್ತಾಳೆಗಳ ಬೀಡುಗಳನ್ನು ಕರಗಿಸುವ ಭಟ್ಟಿಗಳಿದ್ದವು. ಲಕ್ಷ್ಮಣರಾಯರು ಮೆಲ್ಲ ಮೆಲ್ಲನೆ ತಮ್ಮ ಸಮಯವನ್ನೆಲ್ಲ ಈ ಕಾರಖಾನೆಯಲ್ಲಿ ಕಳೆಯುತ್ತ ಅಲ್ಲಿಯ ಕೆಲಸವನ್ನೆಲ್ಲ ಮಾಡಹತ್ತಿದರು.

ಮನೆಯಿಂದ ಬರುತ್ತಿದ್ದ ಹತ್ತು–ಹನ್ನೆರಡು ರೂಪಾಯಿಗಳಲ್ಲಿ ಲಕ್ಷ್ಮಣರಾಯರು ತಮ್ಮ ವೆಚ್ಚವನ್ನೆಲ್ಲ ಸಾಗಿಸುತ್ತಿದ್ದರು. ತಮ್ಮ ಕಾಲಮೇಲೆ ತಾವು ನಿಲ್ಲುವ ವಿಚಾರವು ಅವರಲ್ಲಿ ಸುಳಿಯಹತ್ತಿತು. ಅವರು ಜಾರ್ಜಗೆಗನ್ ಹಾಗೂ ಇತರ ಕಾರಖಾನೆಗಳಲ್ಲಿ ಕೆಲಸ ಹಿಡಿಯಲು ಪ್ರಯತ್ನಪಟ್ಟರು. ಆದರೆ ಎಲ್ಲಿಯೂ ಆಶೆ ತೋರಲಿಲ್ಲ. ಹೀಗೆ ಚಿಂತಿಸುವಾಗ ಅಕಸ್ಮಾತ್ತಾಗಿ ಒಂದು ಸಂದರ್ಭ ಒದಗಿ ಅವರ ಪ್ರಶ್ನೆಯು ಬಿಟ್ಟಿತು.

೧೮೮೭ ರಲ್ಲಿ ಯಾಂತ್ರಿಕ ಶಿಕ್ಷಣ ಕೊಡುವದಕ್ಕಾಗಿ ವ್ಹಿಕ್ಟೋರಿಯಾ ಜುಬಿಲಿ ಇನ್‌ಸ್ಟಿಟ್ಯೂಟ ಎಂಬ ಸಂಸ್ಥೆಯು ಮುಂಬಯಿಯಲ್ಲಿ ಸ್ಥಾಪಿಸಲ್ಪಟ್ಟಿತು. ಅಲ್ಲಿ ಮ್ಯಾಕ್ಯಾನಿಕಲ್ ಡ್ರಾಯಿಂಗ ಕಲಿಸುವ ಒಬ್ಬ ಶಿಕ್ಷಕರ ಅವಶ್ಯಕತೆ ಇದೆಯೆಂದು ಲಕ್ಷ್ಮಣರಾಯರಿಗೆ ತಿಳಿಯಿತು. ಕೂಡಲೇ ಅವರು ಅದರ "ಪ್ರಿನ್ಸಿಪಾಲರಾದ ಮಿಸ್ಟರ ಸಿಥಿಯುನ್ನರನ್ನು ಕಂಡರು. ಆಗ ಪ್ರಿನ್ಸಿಪಾಲರು

"ಆರ್ಟ್ಸ್ ಸ್ಕೂಲಿನಲ್ಲಿ ಕಲಿತ ಚಿತ್ರಕಲೆಯೇ ಬೇರೆ. ಯಂತ್ರಗಳ ರಚನೆಯ ಸಕಾಶವನ್ನು ತೆಗೆಯಲು ಬೇಕಾಗುವ ಜ್ಞಾನವೇ ಬೇರೆ. ಅಂದಮೇಲೆ ಇಂಜಿನಿಯರರಾಗುವ ವಿದ್ಯಾರ್ಥಿಗಳಿಗೆ ಡ್ರಾಯಿಂಗ ಕಲಿಸುವ ಕಾರ್ಯವು ನಿಮ್ಮಿಂದ ಹೇಗೆ ಸಾಧ್ಯ" ಎಂದು ತಮ್ಮ ಸಂಶಯವನ್ನು ವ್ಯಕ್ತಪಡಿಸಿದರು. ಆಗ ಲಕ್ಷ್ಮಣರಾಯರು "ತಾವು ನನಗೆ ಒಂದು ಕೆಲಸವನ್ನು ಕೊಟ್ಟು ಪ್ರತ್ಯಕ್ಷ ನನ್ನ ಪರೀಕ್ಷೆಯನ್ನೇ ತೆಗೆದುಕೊಳ್ಳಬಹುದು" ಎಂದು ಉಪಾಯವನ್ನು ಸೂಚಿಸಿದರು. ಮರುದಿನ ಲಕ್ಷ್ಮಣರಾಯರು ಪ್ರಿನ್ಸಿಪಾಲರು ಕೊಟ್ಟ ಡ್ರಾಯಿಂಗಿನ ಪ್ರತಿಯನ್ನು ಅತ್ಯಂತ ವ್ಯವಸ್ಥಿತವಾಗಿ ಸಿದ್ಧಪಡಿಸಿ, ಅವರ ಎದುರಿಗೆ ಇಡಲು ಪ್ರಿನ್ಸಿಪಾಲರಿಗೆ ಆನಂದವಾಗಿ "ಬಹಳ ಚೆನ್ನಾಗಿದೆ. ತಿಂಗಳಿಗೆ ೩೫ ರೂ. ಸಂಬಳದ ಮೇಲೆ ನಿಮ್ಮನ್ನು ಡ್ರಾಯಿಂಗ ಮಾಸ್ತರರೆಂದು ನೇಮಿಸಿಕೊಳ್ಳುವೆ. ನೀವು ನಿಮ್ಮ ಕೆಲಸಕ್ಕೆ ಇಂದೇ ಪ್ರಾರಂಭಿಸಿರಿ" ಎಂದು ಹೇಳಿದರು.

ಉತ್ಕರ್ಷವನ್ನು ಬಯಸುವ ಪ್ರತಿಯೊಬ್ಬರು ತಮ್ಮ ಆಯುಷ್ಯದಲ್ಲಿ ಒದಗುವ ಪ್ರತಿಯೊಂದು ಸಂಧಿಯ ಉಪಯೋಗವನ್ನು ಶಕ್ಯವಿದ್ದಷ್ಟು ಹೆಚ್ಚು ಮಾಡಿಕೊಳ್ಳಬೇಕು. ಇಂತಹ ಸಂಧಿಗಳು ಹೇಗೆ, ಯಾವ ಸಮಯಕ್ಕೆ ಬರುತ್ತವೆಂಬುದನ್ನು ಹೇಳಲು ಬರುವದಿಲ್ಲ. ಆದುದರಿಂದ ನಾವು ಯಾವಾಗಲೂ ಜಾಗರೂಕರಾಗಿದ್ದು ಚಿಕ್ಕದೆಂದು ಕಂಡರೂ ಅದನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು. ವ್ಯರ್ಥ ಹೋಗಗೊಡಬಾರದು. ಲಕ್ಷ್ಮಣರಾಯರು ಮುಂದೆ ಸುಪ್ರಸಿದ್ಧ ಮಹಾರಾಷ್ಟ್ರದ ಕಾರಖಾನೆದಾರರೆಂದು ಕೀರ್ತಿ ಪಡೆದರು. ಆದರೆ ಈ ಉಜ್ವಲ ಕೀರ್ತಿಯು ತನ್ನಷ್ಟಕ್ಕೆ ತಾನೇ ಬಂದಿದೆಯೋ? ಅವರು ಒದಗಿದ ಪ್ರತಿಯೊಂದು ಸಂಧಿಯ ಪೂರ್ಣ ಉಪಯೋಗವನ್ನು ಮಾಡಿಕೊಂಡು ಒಂದೊಂದೇ ಮೆಟ್ಟಲು ಮೇಲಕ್ಕೇರಿದರು.

ಇನ್‌ಸ್ಟಿಟ್ಯೂಟಿನಲ್ಲಿ ನವಕರಿ ಸಿಕ್ಕೊಡನೆಯೇ ಲಕ್ಷ್ಮಣರಾಯರು ತಮ್ಮ ಸಹೋದ್ಯೋಗಿಗಳಂತೆ ಗತಾನುಗತಿಕೋಲೋಕಃ ಎಂಬಂತೆ ತಮ್ಮ ಆಯುಷ್ಯವನ್ನು ಕಳೆಯಲಿಲ್ಲ. ಆ ಸಂಸ್ಥೆಗೆ ಒಂದು ವರ್ಕ್ಸ್‌ಶಾಪ ಜೋಡಿಸಲ್ಪಟ್ಟಿತ್ತು. ಅದರಲ್ಲಿ ಲೇಥ್ಸ, ಡ್ರಿಲಿಂಗ ಮಶಿನ್ಸ, ಸೇಪಿಂಗ ಮಶಿನ್ಸ ಮತ್ತು ಸ್ಲಾಟಿಂಗ ಮಶಿನ್ಸ ಮೊದಲಾದ ಯಂತ್ರಗಳಿದ್ದವು. ಯಂತ್ರಪ್ರಿಯರಾದ ಲಕ್ಷ್ಮಣರಾಯರು ಆ ಯಂತ್ರಗಳ ಬಗ್ಗೆ ಜ್ಞಾನಮಾಡಿಕೊಳ್ಳಲು ನಿಶ್ಚಯಿಸಿದರು. ಆದರೆ ಅದನ್ನು ಸಾಧಿಸುವದು ಸುಲಭವಿರಲಿಲ್ಲ. ಆ ಮಾರ್ಗದಲ್ಲಿ ಎರಡು

ಪಿಷ್ನಗಳಿದ್ದವು. ವರ್ಕ್‌ಶಾಪಿನಲ್ಲಿ ಹೋಗಿ ಕೂಲಿಕಾರರಂತೆ ಕಾರ್ಯಮಾಡು ವವು ನಿಮ್ಮ ಮರ್ಯಾದೆಗೆ ಶೋಭಿಸುವದಿಲ್ಲೆಂದು ಸಹೋದ್ಯೋಗಿಗಳು ಎಚ್ಚರಿ ಸುತ್ತಿದ್ದರು. ಒಂದುವೇಳೆ ಒಳಗೆ ಪ್ರವೇಶ ದೊರೆತರೂ ಯಂತ್ರಗಳ ಜ್ಞಾನ ವಾಗುವದೆಂತು? ಎಂಬುದು ಎರಡನೆಯ ಪ್ರಶ್ನೆಯಾಗಿದ್ದಿತು.

ಮನವಿದ್ದಲ್ಲಿ ಮಾರ್ಗವಿದೆ. ಈ ಖಾತೆಯಲ್ಲಿ ವೇಲಜಿ ಮೇಸ್ತ್ರಿ ಎಂಬುವವ ರಿದ್ದರು. ಲಕ್ಷ್ಮಣರಾಯರು ಮೆಲ್ಲನೆ ಅವರ ಗೆಳೆತನ ಬೆಳೆಸಿದರು. ಅದರಿಂದ ವರ್ಕ್‌ಶಾಪಿನಲ್ಲಿ ಕಾರ್ಯಮಾಡುವ ಬಗ್ಗೆ ಅಪ್ಪಣೆ ದೊರೆಯಿತು. ಅಲ್ಲದೆ ಗೆಳೆಯರಾದ ಮೇಸ್ತ್ರಿಗಳು ಯಂತ್ರಗಳ ಜ್ಞಾನಮಾಡಿಕೊಡಲೂ ಒಪ್ಪಿದರು. ಹೀಗೆ ಈ ಮಾರ್ಗದಲ್ಲಿದ್ದ ತೊಂದರೆಗಳೆಲ್ಲ ದೂರವಾದೊಡನೆ, ಲಕ್ಷ್ಮಣರಾಯರು ಶಾಲೆಯಲ್ಲಿಯ ತಮ್ಮ ಶಿಕ್ಷಣದ ಕಾರ್ಯವು ಮುಗಿದೊಡನೆ ಉಳಿದ ಸಮಯ ವನ್ನೆಲ್ಲ ವರ್ಕ್‌ಶಾಪಿನಲ್ಲಿಯೇ ಕಳೆಯಹತ್ತಿದರು. ಎಣ್ಣೆ, ಮಶಿಗಳಿಂದ ಕಪ್ಪಾದ ವ್ಸ್ರ ಹಾಗೂ ಅರಿವೆಗಳನ್ನು ಕಂಡು ಉಳಿದ ಶಿಕ್ಷಕರು ಕುಚೇಷ್ಟೆಯನ್ನು ಮಾಡಿದರೂ ಅದನ್ನು ಲಕ್ಷಕ್ಕೆ ತಾರದೆ ಲಕ್ಷ್ಮಣರಾಯರು ಯಂತ್ರದೇವಿಯ ಉಪಾಸನೆಯನ್ನು ಕೈಕೊಂಡರು.

ಯಂತ್ರಗಳ ಬಗೆಗಿರುವ ಲಕ್ಷ್ಮಣರಾಯರ ವಿಲಕ್ಷಣ ಪ್ರೇಮವು ಅವರಿಗೆ ಅಂತಹ ಗೆಳೆಯರನ್ನು ದೊರಕಿಸಿಕೊಟ್ಟಿತು. ನೂರಖಾನ ಇಬ್ರಾಹೀಮ ಎಂಬ ಮಾಲವಣ ಕಡೆಯ ಒಬ್ಬ ಟಿನ್‌ಮನ್ನನ ಗೆಳೆತನವಾಗಲು ಇದೇ ಕಾರಣ. ನೂರಖಾನನು ಮುಸಲ್ಮಾನನಿದ್ದರೂ ಮರಾಠಿಯನ್ನು ಚನ್ನಾಗಿ ಮಾತಾಡು ತ್ತಿದ್ದನು. ಮನಸ್ಸಿನಿಂದಲೂ ಬಹು ಉದಾರ. ತನ್ನ ಕೆಲಸದಲ್ಲಿ ಬುದ್ಧಿವಂತ. ಆದುದರಿಂದ ಬೇರೆ ಬೇರೆ ಗಿರಣಿಗಳಿಂದ ಅವನಿಗೆ ಕರೆಬರುತ್ತಿತ್ತು. ಅದರ ಉಪಯೋಗವನ್ನು ಲಕ್ಷ್ಮಣರಾಯರಿಗೂ ಮಾಡಿಕೊಟ್ಟನು. ಮುಂಬಯಿಯ ಲ್ಲಿಯ ಗ್ರ್ಯಾಂಡಈಸ್ಟರ್ನಮಿಲ್ಲಿನ ಮ್ಯಾನೇಜರರಿಗೆ ಯಂತ್ರಗಳ ಅನೇಕ ಡ್ರಾಯಿಂಗುಗಳು ಬೇಕಾಗಿವೆ ಎಂಬ ಸಂಗತಿ ತಿಳಿದೊಡನೆ ಆ ಕೆಲಸವನ್ನು ಲಕ್ಷ್ಮಣರಾಯರಿಗೆ ನೂರಖಾನನು ದೊರಕಿಸಿಕೊಟ್ಟನು. ಇಂತಹ ಕೆಲಸ ಗಳಿಂದ ರಾಯರಿಗೆ ಅಲ್ಪ ಸ್ವಲ್ಪ ಪ್ರಾಪ್ತಿಯೂ ಆಗಹತ್ತಿತು. ಇವನ ಸ್ನೇಹದಿಂದ ೧೮೯೨ ರಲ್ಲಿ ಒಂದು ಮುದ್ರಣಯಂತ್ರವನ್ನು ಕೂಡಿಸಿಕೊಡುವ ಕೆಲಸವನ್ನು ರಾಯರು ಹಿಡಿದರು. ಈ ಸಂಗತಿಯು ಸ್ವಲ್ಪಕೇಳುವಂತಹದಿದೆ.

ನೂರಖಾನನು ವಾಸಿಸುವ ವಸತಿಯಲ್ಲಿ ಕರಿಮಾ ಲಿಥೋಪ್ರೆಸ್ ಎಂಬ

ಹಳೇ ಮುದ್ರಣಾಲಯವಿದ್ದಿತು. ಅಲ್ಲಿ ಕುರಾನ ಮುದ್ರಿಸಲ್ಪಡುತ್ತಿತ್ತು. ಅದಕ್ಕೆ ಭಾರತ ಹಾಗೂ ಹೊರದೇಶಗಳಿಂದ ಬೇಡಿಕೆ ಬಹಳ ಇದ್ದಿತು. ಲಕ್ಷ್ಮಣ ರಾಯರು ಇದೇ ಕೆಲಸವನ್ನು ಹೊಸ ಯಂತ್ರಗಳ ಮೇಲೆ ಮಾಡಿದರೆ, ಬಹು ಸ್ವಲ್ಪ ವೇಳೆಯಲ್ಲಿ ಇದಕ್ಕಿಂತ ಅಗ್ಗವಾಗಿಯೂ ಮಾಡಬಹುದೆಂದು ಆ ಯಂತ್ರದ ಒಡೆಯನ ತಲೆಯಲ್ಲಿ ತುಂಬಿದರು. ಅವನು ಹೊಸ ಯಂತ್ರವನ್ನು ತರಿಸುವ ಹಾಗೂ ಅದನ್ನು ಕೂಡಿಸುವ ಕೆಲಸವನ್ನು ಲಕ್ಷ್ಮಣರಾಯರಿಗೇ ಒಪ್ಪಿಸಿದನು. ಲಕ್ಷ್ಮಣರಾಯರು ಆನಂದದಿಂದ ಅದಕ್ಕೆ ಒಪ್ಪಿದರು. ಹತ್ತು ಅಶ್ವಶಕ್ತಿಯ ಎಣ್ಣೆಯ ಇಂಜಿನವನ್ನೂ ಸುಧಾರಿಸಿದ ಮುದ್ರಣ ಯಂತ್ರವನ್ನೂ ತರಿಸಿ, ವ್ಯವಸ್ಥಿತವಾಗಿ ಕೂಡಿಸಿ ಕೊಟ್ಟರು. ಇದರಿಂದ ಲಕ್ಷ್ಮಣರಾಯರ ಯಾಂತ್ರಿಕ ಜ್ಞಾನವು ವ್ಯಕ್ತವಾಗುವದು.

ಇನ್‌ಸ್ಟಿಟ್ಯೂಟ್‌ದಲ್ಲಿ ಕೆಲಸ ಹಿಡಿದ ಸ್ವಲ್ಪದಿನಗಳಲ್ಲಿ ಒಬ್ಬ ಪಾರ್ಸಿಯು ಎರಡುಗಾಲಿಯ ಒಂದು ವಿಚಿತ್ರ ವಾಹನವನ್ನು ಏರಿ ಬೀದಿಯಲ್ಲಿ ಹೋಗುತ್ತಿರು ವುದನ್ನು ಲಕ್ಷ್ಮಣರಾಯರು ಕಂಡರು. ಒಂದು ಗಾಲಿಯು ಆಳುದ್ದ ಎತ್ತರ ವಿದ್ದಿತು. ಇನ್ನೊಂದು ಗಾಲಿಯು ಒಂದು ಮೊಳದಷ್ಟು ಎತ್ತರ ಇದ್ದಿತು. ಇದು ಈಗಿನ ಸಾಯಕಲ್ಲಿನ ತಂದೆ. ಈ ಯಂತ್ರವು ರಾಯರ ಮನಸ್ಸನ್ನು ಸೆಳೆಯಿತು. ಅದರ ಬಗೆಗೆ ಇಂಗ್ಲಂಡ ಹಾಗೂ ಅಮೇರಿಕೆಯಿಂದ ಎಲ್ಲ ಸಂಗತಿಯನ್ನು ಸಂಗ್ರಹಿಸಿದರು. ಈ ಹಳೇ ಸಾಯಕಲ್ಲೇ ಸುಧಾರಿಸುತ್ತ ಈಗಿನ ಸೇಫ್ಟಿ ಸಾಯಕಲ್ಲಾಗಿದೆ. ಲಕ್ಷ್ಮಣರಾಯರು ಒಂದನ್ನು ತರಿಸಿ ಹತ್ತಲು ಕಲಿತರು. ಆ ಮೇಲೆ ಅಂತಹವೇ ಎರಡು ಸಾಯಕಲ್ಲುಗಳನ್ನು ತರಿಸಿ ಬೆಳಗಾವಿಯಲ್ಲಿದ್ದ ತಮ್ಮ ಅಣ್ಣಂದಿರಾದ ರಾಮೂ ಅಣ್ಣಾ ಅವರಿಗೂ ಅಜರೇ ಕರ ಕೇಶವರಾಯರಿಗೂ ಕೊಟ್ಟು, ಅವರಿಗೂ ಅವುಗಳನ್ನೇರಲು ಕಲಿಸಿದರು.

ಮೊದಮೊದಲು ಸಾಯಕಲ್ಲುಗಳು ಜೋಡಿಸಿ ಬರುತ್ತಿರಲಿಲ್ಲ. ಅವರ ಭಾಗಗಳನ್ನೆಲ್ಲ ಜೋಡಿಸುವ, ಕೆಟ್ಟರೆ ನೆಟ್ಟಗೆ ಮಾಡುವ ಕಾರ್ಯವನ್ನು ಲಕ್ಷ್ಮಣ ರಾಯರೇ ಕೈಕೊಂಡರು. ಮುಂಬಯಿಯಲ್ಲಿ ವಾಚ್ಛಾ ಬಂಧುಗಳು ಸಾಯ- ಕಲ್ಲಿನ ವ್ಯಾಪಾರಿಗಳಾಗಿದ್ದರು. ಆ ಕಾಲಕ್ಕೆ, ರಾಯರು ಅವರಿಂದಲೇ ಸಾಯ ಕಲ್ಲುಗಳನ್ನು ಕೊಂಡುಕೊಳ್ಳುತ್ತಿದ್ದರು. ಮುಂದೆ ಬೇಡಿಕೆಯು ಹೆಚ್ಚಾದಂತೆ ಸಾಯಕಲ್ಲುಗಳನ್ನು ಪೂರೈಸುವ ಇಂಗ್ಲಂಡಿನ ಏಜೆಂಟನ ಗೊತ್ತುಹಚ್ಚಿ ಕಿರ್ಲೋಸ್ಕರ ಬಂಧುಗಳು ಎಂಬ ಹೆಸರಿನಿಂದ ಪ್ರತ್ಯಕ್ಷವಾಗಿ ಕಾರಖಾನೆಯ,

ಒಡೆಯನೊಡನೆಯೇ ವ್ಯವಹಾರವನ್ನು ಪ್ರಾರಂಭಿಸಿದರು. ಈ ಬಗೆಯಾಗಿ ೧೮೮೮ ರಲ್ಲಿ **ಕಿರ್ಲೋಸ್ಕರ ಬಂಧುಗಳು** ಎಂಬ ಹೆಸರು **ಕರ್ನಾಟಕ** ಹಾಗೂ ಮಹಾರಾಷ್ಟ್ರಕ್ಕೆ ಪ್ರಥಮ ಪರಿಚಯವಾಯಿತು.

ಲಕ್ಷ್ಮಣರಾಯರ ಹಿರಿಯ ಅಣ್ಣಂದಿರು ಬೆಳಗಾವಿಯಲ್ಲಿ ಶಿಕ್ಷಕರಿದ್ದರಷ್ಟೇ? ಬೆಳಗಾವಿಯು ಯುರೋಪಿಯನ್ ಸೈನಿಕರ ಬೀಡು. ನಿಸರ್ಗ ರಮಣೀಯ ತಂಪು ಪ್ರದೇಶವೆಂದು ಅದರ ಪ್ರಸಿದ್ಧಿ. ಸುಖವಸ್ತುಗಳ ಹಾಗೂ ಹೌಸು ಉಳ್ಳವರ ಸಂಖ್ಯೆಯು ಅಲ್ಲಿ ಹೆಚ್ಚು. ಸಾಯಿಕಲ್ ಮಾರಾಟಕ್ಕೆ ಇದು ಒಳ್ಳೆಯ ಸ್ಥಾನವೆಂದು ಇಬ್ಬರೂ ಬಂಧುಗಳು ನಿಶ್ಚಯಿಸಿ, ಸಾಯಿಕಲ್ಲಿನ ಅಂಗಡಿಯನ್ನು ಪ್ರಾರಂಭಿಸಿದರು. ಈ ಅಂಗಡಿಯಲ್ಲಿ ಸಾಯಕಲ್‌ಗಳನ್ನು ಮಾರುತ್ತಿದ್ದರಲ್ಲದೆ ಅವುಗಳನ್ನು ಸರಿಪಡಿಸಿಯೂ ಕೊಡುತ್ತಿದ್ದರು. ಅಲ್ಲದೆ ಸಾಯಕಲ್ಲು ಹತ್ತಲು ಕಲಿಸುವ ವರ್ಗವನ್ನೂ ಸುರುವು ಮಾಡಿದರು. ಕಲಿಸಲು ೧೫ ರೂ. ಫೀ ಇಟ್ಟಿದ್ದರು. ವಕೀಲರು, ಡಾಕ್ಟರರನ್ನು ಒಳಗೊಂಡು ಸಂಸ್ಥಾನಿಕರ ವರೆಗೂ ಸಾದಾ ಸೈನಿಕರಿಂದ ಮೊದಲುಮಾಡಿ ಬ್ರಿಗೇಡ ಜನರಲ್ಲರ ವರೆಗೂ ಸಾಯಿಕಲ್ ಹತ್ತಲು ಈ ವರ್ಗದಲ್ಲಿ ಕಲಿತು ಹೊರಬಿದ್ದರು.

ಒಬ್ಬ ಬುದ್ಧಿವಂತ ಹಾಗೂ ಕಲ್ಪಕ ಯಂತ್ರತಜ್ಞರೆಂದು ಲಕ್ಷ್ಮಣರಾಯರ ಪರಿಚಯವು ಓರ್ವ ಸಂಸ್ಥಾನಿಕರೊಡನೆ ಆಯಿತು. ಈ ಪರಿಚಯದ ಉಪಯೋಗವು ಮುಂದಿನ ಉದ್ಯೋಗದಲ್ಲಿ ಬಹಳವಾಯಿತು. ರಾಯರ ಶಿಕ್ಷಣವು ಇಂಗ್ಲೀಷ ನಾಲ್ಕನೇ ಈಯತ್ತೆಯವರೆಗೆ ಮಾತ್ರ. ಆದರೆ ರಾಯರ ಈ ಇಂಗ್ಲಿಷ ಜ್ಞಾನವು ಇಂದಿನ ಮ್ಯಾಟ್ರಿಕ್ ವಿದ್ಯಾರ್ಥಿಗಳಿಗಿಂತಲೂ ಹೆಚ್ಚಾಗಿದ್ದಿತು. ಉದ್ಯೋಗದ ನಿಮಿತ್ತದಿಂದ ಬಿಳಿಯ ಗಿರಾಕಿಗಳ ಸಂಬಂಧ ಬಂದುದರಿಂದ ರಾಯರು ಸರಸವಾಗಿ ಇಂಗ್ಲಿಷಿನಲ್ಲಿ ಮಾತನಾಡಹತ್ತಿದರು. ನಾವು ಕೈಕೊಳ್ಳುವ ಉದ್ಯೋಗಕ್ಕೆ ಅವಶ್ಯವಿರುವ ಭಾಷೆಯ ಜ್ಞಾನವು ನಮಗಿರುವದು ಅವಶ್ಯವೆಂದು ಬೇರೆ ಹೇಳಬೇಕಾಗಿಲ್ಲ. ಕಾರಖಾನೆದಾರನಿಗೆ ತನ್ನ ಕ್ಷೇತ್ರದ ಯಾಂತ್ರಿಕ ಜ್ಞಾನವು ಪರಿಪೂರ್ಣವಿರುವದು, ಅವಶ್ಯವಿದ್ದಂತೆ, ಇಂಗ್ಲಿಷ ಭಾಷೆಯ ಜ್ಞಾನವೂ ಈ ಕಾರ್ಯಕ್ಕೆ ಅವಶ್ಯ. ಇಲ್ಲದಿದ್ದರೆ ಈ ಕಾರ್ಯದಲ್ಲಿ ಅದರ ಕೊರತೆಯು ಹೆಜ್ಜೆಹೆಜ್ಜೆಗೂ ಅನಿಸುತ್ತದೆ.

ಲಕ್ಷ್ಮಣರಾಯರು ಗಿರಾಕಿಗಳೊಡನೆ ಮಾತನಾಡುವದರಿಂದಲೇ ಪ್ರಾವೀಣ್ಯ ಪಡೆದರೆಂದು ಮಾತ್ರ ಯಾರೂ ತಿಳಿಯಕೂಡದು. "ಅಮೇರಿಕನ್

ಮಶಿನಿಸ್ಟ" ಮತ್ತು "ಸಾಯಿಂಟಿಫಿಕ್ ಅಮೇರಿಕನ್" ಅಂತಹ ಮಾಸಿಕ ಪುಸ್ತಕ ಹಾಗೂ ಗ್ರಂಥಗಳ ಸತತ ವಾಚನದಿಂದ ಹಾಗೂ ಸ್ವಂತ ಪ್ರಯತ್ನ ದಿಂದ ತಮ್ಮ ಜ್ಞಾನವನ್ನು ಅವರು ಬೆಳೆಯಿಸಿಕೊಂಡರು. ಅಲ್ಲದೆ ವಿದ್ಯಾರ್ಥಿ ಗಳಿಗೆ ಕಲಿಸುವ ಉದ್ದೇಶದಿಂದ ಪಾಠಗಳನ್ನು ಉತ್ಕೃಷ್ಟ ರೀತಿಯಿಂದ ಸಿದ್ಧಪಡಿ ಸುತ್ತಿದ್ದರು. ಇದರಿಂದ ಅವರು ಇಂಗ್ಲಿಷಿನಲ್ಲಿ ಪರಿಣತರಾಗಿದ್ದರು.

ಇವರು ಕೆಲಸಮಾಡುತ್ತಿದ್ದ ಯಾಂತ್ರಿಕ ವಿದ್ಯಾಲಯದಲ್ಲಿ ಉಗಿ (ಸ್ಟೀಮ) ಯ ವಿಷಯವನ್ನು ಕಲಿಸುತ್ತಿದ್ದ ಪ್ರಾಧ್ಯಾಪಕರು ರಜೆಯನ್ನು ತೆಗೆದು ಕೊಂಡರು. ಆ ವರ್ಗವನ್ನು ಹೇಗೆ ಸಾಗಿಸಬೇಕೆಂಬ ಪ್ರಶ್ನೆಯು ಪ್ರಿನ್ಸಿಪಾಲರ ತಲೆತಿನ್ನಹತ್ತಿತು. ಆಗ ಅವರ ದೃಷ್ಟಿಯು ಲಕ್ಷ್ಮಣರಾಯರ ಕಡೆಗೆ ಹೊರ ಳಿತು. ಅವರನ್ನು ಕರೆಯಿಸಿ ಕೇಳಲು ರಾಯರು ಕೂಡಲೇ ಆನಂದದಿಂದ ಒಪ್ಪಿಕೊಂಡರು. ಮರುದಿನವೇ ತಮ್ಮ ಡ್ರಾಯಿಂಗಿನ ವರ್ಗವನ್ನು ಮುಗಿಸಿ, ಪ್ರಾಧ್ಯಾಪಕರೆಂದು ಸ್ಟೀಮ ವಿಷಯವನ್ನು ಕಲಿಸಹತ್ತಿದರು. ಇದನ್ನು ಕಂಡು ಎಲ್ಲರಿಗೂ ಆಶ್ಚರ್ಯವಾಯಿತು.

ಲಕ್ಷ್ಮಣರಾಯರು ಯಂತ್ರಗಳ ವಿಷಯದಲ್ಲಿ ಆಳವಾದ ಅಭ್ಯಾಸವನ್ನು ಮಾಡಿದ ಮೂಲಕ, ಯಾಂತ್ರಿಕ ತಜ್ಞರಲ್ಲಿ ಅವರ ಗಣನೆಯಾಯಿತು. ಅನೇಕ ಜನರು ಸಲಹೆಗಾಗಿ ಅವರ ಕಡೆಗೆ ಬರಹತ್ತಿದರು. ಹೀಗೆ ಬಂದವರೊಡನೆ ತಮ್ಮ ವಿಷಯವನ್ನು ಸಮರ್ಥಿಸಲು ಎಷ್ಟೋಸಲ ಅವರು ವಾದಮಾಡ- ಬೇಕಾಗುತ್ತಿತ್ತು. ಮತ್ತು ತಮ್ಮ ಮತವನ್ನು ಪ್ರತ್ಯಕ್ಷ ಪ್ರಮಾಣಗಳಿಂದ ಸಿದ್ಧಮಾಡಿ ತೋರಿಸ ಬೇಕಾಗುತ್ತಿತ್ತು. ಒಮ್ಮೆ ಡನ್‌ಲಪ್ ಎಂಬ ಇಂಗ್ಲಿಷ ಗೃಹಸ್ಥರು 'ಇಂಗ್ಲಂಡದ ಯಾಂತ್ರಿಕ ಪ್ರಗತಿಯು ಅಮೇರಿಕೆಗಿಂತ ಹೆಚ್ಚಿದೆ- ಯೆಂದು ವಾದಿಸಹತ್ತಿದರು. ಈ ವಿಷಯದಲ್ಲಿ ಅಮೇರಿಕೆಯು ಮುಂದಿದೆ- ಯೆಂದು ಲಕ್ಷ್ಮಣರಾಯರ ನಿಶ್ಚಿತ ಅಭಿಪ್ರಾಯವಿದ್ದಿತು. ಈ ವಾದವನ್ನು ನಿರ್ಣಯಿಸಲು ಪ್ರಯೋಗವನ್ನೇ ಮಾಡಬೇಕೆಂದು ಗೊತ್ತುಮಾಡಿದರು. ಡನ್‌ಲಪ್ ಸಾಹೇಬರು ಒಂದು ಇಂಗ್ಲಿಷ ಪೇಚಪಟ್ಟಿಯನ್ನು ತಂದರು. ಲಕ್ಷ್ಮಣರಾಯರು ಅಂತಹದೇ ಪೇಚಪಟ್ಟಿಯನ್ನು ಅಮೇರಿಕೆಯಿಂದ ತರಿ- ಸಿದರು. ಸ್ಪರ್ಧೆ ನಡೆಯಿತು. ಡನ್‌ಲಪ್ ಸಾಹೇಬರು ಒಂದು ಬೋಲ್ಟಿಗೆ ತಿರುಪುಗಳನ್ನು ಹಾಕಿ ಅದನ್ನು ಸಿದ್ಧಪಡಿಸುವಷ್ಟರಲ್ಲಿ, ರಾಯರು ಮೂರು ಬೋಲ್ಟುಗಳನ್ನು ಸಿದ್ಧಪಡಿಸಿದರು. ಲಕ್ಷ್ಮಣರಾಯರು ವಿಜಯಿಗಳಾದರು.

ಈ ಸುದ್ದಿಯು ಪ್ರಿನ್ಸಿಪಾಲರಿಗೆ ತಿಳಿಯಿತು. ಅವರು ಇಬ್ಬರನ್ನೂ ಕರೆಸಿ ಇಂತಹ ಸ್ಪರ್ಧೆಯನ್ನು ಇನ್ನೊಮ್ಮೆ ಮಾಡಬಾರದೆಂದು ಹೇಳಿದರು. ಇಂಗ್ಲಂಡದ ರಕ್ತವು ನಾಳನಾಳದಲ್ಲಿ ಹರಿಯುತ್ತಿದ್ದ ಪ್ರಿನ್ಸಿಪಾಲರಿಗೆ ಅಮೇರಿಕೆಯ ಹೆಚ್ಚಳವು ಸಹಿಸುವಪಡೆಂತು ?

ಇದೇ ಸುಮಾರಿಗೆ ಎಡಿಸನ್ನನು ಅಮೇರಿಕೆಯಲ್ಲಿ ಫೋನೋಗ್ರಾಫಿನ ಶೋಧವನ್ನು ಮಾಡಿದನು. ಆ ವೇಳೆಯಲ್ಲಿ ಈಗಿನಂತಹ ದುಂಡನ್ನ ಪ್ಲೇಟು-ಗಳಿರಲಿಲ್ಲ. ಪೊಳ್ಳು ಕೊಳವೆಯ ಮೇಲೆ ಸೂಜಿಯಿಂದ ತಮಗೆ ಬೇಕಾದ ಹಾಡುಗಳನ್ನು ಬರೆದು, ಅದನ್ನು ಮರಳಿ ಕೇಳುವ ವ್ಯವಸ್ಥೆ ಇದ್ದಿತು. ಲಕ್ಷ್ಮಣ ರಾಯರ ಮನಸ್ಸನ್ನು ಇದು ಆಕರ್ಷಿಸಿತು. ಕೂಡಲೇ ಅವರು ವಿಲಾಯಿತಿ-ಯಿಂದ ಈ ಯಂತ್ರವನ್ನು ತರಿಸಿ ಪ್ರಯೋಗಮಾಡಿ ತೋರಿಸಿದರು. ಕೀಲಿ ಕೊಟ್ಟೊಡನೆ ಹಾಡಲು ಪ್ರಾರಂಭಿಸುವ ಯಂತ್ರವನ್ನು ನೋಡಲು ಸಾವಿರಾರು ಜನರು ಅಚ್ಚರಿಯಿಂದ ನೆರೆಯಹತ್ತಿದರು. ಆ ಕಾಲಕ್ಕೆ ಅದು ಎಷ್ಟು ಆಕರ್ಷಕ ವಾಗಿತ್ತೆಂಬುದನ್ನು ಊಹಿಸಿರಿಯೇ ತಿಳಿಯಬೇಕು.

ಒಮ್ಮೆ ಗ್ರ್ಯಾಂಡ ಮೆಡಿಕಲ್ ಕಾಲೇಜದ ಜಂತು ಶಾಸ್ತ್ರಜ್ಞರಾದ ಡಾ. ರಾವ್ ಅವರು ತಮ್ಮ ಪ್ರಯೋಗ ಶಾಲೆಗೆ ತರಿಸಿದ ಸೂಕ್ಷ್ಮದರ್ಶಕ ಯಂತ್ರ-ವನ್ನು ತೆಗೆದುಕೊಂಡು ಲಕ್ಷ್ಮಣರಾಯರ ಕಡೆಗೆ ಬಂದರು. ಈ ಕೆಟ್ಟ ಯಂತ್ರವನ್ನು ಸರಿಪಡಿಸಲು ಅವರಿಗೆ ಯಾರೂ ದೊರೆತಿರಲಿಲ್ಲ. ಲಕ್ಷ್ಮಣ-ರಾಯರು ಯಂತ್ರವನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದ ನಂತರ ಸರಿದಾಡುವ ಎಷ್ಟೋ ಭಾಗಗಳಿಗೆ ತಿರುಪುಗಳನ್ನು ವಿರುದ್ಧವಾಗಿ ಕೊರೆಯುವ ಸಂಭವ-ವಿದೆಯೆಂಬ ಸಂಗತಿಯು ರಾಯರಿಗೆ ಹೊಳೆಯಿತು. ಕೂಡಲೇ ಅವರು ವಿರುದ್ಧವಾಗಿ ತಿರುಗಿಸ ಹತ್ತಿದೊಡನೆ ಯಂತ್ರವು ನಡೆಯಹತ್ತಿತು. ಡಾಕ್ಟರ ರಾಯರಿಗೆ ಪರಮಾನಂದವಾಯಿತು. ಇದರಿಂದ ಡಾ! ರಾಯರ ಹಾಗೂ ಲಕ್ಷ್ಮಣರಾಯರ ಗೆಳೆತನವು ಹೆಮ್ಮರವಾಗಿ ಬೆಳೆದು ನಿಂತಿತು. ಡಾಕ್ಟರರು ಲಕ್ಷ್ಮಣರಾಯರನ್ನು ಮೇಲಿಂದ ಮೇಲೆ ಕರೆಯಿಸಿಕೊಂಡು ಅವರಿಗೆ ಅನೇಕ ಜಂತುಗಳ ಪರಿಚಯವನ್ನು ಮಾಡಿಕೊಡುತ್ತಿದ್ದರು. ಮತ್ತು ತಮಗೆ ಬೇಕಾಗುವ ಉಪಕರಣಗಳನ್ನು ಲಕ್ಷ್ಮಣರಾಯರಿಂದ ಮಾಡಿಸಿಕೊಳ್ಳುತ್ತಿದ್ದರು. ಈ ಗೆಳೆತನದ ಬೆಲೆಯು ಅಮೌಲ್ಯವಾಗಿದ್ದಿತು. ಮುಂಬಯಿಯಲ್ಲಿ ಪ್ಲೇಗಿನ ಹಾವಳಿಗೆ ಲಕ್ಷ್ಮಣರಾಯರ ಧರ್ಮಪತ್ನಿಯು ತುತ್ತಾದರು. ಆಗ ಡಾ.





(ಮೇಲಿನ ಚಿತ್ರ)

**ಡ್ರಾಯಿಂಗ ಮಾಸ್ತರ ಕಿರ್ಲೋಸ್ಕರ**

೧೮೯೬

(ಕೆಳಗಿನ ಚಿತ್ರ)

**ಮೇವು ಕೊರೆಯುವ ಯಂತ್ರ**

೧೯೦೩




ಶ್ರೀ ಲಕ್ಷ್ಮಣರಾಯರು, ರಾಧಾಬಾಯಿ, ಶಂತನು (೧೯೦೪)

ರಾಯರು ಅವರಿಗಾಗಿಯೇ ಜಂತುರಸವನ್ನು ಸಿದ್ಧಪಡಿಸಿ ಚುಚ್ಚಿ, ಅವರನ್ನು ಮೃತ್ಯುಮುಖದಿಂದ ಉಳಿಸಿದರು. ಹೀಗೆ ಲಕ್ಷ್ಮಣರಾಯರು ಬೆಳೆಯುತ್ತ ಉತ್ಸಾಹದಲ್ಲಿ ಹತ್ತು ಹನ್ನೆರಡು ವರ್ಷಗಳನ್ನು ಕಲ್ಪನೆಯಿಲ್ಲದೆ ಕಳೆದರು. ಅವರು ಯಾಂತ್ರಿಕ ವಿದ್ಯಾಲಯದಿಂದ ೫೦ ರೂ. ಸಂಬಳ ಪಡೆಯುತ್ತಿದ್ದರು. ಆದರೆ ಆಕಸ್ಮಿಕವಾಗಿ ಕೆಲಸಕ್ಕೆ ರಾಜೀನಾಮೆ ಕೊಡುವ ಪ್ರಸಂಗ ಬಂದು ಸ್ವತಂತ್ರ ಉದ್ಯೋಗದ ಸಲುವಾಗಿ ಅತ್ತಿತ್ತ ಅಲೆದಾಡಬೇಕಾಯಿತು.

೩

# ಹೊಸ ಸಂಸಾರ

ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ದಲ್ಲಿ ಕೆಲಸಸಿಕ್ಕ ಕೆಲವು ದಿನಗಳಲ್ಲಿಯೇ ಲಕ್ಷ್ಮಣರಾಯರಿಗೆ ಅವರ ಅಣ್ಣಂದಿರಾದ ರಾಮರಾಯರಿಂದ ಕೆಳಗಿನ ಪತ್ರ ಬಂದಿತು.

"ನಿನಗೆ ನೌಕರಿ ಸಿಕ್ಕ ಸಂಗತಿಯನ್ನೋದಿ ಸಂತೋಷವಾಯಿತು. ನೀನು ನಿನ್ನ ಉಪಜೀವನದ ಪ್ರಶ್ನೆಯನ್ನು ಒಳ್ಳೇ ರೀತಿಯಿಂದ ಬಿಡಿಸಿಕೊಂಡದ್ದಕ್ಕಾಗಿ ನಿನಗೆ ಅಭಿನಂದನೆಗಳು. ಇನ್ನು ಮುಂದೆ ನೀನು ವಿವಾಹಿತನಾಗುವದು ಅವಶ್ಯ. ಈ ದೃಷ್ಟಿಯಿಂದ ಕುಂದಗೋಳದ ಪಳಸುಳೆ ಮನೆತನದ, ನಿನಗೆ ಅನುರೂಪಳಾದ ಕನ್ಯೆಯನ್ನು ಗೊತ್ತು ಮಾಡಿದ್ದೇವೆ. ಹುಡಿಗೆಯ ಹೆಸರು ನಾಗೂತಾಯಿ. ವಯಸ್ಸು ಹತ್ತು ವರುಷ. ಹುಡಿಗೆಯು ಬಂಗಾರದ ವರ್ಣದವಳಾಗಿದ್ದಾಳೆ. ನಿನ್ನ ಲಗ್ನವನ್ನು ಇದೇ ವೈಶಾಖದಲ್ಲಿ ಬೆಳಗಾವಿಯ ಸಮೀಪದಲ್ಲಿರುವ ಅಸೋಗಾ ಎಂಬ ಊರಲ್ಲಿ ಮಾಡುವದನ್ನು ನಿಶ್ಚಯಿಸಿದ್ದೇವೆ. ಮುಹೂರ್ತ ಗೊತ್ತಾದೊಡನೆಯೆ ತಿಳಿಸುವೆ. ನೀನು ನಿನ್ನ ಶಾಲೆಗೆ ಬಿಡುವು ಆದೊಡನೆಯೇ ಮನೆಯವರನ್ನೆಲ್ಲ ಕರೆದುಕೊಂಡು ಬೆಳಗಾವಿಗೆ ಬರಬೇಕು."

ಆ ಕಾಲದ ರೂಢಿಗನುಸರಿಸಿ ಪಿತೃಸಮಾನರಾದ ರಾಮರಾಯರು ಲಗ್ನವನ್ನು ಗೊತ್ತು ಮಾಡುವದು ಸ್ವಾಭಾವಿಕವಿದ್ದಿತು. ಅದು ಒಳ್ಳೆಯದೇ ಆಯಿತು. ಏಕೆಂದರೆ ಲಕ್ಷ್ಮಣರಾಯರು ಇಷ್ಟು ಬೇಗ ಲಗ್ನದ ವಿಚಾರವನ್ನು ಮಾಡುತ್ತಿದ್ದರೋ ಇಲ್ಲವೋ ಸಂಶಯ. ಲಕ್ಷ್ಮಣರಾಯರ ಮನಸ್ಸು ಬಹಳ ದೊಡ್ಡದು. ಆದರೆ ಅಷ್ಟೇ ಕಠೋರವಾದುದು. ತಮ್ಮ ಮನಸ್ಸಿನ ವಿರುದ್ಧ ಜರುಗಿದ ಸಣ್ಣ–ಪುಟ್ಟ ತಪ್ಪುಗಳು ಕೂಡ ಅವರಿಗೆ ಸಹನವಾಗುತ್ತಿದ್ದಿಲ್ಲ. ಆದರೆ ಅವರ ಹೃದಯವು ಬಹಳೇ ಕೋಮಲ. ಯಾವುದೇ ಕೆಲಸವಿರಲಿ ಅದನ್ನು ಸುವ್ಯವಸ್ಥಿತವಾಗಿ, ಮನಃಪೂರ್ವಕವಾಗಿ ಮಾಡುವದೇ ಅವರ ಸ್ವಭಾವ. ನಿರುದ್ಯೋಗಿಗಳಾಗಿ ಹರಟೆ ಕೊಚ್ಚುತ್ತ ಸಮಯ ಹಾಳು ಮಾಡುವವರನ್ನು ಕಂಡರೆ ಅವರು ಸಿಟ್ಟಾಗುತಿದ್ದರು. ಲಕ್ಷ್ಮಣರಾಯರೆಂದರೆ

ಸತತ ಕಾರ್ಯ ಮಾಡುವ ಜೀವಂತ ಯಂತ್ರ. ಆದರೆ ಅವರ ಸಿಟ್ಟು ತಲೆಗೇರಲು ತೀರ ಕ್ಷುಲ್ಲಕ ಸಂಗತಿಯೂ ಸಾಕಾಗುತ್ತಿದ್ದಿತು. ತಪ್ಪು ಎಂತಹ ಚಿಕ್ಕದೇ ಇರಲಿ, ಲಕ್ಷ್ಮಣರಾಯರ ಮುಂಗೋಪಕ್ಕೆ ತುತ್ತಾಗತಕ್ಕದ್ದೇ. ಆದುದರಿಂದ ಲಕ್ಷ್ಮಣರಾಯರೆಂದರೆ ಜನ ನಡುಗುತ್ತಿತ್ತು.

ಹೀಗಿದ್ದರೂ ಲಕ್ಷ್ಮಣರಾಯರ ಕೈಯ್ಯಲ್ಲಿ ಜನ ಸಂತೋಷದಿಂದ ಹೇಗೆ ಕಾರ್ಯವನ್ನು ಮಾಡುತ್ತಿದ್ದರು ? ಅದಕ್ಕೆ ಉತ್ತರವಿಷ್ಟೇ— ಕೆಲಸದಲ್ಲಿ ಏನಾದರೂ ವ್ಯತ್ಯಾಸವಾದರೆ ಅವರಿಗೆ ಹೇಗೆ ಸಹನವಾಗುತ್ತಿದ್ದಿಲ್ಲವೋ ಹಾಗೆಯೇ ಯಾರಾದರೂ ಉತ್ಕೃಷ್ಟ ಕೆಲಸ ಮಾಡಿದರೆ, ಅದನ್ನು ಹೊಗಳಿ ಪ್ರೇಮದಿಂದ ಅವರ ಬೆನ್ನು ಚಪ್ಪರಿಸದೇ ಅವರು ಎಂದೂ ಬಿಡುತ್ತಿರಲಿಲ್ಲ. ಮತ್ತು ಅವರಿಗೆ ಯೋಗ್ಯ ಉತ್ತೇಜನವನ್ನು ಕೊಡುತ್ತಿದ್ದರು. ಅವರ ಶಬ್ದಗಳಲ್ಲಿ ಮೋಹಕ ಶಕ್ತಿಯಿದ್ದಿತು. ಇದರಿಂದ ಕೆಲಸಗಾರರಲ್ಲಿ ನವಸ್ಫೂರ್ತಿಯು ಸ್ಫುರಿಸುತ್ತಿದ್ದಿತು. ಲಕ್ಷ್ಮಣರಾಯರು ಉಗ್ರಮೂರ್ತಿಯಿದ್ದಂತೆ ಅವರ ಪ್ರಸನ್ನತೆಯೂ ಅಷ್ಟೇ ಕಲ್ಯಾಣಕಾರಿ. ಆದುದರಿಂದ ಅವರ ಪ್ರಸನ್ನತೆಗಾಗಿ ಜನ ಆತುರವಾಗಿರುತ್ತಿದ್ದಿತು.

ಇಂತಹ ಶೀಘ್ರಕೋಪಿಗಳಾದ ಲಕ್ಷ್ಮಣರಾಯರೊಡನೆ ಭಾವೀ ನವವಧುವು ಸಂಸಾರವನ್ನು ಸಾಗಿಸಬೇಕಾಗಿದ್ದಿತು; ಮತ್ತು ಸಂಸಾರವು ಸುಖಮಯವೂ ಪ್ರೇಮಮಯವೂ ಆಗಬೇಕಾಗಿದ್ದರೆ, ಆ ಸಾಧ್ವಿಯು ಎಷ್ಟು ಜಪ್ಪಿಸಿಕೊಂಡು ನಡೆಯಬೇಕಾಗುತ್ತಿತ್ತೆಂಬ ಕಲ್ಪನೆಯು ಬರಲೆಂದೇ ಲಕ್ಷ್ಮಣರಾಯರ ಸ್ವಭಾವ ಚಿತ್ರವನ್ನು ಮೇಲೆ ಚಿತ್ರಿಸಲಾಗಿದೆ. ಶಾಂತ, ಸಮಂಜಸ, ಕರ್ತವ್ಯದಕ್ಷ, ಪ್ರೇಮಮೂರ್ತಿಯಾದ ರಾಧಾಬಾಯಿಯವರಂತಹ ಧರ್ಮಪತ್ನಿಯು ದೊರೆತುದುದು ಲಕ್ಷ್ಮಣರಾಯರ ಭಾಗ್ಯವೆಂದೇ ಹೇಳಬೇಕು. ಏಕೆಂದರೆ ಸೌ|| ರಾಧಾಬಾಯಿಯವರು ಪತಿಯ ಮನಃಸ್ವಾಸ್ಥ್ಯಕ್ಕೆ ಅವಶ್ಯವಾದ ಹಾಗೂ ಶಾಂತವಾದ ವಾತಾವರಣವನ್ನು ನಿರ್ಮಿಸಿದ ಮೂಲಕ ಲಕ್ಷ್ಮಣರಾಯರು ತಮ್ಮ ಧ್ಯೇಯಕ್ಕಾಗಿ ಹೋರಾಡಲು, ಬೇಕಾದಂಥ ಕಷ್ಟಗಳನ್ನು ಎದುರಿಸಲು ಸಮರ್ಥರಾದರು. ಲಕ್ಷ್ಮಣರಾಯರು ಸಂಪಾದಿಸಿದ ಕೀರ್ತಿಯ ಅರ್ಧಪಾಲು ಅವರ ಧರ್ಮಪತ್ನಿಗೆ ಸಲ್ಲದೆ ಹೇಗೆ ಬಿಟ್ಟೀತು ?

೧೮೮೮ ರಲ್ಲಿ ಮುಂಬಯಿಯಿಂದ ಬೆಳಗಾವಿಗೆ ಬರಲು ಈಗಿನಂತೆ ಉಗಿಬಂಡಿಯ ಮಾರ್ಗವಿರಲಿಲ್ಲ. ಹಡಗಿನಲ್ಲಿ ಕುಳಿತು ವೆಂಗುರ್ಲೆಗೆ ಬಂದು ಅಲ್ಲಿಂದ

ಬೆಳಗಾವಿಯ ವರೆಗೆ ಎತ್ತಿನ ಗಾಡಿಯಲ್ಲಿ ಬರಬೇಕಾಗುತ್ತಿದ್ದಿತು. ಲಕ್ಷ್ಮಣ-ರಾಯರು ಲಗ್ನಕ್ಕಾಗಿ ಮನೆಯವರನ್ನೆಲ್ಲ ಕರೆದುಕೊಂಡು ಅಸೋಗಾಕ್ಕೆ ಬಂದರು. ಕುಂದಗೋಳದ ಟೀಂಬೆಯವರ ಮನೆತನವೇ ಕನ್ಯೆಯ ಸೋದರ ಮಾವನ ಮನೆ. ಅಲ್ಲಿಯೇ ಹುಡಿಗೆಯು ಬೆಳೆದಿದ್ದಳು. ಆದುದರಿಂದ ಟೀಂಬೆಯ ವರ ಹಿರಿತನವು ಲಗ್ನದಲ್ಲಿರುವದು ಸ್ವಾಭಾವಿಕವಿದ್ದಿತು. ಲಕ್ಷ್ಮಣರಾಯರ ಅಣ್ಣಂದಿರಾದ ರಾಮೂಅಣ್ಣಾ, ವಾಸುದೇವರಾವ ಹಾಗೂ ಗಂಗಾಧರಪಂತ ಈ ಮೂವರೂ ಟೀಂಬೆಯವರ ಮನೆತನದ ಕನ್ಯೆಯರನ್ನೇ ಮದುವೆಯಾಗಿ-ದ್ದರು. ಆದುದರಿಂದ ಅಸೋಗಾದಲ್ಲಿ ನೆರೆದ ಈ ಕರ್ಹಾಡೀ ಜನರೆಲ್ಲ ಪೂರ್ವ ಪರಿಚಿತರಾಗಿರುವದು ಸ್ವಾಭಾವಿಕವಾಗಿದ್ದಿತು.

ಸ್ವಲ್ಪದರಲ್ಲಿಯೇ ಹೇಳಬೇಕೆಂದರೆ, ಈ ಲಗ್ನವು ಒಂದು ಕುಟುಂಬದ ಸ್ನೇಹ ಸಮ್ಮೇಲನದಂತೆ ಆಲ್ಹಾದಕರವಾಗಿದ್ದಿತು. ಅಸೋಗಾ ಒಂದು ಚಿಕ್ಕ ಹಳ್ಳಿಯಾದರೂ ಮಲಪ್ರಭಾ ನದಿಯ ದಂಡೆಯ ಗುಡ್ಡದ ಓರೆಯಲ್ಲಿದ್ದುದರಿಂದ ಅದಕ್ಕೆ ರಮಣೀಯತೆಯು ಉಂಟಾಗಿದ್ದಿತು. ಗುಡ್ಡವು ದಟ್ಟಡವಿಯಿಂದ ತುಂಬಿದ್ದಿತು. ಎಲ್ಲಿ ನೋಡಿದಲ್ಲಿ ಹಲಸು, ಮಾವು, ನೇರಿಲ ಮರಗಳು ಫಲ ಭರಿತವಾಗಿ ಕಂಗೊಳಿಸುತ್ತಿದ್ದವು. ಅವುಗಳಲ್ಲಿ ಈ ಊರು ಅಡಗಿದ್ದಿತು. ಮಲಪ್ರಭೆಯ ಸೌಂದರ್ಯವನ್ನು ಎಂತು ಬಣ್ಣಿಸುವದು ? ನದಿಯು ಟಿಸಿಲೊಡೆದು ಒಂದು ಸರಳು ಗುಡ್ಡಗಳ ಕಲ್ಲುಬಂಡೆಗಳಲ್ಲಿ ಜಿಗಿಯುತ್ತ, ಭೋರ್ಗರೆಯುತ್ತ ಒಂದು ಚಿಕ್ಕ ಕಂದರದಲ್ಲಿ ಧುಮುಕುತ್ತಿದೆ. ಇನ್ನೊಂದು ಸರಳು ಮಗ್ಗಲಿನ ಬೈಲು ಪ್ರದೇಶದಲ್ಲಿ ಶಾಂತವಾಗಿ ಹರಿಯುತ್ತಿದೆ. ಲಗ್ನಕ್ಕೆ ಕೂಡಿದ ಜನರೆಲ್ಲ ತಮ್ಮ ಈಸುವ ಬಯಕೆಯನ್ನು ಪೂರ್ಣ ಮಾಡಿಕೊಂಡರು. ಊಟ, ಉಪ-ಹಾರ, ಹಾಸ್ಯ, ಆಟ ನೋಟಗಳಲ್ಲಿ ನಾಲ್ಕು ದಿನ ಆನಂದದಲ್ಲಿ ಕಳೆದು, ತಮ್ಮ ತಮ್ಮ ಊರುಗಳಿಗೆ ಮರಳಿದರು.

ಈ ಲಗ್ನ ಸಮಾರಂಭವನ್ನು ಕಂಡು ಕಾಶೀನಾಥಪಂತರ ಹೃದಯವು ಆನಂದದಿಂದ ತುಂಬಿ ಬಂದಿತು. ಮಕ್ಕಳೆಲ್ಲರೂ ಸದ್ಗುಣಿಗಳೂ ಕೀರ್ತಿ-ಶಾಲಿಗಳೂ ಉದ್ಯೋಗಶೀಲರೂ ಆದುದನ್ನು ಕಂಡು ಯಾವ ತಂದೆಗೆ ಧನ್ಯತೆ ಎನಿಸಲಿಕ್ಕಿಲ್ಲ ! ಚಿಕ್ಕಂದಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ಅದರಲ್ಲಿಯೂ ಎಲ್ಲರಂತೆ ಶಾಲೆಗೆ ಹೋಗದೆ ನಡುವೆಯೇ ಶಾಲೆಯನ್ನು ಬಿಟ್ಟು, ಹೊಸ ಮಾರ್ಗವನ್ನು ಹಿಡಿದ, ಲಕ್ಷ್ಮಣರಾಯರ ಬಗ್ಗೆ ಅವರಿಗೆ ಬಹು ಚಿಂತೆ

ಇದ್ದಿತು. ಆದರೆ ಹುಡುಗನು ತನ್ನ ಕರ್ತೃತ್ವ ಶಕ್ತಿಯಿಂದ ಜಗತ್ತಿನಲ್ಲಿ ಮುಂದೆ ಬರುತ್ತಿರುವದನ್ನು ಕಂಡು, ಅವರ ಅಂತಃಕರಣವು ಉಕ್ಕೇರಿ ಬಂದುದರಲ್ಲಿ ಆಶ್ಚರ್ಯವೇನು ?

ಈ ಸಮಾರಂಭದಲ್ಲಿ ಲಕ್ಷ್ಮಣರಾಯರ ಅತ್ತೆಯವರು ಮಾತ್ರ ಮುನಿಸು ಗೊಂಡಿದ್ದರು. ತನ್ನ ಹೆಣ್ಣು ಮಕ್ಕಳಿಗೆ ಉತ್ತಮವಾದ ಸ್ಥಳಗಳು ದೊರೆಯ ಬೇಕೆಂದು ಅವರ ಪ್ರಬಲವಾದ ಇಚ್ಛೆ. "ನನ್ನ ನಾಗೂತಾಯಿಗೆ ಮಾಮಲೇದಾರ ವರನಾಗಬೇಕು. ಓಡಾಡಲು ಕುದುರೆ ಇರಬೇಕು. ಮನೆಯಲ್ಲಿ ಸಿಪಾ-ಯಿಯು ಕೈ ಜೋಡಿಸಿಕೊಂಡು ನಿಂತಿರಬೇಕು. ಅಡಿಗೆಯವನು ಇರಬೇಕು. ಹೆಂಡತಿಯ ಮೈಮೇಲೆ ಮಣಗಟ್ಟಲೆ ಬಂಗಾರವನ್ನು ಹಾಕಬೇಕು" ಎಂದು ಬಯಸುತ್ತಿರುವ ಆಕೆಗೆ ಊರಲ್ಲಿ ಮನೆಯಿಲ್ಲದ, ಅಡವಿಯಲ್ಲಿ ಹೊಲವಿಲ್ಲದ ಮೈ–ಕೈ ಕೊಳೆ ಮಾಡಿಕೊಂಡು ಕೂಲಿಕಾರರಂತೆ ದುಡಿಯುತ್ತಿರುವ ವರನು ನಾಜೂಕಾದ ಮಗಳಿಗೆ ದೊರೆತುದುದು ಅಸಮಾಧಾನಕ್ಕೆ ಕಾರಣವಾಗಿದ್ದಿತು.

ಈ ಮುದಿಕೆಯು ಮುಂದೆ ೫೦ ವರ್ಷ ಮಗಳ ಮನೆಯಲ್ಲಿಯೇ ನೆಲೆಸಿದ್ದು ಸಾಯಕಲ್ಲಅಂಗಡಿಯ ಅಳಿಯನು ದೊಡ್ಡ ಕಾರಖಾನೆದಾರನಾಗಿ ಜಗತ್ತಿನಲ್ಲಿ ಕೀರ್ತಿವಂತನಾದುದನ್ನು ಕಣ್ಣಾರೆ ಕಂಡರೂ ಆಕೆ ತನ್ನ ಮೊದಲಿನ ಅಭಿಪ್ರಾಯವನ್ನೇನೂ ಬದಲಿಸಿರಲಿಲ್ಲ.

ಕಿರ್ಲೋಸ್ಕರವಾಡಿಯಲ್ಲಿ ಮೇಲಿಂದ ಮೇಲೆ ಜರಗುವ ದೊಡ್ಡ ಸಮಾರಂಭ, ಇಲ್ಲವೆ ದೊಡ್ಡ ಅತಿಥಿಗಳ ಆಗಮನವಾದಾಗ ಮುದಿಕಿಗೆ (ಅತ್ತೆ) ಸ್ವಲ್ಪ ಚೇಷ್ಟೆ ಮಾಡಬೇಕೆಂದು "ಮಾಮಲೇದಾರ ಅಳಿಯನು ಸಿಕ್ಕಿದ್ದರೆ, ಇಂತಹ ದೊಡ್ಡ ಮನುಷ್ಯರು ಅವರ ಕಡೆಗೆ ಬರುತ್ತಿದ್ದರೆ ?" ಎಂದು ಲಕ್ಷ್ಮಣ-ರಾಯರು ಅನ್ನುತ್ತಿದ್ದರು. ಅತ್ತೆಯವರ ಉತ್ತರವು ಸಿದ್ಧವಾಗಿರುತ್ತಿತ್ತು. "ಹೋಗೋ ಏನ ಡೌಲ ಹಚ್ಚೀದಿ ನಿಂದು, ನೀನು ದೊಡ್ಡ ಕಾರಖಾನೆದಾರ ನಾಗಿದ್ದರೂ ಮಾಮಲೇದಾರನ ಕಿಮ್ಮತ್ತು ನಿನಗೆ ಹೇಗೆ ಬಂದೀತು ?" ಎಂದು ಅನ್ನುತ್ತಿದ್ದರು. ಕೂಡಲೆ ನೆರೆದವರೆಲ್ಲ ಘೊಳ್ಳೆಂದು ನಗುತ್ತಿದ್ದರು. ಮುದಕಿಯ ಮಾತು ಏನೇ ಇರಲಿ, ಆಗ ಸರಕಾರಿ ನೌಕರಿಗೆ ಎಷ್ಟು ಬೆಲೆ ಇತ್ತೆಂಬುದೂ ನೌಕರಿಯನ್ನು ಬಿಟ್ಟು ಅನ್ಯ ಮಾರ್ಗವನ್ನು ಹಿಡಿದು ಲಕ್ಷ್ಮಣರಾಯರಂತೆ ಸಾಹಸ ಮಾಡಿದರೆ ಅವರನ್ನು ಸಮಾಜವು ಯಾವ ದೃಷ್ಟಿಯಿಂದ ನೋಡು-ತ್ತಿತ್ತೆಂಬುದೂ ಇದರಿಂದ ವ್ಯಕ್ತವಾಗುವದು.

ಲಗ್ನದಲ್ಲಿ ನಾಗೂತಾಯಿಗೆ ಅತ್ತೆಯ ಮನೆಯವರು ರಾಧಾಬಾಯಿ ಯೆಂದು ಹೆಸರಿಟ್ಟರು. ಮದುಮಗಳು ತವರುಮನೆಯಾದ ಕುಂದಗೋಳಕ್ಕೆ ಬಂದಳು. ಕೆಲವು ದಿನ ಕುಂ|| ಸೌ|| ರಾಧಾಬಾಯಿಯು ಹಿರೇ ಅತ್ತಿಗೆಯವರಾದ ಜೀವೂಬಾಯಿಯ ಬಳಿಯಲ್ಲಿ ಸೊಲ್ಲಾಪುರದಲ್ಲಿದ್ದು ನಂತರ ಮುಂಬಯಿಗೆ ಬರಬೇಕೆಂದು ನಿಶ್ಚಯವಾಯಿತು.

ನವ ದಂಪತಿಗಳಿಬ್ಬರೂ ಕುಂದಗೋಳದಿಂದ ಸೊಲ್ಲಾಪುರಕ್ಕೆ ಹೊರಟರು. ಇಡೀ ಪ್ರವಾಸದಲ್ಲಿ ಒಬ್ಬರನ್ನೊಬ್ಬರು ಮಾತನಾಡಿಸಲಿಲ್ಲ. ಮೂಕ ಯಾತ್ರೆ. ಈ ಕಾಲದಲ್ಲಿ ಇದು ಸತ್ಯವೆನಿಸಬಹುದೇ ? ಆದರೆ ಇದು ೫೦–೬೦ ವರ್ಷಗಳ ಹಿಂದಿನ ಮಾತು. ಆ ಕಾಲದಲ್ಲಿ ನವದಂಪತಿಗಳೇ ಏಕೆ, ನಾಲ್ಕು ಮಕ್ಕಳನ್ನು ಹಡೆದ ಗಂಡ–ಹೆಂಡಿರು ಕೂಡ ನಾಲ್ಕು ಜನರಲ್ಲಿ ಮಾತನಾಡಲು ನಾಚುತ್ತಿದ್ದರು. ಯಾರಾದರೂ ಮಾತನಾಡಿದರೆ ಅದೊಂದು ಮಹಾಪರಾಧವೆಂದು ತಿಳಿಯುವಂಥ ಕಾಲವದು.

ಈ ನೂತನ ದಂಪತಿಗಳು ಮುಂಬಯಿಗೆ ಬಂದ ನಂತರ ತಮ್ಮ ಬೀಗರಾದ ಬಾಳಕೃಷ್ಣಪಂತ ಉರ್ಫ ಬಾಬಾ ಜಾಂಭೇಕರರ ಮನೆಯಲ್ಲಿ ಇರಹತ್ತಿದರು. ಜಾಂಭೇಕರರು ಸುಂಕದ (ಕಸ್ಟಮ್) ಖಾತೆಯಲ್ಲಿ ದೊಡ್ಡ ಹುದ್ದೆಯ ಮೇಲೆ ಇದ್ದರು. ಅವರ ಧರ್ಮಪತ್ನಿಯವರಾದ ಬಟೂಅಕ್ಕಾ ಬಹಳ ದೊಡ್ಡ ಮನಸ್ಸಿನವರು, ಪ್ರೇಮಿಗಳು. ಇವರ ಮನೆಯಲ್ಲಿ ಅತಿಥಿ ಅಭ್ಯಾಗತರಿಗೆ ಒಳ್ಳೆಯ ಪ್ರೇಮದ ಸ್ವಾಗತವಿರುತ್ತಿದ್ದಿತು. ಜಾಂಭೇಕರರ ಈ ಮನೆ ಅವರ ಆಪ್ತೇಷ್ಟರಿಗೆಲ್ಲ ಆಧಾರಸ್ತಂಭವಾಗಿದ್ದಿತು. "ಪುರುಷಾರ್ಥ" ಮಾಸಿಕದ ಸಂಪಾದಕರಾದ ಡಾ|| ಸಾತವಳೇಕರ ಮತ್ತು ಡಾ|| ಲ. ಸಿ. ಪುರೋಹಿತ ಹಾಗೂ ಅವರ ಅಣ್ಣಾ ಇವರಲ್ಲಿಯೇ ಇದ್ದು ಶಿಕ್ಷಣ ಪಡೆಯುತ್ತಿದ್ದರು. ಲಕ್ಷ್ಮಣರಾಯರ ಗೆಳೆಯರಾದ ಬೆಳಗಾವಿಯ ನಾಜೀರಾವ ಗುತ್ತೀಕರ, ಗಂಗಾಧರರಾವ ದೇಶಪಾಂಡೆಯವರೂ ಆಗಾಗ ಬಂದು ಹೋಗುತ್ತಿದ್ದರು. ಔಂಧದ ರಾಜಾಸಾಹೇಬ ಶ್ರೀಮಂತ ಬಾಳಾಸಾಹೇಬ ಪಂತ ಪ್ರತಿನಿಧಿ ಇವರು ಲಾ. ಕಾಲೇಜಿನಲ್ಲಿ ಟರ್ಮ ತುಂಬುತ್ತಿದ್ದರು. ಮೇಲಿನ ಮಿತ್ರದ್ವಯರ ಹಾಗೂ ಸಾತವಳೇಕರರ ಮುಖಾಂತರ ಶ್ರೀಮಂತರ ಸ್ನೇಹವು ಲಕ್ಷ್ಮಣರಾಯರಿಗೆ ಉಂಟಾಯಿತು. ಅದು ಬೆಳೆದು ವೃಕ್ಷವಾಗಿ ಮಧುರ ಫಲ ಕೊಟ್ಟಿತು.

ಈ ಜನರಲ್ಲದೆ ಜಾಂಭೇಕರರ ಗೆಳೆಯರಾದ ಶ್ರೀ ಭಾವೂಸಾಹೇಬ

ಆತಲೆ, ಡಾ. ನಾನಾಸಾಹೇಬ ದೇಶಮುಖ, ಡಾ. ವಿನಾಯಕರಾವ ಭಾಜೇಕರ, ಡಾ. ವೇಲಣಕರ, ಡಾ. ರಾವ್ ಮೊದಲಾದವರು ಬಂದು ಕೂಡುವ ಸ್ಥಳವೂ ಈ ಮನೆಯೇ! ಇವರೆಲ್ಲರೂ ಒಂದುಗೂಡಿದರೆ ಚರ್ಚಾಕೂಟವೇ ಏರ್ಪಡುತ್ತಿದ್ದಿತು. ನಮ್ಮ ಸಮಾಜದ ಹಾಗೂ ದೇಶದ ಪರಿಸ್ಥಿತಿ ಸುಧಾರಿಸುವ ಬಗೆಗೆ ಚರ್ಚೆಗಳು ನಡೆಯುತ್ತಿದ್ದವು. ಅವರಲ್ಲಿ ಕೆಲವರು ಸನಾತನಿಗಳೂ ಕೆಲವರು ಸುಧಾರಕರೂ ಇದ್ದುದರಿಂದ ಚರ್ಚೆಗೆ ಒಳ್ಳೇ ಕಾವೇರುತ್ತಿದ್ದಿತು. ಲಕ್ಷ್ಮಣರಾಯರು ಅಲ್ಲಿ ಇದ್ದರೂ ಚರ್ಚೆಯಲ್ಲಿ ಭಾಗವಹಿಸುತ್ತಿದ್ದಿಲ್ಲ. ಏಕೆಂದರೆ ಅವರಿಗೆ ಮಾತಿಗಿಂತ ಕೃತಿಯಲ್ಲಿಯೇ ವಿಶ್ವಾಸವಿದ್ದಿತು. "ಕೆಲಸ ಮಾಡಿರಿ. ನಿಮಗೆ ಬೇಕಾದದ್ದು ದೊರೆಯುವದು. ಸುಮ್ಮನೆ ಚರ್ಚೆಯಲ್ಲಿ ಕಾಲ ಕಳೆಯುವದರಲ್ಲಿ ಅರ್ಥವಿಲ್ಲ" ಎಂಬುದೇ ಅವರ ಬೀಜಮಂತ್ರ.

ರಾಧಾಬಾಯಿಯವರು ಬಟೂಅಕ್ಕನ ಕೈಯಲ್ಲಿ (ಲಕ್ಷ್ಮಣರಾಯರ ಅಕ್ಕ ಜಾಂಭೇಕರರ ಹೆಂಡತಿ) ಸಂಸಾರವನ್ನು ಹೂಡಿದರು. ರಾಧಾಬಾಯಿಯು ಬಟೂಅಕ್ಕನಿಗೆ ನಾದಿನಿಯಲ್ಲವೇ? ರಾಧಾಬಾಯಿಯು ಅವರನ್ನು ಅತ್ತೆಯವರೆಂದು ತಿಳಿದು ನಡೆದುಕೊಳ್ಳುತ್ತಿದ್ದಳು. ಬನ್ಯಾಬಾಪೂ, ಅಂಬೂತಾಯಿ ಹಾಗೂ ಶಂಭುರಾವ ಈ ಮೂವರೂ ಜಾಂಭೇಕರರ ಮಕ್ಕಳು. ಇವರೆಲ್ಲರೂ ಸಾಧಾರಣವಾಗಿ ರಾಧಾಬಾಯಿಯ ಓರಿಗೆಯವರು. ಮನೆಯ ವಾತಾವರಣವೆಲ್ಲವೂ ಪ್ರೇಮಮಯ ಹಾಗೂ ಒಕ್ಕಟ್ಟಿನದು ಇದ್ದುದರಿಂದ, ರಾಧಾಬಾಯಿಯ ಈ ದಿವಸಗಳು ಸುಖಸಮಾಧಾನಗಳಲ್ಲಿ ಕಳೆದವು. ಕಸೂತಿ ತೆಗೆಯುವದರಲ್ಲಿಯೂ ಕರವಸ್ತ್ರಗಳನ್ನು ಹೆಣೆಯುವದರಲ್ಲಿಯೂ ಹಾಗೂ ಚಿತ್ರಗಳನ್ನು ತುಂಬುವದರಲ್ಲಿಯೂ ರಾಧಾಬಾಯಿಗೆ ಬಲು ಪ್ರೀತಿ. ಸೋನೋಬಾ ನಾತವಳೇಕರರಂಥ ಚಿತ್ರಕಾರರು ಮನೆಯಲ್ಲಿ ಇದ್ದಮೂಲಕ ಈ ವಿಷಯದಲ್ಲಿ ಒಳ್ಳೇ ಅನುಕೂಲತೆ ಉಂಟಾಗಿತ್ತು. ರೇಶಿಮೆಯಿಂದ ತುಂಬಿ ಸಿದ್ಧಪಡಿಸಿದ ನವಿಲನ್ನು ಕಟ್ಟು ಹಾಕಿಸಿ ದಿವಾಣಖಾನೆಯಲ್ಲಿ ತೂಗಹಾಕಿದ್ದರು. ಈ ನವಿಲು ಅನೇಕ ಪ್ರದರ್ಶನಗಳಲ್ಲಿ ಮೆಚ್ಚುಗೆಯನ್ನು ಪಡೆಯಿತು.

ಲಕ್ಷ್ಮಣರಾಯರು ವಯಸ್ಸಿನಿಂದ ತರುಣರೂ ಚಿಕ್ಕ ಸಂಬಳದವರೂ ಇದ್ದರೂ ಸತತೋದ್ಯೋಗ, ಕಲ್ಪಕತೆ ಅವರ ಗಂಭೀರ ಸ್ವಭಾವಗಳು ಎಲ್ಲ ಹಿರಿಯರಲ್ಲಿ ಅವರ ಬಗ್ಗೆ ಆದರವನ್ನುಂಟು ಮಾಡಿದ್ದವು. ಮುಂದೆ ಲಕ್ಷ್ಮಣರಾಯರು ತಮ್ಮ ಕರ್ತೃತ್ವ ಶಕ್ತಿಯಿಂದ ಜಗತ್ತಿನಲ್ಲಿ ಪ್ರಸಿದ್ಧರಾಗುವರೆಂದು

ಪ್ರತಿಯೊಬ್ಬರಿಗೂ ಅನಿಸುತ್ತಿತ್ತು. ಹಿರಿಯರು ಈ ದೃಷ್ಟಿಯಿಂದಲೇ ಅವರ ಕಡೆಗೆ ನೋಡುತ್ತಿದ್ದರು.

ಲಕ್ಷ್ಮಣರಾಯರ ತಲೆಯಲ್ಲಿ ಯಾವಾಗಲೂ ಯಂತ್ರದ ಚಕ್ರಗಳೇ ತಿರುಗುತ್ತಿದ್ದವು. ಇನ್‌ಸ್ಟಿಟ್ಯೂಟದಿಂದ ಕೆಲಸ ಮುಗಿಸಿಕೊಂಡು ಮನೆಗೆ ಬಂದೊಡನೆಯೇ ಸಾಯಂಕಲ್ಲಿನ ಉದ್ಯೋಗದಲ್ಲಿ ನಿರತರಾಗುತ್ತಿದ್ದರು. ಅದರಲ್ಲಿ ಸೇಳೆ ಉಳಿದರೆ ಮನೆಗೆ ಬಂದು ಕೋಣೆಯಲ್ಲಿ ಯಾಂತ್ರಿಕ ಮಾಸಿಕಗಳನ್ನು ಓದುತ್ತಿದ್ದರು. ಇಲ್ಲವೇ ಯಾವುದಾದರೊಂದು ಕೆಟ್ಟ ವಸ್ತುವನ್ನು ಸರಿ-ಪಡಿಸುವದರಲ್ಲಿಯೋ ಅಥವಾ ಹೊಸದೊಂದು ಯಂತ್ರವನ್ನು ಜೋಡಿಸುವದರಲ್ಲಿಯೋ ತಲ್ಲೀನರಾಗಿರುತ್ತಿದ್ದರು. ಲಕ್ಷ್ಮಣರಾಯರಿಗೆ ಅಡಿಕೆಯ ಚಟ ಕೂಡ ಇರಲಿಲ್ಲ. ಆದರೆ ಅವರ ಗಳಿಕೆಯೆಲ್ಲ ಪುಸ್ತಕ ಹಾಗೂ ಮಾಸಿಕೆಗಳನ್ನು ಕೊಳ್ಳುವದರಲ್ಲಿಯಾಗಲಿ ಇಲ್ಲವೆ ಹಳೇ ವಸ್ತುಗಳ ಪೇಟೆಯಲ್ಲಿ ಕಬ್ಬಿಣದ ಪಟ್ಟಿ-ಗಳನ್ನು ಯಂತ್ರಗಳನ್ನು ಸರಿಪಡಿಸುವ ಸಾಮಾನುಗಳನ್ನು ಕೊಳ್ಳುವದರಲ್ಲಿಯಾಗಲಿ ವೆಚ್ಚವಾಗಿ ಹೋಗುತ್ತಿದ್ದಿತು. ಆದ್ದರಿಂದ ತಿಂಗಳ ಕೊನೆಗೆ ಜೊಕ್ಕಸದಲ್ಲಿ ಏನೂ ಉಳಿಯುತ್ತಿರಲಿಲ್ಲ.

ರಾಧಾಬಾಯಿಯವರು ತಮ್ಮ ಗಂಡನನ್ನು ಬಹಳ ಆದರದಿಂದ ಕಾಣುತ್ತಿದ್ದರೂ ಪತಿಯು ತಮ್ಮ ಗಳಿಕೆಯನ್ನೆಲ್ಲ ಕಬ್ಬಿಣದ ಕಸ ಕೊಳ್ಳುವದರಲ್ಲಿ ವ್ಯಯ ಮಾಡುತ್ತಿರುವದು ಮಾತ್ರ ಅವರ ಮನಸ್ಸಿಗೆ ಬರುತ್ತಿದ್ದಿಲ್ಲ. ಆದರೆ ಇದನ್ನು ಅಡಿ ತೋರಿಸುವ ಧೈರ್ಯ ಯಾರಿಗೆ? ಮನೆಯಲ್ಲಿ ದಿನದಿನಕ್ಕೆ ಬೆಳೆಯುತ್ತಿರುವ ಕಬ್ಬಿಣದ ಚೂರುಗಳ ಗುಂಪಿಯನ್ನು ನೋಡುವದು ರಾಧಾಬಾಯಿಯವರಿಗೆ ಅಸಹ್ಯವಾಯಿತು. ಒಂದುದಿನ ಬಾಗಿಲಿಗೆ ಬಂದ ಮುರುಕು ಸಾಮಾನುಗಳನ್ನು ಕೊಳ್ಳುವವನಿಗೆ ಕೋಣೆಯಲ್ಲಿಯ ಕಬ್ಬಿಣದ ಚೂರುಗಳನ್ನೆಲ್ಲ ಮಾರಿಬಿಟ್ಟರು. ಪಾಪ! ಈ ಚೂರುಗಳಿಂದಲೇ ಹೊಸ ಯಂತ್ರವನ್ನು ಸಿದ್ಧಪಡಿಸಲು ಪತಿಯು ಆಲೋಚಿಸಿರುವರೆಂಬುದು ಆ ಬಡಪ್ರಾಣಿಗೆ ಏನು ಗೊತ್ತು?

ಸಂಜೆಗೆ ಮನೆಗೆ ಬಂದ ಲಕ್ಷ್ಮಣರಾಯರು ತಮ್ಮ ಕೋಣೆಯಲ್ಲಿದ್ದ ಕಬ್ಬಿಣದ ರಾಶಿ ಮಾಯವಾಗಿರುವದನ್ನು ಕಂಡು ಗಾಬರಿಯಾದರು. ಅವರ ವ್ಯವಸ್ಥೆ ಏನಾಯಿತೆಂಬುದು ತಿಳಿದೊಡನೆ ಅವರ ಸಿಟ್ಟು ಮಿತಿಮೀರಿತು. ಅವರ ಸಿಟ್ಟು ಇಳಿಯಬೇಕೆಂಬ ಉದ್ದೇಶದಿಂದ ರಾಧಾಬಾಯಿಯವರು ಮಾರಿ ಬಂದ ಹಣವನ್ನು ಅವರ ಮುಂದೆ ಇರಿಸಿದರು. ಆದರೆ ಅದರ ಪರಿಣಾಮವು ವಿಪರೀತ-

ವಾಯಿತು. ಆಗ ಅವರು ಬಹಳ ಸಿಟ್ಟಿಗೆದ್ದು "ಇಷ್ಟು ದಿನಗಳ ವರೆಗೆ ಕಷ್ಟಪಟ್ಟು ಒಂದು ಯಂತ್ರವನ್ನು ಸಿದ್ಧಪಡಿಸಲು ಕೂಡಿಸಿದ ಸಾಮಾನುಗಳನ್ನೆಲ್ಲ ಕಸವೆಂದು ಮಾರಿ ಹಾಳು ಮಾಡಿದೆಯಲ್ಲ? ನಾಲ್ಕು ಕವಡಿಯನ್ನು ನನ್ನ ಮುಂದೆಸೆದು ಸಮಾಧಾನಪಡಿಸುವಿಯಾ? ಯಾರು ಹೇಳಿದ್ದರು ಈ ಕಾರಭಾರ ಮಾಡಲಿಕ್ಕೆ? ಇನ್ನು ಮುಂದೆ ಯಾರಾದರೂ ನನ್ನ ಸಾಮಾನುಗಳಿಗೆ ಕೈ ಹಚ್ಚಿದರೆ ಅದರ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ! ಎಚ್ಚರಿಕೆ!" ಎಂದು ಗದರಿಸಿದರು. ಕೆಲವು ದಿನಗಳಲ್ಲಿ ಲಕ್ಷ್ಮಣರಾಯರು ಅದನ್ನು ಮರೆತುಬಿಟ್ಟರು.

ಮಾನವನ ಜೀವನದಲ್ಲಿ ಏರಿಳಿತಗಳು ಒರುವವಷ್ಟೆ? ಲಕ್ಷ್ಮಣರಾಯರ ಜೀವನವನ್ನೇ ಬದಲಿಸುವ ಒಂದು ದುರ್ಧರ ಪ್ರಸಂಗವನ್ನು ಅವರು ಎದುರಿಸಬೇಕಾಯಿತು. ಅವರು ಇನ್‌ಸ್ಟಿಟ್ಯೂಟದಲ್ಲಿ ಕೆಲಸ ಹಿಡಿದು ಹತ್ತು ವರ್ಷಗಳಾಗಿದ್ದವು. ಅವರ ಸಂಬಳವು ೩೫ ರಿಂದ ಪ್ರಾರಂಭವಾಗಿ ಏರುತ್ತ ೫೦ ಕ್ಕೆ ಬಂದು ಮುಟ್ಟಿತ್ತು. ಅವರ ಕೆಲಸವು ಕೂಡ ವರಿಷ್ಠರಿಗೆ ಮೆಚ್ಚಿಗೆಯಾಗಿತ್ತು. ಸಂಬಳವು ಹೆಚ್ಚುತ್ತ ಹೋಗಿ ಕೆಲವು ವರ್ಷಗಳಲ್ಲಿ ಮುಪ್ಪಿನ ವೇತನವು (ಪೆನ್‌ಶನ್) ಸಿಗುವದು ನಿಶ್ಚಿತವಿದ್ದಿತು. ಸಂಬಳವು ಹೆಚ್ಚುವ ಒಂದು ಸಂಧಿಯೂ ಒದಗಿತು.

ಮಿಸ್ಟರ ಗುಡ್ ಎಂಬ ಇಂಗ್ಲಿಷ ಗೃಹಸ್ಥನು ಲಕ್ಷ್ಮಣರಾಯರ ವಿಭಾಗದ ಮೇಲಧಿಕಾರಿಯು, ಈ ಸಾಹೇಬನ ವೃತ್ತಿಯು ವಿಚಿತ್ರವಾಗಿದ್ದಿತು. ವಿದ್ಯಾರ್ಥಿಗಳಿಗೆ ಯಾಂತ್ರಿಕ ಶಿಕ್ಷಣ ಕೊಡುವದಕ್ಕಿಂತಲೂ ಭಾರತದಲ್ಲಿ ಕ್ರಿಸ್ತೀ ಧರ್ಮದ ಪ್ರಸಾರ ಮಾಡುವದರಲ್ಲಿ ಅವನಿಗೆ ಹೆಚ್ಚು ಆನಂದವೆನಿಸುತ್ತಿತ್ತು. ಮಿಶನರಿಯಾಗುವದನ್ನು ನಿಶ್ಚಯಿಸಿ ಕೆಲಸಕ್ಕೆ ಶರಣು ಹೊಡೆದನು. ಇದರಿಂದ ಗುಡ್ ಸಾಹೇಬನ ಸ್ಥಳವನ್ನು ಹೇಗೆ ತುಂಬಬೇಕೆಂಬ ಪ್ರಶ್ನೆಯು ಸಂಚಾಲಕರ ಎದುರಿಗೆ ಉಪಸ್ಥಿತವಾಯಿತು.

ಇದೇ ಸುಮಾರಿಗೆ ಈ ಸಂಸ್ಥೆಯ ಪ್ರಿನ್ಸಿಪಾಲನು ಸ್ವರ್ಗವಾಸಿಯಾದನು. ಅವನ ಸ್ಥಳಕ್ಕೆ ಹೊಸ ಪ್ರಿನ್ಸಿಪಾಲನು ಬಂದಿದ್ದನು. ಗುಡ್‌ಸಾಹೇಬನ ಕಾರ್ಯವನ್ನು ಲಕ್ಷ್ಮಣರಾಯರಾಗಲೀ ಅವರ ಸಹ ಶಿಕ್ಷಕರಾದ ಮಾಡುಲಕರರಾಗಲೀ ಸಮಾಧಾನಕರವಾಗಿ ಸಾಗಿಸಬಲ್ಲರೆಂಬುದನ್ನು ಅವನು ಮನಗಂಡಿದ್ದನು. ಅವರ ಹತ್ತು ವರ್ಷದ ಕಾರ್ಯವು ಅವರ ಯೋಗ್ಯತೆಯನ್ನು ಸಿದ್ಧಪಡಿಸಿತ್ತು

ಆದರೆ ಇಂತಹ ಮೇಲಧಿಕಾರದ ಸ್ಥಾನವನ್ನು ಒಬ ಭಾರತೀಯನಿಗೆ ಹೇಗೆ ಕೊಡಬೇಕು? ಎಂಬ ಕರಿ-ಬಿಳಿಯ ಭೇದವು ಅಡ್ಡ ಬಂದಿತು. ಕೊನೆಗೆ ಯಥಾತಥಾ ಜ್ಞಾನವಿದ್ದ ಒಬ್ಬ ಆಂಗ್ಲೋ-ಇಂಡಿಯನ್ನನನ್ನು ಹುಡುಕಿ ಆ ಸ್ಥಳಕ್ಕೆ ನೇಮಿಸಿದನು. ಈ ನಿರ್ಣಯವನ್ನು ಕೇಳಿ ಲಕ್ಷ್ಮಣರಾವ ಹಾಗೂ ಮಾಡುಲ ಕರರಿಗೆ ಕೆಡುಕೆನಿಸಿತು. ಪಕ್ಷಪಾತದ ಪ್ರತ್ಯಕ್ಷ ನಿದರ್ಶನವಿದ್ದಿತು. ಈ ಅಪಮಾನವನ್ನು ಸ್ವಾಭಿಮಾನಿಗಳಾದ ಲಕ್ಷ್ಮಣರಾಯರು ಸಹಿಸುವದೆಂತು? ಇದರ ಬಗ್ಗೆ ನ್ಯಾಯ ದೊರಕಿಸುವ ಸಂಕಲ್ಪವನ್ನು ಇಬ್ಬರೂ ಮಾಡಿದರು. ಇಬ್ಬರೂ ಪ್ರಿನ್ಸಿಪಾಲರಿಗೆ ಭೆಟ್ಟಿಯಾಗಿ ತಮಗಾದ ಅನ್ಯಾಯವನ್ನೆಲ್ಲ ವಿವರಿಸಿದರು. ಆದರೆ ಎಲ್ಲವೂ ಬೋರ್ಗಲ್ಲಮೇಲೆ ಮಳೆಗರೆದಂತಾಯಿತು. ಈ ಅನ್ಯಾಯಕ್ಕೆ ರಾಜೀನಾಮೆಯನ್ನು ಕೊಟ್ಟು ಹೊರ ಬರುವದೊಂದೇ ಉಪಾಯವೆಂದು ನಿರ್ಣಯಿಸಿ ತ್ಯಾಗಪತ್ರಗಳನ್ನು ಪ್ರಿನ್ಸಿಪಾಲರ ಕಡೆಗೆ ಕಳಿಸಿದರು.

ಈ ಇಬ್ಬರೂ ಶಿಕ್ಷಕರು ರಾಜೀನಾಮೆಯನ್ನು ಕೊಟ್ಟಿರುವರೆಂಬ ಸುದ್ದಿಯು ಸಂಸ್ಥೆಯಲ್ಲಿ ಕಳವಳವನ್ನುಂಟು ಮಾಡಿತು. ಎಷ್ಟೋ ಜನರು ಅವರ ಧೈರ್ಯವನ್ನು ಕೊಂಡಾಡಹತ್ತಿದರು. ಆದರೆ ಮತ್ತೆ ಕೆಲವರು ಇದು ಮೂರ್ಖತನವೆಂದು ನಿಶ್ಚಯಿಸಿ ರಾಜೀನಾಮೆಯನ್ನು ತಿರುಗಿ ತೆಗೆದುಕೊಳ್ಳಲು ಸಲಹೆಗಳನ್ನೀಯಹತ್ತಿದರು. "ಬಂಗಾರದಂಥ ಸರಕಾರೀ ಕೆಲಸವನ್ನು ಹತ್ತು ವರ್ಷ ಮಾಡಿ ಕ್ಷುಲ್ಲಕ ಕಾರಣಕ್ಕಾಗಿ ಅದರ ಮೇಲೆ ನೀರೆರೆಯುವದು ಎಂತಹ ಬುದ್ಧಿವಂತಿಕೆ? ಈ ತಲೆತಿರುಕತನದ ಬಗ್ಗೆ ಇಬ್ಬರಿಗೂ ಪಶ್ಚಾತ್ತಾಪವಾಗದೆ ಇರಲಾರದು" ಎಂದು ಕೆಲ ಭೀರುಗಳು ಪಿಸುಗುಡಹತ್ತಿದರು

ಈ ಬಿರುಗಾಳಿಗೆ ಮಾಡುಲಕರರ ಧೈರ್ಯವು ನಡುಗಿತು. ಅವರು ಧೈರ್ಯಗುಂದಿ ತಮ್ಮ ರಾಜೀನಾಮೆಯನ್ನು ತಿರುಗಿ ತೆಗೆದುಕೊಂಡಿರುವದಾಗಿ ಪ್ರಿನ್ಸಿಪಾಲರಿಗೆ ತಿಳಿಸಿದರು. ಆದರೆ ಲಕ್ಷ್ಮಣರಾಯರ ನಿಶ್ಚಯದಲ್ಲಿ ಏನೂ ಬದಲಾಗಲಿಲ್ಲ. ಸ್ವಾಭಿಮಾನದಿಂದ ಸಂಸ್ಥೆಯಿಂದ ಹೊರಬಿದ್ದ ಲಕ್ಷ್ಮಣರಾಯರು "ಪುನಶ್ಚ ಹರಿಃ ಓಂ" ಎಂದು ನವ ಉದ್ಯೋಗದ ಶೋಧದಲ್ಲಿ ತೊಡಗಿದರು.

೪

# ಸ್ವಾತಂತ್ರ್ಯದತ್ತ

ಚಿಕ್ಕಮಕ್ಕಳು ತಮ್ಮ ಕಾಲಮೇಲೆ ನಿಂತು ತಪ್ಪು ಹೆಜ್ಜೆ ಹಾಕುತ್ತ ಬೀಳುತ್ತ ಏಳುತ್ತ ಕೊನೆಗೆ ನಡೆಯಲು ಪ್ರಾರಂಭಿಸುವಂತೆ ಯಾವುದೇ ಕ್ಷೇತ್ರ ದಲ್ಲಿ ಯಶಸ್ವಿಯಾಗಬೇಕಾದರೆ ಹೀಗೆಯೇ ಪ್ರಯತ್ನ ಮಾಡಬೇಕಾಗುತ್ತದೆ.

ಇನ್‌ಸ್ಟಿಟ್ಯೂಟ್‌ದಿಂದ ಹೊರಬಿದ್ದ ಲಕ್ಷ್ಮಣರಾಯರ ಪ್ರಯತ್ನವು ಇದೇ ಬಗೆಯಾಗಿದ್ದಿತು. "ತನ್ನ ಕಾಲಮೇಲೆ ಕಲ್ಲು ಹಾಕಿಕೊಂಡ" ಎಂದು ಗುಣು ಗುಟ್ಟುವ ಜನರಿಗೇನೂ ಕಡಿಮೆಯಿರಲಿಲ್ಲ. ಆದರೆ ಲಕ್ಷ್ಮಣರಾಯರ ತಲೆಯಲ್ಲಿ 'ತಾವು ಮಾಡಿದುದು ತಪ್ಪು' ಎಂಬ ಕಲ್ಪನೆಯು ಎಂದೂ ಬರಲಿಲ್ಲ. ಸಂಸ್ಥೆ ಯಲ್ಲಿರುವಾಗಲೇ ತಾವು ಸ್ವತಂತ್ರವಾಗಿ ಯಾವದಾದರೊಂದು ವಸ್ತುವನ್ನು ನಿರ್ಮಿಸುವ ಉದ್ಯೋಗವನ್ನು ಪ್ರಾರಂಭಿಸಬೇಕೆಂದು ಮನಸ್ಸಿನಲ್ಲಿ ಮೊಲಕು ಹಾಕುತ್ತಿದ್ದರು.

ಈ ಸಮಯಕ್ಕೆ ಉದ್ಯೋಗ ವ್ಯವಸಾಯಗಳ ಕಡೆಗೆ ವಿಚಾರವಂತ ಭಾರತೀಯರ ಲಕ್ಷ್ಯವು ಹೊರಳಿತ್ತು. ಮೊದಮೊದಲು "ಬ್ರಿಟಿಶರೆಂದರೆ ನಮ್ಮ ಹಿತಕ್ಕಾಗಿ ಸ್ವರ್ಗದಿಂದ ಬಂದ ದೇವತೆಗಳು." ಎಂದು ಹೊಗಳುತ್ತಿದ್ದ ಜನ ದೇಶದಲ್ಲಿಯ ಉದ್ಯೋಗಗಳು ಒಂದರ ಹಿಂದೊಂದು ಪಟಪಟ ಬಿದ್ದು ಮುಳು ಗುವವನ್ನು ಕಾಣಹತ್ತಿದರು. ರಾಷ್ಟ್ರದ ಆರ್ಥಿಕ ಶೋಷಣೆಯಾಗಿ ಬಡತನವು ತಲೆಯೆತ್ತಿ ಜನರ ಕಣ್ಣುಗಳು ತೆರೆದವು. ಈ ಸಂಕಟವನ್ನು ಹೇಗೆ ಎದುರಿಸ ಬೇಕೆಂದು ಸುಶಿಕ್ಷಿತರೆಲ್ಲರೂ ಚಿಂತಿಸಹತ್ತಿದರು. ಪರದೇಶಕ್ಕೆ ಹರಿಯುವ ಸಂಪತ್ತಿನ ಹೊಳೆಯನ್ನು ನಿಲ್ಲಿಸಲು ಸ್ವರಾಜ್ಯವೊಂದೇ ತರುಣೋಪಾಯವೆಂದೂ ಭಾರತೀಯ ಉದ್ಯಮೆಗಳನ್ನು ಪುನರುಜ್ಜೀವನಗೊಳಿಸುವದೇ ಉತ್ತಮ ಸಾಧನ ವೆಂದೂ ಮನಗಂಡರು. ಜಾಂಭೇಕರರ ಮನೆಯಲ್ಲಿ ನಡೆಯುತ್ತಲಿದ್ದ ಚರ್ಚೆಯ ಫಲಿತಾಂಶವೂ ಇದೇ ಇದ್ದಿತು. ನಮ್ಮ ಜೀವನಕ್ಕೆ ಅವಶ್ಯವಿರುವ ವಸ್ತುಗಳನ್ನೆಲ್ಲ ನಾವೇ ನಿರ್ಮಿಸಿಕೊಳ್ಳಬೇಕು. ಪರದೇಶಗಳಿಂದ ತರಿಸಕೂಡ ದೆಂದು ಎಲ್ಲರೂ ಆವೇಶದಿಂದ ಪ್ರತಿಪಾದಿಸುತ್ತಿದ್ದರು. ಆದರೆ ಮಾತನಾಡಿ

ದಂತೆ ಮಾಡುವದು ಅಷ್ಟು ಸುಲಭವಲ್ಲ. ಯಾವುದೊಂದು ವಸ್ತುವನ್ನು ನಿರ್ಮಿಸಲು ಯಂತ್ರಗಳ ಅನುಭವ, ಜ್ಞಾನ, ಆ ಉದ್ಯಮಕ್ಕೆ ಬೇಕಾಗುವ ಬಂಡವಲು ಇಲ್ಲದೆ ಎಂತಹ ಚಿಕ್ಕ ವಸ್ತುವನ್ನಾದರೂ ಹೇಗೆ ನಿರ್ಮಿಸಬಲ್ಲೆವು?

ದೇಶಾಭಿಮಾನಿಗಳಾದ ಈ ಜನರ ದೃಷ್ಟಿಯು ಲಕ್ಷ್ಮಣರಾಯರ ಮೇಲೆ ಬಿದ್ದಿತು. "ಲಕ್ಷ್ಮಣರಾಯರೇ! ತಾವು ಈಗ ಯಾವುದಾದರೊಂದು ವಸ್ತುವಿನ ನಿರ್ಮಿತಿಗೆ ಕೈಹಾಕಬೇಕು. ನಿಮಗೆ ಯಾಂತ್ರಿಕ ಜ್ಞಾನವು ಚನ್ನಾಗಿದೆ. ಮತ್ತು ನೀವು ಮೊನ್ನಿನ ಗಣಪತಿಯ ಉತ್ಸವದಲ್ಲಿ ವಿದ್ಯುತ್ ಯಂತ್ರವನ್ನು ನಿರ್ಮಿಸಿ ಎಲ್ಲರನ್ನೂ ಚಕಿತಗೊಳಿಸಿರುವಿರಿ. ನಮಗೆ ಅಶಕ್ಯವಿದ್ದುದು ನಿಮಗೆ ಶಕ್ಯವಿದೆ." ಎಂದು ಪ್ರೋತ್ಸಾಹಿಸಿದರು.

ಗಣೇಶೋತ್ಸವವನ್ನು ಈ ಗುಂಪು ಒಳ್ಳೇ ಸಡಗರದಿಂದ ನೆರವೇರಿಸುತ್ತಿತ್ತು. ಅದರಲ್ಲಿ ಲಕ್ಷ್ಮಣರಾಯರು ಶ್ರೀಲಕ್ಷ್ಮಿಯ ಮೂರ್ತಿಯನ್ನು ಸಿದ್ಧಪಡಿಸುವ ಕಾರ್ಯವನ್ನು ಕೈಕೊಂಡಿದ್ದರು. ಚಿತ್ರಕಾರರಾದ ಸಾತವಳೇಕರರು ಮಂಟಪವನ್ನು ಶೃಂಗರಿಸಲು ಅಣಿಯಾಗಿದ್ದರು. ಈ ಉತ್ಸವದಲ್ಲಿ ಲಕ್ಷ್ಮಣ-ರಾಯರ ಕೃತಿಯು ಎಲ್ಲರ ಮನಸ್ಸನ್ನು ಆಕರ್ಷಿಸಿತು. ಗಣಪತಿಯ ಎದುರಿಗೆ ನೀರು ತುಂಬಿದ ಗಂಗಾಳವನ್ನಿಟ್ಟು ಅದರ ತಳದಲ್ಲಿ ಒಂದು ರೂಪಾಯಿಯನ್ನಿಟ್ಟಿದ್ದರು. "ಅದರಲ್ಲಿಯ ರೂಪಾಯಿಯನ್ನು ಯಾರು ತೆಗೆಯುವರೋ ಅವರಿಗೇ ಅದು" ಎಂದು ಲಕ್ಷ್ಮಣರಾಯರು ಹೇಳುತ್ತಿದ್ದರು. ಮತ್ತು ತಾವು ಅದನ್ನು ತೆಗೆದು ತೋರಿಸುತ್ತಿದ್ದರು. ಆದರೆ ಇತರರಾರಾದರೂ ನೀರನ್ನು ಮುಟ್ಟಿದೊಡನೆಯೇ ಅವರಿಗೆ ವಿದ್ಯುತ್ತಿನ ಧಕ್ಕೆ ತಗಲುತ್ತಿದ್ದಿತು. "ಇದೇನು ಗೌಡಬಂಗಾಲಿ" ಎಂದು ಜನರು ಆಶ್ಚರ್ಯಚಕಿತರಾಗುತ್ತಿದ್ದರು. ಆದರೆ ಅದರಲ್ಲಿ ಯಾವ ಜಾದುವೂ ಇರಲಿಲ್ಲ. ಲಕ್ಷ್ಮಣರಾಯರು ತಮ್ಮ ಅಣ್ಣನ ಸಹಾಯದಿಂದ ಒಂದು ಬ್ಯಾಟರಿಯನ್ನು ಸಿದ್ಧಪಡಿಸಿ ಆ ಗಂಗಾಳಕ್ಕೆ ಜೋಡಿಸಿದ್ದರು. ೧೮೯೦ ರಲ್ಲಿ ವಿದ್ಯುತ್ತನ್ನೇ ಅರಿಯದ ಜನ ಇದನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು! ಇದರಿಂದ ಲಕ್ಷ್ಮಣರಾಯರು ಒಬ್ಬ ದೊಡ್ಡ ಸಂಶೋಧಕರೆಂದು ಜನರಲ್ಲೆಲ್ಲ ಸುದ್ದಿ ಹಬ್ಬಿತು.

ತಮಗೆ ಸಣ್ಣ ಪ್ರಮಾಣದಲ್ಲಿ ಮಾಡಲು ಸಾಧ್ಯವಿದ್ದ ವಸ್ತುವು ಯಾವುದು? ಸಾಧ್ಯವಿದ್ದ ಸಾಮಗ್ರಿಗಳಿಂದ ಸಿದ್ಧವಾಗುವ, ಸುಲಭವಾಗಿ ಪೇಟೆಯಲ್ಲಿ-ಮಾರಾಟವಾಗುವ, ವಸ್ತುವು ಯಾವುದು? ಎಂಬ ವಿಚಾರಗಳಲ್ಲಿಯೇ

ಲಕ್ಷ್ಮಣರಾಯರು ಮಗ್ನರಾಗಿದ್ದರು, ವಿಚಾರಾಂತ್ಯದಲ್ಲಿ ಕೋಟುಗಳಿಗೆ ಬೇಕಾಗುವ ಬಿರಡಿಗಳನ್ನು ಮಾಡಲು ನಿಶ್ಚಯಿಸಿದರು. ಯಾವುದೇ ಕಾರ್ಯವನ್ನು ಪ್ರಾರಂಭಿಸುವ ಮೊದಲು ಅದಕ್ಕೆ ಬೇಕಾಗುವ ಜ್ಞಾನ ಹಾಗೂ ಸಾಧನಗಳನ್ನು ಅವರು ಪೂರ್ಣ ವಿಚಾರ ಮಾಡುತ್ತಿದ್ದರು. ಅವರು ಬಿರಡಿ ಮಾಡುವದನ್ನು ನಿಶ್ಚಯಿಸಿದ ಕೂಡಲೇ ಪೇಟೆಗೆ ಹೋಗಿ ಎಷ್ಟು ಬಗೆಯ ಬಿರಡಿ ಇರುವವೆಂಬುದನ್ನು ನಿರೀಕ್ಷಿಸಿದರು. ಅವುಗಳಲ್ಲಿ ತಾವು ಎಂಥವುಗಳನ್ನು ಸಿದ್ಧಪಡಿಸಲು ಸಾಧ್ಯವೆಂಬುದನ್ನು ಗೊತ್ತುಪಡಿಸಿದರು. ಅವುಗಳಿಗೆ ಬೇಕಾಗುವ ಯಂತ್ರಗಳಾವವು ? ಕಚ್ಚಾಮಾಲು ಎಲ್ಲಿ ದೊರೆಯುವದು ? ಇತ್ಯಾದಿ ಸಂಗತಿಗಳನ್ನು ಮಾಸಿಕ ಪುಸ್ತಕಗಳಿಂದ ಕಲೆಹಾಕಿದರು. ಇರಾಣದಿಂದ ಸಿಂಪುಗಳನ್ನು ತರಿಸಿದರು. ಕೋಚೀನದಿಂದ ಗರಟೆಗಳು ಬಂದವು. ಇಷ್ಟೆಲ್ಲ ಪ್ರಯತ್ನ-ಪ್ರಯೋಗಗಳು ನಡೆದುದು ಲಕ್ಷ್ಮಣರಾಯರ ಚಿಕ್ಕ ಕೋಣೆಯಲ್ಲಿಯೇ ರಾಯರು ಅನೇಕ ಬಗೆಯ ಬಿರಡಿಗಳನ್ನು ಬಹು ಸುಂದರವಾಗಿ ಸಿದ್ಧಪಡಿಸಿದರು.

ರಾಯರ ಪ್ರಯೋಗವು ಯಶಸ್ವಿಯಾದ ಬಗ್ಗೆಯೂ ಉತ್ಕೃಷ್ಟವಾದ ಬಗ್ಗೆಯೂ ಅನೇಕ ಮಹನೀಯರಿಂದ ಅಭಿನಂದನೆಗಳು ಬಂದವು. ಆದರೆ ಈ ಸ್ವದೇಶಿ ವಸ್ತುಗಳಿಗೆ ಪೇಟೆಯಲ್ಲಿ ಬೇಡಿಕೆಯೇ ಬರಲಿಲ್ಲ. ಮನೋಹರವಾದ ವಿದೇಶಿ ವಸ್ತುಗಳು ಪೇಟೆಯನ್ನೆಲ್ಲ ವ್ಯಾಪಿಸಿದ್ದವು. ಈ ವ್ಯಾಪಾರವೆಲ್ಲ ಪಾರ್ಶಿಗಳ ಕೈಯಲ್ಲಿದ್ದಿತು. ಪರದೇಶಿ ವಸ್ತುಗಳ ಬಗ್ಗೆ ಮೋಹ, ಸ್ವದೇಶಿ ವಸ್ತುಗಳ ಬಗೆಗೆ ತಿರಸ್ಕಾರಗಳು ಜನರಲ್ಲಿ ತುಂಬಿದ್ದವು. ಇಂತಹ ಪರಿಸ್ಥಿತಿಯಲ್ಲಿ ಈ ಬಿರಡಿ ಕಾರಖಾನೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುವದು ಬಹು ಕಷ್ಟವೆಂದು ಬೇರೆ ಹೇಳಬೇಕೆ ? ಆದರೆ ಲಕ್ಷ್ಮಣರಾಯರು ಇದಕ್ಕೆ ಎದೆಗುಂದಲಿಲ್ಲ. ವಿದೇಶೀ ವಸ್ತುಗಳನ್ನು ಸ್ಪರ್ಧಿಸುವ ವಸ್ತುಗಳನ್ನು ನಿರ್ಮಿಸಿದರೆ ಇಂದಿಲ್ಲ ನಾಳೆ ಅವು ಪೇಟೆಯಲ್ಲಿ ತಮ್ಮ ಪ್ರಸ್ಥವನ್ನು ಬೆಳೆಸುವವೆಂದು ಅವರು ಭಾವಿಸಿದ್ದರು. ಆದರೆ ಈ ಕಾರಖಾನೆಯನ್ನು ನಡೆಯಿಸಲು ಭಂಡವಲವನ್ನು ಎಲ್ಲಿಂದ ತರಬೇಕೆಂಬ ಪ್ರಶ್ನೆಯೇ ಅವರನ್ನು ಬಾಧಿಸಹತ್ತಿತು. ಲಕ್ಷ್ಮಣರಾಯರ ಹಿತಚಿಂತಕರೂ ಅವರನ್ನು ಪ್ರೀತಿಸುವವರೂ ಆದ ಬಾಪೂರಾವ ಅಠಲೆಯವರು ಆ ಕಾಲದಲ್ಲಿ ಬಡೋದೆಯ ನಾಯಬ ದಿವಾಣರಾಗಿದ್ದರು. ಅವರು ಲಕ್ಷ್ಮಣರಾಯರ ಸಂಕಟವನ್ನರಿತು ಬಡೋದೆಯ ಒಬ್ಬ ಸಾಹುಕಾರನಿಂದ ತಮಗೆ ಸಾಕಷ್ಟು ಸಹಾಯವು ದೊರೆಯಬಹುದೆಂದು ತಿಳಿಸಿದರು. ಕೂಡಲೇ ಲಕ್ಷ್ಮಣ

ರಾಯರು ಉತ್ಸಾಹದಿಂದ ಬಡೋದೆಗೆ ಧಾವಿಸಿದರು. ಆದರೆ ಅವರಿಗಿಂತ ಅವರ ದೈವವು ಮುಂದೆ ಓಡಿತ್ತು.

ಸಾಹುಕಾರನು ಲಕ್ಷ್ಮಣರಾಯರ ಕಲ್ಪಕತೆಯನ್ನೂ ಯಾಂತ್ರಿಕ ಜ್ಞಾನವನ್ನೂ ಬಾಯಿತುಂಬ ಹೊಗಳಿ ಯೋಜನೆಯನ್ನು ಮೆಚ್ಚಿ "ನಿಮ್ಮ ಕಾರಖಾನೆಗೆ ನಾನು ಭಂಡವಲು ಒದಗಿಸಬಲ್ಲೆ. ಆದರೆ ಒಂದು ಕರಾರಿನಮೇಲೆ ಮಾತ್ರ" ಎಂದು ಅಂದನು.

"ತಮ್ಮ ಕರಾರು ಯಾವುದು ?" ಎಂದು ಲಕ್ಷ್ಮಣರಾಯರು ಉತ್ಸುಕತೆಯಿಂದ ಕೇಳಿದರು.

ಅದಕ್ಕೆ ಸಾಹುಕಾರನು "ನೀವು ನಿಮ್ಮ ಕಾರಖಾನೆಗೆ ಒಬ್ಬ ಯುರೋಪಿ-ಯನ್ ಮ್ಯಾನೇಜರನನ್ನು ತರಬೇಕು. ಅಂದರೆ ನಿಮಗೆ ಬೇಕಾಗುವ ಭಂಡವಲು ತೊಡಗಿಸಲು ನಾನು ಸಿದ್ಧನಿರುವೆ. ಕಾರಖಾನೆಗಳನ್ನು ನಡೆಯಿಸುವ ಯೋಗ್ಯತೆಯು ನಮ್ಮ ಜನರಲ್ಲಿ ಇದೆಯೆಂದು ನನಗೆ ಅನಿಸುವದಿಲ್ಲ" ಎಂದನು.

ಲಕ್ಷ್ಮಣರಾಯರು ಸಾಹುಕಾರನ ಮತ ಒಲಿಸಲು ವಿಶ್ವಪ್ರಯತ್ನ ಮಾಡಿದರು. ಅದರಲ್ಲಿ ಅವರು ಯಶಸ್ವಿಯಾಗಲಿಲ್ಲ. ನಿರುಪಾಯರಾಗಿ "ಬಂದ ದಾರಿಗೆ ಸುಂಕವಿಲ್ಲ" ಎಂದು ಬರಿಗೈಯಿಂದ ಮುಂಬಯಿಗೆ ಮರಳಿದರು. ಅಲ್ಪ ಭಾಂಡವಲಿನಿಂದ ಬೇರೆ ಯಾವ ಉದ್ಯೋಗವನ್ನು ಪ್ರಾರಂಭಿಸಬಹುದು ? ಎಂಬ ವಿಚಾರದಲ್ಲಿ ಮಗ್ನರಾದರು.

ಹೀಗೆ ವಿಚಾರ ಮಾಡುವಾಗ, ಡಾಕ್ಟರರಿಗೂ ಔಷಧಿಗಳನ್ನು ತಯಾರಿಸುವವರಿಗೂ (ಕೆಮಿಸ್ಟಿಗಳಿಗೂ) ಗುಳಿಗೆಗಳನ್ನು ಹಾಕಲು ಬೇಕಾಗುವ ಕಾಗದದ ಪೆಟ್ಟಿಗೆಗಳನ್ನು ಮಾಡಲು ಅಲ್ಪ ಬಂಡವಲಿನಿಂದ ಸಾಧ್ಯವೆಂಬ ಮಾತು ಅವರಿಗೆ ಹೊಳೆಯಿತು. ಕೂಡಲೆ ಆ ಬಗ್ಗೆ ಬೇಕಾಗುವ ಜ್ಞಾನವನ್ನು ಸಂಪಾದಿಸಿದರು. ಸುದೈವದಿಂದ ಈ ಕಾರ್ಯಕ್ಕೆ ಬೇಕಾಗುವ ಅಲ್ಪಸ್ವಲ್ಪ ಭಂಡವಲವನ್ನು ಡಾ. ನಾನಾಸಾಹೇಬ ದೇಶಮುಖ ಮೊದಲಾದವರು ಒದಗಿಸಿದರು. ಅಷ್ಟರಿಂದಲೇ ಲಕ್ಷ್ಮಣರಾಯರು ಅಮೇರಿಕೆಯ ಬರ್ನ್ಸ್ ಕಂಪನಿಯ ಒಂದು ಚಿಕ್ಕ ಲೇಥ (ಗಾಡ) ವನ್ನೂ ಹಾಗೂ ಫರ್ಕ್ಯೂಟ ಕಂಪನಿಯ ಕಾಲಿನಿಂದ ತುಳಿಯುವ ಒಂದು ಸಣ್ಣ ಪ್ರೆಸ್ಸನ್ನು ತರಿಸಿದರು. ಇಷ್ಟರಿಂದಲೇ ಅವರ ಕಾರ್ಯವಾಗಲಿಲ್ಲ. ಇನ್ನಷ್ಟು ಬಂಡವಲಿನ ಅವಶ್ಯಕತೆಯೆನಿಸಿತು.

ಈ ಹೆಚ್ಚಿನ ಹಣವನ್ನು ಎಲ್ಲಿಂದ ತರಬೇಕೆಂದು ರಾಯರು ಚಿಂತೆಗೊಳ

ಗಾದರು. ಇದನ್ನರಿತ ರಾಧಾಬಾಯಿಯವರು ಕೋಣೆಯೊಳಗೆ ಬಂದು ಪತಿದೇವರಿಗೆ— "ಯಂತ್ರವನ್ನು ತರಿಸಲು ತಮಗೆ ಹಣ ಬೇಕಾಗಿದೆಯೆಂದು ಕೇಳಿದೆ. ನಾನೇನಾದರೂ ಅಲ್ಪ ಸ್ವಲ್ಪ ಸಹಾಯ ಮಾಡಬಹುದೇ?" ಎಂದು ಅಂದರು.

ಲಕ್ಷ್ಮಣರಾಯರು ಚಕಿತರಾಗಿ ಪ್ರಶ್ನಾರ್ಥಕ ಮುದ್ರೆಯಿಂದ ಪತ್ನಿಯ ಕಡೆಗೆ ನೋಡಹತ್ತಿದರು. ರಾಧಾಬಾಯಿಯವರು ಹೆಚ್ಚು ಮಾತಾಡದೆ ಕೈಯಲ್ಲಿಯ ಬಂಗಾರದ ಬಳೆ (ಪಾಟಲಿ) ಗಳನ್ನು ತೆಗೆದು ಪತಿಯ ಮುಂದೆ ಇಟ್ಟರು. ಅದನ್ನು ಕಂಡು ಲಕ್ಷ್ಮಣರಾಯರ ಹೃದಯವೂ ತುಂಬಿ ಬಂದಿತು. ಅವರು ಭಾವನಾಪರವಶರಾದುದನ್ನು ಇಂದಿನ ವರೆಗೆ ಯಾರೂ ಕಂಡಿದ್ದಿಲ್ಲ. ಇಂದು ಅವರ ದೃಷ್ಟಿಯಲ್ಲಿ ಹೊಸ ತೇಜವು ಹೊಳೆಯಿತು. "ಈಗ ನಾನು ಈ ಬಳೆಗಳನ್ನು ತೆಗೆದುಕೊಳ್ಳುವೆ. ಒಂದಿಲ್ಲೊಂದು ದಿನ ಇವುಗಳ ಎರಡರಷ್ಟು ತೂಕದ ಬಳೆಗಳನ್ನು ನಿನಗೆ ತೊಡಿಸುವೆ" ಎಂದು ಅಂದರು.

ಯಂತ್ರಗಳೂ ಬಂದವು. ಔಷಧದ ಪೆಟ್ಟಿಗೆಗಳನ್ನು ತಯಾರು ಮಾಡುವ ಕಾರ್ಯವು ಪ್ರಾರಂಭವಾಯಿತು. ಇಬ್ಬರು ಹುಡುಗರು ಕೈಯಲ್ಲಿ ದುಡಿಯ ಹತ್ತಿದರು. ಸಿದ್ಧವಾದ ಮಾಲು ಸ್ನೇಹಿತರಾದ ಡಾಕ್ಟರರಲ್ಲಿಯೂ ಔಷಧದ ಅಂಗಡಿಕಾರರಲ್ಲಿಯೂ ಮಾರಹತ್ತಿದವು. ಗೆಳೆಯರಿಂದ ತೆಗೆದುಕೊಂಡ ಹಣ ವನ್ನು ಮೂರು ನಾಲ್ಕು ವರ್ಷಗಳಲ್ಲಿ ಮುಟ್ಟಿಸಿ ಋಣಮುಕ್ತರಾದರು. ಕಾರಖಾನೆಯು ಸುವ್ಯವಸ್ಥಿತವಾಗಿ ನಡೆದು ಲಕ್ಷ್ಮಣರಾಯರಿಗೆ ಕೀರ್ತಿಯನ್ನು ತಂದಿತು.

"ತಾನೊಂದು ಬಗೆದರೆ ದೈವವು ಮತ್ತೊಂದು ಬಗೆಯುವದು" ಎಂಬಂತೆ ೧೮೯೬ ರಲ್ಲಿ ಮುಂಬಯಿಯಲ್ಲಿ ಪ್ಲೇಗದ ಹಾವಳಿಯು ಆರಂಭವಾಯಿತು. ಈ ಪ್ಲೇಗ ಜೇನೆಯು ಅನೇಕ ಜನರನ್ನು ಬಲಿ ತೆಗೆದುಕೊಳ್ಳಹತ್ತಿತು. ಜನರು ಭಯಗ್ರಸ್ತರಾಗಿ ಊರು ಬಿಡಹತ್ತಿದರು. ಪ್ಲೇಗದ ಮೂಲಕ ಶಾಲೆ ಕಾಲೇಜು ಗಳು ಮುಚ್ಚಲ್ಪಟ್ಟವು. ಉದ್ಯೋಗ ವ್ಯವಹಾರಗಳ ಮೇಲೆ ಇದರಿಂದ ಭಯಂಕರ ಪರಿಣಾಮವಾಯಿತು. ಇದರ ಶಕವು ಲಕ್ಷ್ಮಣರಾಯರ ಕಾರ-ಖಾನೆಗೂ ಬಡಿಯಿತು. ಲಕ್ಷ್ಮಣರಾಯರ ಪತ್ನಿಯಾದ ರಾಧಾಬಾಯಿ-ಯವರಿಗೂ ಪ್ಲೇಗವು ಬಂದಿತು. ಡಾ. ರಾವ್ ಇವರ ಸಹಾಯದಿಂದ ಮೃತ್ಯು ಮುಖದಿಂದ ಅವರು ಹೇಗೆ ಪಾರಾದರೆಂಬುದನ್ನು ಹಿಂದೆ ವಿವರಿಸಿದ್ದೇವೆ.

ಒಟ್ಟಿನಲ್ಲಿ ಈ ಪ್ಲೇಗದ ಹಾವಳಿಯು ಲಕ್ಷ್ಮಣರಾಯರ ಕಾರಖಾನೆಯನ್ನು ಹಾಳುಗೆಡವಿದ್ದಲ್ಲದೆ ಲಕ್ಷ್ಮಣರಾಯರ ಮುಂಬಯಿ ವಾಸವನ್ನೂ ಕೊನೆಗೊಳಿಸಿತು.

ಲಕ್ಷ್ಮಣರಾಯರು ಪರಿಸ್ಥಿತಿಯನ್ನೆಲ್ಲ ರಾಮೂಅಣ್ಣಾ ಅವರಿಗೆ ಬರೆದು ತಿಳಿಸಿದರು. ಆಗ ಅವರು "ನೀನು ಕೂಡಲೆ ಬೆಳಗಾವಿಗೆ ಹೊರಟು ಬಾ. ಇಲ್ಲಿ ಸಾಯಿಕಲ್ಲಿನ ಉದ್ಯೋಗವು ಭರದಿಂದ ನಡೆದಿದೆ. ನೀನು ಬಂದರೆ ಅದನ್ನು ಇನ್ನೂ ಬೆಳೆಸಬಹುದು. ಇಲ್ಲಿಯೂ ನಿನಗೆ ಸಾಕಷ್ಟು ಕಾರ್ಯಕ್ಷೇತ್ರವು ಇದೆ ಎಂಬುದು ಕಂಡುಬಂದೀತು" ಎಂದು ಬರೆದರು.

ರಾಮರಾಯರೆಂದರೆ ಲಕ್ಷ್ಮಣರಾಯರಿಗೆ ಪ್ರಾಣ. ಲಕ್ಷ್ಮಣರಾಯರನ್ನು ಮನೆಯಲ್ಲಿ ಇಟ್ಟುಕೊಂಡು ಸಾಕಿ ಸಲಹಿದವರು. ಅವರ ವಿದ್ಯಾಭ್ಯಾಸವನ್ನು ಅವರೇ ಮಾಡಿಸಿದವರು. ಅವರು ತಮ್ಮನನ್ನು ಬಹಳ ಪ್ರೀತಿಸುತ್ತಿದ್ದರು. ಲಕ್ಷ್ಮಣರಾಯನ ಒಲವು ಓದಿನ ಕಡೆಗೆ ಇಲ್ಲವೆಂದು ಅವರು ಸಿಟ್ಟಾಗಲಿಲ್ಲ. ಯಾರ ಮನಸ್ಸು ಯಾವ ವಿಷಯದಲ್ಲಿ ಓಡುವದೋ ಅದನ್ನೇ ಅಭ್ಯಸಿಸಲು ಅವರಿಗೆ ಅವಕಾಶವನ್ನು ಒದಗಿಸುವದು ಶ್ರೇಯಸ್ಕರವು. ಇದನ್ನರಿತ ರಾಮರಾಯರು ಅವರಿಗೆ ಉತ್ತೇಜನ ಕೊಟ್ಟರು. ಇದರಿಂದ ಲಕ್ಷ್ಮಣರಾಯರಿಗೆ ತಮ್ಮ ಅಣ್ಣನು ತನಗೆ ನಿಜವಾದ ಕೈವಾರಿ ಎಂದೆನಿಸುವದು ಸಹಜವಾಗಿದ್ದಿತು. ಆದುದರಿಂದಲೇ ಮುಂಬಯಿಗೆ ಹೋಗುವ ಮುನ್ನ ಅಣ್ಣನ ಬೆಂಬಲವನ್ನು ಪಡೆದಿದ್ದರು.

ಅಣ್ಣನ ಪತ್ರ ಬಂದೊಡನೆಯೇ ಬೆಳಗಾವಿಗೆ ಹೊರಡುವ ನಿಶ್ಚಯವನ್ನು ಲಕ್ಷ್ಮಣರಾಯರು ಮಾಡಿದರು. ತಮ್ಮ ಗಂಟುಗದಡಿಗಳನ್ನೆಲ್ಲ ಕಟ್ಟಿದರು. ತಮಗೆ ಉಪಯುಕ್ತವೆನಿಸುವ ಯಂತ್ರಸಾಮಗ್ರಿಗಳನ್ನೆಲ್ಲ ಬೆಳಗಾವಿಗೆ ಕಳಿಸಿಕೊಟ್ಟರು. ೧೮೯೭ ರಲ್ಲಿ ಒಂದು ದಿನ ಮುಂಬಯಿಗೆ ಶರಣು ಹೊಡೆದು ಹೆಂಡತಿಯೊಡನೆ ಬೆಳಗಾವಿಗೆ ಹೊರಟರು. ಇಲ್ಲಿಗೆ ರಾಯರ ಉದ್ಯಮದಲ್ಲಿಯ ಮೊದಲನೆಯ ಅಂಕವು ಮುಗಿಯಿತು.

೫

# ದೈವವು ತೆರೆಯಿತು

ಬೆಳಗಾವಿಯಲ್ಲಿ ಕೇಳಕರ ಬಾಗಿನಲ್ಲಿ ರಾಮರಾಯರು ವಾಸಿಸುತ್ತಿದ್ದರು. ಲಕ್ಷ್ಮಣರಾಯರೂ ಅಲ್ಲಿಯೇ ಬೀಡಾರ ಮಾಡಿದರು. ಅವರು ಬಂದಂದಿನಿಂದ ಸಾಯಕಲ್ಲಿನ ಉದ್ಯೋಗಕ್ಕೆ ಕಳೆಯೇರಿತು. ಸೈನಿಕ ನಿವಾಸದಲ್ಲಿ ಒಂದು ಆಯಕಟ್ಟಿನ ಸ್ಥಳವನ್ನು ಬಾಡಿಗೆಗೆ ಹಿಡಿದು ಅಂಗಡಿಯನ್ನು ಸ್ಥಳಾಂತರಿಸಿದರು. ಆಧುನಿಕ ಪ್ರಚಾರ ತಂತ್ರದಲ್ಲಿ ಲಕ್ಷ್ಮಣರಾಯರಿಗೆ ಬಲು ವಿಶ್ವಾಸ. ಆದ್ದರಿಂದಲೇ ಅವರು ಸಾಯಕಲ್ಲುಗಳ ಹಾಗೂ ಅದರ ಬಿಡಿ ಭಾಗಗಳ ಸೂಚಿಪತ್ರ (ಕ್ಯಾಟಲಾಗ) ವನ್ನು ಕಿರ್ಲೋಸ್ಕರ ಬಂಧುಗಳ ಹೆಸರಿನಿಂದ ಮುದ್ರಿಸಿ ಪ್ರಕಟಿಸಿದರು.

ಸಾಯಕಲ್ಲಿನ ಅಂಗಡಿಯು ಬೆಳೆದು ಚನ್ನಾಗಿ ಬೇರೂರಿತು. ಆದರೆ ಲಕ್ಷ್ಮಣರಾಯರಿಗೆ ಇಷ್ಟರಿಂದ ತೃಪ್ತಿಯಿರಲಿಲ್ಲ. ಅವರ ಶಬ್ದಕೋಶದಲ್ಲಿ ಸಮಾಧಾನವೆಂಬ ಶಬ್ದವೇ ಇರಲಿಲ್ಲ. ವಿಶ್ರಾಂತಿಯಿಲ್ಲದ ಪ್ರವಾಸಿಕರು ಇವರು. ಅಂಗಡಿ ಸುಸೂತ್ರವಾಗಿ ನಡೆದೊಡನೆ ಏನಾದರೊಂದು ಹೊಸ ಉದ್ಯೋಗವನ್ನು ಪ್ರಾರಂಭಿಸಬೇಕೆಂಬ ವಿಚಾರದಲ್ಲಿ ಮಗ್ನರಾದರು. ಬೆಳಗಾವಿಯಲ್ಲಿ ಪಶ್ಚಿಮದ ಗಾಳಿಯು ಸತತ ಬೀಸುತ್ತಿದ್ದಿತು. ಊರಲ್ಲಿ ಆಗಲೂ ನಳಗಳಿರಲಿಲ್ಲ. ಈಗಲೂ ಬಾವಿಗಳಿಂದಲೇ ನೀರು ಸೇದುವರು. ಈ ಬಾವಿಗಳಿಗೆ ಪವನಚಕ್ಕಿಯನ್ನು ಜೋಡಿಸಿದರೆ, ಗಾಳಿಯಿಂದ ಅನಾಯಾಸವಾಗಿ ನೀರು ಮೇಲೆ ಬಂದು, ಮಾನವರ ಶ್ರಮವೆಲ್ಲ ಉಳಿಯುವದಲ್ಲ! ಎಂಬ ಕಲ್ಪನೆಯು ಅವರ ತಲೆಯಲ್ಲಿ ಸುಳಿಯಹತ್ತಿತು. ಪವನಚಕ್ಕಿಯ ಬಗ್ಗೆ ಆವಶ್ಯವಿದ್ದ ಸಂಗತಿಗಳನ್ನೆಲ್ಲ ಕಲೆಹಾಕಿದರು. ಅಮೇರಿಕೆಯ ಒಕ್ಕಲಿಗರು ಒಕ್ಕಲುತನಕ್ಕಾಗಿ ಈ ಯಂತ್ರಗಳನ್ನು ಹೆಚ್ಚಾಗಿ ಉಪಯೋಗಿಸುವರೆಂದು ತಿಳಿದು ಬಂದಿತು. ಈ ಪವನಚಕ್ಕಿಗಳಲ್ಲಿ ಸಮ್‌ಸನ್ ಕಂಪನಿಯ ಚಕ್ಕಿಗಳು ಹೆಚ್ಚು ಉಪಯೋಗಬೀಳುವವೆಂದು ನಿಶ್ಚಯಿಸಿ ಆ ಕಂಪನಿಯ ಎಜನ್ಸಿಯನ್ನು ದೊರಕಿಸಿದರು. ಬೆಳಗಾವಿಯ ನಿವಾಸಿಗಳಾದ ಗಿಂಡೆ, ಬಾಯಿಸ ಮೊದಲಾದ ಪ್ರಭೃತಿಗಳ ಬಂಗಲೆಗಳಲ್ಲಿಯೂ

ಬಾವಿಗಳಿಗೆ ಪವನಚಕ್ಕಿಯನ್ನು ಜೋಡಿಸಿದರು. ಅವುಗಳಲ್ಲಿ ಕೆಲವು ಈಗಲೂ ನೋಡಲು ಸಿಗುತ್ತವೆ.

ಗುಣಗ್ರಾಹಕರೂ ಇಚಲಕರಂಜಿಯ ಅಧಿಪತಿಗಳೂ ಆದ ಬಾಬಾಸಾಹೇಬ ಘೋರ್ಪಡೆಯವರ ಪರಿಚಯವು ಕೆಲ ಕಾರಣಗಳಿಂದ ಉಂಟಾಗಿದ್ದಿತು. ಅವರ ಆಮಂತ್ರಣದ ಮೇರೆಗೆ ಲಕ್ಷ್ಮಣರಾವ, ರಾಮರಾವ ಹಾಗೂ ವಾಜೀರಾವ ಗುತ್ತೀಕರ ಇವರು ಸಾಯಕಲ್ಲಿನ ಮೇಲೆ ೭೪ ಮೈಲು ಪ್ರವಾಸವನ್ನು ಮಾಡಿ ಮಾಧವಗಿರಿಗೆ ಹೋದರು. ಅಜರೆಯ ಹತ್ತಿರವಿರುವ ಮಾಧವಗಿರಿಯು ಬಾಬಾಸಾಹೇಬರ ಬೇಸಿಗೆಯ ವಿಶ್ರಾಂತಿಧಾಮ. ಇದೇ ಅವರ ಮಹಾಬಳೇಶ್ವರ. ಈ ಸಮಯದಲ್ಲಿ ಇಚಲಕರಂಜಿಯ ಊರಿಗೂ ಅರಮನೆಗೂ ಪವನಚಕ್ಕಿಯಿಂದ ನೀರು ಪೂರೈಸುವ ಯೋಜನೆಯು ರೂಪಿಸಲ್ಪಟ್ಟಿತು. ಲಕ್ಷ್ಮಣರಾಯರು ಇದ ಕ್ಕಾಗಿ ಇಚಲಕರಂಜಿಗೆ ಹೋಗಿ ನಿಂತರು. ಊರಿಗೆ ನೀರು ಪೂರೈಯಿಸಲು ಬೇಕಾಗುವ ದೊಡ್ಡ ಪವನಚಕ್ಕಿಯನ್ನು ತರಿಸಿ, ನದಿಯಲ್ಲಿ ಬುರುಜನ್ನು ಕಟ್ಟಿಸಿ, ಅದರ ಮೇಲೆ ಚಕ್ಕಿಯನ್ನು ಕೂಡಿಸಿ, ಈ ದೊಡ್ಡ ಕಾರ್ಯವನ್ನು ಪೂರ್ಣ ಮಾಡಿದರು. ಊರಲ್ಲೆಲ್ಲ ನೀರೇ ನೀರು. ಎಲ್ಲರಿಗೂ ಆನಂದ.

ಸಾಯಕಲ್ಲಿನ ಉದ್ಯೋಗಕ್ಕೆ ಪವನಚಕ್ಕಿಯ ಸಹಾಯ ದೊರೆತು, ಉದ್ಯೋಗವು ಬಲಿಯುವಷ್ಟರಲ್ಲಿ ಪ್ಲೇಗವು ಬೆಳಗಾವಿಗೂ ಕಾಲುಚಾಚಿತು. ಮೊದಲನೆಯ ತುತ್ತಿಗೆ ರಾಮರಾಯರ ಮಗನೇ ಬಲಿಯಾದನು. ಜನರು ಊರ ಹೊರಗೆ ಗುಡಿಸಲಗಳನ್ನು ಕಟ್ಟಿ ವಾಸಿಸಹತ್ತಿದರು. ಪ್ರತಿ ವರ್ಷ ಹೀಗೆ ಸ್ಥಳಾಂತರಿಸುವದಕ್ಕಿಂತ ಊರ ಹೊರಗೇ ಸ್ಥಿರವಾಗಿ ನಿಲ್ಲಬೇಕೆಂದು ಇಬ್ಬರೂ ಬಂಧುಗಳು ನಿಶ್ಚಯಿಸಿದರು. ಬೆಳಗಾವಿಯ ದಕ್ಷಿಣಕ್ಕೆ ಮೂರು ಮೈಲು ದೂರ ವಿರುವ ಶ್ರೀ ಸದಾಶಿವರಾವ ನರಗುಂದಕರರ ನಾಗಝರಿ ಎಂಬ ಬೈಲು ಪ್ರದೇಶವು ವಾಸಕ್ಕೆ ಯೋಗ್ಯವೆಂದು ನಿಶ್ಚಯಿಸಿ ಈ ಬೈಲುಪ್ರದೇಶದಲ್ಲಿ ಮೊದ ಲಿಗೆ ನಾಲ್ಕಾರು ಗುಡಿಸಲುಗಳನ್ನು ಮಾತ್ರ ಕಟ್ಟಿಸಿದರು. ಲಕ್ಷ್ಮಣರಾಯರು ರಾಮರಾಯರು ಹಾಗೂ ಅವರ ಸೋದರ ಅಳಿಯನಾದ ಬನ್ಯಾಬಾಪೂ ಜಾಂಭೇಕರ ಹಾಗೂ ಮದತನೀಸ, ಕೆ. ಕೆ. ಕುಲಕರ್ಣಿ ಈ ಕುಟುಂಬಗಳು ಅಲ್ಲಿ ವಾಸಿಸಹತ್ತಿದವು. ನೀರಿಗಾಗಿ ಎರಡು ಭಾವಿಗಳು ತೋಡಲ್ಪಟ್ಟವು. ಸುದೈವ ದಿಂದ ಸೀನೀರು ಬಿದ್ದವು. ಒಂದು ಭಾವಿಗೆ ಪವನಚಕ್ಕಿಯನ್ನು ಜೋಡಿಸಿದ್ದ ರಿಂದ ನೀರಿನ ಸೌಕರ್ಯವು ಚನ್ನಾಗಿ ಆಯಿತು. ನರಗುಂದಕರರೂ ತಮಗಾಗಿ

ಒಂದು ಗುಡಿಸಲನ್ನು ಕಟ್ಟಿಸಿಕೊಂಡರು. ರಾಮುರಾಯರು ಸೆಂಟ್ರಾಲ್ ಹೈಸ್ಕೂಲಿನ ಶಿಕ್ಷಕರಷ್ಟೇ? ಅವರನ್ನು ಕಂಡು ಅವರ ಸ್ನೇಹಿತರಾದ ಶ್ರೀ-ಮೋಹಳ್ಳಿ ಹಳಬೆ, ಮಹಿಷಿ ಮೊದಲಾದ ಶಿಕ್ಷಕರೂ ಈ ಬೈಲಿನಲ್ಲಿ ಇರಲು ಬಂದರು. ಕೆಲವು ಡಾಕ್ಟರರೂ ಗುಡಿಸಲುಗಳನ್ನು ಹಾಕಿದರು. ಹೀಗೆ ಇದಕ್ಕೆ ಹೊಸ ಊರಿನ ಸ್ವರೂಪವು ಪ್ರಾಪ್ತವಾಯಿತು.

೧೯೦೦ ರ ಸುಮಾರಿಗೆ ಕಿರ್ಲೋಸ್ಕರ ಬಂಧುಗಳ ಉದ್ಯೋಗವು ಸಾಕಷ್ಟು ಸ್ಥೈರ್ಯಗೊಂಡಿದ್ದಿತು. ಆದರೆ ಇದರಿಂದ ಲಕ್ಷ್ಮಣರಾಯರಿಗೆ ಸಮಾಧಾನವಾಗಲಿಲ್ಲ. ತಾವು ಕೇವಲ ವಿಲಾಯತಿಯ ಮಾಲುಗಳ ಏಜಂಟರಾಗುವದಕ್ಕಿಂತ ಸ್ವತಃ ಮಾಲುಗಳನ್ನು ಸಿದ್ಧಪಡಿಸಿ ಕಾರಖಾನೆದಾರರಾಗಬೇಕೆಂಬ ಹಂಬಲವು ಅವರ ಮನಸ್ಸಿನಲ್ಲಿ ಕಟೆಯಹತ್ತಿತು. ವಿಲಾಯತಿಯಿಂದ ಸಾಯಕಲ್ಲುಗಳನ್ನು ತರಿಸುವಕ್ಕಿಂತ ಅವಶ್ಯವಿರುವ ಸಾಹಿತ್ಯಗಳನ್ನು ಕೂಡಿಸಿ ನಾವೇ ಏಕೆ ಸಾಯಕಲ್ಲುಗಳನ್ನು ನಿರ್ಮಿಸಬಾರದು? ಎಂದು ವಿಚಾರಿಸಹತ್ತಿದರು. ಆ ಪ್ರಯತ್ನಕ್ಕೆ ಕೈ ಹಾಕಿ ನಾಲ್ಕು ಸೈಕಲ್ಲುಗಳನ್ನು ಸಿದ್ಧಪಡಿಸಿದರು ಕೂಡ. ಸಾಯಕಲ್ಲುಗಳನ್ನು ನಿರ್ಮಿಸುವದು ಅಶಕ್ಯವಲ್ಲದಿದ್ದರೂ ಸಾಕಷ್ಟು ಬಂಡವಲು ಇಲ್ಲದೇ ಈ ಉದ್ಯಮಕ್ಕೆ ಕೈಯಿಕ್ಕುವದು ತಪ್ಪು, ಎಂಬ ಅನುಭವವೂ ಅವರಿಗೆ ಬಂದಿತು. ಆಗ ಅವರು ತಮ್ಮ ಅಳತೆಯಲ್ಲಿರುವ ಯಾವ ಮಾಲನ್ನು ಸಿದ್ಧಪಡಿಸಬಹುದು? ಎಂಬ ಶೋಧಕ್ಕೆ ಬಿದ್ದರು.

ಪರದೇಶದ ಕಾರಖಾನೆಗಳಿಂದ ಅವರ ಮಾಲುಗಳ ಸೂಚಿಪತ್ರಿಕೆಯನ್ನು ತರಿಸುವ ಹುಚ್ಚು ಲಕ್ಷ್ಮಣರಾಯರಿಗೆ ಮೊದಲಿನಿಂದ ಇದ್ದಿತು. ಇಂತಹ ಸೂಚಿ ಪತ್ರಿಕೆಗಳಿಂದ ಮೂರು ನಾಲ್ಕು ಕಪಾಟುಗಳು ತುಂಬಿದ್ದವು. ರಾಮೂಅಣ್ಣಾ ಅವರು ಈ ಎಲ್ಲ ಪತ್ರಿಕೆಗಳ ಜಾತ್ರಿಯನ್ನು ಇಂಗ್ರೇಜಿಯಲ್ಲಿ ಸುಂದರವಾಗಿ ಮಾಡಿ ಇಟ್ಟಿದ್ದರು. ಲಕ್ಷ್ಮಣರಾಯರು ಈ ಸಂಗ್ರಹವನ್ನು ಪರೀಕ್ಷಿಸುತ್ತಿರುವಾಗ ಮೇವು ಕೊರೆಯುವ ಯಂತ್ರವು ಇವರ ದೃಷ್ಟಿಗೆ ಬಿದ್ದಿತು. ಅದು ಅವರ ಕುತೂಹಲವನ್ನು ಕೆರಳಿಸಿತು. ಅಮೇರಿಕೆಯಿಂದ ಆ ಯಂತ್ರವನ್ನು ತರಿಸಿದರು. ಯಂತ್ರವು ತೀರ ಸಾದಾ ಇದ್ದಿತು. ನಾಲ್ಕು ಕಾಲುಗಳ ಮೇಲೆ ಒಂದು ಚೌಕ ಕಟ್ಟಿಗೆಯ ಪೆಟ್ಟಿಗೆಯಿದ್ದು ಅದರ ಬಾಯಿಗೆ ಮೇಲೆ ಕೆಳಗೆ ಮಾಡಲು ಬರುವ ಚೂರಿಯಿಂದ ಕೂಡಿದ ಒಂದು ಕೈಕೋಲು (ಹ್ಯಾಂಡಲ್) ಜೋಡಿಸಲ್ಪಟ್ಟಿತ್ತು. ಈ ಯಂತ್ರಗಳಿಂದ ಕೊರೆದ ಮೇವಿನ ತುಂಡಿಗೆ ಉಪ್ಪಿನ ನೀರನ್ನು ಸಿಂಪಡಿಸಿ

ಸ್ವಲ್ಪ ಹಿಂಡಿಯನ್ನು ಬೆರಿಸಿ ದನಗಳ ಮುಂದಿಟ್ಟರೆ ಅವು ಅತ್ಯಂತ ಪ್ರೇಮದಿಂದ ತಿನ್ನುವದು ಕಂಡುಬಂದಿತು. ಆಗ ಮೇವಿನ ಬಳಿಕೆಯನ್ನು ಉಳಿಸುವ ದನಗಳ ಪೋಷಣೆಯನ್ನು ಮಾಡುವ ಉಪಯುಕ್ತವಿದ್ದ ಈ ಯಂತ್ರವನ್ನು ಮಾಡುವ ಸಂಕಲ್ಪವನ್ನು ಮಾಡಿದರು.

ಸಾಯಕಲ್ಲಿನ ಅಂಗಡಿಯಲ್ಲಿ ಮಿಟ್ಸ್ ಮತ್ತು ಮೆರಿಲಿಯು ಎರಡೂವರೆ ಅಶ್ವಶಕ್ತಿಯ ಇಂಜೀನು, ಬರ್ನಿಸ್ ಕಂಪನಿಯ ಒಂದು ಚಿಕ್ಕ ಲೇಥು, ಒಂದು ಡ್ರಿಲಿಂಗ ಯಂತ್ರ, ಒಂದು ಎಮರಿ ಗ್ರಾಯಿಂಡರ ಇಷ್ಟು ಯಂತ್ರಗಳಿದ್ದವು. ಅಂಗಡಿಯ ಹಿಂಬದಿಯ ಚಪ್ಪರದಲ್ಲಿ ಒಂದು ಭಟ್ಟಿ ಇದ್ದಿತು. ೪-೫ ಜನ ರಿಂದಲೇ ಈ ಎಲ್ಲ ಕಾರ್ಯವು ಸಾಗುತ್ತಿತ್ತು. ಇಷ್ಟೇ ಸಲಕರಣೆಗಳಿಂದ ರಾಯರು ಮೇವು ಕೊರೆಯುವ ಯಂತ್ರದ ಕಾರ್ಯವನ್ನು ಪ್ರಾರಂಭಿಸಿದರು. ಕಟ್ಟಿಗೆಯ ಬದಲು ತಗಡು ಮತ್ತು ತ್ರಿಕೋನಾಕೃತಿಯ ಕಬ್ಬಿಣಗಳನ್ನು ಉಪ-ಯೋಗಿಸಿದರು. ಬೀಡಿನ ಕೈಕೋಲುಗಳನ್ನು ಮುಂಬಯಿಯಿಂದ ಎರಕ ಹೊಯಿಸಿ ತರಿಸಿದರು. ಹೀಗೆ ೧೯೦೧ ರಲ್ಲಿ "ಕಿರ್ಲೋಸ್ಕರ ಬಂಧು"ಗಳ ಮೇವು ಕೊರೆಯುವ ಮೊದಲನೆಯ ಯಂತ್ರವು ಹೊರಬಿದ್ದಿತು. ವೃತ್ತಪತ್ರ ಗಳಲ್ಲಿ ಅದರ ಜಾಹೀರಾತು ಮೆರೆಯಹತ್ತಿತು. ಯಂತ್ರದ ಬೆಲೆಯು ೧೦-೫-೦ ಮಾತ್ರ. ಕಿರ್ಲೋಸ್ಕರ ಬಂಧುಗಳ ಕಾರಖಾನೆಯ ಉಗಮವು ಹೀಗೆ ತೀರ ಚಿಕ್ಕ ಪ್ರಮಾಣದಲ್ಲಿ ಪ್ರಾರಂಭವಾಯಿತು.

ರಾಯರ ಈ ಪ್ರಯತ್ನವು ವ್ಯರ್ಥ ಹೋಗಲಿಲ್ಲ. ಮೊದಮೊದಲು ರೈತರು ಈ ಯಂತ್ರವನ್ನು ಉಪಯೋಗಿಸಲು ಉತ್ಸುಕತೆ ತೋರಲಿಲ್ಲ. ಈ ಯಂತ್ರದಿಂದ ಮೇವಿನ ಉಳಿತಾಯವಾಗುವದೆಂದು ಪ್ರತ್ಯಕ್ಷ ಕಂಡರೂ ಅದನ್ನು ಬಳಿಸಲು ಸ್ವಲ್ಪ ಶ್ರಮವಾಗುತ್ತಿದ್ದುದರಿಂದ ಸೋಮಾರಿಗಳಿಗೆ ಇದು ಹೇಗೆ ಸೇರಬೇಕು? ಆದರೆ ಮೆಲ್ಲಮೆಲ್ಲನೆ ಈ ಯಂತ್ರಕ್ಕೆ ಬೇಡಿಕೆಗಳು ಬರಹತ್ತಿದವು.

ಈ ಸಮಯದಲ್ಲಿ ಲಕ್ಷ್ಮಣರಾಯರ ಮನಸ್ಸನ್ನು ಬೇರೆಡೆಗೆ ಎಳೆಯುವ ಘಟನೆಯೊಂದು ಸಂಭವಿಸಿತು. ಔಂಧದ ಶ್ರೀಮಂತ ಬಾಳಾಸಾಹೇಬರಿಂದ ಅಕಸ್ಮಿಕವಾಗಿ ಕೆಳಗಿನ ಓಲೆಯೊಂದು ಬಂದಿತು.

"ಔಂಧದಲ್ಲಿ ಕಟ್ಟಲ್ಪಡುತ್ತಿರುವ ಯಮಾಯಿ ದೇವರ ಗುಡಿಯ ಕಳಸಕ್ಕೆ ಬೆಳ್ಳಿಯ ಕಲಾಯಿ ಮಾಡುವ ಕಾರ್ಯವನ್ನು-ತಾವು ವಹಿಸಬಹುದೇ?" ಎಂದು ವಿಚಾರಿಸಿದ್ದರು. ಲಕ್ಷ್ಮಣರಾಯರು ವಿದ್ಯುತ್ತಿನಿಂದ ಕಲಾಯಿ ಮಾಡುವದನ್ನು

ಮೊದಲೇ ಅರಿತಿದ್ದ ಮೂಲಕ ಬಾಳಾಸಾಹೇಬರ ಕರೆಯನ್ನು ಆನಂದದಿಂದ ಒಪ್ಪಿಕೊಂಡರು. ಮತ್ತು ಅದನ್ನು ಒಳ್ಳೆ ಸುಂದರ ರೀತಿಯಿಂದ ಮಾಡಿ ತೋರಿಸಿದರು.

ಈ ಕೆಲಸ ಮುಗಿಸಿ ಬೆಳಗಾವಿಗೆ ಬರುವಷ್ಟರಲ್ಲಿಯೇ ಶ್ರೀಮಂತರಿಂದ ಇನ್ನೊಂದು ಪತ್ರವು ಬಂದಿತು. "ಯಮಾಯಿ ದೇವಸ್ಥಾನದ ಎದುರಿಗೆ ಏಳೆಂಟು ನೂರು ಜನರು ಕೂಡುವ ಒಂದು ದೊಡ್ಡ ಮಂಟಪವನ್ನು ಕಟ್ಟಿಸ ಬೇಕೆಂದು ದೊಡ್ಡ ಮಹಾರಾಜರು ಇಚ್ಛಿಸುತ್ತಿದ್ದಾರೆ. ಆ ಕಟ್ಟಡದ ಗುತ್ತಿಗೆ (ಕಾಂಟ್ರ್ಯಾಕ್ಟ) ಹಿಡಿಯುವ ಇಚ್ಛೆಯು ತಮಗೆ ಇದ್ದರೆ ಅದು ತಮಗೇ ಸಿಗಬಹುದು" ಎಂದು ಸೂಚಿಸಿದ್ದರು.

ಈ ದೊಡ್ಡ ಸುಸಂಧಿಯು ತಾನಾಗಿಯೇ ಬಂದಿತ್ತು. ಇದು ಅವರ ಕರ್ತೃತ್ವಶಕ್ತಿಗೆ ಆಹ್ವಾನವೂ ಆಗಿದ್ದಿತು. ರಾಯರಿಗೆ ಇಂತಹ ಕಾರ್ಯದ ಅನುಭವವೂ ಇರಲಿಲ್ಲ. ಅವರು ಚಿಕ್ಕ ಮನೆಯನ್ನು ಕೂಡ ಕಟ್ಟಿರಲಿಲ್ಲ. ಇದೂ ಅಲ್ಲದೆ ಇಂತಹ ದೊಡ್ಡ ಗುತ್ತಿಗೆ ಹಿಡಿಯಲು ಹಣವು ಎಲ್ಲಿಂದ ಬರಬೇಕು? ಹೀಗಿದ್ದರೂ ರಾಯರು ಬಹಳ ವಿಚಾರ ಮಾಡಿ ಮಂಟಪದ ನಕ್ಷೆಯನ್ನೂ ಅದಕ್ಕೆ ಬೇಕಾಗುವ ಹಣದ ಅಂದಾಜನ್ನೂ ಸಿದ್ಧಪಡಿಸಿ ಔಂಧಕ್ಕೆ ಕಳಿಸಿಕೊಟ್ಟರು. ಅವು ಮುಟ್ಟಿದೊಡನೆ ಬಾಳಾಸಾಹೇಬರು "ನೀವು ಕಳುಹಿಸಿದ ನಕ್ಷೆಯು ಮಹಾರಾಜರ ಮನಸ್ಸಿಗೆ ಬಂದಿದೆ. ನೀವು ಮಾಡಿದ ಅಂದಾಜಿನಂತೆ ನಿಮಗೆ ಕೆಲಸದ ಗುತ್ತಿಗೆ ಕೊಡಲು ಮಹಾರಾಜರು ಮನಸ್ಸು ಮಾಡಿದ್ದಾರೆ. ಈ ಕೆಲಸವನ್ನು ನೀವು ಉತ್ಕೃಷ್ಟ ರೀತಿಯಿಂದ ಪೂರ್ಣ ಮಾಡುವಿರೆಂದು ನನಗೆ ನಂಬಿಗೆಯಿದೆ. ಈ ಕಾರ್ಯವನ್ನು ಪ್ರಾರಂಭಿಸುವದಕ್ಕೆ ೧೭,೦೦೦ ರೂಪಾಯಿಗಳನ್ನು ಮುಂಗಡ ಕೇಳಿದ್ದೀರಿ. ಈ ವಿಷಯದಲ್ಲಿ ನೀವು ಮೂವರೂ ಬಂಧುಗಳ ಭೆಟ್ಟಿಯಾದ ನಂತರವೇ ನಿರ್ಣಯ ತೆಗೆದುಕೊಳ್ಳಲಾಗುವದೆಂದು ಮಹಾರಾಜರು ಹೇಳಹತ್ತಿದ್ದಾರೆ. ಆದುದರಿಂದ ನೀವು ಮೂವರೂ ಕಿನ್ನಾಯಿಗೆ ಬರಬೇಕು" ಎಂದು ಬರೆದಿದ್ದರು.

ರಾಮರಾವ, ವಾಸುದೇವರಾವ, ಮತ್ತು ಲಕ್ಷ್ಮಣರಾವ ಈ ಮೂವರೂ ಬಂಧುಗಳು ಕನ್ನಾಯಿಗೆ ಹೋಗಿ ಶ್ರೀರಾಮಮಂದಿರದಲ್ಲಿ ಮಹಾರಾಜರನ್ನು ಕಂಡು ವಂದಿಸಿ, ಎದುರಿಗೆ ನಿಂತುಕೊಂಡರು. ಮಹಾರಾಜರು-ತಮ್ಮನ್ನು ಏನಾದರೂ ಕೇಳಬಹುದೆಂದು ಅವರು ಭಾವಿಸಿದ್ದರು. ಆದರೆ ಮಹಾರಾಜರು

ಚಕಾರ ಶಬ್ದವನ್ನೂ ಕೂಡ ಆಡಲಿಲ್ಲ. ಕ್ಷಣ ಹೊತ್ತು ಮೂವರನ್ನು ದಿಟ್ಟಿಸಿ ನೋಡಿದರು ಮಾತ್ರ. ಇದೇ ಅವರ ಪರೀಕ್ಷೆ. ನಂತರ ಗುತ್ತಿಗೆ ಪತ್ರಕ್ಕೂ ೧೨೦೦೦ ರೂಪಾಯಿಯ ಚೆಕ್ಕಿಗೂ ಅಂಕಿತಹಾಕಿ, ಅವರಿಗೆ ಕೊಟ್ಟು ಅಪ್ಪಣೆಯನ್ನಿತ್ತರು.

ಲಕ್ಷ್ಮಣರಾಯರು ಕೂಡಲೇ ಉದ್ಯೋಗಕ್ಕೆ ಹತ್ತಿದರು. ರಹೀಮತ್‌ಪೂರ ಸ್ಟೇಶನ್ನಿನಿಂದ ೧೩ ಮೈಲು ದೂರವಿರುವ ಔಂಧದಂಥ ಕಾಡುದಾರಿಯ ಸ್ಥಳಕ್ಕೆ ದೊಡ್ಡ ದೊಡ್ಡ ತೊಲೆ, ಕಬ್ಬಿಣದ ಸಾಮಾನು, ಕಲ್ಲು, ಸುಣ್ಣ ಮೊದಲಾದವುಗಳನ್ನು ಸಾಗಿಸುವದು ಸುಲಭವೇ? ಬಡಿಗ, ಉಪ್ಪಾರ, ಕಮ್ಮಾರ, ವಡ್ಡರು ಇವರನ್ನೆಲ್ಲ ಕಲೆಹಾಕಿ ಮಂಟಪವನ್ನು ಹೇಗೆ ಸಿದ್ಧಪಡಿಸಿದ ರೆಂಬುದನ್ನು ಬರೆಯಲು ಒಂದು ಪ್ರಕರಣವೇ ಬೇಕು. ಈ ಕೆಲಸಕ್ಕಾಗಿ ಲಕ್ಷ್ಮಣರಾಯರು ಔಂಧದಲ್ಲಿ ಮೂರು ವರ್ಷ ನಿಲ್ಲಬೇಕಾಯಿತು. ೭೫' ಉದ್ದ ೫೦' ಅಗಲದ ಈ ಭವ್ಯವಾದ ಮಂಟಪವು ಔಂಧಕ್ಕೆ ಭೂಷಣವೂ ಆಕರ್ಷಕವೂ ಆಗಿದೆ. ದೊಡ್ಡ ದೊಡ್ಡ ಸಮಾರಂಭಗಳು, ಉತ್ಸವಗಳು, ರಾಜಕೂಟಗಳು ಎಲ್ಲವೂ ಈ ಮಂಟಪದಲ್ಲಿಯೇ ನಡೆಯುತ್ತಿದವು.

ಈ ಕಾರ್ಯವು ಯಶಸ್ವಿಯಾಗಿ ಕೊನೆಗೊಂಡ ಬಗ್ಗೆ ಲಕ್ಷ್ಮಣರಾಯರಿಗೆ ಮನಸ್ಸು ಬಹು ಸಮಾಧಾನಗೊಂಡಿತು. ಆದರೆ ಇದನ್ನು ನೋಡಲು ಹಿರಿಯ ಮಹಾರಾಜರು ಜೀವಂತವಿರಲ್ಲ. ಈ ಮಂಟಪದ ನೆವದಿಂದ ಬಾಳಾಸಾಹೇಬ ಹಾಗೂ ಲಕ್ಷ್ಮಣರಾಯರ ಗೆಳೆತನ, ವಿಶ್ವಾಸ, ಆತ್ಮೀಯತೆಗಳು ಬಹಳ ಗಾಢವಾಗಿ ಬೆಳೆದವು. ಲಕ್ಷ್ಮಣರಾಯರು ಕೈಕೊಂಡ ಮೊದಲನೆಯ ಗುತ್ತಿಗೆಯ ಕೆಲಸವಾದರೂ ಯೋಗ್ಯ ಲಾಭದಾಯಕವಾಯಿತು. ಅವರ ಭಾವೀ ಯೋಜನೆಗೆ ಇದ್ದ ಹಣದ ಅವಶ್ಯಕತೆಯನ್ನು ಇದು ಕೆಲಮಟ್ಟಿಗೆ ಪೂರೈಸಿತು.

ಔಂಧದಲ್ಲಿರುವಾಗ ಲಕ್ಷ್ಮಣರಾಯರು ಪ್ರತಿದಿನ ಭಕ್ತಿಯಿಂದ ಯಮಾಯಿಯ (ಶಕ್ತಿಯ ಒಂದು ರೂಪ) ದರ್ಶನ ತೆಗೆದುಕೊಳ್ಳುತ್ತಿದ್ದರು. ಅವರ ಭಕ್ತಿಗೆ ದೇವಿಯು ಪ್ರಸನ್ನಳಾಗಿ ಊರಿಗೆ ಮರಳುವಾಗ ಲಕ್ಷ್ಮಣರಾಯರಿಗೆ ವರವನ್ನು ಕೊಟ್ಟಂತಾಯಿತು. ಬರಿಗೈಯಿಂದ ಬಂದ ಲಕ್ಷ್ಮಣರಾಯರು ಐಶ್ವರ್ಯದಿಂದ ಕೂಡಿ ಬೆಳಗಾವಿಗೆ ಮರಳಿದರು.

೬

# ಕಬ್ಬಿಣ ರಂಟೆಯ ಜನನ

ಔಂಧದಿಂದ ಮರಳಿದ ಬಳಿಕ ಮೊದಲಿನಂತೆ ಸಾಯಕಲ್ಲಿನ ವ್ಯಾಪಾರದಲ್ಲಿ ಮಗ್ನರಾದರು. ಅಂಗಡಿಯ ಹಿಂಬದಿಯಲ್ಲಿಯೇ ಮೇವು ಕೊರೆಯುವ ಒಂದು ಚಿಕ್ಕ ಕಾರಖಾನೆಯು ಇದ್ದಿತು. ಕಿರ್ಲೋಸ್ಕರ ಬಂಧುಗಳ ವ್ಯಾಪಾರವು ಹೀಗೆ ಇಬ್ಬಗೆಯಾಗಿ ಸಾಗಿತ್ತು. ಆದರೆ ಕೇವಲ ವ್ಯಾಪಾರವಷ್ಟೇ ಅವರಿಗೆ ಸೇರಲಿಲ್ಲ. ಕಾರಖಾನೆದಾರರಾಗಲು ಅವರು ಬಯಸುತ್ತಿದ್ದರು. ಅವರು ಅನುಕೂಲ ಪರಿಸ್ಥಿತಿ ಒದಗಿದೊಡನೆಯೇ ಸಾಯಕಲ್ಲಿನ ಉದ್ಯೋಗವನ್ನು ಬದಿಗಿರಿಸಿ, ಮೇವು ಕೊರೆಯುವ ಯಂತ್ರದ ಜೊತೆಗೆ ರೈತನಿಗೆ ಉಪಯುಕ್ತವಾಗುವ ಇನ್ನೊಂದು ಸಾಧನವನ್ನು ನಿರ್ಮಿಸುವ ಕಾರ್ಯಕ್ಕೆ ಕೈ ಹಾಕಬೇಕೆಂದು ಯೋಚಿಸಹತ್ತಿದರು. ಕಾಕತಾಲೀ ನ್ಯಾಯದಿಂದ ಬೆಳಗಾವಿಯ ಶ್ರೀ ನಾನಾ ದೇವಲರು ಅಂಗಡಿಯನ್ನು ಕೊಳ್ಳಲು ಮುಂದೆ ಬಂದರು. ೧೯೦೩ ರಲ್ಲಿ ೩೦೦೦ ರೂಪಾಯಿಗಳಿಗೆ ಸಾಯಕಲ್ಲಿನ ಅಂಗಡಿಯನ್ನು ಮಾರಿ ತಮ್ಮ ಮುಂದಿನ ಕಾರ್ಯಕ್ಕೆ ಪ್ರವೃತ್ತರಾದರು.

ಭಾರತವು ಕೃಷಿಪ್ರಧಾನವಾದ ದೇಶ. ರೈತರಿಗೆ ಉಪಯುಕ್ತ ಹಾಗೂ ಲಾಭದಾಯಕವಾದ ಒಂದು ಸಾಧನವನ್ನು ಒದಗಿಸಿಕೊಟ್ಟರೆ, ಅದಕ್ಕೆ ಬೇಡಿಕೆಯು ತಾನಾಗಿಯೇ ಬರುವದೆಂದು ಲಕ್ಷ್ಮಣರಾಯರ ಎಣಿಕೆ, ಇಂತಹ ಯಾವ ವಸ್ತುವನ್ನು ನಿರ್ಮಿಸಲು ಸಾಧ್ಯ? ಎಂದು ದೀರ್ಘ ವಿಚಾರ ಮಾಡಿ ಕಬ್ಬಿಣದ ರಂಟೆಯನ್ನು ನಿರ್ಮಿಸುವ ನಿಶ್ಚಯ ಮಾಡಿದರು.

"ಶ್ರೇಯಾಂಸಿ ಬಹು ವಿಘ್ನಾನಿ" ಎಂಬಂತೆ ಯಾವುದೇ ಕ್ಷೇತ್ರದಲ್ಲಿ ಯಶ ದೊರಕಿಸಲು ಅನೇಕ ಸಂಕಟಗಳನ್ನು ಎದುರಿಸಬೇಕಾಗುತ್ತದೆ. ಯಶದ ಬಗೆಮವು ಕೂಡಾ ಅವರ ಮನಸ್ಸಿನಲ್ಲಿ ಸ್ಫುರಿಸಿದ ಸೂಕ್ಷ್ಮ ಕಲ್ಪನೆಯಲ್ಲಿಯೇ ಇರುತ್ತದೆಂಬುದೂ ಅಷ್ಟೇ ಸತ್ಯ. ಈ ಕಲ್ಪನೆಯೇ ಯಶದ ಬೀಜವು. ವ್ಯಕ್ತಿ ಹಾಗೂ ಸಮಾಜದಲ್ಲಿ ಸುಧಾರಣೆಯಾಗಬೇಕೆಂದು ಅಪೇಕ್ಷಿಸುತ್ತಿದ್ದರೆ ಇಂತಹ ನವ ಕಲ್ಪನೆಗಳಿಗೆ ಸಮಾಜದಲ್ಲಿ ಸ್ವಾಗತ ದೊರೆಯಬೇಕು. ತುಳಿದ ಧಾರಿ

ಯನ್ನೇ ತುಳಿಯಬೇಕೆಂಬ ಸಾಮಾಜಿಕ ಪ್ರವೃತ್ತಿಯು ನವಕಲ್ಪನೆಯ ತರುಣರನ್ನು ಎದೆಗುಂದಿಸುವದು. ಇದರಿಂದ ಸಮಾಜಕ್ಕೆ ಹಾನಿ. ಸ್ವತಂತ್ರ ವಿಚಾರ ಮಾಡಲು, ಹೊಸ ಕಲ್ಪನೆಗಳನ್ನು ಜೀವನದಲ್ಲಿ ತರಲು ನಾವು ಅಂಜುತ್ತಿರುವದೇ ನಮ್ಮ ದೇಶವು ಹಿಂದುಳಿಯಲು ಕಾರಣ.

ಕಬ್ಬಿಣ ರಂಟೆಯು ಲಕ್ಷ್ಮಣರಾಯರ ಹೊಸ ಕಲ್ಪನೆ. ಈ ಕಬ್ಬಿಣ ರಂಟೆ ಹೊರಡುವ ಮುನ್ನ ಕಟ್ಟಿಗೆಯ ರಂಟೆಯೇ ನಮ್ಮ ರೈತನ ಒಕ್ಕಲತನದ ಮುಖ್ಯ ಸಾಧನ. ಅಷ್ಟೇಕೆ ಭೂಮಿಯಿಂದ ಜನ್ಮತಾಳಿದ ಜಗನ್ಮಾತೆಯಾದ ಜಾನಕಿಯ ಕಾಲಕ್ಕಿದ್ದ ನೇಗಿಲವೇ ಈಗಲೂ ನಡೆದು ಬಂದಿವೆ. ಈ ಭಾರವಾದ ನೇಗಿಲವನ್ನು ಹೊಡೆಯಲು ಬಲವುಳ್ಳ ಎತ್ತುಗಳೇ ಬೇಕು. ಹೊಲದಲ್ಲಿಯ ಕರಿಕೆ ಕಂಟಿಗಳೆಲ್ಲವೂ ಹೋಗಿ, ಹೊಲವು ಹಸನಾಗಬೇಕಾದರೆ ಉದ್ದ ಹಾಗೂ ಅಡ್ಡ ನೇಗಿಲು ಹೊಡೆಯಬೇಕಾಗುವದು. ಇದರಿಂದ ಒಕ್ಕಲಿಗನಿಗೂ ಕಷ್ಟ; ದನಗಳಿಗೂ ಶ್ರಮ. ಅಲ್ಲದೆ ಈ ರಂಟೆಗಳಾದರೂ ಸಾಕಷ್ಟು ಸಿಗುವವೆನ್ನಬೇಕೆ? ಅದೂ ಇಲ್ಲ. ರೈತನಿಗೆ ರಂಟೆಯನ್ನು ಮಾಡಿಸಲು ಸಾಕು ಬೇಕಾಗುತ್ತದೆ.

ಪರದೇಶಗಳಲ್ಲಿ ಸುಧಾರಿಸಿದ ಒಕ್ಕಲುತನಕ್ಕೆ ಉಪಯೋಗಿಸುತ್ತಿರುವ ನೇಗಿಲುಗಳ ಬಗ್ಗೆಯೂ ಭೂಸುಧಾರಣೆಯ ಬಗ್ಗೆಯೂ ಶಕ್ಯವಿದ್ದ ಎಲ್ಲ ಸಂಗತಿಗಳನ್ನು ರಾಯರು ಕಲೆಹಾಕಿದರು. ಈ ಸಮಯದಲ್ಲಿ ಸರಕಾರದವರು ವಿಲಾಯತಿಯಿಂದ ಕೆಲವು ಕಬ್ಬಿಣದ ರಂಟೆಗಳನ್ನು ತರಿಸಿ, ಅವು ಈ ದೇಶದಲ್ಲಿ ಎಷ್ಟರಮಟ್ಟಿಗೆ ಉಪಯೋಗ ಬೀಳುವವೆಂಬ ಬಗ್ಗೆ ಪ್ರಯೋಗ ನಡೆಸಿದ್ದರು. ಶ್ರೀ ಮಲ್ಹಾರ ಲಿಂಗೋ ಕುಲಕರ್ಣಿಯವರು ಈ ಖಾತೆಯ ವರಿಷ್ಠರಾಗಿದ್ದರು. ಲಕ್ಷ್ಮಣರಾಯರನ್ನು ಎತ್ತಿ ಹಿಡಿಯುವವರಲ್ಲಿ ಅವರೂ ಒಬ್ಬರು. ಲಕ್ಷ್ಮಣರಾಯರು ಅವರೊಡನೆ ಸಾಕಷ್ಟು ಚರ್ಚಿಸಿ, ಯಾವ ಬಗೆಯ ರಂಟೆಯನ್ನು ನಿರ್ಮಿಸಬೇಕೆಂಬುದನ್ನು ಗೊತ್ತುಪಡಿಸಿ, ಅಂತಹ ಒಂದು ಮಾದರಿಯ ರಂಟೆಯನ್ನು ವಿಲಾಯತಿಯಿಂದ ತರಿಸಿದರು.

ಈ ರಂಟೆಯ ಕುಳ ಹಾಗೂ ಅದರ ಹಿಂಭಾಗಗಳು ಬೀಡಿನವು. ಉಳಿದ ಭಾಗಗಳು ಕಬ್ಬಿಣದವು ಇದ್ದವು. ರಂಟೆಯನ್ನು ಮಾಡಲು ಬೀಡಿನ ಭಟ್ಟಿಯು ಅವಶ್ಯವಿದ್ದಿತು. ಅದನ್ನು ಮೊದಲು ಕಟ್ಟಬೇಕಾಗಿದ್ದಿತು. "ಸನ್ಯಾಸಿಯ ಮದುವೆಗೆ ಚಂಡಿಕೆಯಿಂದ ಸಿದ್ಧ ಮಾಡಬೇಕಲ್ಲವೇ?" ಲಕ್ಷ್ಮಣರಾಯರು



ನಾಲ್ವರು ಅಣ್ಣತಮ್ಮಂದಿರು.

ನಿಂತವರುः— ೧. ಲಕ್ಷ್ಮಣರಾಯರು. ೨. ಡಾ. ಗಂಗಾಧರಪಂತ.

ಕುಳಿತವರು — ೧. ಡಾ. ವಾಸುದೇವಪಂತ. ೨. ರಾಮುಅಣ್ಣಾ.



ಕಿರ್ಲೋಸ್ಕರರ ಬಳಗ (೧೯೦೩)

ತಮ್ಮ ಗುಡಿಸಲಿನ ಹತ್ತಿರದ ಹೊಲದಲ್ಲಿ ಒಂದು ಸಣ್ಣ ಭಟ್ಟಿಯನ್ನು ಕಟ್ಟಿದರು. ಲೋಂಡಾದಿಂದ ಎರಕ ಹೊಯ್ಯುವ ಉಸುಕನ್ನು ಮತ್ತು ಅಗ್ನಿಶ್ಯಾಮಕ ಮಣ್ಣನ್ನು ತಂದರು. ೪ ಜೀಲ ಶುದ್ಧ ಕಲ್ಲಿದ್ದಲಿಯನ್ನು ಸಂಗ್ರಹಿಸಿದರು. ಬೀಡು ಕರಗಿಸುವ ಕೆಲಸಕ್ಕೆ ಸುರುವಾಯಿತು. ಆದರೆ ಅನುಭವವು ಯಾರಿಗಿದ್ದಿತು? ಅದರಲ್ಲಿಯೂ ಬೀಡಿನ ಭಟ್ಟಿಯು ಸೂಕ್ಷ್ಮ ಹೆಣ್ಣಿನಂತೆ. ಪಾತ್ರೆಯಲ್ಲಿ ರಸವನ್ನು ಸರಿಯಾಗಿಡುವದು ಬಹು ಕಷ್ಟ. ಗಾಳಿ ಸ್ವಲ್ಪ ಕಡಿಮೆಯಾದರೆ ಇಲ್ಲವೆ ರಸ ತೆಗೆಯಲು ತಡವಾದರೆ ಅದು ಕೆಟ್ಟಿತೆಂದೇ ತಿಳಿಯಬೇಕು. ಆದರೆ ಲಕ್ಷ್ಮಣರಾಯರು ಇದಕ್ಕೆ ಎದೆಗುಂದಲಿಲ್ಲ. ಮೊದಲಿನ ಸೋಲುಗಳಿಗೆ ಬಗ್ಗಲಿಲ್ಲ. ಭಟ್ಟಿಯ ಬೆನ್ನೂ ಬಿಡಲಿಲ್ಲ. ಆಗುವ ತಪ್ಪುಗಳನ್ನೆಲ್ಲ ಅಮೇರಿಕೆಯ "ಫೌಂಡ್ರಿ" ಪತ್ರಿಕೆಯ ಪಾರಾಯಣದಿಂದ ತಪ್ಪಿಸಿದರು. ಕೊನೆಗೊಮ್ಮೆ ಮನಸ್ಸಿಗೊಪ್ಪುವಂತೆ ರಂಟೆಯ ಭಾಗಗಳು ಸಿದ್ಧವಾಗಿ ಹೊರಬಿದ್ದಾಗ ಮಾತ್ರ ಅವರ ಮನಸ್ಸಿಗೆ ಸಮಾಧಾನವಾಯಿತು.

ತಮ್ಮ ಚಿಕ್ಕ ಕಾರಖಾನೆಯಲ್ಲಿಯೇ ಸಿದ್ಧವಾದ ಮೊದಲಿನ ಆರು ರಂಟೆಗಳನ್ನೆಲ್ಲ ಜೋಡಿಸಿ, ಬಣ್ಣ ಹಚ್ಚಿ ಸಿದ್ಧವಾದೊಡನೆಯೇ 'ಕೇಸರಿ' ಹಾಗೂ 'ಜ್ಞಾನಪ್ರಕಾಶ'ಗಳಲ್ಲಿ ಜಾಹೀರಾತು ಪ್ರಕಾಶಿಸಹತ್ತಿತು.

ಆದರೆ ಈ ರಂಟೆಗಳು ಕಾರಖಾನೆಯಿಂದ ಹೊರಬೀಳುವ ಲಕ್ಷಣಗಳೇ ಕಾಣಲಿಲ್ಲ. ಗಿರಾಕಿಗಳ ಸುಳಿವೇ ಇಲ್ಲ. ಬೆಲೆಯಿಲ್ಲದೇ ಪ್ರಯೋಗಕ್ಕೂ ಕೂಡ ಯಾರೂ ಮುಂದೆ ಬರಲಿಲ್ಲ. ಆಗ್ರಹದಿಂದ ಯಾರನ್ನಾದರೂ ಕರೆತಂದು ರಂಟೆಯನ್ನು ತೋರಿಸಿದರೆ, "ರಾಯರೇ ನಮ್ಮಂತಹರಿಗೆ ಇದು ಉಪಯೋಗವಿಲ್ಲ. ನಮ್ಮ ಅಜ್ಜ ಮುತ್ತಂದಿರು ಎಂದಾದರೂ ಇಂತಹ ರಂಟೆಯಿಂದ ಭೂಮಿಯಲ್ಲಿ ವಿಷ ಹಬ್ಬೀತು. ಇಲ್ಲವೆ ದನಗಳ ಪ್ರಾಣವಾದರೂ ಹೋದೀತು" ಎಂದು ಅನ್ನುತ್ತಿದ್ದರು. ಈ ಕಾಡು ಕಲ್ಪನೆಗಳನ್ನು ಹೇಗೆ ದೂರ ಮಾಡಬೇಕೆಂಬುದೇ ದೊಡ್ಡ ಪ್ರಶ್ನೆಯಾಯಿತು.

ಇಷ್ಟರಲ್ಲಿಯೇ ಇವರ ಹೊಲದ ಹತ್ತಿರವೇ ಮೈಲೀ ರಸವನ್ನೇ ಸಿದ್ಧಪಡಿಸುವ (ವ್ಹ್ಯಾಕ್ಸಿನ್ ಇನ್‌ಸ್ಟಿಟ್ಯೂಟ್) ಕೇಂದ್ರ ಸ್ಥಾಪಿಸಬೇಕೆಂದು ಸರಕಾರವು ನಿರ್ಧರಿಸಿತು. ಅದರ ವ್ಯವಸ್ಥಾಪಕರಾದ ಮಿಸ್ಟರ ಹಚಿನಸನ್ನರು ಉದಾರ ಮನಸ್ಸಿನವರು. ಲಕ್ಷ್ಮಣರಾಯರ ಕಲ್ಪಕತೆ ಹಾಗೂ ಕಾರ್ಯನಿಷ್ಠೆಗಳ ಬಗೆಗೆ ಅವರಲ್ಲಿ

ಘಿಟ್ಟೆ ಆದರವಿತ್ತು. ಅವನಿಗೆ ಆಕಳುಗಳನ್ನು ಮಲಗಿಸಲು ಕಬ್ಬಿಣದ ಮೇಜು ಗಳು, ರಸ ತೆಗೆಯಲು ಹಾಗು ಚುಚ್ಚಲು ಬೇಕಾಗುವ ಶಸ್ತ್ರಗಳೂ ಮತ್ತು ಕಟ್ಟಡಗಳಿಗೆ ಬೇಕಾಗುವ ವಸ್ತುಗಳೂ ಸಂಸ್ಥೆಗಾಗಿ ಬೇಕಾಗಿದ್ದವು. ಈ ವಸ್ತು ಗಳನ್ನೆಲ್ಲ ಪೂರೈಸುವ ಕೆಲಸವನ್ನು ಲಕ್ಷ್ಮಣರಾಯರು ವಹಿಸಿಕೊಂಡರು. ಅವರಿಂದ ಕಾರಖಾನೆಗೆ ತಾತ್ಪೂರ್ತಿಕ ಆರ್ಥಿಕ ಸಹಾಯವಾಯಿತು. ಆದರೆ ಕಾರಖಾನೆ ಚಿಕ್ಕದಾದರೂ ಸಾಕಷ್ಟು ಭಂಡವಲು ಇಲ್ಲದೆ ದೈನಂದಿನ ಜೀವನ ವನ್ನು ಸಾಗಿಸುವದೆಂತು ? ಲಕ್ಷ್ಮಣರಾಯರ ಭಂಡವಲು ಸಂಪುಷ್ಟಕ್ಕೆ ಬಂದಿತ್ತು. ಆಗ ಅವರು ಬಾಂಬೆ ಬ್ಯಾಂಕಿಂಗ ಕಾರ್ಪೋರೇಶನಕ್ಕೆ ಹತ್ತು ಸಹಸ್ರ ರೂಪಾಯಿ ಸಾಲವನ್ನು ಕೇಳಿದರು. ಜಾಮೀನಿನ ಅಭಾವದ ಮೂಲಕ ಆ ಪ್ರಯತ್ನವು ವ್ಯರ್ಥವಾಯಿತು.

ಲಕ್ಷ್ಮಣರಾಯರು ಹೀಗೆ ಚಿಂತೆಯಲ್ಲಿದ್ದಾಗ ಒಂದು ಸೋಜಿಗ ನಡೆ ಯಿತು. ಒಬ್ಬರು ಕಾರಖಾನೆಗೆ ಬಂದು "ರಾಯರೇ, ನಾನು ಇಲ್ಲಿ ನಡೆಯುವ ಕಾರ್ಯವನ್ನು ದಿನಾಲು ನೋಡುತ್ತಿದ್ದೇನೆ. ನಿಮ್ಮ ಬಗೆಗೆ ನನ್ನಲ್ಲಿ ಒಳ್ಳೆಯ ಅಭಿಪ್ರಾಯ ಉಂಟಾಗಿದೆ. ಸದ್ಯಕ್ಕೆ ನಿಮಗೆ ಹಣದ ಅವಶ್ಯಕತೆಯು ಇದೆ ಎಂದು ಕೇಳಿದ್ದೇನೆ. ನಿಮಗಾಗಿ ಎರಡು ಸಹಸ್ರ ರೂಪಾಯಿಗಳನ್ನು ತಂದಿದ್ದೇನೆ. ತೆಗೆದುಕೊಳ್ಳಿರಿ. ನಿಮಗೆ ಅನುಕೂಲ ಒದಗಿದಾಗ ಈ ಹಣವನ್ನು ಮರಳಿ ಕೊಡಿ" ಎಂದು ಅಂದರು.

ಅವರೇ ಶ್ರೀ ರಾಮಭಾವು ಗಿಂಡೆಯವರು. ಶಹಾಪುರದಲ್ಲಿಯ ಒಬ್ಬ ಪ್ರತಿಷ್ಠಿತ ಗೃಹಸ್ಥರು. ಇವರು ಮಾಡಿದ ಈ ಸಹಾಯವು ಲಕ್ಷ್ಮಣರಾಯರಿಗೆ ಬಹಳ ಉಪಯೋಗ ಬಿದ್ದಿತೆಂದು ಹೇಳಬೇಕೇ ? ಅವರ ಆಯುಷ್ಯದಲ್ಲಿ ಎಂದೂ ಮರೆಯದ ಘಟನೆಯಿದು. ಅವರ ಈ ಗೆಳೆತನವು ಕೊನೆಯ ವರೆಗೂ ಉಳಿ ಯಿತು. ಲಕ್ಷ್ಮಣರಾಯರಿಗೆ ಹಣದ ಕೊರತೆಯಾದಾಗ ಅವರ ಚೀಟಿ ಹೋಗು ವದೇ ತಡ ಗಿಂಡೆಯವರಿಂದ ಹಣ ದೊರೆಯುತ್ತಿತ್ತು. ಈ ಜಗತ್ತಿನಲ್ಲಿ ವಿಘ್ನ ಸಂತೋಷಗಳೂ ಉಂಟು. ಆದರೆ ಶಕ್ಯವಿದ್ದಷ್ಟು ಸಹಾಯವನ್ನು ನೀಡಿ ಆನಂದಪಡುವ ಸಜ್ಜನರೂ ಉಂಟು. ಸ್ವಯಂಸ್ಫೂರ್ತಿಯಿಂದ ಸಹಾಯ ಮಾಡಿದ ಶ್ರೀ ರಾಮಭಾವೂ ಗಿಂಡೆಯವರ ಗಣನೆಯು ಸಜ್ಜನಕೋಟಿಯಲ್ಲಿ ಸೇರುವದು.

ತಾತ್ಕಾಲಿಕವಾಗಿ ಹಣದ ತೊಂದರೆಯು ದೂರವಾದರೂ ಚಿಂತೆಯ ಮೂಲ ಕಾರಣವಾದ ರಂಟಿಗಳಿಗೆ ಬೇಡಿಕೆ ಬರಲಿಲ್ಲ. ಆದರೂ ರಂಟಿಗಳು ಧೂಳು ತಿನ್ನುತ್ತ ಬಿದ್ದಿದ್ದವು. ಕಬ್ಬಿಣರಂಟಿಯ ನಾದವನ್ನು ಬಿಡಲು ಜನರಿಗೆ ಸಲಹೆಯನ್ನೀಯುತ್ತಿದರು. ಈ ರಂಟಿಯ ರುಚಿಯು ಒಮ್ಮೆ ರೈತನಿಗೆ ಹತ್ತಿದರೆ ಸಾಕು, ತನ್ನಷ್ಟಕ್ಕೆ ತಾನೇ ಬೇಡಿಕೆಗಳು ಬರುತ್ತ ಹೋಗುವವು ಎಂದು ರಾಯರ ನಿಶ್ಚಿತ ಮತವಿದ್ದಿತು. ಅದರಂತೆಯೇ ಒಂದು ದಿನ ಮಿರಜಕಡೆಯ ಜೋಶಿ ಎಂಬ ಜಮೀನದಾರರು ಈ ರಂಟಿಗಳ ಶೋಧಕ್ಕಾಗಿ ಬೆಳಗಾವಿಗೆ ಬಂದರು. ಅವರಿಗೆ ಈ ರಂಟಿಯ ಮನವರಿಕೆಯಾಗಿ ಆರೂ ರಂಟಿಗಳನ್ನು ಕೊಂಡುಕೊಂಡರು. ಅವರ ಬೆನ್ನುಹಿಂದೆಯೇ ಪಾಲೂಸ ಹಳ್ಳಿಯ ನಾಂಡೂ ಪಾಟೀಲ ಎಂಬವರು ಬಂದು ೩೫ ರಂಟಿಗಳ ಬೇಡಿಕೆಯನ್ನು (ಆರ್ಡರ) ಇತ್ತರು. ಲಕ್ಷ್ಮಣರಾಯರ ಭವಿಷ್ಯವು ಸತ್ಯವಾಯಿತು

ತಾವು ಸಿದ್ಧಪಡಿಸುವ ಮಾಲು ಯಾಂತ್ರಿಕ ದೃಷ್ಟಿಯಿಂದ ಸಿದ್ಧವಿದ್ದರೂ ಬಾಳಿಕೆ ಬರುವಂಥದೂ ಇರಬೇಕೆಂದು ಅವರು ಮೊದಲಿನಿಂದಲೂ ಎಚ್ಚರಿಗೆ ತೆಗೆದುಕೊಳ್ಳುತ್ತಿದ್ದರು. ಆದ್ದರಿಂದಲೇ ರಂಟಿಯ ರಚನೆಯ ಶಾಸ್ತ್ರವನ್ನು ಅವರು ಸೂಕ್ಷ್ಮವಾಗಿ ಅಭ್ಯಸಿಸಿದ್ದರು. ಲಕ್ಷ್ಮಣರಾಯರು ರಂಟಿಯನ್ನು ಪರೀಕ್ಷಿಸುವದಕ್ಕಾಗಿ ಒಂದು ಜಗ್ ಯಂತ್ರವನ್ನೇ ಸಿದ್ಧ ಮಾಡಿದ್ದರು. ಅದರಲ್ಲಿ ರಂಟಿಯು ಸೂಕ್ಷ್ಮವಾಗಿ ಪರೀಕ್ಷಿಸಿದ ನಂತರವೇ ಅದು ಹೊರಬರುತ್ತಿತ್ತು.

ಲಕ್ಷ್ಮಣರಾಯರು ಶ್ರೀಮಾನ್ ಜೋಶಿಯವರಿಗೆ ತಮ್ಮ ರಂಟಿಗಳ ಬಗ್ಗೆ ಬಂದ ಅನುಭವಗಳನ್ನು ತಿಳಿಸಲು ಬರೆದರು. "ಎರೆ ಭೂಮಿಗಳಿಗೆ ಇದಕ್ಕಿಂತಲೂ ಭಾರವಾದ ರಂಟಿಗಳ ಅವಶ್ಯಕತೆ ಇದೆ" ಎಂದು ಜೋಶಿಯವರು ತಿಳಿಸಿದರು. ಅದರಂತೆ ರಂಟಿಗಳ ಕೆಲ ಭಾಗಗಳನ್ನು ಜಡಮಾಡಿ ಇರಿಸಿನ ಉದ್ದಳತೆಯನ್ನು ಹೆಚ್ಚಿಸಿ ಅವಶ್ಯವಿದ್ದ ಸುಧಾರಣೆಗಳನ್ನೆಲ್ಲ ಮಾಡಿದರು.

ಈ ಸುಧಾರಿಸಿದ ರಂಟಿಯನ್ನು ಒಕ್ಕಲತನದ ಖಾತೆಯ ಕಡೆಗೆ ಕಳಿಸಿ ಅವರ ಅಭಿಪ್ರಾಯವನ್ನು ಕೇಳಿದರು. ಮಿಸ್ಟರ ನಾಯಿಟ್, ಡಾಕ್ಟರ ಮ್ಯಾನರಂಥ ಯುರೋಪಿಯನ್ನರೇ ವರಿಷ್ಠಾಧಿಕಾರಿಗಳಾಗಿದ್ದರು. ಅವರ ಒಲವು ವಿಲಾಯತಿಯ ರಂಟಿಗಳ ಕಡೆಗೆ ಇರುವದು ಸ್ವಾಭಾವಿಕವಿದ್ದಿತು. ಅವುಗಳನ್ನೇ ತರಿಸಲು ಅವರು ಉತ್ತೇಜನ ಕೊಡುತ್ತಿದ್ದರು. ದೇಶೀ ರಂಟಿಗಳ ಬಗೆಗೆ ಅವರ

ಪ್ರೇಮವು ಅಷ್ಟಕ್ಕಷ್ಟೇ. "ನಿಮ್ಮ ರಂಟೆಗಳ ರಚನೆಯು ಚನ್ನಾಗಿದ್ದರೂ ನಿಮ್ಮ ಕುಳಗಳು ಬೇಗನೆ ಸವೆಯುತ್ತವೆ. ಆದ್ದರಿಂದ ರೈತನಿಗೆ ಅವುಗಳನ್ನು ತರಿಸಲು ಉತ್ತೇಜನವೀಯಲು ಬರುವದಿಲ್ಲ" ಎಂದು ಶರಾ ಹೊಡೆದರು.

ಅಧಿಕಾರಿಗಳಿಂದ ಬಂದು ಉತ್ತರದಿಂದ ಲಕ್ಷ್ಮಣರಾಯರು ಧೃತಿಗೆಡಲಿಲ್ಲ; ಉತ್ತೇಜಿತರಾದರು. ಆ ದೋಷವು ಸತ್ಯವೋ ಅಸತ್ಯವೋ ಎಂಬುದನ್ನು ಒರೆಗೆ ಹಚ್ಚಲು ಟೊಂಕಕಟ್ಟಿದರು. ವಿಲಾಯತಿಯಲ್ಲಿಯ ಭಿನ್ನಭಿನ್ನ ಕಂಪನಿಯ ಕುಳಗಳನ್ನೆಲ್ಲ ತರಿಸಿದರು. ಅವೆಲ್ಲವೂ ಬೀಡಿನವಿದ್ದವು. ಸುತ್ತಿಗೆಯಿಂದ ಅವುಗಳನ್ನು ಹೊಡೆದು ನೋಡಿದಾಗ ಪ್ರತ್ಯಕ್ಷವಾಗಿ ಭೂಮಿಯೊಡನೆ ಘರ್ಷಣೆ ಹೊಂದುವ ಪೃಷ್ಠ ಭಾಗವು ಅತ್ಯಂತ ಕಠಿಣವಿದ್ದುದು ಕಂಡುಬಂದಿತು. ಅದಕ್ಕೆ ಕೂಡ ಸವೆಯದಷ್ಟು ಕಠಿಣವಿದ್ದುದೇ ಅವು ಬೇಗ ಸವೆಯದಿದ್ದುದಕ್ಕೆ ಕಾರಣವೆಂದು ಕಂಡುಬಂದಿತು.

ಬೀಡಿನ ಭಾಗದ ಈ ಕವಚವನ್ನು ಇಷ್ಟು ಬಿರುಸು ಮಾಡಲು ಯಾವ ಉಪಾಯವನ್ನು ಯೋಚಿಸಿರಬಹುದೆಂಬ ಯೋಚನೆಯಲ್ಲಿ ರಾಯರು ಮಗ್ನರಾದರು. ಆಗ ಅವರು ಎಂದಿನಂತೆ ಯಾಂತ್ರಿಕ ಮಾಸಿಕ ಪುಸ್ತಕಗಳಿಗೆ ಶರಣು ಹೋದರು. ಆಗ ಅವರು ಕುಳಗಳಿಗೆ ಯಾವ ರೀತಿಯಿಂದ ನೀರು ಕುಡಿಸುತ್ತಿರುವರೆಂಬುದನ್ನು ಕಂಡುಹಿಡಿದರು. ಬಿರುಸಿಗೆ ನೀರು ಕುಡಿಸುವ ಈ ತಂತ್ರವೇ ಕಾರಣವೆಂದು ತಿಳಿದು, ಆ ತಂತ್ರವನ್ನನುಸರಿಸಿದೊಡನೆ ಕಿರ್ಲೋಸ್ಕರರ ಕುಳಗಳೂ ಕೂಡ ವಿಲಾಯತಿಯ ಕುಳಗಳಂತೆಯೇ ಆದವು. ಅಷ್ಟರಿಂದ ರಾಯರು ಸಮಾಧಾನ ಹೊಂದದೇ ತಮ್ಮ ಪ್ರಯೋಗವನ್ನು ಮುಂದುವರಿಸಿ ವಿಲಾಯತಿಯ ಕುಳಗಳಿಗಿಂತಲೂ ತಮ್ಮ ಕುಳಗಳು ಬಳಿಕೆಯಲ್ಲಿ ಶ್ರೇಷ್ಠವಾಗುವಂತೆ ಮಾಡಿದರು.

ಒಕ್ಕಲುತನದ ಖಾತೆಯವರಿಗೆ ಈಗ ಹೆಸರಿಡಲು ಮಾರ್ಗ ಉಳಿಯಲಿಲ್ಲ. "ತಂದೆಯನ್ನಾದರೂ ತೋರಿಸು ಇಲ್ಲವೇ ಶ್ರಾದ್ಧ ಮಾಡು." ಎಂಬಂತಹ ಪ್ರಶ್ನೆಯು ಅವರನ್ನು ಎದುರಿಸಿತು. ಆಗ ಅವರು ಮರು ಮಾತನಾಡದೆ ತಮ್ಮ ಮೊದಲಿನ ಆರೋಪವನ್ನು ತಿರುಗಿ ತೆಗೆದುಕೊಂಡು ಕಿರ್ಲೋಸ್ಕರರ ರಂಟೆಗಳಿಗೆ ಮನ್ನಣೆಯನ್ನಿತ್ತರು.

ಹತ್ತು ಲಕ್ಷ ಕಬ್ಬಿಣ ರಂಟೆಗಳು ಇಂದು ದೇಶದಲ್ಲೆಲ್ಲ ಪ್ರಚಾರವಾಗಿವೆ.

ಈಗ ಕಬ್ಬಿಗೆಯ ರಂಟೆಗಳು ಅಲ್ಲೊಂದು ಇಲ್ಲೊಂದು ಮಾತ್ರ ಕಣ್ಣಿಗೆ ಬೀಳು-ತ್ತಿವೆ. ಕಬ್ಬಿಣ ರಂಟೆಯ ಜನ್ಮದ ಮೊದಲು ಲಕ್ಷಾಂತರ ಎಕರೆ ಭೂಮಿಯು ಪಡಬಿದ್ದಿತು. ಇಂದು ಅದು ಸಾಗಾಗಿದೆ. ಕಬ್ಬಿಣರಂಟೆಯು ದೇಶದ ಧಾನ್ಯದ ಅಭಿವೃದ್ಧಿಗೆ ನೆರವಾಗಿದೆ. ಸುಧಾರಿಸಿದ ಸಾಧನವನ್ನು ಪ್ರಚಾರದಲ್ಲಿ ತಂದ ಯಂತ್ರ ಸಂಶೋಧಕರು ರಾಷ್ಟ್ರಕ್ಕೆ ಎಂತಹ ಅದ್ಭುತ ಸೇವೆ ಸಲ್ಲಿಸಬಹು ದೆಂಬುದಕ್ಕೆ ಈ ರಂಟೆಯ ಉದಾಹರಣೆಯೊಂದೇ ಸಾಕು. ಲಕ್ಷ್ಮಣರಾಯರು ಗಳಿಸಿದ ಈ ಅಪೂರ್ವ ವಿಜಯವು ರಾಷ್ಟ್ರಕ್ಕೆ ಉತ್ತೇಜನವನ್ನಿತ್ತಿದೆ. ಕವಿಗಳ ಕಾವ್ಯ ಸ್ಫೂರ್ತಿಯಾಗಿದೆ. ಈ ವಿಜಯದ ಬಗೆಗೆ ಒಂದು ಕಾವ್ಯವನ್ನೇ ಶ್ರೀ ಗುತ್ತೀಕರರು ರಚಿಸಿದ್ದಾರೆ.

೭

# ತಳಕವಾಡಿಯ ಸ್ಥಾಪನೆ

ಕಬ್ಬಿಣದ ರಂಟೆಗಳು ರಾಯರ ಕೈ ಹಿಡಿದವು. ಅವುಗಳ ಬೇಡಿಕೆಗಳೂ ಮೊದಲಿನ ಹತ್ತು ಪಟ್ಟು ಬೆಳೆದವು. ಸ್ಥಳವು ಸಾಲದಾಯಿತು. ತಗಡಿನ ಹೊಸ ಛಾವಣಿಗಳನ್ನು ಹಾಕಿ ಕೆಲಸ ಸಾಗಿಸಲಾಯಿತು. ಕೆಲಸಗಾರರ ಸಂಖ್ಯೆಯೂ ೪೦ಕ್ಕೆ ಏರಿತು. ಎರಡೂವರೆ ಅಶ್ವಶಕ್ತಿಯ ಬದಲು ಎಂಟು ಅಶ್ವಶಕ್ತಿಯ ಇಂಜೀನು ಕಾರ್ಯ ಮಾಡಹತ್ತಿತು. ಈ ನೇಗಿಲಗಳ ಮಾರಾಟದ ಹಂಗಾಮು ಸಪ್ಟೆಂಬರದಿಂದ ಫೆಬ್ರುವರಿ ವರೆಗೆ ಮಾತ್ರ. ಈ ಅವಧಿಯಲ್ಲಿ ಎಷ್ಟು ಮಾರಾಟವಾಗುವವೋ ಅಷ್ಟೇ. ಉಳಿದ ದಿನ ಕಾರಖಾನೆಯಲ್ಲಿ ಏನು ಮಾಡಬೇಕೆಂಬುದೇ ಪ್ರಶ್ನೆ ಇದ್ದಿತು. (ಕಾರಖಾನೆಯನ್ನು ಬೆಳೆಸಲು ಇದೇ ಆತಂಕವಾಗಿದ್ದಿತು.) ಈ ಪ್ರಶ್ನೆಯನ್ನು ಆಲೋಚಿಸುವಾಗ ಲಕ್ಷ್ಮಣರಾಯರಿಗೆ ಆ ಸಮಯದಲ್ಲಿ ಬೀಡಿನಿಂದ ದೋಸೆ ಹಂಚುಗಳನ್ನು ಮಾಡಬೇಕೆಂಬ ಕಲ್ಪನೆಯು ಹೊಳೆಯಿತು.

ದೋಸೆಯ ಹಂಚು ತೀರ ಸಾದಾ ವಸ್ತು. ಅವು ಬಹಳವೆಂದರೆ ಎಷ್ಟು ಖರ್ಚಾದಾವು? ಇದು ಜಾಹೀರಾತಿನ ಯುಗವೆಂಬುದನ್ನು ರಾಯರು ಪಕ್ಕಾ ತಿಳಿದಿದ್ದರು. ಲಕ್ಷ್ಮಣರಾಯರು ಉಪ್ಪು-ಖಾರ ಹಚ್ಚಿ ಹೆಂಗಳೆಯರ ಬಾಯಲ್ಲಿ ನೀರು ಬಿಡುವಂತೆ ಜಾಹೀರಾತನ್ನು ಕೊಟ್ಟರು. ಇಂತಹ ವಸ್ತುಗಳ ಕಡೆಗೆ ಹೆಂಗಳೆಯರ ಮನಸ್ಸು ಬೇಗ ಹರಿಯುವದೆಂದೂ, ಒಬ್ಬಳು ತೆಗೆದುಕೊಂಡರೆ ಎಲ್ಲರೂ ಅದಕ್ಕೆ ಮುಗಿಬೀಳುವರೆಂದೂ ಅವರಿಗೆ ಗೊತ್ತು. ಅವರ ಎಣಿಕೆಯಂತೆಯೇ ಕಾರಖಾನೆಯಿಂದ ಹೊರಬೀಳುವ ಸಾವಿರಾರು ಹಂಚುಗಳು ಅಲ್ಪ ಸಮಯದಲ್ಲಿಯೇ ಮನೆಮನೆಯಲ್ಲಿ ಪ್ರಸಾರವಾದವು.

ಹೀಗೆ ಕಾರಖಾನೆಯ ವ್ಯಾಪವು ಬೆಳೆಯುತ್ತ ನಡೆಯಿತು. ಆ ಬೈಲು ಪ್ರದೇಶದಲ್ಲಿ ಜನವಸತಿಯು ಹೆಚ್ಚಿತು. ಜನರು ಒಳ್ಳೆಯ ಮನೆಗಳನ್ನು ಕಟ್ಟಿಸ ಹತ್ತಿದರು. ಊರಲ್ಲಿಯ ಅನೇಕ ಪ್ರತಿಷ್ಠಿತ ಗೃಹಸ್ಥರು ಬಂದು ನೆಲೆಸಿದರು. ಆದರೂ ಅಲ್ಲಿ ಅಂಚೆಕಚೇರಿ ಇರಲಿಲ್ಲ. ಅದರಿಂದ ಕಾರಖಾನೆಗೂ ವಿಶೇಷ

ತೊಂದರೆಯಾಗುತ್ತಿತ್ತು. ಆ ಸಮಯಕ್ಕೆ ಶ್ರೀ ಕೃಷ್ಣರಾವ ಟೇಂಬೆ ಎಂಬೊಬ್ಬ ಪೋಷ್ಟಿನ ಮೇಲಧಿಕಾರಿಗಳು ಬಂದರು. ಆಗ ಲಕ್ಷ್ಮಣರಾಯರು ತಮ್ಮ ತೊಂದರೆಗಳನ್ನೆಲ್ಲ ಅವರಿಗೆ ಮನಗಾಣಿಸಿ ಕೊಟ್ಟರು. ಅಂಚೆಯ ಕಚೇರಿಯು ಅವಶ್ಯವೆಂದು ನಿರ್ಣಯವಾಯಿತು. ಆದರೆ ಈ ಕಚೇರಿಗೆ ಯಾವ ಹೆಸರಿಡಬೇಕು? ಎಂಬ ಪ್ರಶ್ನೆಯು ಉದ್ಭವಿಸಿತು. ಆಗ ಗುತ್ತೀಕರ ವಾಜೀರಾಯರು ನಗುತ್ತ "ಊರಲ್ಲಿಯ ಠಳಕ ಠಳಕ ಮಂಡಲಿಯು ಇಲ್ಲಿ ವಾಸ ಮಾಡುತ್ತಲಿದೆ. ಆದ್ದರಿಂದ ಠಳಕವಾಡಿ ಎಂದು ಹೆಸರು ಏಕೆ ಇಡ ಬಾರದು?" ಎಂದರು. ಎಲ್ಲರಿಗೂ ಅದು ಯೋಗ್ಯವೆನಿಸಿತು. ಇಂದಿನ ಠಳಕವಾಡಿಯ ಜನ್ಮ ಇತಿಹಾಸವಿದು.

ಒಂದು ದಿನ "ಮೋಟಾರನ್ನು ಸರಿಪಡಿಸುವ ಯಂತ್ರ ಸಾಹಿತ್ಯದೊಡನೆ ಸುಪಾ ರಸ್ತೆಯಲ್ಲಿರುವ ಡಾಕ ಬಂಗಲೆಗೆ ಬರಬೇಕು. ದಾರಿ ಕಾಯುತ್ತಿದ್ದೇವೆ.

—ಮರೆ ಕಾಂಜರವೇಟರ ಆಫ್ ಫಾರೆಸ್ಟ್ಸ"

ಎಂಬ ತಂತಿಯು ಬಂದಿತು. ೧೯೦೬ರಲ್ಲಿ ಇರಬಹುದು.

ಮರೆಸಾಹೇಬನು ಕಾರ್ಖಾನೆಗೆ ಒಮ್ಮೆ ಸಂದರ್ಶನವನ್ನಿತ್ತಿದ್ದನು. ಬೆಳಗಾಂವಿಯ ಕಲೆಕ್ಟರ ಬ್ರೆಂಡಿನ್ ಬಿಳಿ ಅಧಿಕಾರಿಗಳು ಕುದುರೆಯ ಸ್ವಾರೀ ಮಾಡುತ್ತಿರುವಾಗ ಈ ಕಾರ್ಖಾನೆಗೆ ಸಹಜವಾಗಿ ಬರುತ್ತಿದ್ದರು. ಅವರು ಲಕ್ಷ್ಮಣರಾಯರ ಈ ಸಾಹಸಕ್ಕಾಗಿ ಮುಗ್ಧರಾಗುತ್ತಿದ್ದರು. ಅವರನ್ನು ಬಾಯಿ ತುಂಬ ಹೊಗಳುತ್ತಿದ್ದರಲ್ಲದೆ ಅವರೊಡನೆ ಸ್ನೇಹದಿಂದಲೂ ಮಮತೆಯಿಂದಲೂ ನಡೆದುಕೊಳ್ಳುತ್ತಿದ್ದರು.

ತಾರು ಬಂದೊಡನೆ ಲಕ್ಷ್ಮಣರಾಯರು ಸ್ವಲ್ಪ ವಿಚಾರ ಮಾಡಿ ತಡ ಮಾಡದೆ ಬುದ್ಧಪ್ಪನೆಂಬ ಕೆಲಸಗಾರನನ್ನು ತಮಗೆ ಬೇಕಾದ ಸಾಮಾನು ಗಳನ್ನು ತೆಗೆದುಕೊಂಡು ಕೂಡಲೇ ಸಾಯಕಲ್ಲಿನ ಮೇಲೆ ಸ್ಟೇಶನ್ನಿನ ಹಾದೀ ಹಿಡಿದರು. ಮೊದಲನೇ ಗಾಡಿ ಹಿಡಿದು ೧೧ ಘಂಟೆಯ ಸುಮಾರಿಗೆ ಲೋಂಡಾಕ್ಕೆ ಬಂದರು. ಮುಂದಿನ ದಾರಿ ದಟ್ಟಡವಿಯಲ್ಲಿತ್ತು. ಕಿರಣಗಳು ಕೂಡ ಬೀಳುತ್ತಿದ್ದಿಲ್ಲ. ಇಂತಹ ರಸ್ತೆಯಲ್ಲಿ ೨೫-೩೦ ಮೈಲು ಸಾಯಕಲ್ಲಿನ ಮೇಲೆ ಪ್ರವಾಸ ಮಾಡಿ ರಾಯರು ಬಂಗಲೆಗೆ ಬಂದರು. ದಾರಿಯಲ್ಲಿ ಮೋಟಾರು ಕೆಟ್ಟು ನಿಂತಿದ್ದಿತು. ಅಂಥೊಮ್ಸೇನ ಎಂಬ ಮೇಲಾಧಿಕಾರಿಯ

ಕಾರು ಅದು. ಆ ಅಧಿಕಾರಿಯು "ನೀವು ಒಳ್ಳೇ ಚುರುಕು ಬುದ್ಧಿಯ ಯಾಂತ್ರಿಕರೆಂದು ಮರೆ ಸಾಹೇಬರು ಹೇಳಿದ್ದರಿಂದ ನಾವೇ ನಿಮಗೆ ತಂತಿ ಕೊಟ್ಟಿದ್ದೇವೆ. ನಿಮಗೆ ಮೋಟಾರುಗಳನ್ನು ಸರಿ ಪಡಿಸುವ ಪ್ರತ್ಯಕ್ಷ ಅನು ಭವವು ಎಷ್ಟಿದೆ?" ಎಂದರು.

ಆಗ ಲಕ್ಷ್ಮಣರಾಯರು "ವಿಲಾಯತಿಯ ಮಾಸಿಕಗಳಿಂದ ಮೋಟಾ ರಿನ ರಚನೆ ಹೇಗಿರುತ್ತದೆಂಬವನ್ನು ತಿಳಿದುಕೊಂಡಿದ್ದೇನೆ. ತಾವು ಇಷ್ಟಪಟ್ಟರೆ ಗಾಡಿಯು ಏಕೆ ನಿಂತಿದೆ ಎಂಬುದನ್ನು ಶೋಧಿಸಿ ಸಾಧಿಸಿದರೆ ಅದನ್ನು ಸರಿ ಪಡಿಸಿಯೂ ಕೊಡುವೆ" ಎಂದು ಉತ್ತರಿಸಿದರು. "ಒಳ್ಳೇದು, ಹಾಗಾದರೆ ಕೆಲಸಕ್ಕೆ ಹತ್ತಿರಿ." ಎಂದರು ಅಧಿಕಾರಿಗಳು.

ಆಗ ಲಕ್ಷ್ಮಣರಾಯರು ಮೋಟಾರಿನ ಮುಚ್ಚಳವನ್ನು (ಹೂಡ) ತೆಗೆದು ಯಂತ್ರದ ರಚನೆಯನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರು. ಆದರೆ ಮೇಲೆ ಮೇಲಿನ ನಿರೀಕ್ಷಣದಿಂದ ಯಂತ್ರವು ಎಲ್ಲಿ ಕೆಟ್ಟಿದೆಯೆಂಬುದು ತಿಳಿಯಲಿಲ್ಲ. ಹ್ಯಾಂಡಲ್ಲನ್ನು ಅನೇಕ ಸಲ ತಿರುವಿ ನೋಡಿದರು. ಅದಕ್ಕೆ ಎಲ್ಲಿಯೂ ಆತಂಕವಾಗದೆ ಸುಲಭವಾಗಿ ತಿರುಗಹತ್ತಿತಲ್ಲದೆ ಬಹು ಹಗುರಾಗಿ ತಿರುಗ ಹತ್ತಿತು. ಆಗ ಲಕ್ಷ್ಮಣರಾಯರು ಇಂಜೀನಿಗೆ ಸರಿಯಾಗಿ ಕಾಂಪ್ರೆಶನ್ (ಒತ್ತಡ) ಆಗದ ಮೂಲಕ ಅದರ ವ್ಹಾಲ್ವ್‌ಗಳು ಸರಿಯಾಗಿ ಕೆಲಸ ಮಾಡುವ ದಿಲ್ಲ ಎಂದು ತರ್ಕಿಸಿದರು. ಆಗ ಅವರು ವ್ಹಾಲ್ವ್‌ಗಳ ಮುಚ್ಚಳವನ್ನು ತೆಗೆದು ನೋಡಿದೊಡನೆಯೇ ತಮ್ಮ ತರ್ಕವು ಸರಿಯೆಂದು ಕಂಡುಬಂದಿತು. ಕೆಲವು ವಾಹಿಲ್ವ್‌ಗಳ ಸಂಪರ್ಕವು ತಪ್ಪಿದ್ದರಿಂದ ಈ ತೊಂದರೆಯುಂಟಾಗಿತ್ತು. ತಪ್ಪು ಎಲ್ಲಿದೆ ಎಂದು ತಿಳಿದಮೇಲೆ ತಿದ್ದುವದು ಎಷ್ಟು ತಡ? ಆಗ ಅವರು ಎಲ್ಲ ಟಾಪೆಟ್ಸ್‌ಗಳನ್ನು ಶೋಧಿಸಿ ತಿರುಗಿ ಜೋಡಿಸಿದ ನಂತರ ಇಂಜೀನಿನಲ್ಲಿ ಪುನಃ ಜೀವವು ಸಂಚಾರವಾಯಿತು. ಅದರ ಹೃದಯವು ಮೊದಲಿನಂತೆ ಕಾರ್ಯ ಮಾಡಹತ್ತಿತು.

ಇಬ್ಬರೂ ಸಾಹೇಬರು ಲಕ್ಷ್ಮಣರಾಯರ ಈ ಪ್ರಯತ್ನವನ್ನು ಕಣ್ಣಿಟ್ಟು ನೋಡುತ್ತಿದ್ದರು. ಬೆಳಿಗ್ಗೆ ಚಹಾ ತೆಗೆದುಕೊಂಡು ಗಡಿಬಿಡಿಯಿಂದ ಹೊರ ಬಿದ್ದು ಬಂದು ಕೂಡಲೇ ಕೆಲಸಕ್ಕೆ ಹತ್ತಿದ, ಹಸಿವೆ ನೀರಡಿಕೆಗಳ ಪರಿವೆಯಿಲ್ಲದೆ ದುಡಿಯುತ್ತಿದ್ದ ಈ ವ್ಯಕ್ತಿಯ ಬಗೆಗೆ ಆ ಇಬ್ಬರಲ್ಲಿಯೂ ಆದರ, ಮಿಶ್ರಿತವಾದ ಕೌತುಕವು ಉಂಟಾಗಿದ್ದರೆ ಆಶ್ಚರ್ಯವೇನು? ಈಗಂತೂ ಮೋಟಾರ ನಡೆಯು



ರಾಯರ ಮಕ್ಕಳು – ಶಂತನು, ಪ್ರಭಾಕರ, ರವೀಂದ್ರ, ರಾಜಾರಾಮ



ಲಕ್ಷ್ಮಣರಾವ, ಡಾ. ವಾಸುದೇವರಾವ, ದುರ್ಗಾಬಾಯಿ, ರಾಮುಅಣ್ಣಾ



ಡಾ. ವಾಸುದೇವರಾಯರ ಬಿತ್ತುವ ಯಂತ್ರದ ಪ್ರಯೋಗ



ಕಿರ್ಲೋಸ್ಕರ ಕಾರಖಾನೆ ೧೯೧೪



ಒಡೆಯರು ಹಾಗು ಕೆಲಸಗಾರರು ೧೯೧೪



ಬೆಳಗಾವಿಯಿಂದ ಬಂದ ಲಕ್ಷ್ಮಣರಾಯರ ಸಹಾಯಕರು



ಶಂಕರರಾವ, ಶಂಭುರಾವ ಜಾಂಭೇಕರ, ಗು. ಪ್ರ. ಓಗಲೇ,
ಭಾವೂರಾವ ಪಾಟೀಲ, ಲಕ್ಷ್ಮಣರಾಯರು (೧೯೧೪)

ನಂತೆ ಮಾಡಿ ಅವರನ್ನು ಸಂಕಟದಿಂದ ಪಾರು ಮಾಡಿದ್ದರು. ಆನಂದದ ಭರ ದಲ್ಲಿ ಹಿರಿಯ ಸಾಹೇಬನು ಲಕ್ಷ್ಮಣರಾಯರ ಕೈಯನ್ನು ಪ್ರೇಮದಿಂದ ಕುಲುಕಿ "ಶಾಬ್ಬಾಶ್ ನೀವು ನಿಜವಾಗಿಯೂ ಒಬ್ಬ ಇಂಗ್ಲೀಷ್ ಮನುಷ್ಯನಂತೆ ಕಾರ್ಯ ಮಾಡಿರುವಿರಿ. ನಿಮ್ಮಂತೆಯೇ ನಿಮ್ಮ ಜನರೆಲ್ಲರೂ ಕಾರ್ಯ ಮಾಡಹತ್ತಿದರೆ ಈ ದೇಶದಲ್ಲಿ ಬ್ರಿಟಿಶರು ಉಳಿಯುವರೇಕೆ ? ಎಂದನು.

ಲಕ್ಷ್ಮಣರಾಯರು ನಗುತ್ತ "ನಿಮ್ಮ ಕೆಲಸವಾದುದು ನಮಗೆ ಸಂತೋಷ ವನ್ನುಂಟು ಮಾಡಿದೆ. ಈಗ ನಾವು ಮರಳಿ ಹೋಗಬಹುದಷ್ಟೆ ? ನಾವು ಲೋಂಡಾ ಮುಟ್ಟಬೇಕಾಗಿದೆ." ಎಂದರು.

ಆಗ ಬೇಸಿಗೆ ಇದ್ದ ಮೂಲಕ ಸಂಜೆಯ ಸಮಯವಾಗಿದ್ದರೂ ಇನ್ನೂ ಕತ್ತಲೆಯು ಆಗಿದ್ದಿಲ್ಲ. ಮರಿ ಸಾಹೇಬರು ನಡುವೆಯೇ ಬಾಯಿ ಹಾಕಿ "ನೀವು ಹುಲಿಗಳಿಗೆ ಆಹಾರವಾಗಬೇಕೆಂದಿರುವಿರೇನು ? ಈ ಅಡವಿಯಲ್ಲಿ ಹುಲಿಗಳು ಬಹಳ. ಅದನ್ನು ತಾವು ಮರೆತಂತೆ ಕಾಣುತ್ತದೆ. ಈ ರಾತ್ರಿ ನೀವು ನಮ್ಮೊಡನೆ ಬಂಗಲೆಯಲ್ಲಿಯೇ ಇದ್ದು ಬೆಳಿಗ್ಗೆ ಹೊರಡಿರಿ. ನಿಮ್ಮ ಊಟದ ವ್ಯವಸ್ಥೆಯನ್ನು ಮಾಡಲು ಫಾರೆಸ್ಟ ರೇಂಜರರಿಗೆ ಈ ಮೊದಲೇ ಹೇಳಿ ಕಳುಹಿದ್ದೇನೆ" ಎಂದರು.

ಈ ಕೆಲಸಕ್ಕಾಗಿ ಲಕ್ಷ್ಮಣರಾಯರು ೨೫ ರೂಪಾಯಿ ಬಿಲ್ಲು ಕೊಟ್ಟರು. ಆದರೆ ಅಂಥೋವ್ಹೇನ ಸಾಹೇಬರು ೫೦ ರೂಪಾಯಿ ಚಕ್ಕು ಕಳಿಸಿ "ನಿಮ್ಮ ಕಾರ್ಯಕ್ಕೆ ಎಷ್ಟು ಸಲ್ಲಬೇಕೋ ಅಷ್ಟನ್ನೇ ಕಳುಹಿಸಲಾಗಿದೆ ದಯವಿಟ್ಟು ಸ್ವೀಕರಿಸಬೇಕು." ಎಂದು ಬರೆದು ಕಳುಹಿದರು.

ರಾಜ್ಯವಾಳುತ್ತಿದ್ದ ಅನೇಕ ಬ್ರಿಟಿಶರು ದೊಡ್ಡ ಮನಸ್ಸಿನವರೂ ಸತ್ ಪ್ರವೃತ್ತಿಯವರೂ ಇದ್ದರು. ಅವರು ಗುಣಗ್ರಾಹಕರು. ಆದುದರಿಂದ ಲಕ್ಷ್ಮಣ ರಾಯರ ಗುಣಗಳನ್ನು ಅನೇಕ ಅಧಿಕಾರಿಗಳು ಮೆಚ್ಚಿದ್ದರು. ಲಕ್ಷ್ಮಣರಾಯ ರಿಗೆ ತಮ್ಮಿಂದ ಶಕ್ಯವಿದ್ದಷ್ಟು ಸಹಾಯ ಮಾಡುತ್ತಿದ್ದರಲ್ಲದೆ ತಮ್ಮ ಸರಿ ಜೋಡಿಯ ಅಧಿಕಾರಿಗಳಲ್ಲಿ ಕೂಡ ರಾಯರ ಕಾರ್ಯದ ಬಗ್ಗೆ ಆದರದ ನುಡಿ ಗಳನ್ನಾಡುತ್ತಿದ್ದರು. ಇದರಿಂದ ಸ್ವಾಭಾವಿಕವಾಗಿ ಲಕ್ಷ್ಮಣರಾಯರ ಬಗೆಗೆ ಮೇಲಾಧಿಕಾರಿಗಳಲ್ಲಿ ಆದರ ಉಂಟಾಯಿತು. ರಾಯರು ಯಾವುದೇ ಹೊಸ ಅಧಿಕಾರಿಗಳ ಭೆಟ್ಟಿಗೆ ಹೋದರೂ ಅವರು "ತಾವು ಕಿರ್ಲೋಸ್ಕರರಲ್ಲವೇ ? ತಮ್ಮ ಬಗೆಗೆ ಇಂತಹರು ಬಹಳ ಹೇಳಿದ್ದಾರೆ. ತಾವು ಉತ್ತಮ ಕಾರ್ಯ ನಡೆಸಿರುವಿರೆಂದು ಕೇಳುತ್ತೇವೆ. ತಮಗೆ ನಮ್ಮಿಂದ ಏನಾದರೂ ಸಹಾಯ

ವಾದರೆ ನಮಗೂ ಸಂತೋಷ” ಎನ್ನುತ್ತಿದ್ದರು. ಹೀಗೆ ಅನೇಕರಿಂದ ಲಕ್ಷ್ಮಣ ರಾಯರಿಗೆ ಸಹಾಯ ದೊರೆತದ್ದು ಉಂಟು.

ಆ ಕಾಲದಲ್ಲಿ ಸ್ವದೇಶಿ ಕಾರ್ಖಾನೆದಾರರಿಗೆ ಅನುಕೂಲವಾದ ಗಾಳಿಯು ಬೀಸಹತ್ತಿತು. ಲೋಕಮಾನ್ಯರು ತಮ್ಮ ಪ್ರಭಾವೀ ವಾಣಿಯಿಂದಲೂ ಬರಹ ಗಳಿಂದಲೂ, ಪರದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶೀ ವಸ್ತುಗಳ ಪ್ರಚಾರವನ್ನು ಪ್ರಾರಂಭಿಸಿದ್ದರು. “ನಮಗೆ ರಾಜಕೀಯ ಸ್ವಾತಂತ್ರ್ಯವು ಬೇಕಿದ್ದರೆ ಅದ ಕ್ಕಿಂತಲೂ ಮೊದಲು ಆರ್ಥಿಕ ಸ್ವಾತಂತ್ರ್ಯದ ಮಾರ್ಗದಲ್ಲಿರುವ ನಮ್ಮ ಕಾಲ ಲ್ಲಿಯ ಬೇಡಿಗಳನ್ನೆಲ್ಲ ಕಳಚೊಗೆಯಬೇಕು. ಅದರ ಸಾಧನವೆಂದು ಸ್ವದೇಶೀ ವ್ರತ ಸ್ವೀಕರಿಸಬೇಕು” ಎಂದು ಜನತೆಗೆ ಬಿಂಬಿಸಿದರು.

೧೯೦೫ರಲ್ಲಿ ಪ್ರಾರಂಭವಾದ ಈ ಚಳವಳಿಯು ದೇಶದಲ್ಲೆಲ್ಲ ಹಬ್ಬಿತು. ಪರದೇಶೀ ವಸ್ತುಗಳಿಗೆ ಬಹಿಷ್ಕಾರ ಹಾಕುವಷ್ಟು ಸುಲಭ; ಸ್ವದೇಶಿ ವಸ್ತುಗಳ ನಿರ್ಮಾಣವಿರಲಿಲ್ಲ. ಜೀವನಾವಶ್ಯಕವಾದ ವಸ್ತುಗಳನ್ನು ನಿರ್ಮಿಸುವ ಕಾರ ಖಾನೆಗಳು ನಮ್ಮಲ್ಲಿ ಹುಟ್ಟಿದ್ದವೆಲ್ಲಿ? ಅಂತಹ ಕಾರ್ಖಾನೆಗಳು ಕಲ್ಪಿಸಿ ದೊಡನೆಯೇ ಜನ್ಮತಾಳುವವೇ? ಇಂತಹ ಸಮಯದಲ್ಲಿ ಕಿರ್ಲೋಸ್ಕರ ಕಾರ್ಖಾನೆಯು ಚಿಕ್ಕದಿದ್ದರೂ ಅದಕ್ಕೆ ಮಹತ್ವ ಪ್ರಾಪ್ತವಾಯಿತು. ಲೋಕ-ಮಾನ್ಯರು ಈ ಕಾರಖಾನೆಗೆ ಭೆಟ್ಟಿಯನ್ನಿತ್ತರು. ಈ ಸಂಸ್ಮರಣೀಯ ಪ್ರಸಂಗ ವನ್ನು ಲಕ್ಷ್ಮಣರಾಯರ ಶಬ್ದಗಳಲ್ಲಿಯೇ ವರ್ಣಿಸುವದು ಮೇಲು.

“ಲೋಕಮಾನ್ಯರು ಕಾರ್ಖಾನೆಗೆ ಬಂದೊಡನೆ ನಸುನಗುತ್ತ ನನ್ನೊಡ ನೆಯೇ ಇನ್ನೊಬ್ಬ ಅತಿಥಿಯೂ ಬಂದಿದ್ದಾನೆ. ನೋಡಿದ್ದೀರಾ? ಎಂದು ದೂರ ದಲ್ಲಿ ಗಿಡದ ಬುಡಕ್ಕೆ ಕುಳಿತ ಮನುಷ್ಯನ ಕಡೆಗೆ ಬೊಟ್ಟುಮಾಡಿ ತೋರಿಸಿ ದರು. ಆ ಮಾತು ನನಗೆ ಸ್ವಲ್ಪ ವಿಚಿತ್ರವೆನಿಸಿತು. ನಾನು ಅವರನ್ನು ಕರೆಯಲು ಕಳುಹಿಸಿದೆ. ಆದರೆ ಅವನು ಸಿ. ಆಯ್. ಡಿ. ಇದ್ದು ಲೋಕ ಮಾನ್ಯರ ಮೇಲೆ ಕಣ್ಣು ಇಡುವದೇ ಅವನ ಕಾರ್ಯವೆಂದು ತಿಳಿದು ಬಂದಿತು. ಆಗ ನಮಗೆಲ್ಲ ನಗೆ. ಲೋಕಮಾನ್ಯರು ಹೊರಟೊಡನೆ ಮೈ ನೆರಳಿನಂತೆ ಅವನೂ ಹೊರಟುಹೋದ.

ನಮ್ಮ ಕಾರ್ಖಾನೆಯಲ್ಲಿ ಲೋಕಮಾನ್ಯರು ಅರ್ಧಘಂಟೆ ಕಳೆದರು. ನಮ್ಮ ತೊಂದರೆಗಳನ್ನೆಲ್ಲ ಕೇಳಿಕೊಂಡರು. ಆಗ ನಾನು ಸರಕಾರ ಹಾಗೂ ಒಕ್ಕಲೀತನ ಖಾತೆಯಿಂದ ನಮ್ಮ ಕಾರ್ಖಾನೆಗೆ ಬಹಳ ತೊಂದರೆಯಾಗುತ್ತದೆ.

ನಮ್ಮ ವಸ್ತುಗಳ ವಿಷಯಕ್ಕೆ ರೈತರಲ್ಲಿ ಜನಸಾಮಾನ್ಯರಲ್ಲಿ ಪ್ರತಿಕೂಲ ಅಭಿಪ್ರಾಯ ಹೇಗೆ ಆದೀತು ಎಂಬುದರ ಕಡೆಗೆಯೇ ಅವರ ಲಕ್ಷ್ಯವಿರುತ್ತದೆ. ಎಂದು ನಾನು ಸ್ಪಷ್ಟ ಹೇಳಿದೆ.

ಆಗ ಲೋಕಮಾನ್ಯರು ಗಂಭೀರವಾಗಿ 'ಪಾರತಂತ್ರ್ಯದಲ್ಲಿ ಹೀಗೆ ಆಗದಿದ್ದರೆ ಆಶ್ಚರ್ಯ' ಎಂದರು. ಕೊನೆಗೆ ಹೊರಹೊರಡುವಾಗ ಅವರು ತುಂಬಿದ ಅಂತಃಕರಣದಿಂದ "ಕಿರ್ಲೋಸ್ಕರರೇ ! ನೀವು ಬಹು ದೊಡ್ಡ ರಾಷ್ಟ್ರಕಾರ್ಯ ಮಾಡುತ್ತಿರುವಿರಿ. ನಾಳೆ ರಾಷ್ಟ್ರವು ಸ್ವತಂತ್ರವಾದರೂ, ವ್ಯಾಪಾರ ಉದ್ಯೋಗಗಳ ಬೆಳವಣಿಗೆಯು ಹೊರತು ತರಣೋಪಾಯವೇ ಇಲ್ಲ. ಆದುದರಿಂದ ಇಂತಹ ಯಾವ ಸಂಕಟಗಳಿಗೂ ಸೊಪ್ಪುಹಾಕದೆ ಭವಿಷ್ಯದಕಡೆಗೆ ದೃಷ್ಟಿಯಿಟ್ಟು ನಿಮ್ಮ ಕಾರ್ಯವನ್ನು ಭರದಿಂದ ಸಾಗಿಸಿರಿ. ಇಂದಿಲ್ಲ ನಾಳೆ ನಿಮಗೆ ಯಶಸ್ಸು ದೊರೆಯುವದರಲ್ಲಿ ಸಂದೇಹವಿಲ್ಲ ?" ಎಂದು ಅಂದರು. ಈ ಮಾತುಗಳನ್ನು ಕೇಳುವಾಗ ನನ್ನ ಭಾಗ್ಯದೇವತೆಯೇ ಮಾತನಾಡುತ್ತಿರುವಂತೆ ನನಗೆ ಭಾಸವಾಯಿತು. ಅವರ ಈ ಆಶೀರ್ವಾದವು ನನ್ನ ಅಂತಃಕರಣದ ಮೇಲೆ ಸ್ಥಿರಮುದ್ರೆಯನ್ನೊತ್ತಿತು.

ಕಾರ್ಖಾನೆಯು ಬೇರೂರಿ ಬೆಳೆಯುತ್ತಲಿದೆ ಎನ್ನುವಷ್ಟರಲ್ಲಿ ಅಕಸ್ಮಾತ್ತಾಗಿ ಲಕ್ಷ್ಮಣರಾಯರು ದೊಡ್ಡ ಬಿರುಗಾಳಿಗೆ ಸಿಕ್ಕರು. ಕನಸುಮನಸುಗಳಲ್ಲಿಲ್ಲದ ಗಂಡಾಂತರವು ಬಂದೊದಗಿತು. ಕಾರ್ಖಾನೆಯು ಅಳಿಯುವದೋ, ಉಳಿಯುವದೋ ಎಂಬ ಪ್ರಶ್ನೆ ಉದ್ಭವಿಸಿತು.

ಬೆಳಗಾಂವಿಯ ಮುನಸಿಪಾಲಿಟಿಯು ಊರನ್ನು ವಿಸ್ತರಿಸುವ ಉದ್ದೇಶದಿಂದ ಟಿಳಕವಾಡಿಯ ಸ್ಥಳವನ್ನು ಗೊತ್ತುಮಾಡಿ ಕಿರ್ಲೋಸ್ಕರ ಬಂಧುಗಳು ತಮ್ಮ ಕಾರ್ಖಾನೆಯನ್ನು ಆರು ತಿಂಗಳೊಳಗಾಗಿ ಬೇರೆ ಕಡೆಗೆ ಸಾಗಿಸಬೇಕೆಂದು ಗೊತ್ತುವಳಿಯನ್ನು ಸ್ವೀಕರಿಸಿತು. ಆ ಸಮಯಕ್ಕೆ ಲಕ್ಷ್ಮಣರಾಯರ ಗೆಳೆಯರಾದ ಮಿಸ್ಟರ ಟ್ರೆಂಡನ್ನರು ಬೆಳಗಾಂವಿಯ ಕಲೆಕ್ಟರರಿದ್ದರು. ರಾಯರು ಅವರ ಮೊರೆಹೊಕ್ಕರು. 'ನಿಮ್ಮ ಜನರೇ ಗೊತ್ತುವಳಿಯನ್ನು ಮಾಡಿರುವಾಗ ಅದನ್ನು ಬದಲಿಸಲು ಶಕ್ಯವಿಲ್ಲ. ಆದರೆ ಸ್ಥಳಾಂತರಿಸುವಾಗ ನಿಮಗೆ ಆಗುವ ಹಾನಿಯನ್ನು ಮಾತ್ರ ನೀವು ಬೇಡಿದರೆ ಅದನ್ನು ಖಂಡಿತ ಕೊಡಿಸುವೆ" ಎಂದು ಕಲೆಕ್ಟರರು ಉತ್ತರಿಸಿದರು.

ಟಿಳಕವಾಡಿಯ ಸಮೀಪದಲ್ಲಿಯೇ ಕಾರ್ಖಾನೆಗೆ ಸಾಕಾಗುವಷ್ಟು

ವಿಶಾಲವಾದ ಬೈಲುಪ್ರದೇಶವು ಸಿಗಲು ಶಕ್ಯವಿದೆಯೋ ? ಎಂದು ಶೋಧಿಸಿದರು. ಪ್ರಯತ್ನಗಳೆಲ್ಲ ನಿಷ್ಫಲವಾದವು. ಮುನಸೀಪಾಲಟಿಯು ಕೊಟ್ಟ ಅವಧಿಯು ಮುಗಿಯುತ್ತ ಬಂದಿತು. ಕಿರ್ಲೋಸ್ಕರ ಬಂಧುಗಳು ಚಿಂತೆಗೊಳಗಾದರು. ದೈವಲೀಲೆಯು ವಿಚಿತ್ರವಾದುದು. ಯಾವ ದೈವವು ಅವರನ್ನು ಈ ಸಂಕಟ ದಲ್ಲಿ ನೂಕಿತ್ತೋ ಅದರಿಂದ ಪಾರಾಗಲು ಅದೇ ದೈವವು ಮಾರ್ಗದರ್ಶನ ಮಾಡಿತು.

ಲಕ್ಷ್ಮಣರಾಯರು ಚಿಂತೆಗೊಳಗಾದಾಗ ಒಂದು ದಿನ ಶ್ರೀಮಂತ ಬಾಳಾ ಸಾಹೇಬಪಂತ ಪ್ರತಿನಿಧಿ ಹಾಗೂ ಔಂಧದ ಪೋಲಿಟಿಕಲ್ ಎಂಜಿನೀಯರರಾದ ಜೇಕಬ ಮತ್ತು ಬಾಪೂಜಿ ಇನ್ಸ್ರಾಯಿಲ ಈ ಮೂವರೂ ಲಕ್ಷ್ಮಣರಾಯರ ಅತಿಥಿಗಳಾಗಿ ಬಂದರು. ಶ್ರೀ ಬಾಳಾಸಾಹೇಬರು ಈಗ ರಾಜ್ಯದ ಗದ್ದುಗೆಯ ನ್ನೇರಿದ್ದರು. ಅಂತಸ್ತಿನಲ್ಲಿ ಇವರೆಲ್ಲರೂ ದೊಡ್ಡವರು. ಆದರೆ ಗಾಢವಾದ ಗೆಳೆತನದಲ್ಲಿ ಇದಕ್ಕೆ ಸ್ಥಾನವಿದೆಯೆ ? ಈ ಮೂವರೂ ಮತ್ತು ಸಾತಾರೆಯ ವಕೀಲರಾದ ಮಾಣಿಕಜಿ ಡೋನಾಭಾಯಿ ಇವರೆಲ್ಲರೂ ಮುಶಾನಿಕ ಲಾಜದ ಸಭಾಸದರಿದ್ದ ಮೂಲಕ, ಬೆಳಗಾವಿಯಲ್ಲಿ ಆ ಶಾಖೆಯ ಕೇಂದ್ರವಿದ್ದುದರಿಂದ ಅದರ ಸಭೆಗಾಗಿ ಆ ಜನ ಒಂದು ಲಕ್ಷ್ಮಣರಾಯರ ಅತಿಥಿಗಳಾಗುತ್ತಿದ್ದರು.

ಶ್ರೀಮಂತರೂ, ಜೇಕಬ ಹಾಗೂ ಬಾಪೂಜಿ ಮತ್ತು ಲಕ್ಷ್ಮಣರಾಯರು ಕೂಡಿ ಡಮಣಿಯಲ್ಲಿ ಬೆಳಗಾಂವಿಗೆ ಹೊರಟರು. ಆಗ ಶ್ರೀಮಂತರು ಲಖು ಮಾಮಾ ನೀವು ನಿಮ್ಮ ಸ್ಥಳವನ್ನು ಬೇಗನೆ ಬಿಡಬೇಕಾಗಿದೆಯೆಂದು ಕೇಳು ತ್ತೇನೆ. ಹೀಗಿದ್ದರೆ ನೀವು ನಿಮ್ಮ ಕಾರ್ಖಾನೆ ಸಹಿತವಾಗಿ ನಮ್ಮ ಸಂಸ್ಥಾ ನಕ್ಕೆ ಏಕೆ ಬರಬಾರದು ? ಈಗ ನಾನು ನಿಮ್ಮ ಗೆಳೆಯನೆಂದು ಮಾತನಾಡು ತ್ತಿರದೆ ಔಂಧದ ಅಧಿಪತಿಯೆಂದು ಮಾತನಾಡುತ್ತಿರುವೆ. ಇದು ನಿಮಗೆ ಒಪ್ಪಿತ ವಾದರೆ ನಿಮಗೆ ಬೇಕಾದಷ್ಟು ಸ್ಥಳವನ್ನೂ ಅಲ್ಪಸ್ವಲ್ಪ ಭಂಡವಲವನ್ನೂ ಕೊಡ ಬಹುದು. ಈಗ ಹೇಳಿರಿ, ಇದಕ್ಕೆ ನಿಮ್ಮ ಸಿದ್ಧತೆಯಿದೆಯೆ ? ಎಂದರು.

ಅನಪೇಕ್ಷಿತ ಹಾಗೂ ಆಕಸ್ಮಿಕವಾಗಿ ಬಂದ ಈ ಪ್ರಶ್ನೆಗೆ ಲಕ್ಷ್ಮಣ ರಾಯರು ಒಮ್ಮೆಲೆ ಹೇಗೆ ಉತ್ತರ ಕೊಡಬಲ್ಲರು ? ಆಗ ಅವರು "ಇದನ್ನು ವಿಚಾರ ಮಾಡಲು ನನಗೆ ಸ್ವಲ್ಪ ಸಮಯ ಬೇಕು. ಅಲ್ಲದೆ ರಾಮೂ ಅಣ್ಣಾ ಹಾಗೂ ಕೆ. ಕೆ. ಯವರ ಅಭಿಪ್ರಾಯವನ್ನು ಕೇಳಿಕೊಳ್ಳುವದು ಅವಶ್ಯವಿದೆ." ಎಂದರು. ಶ್ರೀಮಂತರು ಆಳಿಗೆ ಗಾಡಿ ನಿಲ್ಲಿಸಲು ಹೇಳಿ 'ನಾವು ಮರಳಿಹೋಗು,

ಆದರೆ ನಾನು ಮರಳಿ ಬರುವದರೊಳಗಾಗಿ ನಿಮ್ಮ ಉತ್ತರವು ಸಿದ್ಧವಾಗಿ ರಲಿ' ಎಂದು ಅಂದರು.

ಈ ಪ್ರಶ್ನೆಯು ಬಹು ಕಠಿಣವಿದ್ದಿತು. ಔಂಧ ಸಂಸ್ಥಾನಕ್ಕೆ ಹೋಗುವ ದೆಂದರೆ ಎಲ್ಲಿಗೆ? ರೇಲ್ವೆಯಿಂದ ದೂರದಲ್ಲಿ ಸ್ಥಳ ದೊರೆತರೆ, ಅದು ಸಿಕ್ಕರೂ ಸಿಗದಂತೆಯೇ. ಅಲ್ಲದೆ ಅದು ನಿರ್ಜನ ಪ್ರದೇಶವಾಗಿರಬಾರದು. ನೀರಿನ ಅನುಕೂಲತೆ ಸಾಕಷ್ಟಿರಬೇಕು. ರಹದಾರಿ, ಪೇಟೆ, ಪೋಸ್ಟ-ಕಚೇರಿ ಇವೆಲ್ಲ ಸಾಧನಗಳು ಉದ್ಯಮಕ್ಕೆ ಅವಶ್ಯ. ಹೀಗೆ ಒಂದಲ್ಲ ಎರಡಲ್ಲ ಅನೇಕ ವಿಚಾರ ತರಂಗಗಳು ತಲೆಯಲ್ಲಿ ಬಂದವು. ಆದರೆ ಅವೆಲ್ಲ ವಿಚಾರಗಳನ್ನು ತೂಗಿ ನೋಡಲು ಸಮಯವಿತ್ತೆಲ್ಲಿ? ಕೊನೆಗೆ ಆ ಮೂವರೂ ಕೂಡಿ ತಿಕ್ಕಾಡಿ, ವಿಚಾರಮಾಡಿ ಅನಾನುಕೂಲತೆಗಳಿದ್ದರೂ ರೇಲ್ವೆಸ್ಟೇಶನ್ ಮಾತ್ರ ಸಮೀಪ ವಿರುವಂಥ ವಿಶಾಲ ಸ್ಥಳವು ದೊರೆಯುವಂತಿದ್ದರೆ ಅದನ್ನು ಒಪ್ಪಬೇಕೆಂದು ನಿರ್ಣಯಕ್ಕೆ ಬಂದರು.

ನಾಲ್ಕೈದು ತಾಸುಗಳ ನಂತರ ಶ್ರೀಮಂತರ ಸ್ವಾರಿಯು ಮನೆಗೆ ಬಂದಿತು. ಲಕ್ಷ್ಮಣರಾಯರು ತಮ್ಮ ತೊಂದರೆಗಳನ್ನೆಲ್ಲ ಅವರ ಎದುರಿ ಗಿಡಲು ಶ್ರೀಮಂತರು ಔಂಧ ಸಂಸ್ಥಾನದ ನಕಾಶವನ್ನೇ ಅವರೆದುರಿಗೆ ಬಿಚ್ಚಿ ಟ್ಟರು. ಇಡೀ ಸಂಸ್ಥಾನದಲ್ಲಿ ಕುಂಡಲರೋಡ ಎಂಬ ಚಿಕ್ಕ ಸ್ಟೇಶನ್ ಮಾತ್ರ ಇದ್ದಿತು. ಉಳಿದೆಲ್ಲ ವಿಚಾರಗಳಿಗೆ ಆಸ್ಪದವೇ ಇರಲಿಲ್ಲ. ಕೂಡಲೇ ಲಕ್ಷ್ಮಣ ರಾಯರು ಸ್ಟೇಶನ್ ಸಮೀಪ ಇರುವ ಸ್ಥಳವನ್ನು ನಿರೀಕ್ಷಿಸಿ ಪೆನ್ಸಿಲಿನಿಂದ ಒಂದು ಚೌಕೋನವನ್ನು ತೆಗೆದು ಇಷ್ಟು ಸ್ಥಳವು ನಮಗೆ ದೊರೆತರೆ ನಾವು ನಮ್ಮ ಕಾರ್ಖಾನೆಯನ್ನು ಅಲ್ಲಿಗೆ ತರುವೆವು ಎಂದರು.

ಆಗ ಶ್ರೀಮಂತರು ಕೂಡಲೇ "ಒಳ್ಳೇದು, ಆ ಸ್ಥಳವನ್ನು ನಿಮಗೆ ಇನಾಮು ಪತ್ರ ಮಾಡಿ ಕೊಡಲು ಈಗಲೇ ಆಜ್ಞಾಪಿಸುವೆ. ನೀವು ಮುಂದಿನ ಕಾರ್ಯಕ್ಕೆ ಹತ್ತಿರಿ" ಎಂದರು. ಎಂತಹ ಗೆಳೆತನವಿದು! ಎಂತಹ ಉದ್ಯೋಗ ಪ್ರೀತಿ!!

## ೮

# ಕಿರ್ಲೋಸ್ಕರವಾಡಿಯ ಸ್ಥಾಪನೆ

ಕುಂಡಲವು ಸದರ್ನ ಮರಾಠಾ ರೇಲ್ವೆ ಮಾರ್ಗದಲ್ಲಿ ಒಂದು ಚಿಕ್ಕ ನಿಲ್ದಾಣವು. ಸುತ್ತು ಮುತ್ತಲಿನ ಕುಂಡಲ, ಪಲೂಸ ಬುರ್ಲಿ ಬುಧೊಂಡಿ ಮೊದಲಾದ ೩-೪ ಮೈಲುಗಳೊಳಗಿರುವ ಊರುಗಳಿಗೆ ಅನುಕೂಲವಿದ್ದಿತು. ಗಾಡಿಯು ಬಂದಾಗ ಮಾತ್ರ ಅಲ್ಲಿ ಮಾನವರ ಅಲ್ಪ ಸ್ವಲ್ಪ ಸುಳಿದಾಟ. ಈ ಸ್ಟೆಶನ್ನಿನಲ್ಲಿ ಗಾಡಿ ನಿಲ್ಲುತ್ತಿದ್ದುದು ಜನರ ಅನುಕೂಲತೆಗಲ್ಲ. ಗಾಡಿಗೆ ನೀರು ತುಂಬುವದಕ್ಕಾಗಿ.

೧೯೧೦ ನೇ ಮಾರ್ಚವಲ್ಲಿ ಒಂದು ದಿನ ಮಧ್ಯಾನ್ಹ ಲಕ್ಷ್ಮಣರಾಯರು ಅಂತೋಬಾ, ಫಳಣೀಕರ, ಟೋಪಣ್ಣಾ, ಬಡಗೇರ ಮತ್ತು ಆಳುಮಗನಾದ ಧನ್ಯಾ ಇಷ್ಟು ಜನರೊಂದಿಗೆ ಕುಂಡಲ ಸ್ಟೇಶನ್ನಿನಲ್ಲಿ ಇಳಿದರು. ಲಕ್ಷ್ಮಣರಾಯರು ನಕಾಶವನ್ನು ಬಿಚ್ಚಿದರು. ತಮಗೆ ದೊರೆತ ಸ್ಥಳವನ್ನು ಅಲ್ಲಿದ್ದ ಜಾಲೀಮರದಿಂದ ದಿಟ್ಟಿಸಿ ನೋಡಿದರು. ಅಲ್ಲಿ ಅವರಿಗೆ ಕಂಡದ್ದೇನು ? ಗಿಡ-ಮರಗಳಿಲ್ಲದ ಒಂದು ದಿನ್ನಿ, ಅದರಲ್ಲಿ ಅಲ್ಲಲ್ಲಿ ಹಬ್ಬಿದ ಮುಳ್ಳುಗಳ್ಳಿ, ಮೋಡದ ಸುಳಿವು ಕೂಡ ಇಲ್ಲದ ವಿಶಾಲವಾದ ಆಕಾಶ, ಸ್ಟೇಶನ್ನಿನ ಹತ್ತಿರ ಸ್ಟೇಶನ್ ಮಾಸ್ತರನ ಹಾಗೂ ಒಬ್ಬಿಬ್ಬ ಪೋರ್ಟರರ ಮನೆ. ಒಂದು ಚಿಕ್ಕ ಧರ್ಮಶಾಲೆ. ಬೆಳಗಾಂವಿಯಂತಹ ತಂಪಾದ ಹವೆಯಿಂದ ಬಂದ ಈ ಜನಕ್ಕೆ, ರಣಗುಟ್ಟುವ ಈ ಬಿಸಿಲಿನ ಈ ಭಯಾನಕ ದೃಶ್ಯ ಕಂಡು ಏನು ಅನಿಸಿರಬೇಕು ?

ಹೋಳಿಹುಣ್ಣಿವೆಯ ಕರಿದಿನ, ಕಿರ್ಲೋಸ್ಕರವಾಡಿಯ ಮುಹೂರ್ತ ಮಾಡಲು ರಾಯರು ಹೊರಟಿದ್ದರು. ಮಹತ್ವದ ಕಾರ್ಯ ಪ್ರಾರಂಭಿಸಲು ಈ ದಿನ ಒಳ್ಳೆಯದೋ ಕೆಟ್ಟದೋ ಈ ವಿಚಾರವೇ ಅವರಲ್ಲಿ ಸುಳಿದಿರಲಿಲ್ಲ. ಇಂತಹ ಭಾವುಕ ಕಲ್ಪನೆಗಳಲ್ಲಿ ಅವರಿಗೆ ವಿಶ್ವಾಸವಿರಲಿಲ್ಲ.

ಇಂತಹ ಉರಿಬಿಸಿಲಿನಲ್ಲಿಯೇ ತಮ್ಮ ಸ್ಥಳವನ್ನು ನೋಡಲು ಹೊರಟಿದ್ದರು. ಸುತ್ತುಮುತ್ತು ಮುಳ್ಳುಗಳ್ಳಿ ಹಬ್ಬಿದ್ದರೆ ಕಾಲಲ್ಲಿ ನೆಗ್ಗಲಿ ಮುಳ್ಳುಗಳು, ಇಷ್ಟರಲ್ಲಿ ಒಂದು ನಾಗರಹಾವು ದಾರಿಯಲ್ಲಿ ಅಡ್ಡಬಂದು ಸರಸರನೆ ಮುಳ್ಳು

ಗಳ್ಳಿಯಲ್ಲಿ ಸೇರಿತು. ಎಷ್ಟೋದಿನಗಳಿಂದ ಬೀಳುಬಿದ್ದ ಇಂತಹ ಅಡವಿಯಲ್ಲಿ ಹಾವುಗಳಿಗೇನು ಕೊರತೆ? ನಿಜವಾಗಿಯೂ ಅವುಗಳದೇ ಸಾಮ್ರಾಜ್ಯವದು. ಊರಿನ ಸುರಕ್ಷತೆಗಾಗಿ ಅವರು ಮುಂದೆ ಕೆಲದಿನ ಜನಮೇಜಯನಂತೆ ಸರ್ಪ ಯಾಗವನ್ನೇ ಕೈಕೊಳ್ಳಬೇಕಾಯಿತು.

ಈ ಅಡವಿಯಲ್ಲಿ ರಾಯರಿಗೆ ಒಂದು ಬನ್ನೀಮರ ಕಂಡಿತು. ಅದರ ನೆರಳಲ್ಲಿ ಕುಳಿತು ಬುತ್ತಿ ತಿನ್ನುವಾಗ ಕಾರಖಾನೆಯನ್ನು ಯಾವದಿಕ್ಕಿನಲ್ಲಿ ಹಾಕಬೇಕು? ಮನೆಗಳನ್ನು ಎಲ್ಲಿ ಕಟ್ಟಿಸಬೇಕು? ಎಂಬುದನ್ನು ನಿಶ್ಚಯಿ ಸಿದರು. ಮರಳಿ ಸ್ಟೇಶನ್ನಿಗೆ ಬಂದು ಬೆಳಗಾವಿಯಿಂದ ಬಂದ ಬಂಬು, ತಟ್ಟಿ, ತಗಡುಗಳನ್ನು ಇಳಿಸುವ ಕೆಲಸದಲ್ಲಿ ತೊಡಗಿದರು. ಇಲ್ಲಿ ಹಮಾಲರು ಎಲ್ಲಿಂದ ಬರಬೇಕು? ಕೆಲ ಚಾಪಿಗಳಿಂದ ಧರ್ಮಶಾಲೆಯ ಹತ್ತಿರ ಸಂಜೆಯ ಒಳಗಾಗಿ ಒಂದು ಗುಡಿಸಲನ್ನು ಕಟ್ಟಿದರು. ಇದೇ ಕಿರ್ಲೋಸ್ಕರವಾಡಿಯಲ್ಲಿಯ ಮೊದಲನೇ ಮನೆ.

ಇಂತಹ ಗೊಂಡಾರಣ್ಯದಲ್ಲಿ ಬಂದು ಬಿಡಾರಮಾಡಲು ಸಾಮಾನ್ಯ ಜನರಿಗೆ ಧೈರ್ಯ ಉಂಟೆ? ಆದರೆ ಲಕ್ಷ್ಮಣರಾಯರು ತದ್ವಿರುದ್ಧವಾಗಿ ಒಂದು ಸ್ವಪ್ನದಲ್ಲಿ ಇರುವಂತೆ ಕಂಡುಬಂದಿತು. ಇದಕ್ಕೆ ಕಾರಣಗಳಿಲ್ಲದಿರಲಿಲ್ಲ. ಇತ್ತೀಚೆಗೆ ಪಾಶ್ಚ್ಯಾತ್ಯ ರಾಷ್ಟ್ರಗಳಲ್ಲಿ ಕಾರಖಾನೆದಾರರು ಕೂಲಿಕಾರರ ಸಲುವಾಗಿ ಹೊಸ ಹೊಸ ವಸಾಹತುಗಳನ್ನು ಸ್ಥಾಪಿಸುತ್ತಿರುವದನ್ನು ಮಾಸಿಕ ದಲ್ಲಿ ಓದಿದ್ದರು. ತಾವು ಹೊಸದಾಗಿಯೇ ಕಾರಖಾನೆಯನ್ನು ಸ್ಥಾಪಿಸುತ್ತಿರು ವಾಗ ಅವರ ಕಿತ್ತಿಯನ್ನೇ ತಾವೂ ಏಕೆ ತೀಡಬಾರದು? ಎಂಬ ವಿಚಾರವು ಅವರನ್ನು ಕೆರಳಿಸಿತ್ತು. ಪೋರ್ಟ್ಸನ್‌ಲಾಯಿಟ ಮತ್ತು ಕ್ಯಾಡಬರೀ ಕಂಪನಿಗಳು ಸ್ಥಾಪಿಸಿದ ಬೋರ್ನ್ವ್ಹಿಲ್ ಔದ್ಯೋಗಿಕ ಪಟ್ಟಣದ ಎಲ್ಲ ಸಂಗತಿ ಗಳೂ ಅವರಿಗೆ ಗೊತ್ತಿದ್ದವು. ಅವರ ಮನಸ್ಸನ್ನು ವಿಶೇಷವಾಗಿ ಸೆಳೆದ ಚಿತ್ರವೆಂದರೆ ಅಮೇರಿಕೆಯಲ್ಲಿಯ ನ್ಯಾಶನಲ್ ಕ್ಯಾಶ ರಜಿಸ್ಟರ ಕಂಪನಿಯು ತನ್ನ ಕೆಲಸಗಾರರಿಗಾಗಿ ನಿರ್ಮಿಸಿದ ವಸಹಾತು. ಈ ವಸಹಾತಿನಲ್ಲಿ ಕೆಲಸ ಗಾರರಿಗೆ ಗಾಳಿ ಬೆಳಕುಗಳುಳ್ಳ ಅಗ್ಗ ಮನೆ, ಮಕ್ಕಳಿಗೆ ಕಲಿಯಲು ಶಾಲೆ, ಆಡಲು ಬೈಲು, ದವಾಖಾನೆ, ಮನರಂಜನೆಗಳ ಮಂದಿರಗಳು, ಕೈದೋಟ ಮೊದಲಾದವುಗಳಿದ್ದವು. ಇಂತಹ ಸುಂದರವಾದ ಚಿತ್ರವು ಅವರ ಕಣ್ಣೆದುರಿಗೆ ಇದ್ದಿತು.

ಕೂಲಿಕಾರರಿಗೆ ಅನುಕೂಲತೆಗಳನ್ನು ಒದಗಿಸಿಕೊಟ್ಟರೆ ಅವರು ತಮ್ಮ ಕೆಲಸವನ್ನು ಹೆಚ್ಚು ದಕ್ಷತೆಯಿಂದ ಮಾಡುವರೆಂದು ಕಾರ್ಖಾನೆದಾರರ ಅನುಭವವಾಗಿದ್ದಿತು. ಈ ಉಪಕ್ರಮವು ಕಾರಖಾನೆಯ ದೃಷ್ಟಿಯಿಂದ ಹಿತಕರವೆಂದು ಎಲ್ಲರಿಗೂ ಮನವರಿಕೆಯಾಗಿದ್ದಿತು.

ಅಲ್ಲದೆ ಭಾರತದಲ್ಲಿ ತಾವೇ ಮೊದಲು ಈ ಉಪಕ್ರಮವನ್ನು ಮಾಡುವವರು ಎಂಬ ವಿಚಾರವು ಅವರನ್ನು ಮತ್ತಷ್ಟು ಉತ್ತೇಜನಗೊಳಿಸಿತ್ತು. ಈ ಕಲ್ಪನೆಯು ಸುಂದರವಾಗಿದ್ದರೂ ಪ್ರತ್ಯಕ್ಷ ಕೃತಿಗಿಳಿಸುವದು ಅಷ್ಟು ಸುಲಭವಿರಲಿಲ್ಲ. ಒಂದು ಚಿಕ್ಕ ಮನೆ ಕಟ್ಟಬೇಕಾದರೆ ಎಷ್ಟೋ ತೊಂದರೆಗಳನ್ನು ಎದುರಿಸಬೇಕಾಗುವದು. ರಾಯರಂತೂ ಒಂದು ಊರನ್ನೇ ಕಟ್ಟಲು ಹೊರಟಿದ್ದರು. ಇವೆಲ್ಲವೂ ಹದಿನಾಲ್ಕುವರೆ ಸಾವಿರ ರೂಪಾಯಿಗಳ ಬಲದಿಂದ. ರಾಜಾಸಾಹೇಬರು ಕೊಟ್ಟ ಕೈಗಡ ೧೦,೦೦೦ ರೂಪಾಯಿ, ಕಳಕವಾಡಿಯನ್ನು ಬಿಡುವ ಮುಂದೆ ಕಲೆಕ್ಟರರು ಲುಕ್ಸಾನವೆಂದು ಕೊಡಿಸಿದ ೪೫೦೦ ರೂಪಾಯಿ ಇವೇ ಇವರ ಬಂಡವಲು. ಆದರೆ ಈ ಬಂಡವಲಿನಕ್ಕಿಂತಲೂ ಲಕ್ಷ್ಮಣರಾಯರ ಆತ್ಮವಿಶ್ವಾಸವೇ ಪ್ರಬಲಶಕ್ತಿಯಾಗಿದ್ದಿತು.

ಲಕ್ಷ್ಮಣರಾಯರಿಗೆ ದೊರೆತ ಸ್ಥಳವು ೩೬ ಎಕರೆ ಇದ್ದಿತು. ಸ್ಟೇಶನ್ನಿನಿಂದ ಒಂದು ಫರ್ಲಾಂಗಿನ ಮೇಲೆ ಊರು ಹಾಗೂ ಕಾರಖಾನೆಗಳು ಇದ್ದವು. ಸ್ಟೇಶನ್ನಿನಲ್ಲಿ ಇಳಿದ ಸಾಮಾನುಗಳನ್ನು ಅಲ್ಲಿಗೆ ಸಾಗಿಸುವದೆಂತು? ಎಂಬ ಪ್ರಶ್ನೆಯು ಎದುರಾಯಿತು. ಚಕ್ಕಡಿಗಳು ಸಿಗಲಿಲ್ಲ. ಸಿಕ್ಕರೂ ಮನಬಂದಂತೆ ಬಾಡಿಗೆ ಕೇಳಹತ್ತಿದರು. ಇವೆಲ್ಲವನ್ನು ನೆನೆದು ಲಕ್ಷ್ಮಣರಾಯರು ಬೆಳಗಾಂವಿಯಿಂದ ಎರಡು ಚಕ್ಕಡಿಗಳನ್ನು ತರಿಸಿ ನಾಲ್ಕು ಎತ್ತುಗಳನ್ನು ಕೊಂಡು, ಜೊಡಿ ಅಂತೋಬಾನಿಗೆ ಗಾಡಿ ಹೊಡೆಯಲು ಹೇಳಿದರು. ಇವರ ನೀರನ್ನು ಅರಿತು ಜನ ತಾವಾಗಿಯೇ ದಿನಗೂಲಿಗೆ ಬರಹತ್ತಿದರು.

ಕಾರಖಾನೆಯ ಜೊತೆಗೆ ಹೊಸ ವಸತಿ ಸ್ಥಾನಕ್ಕೆ ಬರಲು ಬಯಸುವ ೨೦–೩೫ ಜನ ಕೆಲಸಗಾರರು ಕುಟುಂಬ ಸಹಿತವಾಗಿ ಕುಂಡಲ ಸ್ಟೇಶನ್ನಕ್ಕೆ ಬಂದು ಇಳಿದರು. ಈ ಗುಂಪು ಬರಹೋಗುವ ಗಾಡಿಗಳ ಜನರ ಲಕ್ಷ್ಯವನ್ನು ಸೆಳೆಯಿತು. ಬೇಸಿಗೆ ಇದ್ದ ಮೂಲಕ ಎಲ್ಲ ಜನ ಬೈಲಲ್ಲಿಯೇ. ಎಲ್ಲರ ಅಡಿಗೆಯು ಮಾತ್ರ ಧರ್ಮಶಾಲೆಯಲ್ಲಿ. ಸೌ|| ಕಿರ್ಲೋಸ್ಕರ ರಾಧಾಬಾಯಿಯವರ ಒಲೆಯ ಹತ್ತಿರವೇ ಬಡಿಗ ಸಂತುವಿನ ಹೆಂಡತಿ ಒಲೆ ಹೂಡಿದ್ದಳು. ಅವಳ



ಸಮಾಜ ಮಂದಿರ ೧೯೧೭



ಸಮಾಜಮಂದಿರದಲ್ಲಿಯ ಶ್ರಾವಣಿ ೧೯೩೧



ಶಂಕರರಾವ ಕ., ಅನಂತರಾವ ಫ, ಶಂಭುರಾವ ಜಾ, ಭಾವೂರಾವ ಪಾ.



ನ. ಚಿ. ಕೇಳಕರರ ಭೆಟ್ಟಿ ೧೯೨೫

ಮಗ್ಗಲಿಗೇ ಶಾತ್ಯಾ ಹಜಾಮನ ಹೆಂಡತಿಯ ಒಲೆ. ಎಷ್ಟೇ ತೊಂದರೆಗಳಿದ್ದರೂ ಸಹಜೀವನದ ಆನಂದವು ಎಲ್ಲರನ್ನೂ ತೃಪ್ತಿಪಡಿಸಿತು. ಆದರೆ ಹೆಣ್ಣುಮಕ್ಕಳು ಮಾತ್ರ "ಏನಿದು ಎಷ್ಟು ಭಕ್ಕರಿ ಬಡಿದರೂ ಎಲ್ಲವನ್ನೂ ಬಗೆಹರಿಸುವರಲ್ಲ ?" ಎಂದು ಗುಣುಗುಟ್ಟುತ್ತಿದ್ದರು. ಮಲೆನಾಡಿನಲ್ಲಿಯ ಈ ಜನಕ್ಕೆ ಬೈಲುಸೀಮೆಯ ಒಣ ಹವೆ ಹಾಗೂ ನೀರಿನಿಂದ ಅವರ ಹಸಿವೆಯು ಇಮ್ಮಡಿಯಾಗಿದ್ದಿತು.

ಮೊದಲಿಗಂತೂ ನೀರಿನ ತೊಂದರೆಯು ಬಹಳವಾಯಿತು. ರೇಲ್ವೆಗೆ ನೀರು ಕೊಡುವ ಕಂಬದಿಂದ ಹನಿ ಹನಿಯಾಗಿ ಬೀಳುವ ನೀರನ್ನು ಹಿಡಿದುಕೊಂಡು ತರಬೇಕಾಗುತ್ತಿತ್ತು. ಮುಂದೆ ಕಿರ್ಲೋಸ್ಕರವಾಡಿಯಿಂದ ಅರ್ಧ ಮೈಲು ದೂರವಿರುವ ಕೋಟದ ಭಾವಿಯಿಂದ ಪೀಪುಗಳನ್ನು ತುಂಬಿ ತಂದು ನೀರನ್ನು ಊರಲ್ಲಿ ಹಂಚಹತ್ತಿದರು. ಮುಂದೆ ಆ ಭಾವಿಗೆ ನಳ ಹಾಕಿ ನೀರು ತರುವ ವ್ಯವಸ್ಥೆ ಮಾಡಿದರು. ಈ ಬಾವಿಯಿಂದ ಬಂದ ನೀರು ಊರಲ್ಲಿಯ ಒಂದು ಹೌದಿಗೆ ಬಿಡಲ್ಪಡುತ್ತಿತ್ತು. ಅಲ್ಲಿಂದ ತುಂಬಿಕೊಂಡು ಹೋಗುತ್ತಿದ್ದರು. ನೀರಿಗಾಗಿ ಊರಲ್ಲಿ ಭಾವಿಯನ್ನು ತೋಡಲು ಯತ್ನಿಸಿ ಅಯಶಸ್ವಿಗಳಾದರು. ಈಗ ವಾಡಿಯಲ್ಲಿ ನಳಗಳಾಗಿವೆ. ನೀರು ಸಮೃದ್ಧಿಯಾಗಿದೆ. ಆದರೆ ನೀರನ್ನು ಮಾತ್ರ ನಾಲ್ಕು ಮೈಲು ದೂರದಿಂದ ಪಂಪು ಮಾಡಿ ತರಬೇಕಾಗುತ್ತದೆ.

ಲಕ್ಷ್ಮಣರಾಯರು ಸ್ವತಃ ಹೋಕಾಯಂತ್ರ ಹಾಗೂ ಟೇಪನ್ನು ತೆಗೆದು-ಕೊಂಡು ಪೂರ್ವ--ಪಶ್ಚಿಮ, ದಕ್ಷಿಣೋತ್ತರ ಬೀದಿಯ ಗೆರೆಗಳನ್ನು ಎಳೆದು ಎಲ್ಲ ಮನೆಗಳು ಒಂದೇ ರೇಷೆಯಲ್ಲಿ ಕಟ್ಟಲ್ಪಡುವಂತೆ ಹಾಗೂ ಮನೆಯಿದುರು ಅಂಗಳವಿರುವಂತೆ ಮಾಡಿದರು. ಮನೆಗಳಿಗಾಗಿ ಮಣ್ಣಿನ ಹೆಂಟೆಗಳು ಎಳೆಯಲ್ಪಟ್ಟವು. ಹಂಚುಗಳು ಬಂದು ಬಿದ್ದವು. ಪಾಯಾತೋಡಲು ಪ್ರಾರಂಭವಾಯಿತು. ರಾತ್ರಿ ಹಗಲೆನ್ನದೆ ಎಲ್ಲ ಜನರು ದುಡಿದದ್ದರಿಂದ ಹತ್ತು-ಹನ್ನೆರಡು ಮನೆಗಳು ಮೂರೆ ತಿಂಗಳಲ್ಲಿ ಮುಗಿದವು.

ಹೀಗೆ ಮನೆಕಟ್ಟುತ್ತಿರುವಾಗಲೆ ಅತ್ತ ಕಾರಖಾನೆಯೂ ಕಟ್ಟಲ್ಪಟ್ಟಿತು. ಬೆಳಗಾಂವಿಯಲ್ಲಿಯ ಒಂದೊಂದು ತಗಡಿನ ಮನೆಯನ್ನು ಬಿಚ್ಚಿ ಅದರಲ್ಲಿಯ ಸಾಮಾನುಸಹಿತವಾಗಿ ತಂದು ಇಲ್ಲಿ ನಿಲ್ಲಿಸಲಾಗುತ್ತಿತ್ತು. ಇದರಿಂದ ಕೆಲಸವು ಎಂದೂ ನಿಲ್ಲಲಿಲ್ಲ. ತಳಕವಾಡಿಯ ಕಾರಖಾನೆಯು ಈ ಬಗೆಯಾಗಿ

ಸ್ಥಳಾಂತರಿಸಲ್ಪಟ್ಟು ' ಕಾರ್ಯವು ಅಖಂಡವಾಗಿ ನಡೆಯುವಂತೆ ಮಾಡಿದುದು ಲಕ್ಷ್ಮಣರಾಯರ ಬುದ್ಧಿವಂತಿಕೆಯ ದ್ಯೋತಕವು.

ಗಿಡ ಮರಗಳಿಲ್ಲದೆ ಊರು ಶೋಭಿಸುವದೆಂತು? ಆದರೆ ಕಲ್ಲು ಬಂಡೆಗಳಿಂದ ತುಂಬಿದ ಈ ಮರಡಿಯಲ್ಲಿ ಗಿಡಗಳು ಬೆಳೆಯುವ ಬಗೆಹೇಗೆ? ಅದಕ್ಕಾಗಿ ಲಕ್ಷ್ಮಣರಾಯರು ಹೊಸ ಸೃಷ್ಟಿಯನ್ನೇ ಮಾಡಿದರು. ಆಳುದ್ದ ತಗ್ಗು ತೆಗೆದು ಅದರಲ್ಲಿ ಮಣ್ಣುಗೊಬ್ಬರಗಳನ್ನು ತುಂಬಿ ಆಶೋಕ, ಸಿಲ್ವರ ಓಕ ಇಂಡಿಯನ್‌ಕಾಕ, ಗುಲ್ ಮೋಹರ ಮೊದಲಾದ ಗಿಡಗಳನ್ನು ಹಚ್ಚಿದರು.

ಊರು ಬಲಿಯ ಹತ್ತಿದ್ದರೂ ಕಿರಾಣಿ ಅಂಗಡಿ ಇರಲಿಲ್ಲ. ಕುಂಡಲದ ಸಂತೆಗೆ ಗಾಡಿ ಕಳಿಸಿ ಎಲ್ಲರಿಗೂ ಬೇಕಾಗುವ ಸಾಹಿತ್ಯವನ್ನು ತರಿಸಿ, ಹಂಚುತ್ತಿದ್ದರು. ಮಾಯಪ್ಪಾದೇವಸ್ಥಾನದಲ್ಲಿ ಏಳೆಂಟು ಹುಡುಗರಿಂದ ಶಾಲೆಯು ಪ್ರಾರಂಭವಾಯಿತು. ಜರಂಡೀಕರರು ಮಾಸ್ತರರಾದರು.

ಹೀಗೆ ಈ ಚಿಕ್ಕ ಹಳ್ಳಿಯು ರೂಪವನ್ನು ತಾಳಹತ್ತಿತು. ಆ ವರ್ಷ ಮಳೆಯಲ್ಲಿ ಭೂತ ಸಂಚಾರವಾಗಿತ್ತೋ ಏನೋ. ಪ್ರಾರಂಭವಾದ ಮಳೆಯು ಅಖಂಡವಾಗಿ ಹೊಡೆಯಹತ್ತಿತು. ಈ ಅತಿವೃಷ್ಟಿಗೆ ಮನೆಗಳೆಲ್ಲ ಬಿದ್ದವು. ಊರೆಲ್ಲ ಕೆಸರುಮಯವಾಯಿತು. ನಿಲ್ಲಲು ಬೆಚ್ಚಗಿನ ಸ್ಥಳವೇ ಇಲ್ಲದಾಯಿತು.

ಇಂತಹ ಮಳೆಯಲ್ಲಿಯೇ ಒಬ್ಬ ಕೆಲಗಾಗಾರನ ಹೆಂಡತಿಯು ಬೇನೆತಿನ ಹತ್ತಿದಳು. ಈ ಪರಿಸ್ಥಿತಿಯಲ್ಲಿ ಆಕೆಗೆ ಸಹಾಯ ಮಾಡುವವರಾರು? ಕು. ಸೌ॥ ರಾಧಾಬಾಯಿ ಹಾಗೂ ಗಂಗಾಬಾಯಿ ಜಾಂಭೆಕರರು ಆಕೆಯ ನೆರವಿ-ಗಾಗಿ ಧಾವಿಸಿದರು. ತಲೆಯ ಮೇಲೆ ಎರಡು ತಗಡು ನಿಲ್ಲಿಸಿದರು. ಆಕೆಯು ಸುರಕ್ಷಿತವಾಗಿ ಅವಳಿ-ಜವಳಿ ಮಕ್ಕಳನ್ನು ಹೆತ್ತಳು. ಹೊಸ ಊರನ್ನು ಕಟ್ಟುವದೆಂದರೆ ಸಾಮಾನ್ಯ ಕೆಲಸವಲ್ಲ. ಎಷ್ಟುಬಗೆಯ ಹೊಣೆಗಾರಿಕೆಯನ್ನು ಹೊರಬೇಕಾಗುತ್ತದೆಂಬುದಕ್ಕೆ ಈ ಉದಾಹರಣೆಯು ಸಾಕ್ಷಿಯಾಗಿದೆ.

ಮಳೆ ನಿಂತಿತು. ಬಿದ್ದ ಮನೆಗಳನ್ನೆಲ್ಲ ಕಟ್ಟಬೇಕಾಗಿದ್ದಿತು. ಬಲೆಯಲ್ಲಿ ಬಿದ್ದ ಎರಳೆಯಂತೆ ರಾಯರ ಗತಿಯಾಗಿದ್ದಿತು. ಬಿಳಿಮಣ್ಣು ಬೆರೆಯದೆ ಹೆಂಟೆಗಳು ಗಟ್ಟಿಯಾಗಲಾರವೆಂದು ತಿಳಿದು ಬಿಳಿಮಣ್ಣುಳ್ಳ, ನಖಾತನೀಯವರ ಹೊಲಕೊಳ್ಳುವ ಯೋಚನೆ ಮಾಡಿದರು. ಆದರೆ ಕೈಯಲ್ಲಿ ಹಣವಿರಲಿಲ್ಲ. ರಾಜಾಸಾಹೇಬರನ್ನು ಕೇಳುವ ಮನಸ್ಸಿರಲಿಲ್ಲ. ಹಳೆಯ ಗೆಳೆಯರಾದ ಗಿಂಡೆ-ಯವರಿಗೆ ೧೦ ಸಾವಿರ ರೂಪಾಯಿ ಕಳಿಸಲು ಚೀಟಿ ಬರೆದು ಕೆ. ಕೆ. ಯವರನ್ನು

ಬೆಳಗಾವಿಗೆ ಕಳಿಸಿದರು. ಅವರು ಹಣ ತೆಗೆದುಕೊಂಡು ಬಂದೊಡನೆ ಉತ್ಸಾಹ ದಿಂದ ಕೆಲಸ ಪ್ರಾರಂಭವಾಯಿತು.

ಇಷ್ಟರಲ್ಲಿ ಬಂದಿತು ಆಷಾಢ ಏಕಾದಶಿ. ಕಾರಖಾನೆಯಲ್ಲಿ ಬಹುಜನ ವಿಠ್ಠಲಭಕ್ತರು. ಅವರು ಪಂಢರಪುರಕ್ಕೆ ಹೊರಡಲು ಸಿದ್ಧರಾದರು. ಅವರನ್ನು ತಡೆದು ಅವರ ಮನನೋಯಿಸಲು ರಾಯರು ಬಯಸಲಿಲ್ಲ. ಅವರಿಗೆ ಹೋಗಲು ರಜೆಯಿತ್ತರು. ವಿಠ್ಠಲ ಭಕ್ತರಿಗೆಲ್ಲ ಅನುಕೂಲವಾಗುವಂತೆ, ಊರಲ್ಲಿಯೇ ವಿಠ್ಠಲಮಂದಿರ ಕಟ್ಟಿಸಿ, ತಮ್ಮ ಅಣ್ಣಂದಿರಾದ ಸೊಲ್ಲಾಪೂರದ ಡಾ. ವಾಸುದೇವರಾವ ದಂಪತಿಗಳಿಂದ ಮೂರ್ತಿಗಳ ಪ್ರತಿಷ್ಠಾಪನೆ ಮಾಡಿಸಿ ದರು. ಈ ವಿಠ್ಠಲ ಮಂದಿರದಲ್ಲಿ ಈಗಲೂ ಕಕ್ಡಾರತಿ, ಪುರಾಣ ಪ್ರವಚನ ಗಳು ನಡೆಯುತ್ತವೆ.

ಮುಂದೆ ದೀಪಾವಳಿಯಲ್ಲಿ ರಂಟೆಗಳ ಹಂಗಾಮು ಬಂದಿತು. ಈ ಸಲ ಸುಗ್ಗಿಯೂ ಚನ್ನಾಗಿ ಆಗಿದ್ದರಿಂದ ರೈತರ ಕೈಯಲ್ಲಿ ಹಣ ಕುಣಿಯುತ್ತಿತ್ತು. ಅಂದಮೇಲೆ ರಂಟೆಗಳ ಬೇಡಿಕೆಗೆ ಕೊರತೆ ಎಲ್ಲಿಂದ ಬರಬೇಕು? ಹಂಗಾಮಿ-ಗೆಂದು ಸಿದ್ಧಪಡಿಸಿದ ರಂಟೆಗಳೆಲ್ಲ ಹಾ ಹಾ ಅನ್ನುವಷ್ಟರಲ್ಲಿ ಮಾರಾಟವಾದವು.

ಇಲ್ಲಿಯವರೆಗೆ ರಂಟೆಗಳ ಗಿರಾಕಿಗಳೆಂದರೆ ರೈತರು. ಆದರೆ ಪರಿಸ್ಥಿತಿಯು ಈಗ ಪಲ್ಲಟವಾಯಿತು. ನೇಗಿಲಗಳನ್ನು ಬಾಡಿಗೆಯಿಂದ ಕೊಡುವದು ಲಾಭ-ದಾಯಕವೆಂದು ಬುದ್ಧಿವಂತರಾದ ವ್ಯಾಪಾರಿಗಳಿಗೆ ಹೊಳೆಯಿತು. ಬಾರ್ಶಿ, ಲಾತೂರ, ತಳೇಗಾವ, ಧಮಧೇರೆ, ಪರಭಣಿ, ಅಕೋಲಾ ಮೊದಲಾದ ಊರುಗಳಿಂದ ನೇಗಿಲಗಳನ್ನು ಹೆಚ್ಚು ಪ್ರಮಾಣದಿಂದ ಕೊಳ್ಳುವ ವ್ಯಾಪಾರಿ-ಗಳು ಮುಂದೆ ಬಂದರು. ೬, ೧೦, ೪೦ ಹೀಗೆ ರಂಟೆಗಳನ್ನು ಕೊಳ್ಳಹತ್ತಿದ್ದರು. ಈ ರಂಟೆಗಳೊಡನೆಯೇ ಅವರ ಬಿಡಿಭಾಗಗಳ ಬೇಡಿಕೆಯೂ ಬೆಳೆಯಹತ್ತಿತು. ಹೀಗೆ ಉದ್ಯಮಕ್ಕೆ ಉತ್ತೇಜನ ದೊರೆತ ಮೇಲೆ ಸಾಹೇಬರ ಹಾಗೂ ಗಿಂಡೆ-ಯವರ ಬಡ್ಡೀ ಸಹಿತ ಹಣ ಮುಟ್ಟಿಸುವದಕ್ಕೆ ಎಷ್ಟು ತಡ! ಕಾರಖಾನೆಯ ಈ ಪ್ರಗತಿಯನ್ನು ಕಂಡು ರಾಜಾಸಾಹೇಬರು ಆನಂದಿತರಾಗಿ ವಾಡಿಗೆ ಬಂದು, ಪ್ರತಿಯೊಬ್ಬರ ಕೆಲಸವನ್ನು ನೋಡಿ ಪ್ರೇಮದಿಂದ ಅವರ ಬೆನ್ನ ಚಪ್ಪರಿಸಿದರು. ಈ ಸಂದರ್ಶನವು ಪ್ರತಿವರುಷದ ಕಾರ್ಯಕ್ರಮವಾಗಿ ಪರಿಣಮಿಸಿತು.

ಲಕ್ಷ್ಮಣರಾಯರಂಥ ಒಬ್ಬ ಕಲ್ಪಕ, ಕಲಾಕುಶಲಮನುಷ್ಯನು ತಮ್ಮ ಸಂಸ್ಥಾನದಲ್ಲಿ ಬಂದು ನೆಲೆಸಿದ್ದರಿಂದ ಸಂಸ್ಥಾನದಲ್ಲಿ ಅನೇಕ ಸುಧಾರಣೆಗಳನ್ನು

ಮಾಡಲು. ರಾಜಾಸಾಹೇಬರಿಗೆ ಒಬ್ಬ ಕರ್ತೃತ್ವಶಕ್ತಿಯುಳ್ಳ ಸಹಾಯಕನು ಸಿಕ್ಕಂತಾಯಿತು. ಅವರು ಲಕ್ಷ್ಮಣರಾಯರನ್ನು ಮೇಲಿಂದಮೇಲೆ ಔಂಧಕ್ಕೆ ಕರೆಯಿಸಿಕೊಂಡು ಚಿಕ್ಕ ದೊಡ್ಡ ಕೆಲಸಗಳನ್ನೆಲ್ಲ ಅವರಿಗೆ ಒಪ್ಪಿಸುತ್ತಿದ್ದರು. ರಾಮಾಯಣದ ಪಡಿಯಚ್ಚುಗಳನ್ನು ಮೊದಲುಮಾಡಿ ಊರಿಗೆ ನೀರು, ಬೆಳಕುಗಳನ್ನು ಪೂರೈಸುವಂತಹ ಮಹತ್ವದ ಎಲ್ಲ ಕಾರ್ಯಗಳಿಗೂ ಲಕ್ಷ್ಮಣ-ರಾಯರೇ ಬೇಕು. ಹೀಗಾಗಿ ಲಕ್ಷ್ಮಣರಾಯರು ರಾಜಾಸಾಹೇಬರ ಬಲಗೈ ಎನಿಸಿದರು. ರಾಜಾಸಾಹೇಬರು ತಮ್ಮ ಆಡಳಿತದಲ್ಲಿ ಲಕ್ಷ್ಮಣರಾಯರ ಮೇಲೆ ಎಂತಹ ಹೊಣೆಗಾರಿಕೆಯನ್ನು ಮುಂದೆ ಹೊರಿಸಿದರು. ಅವರು ಅದನ್ನು ಹೇಗೆ ಸಮರ್ಥ ರೀತಿಯಿಂದ ನಿರ್ವಹಿಸಿದರು ಎಂಬುದನ್ನು ಮುಂದೆ ವರ್ಣಿಸುವೆವು.

ಕಿರ್ಲೋಸ್ಕರವಾಡಿಯು ಒಂದು ವರುಷದಲ್ಲಿ ಚೆನ್ನಾಗಿ ಬೇರೂರಿತು. ಅಲ್ಲಿಯ ಜೀವನಕ್ಕೆ ಸ್ವಲ್ಪ ಸ್ಥಿರತೆಯು ಬಂದಿತು. ಉದ್ಯೋಗವೂ ಬಲಿಯುತ್ತ ನಡೆಯಿತು. ಆದರೆ ಲಕ್ಷ್ಮಣರಾಯರ ಕೋಶದಲ್ಲಿ ಸ್ವಾಸ್ಥ್ಯವೆಂಬುದೇ ಇರಲಿಲ್ಲ. 'ಮುಂದೆ ನಡೆ' ಎಂಬುದೇ ಅವರ ಮಂತ್ರ. ಅದನ್ನೇ ಅವರು ತಮ್ಮ ಸಹ-ಕಾರಿಗಳಲ್ಲಿ ಯಾವಾಗಲೂ ಬಿಂಬಿಸುತ್ತಿದ್ದರು. ಅದರ ಪರಿಣಾಮವೂ ಆಗುತ್ತಿದ್ದಿತು. ಯಾರಾದರೂ ಕೆಲಸದಲ್ಲಿ ಹೊಸತನವನ್ನು ತೋರಿದರೆ ರಾಯರು ಅದನ್ನು ಹೊಗಳಿ ಉತ್ತೇಜನವೀಯುತ್ತಿದ್ದರು.

ಪರಿಸದ ಸ್ಪರ್ಶದಿಂದ ಕಬ್ಬಿಣವು ಬಂಗಾರವಾಗುವದೆಂಬ ಮಾತು ನಿಜವಿರಲಿ ಇಲ್ಲದಿರಲಿ ಲಕ್ಷ್ಮಣರಾಯರ ಉತ್ತೇಜನ ಪರ ವಚನಗಳಿಂದ ತೀರ ಸಾಮಾನ್ಯನೂ ಉಚ್ಚಕೋಟಿಗೆ ಏರುತ್ತಿದ್ದನೆಂಬುದರಲ್ಲಿ ಸಂದೇಹವಿಲ್ಲ. ಅವರಿಗೆ ದೊರೆತ ಮೊದಲಿನ ಕೆಲಸಗಾರರಲ್ಲಿ ಬಹು ಜನರು ಅಶಿಕ್ಷಿತರೂ ಅನನುಭವಿಕರೂ ಇದ್ದರು. ಆದರೆ ಲಕ್ಷ್ಮಣರಾಯರ ಗರಡಿಯಲ್ಲಿ ಅವರು ಸಿದ್ಧರಾಗಿ ಮಹತ್ವದ ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಹತ್ತಿದರು. ಮಂಗೇಶರಾವ ಶೇಷೆಯಂತಹ ಬಡ ಹುಡುಗ ಕಿರ್ಲೋಸ್ಕರವಾಡಿಯ ಒಬ್ಬ ವಿಶ್ವಾಸಿ ಲೆಕ್ಕಿಗ-ನಾದ. ಆಜರೆಹಳ್ಳಿಯ ಅಂತೋಬಾ ಫಳಸೀಕರನೆಂಬ ಹುಡುಗ, ಕಲ್ಪಕ ಇಂಜನೀಯರ, ಕಿರ್ಲೋಸ್ಕರವಾಡಿಯ ಆಧಾರಸ್ತಂಭನಾದ. ಮುದ್ರಣ ಪನ್ನಾಳಿಯದ ಗಣತಪರಾವ ವಿಜಾಪೂರರೆಂಬವರು ಮುದ್ರಣಶಾಸ್ತ್ರದ ಹಾಗು ಲಿಪಿಸುಧಾರಣೆಯ ತಜ್ಞರೆಂದು ಹೆಸರಾದರು. ಸ್ವಲ್ಪದರಲ್ಲಿಯೇ ಹೇಳ

ಬೇಕೆಂದರೆ ಲಕ್ಷ್ಮಣರಾಯರು ಇಂತಹ ನೂರಾರು ಜನರ ಸುಪ್ತಶಕ್ತಿಗಳನ್ನು ಜಾಗೃತಗೊಳಿಸಿ ಅವರಿಗೆ ಉತ್ತೇಜನವಿತ್ತು ಕಿರ್ಲೋಸ್ಕರವಾಡಿಯ ವಿಕಾಸವನ್ನುಮಾಡಿದರು.

ಸ್ವಾತಂತ್ರ್ಯ ಸಿಕ್ಕರೂ ನಮ್ಮ ದೇಶದ ವಿಕಾಸವು ಇಷ್ಟೇಕೆ ಮಂದಗತಿಯಿಂದ ಸಾಗಿದೆ? ನಮ್ಮ ಹತ್ತರ ಹಣವಿಲ್ಲವೆ? ತಜ್ಞರ ಅಭಾವವೇ? ಹಾಗೆ ವಿಚಾರಮಾಡಿದರೆ, ಲಕ್ಷ್ಮಣರಾಯರಲ್ಲಿ ಏನಿದ್ದಿತು? ಬರಿಗೈಯ ಈ ಗ್ರಹಸ್ಥ ಅಲ್ಪ-ಸ್ವಲ್ಪ ಯಂತ್ರ ಸಾಮಗ್ರಿಗಳಿಂದ ಅಜ್ಞರಾದ ಕೆಲವೇ ಜನರನ್ನು ಕಟ್ಟಿಕೊಂಡು ಅವರಲ್ಲಿ ಹುರುಪನ್ನು ತುಂಬಿ ಒಂದು ಬೀಳು ಬೈಲಿನಲ್ಲಿ ನಂದನವನ್ನು ನಿರ್ಮಿಸಲಿಲ್ಲವೇ! ಇಂತಹ ಧ್ಯೇಯವಾದಿಗಳ ಅಭಾವವೇ ಇದಕ್ಕೆ ಕಾರಣವೆಂದು ನಮ್ಮ ಮತ. ಸ್ವರಾಜ್ಯವನ್ನು ಸುರಾಜ್ಯಮಾಡಲು ನಮ್ಮಲ್ಲಿ ಹಣದ ಕಣಜವಿಲ್ಲ ನಿಜ. ಆದರೆ ಚೀನ ಒಂದನ್ನು ಬಿಟ್ಟರೆ ನಮ್ಮಲ್ಲಿದ್ದಷ್ಟು ಮನುಷ್ಯಬಲ ಜಗತ್ತಿನ ಯಾವ ದೇಶದಲ್ಲಿದೆ? ಅವರಲ್ಲಿಯ ಸುಪ್ತ ಉತ್ಸಾಹ, ಕರ್ತೃತ್ವ, ಹಾಗು ಸಹಕಾರವೃತ್ತಿಗಳಿಗೆ ಪ್ರೋತ್ಸಾಹಕೊಟ್ಟು, ಕಾರ್ಯಪ್ರವೃತ್ತ ಮಾಡಿದರೆ ನಮಗೆ ಯಾವಕೊರತೆ? ಜನತೆಯಲ್ಲಿ ಈ ವಿಧಾಯಕ ಕಾರ್ಯಕ್ಕೆ ಅಣಿಯಾಗಲು ಸ್ಫೂರ್ತಿಯನ್ನು ತುಂಬುವವರು ಯಾರು ಎಂಬುದೇ ಮುಖ್ಯ ಪ್ರಶ್ನೆ! ಸಾಮಾನ್ಯ ಜನರಿಂದ ಅಸಾಮಾನ್ಯ ಕಾರ್ಯಮಾಡಿಸಿಕೊಳ್ಳುವ ಸಾಮರ್ಥ್ಯ ಯಾರಲ್ಲಿದೆ? ಈ ಕಾರ್ಯವು ಕೇವಲ ಮಾತಿನ ಮಲ್ಲರಿಂದ ಆಗದು. ಅವರು ಉಚ್ಚಯೋಗ್ಯತೆಯುಳ್ಳವರೂ, ಕಲ್ಪಕರೂ, ಸಂಘಟಕರೂ, ಚತುರರೂ ಇದ್ದರೆ ಮಾತ್ರ ಇಂತಹ ವಿಕ್ರಮವನ್ನು ಸಾಧಿಸಬಲ್ಲರು. ಇಂತಹರು ವಿರಳ. ಆದುದರಿಂದ ದೇಶವು ತೀವ್ರಗತಿಯಿಂದ ಮುಂದು ವರಿಯಬೇಕೆಂದು ಬಯಸುವವರು ಪ್ರತಿ ಕ್ಷೇತ್ರದಲ್ಲಿಯೂ ಕಲ್ಪಕ ಹಾಗು ಹೊಸ ಹೊಸ ಯೋಜನೆಗಳನ್ನು ಯಶಸ್ವಿಯಾಗಿಸುವ ಆತ್ಮವಿಶ್ವಾಸವುಳ್ಳ ತರುಣರಿಗೆ ಸಾಹಸಮಾಡಲು ಅವಕಾಶ ಕಲ್ಪಿಸಿ ಕೊಡುವದೊಂದೇ ಉಪಾಯ. ಏಕೆಂದರೆ ಇಂತಹ ತರುಣರೇ ರಾಷ್ಟ್ರದ ರೂಪರೇಷೆಗಳನ್ನು ರೂಪಿಸಬಲ್ಲರು.

ಲಕ್ಷ್ಮಣರಾಯರು ಈ ಬಗೆಯ ಒಬ್ಬ ರಚನಾತ್ಮಕ ಕಾರ್ಯಕರ್ತರು. ಇದೇ ಅವರ ವೈಶಿಷ್ಟ್ಯ. ಅದೇ ಅವರಶಕ್ತಿ.

೯

# ಬೈಲುಗಂಬಾರನ ಸಾಮಾಜಿಕ ಕಾರ್ಯ

ಲಕ್ಷ್ಮಣರಾಯರೇನು ಸಮಾಜಸುಧಾರಕರಲ್ಲ. ಅವರೊಬ್ಬ ಕಾರಖಾನೆದಾರರು. ಅವರ ಶಬ್ದದಲ್ಲಿಯೇ ಹೇಳಬೇಕೆಂದರೆ, 'ನಾನೊಬ್ಬ ಬೈಲುಗಂಬಾರ' ಎಂದು ಒಳ್ಳೇ ಅಭಿಮಾನದಿಂದ ಅವರು ನುಡಿಯುತ್ತಿದ್ದರು. ಯಾವಾಗಲೂ ಯಂತ್ರಗಳಲ್ಲಿಯೇ ಮಗ್ನರಾಗುತ್ತಿದ್ದ ಈ ಕಂಬಾರರು ಎಂತಹ ಸಾಮಾಜಿಕ ಸುಧಾರಣೆಗಳನ್ನು ಮಾಡಬಲ್ಲರು? ಅದು ಅವರ ಕ್ಷೇತ್ರವೂ ಅಲ್ಲ.

ನಮ್ಮ ಜೀವನವು ಸಾಮಾಜಿಕ, ರಾಜಕೀಯ, ಔದ್ಯೋಗಿಕ, ವಿಕಾಸಗಳಿಂದ ಹೆಣೆದದ್ದಾಗಿದೆ. ಆದುದರಿಂದ ಒಂದು ಕ್ಷೇತ್ರದಲ್ಲಿ ಸುಧಾರಣೆ ಮಾಡುವಾಗ ಅದರೊಡನೆ ಇತರ ಕ್ಷೇತ್ರಗಳಲ್ಲಿಯೂ ತಮ್ಮ ಹೆಜ್ಜೆ ಮುಂದೆ ಬೀಳುವಂತೆ ವಿಚಾರ ಮಾಡಬೇಕಾಗುತ್ತದೆ. ಔದ್ಯೋಗಿಕ ಕ್ಷೇತ್ರದಲ್ಲಿ ಮುಂದೆ ಸಾಗುವಾಗ ರಾಯರಿಗೆ ಸಾಮಾಜಿಕ ಕ್ಷೇತ್ರದಲ್ಲಿಯೂ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಯಿತು.

ಹರಿಜನನಾದ ಪೀರ್ಯಾನ ಸಂಗತಿಯನ್ನೇ ತಗೆದುಕೊಳ್ಳಿರಿ. ಅವನು ಸಾತಾರ ಜಿಲ್ಲೆಯ ಪ್ರಸಿದ್ಧ ದರವಡೆಖೋರ, ಮೈ-ಕೈಯಿಂದ ಭಾರೀ ವ್ಯಕ್ತಿ, ಅಷ್ಟೇ ಬಲಶಾಲಿ. ಆ ಭಾಗದಲ್ಲಿ ಅವನ ದರ್ಪ ಬಹಳ, ಆದರೆ ಪೋಲೀಸರ ಕೈಯಲ್ಲಿ ಸಿಕ್ಕು ನುಗ್ಗಾಗಿ ಜೇಲಿನಲ್ಲಿ ಕೊಳೆಯುತ್ತಿದ್ದ. ರಾಯರಿಗೆ ಇವನ ರಹಸ್ಯವೆಲ್ಲ ಗೊತ್ತು. ಕಿರ್ಲೋಸ್ಕರವಾಡಿಯ ರಕ್ಷಣೆಯ ಪ್ರಶ್ನೆ ಬಂದಾಗ ಸರಕಾರವು ಇಬ್ಬರು ಪೋಲೀಸರನ್ನು ಕೊಡುವೆನೆಂದಿತು. ಅದು ರಾಯರಿಗೆ ರುಚಿಸಲಿಲ್ಲ. ಅವರು ಬೇರೆ ಯುಕ್ತಿಯನ್ನೇ ಹುಡುಕಿದರು.

'ಇನ್ನು ಮುಂದೆ ದರೋಡೆ ಬಿಟ್ಟು ಪ್ರಾಮಾಣಿಕ ರೀತಿಯಿಂದ ನಡೆಯಲು ಸಿದ್ಧನಿದ್ದರೆ, ಜೇಲಿನಿಂದ ಬಿಡಿಸಿ ತಂದು ಕಾರಖಾನೆಯಲ್ಲಿ ಕೆಲಸಕ್ಕೆ ಇಟ್ಟುಕೊಳ್ಳುವ ಇಚ್ಛೆಯಿದೆ. ಆದರೆ ನೀನು ಹಾಗೆ ಪ್ರತಿಜ್ಞೆ ಮಾಡಬೇಕು' ಎಂದು ರಾಯರು ಪೀರ್ಯಾನಿಗೆ ಹೇಳಿ ಕಳಿಸಿದರು. ಅದನ್ನು ಅವನು ಒಪ್ಪಿಕೊಂಡ.

ತಪ್ಪಿಗೆ ಶಿಕ್ಷೆ ಅವಶ್ಯ. ಆದರೆ ಅವರು ಸುಧಾರಿಸಬೇಕಿದ್ದರೆ ಅವರಿಗೆ ಪ್ರಾಮಾಣಿಕ ಜೀವನ ಸಾಗಿಸಲು ಸಂಧಿಯನ್ನೊದಗಿಸಬೇಕೆಂಬುದೇ ರಾಯರ ಅಭಿಪ್ರಾಯ.

ರಾಯರ ಈ ಕೃತಿಯು ರಾಜಾಸಾಹೇಬರಿಗೆ ಸಾಹಸದ್ದೆನಿಸಿತು. ಆದರೆ ಅವರು ಅಡ್ಡ ಬರಲಿಲ್ಲ. ಪೀರ್ಯಾನ ಬಿಡುಗಡೆಗೆ ಆಜ್ಞೆ ಕೊಟ್ಟರು. ಅವನೊಡನೆ ತುಕಾ–ರಾಮೋಸಿ, ಬಾಳಾರಾಮೋಸಿಯಂತಹ ನಾಲ್ವರನ್ನು ಆರಿಸಿ ಅವರನ್ನು ವಾಡಿಗೆ ಕರೆತಂದರು. ಅವರ ಪ್ರತಿಜ್ಞಾವಿಧಿಗಾಗಿ ಸಭೆ ಏರ್ಪಡಿಸಿದರು. ವಾಡಿಯ ಊರೇ ಅಲ್ಲಿ ನೆರೆಯಿತು. "ನಾನು ಇನ್ನು ಮುಂದೆ ಯಾವ ಅಪ ರಾಧವನ್ನೂ ಮಾಡುವದಿಲ್ಲ, ಸೆರೆ ಕುಡಿಯುವದಿಲ್ಲ, ಮತ್ತು ಕಾರಖಾನೆಯ ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡುವೆ," ಎಂಬ ಪ್ರತಿಜ್ಞೆಯನ್ನು ಪ್ರತಿಯೊಬ್ಬರೂ ಮಾಡಿದರು. ನಂತರ ಲಕ್ಷ್ಮಣರಾಯರು ಪ್ರತಿಯೊಬ್ಬರ ಕೈಯಲ್ಲಿ ಒಂದು ಚಿಮಿಟಿಗೆ ಉಪ್ಪನ್ನು ಹಾಕಿದರು. ಅದನ್ನು ಸೇವಿಸಿ ಎಲ್ಲರೂ ಭಂಡಾರವನ್ನು ಹಚ್ಚಿಕೊಂಡರು. ಇದೊಂದು ಅಪೂರ್ವವಾದ ಸಮಾರಂಭ ಎಂದು ಜನ ಆಶ್ಚರ್ಯಬಟ್ಟರು.

ಇವರಿಗೆ ರಂಟೆಗಳನ್ನು ಜೋಡಿಸಲು ಕಲಿಸಿದರು. ಇರಲು ಮನೆಗಳನ್ನು ಕಟ್ಟಿಸಿಕೊಟ್ಟರು. ಅವರ ಮಕ್ಕಳು ಇತರರೊಡನೆ ಶಾಲೆಯಲ್ಲಿ ಕಲಿಯಹತ್ತಿದರು. ಪೀರ್ಯಾ ಮೊದಲಾದವರು ಕೈಯಲ್ಲಿ ಚಪಗೊಡ್ಡಿ ಹಿಡಿದುಕೊಂಡು ಕಿರ್ಲೋಸ್ಕರ ವಾಡಿಯಲ್ಲಿ ರಾತ್ರಿ ಗಸ್ತೀ ತಿರುಗಹತ್ತಿದರು. ಈ ಸುದ್ದಿ ಹಾ ಹಾ ಎನ್ನುವಷ್ಟ ರಲ್ಲಿ ಎಲ್ಲಕಡೆಗೆ ಹಬ್ಬಿತು. ಇವರ ಹೆಸರು ಉಚ್ಚರಿಸಿದರೆ ಜನ ಎದೆಗೆಡುತಿತ್ತು. ಅಂದಮೇಲೆ ವಾಡಿಯ ಕಡೆಗೆ ನೋಡುವ ಧೈರ್ಯ ಯಾರಿಗೆ? ಇವರು ಯಮನಂತೆ ಕಾಣುತ್ತಿದ್ದರೂ ಗೂಗಿಯ ಕೂಗಿಗೆ ಬೆದರಿ ಬಾಯಿಮುಚ್ಚಿಕೊಂಡು ತೆಪ್ಪಗೆ ಕುಳಿತುಕೊಳ್ಳುತ್ತಿದ್ದರು. ಹೊಟ್ಟೆಗೆ ಉದ್ಯೋಗ ದೊರೆಯಿತು. ಒಳ್ಳೇ ಸಮಾಜದಲ್ಲಿ ಇರಲು ಅವಕಾಶ ಸಿಕ್ಕಿತು. ಇದರಿಂದ ಮೆಲ್ಲನೆ ಅವರ ನಡೆ-ನುಡಿ ಗಳಲ್ಲಿ ಬದಲಾವಣೆಯಾಗಹತ್ತಿತು.

ಒಂದು ದಿನ ಪೀರ್ಯಾ ಸಂತೆಗೆ ಹೋದ, ಹಳೆಯ ಗೆಳೆಯರು ಭೆಟ್ಟಿಯಾ ದರು. ಅವರ ಜುಲುಮೆಗೆ ಸಿಕ್ಕು ಗಡಂಗಕ್ಕೆ ಹೋಗಿ ಮನದಣಿ ಕುಡಿದು ಮತ್ತನಾಗಿ ಬಾಯಿಗೆ ಬಂದುದನ್ನು ಬಕಾಸುತ್ತ ಕೈಯಲ್ಲಿ ಕೊಡ್ಲಿ ಹಿಡಿದು ಕೊಂಡು, ಊರಲೆಲ್ಲ ತಿರುಗಾಡಹತ್ತಿದ. ಈ ಸುದ್ದಿ ತಿಳಿದೊಡನೆ ರಾಯರು

ಕಾರಖಾನೆಯಿಂದ ಹೊರಬಿದ್ದು ಅವನಿದ್ದೆಡೆಗೆ ಬಂದರು. ಜನವೆಲ್ಲ ದೂರ ನಿಂತು ನೋಡುತ್ತಿತ್ತು. ರಾಯರು ಸರಿದು ನಿಂತು ಎರಡು ಏಟುಗಳನ್ನು ಕೆನ್ನೆಗೆ ಬಿಗಿದರು, 'ಪೀರ್‍ಯಾ! ಏನು ನಡೆಸಿರುವೆ!' ಎಂದು ಗದ್ದರಿಸಿದರು. ಪರ್ವತದಂತಹ ಶರೀರವುಳ್ಳ ಈ ರಾಕ್ಷಸನನ್ನು ತಾಳಿಯ ಮೇಲೆ ತರಲು ವಾಮನಮೂರ್ತಿಗಳಾದ ಲಕ್ಷ್ಮಣರಾಯರು ಯೋಜಿಸಿದ ಉಪಾಯವನ್ನು ಕಂಡು ಜನ ಗಾಬರಿಯಾದರು. ಆದರೆ ಮರುಕ್ಷಣದಲ್ಲಿ ಪೀರ್‍ಯಾನ ಕೈಯಲ್ಲಿದ್ದ ಕೊಡಲಿಯು ಕಳಚಿ ಬಿದ್ದಿತು. ಗದ್ಗದಿತನಾಗಿ ರಾಯರ ಕಾಲಿಮೇಲೆ ಬಿದ್ದು, ರಾಯರೆ! ನನ್ನದು ತಪ್ಪಾಗಿದೆ, ಕ್ಷಮಿಸಬೇಕು, ನನ್ನ ಮೇಲೆ ಸಿಟ್ಟಾಗಬಾರದು, ಕ್ಷಮಿಸಬೇಕು ಎಂದು ಅಳಹತ್ತಿದನು. ರಾಯರು ಅವನನ್ನು ಕ್ಷಮಿಸಿ ಕೆಲಸಕ್ಕೆ ಕಳಿಸಿದರು. ಅಂದಿನಿಂದ ಅವನ ಜೀವನವೇ ಬದಲಾಯಿತು. ರಾಯರ ಸಿದ್ಧಾಂತವು* ವಿಜಯಿಯಾಯಿತು. ರಾಯರ ಧೈರ್ಯವನ್ನು ಜನ ಕೊಂಡಾಡಿತು.

ಕೆಲ ದಿನಗಳ ನಂತರ ಪೀರ್‍ಯಾನ ಮಗನಾದ ಮಾರ್ತಾಂಡನ ಮದುವೆ ಬಂದಿತು. ಮದುವೆ ಸಡಗರದಿಂದ ನಡೆಯಬೇಕೆಂದು ರಾಯರು ಹೇಳಿದರು. ಊರೆಲ್ಲ ಕೂಡಿತು. ರಾಯರು ಪ್ರಮುಖರೊಡನೆ ಅಕ್ಷತಾಕ್ಕೆ ಬಂದರು, ಕು|| ಸೌ|| ರಾಧಾಬಾಯಿಯೇ ಮೊದಲಾದವರು ಪೀರ್‍ಯಾನ ಇಬ್ಬರೂ ಹೆಂಡಂದಿರಿಗೆ ಕುಂಕುಮವಿಟ್ಟು ಉಡಿ ತುಂಬಿದರು. ಈ ಸಮಾರಂಭವನ್ನು ಕಂಡು ಎಲ್ಲರಿಗೂ ಒಂದು ಹೊಸ ಬಗೆಯ ಆನಂದದ ಅನುಭವವು ಬಂದಿತು. ಮುಹೂರ್ತವು ಸಮೀಪಿಸಿದರೂ ಭಟ್ಟರು ಬರಲಿಲ್ಲ, ಇವರನ್ನು ಕರೆಯಲು ಹೋದವನು ಬಂದು 'ಅಸ್ಪೃಶ್ಯರ ಲಗ್ನವನ್ನು ಮಾಡಿಸಲು ಭಟ್ಟರು ಹೋಗುವ ಸಾಂಪ್ರದಾಯವಿಲ್ಲ. ನಾವು ಕೊಟ್ಟ ಅಕ್ಷತೆಗಳನ್ನು ವಧೂವರರ ಮೇಲೆ ಹಾಕಿದರೆ ಲಗ್ನವಾದಂತಾಯಿತು, ಎಂದು ಹೇಳಿದರು" ಎಂದನು. ಇದರಿಂದ ರಾಯರಿಗೆ ಬಹು ಕೆಡುಕೆನಿಸಿತು. ವಿಧಿಯನ್ನು ಬಲ್ಲ ತಮ್ಮಲ್ಲಿಯ ದೇವ್ರುಳ ಕರರನ್ನು ಕರೆದು ಲಗ್ನ ಮಾಡಿಸಲು ಹೇಳಿದರು. ಅಂತರ್ಪಟವು ಬಿಡಿಯಲ್ಪ

---

* ೧೯೪೦ ರಲ್ಲಿ ಈ ಪರಿವರ್ತನವನ್ನು ನಿರೀಕ್ಷಿಸಿದ ರಾಜಾಸಾಹೇಬರು ಮೀಶಾ ವಧಿಯ ಕೈದಿಗಳಿಗೆ ಒಕ್ಕಲುತನದ ಸೌಕರ್ಯ ಒದಗಿಸಿ ಬಂದು ವಸಹಾತುವನ್ನೇ ಮಾಡಿ ಜೀವನ ಸಾಗಿಸಲು ಅನುಕೂಲ ಮಾಡಿಕೊಟ್ಟರು.

ಟ್ಟಿತು. ಮಂಗಳಾಷ್ಟಕವಾದನಂತರ ಅಕ್ಷತಾರ್ಪಣವಾಗಿ ಸಮಾರಂಭವು ಆನಂದದಲ್ಲಿ ಕೊನೆಗೊಂಡಿತು.

ಇಂತಹ ಪ್ರಸಂಗವು ಮುಂದೆ ಬರಬಾರದೆಂದು ವೈದಿಕ ಕರ್ಮಗಳನ್ನು ಮಾಡಿಸಲು ಜೇರೆ ಶಾಸ್ತ್ರಿ ಎಂಬ ತರುಣನಿಗೆ ನೌಕರೀ ಕೊಟ್ಟು ವಾಡಿಯಲ್ಲಿಯ ಮಂಗಳ ಕಾರ್ಯಗಳ ಪ್ರಶ್ನೆಯನ್ನೇ ಬಗೆಹರಿಸಿದರು. ಪುರಾಣವನ್ನೂ ಅವನಿಂದ ಹೇಳಿಸಹತ್ತಿದರು.

ಆದರೆ ಇಷ್ಟಕ್ಕೆ ಈ ಪ್ರಕರಣ ಮುಗಿಯಲಿಲ್ಲ. ಕುಂಡಲದ ಭಟ್ಟರೆಲ್ಲ ಕೂಡಿ ಶಂಕರಾಚಾರ್ಯರ ಕಡೆಗೆ ದೂರು ಒಯ್ದರು. 'ಕಿರ್ಲೋಸ್ಕರರು ತಮ್ಮ ವೃತ್ತಿಯ ಮೇಲೆ ಗದೆ ತಂದಿದ್ದಾರೆ. ಮಡಿ—ಮೈಲಿಗೆ, ಸ್ಪೃಷ್ಟಾಸ್ಪೃಷ್ಟ, ತೆಗೆ ದೊಗೆದು ಜಾತಿಸಂಕರ ಪ್ರಾರಂಭಿಸಿದ್ದಾರೆ. ಈ ಭ್ರಷ್ಟಾಚಾರವನ್ನು ನಿಲ್ಲಿಸ ಬೇಕು." ಎಂದು ಅರ್ಜಿ ಕಳಿಸಿದರು. ಇದರ ಸಲುವಾಗಿ ಶ್ರೀ ಕುರ್ತಕೋಟಿ ಶಂಕರಾಚಾರ್ಯರು ಕಿರ್ಲೋಸ್ಕರವಾಡಿಗೆ ಬರಬೇಕಾಯಿತು ರಾಯರು ಪೀಠಕ್ಕೆ ತಕ್ಕಂತೆ ಆತಿಥ್ಯನೀಡಿದರು. ಕಾರಖಾನೆಯನ್ನೆಲ್ಲ ತೋರಿಸಿದರು. ಮತ್ತು ಕೆಳಗಿನಂತೆ ನಿವೇದಿಸಿದರು.

"ಕಿರ್ಲೋಸ್ಕರವಾಡಿಯು ಒಂದು ಹೊಸ ಊರು. ಇಲ್ಲಿ ನಾವೆಲ್ಲ ಒಂದೇ ಕುಟುಂಬದವರಂತೆ ನಡೆದುಕೊಳ್ಳುವೆವು. ಕಾರಖಾನೆಯನ್ನು ನಡೆಯಿಸುವವ ರಿಗೆ, ಇವನು ಹಿಂದು, ಇವನು ಮುಸಲ್ಮಾನ, ಇವನು ಬ್ರಾಹ್ಮಣನೆಂದು ಭೇದ ಮಾಡುವದು ಹೇಗೆ ಸಾಧ್ಯ ? ಇಲ್ಲಿ ಎಲ್ಲರೂ ಕಂಬಾರ ಕೆಲಸ ಮಾಡುವವರೇ ! ಹೊರಗೆ ಏನಿರುವರೋ ಇರಲಿ. ಇಲ್ಲಿರುವದು ಕೆಲಸಗಾರರ ಜಾತಿಯೊಂದೇ. ಎಲ್ಲರನ್ನೂ ಒಂದೇ ರೀತಿಯಿಂದ ನಡೆಯಿಸಿಕೊಳ್ಳುವದೇ ನನ್ನ ತತ್ವ. ದೇಶಕ್ಕೆ ಕಾರಖಾನೆಗಳು ಬೇಕಿದ್ದರೆ, ಅಲ್ಲಿ ಈ ಮಾತನ್ನೇ ಆಚರಿಸಬೇಕಾಗುವದು" ಎಂದರು.

ಡಾ|| ಕುರ್ತಕೋಟಿಯವರು ವಿದ್ವಾಂಸರು, ಜಾಣಾಕ್ಷರು, ಪುರೋಗಾಮಿ ವಿಚಾರಿಗಳು. ಅವರು ರಾಯರ ವಿಚಾರಗಳಿಗೆ ಮೆಚ್ಚಿದರು. ಸಾಯಂಕಾಲದ ಪ್ರವಚನದಲ್ಲಿ "ಕಿರ್ಲೋಸ್ಕರವಾಡಿಯಲ್ಲಿ ನಡೆಯುವ ಕಾರ್ಯದ ಅವಶ್ಯಕತೆಯು ರಾಷ್ಟ್ರಕ್ಕೆ ಎಷ್ಟಿದೆ, ನಿಜವಾದ ಧರ್ಮದ ಸ್ವರೂಪವೇನು ? ಎಂಬುದನ್ನು ವಿವರಿಸುತ್ತ 'ಹೊಸ ಯುಗದಲ್ಲಿ ಉದ್ಯೋಗವೇ ಸರ್ವರ ಧರ್ಮವಾಗಿದೆ. ಇಲ್ಲಿ ಒಂದು ಧರ್ಮಪೀಠವಿದ್ದು, ಸಾಕ್ಷಾತ್ ಅಗ್ನಿನಾರಾಯಣನ ವಾಸ್ತವ್ಯವಿದೆ.

ಇಂತಹ ವಾತಾವರಣದಲ್ಲಿ ಸ್ಪೃಶ್ಯಾಸ್ಪೃಶ್ಯತೆಯಂತಹ ಹಿಂದಿನ ಯುಗದ ಕಲ್ಪನೆಗೆ ಸ್ಥಾನಕೊಡುವದು ತಪ್ಪಾದೀತು" ಎಂದು ಹೇಳಿದರು. ಇದನ್ನು ವಿರೋಧಿಸುವ ಧೈರ್ಯವು ಯಾರಿಗೆ? ಲಕ್ಷ್ಮಣರಾಯರು ಇದಕ್ಕಿಂತ ಮುಂದೆ ಹೋಗಿ ಸರ್ವ ಹಿಂದುಗಳಿಗೆ ಶ್ರಾವಣಿಯನ್ನೇರ್ಪಡಿಸಿದರು.

ರಾಯರು ಸಾಧಿಸಿದ ಇನ್ನೊಂದು ಮಹತ್ವದ ಸುಧಾರಣೆಯೆಂದರೆ, ಕಿರ್ಲೋಸ್ಕರವಾಡಿಯಲ್ಲಿ ಸುರಾದೇವಿಗೆ ಸ್ಥಾನವಿಲ್ಲದಂತೆ ಮಾಡಿದುದು. ತಮ್ಮ ಕೆಲಸಗಾರರಲ್ಲಿ ಯಾರಿಗಾದರೂ ಈ ವ್ಯಸನವಿದೆ ಎಂದು ತಿಳಿದರೆ, ಅವನನ್ನು ಕರೆಯಿಸಿ ಅದರ ದುಷ್ಪರಿಣಾಮಗಳನ್ನು ತಿಳಿಸಿ ಹೇಳಿ, ಈ ವ್ಯಸನವನ್ನು ಬಿಡದಿದ್ದರೆ ಕೆಲಸಕ್ಕೆ ಎರವಾಗಬೇಕಾದೀತೆಂದೂ ಎಚ್ಚರಿಸುತ್ತಿದ್ದರು. ಅದರ ಸುಪರಿಣಾಮವೂ ಆಗುತ್ತಿತ್ತು.

ಇಸ್ಪೇಟು ಎಂದರೆ ರಾಯರು ಸಿಟ್ಟು ಬೆಂಕಿ. ತಮ್ಮ ಮನೆಯವರು ಅಥವಾ ಕೆಲಸಗಾರರು ಯಾರೂ ಇಸ್ಪೇಟು ಆಡಕೂಡದೆಂದು ಅವರ ಕಟ್ಟಪ್ಪಣೆ. "ಮನರಂಜನೆಗಾಗಿ ಯಾವುದೇ ಆಟ ಆಡಬಹುದು. ಆದರೆ ವ್ಯಸನವನ್ನುಂಟು ಮಾಡುವಂಥದರಿಂದ ಮಾತ್ರ ದೂರವಿರಬೇಕು. ಏಕೆಂದರೆ ಇಂತಹ ಆಟಗಳ ಬಲೆಯಲ್ಲಿ ಮನುಷ್ಯನು ಸಿಕ್ಕು ಅದರ ಗುಲಾಮನಾಗುತ್ತಾನೆ. ಮತ್ತು ಅದರಲ್ಲಿ ಹಾಳಾಗುವ ವೇಳೆಯ ಪರಿವೆಯು ಕೂಡ ಅವನಿಗೆ ಉಳಿಯುವದಿಲ್ಲ." ಎಂದು ಅನ್ನುತ್ತಿದ್ದರು.

ಹುಡುಗರು ಹುಡುಗರೆ! ಒಮ್ಮೆ ಅವರು ಇಸ್ಪೇಟು ಆಡುತ್ತ ಕುಳಿತಾಗ ರಾಯರ ಸ್ವಾರಿಯು ಬಂದಿತು. ಆಗ ಅವರ ಸಿಟ್ಟನ್ನು ಕೇಳಬೇಕೇ? ಸಾಕ್ಷಾತ ಪರಶುರಾಮನ ಅವತಾರವೇ! ಅವರು ನೆಟ್ಟಗೆ ಕಾರಖಾನೆಗೆ ಹೋಗಿ ಇಂಜನು ಬಂದು ಮಾಡಿ ಹೊರಟು ಹೋದರು. ಆಗ ಹುಡುಗರೆಲ್ಲರೂ ಇನ್ನೊಮ್ಮೆ ಇಂತಹ ತಪ್ಪನ್ನು ಮಾಡುವದಿಲ್ಲೆಂದು ಪಶ್ಚಾತ್ತಾಪ ಪಟ್ಟಾಗ ಕಾರಖಾನೆಯು ಪ್ರಾರಂಭವಾಯಿತು.

ತರುಣರೆಲ್ಲರೂ ಕೂಡಿ ಗಣೇಶೋತ್ಸವವನ್ನು ಆಚರಿಸುವೆವೆಂದೂ ಆಗ 'ತೋತಯಾಚಿ ಬಂಡ' ಎಂಬ ನಾಟಕ ಮಾಡುವೆವೆಂದೂ ರಾಯರಿಗೆ ತಿಳಿಸಿದರು. ಅದಕ್ಕೆ ಅವರು ಸಂತೋಷದಿಂದ ಒಪ್ಪಿ ಅನುಕೂಲತೆ ಮಾಡಿ ಕೊಟ್ಟರು. ನಾಟಕವು ಯಶಸ್ವಿಯಾಯಿತು. ಕಾರಖಾನೆಯ ಹಿತಚಿಂತಕರಾದ ರಾಜಾಸಾಹೇಬ, ಗುತ್ತೀಕರ ಮೊದಲಾದವರು ಕಾರ್ಯಕ್ರಮಕ್ಕೆ ಉಪ-

ಸ್ಥಿತರಿದ್ದರು. ವಾಡಿಯಲ್ಲಿಯ ತರುಣರು ಫುಟ್‌ಬಾಲ ಆಡುತ್ತಿದ್ದರು. ಕ್ರಿಕೇಟೂ ಪ್ರಾರಂಭವಾಯಿತು. ಸ್ವಲ್ಪದಿನಗಳಲ್ಲಿಯೇ ಔಂಧದ ಯುವರಾಜರ ಗುಂಪು, ಹಾಗು ವಾಡಿಯ ಗುಂಪುಗಳೊಡನೆ ಸ್ಪರ್ಧೆ ನಡೆಯಿತು. ಕೆಲವು ದಿನಗಳಲ್ಲಿಯೇ ವಾಡಿಯ ಗುಂಪು ಹೆಸರುವಾಸಿಯಾಯಿತು. ಇದನ್ನು ಕಂಡು ರಾಯರಿಗೆ ಬಲು ಹಿಗ್ಗು.

ಮೊದಲಿನ ಆರೇಳು ವರ್ಷ ಉತ್ಸವಗಳಿಗೆ ಒಂದು ಸ್ವತಂತ್ರ ಕಟ್ಟಡವು ವಾಡಿಯಲ್ಲಿರಲಿಲ್ಲ. ವೆಲ್ಡಿಂಗ ಸೆಡ್ಡಿನಲ್ಲಿ ಕೆಲಸ ಸಾಗಿಸುತ್ತಿದ್ದರು. ತರುಣರಿಗೆ ವಿಶಾಲವಾದ ಒಂದು ಮಂದಿರವು ಅವಶ್ಯವೆನಿಸಿತು. ಆದರೆ ಅದನ್ನು ಸಾಧಿಸುವದೆಂತು ? ಹಣವೆಲ್ಲಿಂದ ತರಬೇಕು ? ಎಂಬ ಪ್ರಶ್ನೆ ಉದ್ಭವಿಸಿದಾಗ ಶಂಭುರಾವ, ಶಂಕರರಾವ, ಮೊದಲಾದವರು ಕೂಡಿ ವಿಚಾರ ಮಾಡಿ 'ಸಭಾ ಮಂದಿರವನ್ನು ನಾವೇ ಕಟ್ಟೋಣ. ಅದಕ್ಕೆ ಬೇಕಾಗುವ ಸಾಹಿತ್ಯವನ್ನು ಲಕ್ಷ್ಮಣರಾಯರು ಒದಗಿಸಲಿ.' ಎಂದು ನಿಶ್ಚಯಿಸಿದರು. ಅದನ್ನು ರಾಯರಿಗೆ ತಿಳಿಸಿದರು. ರಾಯರು ಕೂಡಲೆ ಸಂತೋಷದಿಂದ ಒಪ್ಪಿಗೆ ಕೊಟ್ಟರು. ಊರ ಜನವೆಲ್ಲ ಉತ್ಸಾಹದಿಂದ ಕೆಲಸಕ್ಕೆ ಹತ್ತಿ, ೫-೬ ನೂರು ಜನರು ಕೂಡುವಂಥ ಸಭಾಮಂದಿರವನ್ನು ಮೂರು ವಾರಗಳಲ್ಲಿಯೇ ಕಟ್ಟಿದರು. ಇಂದಿನ ಶ್ರಮದಾನ ಇದೇ ಅಲ್ಲವೇ !

ಸಭಾಮಂದಿರದಲ್ಲಿಯ ರಂಗಭೂಮಿಯನ್ನು ಬಾಬೂರಾವ ಪೇಂಟರ ಹಾಗು ಫತ್ತೆಸಿಂಗರು ಸಜ್ಜುಗೊಳಿಸಿದರು. ಲಕ್ಷ್ಮಣರಾಯರ ಅಕ್ಕಂದಿರಾದ ಬಟುಅಕ್ಕಾರವರಿಂದ ಉದ್ಘಾಟನವಾಯಿತು. ಈ ಸಭಾಮಂದಿರವು ವಾಡಿಯ ಸಾಂಸ್ಕೃತಿಕ, ಹಾಗು ಸಾರ್ವಜನಿಕ ಜೀವನದ ಕೇಂದ್ರವಾಯಿತು. ಇಲ್ಲಿ ವಾಡಿಯ ನಾಟಕ, ಮನರಂಜನ ಕಾರ್ಯಕ್ರಮಗಳು ನಡೆಯುತ್ತಿದ್ದವಲ್ಲದೆ ಶಾಹು ನಗರವಾಸಿ ಮೊದಲಾದ ನಾಟಕ ಕಂಪನಿಗಳೂ ಬಂದು ಆಡುತ್ತಿದ್ದವು. ಚಿತ್ರಪಟಗಳ ದರ್ಶನವೂ ನಡೆಯಹತ್ತಿತು.

ಈ ಮಂದಿರದಲ್ಲಿಯೇ ಗವ್ಹರ್ನರರ ಸ್ವಾಗತ, ದೊಡ್ಡವರ ಅಭಿನಂದನೆಗಳು ನಡೆಯುತ್ತಿದ್ದವಲ್ಲದೆ, ಪ್ರಾ. ಫಡಿಕೆ, ಕರ್ವೆ, ವಾ. ಮ. ಜೋಶಿ ಮೊದಲಾದ ಮಹನೀಯರ ಭಾಷಣಗಳೂ ನಡೆಯುತ್ತಿದ್ದವು. ಅಲ್ಲದೆ ಮಂಗಲಕಾರ್ಯ, ರೋಗಿಗಳ ಶುಶ್ರೂಷೆಯ ಸ್ಥಾನ. ಹೀಗೆ ಅದು ಎಲ್ಲ ಸಾರ್ವಜನಿಕ ಜೀವನಕ್ಕೂ ಜೀವನವಾಗಿ ಪರಿಣಮಿಸಿತು. ಇದಲ್ಲದೆ ಹಿಂದೂ, ಮುಸ್ಲಿಮ್, ಕ್ರಿಸ್ತಿ ಮೊದ

ಲಾದ ಎಲ್ಲ ಧರ್ಮದವರೂ ಇದನ್ನು ತಮ್ಮ ತಮ್ಮ ಧರ್ಮ ಕಾರ್ಯಕ್ಕಾಗಿ ಉಪಯೋಗಿಸುತ್ತಿದ್ದರು. ಇದೇ ಅದರ ಅಪೂರ್ವತೆ. ಇಂದು ಶ್ರಾವಣಿಯಾದರೆ, ಇನ್ನೊಂದು ದಿನ ಕುತುಬಿ ನಡೆಯುತ್ತಿತ್ತು. ಮತ್ತೊಂದು ದಿನ ಇಬ್ರಾಹಿಂಪುರದ ಪಾದ್ರಿಯಿಂದ ಬಾಯಬಲ್ ನಡೆಯುತ್ತಿತ್ತು. ಇಂತಹ ದೃಶ್ಯವು ಎಲ್ಲಿ ನೋಡಲು ಸಿಗುವದು? ಈ ಎಲ್ಲದಕ್ಕೂ ಲಕ್ಷ್ಮಣರಾಯರ ವಿಶಾಲ ಹೃದಯದ ಪ್ರೇರಣೆಯೇ ಕಾರಣ. ಆದುದರಿಂದಲೇ ಅಶಕ್ಯವೆನಿಸುವ ಎಷ್ಟೋ ಕಾರ್ಯಗಳು ನಡೆದವು. ರಾಷ್ಟ್ರದ ದೃಷ್ಟಿಯಿಂದ ಇವುಗಳ ಮಹತ್ವವು ಎಷ್ಟಿದೆ ಎಂಬುದನ್ನು ಹೇಳಲಿಕ್ಕೇಬೇಡ.

ಈ ಪ್ರಗತಿಪರ ದೃಷ್ಟಿಯು ರಾಯರಿಗೆ ಅಗರಕರ, ರಾನಡೆಯವರ ಬರಹಗಳಿಂದ ಬಂದುದಲ್ಲ. ಸ್ವತಃ ತಮ್ಮ ಸ್ಥಿತಿಯ ಸುಧಾರಣೆಗೆ, ಹಿರಿಯರ ಹಾದಿಯನ್ನೇ ಹಿಡಿಯಬೇಕೆಂಬ ಮಾತು ಉಪಯೋಗಬೀಳುವದಿಲ್ಲೆಂದೂ ಆದುದರಿಂದ ಪ್ರತಿಯೊಂದು ರಂಗದಲ್ಲಿ ಹೊಸ ಮಾರ್ಗ ಹಿಡಿಯಬೇಕೆಂದೂ ರಾಯರು ನಿಶ್ಚಯಕ್ಕೆ ಬಂದಿದ್ದರು. ಆದುದರಿಂದ ನಾಟಕದ ಹುಡುಗರನ್ನು ಕರೆದು "ನೀವು ಕೇವಲ ನಿಮ್ಮ ಇಚ್ಛೆ ಪೂರ್ಣ ಮಾಡಿಕೊಳ್ಳುವಿರಿ. ಪುರುಷರು ನಾಟಕವನ್ನಾಡಬೇಕು, ಸ್ತ್ರೀಯರು ಮಾತ್ರ ಆಡಬಾರದು. ಇದೆಲ್ಲಿಯ ನ್ಯಾಯ? ಮತ್ತು ಸ್ತ್ರೀ ಪಾತ್ರವನ್ನು ಗಂಡಸರು ಎಷ್ಟುದಿನ ಮಾಡಬೇಕು? ಆದುದರಿಂದ ಸಮಾಜ ಮಂದಿರದಲ್ಲಿ ಸ್ತ್ರೀಯರ ನಾಟಕಗಳೂ ನಡೆಯಲಿ ಎಂದು ಹೇಳಲು ಕರೆಸಿದ್ದೆ" ಎಂದರು.

"ಕುಲೀನ ಸ್ತ್ರೀಯರು ರಂಗಭೂಮಿಯಲ್ಲಿ ಕೆಲಸ ಮಾಡಬೇಕೇ?" ಎಂಬ ಚರ್ಚೆಯು ಆ ಕಾಲಕ್ಕೆ ಪ್ರಾರಂಭವಾಗಿತ್ತು. ಆದರೆ ಈ ಸುಧಾರಣೆಯನ್ನು ಕಿರ್ಲೋಸ್ಕರರು ಎಂದೋ ಜೀವನದಲ್ಲಿಳಿಸಿದ್ದರು. ಪುರುಷ ಪಾತ್ರಗಳಿಲ್ಲದ ನಾಟಕಗಳು ಮೋಘೆ, ತಾಮ್ಹಣಕರರಿಂದ ಬರಿಯಸಲ್ಪಟ್ಟವು. ಅವುಗಳಲ್ಲಿ 'ಚತುರಶಾಂತಾ' 'ಮಾಯಿಚೀ ಮಾಯಾ' ಮೊದಲಾದ ತಾಮ್ಹಣಕರರ ನಾಟಕಗಳು ಪ್ರಕಾಶನವನ್ನು ಕಂಡವು. ಕೈ. ಸೌ|| ಆನಂದೀಬಾಯಿ ಕಿರ್ಲೋಸ್ಕರರ 'ಸವ್ಯಾ ವಾಟಾ' ಎಂಬ ನಾಟಕವೂ, 'ಉಸನಾ ನವರಾ' ಎಂಬ ತಾಮ್ಹಣಕರರ ನಾಟಕವೂ ಲೋಕಪ್ರಿಯವಾದವು ಕಿರ್ಲೋಸ್ಕರ ವಾಡಿಯಿಂದ ಕೇವಲ ರಂಟೆಗಳೇ ಹೊರಬೀಳದೆ ನಾಟಕಗಳೂ ಹೊರಬರಹತ್ತಿದವು. ಇದಕ್ಕೆ ಲಕ್ಷ್ಮಣರಾಯರ ಪ್ರೇರಣೆಯೇ ಕಾರಣ.

ಕಬ್ಬಿಣ ರಂಟೆ ಹಾಗು ನಾಟಕಕ್ಕೆ ಎಷ್ಟು ಸಂಬಂಧವೋ ಅಷ್ಟೇ ರಂಟೆಗಳಿಗೂ ನಿಯತ ಕಾಲಿಕಗಳಿಗೂ ಸಂಬಂಧ. ಪಾಶ್ಚಾತ್ಯ ಕಾರಖಾನೆದಾರರು ತಮ್ಮ ಕೆಲಸಗಾರರಿಗಾಗಿ ವಸಹಾತು ಕಟ್ಟಿ ನಿಯತ ಕಾಲಿಕಗಳನ್ನು ನಡೆಸುವರು ಎಂಬ ಮಾತು ಅವರ ತಲೆಯಲ್ಲಿ ಬಂದೊಡನೆ ಒಬ್ಬ ತರುಣನನ್ನು ಕರೆದು ಅವನ ಕೈಯಲ್ಲಿ ಫೋರ್ಡ ಕಂಪನಿಯಿಂದ ಹೊರಡುವ 'ಫೋರ್ಡ ಟಾಯಿಮ್ಸ' ಎಂಬ ಮಾಸಿಕದ ಪ್ರತಿಯನ್ನು ಕೊಟ್ಟು ಈ ಮಾದರಿಯ ಮೇಲೆ ಕಿರ್ಲೋಸ್ಕರವಾಡಿಯಿಂದ 'ಕಿರ್ಲೋಸ್ಕರ ಖಬರ' ಎಂಬ ಮಾಸಿಕವು ಹೊರಡಬೇಕೆಂದು ಹೇಳಿದರು. ಪಾಪ! ಆತನಿಗೆ ಸಾಹಿತ್ಯದ ಗಂಧ ಕೂಡ ಇರಲಿಲ್ಲ. ರಾಯರ ಬೆಂಬಲವಿದ್ದಮೇಲೆ ಯಾರಿಗೆ ಉತ್ಸಾಹ ಬರಲಿಕ್ಕಿಲ್ಲ! ೧೯೧೬ ನೆಯ ಸಪ್ಟಂಬರದಲ್ಲಿ 'ಕಿರ್ಲೋಸ್ಕರ ಖಬರ' ಎಂಬ ಮಾದರಿಯ ಸಂಚಿಕೆಯು ಹೊರಬಿದ್ದಿತು. ಈ ಪ್ರಯೋಗದಿಂದ ಮಾಸಿಕ ಪುಸ್ತಕ ನಡೆಯಿಸಲು ಸ್ವಂತದ ಮುದ್ರಣಾಲಯವು ಅವಶ್ಯವೆಂದೂ ಅದರಿಂದ ಕಾರಖಾನೆಯ ಎಲ್ಲ ಮುದ್ರಣವನ್ನು ಮಾಡಿಕೊಳ್ಳಬಹುದೆಂದೂ ನಿಶ್ಚಯಿಸಿದರು. ೧೯೨೦ ನೆಯ ಜನವರಿಯಿಂದ 'ಖಬರ'ವು ಕಿರ್ಲೋಸ್ಕರವಾಡಿಯಿಂದಲೇ ಹೊರಬಿದ್ದಿತು.

ಮಹಾರಾಷ್ಟ್ರಕ್ಕೆ ಚಿರಪರಿಚಿತವಾಗಿರುವ 'ಕಿರ್ಲೋಸ್ಕರ' 'ಸ್ತ್ರೀ' 'ಮನೋಹರ'ಗಳ ಜನ್ಮವೃತ್ತಾಂತವೂ ಹೀಗೆಯೇ ಇದೆ. ರಾಷ್ಟ್ರದ ಸಮಗ್ರ ದೃಷ್ಟಿಯುಳ್ಳ, ಲಕ್ಷ್ಮಣರಾಯರಂಥ ಉದ್ಯೋಗಿಗಳಿದ್ದರೆ, ಅವರು ಆನುಷಂಗಿಕವಾಗಿ ಸಾಮಾಜಿಕ, ಸಾಂಸ್ಕೃತಿಕ–ಅಮೌಲ್ಯ ಸೇವೆ ಸಲ್ಲಿಸಲು ಹೇಗೆ ಶಕ್ಯವೆಂಬುದೇ ಇಲ್ಲಿ ವಿಚಾರಣೀಯ ಅಂಶ.

ನಮ್ಮ ಹಳ್ಳಿಗಳ ಸುಧಾರಣೆಯ ಪ್ರಶ್ನೆಯು ಎಷ್ಟು ಮಹತ್ವದ್ದೆಂಬುದನ್ನು ಹೇಳಲಿಕ್ಕೇಬೇಡ. ಹಳ್ಳಿಗರ ಆರ್ಥಿಕ ಸ್ಥಿತಿ ಸುಧಾರಿಸಬೇಕು, ವಿಚಾರದ ಮಟ್ಟ ಎತ್ತರವಾಗಬೇಕು, ಅವರ ಜೀವನವು ಸುಖಿಯಾಗಬೇಕೆಂಬ ಪ್ರಯತ್ನಗಳು ಭರದಿಂದ ನಡೆದಿವೆ. ಹಳ್ಳಿಗಳ ನಡುವೆ ಒಂದು ಕಾರಖಾನೆಯಾದರೆ ಅವುಗಳ ಜೀವನದಲ್ಲಿ ಎಂತಹ ಪರಿವರ್ತನೆಯಾಗುವದೆಂಬುದನ್ನು ಕಿರ್ಲೋಸ್ಕರವಾಡಿಯಿಂದಲೇ ತಿಳಿಯಬಹುದು. ಆದರೆ ರಾಯರ ಗ್ರಾಮ ಸೇವೆಯು ಅದ್ಭುತವಾಗಿದೆ. ಅದನ್ನು ಮುಂದೆ ವರ್ಣಿಸುವೆವು.

ತಮ್ಮ ಕಾರ್ಯ ಸಾಧಿಸುವಾಗ ಅನಪೇಕ್ಷಿತವಾದ ಕೆಲವು ಹೊಣೆಗಾರಿಕೆಗಳು ಅವರ ಮೇಲೆ ಬರುತ್ತಿದ್ದವು. ಅವುಗಳನ್ನು ಅವರು ಈಡೇರಿಸಬೇಕಾಗುತ್ತಿ-

ಟ್ಟಿತು. ೧೯೧೪ ರಲ್ಲಿ ಕೃಷ್ಣಾನದಿಗೆ ಮಹಾಪೂರ ಬಂದಿತು. ನದಿಯು ಕಿರ್ಲೋಸ್ಕರ ವಾಡಿಯಿಂದ ಪಶ್ಚಿಮಕ್ಕೆ ಮೂರು ಮೈಲು ದೂರ ಹರಿಯುತ್ತ ತಿರುಗಿ ದಕ್ಷಿಣಕ್ಕೆ ಹರಿಯುತ್ತದೆ. ನದಿಯ ಪ್ರವಾಹವು ವಾಡಿಗೆ ಒಂದು ಫರ್ಲಾಂಗ ಮಾತ್ರ ಉಳಿದಿತ್ತು. ವಾಡಿಯ ಹತ್ತರವಿರುವ 'ಬುರ್ಲಿ' ಎಂಬ ಊರು ನೀರಲ್ಲಿ ಮುಳುಗುವ ಪ್ರಸಂಗ ಬಂದಿತು. ಊರ ಜನ ಜಲಸಮಾಧಿ ಹೊಂದುವಂತೆ ಕಂಡಿತು. ಆಗ ಲಕ್ಷ್ಮಣರಾಯರು ಊರನ್ನು ಉಳಿಸಲು ಮುಂದಾದರು. ಭೋರ್ಗರೆಯುವ ಪ್ರವಾಹದಲ್ಲಿ ನಾವುಗಳನ್ನು ಹಾಕಿ, ಬುರ್ಲಿಯಲ್ಲಿಯ ಜನರನ್ನು ವಾಡಿಗೆ ಕರೆತಂದು, ಅವರಿಗೆ ಶಕ್ಯವಿದ್ದ ಊಟ, ವಸತಿಗಳನ್ನು ಒದಗಿಸಿಕೊಟ್ಟರು. ಬುರ್ಲಿಯ ಜನವೆಲ್ಲ ಕೃತಜ್ಞತೆಯಿಂದ ಅವರನ್ನು ಹಾಡಿ ಹರಿಸಿದರು.

ಯುಗಾದಿಯು ಬಂದಿತು. ಸರಕಾರದಿಂದ ಬಿರುದು ದೊರೆಯುವ ಜನರ ಯಾದಿಯು ಪ್ರಸಿದ್ಧವಾಯಿತು. ಅದರಲ್ಲಿ ಲಕ್ಷ್ಮಣರಾಯರ ಹೆಸರಿತ್ತು. ಇಂತಹ ಪದವಿ ಪಡೆಯುವವರು ಸರಕಾರದ ಕೃಪೆಗೆ ಪಾತ್ರರಾದವರು. ಸಾಹೇಬರ ಎದುರಿಗೆ ಎಂದೂ ತಪ್ಪಿ ಕೂಡ ಹಾಯದ ರಾಯರಿಗೆ 'ಕೈಸರ ಈ ಹಿಂದ' ಪದವಿಯು ದೊರೆತುದು ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡಿತು. ಲಕ್ಷ್ಮಣ ರಾಯರಿಗೂ ಇದರ ಗೂಢವು ತಿಳಿಯಲಿಲ್ಲ. 'ನನಗೆ ಪದಕವು ಏಕೆ ಸಿಕ್ಕಿದೆ?' ಎಂದು ಕಲೆಕ್ಟರರಿಗೆ ಬರೆದರು.

ಕಲೇಕ್ಟರರಿಂದ "ಈ ಗೌರವವು ತಾವು ಮಾಡಿದ ಸಾಮಾಜಿಕ ಸೇವೆಗಾಗಿ, ಮತ್ತು ತಮ್ಮ ಉದ್ಯೋಗನಿಷ್ಠೆಗಾಗಿ ಮಾಡಲ್ಪಟ್ಟಿದೆ" ಎಂದು ಉತ್ತರ ಬಂದಿತು.

೧೦

# ಯುದ್ಧದ ಕಹಿ-ಸಿಹಿಗಳು

೧೯೧೪ ರ ಜುಲೈ ತಿಂಗಳಲ್ಲಿ ಯುರೋಪದೊಳಗೆ ಆರ್ಚಡ್ಯೂಕ ಫರ್ಡಿನಾಂಡನ ಕೊಲೆಯ ಸುದ್ದಿಯು ಬಂದಿತು. ಆಗ ಯುರೋಪದ ಸುದ್ದಿಯ ಬಗ್ಗೆ ಭಾರತೀಯರಲ್ಲಿ ಅಷ್ಟು ಆಸ್ಥೆ ಇರಲಿಲ್ಲ. ಆಗ ಅಮೇರಿಕಾ ಹಾಗೂ ಯುರೋಪಗಳು ಎಷ್ಟೊಂದು ದೂರ! ಏಳು ಸಮುದ್ರಗಳಾಚೆ. ಪಾರ್ಲಿಮೆಂಟಿನಲ್ಲಿ ಭಾರತದ ಬಗ್ಗೆ ಏನು ಚರ್ಚೆ ನಡೆದಿದೆ? ಎಂಬುದು ತಿಳಿದರೆ ಸಾಕೆಂಬ ಭಾವನೆ ಜನರಲ್ಲಿ ಇದ್ದಿತು. ಆದರೆ ಈ ಕೊಲೆಯು ಜಾಜ್ವಲ್ಯ ಕಿಡಿಯಾಗಿದ್ದಿತು. ಯುರೋಪವನ್ನೇ ಸುಡಲು ಪ್ರಾರಂಭಿಸಿತು. ಬಾಂಬು, ಟಾರ್ಪೇಡೊ, ವಿಷವಾಯು ಮೊದಲಾದ ಭಯಂಕರ ಅಸ್ತ್ರಗಳ ಹಾವಳಿ ನಡೆಯಿತು. ಈ ಸಂಕಟವು ಇಡಿ ಯುರೋಪವನ್ನೇ ಹಣ್ಣುಗಾಯಿ ಮಾಡಿತು.

ಇಷ್ಟೆಲ್ಲ ನಡೆದಿದ್ದರೂ ಈ ಯುದ್ಧದ ಜೇಗೆಯು ಭಾರತಕ್ಕೂ ಹಬ್ಬಬಹುದೆಂಬುದನ್ನು ತೀರ ಸ್ವಲ್ಪ ಜನ ಭಾರತೀಯರು ಅರಿತಿದ್ದರು. ಆದರೆ ಈ ಭ್ರಮವು ಬೇಗನೆ ನಿರಸನವಾಯಿತು. ಎಮ್‌ಡನ್ ಎಂಬ ಜರ್ಮನ್ ಕ್ರೂಝರವು ಬಂಗಾಲ ಉಪಸಾಗರದಲ್ಲಿ ಹಾಹಾಕಾರವನ್ನೆಬ್ಬಿಸಿ ಮದ್ರಾಸದ ಮೇಲೆ ತೋಫುಗಳ ಮಳೆಗರೆದಾಗ, ಜರ್ಮನಿಯ ಬಗ್ಗೆ ಜನರಲ್ಲಿ ಭೀತಿಯುಂಟಾಯಿತು. ಯುದ್ಧದ ಝಳ ತಗಲಲು ಬಹಳ ಹೊತ್ತು ಹಿಡಿಯಲಿಲ್ಲ. ಧಾನ್ಯ, ಚಿಮಣೀ ಎಣ್ಣೆ ಮೊದಲಾದ ವಸ್ತುಗಳ ಅಭಾವವೂ ಬೆಲೆ ಏರಿಕೆಯೂ ಹೆಚ್ಚುತ್ತ ನಡೆದವು. ನೋಡನೋಡುತ್ತ ಆರ್ಥಿಕ ಹಾಗೂ ಪ್ರಾಪಂಚಿಕ ಜೀವನವೇ ಇದರಿಂದ ಕಲಕುಮಲಕು ಆಯಿತು.

ಕಿರ್ಲೋಸ್ಕರ ಕಾರಖಾನೆಗೆ ಬೇಕಾಗುವ ಕಬ್ಬಿಣ, ಬೀಡು ಹಾಗೂ ಕಲ್ಲಿದ್ದಲಿಗಳ ಕೊರತೆಯು ಬೀಳಹತ್ತಿತು. ಕಬ್ಬಿಣ ರಂಟೆಗಳಿಗೆ ಕಬ್ಬಿಣವೇ ಸಿಗದಿದ್ದರೆ ಕಾರಖಾನೆಯನ್ನು ನಡೆಯಿಸುವ ಬಗೆ ಹೇಗೆ? ರಂಟೆಗಳಿಗೆ ಬಣ್ಣ ಕೊಡಲು ಬಣ್ಣವನ್ನು ಎಲ್ಲಿಂದ ತರಬೇಕೆಂಬ ಪ್ರಶ್ನೆಯು ಉಂಟಾಯಿತು? ಎಲ್ಲಿ ನೋಡಿದಲ್ಲಿ ಕೊರತೆಯೋ ಕೊರತೆ.

ಮೊದಮೊದಲು ಕಳಕವಾಡಿಯಲ್ಲಿದ್ದಾಗ ಎಂಟೆತ್ತಿನ ಒಂಬತ್ತನೇ ನಂಬರಿನ ರಂಟೆಗಳನ್ನಷ್ಟೇ ಮಾಡುತ್ತಿದ್ದರು. ಮುಂದೆ ಮಧ್ಯಪ್ರಾಂತ, ಗುಜರಾತ, ಮಾಳವಾ, ಕೊಂಕಣ ಭಾಗಗಳಿಗೆ ಬೇಕಾಗುವ ನಾಲ್ಕೈದು ಬಗೆಯ ರಂಟೆಗಳು ಕಾರಖಾನೆಯಲ್ಲಿ ಸಿದ್ಧವಾಗಹತ್ತಿದವು. ಅವುಗಳ ವ್ಯಾಪಾರವು ಭರದಿಂದ ಸಾಗಹತ್ತಿತು. ಅದನ್ನು ಕಂಡು ಲಕ್ಷ್ಮಣರಾಯರು ರೈತರೇ ನಮ್ಮ ಗಿರಾಕಿಗಳು. ಇನ್ನು ಮುಂದೆ ರೈತರಿಗೆ ಉಪಯುಕ್ತವಾದ ಸಾಮಾನುಗಳನ್ನೇ ಸಿದ್ಧಪಡಿಸಬೇಕೆಂಬ ಧೋರಣೆಯನ್ನು ಸ್ವೀಕರಿಸಿದರು.

ರೈತರಿಗೆ ಅವಶ್ಯ ಬೇಕಾಗುವ ಎತ್ತಿನ ಗಾಡಿಯ ಗಾಲಿಗಳನ್ನು ಮಾಡುವ ವಿಚಾರವನ್ನು ಮಾಡಿದರು. ಗಾಲಿಗಳನ್ನು ಮಾಡುವ ಭಾರತೀಯ ರೀತಿಯನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರು. ಈ ಹಳೆಯ ಪದ್ಧತಿಯು ಸದೋಷವಿದೆಯೆಂದು ಅವರಿಗೆ ಅನಿಸಿತು. ಈ ಪದ್ಧತಿಯಲ್ಲಿ ಕಟ್ಟಿಗೆಯು ಬಹಳ ನಾಶವಾಗುವದಲ್ಲದೆ, ಅದು ಅಷ್ಟು ಬಾಳಿಕೆಯುಳ್ಳದ್ದೂ ಆಗುವದಿಲ್ಲ. ಈ ಗಾಲಿಯ ಹಳಿಯನ್ನು ಬೆಂಕಿಯಲ್ಲಿ ಕಾಸಿ ಕೂಡಿಸುವದರಿಂದ ಕಟ್ಟಿಗೆಯು ಸುಟ್ಟು ಹಳಿಯು ಅಷ್ಟು ಗಟ್ಟಿಯಾಗಿ ಕೂಡುವದಿಲ್ಲ. ಅಮೇರಿಕೆಯಲ್ಲಿ ಇದಕ್ಕಿಂತಲೂ ಸುಧಾರಿಸಿದ ರೀತಿಯಿಂದ ಗಾಲಿಗಳು ಮಾಡಲ್ಪಡುತ್ತವೆ. ಅಲ್ಲಿ ಕಟ್ಟಿಗೆಯ ಪಟ್ಟಿಗಳನ್ನು ಉಗಿಯಿಂದ ಕಾಸಿ ಮೆತ್ತಗೆ ಮಾಡಿ, ಬೇಕಾದಂತೆ ಅವುಗಳನ್ನು ಮಣಿಸುತ್ತಾರೆ. ಮತ್ತು ಹಳಿಯನ್ನು ವಿದ್ಯುತ್ತಿನಿಂದ ಕಾಸುತ್ತಾರೆ. ಮತ್ತು ಯಂತ್ರದಿಂದಲೇ ತಣ್ಣಗೆ ಮಾಡುತ್ತಾರೆ. ಅದರಿಂದ ಹಳಿಗಳು ಬಿಗಿಯಾಗಿ ಕುಳಿತು ಬಿಚ್ಚುವದು ಕಡಿಮೆ. ಇಂತಹ ಗಾಲಿಗಳು ರೈತರಿಗೆ ಮೆಚ್ಚಿಗೆಯಾಗಬಹುದೆಂದು ಎಣಿಕೆ ಹಾಕಿದರು.

ಇಂತಹ ಸುಧಾರಿಸಿದ ಗಾಲಿಗಳನ್ನು ಸಿದ್ಧಪಡಿಸಲು ಬೇಕಾಗುವ ಅಮೇರಿಕೆಯ ಯಂತ್ರ ಹಾಗೂ ಬಾಯಲರಗಳನ್ನು ತರಿಸಿದರು. ಕೆಲಸವು ಪ್ರಾರಂಭವಾಯಿತು. ಜಾಹೀರಾತು ಕೊಟ್ಟರು. ಬೇಡಿಕೆಗಳು ಬರಹತ್ತಿದವು. ಜನ ಪ್ರಿಯವಾಗುವ ಲಕ್ಷಣಗಳು ಕಂಡವು.

ಆದರೆ ಈ ಎಲ್ಲ ಪ್ರಯತ್ನವು ಒಂದೇ ಒಂದು ಕಾರಣದಿಂದ ನಿಷ್ಫಲವಾಯಿತು. ಅಮೇರಿಕೆಯ ಕಟ್ಟಿಗೆಯಂತೆ ಇಲ್ಲಿಯ ಸಾಗವಾನಿ ಕಟ್ಟಿಗೆಗೆ ಎಷ್ಟೇ ಉಗಿಯನ್ನು ಕೊಟ್ಟರೂ ಅದು ಮೆತ್ತಗಾಗಲಿಲ್ಲ. ಅದರಿಂದ ಅದನ್ನು ಯಂತ್ರದ ಬಾಯಿಗೆ ಕೊಟ್ಟೊಡನೆ ತುಂಡು ತುಂಡಾಗಹತ್ತಿತು. ಇದಲ್ಲದೆ ಅಳಣಾವರ

ದಿಂದ ತರಿಸಿದ ಸಾಗವಾನಿ ತೊಲೆಗಳು ಮತ್ತು ಉಂಬರಗಾವದಿಂದ ಬಂದ ಖೈರದ ಗಡ್ಡಿಗಳೂ ಬಿಸಿಲಿಗೆ ಬಿರುಕು ಬಿಡಹತ್ತಿದವು. ಈ ಕಟ್ಟಿಗೆಗಳ ಗುಣ ಹಾಗೂ ಅವುಗಳನ್ನು ಸಂಗ್ರಹಿಸುವಲ್ಲಿಯ ತೊಂದರೆಗಳು ಲಕ್ಷ್ಮಣರಾಯರ ಲಕ್ಷ್ಯಕ್ಕೆ ಬಂದಿರಲಿಲ್ಲ. ಕಬ್ಬಿಣವು ಕೈ ಹಿಡಿದಂತೆ ಕಟ್ಟಿಗೆಯ ಸಾಮಾನುಗಳನ್ನು ಮಾಡುವದರಲ್ಲಿಯೂ ತಮಗೆ ಯಶ ದೊರೆಯುವದೆಂಬ ರಾಯರ ಕಲ್ಪನೆ ಸತ್ಯ ಸೃಷ್ಟಿಗೆ ಇಳಿಯಲಿಲ್ಲ. ಆದುದರಿಂದ ಗಾಲಿಗಳನ್ನು ಮಾಡುವ ಕೆಲಸವನ್ನು ನಿರುಪಾಯರಾಗಿ ನಿಲ್ಲಿಸಬೇಕಾಯಿತು.

ಯುದ್ಧ ಸುರುವಾದಂದಿನಿಂದ ಕಾರ್ಖಾನೆಯ ಎಲ್ಲ ಸರಕುಗಳಿಗೂ ಪೆಟ್ಟು ಬಿದ್ದಿತು. ಇತ್ತೀಚೆಗೆ ರಂಟೆಗಳಿಗೆ ಬೇಕಾಗುವ ಉಕ್ಕನ್ನು ದೊಡ್ಡ ಪ್ರಮಾಣ ದಲ್ಲಿ ಜರ್ಮನಿಯಿಂದ ತರಿಸುವ ಪರಿಪಾಠವನ್ನು ಹಾಕಿದ್ದಿತು. ಅದರಂತೆಯೆ ಹ್ಯಾಂಬರ್ಗದಿಂದ ಎರಡು ಹಡಗಗಳಲ್ಲಿ ತುಂಬಿಬರುವ ಕಬ್ಬಿಣದ ದಾರಿಯನ್ನೇ ಲಕ್ಷ್ಮಣರಾಯರು ಕಾಯುತ್ತಿದ್ದರು. ಆದರೆ ಬ್ರಿಟಿಶರು ನಡುವೆಯೇ ಭೂಮಧ್ಯ ಸಮುದ್ರದಲ್ಲಿ ಆ ಹಡಗಗಳನ್ನು ಹಿಡಿದು ಜಪ್ತಮಾಡಿದರು. ಎಷ್ಟು ಪ್ರಯತ್ನಿ ಸಿದರೂ ಆ ಕಬ್ಬಿಣವು ಕಾರಖಾನೆಗೆ ದೊರೆಯಲಿಲ್ಲ. ಆದುದರಿಂದ ಪೇಟೆಯಲ್ಲಿ ಯಾವ ಬೆಲೆಗೇ ಸಿಗಲಿ, ಆ ಕಬ್ಬಿಣದಿಂದಲೇ ಕಾರಖಾನೆ ನಡೆಸುವ ಪ್ರಸಂಗ ಬಂದಿತು.

ಗಿರಾಕಿಗಳಿಗೆ ಶಕ್ಯವಿದ್ದಷ್ಟು ಕಡಿಮೆ ಬೆಲೆಯಲ್ಲಿ ಅವರಿಗೆ ಪ್ರೋತ್ಸೈಸುವ ಧಾರಣೆಯಿಂದ ಸರಕು ಒದಗಿಸುವದೇ ಲಕ್ಷ್ಮಣರಾಯರ ಮುಖ್ಯ ಸೂತ್ರವಿ ದ್ದಿತು. ಲಾಭವನ್ನು ಕಡಿಮೆ ಇಟ್ಟು ಮಾಲಿನ ಪ್ರಸಾರವು ಹೆಚ್ಚಾಗುವಂತೆ ಮಾಡಿದರೆ ಹನಿ ಹನಿ ಕೂಡಿ ಹಳ್ಳವಾಗುವಂತೆ, ನಮಗೂ ಲಾಭವಾಗುವದಲ್ಲದೆ ಗಿರಾಕಿಗಳೂ ಸಂತುಷ್ಟರಾಗುವರು ಎಂಬ ಹೆನ್ರಿಫೋರ್ಡನ ತತ್ವವನ್ನೇ ರಾಯರು ಪ್ರತಿಪಾದಿಸುತ್ತಿದ್ದರು. ಆದರೆ ಕಬ್ಬಿಣದ ಧಾರಣೆಯೇ ವಿಪರೀತ ಏರಿದಮೇಲೆ ಮಾಡುವದೇನು ? ಲಕ್ಷ್ಮಣರಾಯರು ತಮ್ಮ ರಂಟೆಯ ಬೆಲೆಯನ್ನು ೩೯ ರಿಂದ ೬೦ಕ್ಕೆ ಏರಿಸಬೇಕಾಯಿತು.

ಇನ್ನು ಬೀಡಿನ ಪ್ರಶ್ನೆ. ಅದಕ್ಕಾಗಿ ರೇಲ್ವೆಯ ಸ್ಕ್ರ್ಯಾಪ್ ಹಾಗೂ ಕೈಗೆ ಸಿಕ್ಕಂತಹ ಬೀಡಿನ ಮುರುಕು ತುಂಡುಗಳನ್ನು ಕೂಡಿಸಹತ್ತಿದರು. ಇದರಿಂದ ಕಾರಖಾನೆಯ ಹಸಿವು ತುಂಬುವ ಬಗೆ ಹೇಗೆ? ಕೊಲ್ಹಾಪುರದ ಕಿಲ್ಲೆಯಲ್ಲಿ ಅನೇಕ ಹಳೆಯ ತೋಫುಗಳು ಜಂಗುತಿನ್ನುತ್ತ ಬಿದ್ದಿವೆ ಎಂದು

ಸುದ್ದಿ ಬಂದಿತು. ಲಕ್ಷ್ಮಣರಾಯರ ಗೆಳೆಯರಾದ ಬಾಳಾಸಾಹೇಬರು ಕೊಲ್ಹಾಪುರದ ದಿವಾಣರಿದ್ದರು. ಅಲ್ಲದೆ ಸ್ವತಃ ಛತ್ರಪತಿ ಶಾಹೂಮಹಾರಾಜರು ಕೂಡ ಲಕ್ಷ್ಮಣರಾಯರ ಬಗ್ಗೆ ಒಳ್ಳೇ ಅಭಿಪ್ರಾಯದವರಾಗಿದ್ದರು. ಅವರ ಲಾಭ ಪಡೆದು ಕೊಲ್ಹಾಪುರದಲ್ಲಿಯ ನೂರಾರು ಹಳೆಯ ತೋಫುಗಳನ್ನು ದೊರಕಿಸಿದರು. ವಾಡಿಯ ಪಟಾಂಗಣದಲ್ಲೆಲ್ಲ ತೋಫೇ ತೋಫು.

"ಜಗತ್ತಿನಲ್ಲಿ ಶಾಂತತೆಯು ನೆಲೆಗೊಳ್ಳಬೇಕಾದರೆ, ಜಗತ್ತಿನಲ್ಲಿಯ ಕತ್ತಿ-ಕಠಾರಿಗಳನ್ನೆಲ್ಲ ಕರಗಿಸಿ ಕುಡಗಳನ್ನು ಮಾಡಬೇಕು" ಎಂಬರ್ಥದ ಒಂದು ಇಂಗ್ಲೀಷ ವಚನವುಂಟು. ಈ ಸಂದೇಶವನ್ನು ಯಾರಾದರೂ ಕೃತಿಯಲ್ಲಿಳಿಸಿದ್ದರೆ ಅವರು ಲಕ್ಷ್ಮಣರಾಯರು. ಶತ್ರುಗಳ ಮೇಲೆ ಬೆಂಕಿಯ ಮಳೆಯನ್ನೇ ಸುರಿಸುವ ನೂರಾರು ತೋಫುಗಳನ್ನೊಡೆದು ಲಕ್ಷ್ಮಣರಾಯರು ಸಾವಿರಾರು ರಂಟೆಗಳನ್ನು ಮಾಡಿದರು.

ಬಣ್ಣಗಳು ದೊರೆಯದಾದವು. ರಂಟೆಗಳಿಗೆ ಬಣ್ಣವನ್ನೆಂತು ಕೊಡಬೇಕೆಂಬ ಪ್ರಶ್ನೆಯು ಬಂದಿತು. ಆಗ ಲಕ್ಷ್ಮಣರಾಯರು ಭಟ್ಟಿಯನ್ನು ಹಾಕಿ ಕ್ಯಾವೀ ಹಾಗು ಎಣ್ಣೆಗಳಿಂದ ಕ್ಯಾವೀ ಬಣ್ಣವನ್ನೇ ಸಿದ್ಧಮಾಡಿದರು. ರಂಟೆಗಳು ಝಟ್ಟಿಯಂತೆ ಕ್ಯಾವೀ ಬಣ್ಣದಿಂದ ಶೋಭಿಸಹತ್ತಿದವು.

ಕಲ್ಲಿದ್ದಲಿ ದೊರೆಯುವದು ಕಷ್ಟವಾಯಿತು. ಶಕ್ಯವಿದ್ದಷ್ಟು ಕಟ್ಟಿಗೆಯ ಇದ್ದಲಿಯ ಮೇಲೆಯೇ ಕೆಲಸ ಸಾಗಿಸಬೇಕೆಂಬ ವಿಚಾರದಿಂದ ಕೋರೆಗಾವದಿಂದ ಸ್ವಲ್ಪ ದೂರದಲ್ಲಿರುವ ಒಂದು ದೊಡ್ಡ ಹಳೇ ಅಡವಿಯನ್ನು ಕೊಂಡರು. ಡ್ರಾಯಡೆಸ್ಟಿಲೇಶನ್ ಪದ್ಧತಿಯಿಂದ ಕಟ್ಟಿಗೆಯ ಇದ್ದಲಿಗಳನ್ನು ಮಾಡಹತ್ತಿದರು. ಈ ಆಧುನಿಕ ಪದ್ಧತಿಯನ್ನು ಶ್ರೀ ಸಾಲಿಗ್ರಾಮ ಎಂಬುವವರು ಜಪಾನಕ್ಕೆ ಹೋಗಿ ಕಲಿತು ಬಂದಿದ್ದರು. ಅವರು ರಾಧಾನಗರದಲ್ಲಿ ಇದರ ಭಟ್ಟಿಯನ್ನು ಹಾಕಿದ್ದರು. ಲಕ್ಷ್ಮಣರಾಯರು ಅಲ್ಲಿಗೆ ಹೋಗಿ ಅದನ್ನು ನೋಡಿ ಬಂದರು. ಈ ರೀತಿಯಾಗಿ ಇದ್ದಲಿ ಮಾಡುವಾಗ ಕಟ್ಟಿಗೆಯಿಂದ ಹೊರಬರುವ ಒಂದು ಬಗೆಯ ಡಾಂಬರಿನಂಥ ಎಣ್ಣೆಗೆ ಪೇಟೆಯಲ್ಲಿ ಒಳ್ಳೇ ಬೆಲೆ ಇದ್ದಿತು.

ಇದ್ದಲಿ ಪೂರೈಕೆಗಾಗಿ ಇನ್ನೊಂದು ಮಾರ್ಗವನ್ನು ಹುಡುಕಿದರು. ಕುಂಡಲ ಸ್ಟೇಶನ್ನಿನಲ್ಲಿ ಇಂಜನಿನಲ್ಲಿಯ ಬೂದಿ ಪರ್ವತಪ್ರಾಯವಾಗಿ ಬಿದ್ದಿತ್ತು. ಅದನ್ನು ಲಕ್ಷ್ಮಣರಾಯರು ಕೊಂಡರು. ಅದನ್ನು ಜಾಳಿಸಿ ಬರುವ ಇದ್ದ

ಲಿಯ ಚೂರುಗಳನ್ನು ಕಂಬಾರರ ಕುಲುಮೆಗೆ ಉಪಯೋಗಿಸಹತ್ತಿದರು. ಬೂದಿಯನ್ನು ಸಾಗಿಸುವದಕ್ಕಾಗಿ ಲಕ್ಷ್ಮಣರಾಯರು ಜನತೆಯ ಒಂದು ಸರಪಳಿಯನ್ನೇ ನಿರ್ಮಿಸಿದರು. ಕೆಲಸಗಾರರಿಗೆ ಇದೊಂದು ಆಟವಾಗಿತ್ತು. ಈ ಬೂದಿ ಸಾಗಿಸುವ ಕೆಲಸನಡೆದಾಗ ಒಬ್ಬ ಸಹಕಾರಿ ಖಾತೆಯ ಇನ್‌ಸ್ಪೆಕ್ಟರನು ರಾಯರು ಸ್ಥಾಪಿಸಿದ ಕೂಲಿಕಾರರ ಸಂಘವನ್ನು ನಿರೀಕ್ಷಿಸಲು ಬಂದನು. ಗಾಡಿಯಿಂದ ಇಳಿದೊಡನೆ ಲಕ್ಷ್ಮಣರಾಯರ ವಿಚಾರ ಮಾಡಿದನು. ಬೂದಿಯ ಬುಟ್ಟಿಯನ್ನು ಹೊತ್ತಿರುವ ರಾಯರ ಕಡೆಗೆ ಬೊಟ್ಟುಮಾಡಿ ತೋರಿಸಿದರು ಒಬ್ಬರು. ಆದರೆ ಅದು ಅವನಿಗೆ ಸತ್ಯವೆನಿಸಲಿಲ್ಲ. ಆಗ ಆ ಗೃಹಸ್ಥನು ಮುಂದೆ ಬಂದು ವಿಚಾರ ಮಾಡಲಾಗಿ ಲಂಡಚಣ್ಣ, ಅರ್ಧಅಂಗಿಯನ್ನು ಹಾಕಿಕೊಂಡು ಬೂದಿಯ ಬುಟ್ಟಿಯನ್ನು ತಲೆಯ ಮೇಲೆ ಹೊತ್ತಿರುವ ವ್ಯಕ್ತಿಯೇ ಲಕ್ಷ್ಮಣರಾಯರು ಎಂದು ತಿಳಿದಾಗ ಅವನಿಗೆ ಆನಂದಾಶ್ಚರ್ಯಗಳುಂಟಾದವು. ಒಬ್ಬ ಕಾರಖಾನೆಯ ಒಡೆಯನು ಸಾಮಾನ್ಯ ಕೆಲಸಗಾರರೊಡನೆ ಬೆರೆತು ಬೂದಿ ತುಂಬುವಂಥ ಕಾರ್ಯ ಮಾಡುತ್ತಿರುವದನ್ನು ನೋಡಿದರೆ, ಅವರಿಗೆ ಯಾವ ಕಾರ್ಯದಲ್ಲಿಯೂ ಕೀಳು–ಮೇಲೆಂಬ ಭೇದವಿರಲಿಲ್ಲ ಎಂಬುದು ಒಡೆದು ಕಾಣುವದು.

ಹೀಗೆ ಅತ್ಯಂತ ಪರಿಶ್ರಮದಿಂದ ಕಾರಖಾನೆಯ ಹೊಟ್ಟೆಗೆ ಹಾಕುವ ಪ್ರಸಂಗವು ಯುದ್ಧಕಾಲದಲ್ಲಿ ಉಂಟಾಯಿತು. ಅದರಂತೆಯೆ ಕಿ. ವಾಡಿಯಲ್ಲಿಯ ಜನತೆಗೆ ಆಹಾರವನ್ನು ದೊರಕಿಸಲು ಅವರು ಪರಿಶ್ರಮಪಡಬೇಕಾಯಿತು. ರಾಯರು ಇದಕ್ಕಿಂತ ಇನ್ನೊಂದು ತೊಂದರೆಯನ್ನು ಎದುರಿಸಬೇಕಾಗಿ ಬಂದಿತು. ಸರಕಾರವು ಭಾರತದ ಸೈನ್ಯವನ್ನೆಲ್ಲ ಯುದ್ಧ ಭೂಮಿಗೆ ಕಳಿಸಿತ್ತು. ಈ ಸಮಯದ ಲಾಭ ಪಡೆದು ಯಾರಾದರೂ ಭಾರತದ ಮೇಲೆ ದಂಡೆತ್ತಿಬಂಧರೆ, ದೇಶವನ್ನು ರಕ್ಷಿಸುವ ಬಗೆ ಹೇಗೆ? ಎಂಬ ಪ್ರಶ್ನೆ ಉದ್ಭವಿಸಿತು. ಸರಕಾರವು ಕೂಡಲೇ 'ಭಾರತ ಸಂರಕ್ಷಕ ಸೈನ್ಯ' ಎಂಬ ಒಂದು ಸೇನಾಪಡೆಯನ್ನು ನಿರ್ಮಿಸುವದೆಂದು ಸಾರಿತು.

ಲೋಕಮಾನ್ಯರು "ಮಹಾರಾಷ್ಟ್ರೀಯ ತರುಣರು ಈ ಸೈನ್ಯದಲ್ಲಿ ಉತ್ಸಾಹದಿಂದ ಸೇರಿರಿ. ಸೈನಿಕ ಶಿಕ್ಷಣವನ್ನು ಪಡೆಯಲು ಬಂದ ಈ ಸುಸಂಧಿಯನ್ನು ವ್ಯರ್ಥ ಹೋಗಗೊಡಬೇಡಿರಿ" ಎಂದು ಕಳಕಳಿಯಿಂದ ಜನತೆಗೆ ಕರೆಯಿತ್ತರು. ತರುಣರ ಮೇಲೆ ಈ ಬರೆಹದ ಪರಿಣಾಮವು ಬಹಳೇ ಆಯಿತು.

ಲೋಕಮಾನ್ಯರ ಈ ಕರೆಗೆ ನಾವು ಓಗೊಟ್ಟು ದೇಶಸೇವೆಗೆ ಅಣಿಯಾಗಬೇಕೆಂದು ಕಿ. ವಾಡಿಯ ತರುಣರು ನಿಶ್ಚಯಿಸಿಕೊಂಡರು. ಆದರೆ ಕಾರಖಾನೆಯ ವ್ಯವಸ್ಥೆ ಏನು? ಎಂಬ ಪ್ರಶ್ನೆಯು ಅವರನ್ನು ಎದುರಿಸಿತು. ಲಕ್ಷ್ಮಣರಾಯರ ಎದುರಿಗೆ ಈ ಪ್ರಶ್ನೆಯನ್ನು ಇಡಲು, ಅವರು "ನಿಮ್ಮ ಕಲ್ಪನೆಯು ಯೋಗ್ಯವಿದೆ. ನಮ್ಮ ಅನುಕೂಲತೆ, ಅನಾನುಕೂಲತೆಗಳನ್ನು ನೋಡುತ್ತ ಕೂಡುವ ಸಮಯವಿದಲ್ಲ. ನೀವೆಲ್ಲರೂ ಹೋದರೂ ಅಡ್ಡಿ ಇಲ್ಲ. ನೀವು ಮರಳಿ ಬರುವ ವರೆಗೆ ನಿಮ್ಮೆಲ್ಲರ ಕೆಲಸವನ್ನು ನಾನು ನೋಡಿಕೊಳ್ಳುವೆ. ಸಂತೋಷದಿಂದ ಹೊರಡಿರಿ" ಎಂದರು.

ಘೋರ್ಪಡೆಯಲ್ಲಿಯ ಸೈನಿಕ ಶಿಕ್ಷಣ ಶಿಬಿರಕ್ಕೆ ಶಂಭುರಾವ, ಜಾಂಭೇಕರ, ಶಂಕರರಾವ ಕಿರ್ಲೋಸ್ಕರ, ಅನಂತರಾವ ಫಳನೀಕರ, ಮಂಗೇಶರಾವ ರೇಘೆ, ಅನಂತರಾವ ಕರಜಗಿ, ಗಜಾನನ ಮಾಡೂರಕರ, ಮತ್ತು ಪಾಗೇ ಅವರೆಲ್ಲರೂ ತೆರಳಿದರು. ಅವರು ಬರುವ ವರೆಗೆ ಲಕ್ಷ್ಮಣರಾಯರೇ ಅವರ ಕೆಲಸವನ್ನು ನೋಡಿಕೊಂಡರು.

ಮನುಷ್ಯನಿಗೆ ಸಂಸಾರದಲ್ಲಿ ಅನೇಕ ಸಂಕಟಗಳನ್ನು ಎದುರಿಸಬೇಕಾಗುವದೆಂಬುದರಲ್ಲಿ ಸಂದೇಹವಿಲ್ಲ. ಈ ಸಂಕಟಗಳು ಅವನ ಪರೀಕ್ಷೆಯನ್ನೇ ಮಾಡುತ್ತವೆ. ಇವುಗಳ ಪರೀಕ್ಷೆಯಲ್ಲಿ ಉತ್ತೀರ್ಣನಾದರೆ ಅವನಿಗೆ ಅದರ ಫಲವು ಸಿಗದೇ ಹೋಗುವದಿಲ್ಲ. ಮಹಾಯುದ್ಧದ ಕಾಲದಲ್ಲಿ ಕಾರಖಾನೆಯು ಒಂದು ದಿವ್ಯದಿಂದ ಹೊರಬಂದಿತು. ಅದಕ್ಕೆ ತಕ್ಕ ಪ್ರತಿಫಲವೂ ದೊರೆಯಿತು.

೧೯೧೮ರಲ್ಲಿ ಯುದ್ಧವು ಕೊನೆಗೊಂಡಿತು. ಕಬ್ಬಿಣ ಮೊದಲಾದ ವಸ್ತುಗಳು ಮೆಲ್ಲಗೆ ಸಿಗಹತ್ತಿದವು. ರಾಯರ ವಸ್ತುಗಳ ಬೇಡಿಕೆಯೂ ಬೆಳೆಯಹತ್ತಿತು. ಆದರೆ ಎಲ್ಲಕ್ಕೂ ಮಹತ್ವದ ಸಂಗತಿಯೆಂದರೆ, ಯುದ್ಧದ ಈ ನಾಲ್ಕು ವರ್ಷಗಳಲ್ಲಿ ಪರದೇಶದಿಂದ ಬರುವ ಅದರಲ್ಲಿಯೂ ಇಂಗ್ಲಂಡದಿಂದ ಬರುವ ಕಬ್ಬಿಣ ರಂಟಿಗಳ ಆಯಾತವು ಪೂರ್ಣವಾಗಿ ನಿಂತಿತು. ಈ ಕಾಲದಲ್ಲಿ ಕಿರ್ಲೋಸ್ಕರರ ರಂಟಿಗಳು ಪೇಟೆಯನ್ನೆಲ್ಲ ಆಕ್ರಮಿಸಿದವು. ಒಮ್ಮೆ ಕಾಲ್ತೆಗೆದ ವಿಲಾಯತಿಯ ರಂಟಿಗಳು ತಿರುಗಿ ಮರುಳಲಿಲ್ಲ. ಕಿರ್ಲೋಸ್ಕರರ ರಂಟಿಗಳಿಗೆ ನಿರ್ವೀರ್ಯಮುರ್ವೀತಲಂ ಎಂಬಂತಾಯಿತು. ಈಗ ಈ ಮಾಲುಗಳ ಪ್ರಸಾರಕ್ಕೆ ಯಾವ ತೊಂದರೆಗಳೂ ಉಳಿಯಲಿಲ್ಲ. ಇದರಿಂದ ಸಹಜವಾಗಿಯೇ ಲಕ್ಷ್ಮಣರಾಯರ ಆಶೆ-ಆಕಾಂಕ್ಷೆಗಳಿಗೆ ಚಿಗುರೊಡೆದವು. ಈಗಿದ್ದ ಕಾರಖಾನೆಯನ್ನು ಕನಿಷ್ಠ

ನಾಲ್ಕುಪಟ್ಟಾದರೂ ಬೆಳೆಸಬೇಕು ಎಂಬ ಮಹತ್ವಾಕಾಂಕ್ಷೆಯುನ್ನು ತಳೆದರು. ಕೆಲವು ದಿನ ಮೊದಲು ಕಬ್ಬಿಣದಗಾಣಗಳನ್ನು ಸಿದ್ಧಪಡಿಸುವ ಕಾರ್ಯಕ್ಕೆ ಕೈಯಿಕ್ಕಿ ಮೆಲ್ಲ ಮೆಲ್ಲಗೆ ಆ ಕ್ಷೇತ್ರವನ್ನೂ ವ್ಯಾಪಿಸಹತ್ತಿದರು. ಇನ್ನು ಮುಂದಿನ ಕಾಲದಲ್ಲಿ ರೈತರಿಂದ ಯಾವ ಯಂತ್ರದ ಬೇಡಿಕೆ ಬರಬಹುದೆಂಬುದನ್ನು ನಿರೀಕ್ಷಿಸುತ್ತ ಅವರ ನಿರ್ಮಿತಿಗಾಗಿ ಉತ್ಸುಕರಾಗಿದ್ದರು.

ಲಕ್ಷ್ಮಣರಾಯರಿಗೆ ೫೦ ವರ್ಷಗಳು ತುಂಬಿದ್ದವು. ತಲೆಗೂದಲುಗಳು ಬೆಳ್ಳಗಾಗಹತ್ತಿದವು. ಖಲ್ವಾಟವು ಬೆಳೆಯುತ್ತ ನಡೆದಿತ್ತು. ಅವರು ವಿಶ್ರಾಂತಿ ಪಡೆಯುವ ದಿವಸಗಳು ಸಮೀಪಿಸಿವೆ ಎಂದು ಈ ಲಕ್ಷಣಗಳು ಹೇಳುತ್ತಿದ್ದವು. ಅವರ ಶ್ರಮಕ್ಕೆ ತಕ್ಕ ಫಲವೂ ದೊರೆತಿದ್ದಿತು. ತಮ್ಮ ಇತಿ ಕರ್ತವ್ಯವು ಮುಗಿಯಿತೆಂದು ಅವರು ವಿಶ್ರಾಂತಿಪಡೆದಿದ್ದರೆ ಯಾರೂ ಹೆಸರಿಡುತ್ತಿರಲಿಲ್ಲ. ಆದರೆ ಅವರಿಗೆ ಇಷ್ಟರಿಂದಲೇ ತೃಪ್ತಿ ಇರಲಿಲ್ಲ. ಅವರ ದೃಷ್ಟಿಯು ಯಾವಾಗಲೂ ಕ್ಷಿತಿಜದ ಕಡೆಗೆ ಇರುತ್ತಿದ್ದಿತು. ಆದುದರಿಂದಲೇ ಅವರು ಮುಂದಕ್ಕೆ ಹೋದಷ್ಟು ಮತ್ತೊಂದು ಉತ್ತುಂಗ ಶಿಖರವು ಅವರ ಕಣ್ಣಿಗೆ ಬೀಳುತ್ತಿತ್ತು. ಕೂಡಲೇ ಅದನ್ನು ಮುಟ್ಟಲು ಅವರು ಟೊಂಕಕಟ್ಟುತ್ತಿದ್ದರು. ಮತ್ತು ಮುಂದೆ ಸಾಗುತ್ತಿದ್ದರು.

ಆದರೆ ಕಾರಖಾನೆಯ ಭಾವೀವಿಕಾಸದ ಭವ್ಯ ಸ್ವಪ್ನವನ್ನು ಸತ್ಯ ಸೃಷ್ಟಿಗೆ ಇಳಿಸುವದೆಂತು? ಕಾರಖಾನೆಯ ವಿಸ್ತಾರದೊಡನೆ ಜೀವನದ ಎಲ್ಲ ರಂಗಗಳೂ ವಿಸ್ತಾರವಾಗಬೇಕು. ಅಂದಮೇಲೆ ಈ ಯೋಜನೆಗೆ ಹಣವೆಲ್ಲಿಂದ ತರಬೇಕು? ಹತ್ತು ವರ್ಷಗಳಲ್ಲಿ ಕಾರಖಾನೆಯು ವಿರಾಟ ರೂಪವನ್ನು ತಾಳಿದ್ದರೂ ಬಂದ ಲಾಭವನ್ನು ಅದರ ಬೆಳವಣಿಗೆಗೇ ಉಪಯೋಗಿಸುವ ಧೋರಣೆ ರಾಯರದಾಗಿದ್ದಿತು. ಆದುದರಿಂದ ಕಾರಖಾನೆಯಲ್ಲಿ ಇದ್ದ ವಸ್ತುಗಳ ಬೆಲೆಯು ಐದು ಲಕ್ಷವಾದರೂ ಬೊಕ್ಕಸದಲ್ಲಿ ರೋಖ ಹಣ ಅಷ್ಟಕ್ಕಷ್ಟೆ.

ತಮ್ಮ ಭವ್ಯ ಕಲ್ಪನೆಗೆ ಹಣ ಒದಗಿಸಲು ಒಂದು ಉಪಾಯವನ್ನು ಹುಡುಕಿದರು. ತಮ್ಮ ಕಾರಖಾನೆಯನ್ನು ಲಿಮಿಟೆಡ್ ಕಂಪನಿಯನ್ನಾಗಿ ಮಾಡಿ ಶೇರುಗಳ ರೂಪದಿಂದ ಹಣ ಸಂಗ್ರಹಿಸಬೇಕೆಂದು ನಿಶ್ಚಯಿಸಿದರು. ಈ ಕಲ್ಪನೆಗೆ ಇನ್ನೊಂದು ಕಾರಣವಿದ್ದಿತು. ಇಂತಹ ಕಾರಖಾನೆಗಳು ವ್ಯಕ್ತಿಗತವಾಗಿ ಉಳಿದರೆ ಮುಂದೆ ಒಡೆಯರಲ್ಲಿಯೇ ಯಜಮಾನತ್ವದ ಬಗ್ಗೆ ವಾದ ಉಂಟಾಗಿ ಕಾರಖಾನೆಯ ಅಸ್ತಿತ್ವಕ್ಕೇ ಧಕ್ಕೆ ತಗಲುವ ಸಂಭವವಿದೆ ಎಂದು

ಅವರಿಗೆ ಅನಿಸಹತ್ತಿತು. ಅಲ್ಲದೆ ಯುದ್ಧೋತ್ತರ ಕಾಲದಲ್ಲಿ ಭಾರತದಲ್ಲಿಯ ಉದ್ಯೋಗಗಳಿಗೆ ಕಳೆ ಏರುವ ಲಕ್ಷಣಗಳು ಸ್ಪಷ್ಟವಾಗಿದ್ದವು. ಈ ನಡುವಿನ ನಾಲ್ಕು ವರ್ಷಗಳಲ್ಲಿ ಕಲ್ಪಕ ತರುಣರಿಗೆ ವಿವಿಧ ವಸ್ತುಗಳ ಕಾರಖಾನೆಗಳನ್ನು ಪ್ರಾರಂಭಿಸಲು ಒಳ್ಳೇ ಸಂಧಿಯು ದೊರೆತ್ತಿತ್ತು. ಪರದೇಶೀ ವಸ್ತುಗಳ ಆಯಾತವು ನಿಂತಾಗ ಸ್ವದೇಶೀ ಕಾರಖಾನೆದಾರರು ಈ ಸಂಧಿಯ ಸದುಪಯೋಗ ಮಾಡಿಕೊಳ್ಳದೆ ಬಿಡುವದುಂಟೆ? ೧೯೧೯ ರ ಸುಮಾರಿಗೆ ಇಂತಹ ಕಂಪನಿಗಳಿಗೆ ಉಕ್ಕು ಬಂದಿತು. ಭಾರತದಲ್ಲಿ ಹೊಸ ಔದ್ಯೋಗಿಕ ಯುಗವೇ ಪ್ರಾರಂಭವಾದ ಲಕ್ಷಣಗಳು ಕಾಣಹತ್ತಿದವು.

ಲಕ್ಷ್ಮಣರಾಯರ ಈ ಕಲ್ಪನೆಗೆ ರಾಜಾಸಾಹೇಬರು ಆನಂದದಿಂದ ಅನುಮತಿಯನ್ನಿತ್ತರು. ಅಲ್ಲದೆ ಹೊಸ ಕಂಪನಿಯ ಅನೇಕ ಸೇರುಗಳನ್ನು ಕೊಳ್ಳಲೂ ಆಶ್ವಾಸನ ಕೊಟ್ಟರು. ಇಂತಹ ಕಂಪನಿಗಳನ್ನು ಸ್ಥಾಪಿಸಲು ಕಾಯದೇ ಪಂಡಿತರ ಅವಶ್ಯವಿದ್ದಿತು. ಸಾತಾರೆಯ ಪ್ರಸಿದ್ಧ ಕಾಯದೆಯ ತಜ್ಞರಾದ ರಾವಬಹಾದ್ದೂರ ಕಾಳೆಯವರಿಂದ ಈ ಸಹಾಯವು ದೊರೆಯಿತು. ಡಾ|| ವಾಸುದೇವರಾವ ಕಿರ್ಲೋಸ್ಕರ, ರಾವಬಹಾದ್ದೂರ ಕಾಳೆ, ಗೋಪಾಳರಾವ ಜೋಗ, ಭಾಸ್ಕರರಾವ ಜಾಧವ, ಕಾಶೀನಾಥಪಂತ ದಾಂಡೇಕರರಂಥ ತಜ್ಞ ಹಾಗೂ ಪ್ರತಿಷ್ಠಿತರು ಬೋರ್ಡ ಆಫ್ ಡಾಯರೆಕ್ಟರರಾಗಿ ಬೆಂಬಲವಿತ್ತರು. ಚೇರಮನ್ನರ ಸ್ಥಳವು ಔಂಧದ ರಾಜಾಸಾಹೇಬರಿಗೆ ಕೊಡಲ್ಪಟ್ಟಿತು.

ಕಂಪನಿಯ ಲೆಖ್ಖ ಪರೀಕ್ಷಕರೆಂದು ಶ್ರೀ ಜೀವಾಜಿ ಕೃಷ್ಣ ಪರೂಳೇಕರರು ನೇಮಿಸಲ್ಪಟ್ಟರು. ಮತ್ತು ರಾವಬಹಾದ್ದೂರ ಕಾಳೆ ಹಾಗೂ ವ್ಹಿ. ಜಿ. ಚಿರಮುಲೆಯವರು ಕಾಯಿದೆಯ ಸಲಹೆಗಾರರಾದರು. ಕಿರ್ಲೋಸ್ಕರ ಸನ್ಸ ಮತ್ತು ಕಂಪನಿಯು ಮ್ಯಾನೇಜಿಂಗ ಏಜೆಂಟ್ಸರಾದರು. ಇದರಲ್ಲಿ ಲಕ್ಷ್ಮಣರಾಯರು ತಮ್ಮೊಡನೆ ಶ್ರೀ ಶಂಭೂರಾವ ಜಾಂಭೇಕರ, ಶಂತನುರಾವ ಕಿರ್ಲೋಸ್ಕರ, ಶಂಕರರಾವ ಕಿರ್ಲೋಸ್ಕರ, ಅನಂತರಾವ ಫಳನೀಕರ ಇವರನ್ನು ಸೇರಿಸಿಕೊಂಡರು.

ಕಿರ್ಲೋಸ್ಕರ ಬ್ರದರ್ಸ ಲಿಮಿಟೆಡ್ ಕಂಪನಿಯು ಪ್ರಾರಂಭಕ್ಕೆ ತನ್ನ ಭಂಡವಲು ಹನ್ನೆರಡು ಲಕ್ಷವೆಂದೂ ೨೫ ರೂಪಾಯಿಗಳು ಒಂದು ಸೇರಿನ ಬೆಲೆ ಎಂದೂ ಸಾರಿತು.

ಸೇರುದಾರರಿಗೆ ಕನಿಷ್ಠ ನೂರಕ್ಕೆ ಒಂಭತ್ತರಂತೆ ಡೆವ್ಹಿಡೆಂಡು ಕೊಡದೆ ಮ್ಯಾನೇಜಿಂಗ ಏಜೆಂಟರು ಲಾಭಾಂಶವನ್ನು ತೆಗೆದುಕೊಳ್ಳುವದಿಲ್ಲವೆಂದು ಸ್ವತಃ ತಮ್ಮ ಮೇಲೆ ತಾವೇ ನಿರ್ಬಂಧವನ್ನು ಹಾಕಿಕೊಂಡರು. ಇದೇ ಲಕ್ಷ್ಮಣ ರಾಯರ ಕಂಪನಿಯ ವೈಶಿಷ್ಟ್ಯವು. ಕಾಳಖಾನೆಯ ಬೆಲೆಯು ಸುಮಾರು ಐದು ಲಕ್ಷದಷ್ಟಿದ್ದರೂ ಅದರ ಬದಲು ಮೂರು ಲಕ್ಷ ಎಂಭತ್ತು ಸಾವಿರ ರೂಪಾಯಿಗಳನ್ನು ಮಾತ್ರ ಸೇರಿನ ರೂಪದಲ್ಲಿ ತೆಗೆದುಕೊಂಡರು. ಕಂಪನಿಯ ಪ್ರಾಸ್ಪೆಕ್ಟಸ್ ಹೊರಬಿದ್ದೊಡನೆಯೆ ಎಲ್ಲ ಕಡೆಯಿಂದ ಸೇರುಗಳನ್ನು ಕೊಳ್ಳಲು ಜನರು ಧಾವಿಸಿದರು. ತೀರ ಅಲ್ಪಕಾಲದಲ್ಲಿಯೇ ಸಂಕಲ್ಪಿತ ಭಂಡವಲು ಕೂಡಿತು.

೧೧

# ಭಾವೀ ಯೋಜನೆಗಳ ಸಿದ್ಧತೆ

"ರೈತರಿಗಾಗಿ ಕಬ್ಬಿಣ ರಂಟೆಗಳನ್ನು ನಿರ್ಮಿಸಿದೆವು. ಅದಕ್ಕೆ ಬೇಡಿಕೆಯೂ ತುಂಬಾ ಇದೆ. ಈಗ ಕಾರಖಾನೆಯನ್ನು ಹೇಗೆ ನಡೆಯಿಸಬೇಕೆಂಬ ಪ್ರಶ್ನೆ ಉಳಿದಿಲ್ಲ. ಆದರೆ ಇಷ್ಟಕ್ಕೆ ನಾವು ಸಂತೃಪ್ತರಾದರೆ ನಮ್ಮ ಇಳಿಕೆಯ ಕಾಲವು ಸಮೀಪಿಸಿತೆಂದು ತಿಳಿಯಬೇಕು. ನಾವು ಯಾವಾಗಲೂ ಮುಂದೆ ಸಾಗಲು ಹಾತೊರೆಯುತ್ತಿರಬೇಕು. ಆದುದರಿಂದ ನಾವು ಇನ್ನು ಮುಂದೆ ಯಾವ ಉದ್ಯಮಕ್ಕೆ ಕೈ ಹಾಕಬೇಕೆಂಬುದನ್ನು ಹೇಳಿರಿ." ಎಂದು ಲಕ್ಷ್ಮಣ ರಾಯರು ಕಾರಖಾನೆಯ ಅಧಿಕಾರಿಗಳನ್ನುದ್ದೇಶಿಸಿ ಮಾತನಾಡಿದರು. ಯಾವದೊಂದು ಹೊಸ ಯೋಜನೆಯನ್ನು ಕೈಕೊಳ್ಳುವದಿದ್ದರೆ, ಇಲ್ಲವೆ ಕಾರಖಾನೆಯಲ್ಲಿ ಹೊಸ ಸುಧಾರಣೆಯನ್ನು ಮಾಡುವದಿದ್ದರೆ, ಲಕ್ಷ್ಮಣರಾಯರು ಕೆಲಸಗಾರರನ್ನೆಲ್ಲ ಕರೆದು ಇಂತಹ ಕಲ್ಪನೆಯನ್ನು ಸ್ಪಷ್ಟವಾಗಿ ಮಂಡಿಸಿ, ಎಲ್ಲರಿಗೂ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟ ಹೇಳಲು ಸ್ವಾತಂತ್ರ್ಯವನ್ನು ಕೊಡುತ್ತಿದ್ದರು.

ಈ ಬಗೆಯಾಗಿ ಅವರು ಕಾರ್ಯಕರ್ತರ ವಿಶ್ವಾಸವನ್ನು ಸಂಪಾದಿಸುತ್ತಿದ್ದುದರಿಂದ ಕಾರ್ಯಕರ್ತರಲ್ಲಿ ಸಹಕಾರದ ವೃತ್ತಿಯು (ಟೀಮ ವರ್ಕ) ಸ್ವಾಭಾವಿಕವಾಗಿ ಉದಯವಾಗಿ ಪ್ರತಿಯೊಬ್ಬರು ತಮ್ಮ ತಮ್ಮ ಕಾರ್ಯದ ಹೊಣೆಯನ್ನು ಹೊರಲು ಹುರುಪುಗೊಳ್ಳುತ್ತಿದ್ದರು. ಇದರಿಂದ ಆ ಜನಕ್ಕೆ ಆ ಕಾರ್ಯದ ಶ್ರಮವೇ ಎನಿಸುತ್ತಿದ್ದಿಲ್ಲ. ಸಾಂಘಿಕವಾಗಿ ಒಂದು ಗುಂಪು ಮತ್ತೊಂದು ಗುಂಪಿನೊಡನೆ ಆಟವಾಡುವಾಗ ಯಾವ ಹುರುಪು ಉಂಟಾಗುವದೋ ಅಂತಹ ಹುರುಪು ಆ ಕಾರ್ಯದಲ್ಲಿ ಅವರಿಗೆ ಉಂಟಾಗುತ್ತಿತ್ತು. ರಾಯರು ಯಾವಾಗಲೂ 'ನಿಮ್ಮ ಕಾರಖಾನೆ' ಎಂದು ಉಚ್ಚರಿಸುತ್ತಿದ್ದರು. ಕಾರಖಾನೆಯ ಬಗ್ಗೆ ಕೆಲಸಗಾರರಿಗೆ ಆತ್ಮೀಯತೆಯು ಉಂಟಾಗಲಿ ಎಂಬುದೇ ರಾಯರ ಉದ್ದೇಶ.

"ನಿಮ್ಮಂತಹ ರಂಟೆಗಳು ಇನ್ನು ಮುಂದೆ ಬೇರೆ ಕಡೆಗೂ ಹೊರಡಬಹುದು, ಹೊರಡತಕ್ಕವೇ. ಆದ್ದರಿಂದ ನಿಮ್ಮ ಕಾರಖಾನೆಯು ಒಳ್ಳೇ ಸ್ಥಿತಿಯಲ್ಲಿ ನಡೆಯಬೇಕಾದರೆ ನೀವು ನಿಮ್ಮ ವಸ್ತುಗಳಲ್ಲಿ ಒಂದೇಸವನೆ

ಸುಧಾರಣೆಗಳನ್ನು ಮಾಡುತ್ತಿರಬೇಕು. ಅಲ್ಲದೆ ದೇಶದ ಭಾವೀ ಅವಶ್ಯಕತೆಗಳನ್ನು ಕಂಡುಹಿಡಿದು ಹೊಸ ಹೊಸ ಯಂತ್ರಗಳನ್ನೂ ಹಾಗು ವಸ್ತುಗಳನ್ನೂ ನಿರ್ಮಿಸಲು ಪ್ರಾರಂಭಿಸಬೇಕು. ಆದುದರಿಂದ ಇನ್ನು ಮುಂದೆ ಆಯಿಲ್ ಇಂಜೀನುಗಳನ್ನು ಮತ್ತು ಮಶೀನ ಟೂಲ್ಸ ಮೊದಲಾದ ಮಹತ್ವದ ಯಂತ್ರಗಳನ್ನೂ ನಿರ್ಮಿಸುವ ಕಾರ್ಯಕ್ಕೆ ಕೈ ಹಾಕಬೇಕು" ಎಂದರು.

ಲಕ್ಷ್ಮಣರಾಯರ ಬಾಯಿಯಿಂದ ಈ ವಾಕ್ಯಗಳು ಹೊರಬಿದ್ದೊಡನೆಯೇ ಕೆಲವರು ಆಶ್ಚರ್ಯಚಕಿತ ಮುದ್ರೆಯಿಂದ ಅವರ ಕಡೆಗೆ ನೋಡಹತ್ತಿದರು. ಇದು ಹೇಗೆ ಶಕ್ಯವೆಂಬುದೇ ಅವರ ನೋಟದ ಅರ್ಥ.

ಲಕ್ಷ್ಮಣರಾಯರು ಅದನ್ನು ಅರಿತು "ನನ್ನ ಮಾತಿನ ಮೇಲೆ ನಿಮಗೆ ವಿಶ್ವಾಸವಿದ್ದಂತಿಲ್ಲ. ಆದರೆ ನನ್ನ ಕಣ್ಣಮುಂದೆ ೧೯೫೦ ರ ಕಿರ್ಲೋಸ್ಕರ ವಾಡಿಯ ಚಿತ್ರವು ಕಾಣುತ್ತದೆ. ಆ ಕಾಲಕ್ಕೆ ಕಾರಖಾನೆಯು ಭವ್ಯರೂಪವನ್ನು ತಾಳಿ, ಕಾರಖಾನೆಯಲ್ಲಿ ಆಯಿಲ್ ಇಂಜನ್ಸ, ಮಶಿನ್ ಟೂಲ್ಸ, ಪಂಪಗಳು ಹಾಗು ಎಲೆಕ್ಟ್ರಿಕ್ ಮೋಟಾರ್ಸ ಕೂಡ ಸಿದ್ಧವಾಗುತ್ತಿರುವದನ್ನು ನೀವು ಕಾಣಬಹುದು. ಆ ಭವಿಷ್ಯವನ್ನು ನಾನು ಮೊದಲೇ ಹೇಳಿಬಿಡುತ್ತೇನೆ" ಎಂದರು.

ಆಗ ಕೇಳುವವರ ಮುಖದಲ್ಲಿ ಆಶಾ ಕಿರಣಗಳು ಮೂಡಿದವು. ಆದರೂ ಅವರಲ್ಲಿ ಒಬ್ಬನು "ತಾವು ಸೂಚಿಸಿದ ಯಂತ್ರಗಳನ್ನು ನಿರ್ಮಿಸುವದೇನೂ ಅಶಕ್ಯವಲ್ಲ. ಆದರೆ ಅದಕ್ಕಾಗಿ ನಮ್ಮಲ್ಲಿ ದೊಡ್ಡ ಯಂತ್ರಗಳು ಬೇಡವೇ? ಫ್ಲಾಯವ್ಹೀಲ್ಸ ಹೇಗೆ ಮಣಿಸಬೇಕು? ಅದಕ್ಕೆ ವ್ಹರ್ಟಿಕಲ್ ಬೋರಿಂಗ ಮಶಿನ್ ಬೇಕಲ್ಲವೇ! ಅದರಂತೆಯೇ ಇಂಜಿನಿನ ಬೆಡ್, ಅದನ್ನು ಸರಿಮಾಡಲು ದೊಡ್ಡ ಪ್ಲೇನಿಂಗ ಮಶಿನ್ನಿನ ಅವಶ್ಯಕತೆಯಿದೆ. ನಮ್ಮಲ್ಲಿ ಈ ಯಂತ್ರಗಳೆಲ್ಲಿವೆ? ಎಂದರು.

ಆಗ ಲಕ್ಷ್ಮಣರಾಯರು "ಈ ತೊಂದರೆಗಳು ಇರುವದು ನಿಜ. ನಮ್ಮ ಶಂಭೂರಾಯರು ೩೫೦ ಅಶ್ವ ಶಕ್ತಿಯುಳ್ಳ ದೊಡ್ಡ ಗ್ಯಾಸ ಇಂಜೀನವನ್ನು ತರಲು ಅಮೇರಿಕೆಗೆ ಹೊರಟಿರುವರು. ಅವರಿಗೆ ಈ ಯಂತ್ರಗಳ ಬಗ್ಗೆಯೂ ವಿಚಾರ ಮಾಡಲು ಹೇಳೋಣ. ಹೊಂದಿದರೆ ಅವುಗಳನ್ನೂ ತರಿಸೋಣ. ಅಂದರೆ ತಾವು ದೊಡ್ಡ ಯಂತ್ರಗಳನ್ನು ನಿರ್ಮಿಸಲು ಸಿದ್ಧರಲ್ಲವೇ?" ಎಂದು ಪ್ರಶ್ನಿಸಿದರು.

"ಖಂಡಿತ" ಎಂದು ಎಲ್ಲರೂ ಏಕ ಕಂಠದಿಂದ ಸಮ್ಮತಿಸಿದರು.

" ತಾವು ಈಗ ಇನ್ನೊಂದು ಮಾತಿನ ವಿಚಾರ ಮಾಡಬೇಕು. ಜಗತ್ತು ಭರದಿಂದ ಮುಂದೆ ಸಾಗುತ್ತಿದೆ. ದಿನಾಲು ಹೊಸ ಹೊಸ ಸುಧಾರಣೆಗಳು ಆಗಹತ್ತಿವೆ. ಹೊಸ ಶೋಧಗಳು ನಡೆದಿವೆ. ಸುಧಾರಣೆಯೆಂದರೆ ಯಂತ್ರದ ಉಪಯೋಗದ ಹೆಚ್ಚಳ. ನಾವು ಯಂತ್ರಗಳನ್ನು ಬಳಸದೆ ಹಿಂದೆ ಬಿದ್ದಿದ್ದೇವೆ. ಇನ್ನು ಮುಂದೆ ಹೀಗೆ ಸಾಗದು. ಕಟ್ಟಿಗೆಯ ರಂಟಿಗಳನ್ನು ಬಿಟ್ಟು ಕಬ್ಬಿಣದ ರಂಟಿಗಳನ್ನು ಉಪಯೋಗಿಸಲು ರೈತರಿಗೆ ಅನೇಕ ಶತಕಗಳು ಹಿಡಿದವು. ಆದರೆ ಅವರಿಗೆ ಇಂಜಿನ ಪಂಪುಗಳನ್ನು ಬಳಸಲು ಬಹಳ ಸಮಯ ಹಿಡಿಯಲಾರದು. ನಮ್ಮ ದೇಶದಲ್ಲಿ ವಿದ್ಯುತ್ತಿನ ಪ್ರಸಾರವು ಆಗಹತ್ತಿದೆ. ವಿದ್ಯುತ್ತಿನಿಂದಲೇ ಪಂಪು, ಹಿಟ್ಟಿನ ಗಿರಣಿ, ಮಗ್ಗಗಳನ್ನು ನಡೆಯಿಸಲು ಇಲೆಕ್ಟ್ರಿಕ್ ಮೋಟಾರುಗಳು ಬೇಕು. ದೇಶದಲ್ಲಿ ಇಂತಹ ಯಂತ್ರಗಳ ಬೆಳವಣಿಗೆಯಾಗಹತ್ತಿದರೆ ಅವುಗಳನ್ನು ಮಾಡಲು ಲೇಥ, ಡ್ರಿಲಿಂಗ ಮಶಿನ್ನುಗಳಂಥ ಯಂತ್ರಗಳೂ ಬೇಕೆಂಬುದು ಮೇಲೆಯೇ ಕಾಣುವದು. ಈ ಯಂತ್ರಗಳನ್ನು ನೀವು ಮಾಡದಿದ್ದರೆ ಬೇರೆಯವರು ಮಾಡುವರು. ನೀವು ಮಾತ್ರ ಮಾಡಬಲ್ಲಿರಿ. ಉಳಿದವರು ಮಾಡಲಾರರೋ ? ಅಂದ ಮೇಲೆ ನಾವು ಮುಂದೆ ಸಾಗಬೇಕೋ ಹಿಂದೆ ಉಳಿಯಬೇಕೋ ಎಂಬುದನ್ನು ನೀವೇ ವಿಚಾರಮಾಡಿರಿ."

" ಈ ಹೊಸ ಯಂತ್ರಗಳನ್ನು ಮಾಡುವ ಅನುಭವವು ನಮಗೆ ಇರಲಿಕ್ಕಿಲ್ಲ. ಆದರೆ ಅದರ ಸಲುವಾಗಿ ಶಂತನು ಮತ್ತು ಮಾಧವರನ್ನು ಅಮೇರಿಕೆಗೆ Mit (Massachusetts Institute of Technology) ಎಂಬ ಸರ್ವೋತ್ಕೃಷ್ಟ ಇಂಜನಿಯರಿಂಗ ಕಾಲೇಜದಲ್ಲಿ ಶಿಕ್ಷಣಪಡೆಯಲು ಕಳಿಸುವ ನಿಶ್ಚಯವಾಗಿದೆ. ಈ ಶಿಕ್ಷಣದೊಂದಿಗೆ ಅಲ್ಲಿಯ ಕೆಲವು ಕಾರಖಾನೆಗಳಲ್ಲಿ ಪ್ರತ್ಯಕ್ಷ ಕೆಲಸ ಮಾಡಿ ಅವಶ್ಯಕವಾದ ಅನುಭವವನ್ನು ಪಡೆಯಿರಿ, ಎಂದೂ ನಾನು ಅವರಿಗೆ ಸೂಚಿಸಿದ್ದೇನೆ. ಅವರು ಬರುವಷ್ಟರಲ್ಲಿ ಪೂರ್ವ ಸಿದ್ಧತೆ ಮಾಡೋಣ. ಅಂದರೆ ಅವರೇ ಶ್ರೀಗಣೇಶಾಯ ನಮಃ ದಿಂದ ಸುರುವು ಮಾಡುವದು ಬೇಡ" ಎಂದರು. ಇದರಿಂದ ಕಾರ್ಯಕರ್ತರು ಉತ್ತೇಜಿತರಾದರು.

ಶಂತನುರಾಯನು ಲಕ್ಷ್ಮಣರಾಯರ ಹಿರಿಯ ಮಗ. ೧೯೦೩ ರಲ್ಲಿ ಸೊಲ್ಹಾಪೂರ ಗ್ರಾಮದಲ್ಲಿ ಜನಿಸಿದನು. ತಂದೆಯಂತೆ ಮಗನೆಂಬ ಗಾದೆ

ಯಿದ್ದರೂ ತಂದೆಯ ಗುಣಗಳೆಲ್ಲ ಮಗನಲ್ಲಿ ಬರುತ್ತವೆಂಬ ನಿಯಮವಿಲ್ಲ. ಆದರೆ ರಾಯರು ಸುದೈವಿಗಳೆಂದು ಹೇಳಬೇಕು.

ಏಕೆಂದರೆ ಅವರ ಕಲ್ಪಕತೆ, ಯಾಂತ್ರಿಕ ದೃಷ್ಟಿ, ಉದ್ಯೋಗ ಪ್ರಿಯತೆ, ಕಾರ್ಯಕ್ಷಮತೆಗಳು ಮಗನಲ್ಲಿಯೂ ಪೂರ್ಣವಾಗಿ ಇಳಿದು ಬಂದಿದ್ದವು. ಯಂತ್ರದೇವತೆಯು ಈ ಮಗುವಿನ ಮೇಲೆ ಹುಟ್ಟಿದೊಡನೆಯೇ ವರದಹಸ್ತ ವನ್ನಿಟ್ಟಿದ್ದಳೆಂದು ಹೇಳಬಹುದು. ಆದ್ದರಿಂದಲೇ ಕಿರಲೋಸ್ಕರ ಕಾರಖಾನೆಯ ಪ್ರಗತಿಗಾಗಿ ತಂದೆಯ ಕಾರ್ಯದಲ್ಲಿ ಮಗನು ಬಹಳ ನೆರವಾದನು. ಇಷ್ಟೇ ಅಲ್ಲದೆ ಕಿರ್ಲೋಸ್ಕರವಾಡಿಗಿಂತಲೂ ಒಂದು ತೂಕ ಹೆಚ್ಚು ಯೊಗ್ಯತೆಯುಳ್ಳ ಹರಿಹರ, ಬೆಂಗಳೂರ ಹಾಗೂ ಪುಣೆಗಳಲ್ಲಿ ಕಾರಖಾನೆಗಳನ್ನು ತೆಗೆದು ತಂದೆಯ ಉಜ್ವಲ ಪರಂಪರೆಯನ್ನು ಆದರ್ಶ ರೀತಿಯಿಂದ ಮುಂದೆ ನಡೆಯಿಸಿರುವನು.

ಮಾಧವನು ಲಕ್ಷ್ಮಣರಾಯರ ಅಣ್ಣನ ಮಗನು. ಡಾ|| ವಾಸುದೇವ ರಾಯರ ಮೂರನೇ ಮಗ. ಚಿಕ್ಕಂದಿನಿಂದಲೂ ಮಾಧವನು ಲಕ್ಷ್ಮಣರಾಯರ ಹಾಗೂ ರಾಧಾಬಾಯಿಯವರ ಅಚ್ಚಿಯ ಕೂಸು. ರಾಧಾಬಾಯಿಯವರಿಗೆ ಬಹುದಿನ ಮಕ್ಕಳಾಗದ್ದರಿಂದ ಮಾಧವನನ್ನು ಕರೆತಂದು ಮಗನಂತೆ ಜೋಕೆ ಮಾಡುತ್ತಿದ್ದಳು. ಮಾಧವನ ಕಾಲಗುಣ ಬಹಳ ಒಳ್ಳೇಯದು. ಅವನು ಮನೆಗೆ ಬಂದೊಡನೆಯೆ ರಾಧಾಬಾಯಿಯವರ ಮನೆಯಲ್ಲಿ ತೊಟ್ಟಿಲ ತೂಗ ಹತ್ತಿತು. ಮಾಧವನು ಮರುಳಿ ಸೊಲ್ಲಾಪುರಕ್ಕೆ ಹೋದರೂ ಈ ದಂಪತಿಗಳ ಪ್ರೇಮವು ಕಡಿಮೆಯಾಗಲಿಲ್ಲ. ಅವನನ್ನು ಶಾಲೆಯ ಬಿಡುವಿನಲ್ಲಿ ಕರೆಯಿಸಿ ಕೊಳ್ಳುತ್ತಿದ್ದರು. ಮಾಧವನು ಬಹು ಬುದ್ಧಿವಂತ. ಅವನು ಕಾಲೇಜಿನಲ್ಲಿ ರುವಾಗಲೇ ವಿದ್ಯುತ್ತಿನ ಚಿಕ್ಕ-ಪುಟ್ಟ ಯಂತ್ರಗಳನ್ನು ನಿರ್ಮಿಸುತ್ತಿದ್ದನು. ಕಿರ್ಲೋಸ್ಕರವಾಡಿಯಲ್ಲಿ ಕೂಡಿಸಿದ ಮೊದಲನೆಯ ಟೆಲಿಫೋನ ಯಂತ್ರವನ್ನು ಆತನೇ ಸಿದ್ಧಪಡಿಸಿದ್ದ. ಅವನು ಬಿ. ಎಸ್‌ಸಿ. ಆದೊಡನೆ ಅಮೇರಿಕೆಗೆ ಕಳಿಸಿ, ಅವನನ್ನು ಇಲೆಕ್ಟ್ರಿಕ್ ಇಂಜಿನಿಯರನನ್ನು ಮಾಡುವ ಸಂಕಲ್ಪವನ್ನು ಲಕ್ಷ್ಮಣರಾಯರು ಮೊದಲೇ ಮಾಡಿದ್ದರು.

ಬೀಳ್ಕೊಡುವ ದೊಡ್ಡ ಸಮಾರಂಭವನ್ನು ಏರ್ಪಡಿಸಿ, ಮಾಧವ ಹಾಗೂ ಶಂತನುರಿಗೆ ಆಶೀರ್ವದಿಸಿ ಅಮೇರಿಕೆಗೆ ರಾಯರು ಕಳಿಸಿಕೊಟ್ಟರು. MIT ಧಲ್ಲಿಯ ಅಭ್ಯಾಸವನ್ನು ಉತ್ಕೃಷ್ಟ ರೀತಿಯಿಂದ ಮುಗಿಸಿದ ನಂತರ ಅಲ್ಲಿಯ ವೆಸ್ಟಿಂಗ ಹೌಸದಂಥ ಕಾರಖಾನೆಯಲ್ಲಿ ಪ್ರತ್ಯಕ್ಷ ಕೆಲಸ ಮಾಡಿ ಅವಶ್ಯವಿದ್ದ ಅನುಭವವ

ಪ್ಲೆಲ್ಲ ಪಡೆದರು. ಆದರೆ ಅವರು ದೇಶಕ್ಕೆ ಮರಳುವಾಗ ಪುಪ್ಪುಸ ರೋಗ ದಿಂದ ಮಾಧವನು ಕಾಲವಾದನು. ಎಂತಹ ದುರ್ಯೋಗವಿದು. ಇದರಿಂದ ಲಕ್ಷ್ಮಣರಾಯರಿಗೆ ದೊಡ್ಡ ಧಕ್ಕೆ ಬಡಿಯಿತು. ರಾಧಾಬಾಯಿಯವರು ದುಃಖಸಾಗರದಲ್ಲಿ ಮುಳುಗಿದರು. ಮಾಧವನು ಮರುಳಿದೊಡನೆ ಇಲೆಕ್ಟ್ರಿಕ್ ಮೋಟಾರುಗಳನ್ನು ಸಿದ್ಧಪಡಿಸುವ ಪೂರ್ವ ಸಿದ್ಧತೆಯೆಲ್ಲವೂ ನಾಡಿಯಲ್ಲಿ ಮುಗಿದಿತ್ತು. ಲಕ್ಷ್ಮಣರಾಯರು ಭಗ್ನ ಮನೋರಥರಾದರು. ಆದರೆ ಸುದೈವ ದಿಂದ ಅವರ ಕೊನೆಯ ಚಿರಂಜೀವನಾದ ರವೀಂದ್ರನು ಅಮೇರಿಕೆಗೆ ಹೋಗಿ ಇಲೆಕ್ಟ್ರಿಕ್ ಇಂಜಿನಿಯರನಾಗಿ ಬಂದು ಲಕ್ಷ್ಮಣರಾಯರ ಇಚ್ಛೆಯನ್ನು ಪೂರ್ಣ ಮಾಡಿದನು. ಅದೇ ಬೆಂಗಳೂರಿನಲ್ಲಿಯ ಕಿರ್ಲೋಸ್ಕರ ಇಲೆಕ್ಟ್ರಿಕ್ ಕಂಪನಿ ಎಂಬ ಭವ್ಯ ಕಾರಖಾನೆ. ಲಕ್ಷ್ಮಣರಾಯರು ಯಾವ ವಸ್ತುಗಳನ್ನು ನಿರ್ಮಿಸ ಬೇಕೆಂಬುದನ್ನು ವಿಚಾರಿಸುತ್ತಿದ್ದಂತೆಯೇ ಸಿದ್ಧ ವಸ್ತುಗಳ ಪ್ರಸಾರವು ಬೆಳೆಯು ವಂತೆಯೂ ಆಲೋಚಿಸುತ್ತಿದ್ದರು. ಈ ವಿಷಯದಲ್ಲಿ ಪಾಶ್ಚಾತ್ಯರ ಅನುಕರಣೆ ಮಾಡಬೇಕೆಂದು ಅವರ ಅಪೇಕ್ಷೆ — ಆದುದರಿಂದ ಕೆಲಸಗಾರರ ಮನಸ್ಸಿನಲ್ಲಿ ತನ್ನ ಈ ಅಭಿಪ್ರಾಯವನ್ನು ಬಿಂಬಿಸಲು ಯತ್ನಿಸುತ್ತಿದ್ದರು.

"ನೀವು ಒಳ್ಳೇ ವಸ್ತುಗಳನ್ನು ನಿರ್ಮಿಸಬೇಕಲ್ಲದೆ ಅವುಗಳ ಗುಣಗಳೂ ಎಲ್ಲರಿಗೂ ತಿಳಿಯುವಂತೆ ಜಾಹೀರಾತು ಮಾಡಬೇಕು. ಜಾಹೀರಾತು ನಾವಿನ್ಯ ಪೂರ್ಣವೂ ಆಕರ್ಷಕವೂ ಇರಬೇಕು. ಜಾಹೀರಾತು ಎಂದರೆ ವರ್ಣನೆಯಲ್ಲ. ಗಿರಾಕಿಗಳ ಬಾಯಲ್ಲಿ ನೀರು ಬಿಟ್ಟು, ಅವರದನ್ನು ಕೊಳ್ಳುವಂತೆ ಮಾಡುವದೇ ಜಾಹೀರಾತು."

"ಇಂತಹ ಜಾಹೀರಾತು ನೋಡಿ ವಿಶೇಷ ವಿಚಾರಣೆಗಾಗಿ ನಿಮ್ಮ ಕಡೆಗೆ ಪತ್ರಗಳು ಬರುವವು. ಅವುಗಳಿಗೆ ನೀವು ಸರಿಯಾಗಿ ಉತ್ತರಗಳನ್ನು ಕೊಡ ಬೇಕು. ಉತ್ತರ ಕೊಡ... ವಿಲಂಬವಾಗಬಾರದು. ಅವರು ವಿಚಾರಿಸಿದ ಎಲ್ಲ ಪ್ರಶ್ನೆಗಳಿಗೆ ಉತ್ತರವೀಯಬೇಕು. ಈ ಪತ್ರವೆಂದರೆ, ನೀವು ಗಿರಾಕಿಯೊಡನೆ ಪ್ರತ್ಯಕ್ಷ ಭೆಟ್ಟಿಯಾದಂತೆಯೆ. ಆದುದರಿಂದ ಆ ಪತ್ರವು ಸೌಜನ್ಯ ಪೂರ್ಣ ವಾಗಿಯೂ ಸ್ನೇಹಯುಕ್ತವಾಗಿಯೂ ಸುಲಭ ಭಾಷೆಯಲ್ಲಿಯೂ ಬರೆಯ ಲ್ಪಡಬೇಕು. ಈ ಕಾರ್ಯವು ನಿಮ್ಮಿಂದ ಒಳ್ಳೇ ರೀತಿಯಿಂದ ಆಗ ಬೇಕಿದ್ದರೆ ಕೇವಲ ನೀವು ಕುರ್ಚಿಯ ಮೇಲೆ ಕೂಡದೆ ನಮ್ಮ ವಸ್ತುಗಳ ಒಳ್ಳೇ ಗುಣ

ಗಳನ್ನು ಅಭ್ಯಸಿಸಬೇಕು. ಅವುಗಳ ಬಗ್ಗೆ ನಿಮ್ಮಲ್ಲಿ ವಿಶ್ವಾಸವು ನೆಲೆಗೊಂಡಿದ್ದರೆ ಮಾತ್ರ ಗಿರಾಕಿಗಳಿಗೆ ಅವನ್ನು ನೀವು ಮನಗಾಣಿಸಿ ಕೊಡಬಲ್ಲಿರಿ.

ಗಿರಾಕಿಗಳ ಅಭಿಪ್ರಾಯವು ಒಳ್ಳೆಯದಾಗುವಂತೆ ನೀವು ಎಷ್ಟು ಪ್ರಯತ್ನ ಪಟ್ಟರೂ ಅದು ಕಡಿಮೆಯೇ ಎಂದು ನನ್ನ ಅಭಿಪ್ರಾಯ. ನಿಮ್ಮ ವಸ್ತುಗಳ ಬಗ್ಗೆ ಪೂರ್ಣ ಸಂತುಷ್ಟನಾದ ಗ್ರಾಹಕನೇ ಜಗತ್ತಿನಲ್ಲಿ ಸರ್ವೋತ್ಕೃಷ್ಟ ಜಾಹೀರಾತು. ಇಂತಹ ಸಂತುಷ್ಟ ಗಿರಾಕಿಯು ಮತ್ತೆ ಹತ್ತು ಜನ ಗಿರಾಕಿಗಳನ್ನು ನಿಮ್ಮೆಡೆಗೆ ತರುವನು. ಅಸಂತುಷ್ಟ ಗಿರಾಕಿಯು ನಿಮ್ಮ ಉದ್ಯೋಗಕ್ಕೆ ಧಕ್ಕೆ ತರುವನು. ಆದುದರಿಂದ ಗಿರಾಕಿಗಳೊಡನೆ ಎಷ್ಟು ಒಳ್ಳೇ ರೀತಿಯಿಂದ ನಡೆದುಕೊಳ್ಳಬೇಕಾಗುತ್ತದೆಂಬುದನ್ನು ಮರೆಯಕೂಡದು.

ಲಕ್ಷ್ಮಣರಾಯರ ಈ ಬಗೆಯ ಉತ್ತೇಜನಪರ ಮಾರ್ಗದರ್ಶನದಿಂದ ಕೆಲಸಗಾರರಲ್ಲಿ ಕಾರ್ಯ ಮಾಡುವ ಹೊಸ ದೃಷ್ಟಿಯು ಉಂಟಾಗಿ ಕಾರಖಾನೆಯ ಪ್ರಗತಿಗಾಗಿ ಹೊಸ ಹೊಸ ಕಲ್ಪನೆಗಳನ್ನು ಕಲ್ಪಿಸಲು ಯತ್ನಿಸುತ್ತಿದ್ದರು. ತಮ್ಮ ಕಲ್ಪನೆಗಳಲ್ಲಿ ಒಂದಾದರೂ ಲಕ್ಷ್ಮಣರಾಯರ ಮನಸ್ಸಿಗೆ ಬಂದರೆ ಅದಕ್ಕೆ ಪ್ರೋತ್ಸಾಹ ದೊರೆಯದೆ ಹೋಗುವದಿಲ್ಲವೆಂದು ಅವರಿಗೆ ಮನವರಿಕೆಯಾಗಿತ್ತು.

ಇದರಂತೆಯೇ ಲೆಕ್ಕ-ಪತ್ರಗಳ ಬಗ್ಗೆಯೂ ಕೆಲಸಗಾರರಿಗೆ ಹೊತ್ತಿಗೆ ಸರಿಯಾಗಿ ಸಂಬಳ ಸಿಗುವ ಬಗ್ಗೆಯೂ ಎಚ್ಚರ ತೆಗೆದುಕೊಳ್ಳುತ್ತಿದ್ದರು. 'ಕಿರ್ಲೋಸ್ಕರ ಖಬರ' ಪತ್ರಿಕೆಗಾಗಿ ಹೊರಟ ಚಿಕ್ಕ ಮುದ್ರಣಾಲಯವು ಪಡಿಯಚ್ಚುಗಳನ್ನು ಮಾಡುವವರೆಗೂ ಬೆಳೆದು ಪರಿಪೂರ್ಣವಾಯಿತು.

ಕಾರ್ಖಾನೆಯಲ್ಲಿಯ ತರುಣರಿಗೆ ತಮ್ಮ ಕಾರಖಾನೆಯ ಚಿತ್ರಪಟವನ್ನು ಸಿದ್ಧಪಡಿಸಬೇಕೆಂಬ ಕಲ್ಪನೆಯು ಹೊಳೆಯಿತು. ಅದಕ್ಕೂ ರಾಯರು ಸಂತೋಷದಿಂದ ಒಪ್ಪಿಗೆಯನ್ನಿತ್ತರು. ಔದ್ಯೋಗಿಕ ಕ್ಷೇತ್ರದಲ್ಲಿ ಈ ಸಾಧನದ ಉಪಯೋಗ ಮಾಡಿಕೊಳ್ಳುವ ಕಲ್ಪನೆಯು ಇಲ್ಲಿಯವರೆಗೆ ಯಾರಿಗೂ ಹೊಳೆದಿರಲಿಲ್ಲ. ೧೯೨೨ ರಿಂದಲೇ ಈ ಉದ್ಯೋಗದಲ್ಲಿ ತೊಡಗಿದ್ದ ಬಾಬೂರಾವ ಪೇಂಟರರಿಗೆ ಈ ಕೆಲಸವು ಒಪ್ಪಿಸಲ್ಪಟ್ಟಿತು. ಅವರು ಕ್ಯಾಮರಾ, ರಿಫ್ಲೆಕ್ಟರ್ಸ ಮೊದಲಾದ ಸಾಧನಗಳೊಡನೆ ಸಂಗಡಿಗರನ್ನು ಕರೆದುಕೊಂಡು ಕಿ.ವಾಡಿಗೆ ಬಂದು ಶೂಟಿಂಗ ಪ್ರಾರಂಭಿಸಿದರು. ರಂಪಿ, ಚರಖಾ ಮೊದಲಾದವುಗಳನ್ನು ಹೇಗೆ ಮಾಡುತ್ತಾರೆ? ಪಡಿಯಚ್ಚುಗಳಲ್ಲಿ ಕರಗಿಸಲ್ಪಟ್ಟ ಕಬ್ಬಿಣದ ರಸವನ್ನು ಹೇಗೆ

ಸುರುವುತ್ತಾರೆ? ಕೂಲಿಕಾರರಿಗಾಗಿ ಯಾವ ಯಾವ ಅನುಕೂಲತೆಗಳು ಒದಗಿಸಲ್ಪಟ್ಟಿವೆ? ಇವೆಲ್ಲವುಗಳನ್ನು ಪಟದ ಮೇಲೆ ತೋರಿಸಿದ್ದಲ್ಲದೆ ಸುಧಾರಿಸಿದ ಭಟ್ಟಿಗಳಿಂದ ಎಂತಹ ವಸ್ತುಗಳು ಹೊರಬೀಳುತ್ತವೆಂಬುವನ್ನೂ ಪ್ರತ್ಯಕ್ಷ ತೋರಿಸಲಾಯಿತು. ಈ ಚಿತ್ರಪಟವು ಜನಪ್ರಿಯವಾಯಿತು. ಪುಣೆ, ಸೊಲ್ಲಾಪುರ, ಉಮರಾವತಿ ಮೊದಲಾದ ಸ್ಥಳಗಳಲ್ಲಿಯ ಜನರಿಗೆ ತಮ್ಮ ಊರಲ್ಲಿಯೇ ಕಿರ್ಲೋಸ್ಕರವಾಡಿಯನ್ನು ನೋಡುವ ಲಾಭವು ದೊರೆಯಿತು.

ಈ ಚಿತ್ರಪಟದಿಂದ ಅಪ್ರತ್ಯಕ್ಷವಾಗಿ ಎಷ್ಟು ಕಾರ್ಯವಾಯಿತೆಂಬುದನ್ನು ತಿಳಿಯಲು ನಮ್ಮ ದೃಷ್ಟಿಯನ್ನು ಸ್ವಲ್ಪ ದೂರ ಚೆಲ್ಲಬೇಕು.

೧೯೨೭ ರಲ್ಲಿ ಬೆಂಗಳೂರಿನಲ್ಲಿ ಒಂದು ಭವ್ಯವಾದ ಔದ್ಯೋಗಿಕ ಪ್ರದರ್ಶನವು ನಡೆಯಿತು. ಕಿರ್ಲೋಸ್ಕರ ಹಾಗೂ ಓಗಲೇ ಬಂಧುಗಳು ಜೋಡಿ ಜೋಡಿಯಾಗಿ ಅಲ್ಲಿ ತಮ್ಮ ಮಳಿಗೆಗಳನ್ನು ಇಟ್ಟಿದ್ದರು. ಇಬ್ಬರ ವಸ್ತುಗಳಿಗೂ ಪ್ರದರ್ಶನದಲ್ಲಿ ಪದಕಗಳು ದೊರೆತವು. ಈ ಇನಾಮು ಸಮಾರಂಭದ ದಿವಸ ಸಾಯಂಕಾಲ ಕಿರ್ಲೋಸ್ಕರ ಕಾರಖಾನೆಯ ಚಿತ್ರಪಟವನ್ನು ತೋರಿಸಲಾಯಿತು. ಅದಕ್ಕೆ ಆ ಕಾಲದ ದಿವಾಣರಾದ ಸರ ಮಿರ್ಝಾ ಇಸ್ಮಾಯಿಲ್ ಮತ್ತು ಪ್ರಮುಖರಿಗೆ ಆಮಂತ್ರಣವು ಕೊಡಲ್ಪಟ್ಟಿತು. ಆಗಿನ ಕಾಲದ ಚಿತ್ರಪಟಗಳು ಈಗಿನಂತೆ ಮಾತಾಡುತ್ತಿರಲಿಲ್ಲ. ಚಿತ್ರವನ್ನು ತೋರಿಸುವವರೊಬ್ಬರು ಅದನ್ನು ವಿವರಿಸುವವರೊಬ್ಬರು. ಓಗೆ ಸಾಗುತ್ತಿತ್ತು ಕಾರ್ಯಕ್ರಮ.

ಈ ಕಾರ್ಯಕ್ರಮ ನಡೆದ ಮರುದಿನ ಮಿರ್ಝಾರವರಿಂದ ಕಿರ್ಲೋಸ್ಕರ ಹಾಗೂ ಓಗಲೆಯ ಪ್ರತಿನಿಧಿಗಳಿಗೆ ಕರೆ ಬಂದಿತು. ಅವರು ದಿವಾಣರ ಬಂಗಲೆಗೆ ಹೋದರು. ಆ ಮಾತು ಈ ಮಾತು ಮುಗಿದ ನಂತರ ದಿವಾಣರು "ನಿಮ್ಮ ಕಾರಖಾನೆಯ ಬಗ್ಗೆ ನಾನು ಕೇಳಿ ತಿಳಿದಿದ್ದೆನು. ಆದರೆ ನಿನ್ನೆ ನಡೆದ ಚಿತ್ರಪಟದಿಂದ ಅದರ ಬಗ್ಗೆ ಪೂರ್ಣ ಕಲ್ಪನೆ ಬಂದಿತು. ನಿಮ್ಮ ಕಾರಖಾನೆಗೆ ಔಂಧ ಸರಕಾರವು ಆಶ್ರಯವಿತ್ತುದು ಬಹಳ ಯೋಗ್ಯ. ನಮ್ಮ ಸಂಸ್ಥಾನವು ಕೂಡ ಉದ್ಯೋಗಗಳಿಗೆ ಯೋಗ್ಯ ಉತ್ತೇಜನ ಕೊಡುವ ಧೋರಣವನ್ನೇ ತಳೆದಿದೆ. ಇದರ ಬಗ್ಗೆ ನಿಮಗೆ ಹೆಚ್ಚಿಗೆ ವಿವರಿಸಬೇಕಾದ ಕಾರಣವಿಲ್ಲ. ನೀವು ನಿಮ್ಮ ಒಂದೊಂದು ಕಾರಖಾನೆಯನ್ನು ಮೈಸೂರಿನಲ್ಲಿ ತೆರೆದರೆ, ನಿಮಗೆ ಸಂಸ್ಥಾನದಿಂದ ಶಕ್ಯವಿದ್ದಷ್ಟು ಸಹಾಯವು ಮಾಡಲ್ಪಡುವದು. ಈ ಸೂಚ

ನೆಯ ಬಗ್ಗೆ ವಿಚಾರ ಮಾಡಿರಿ. ಮತ್ತು ನಿಮ್ಮ ಕಂಪನಿಗಳ ನಿರ್ಣಯವನ್ನು ಆದಷ್ಟು ಬೇಗನೆ ನಮಗೆ ತಿಳಿಸಿರಿ" ಎಂದರು.

ಮಿರ್ಝಾರವರ ಈ ಸಹಾಯದ ಉಪಯೋಗವನ್ನು ಓಗಲೆಯುವರು ಸ್ವೀಕರಿಸಿ ಬೇಗನೆ "ದಿ ಮೈಸೂರ ಗ್ಲಾಸ ಆ್ಯಂಡ ಎನೆಮಲಿಂಗ ವರ್ಕ್ಸ ಲಿಮಿಟೆಡ್" ಎಂಬ ಕಾರಖಾನೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಕಿರ್ಲೋಸ್ಕರರಿಗೆ ಮಾತ್ರ ಇಷ್ಟು ಬೇಗನೆ ಪ್ರಾರಂಭಿಸುವದಾಗಲಿಲ್ಲ. "ಮೈಸೂರ ಕಿರ್ಲೋಸ್ಕರ ಲಿಮಿಟೆಡ್" ಎಂಬ ಮಶಿನ್ ಟೂಲ್ಸ ಕಾರಖಾನೆಯನ್ನು ತೆರೆಯಲು ೧೯೪೧ ರ ವರೆಗೆ ಕಾಯಬೇಕಾಯಿತು. ಈ ಸಮಯದಲ್ಲಿಯೂ ಕೂಡ ಮಿರ್ಝಾ ಇಸ್ಮಾಯಿಲ್‌ರು ಎಲ್ಲ ಬಗೆಯ ನೆರವನ್ನಿತ್ತರು.

ಕಾರಖಾನೆಯನ್ನು ಲಿಮಿಟೆಡ್ ಕಂಪನಿಯಲ್ಲಿ ರೂಪಾಂತರಿಸಿದ ನಂತರ ಲಕ್ಷ್ಮಣರಾಯರು ಔದ್ಯೋಗಿಕ ಕ್ಷೇತ್ರದಲ್ಲಿ ತಮ್ಮ ಕುದುರೆಯನ್ನು ಮುಂದೆ ಹಾಕಲು ಎಷ್ಟು ಪ್ರಯತ್ನಿಸಿದರೆಂಬುದರ ಚಿತ್ರವು ಇದರಿಂದ ತಮಗೆ ಸ್ವಲ್ಪ ವಾದರೂ ಬರಬಹುದು.

೧೨

# ಕಬ್ಬಿಣ ಹಾಗೂ ವಿದ್ಯುತ್ತಿನ ಶೋಧ

ಯುದ್ಧದ ಸಮಯದಲ್ಲಿ ಬೀಡು ಹಾಗು ಕಬ್ಬಿಣಗಳು ದುರ್ಮಿಳವಾಗಿ ಕಾರಖಾನೆಯ ನಾಡಿಗಳೇ ನಿಂತಾಗ ರಾಯರು ಎಷ್ಟು ಪರಿಶ್ರಮ ಪಟ್ಟರೆಂಬ ಕಥೆ ಹಿಂದೆ ಬಂದಿದೆ. ಇವರಿಂದ ರಾಯರ ದೃಷ್ಟಿಯು ಕಬ್ಬಿಣದ ಪೂರೈಕೆಯ ಕಡೆಗೆ ಹೊರಳಿತು. ಹೊರಗಿನಿಂದ ಕಬ್ಬಿಣವು ದೊರೆಯದಿದ್ದರೆ ಏನು ಮಾಡಬೇಕು ? ಪರತಂತ್ರರಾಗಿ ಕೈ ಮುಚ್ಚಿಕೊಂಡು ಕೂಡಬೇಕೇ ? ನಾವೇ ಕಬ್ಬಿಣವನ್ನು ಏಕೆ ಹುಟ್ಟಿಸಬಾರದು ? ಎಂದು ರಾಯರು ವಿಚಾರ ಮಾಡಹತ್ತಿದರು.

ಕಬ್ಬಿಣವನ್ನು ಹುಟ್ಟಿಸುವದು ಹುಡಗಾಟಿಕೆಯಲ್ಲ. ಅದೊಂದು ಸ್ವತಂತ್ರ ದೊಡ್ಡ ಉದ್ಯೋಗ. ಟಾಟಾರಂಥ ಲಕ್ಷ್ಮೀಪುತ್ರರಿಗೇ ಸಾಧ್ಯ. ನಾವು ಇದಕ್ಕೆ ಕೈ ಹಾಕಬಹುದೇ ! ಎಂಬ ವಿಚಾರ ತರಂಗಗಳು ರಾಯರ ತಲೆಯಲ್ಲಿ ಸುಳಿದವು. ಈ ತೊಂದರೆಗಳ ಅರಿವು ಅವರಿಗಿದ್ದಿತು. ಆದರೆ ತೊಂದರೆಗಳಿಗೆ ಶರಣು ಹೋಗದೇ ಅವುಗಳನ್ನು ಎದುರಿಸಲು ಶಕ್ತಿ ಮೀರಿ ಯತ್ನಿಸಬೇಕೆಂಬುದೇ ರಾಯರ ತತ್ವ. 'ನಾವು ಸಾಯುವದೇ ಇದ್ದರೆ ಕೈಕಾಲು ಅಲ್ಲಾಡಿಸಿ ಸಾಯೋಣ' ಎನ್ನುತ್ತಿದ್ದರು. ಅವರ ಈ ನಿರ್ಧಾರವು ಎಲ್ಲರಿಗೂ ಹುರುಪು ಕೊಡುತ್ತಿತ್ತು.

ತಮ್ಮ ಸಹಕಾರಿಗಳನ್ನು ಕುರಿತು "ನಮಗೆ ಬೇಕಾಗುವ ಕಬ್ಬಿಣವನ್ನು ನಮ್ಮ ಭಟ್ಟಿಯಲ್ಲಿಯೇ ನಿರ್ಮಿಸುವದು ಕಷ್ಟವೆಂಬುದನ್ನು ನಾನು ಬಲ್ಲೆ ! ಆದರೆ ನಾವು ಪ್ರಯತ್ನಿಸಿ ನೋಡೋಣ. ಯುದ್ಧಕಾಲದಲ್ಲಿ ಕಬ್ಬಿಣದ ಬರ ಬಿದ್ದಾಗ ನಾವು ಪ್ರಯತ್ನಪಟ್ಟು ನಮ್ಮ ತಾತ್ಪೂರ್ತಿಕ ಹಸಿವೆ ಆರಿಸಿಕೊಳ್ಳಲಿಲ್ಲವೇ . ಈ ಉದ್ಯೋಗ ವಿರಾಟ ಸ್ವರೂಪದ್ದಿದೆ ಎಂಬುದನ್ನು ನಾನು ಬಲ್ಲೆ, ಆದರೆ ನಮ್ಮ ಕಂಬಾರರು ಚಿಕ್ಕ ಭಟ್ಟಿಗಳನ್ನು ಹಾಕಿ ಸಣ್ಣ ಪ್ರಮಾಣದಲ್ಲಿ ಕಬ್ಬಿಣವನ್ನು ಮಾಡುವದಿಲ್ಲವೇ ? ಅಂದಮೇಲೆ ನಾವು ಸುಧಾರಿಸಿದ ಭಟ್ಟಿಯಿಂದ ನಮಗೆ ಅವಶ್ಯವಿರುವಷ್ಟನ್ನು ನಾವು ಸಿದ್ಧಪಡಿಸಿಕೊಳ್ಳಲಾರೆವೇ ? ನಮ್ಮ ಪ್ರಯತ್ನ ವಿಫಲವಾದರೂ ನಷ್ಟವೇನು ? ಅದರ ಅನುಭವವಾದರೂ



ಕಿರ್ಲೋಸ್ಕರವಾಡಿಗೆ ಗವ್ಹರ್ನರ, ಸರ ಜಾರ್ಜ ಲಾಯಿಡರ ಭೆಟ್ಟಿ ೧೯೨೦




ಕಿರ್ಲೋಸ್ಕರವಾಡಿಗೆ ಗವ್ಹರ್ನರ, ಸರ ಲೆಸ್ಲಿವಿಲ್ಸನ್ನರ ಭೆಟ್ಟಿ ೧೯೨೮



ಬೋರ್ಡಿನ ಡಾಯರೆಕ್ಟರರು ಮತ್ತು ಮ್ಯಾನೇಜಿಂಗ ಎಜಂಟರು



ಬಟುಅಕ್ಕಾ, ದುರ್ಗಾಬಾಯಿ, ರಾಮುಅಣ್ಣಾ, ಡಾ. ವಾಸುದೇವರಾವ,
ಲಕ್ಷ್ಮಣರಾವ


१
२
३
४
५
६
७
८
९
१०
११

## ಹಿಂಬದಿಯಲ್ಲಿಪ್ಪ ಚಿತ್ರದ ವಿವರ :

**ಶ್ರೀ. ಲಕ್ಷ್ಮಣರಾಯರೊಡನೆ:—**

೧. ಶ್ರೀ. ನಾನಾಸಾಹೇಬ ನಿಂಬಾಳಕರ. ಮತ್ತು
,, ರಾಜಾಸಾಹೇಬ ಪಲ್ಟನ್, ೧೯೩೩.

೨. ,, ಸಾನೇ ಗುರೂಜಿ, ೧೯೪೫.

೩. ,, ಲೊ. ಅಣೆ, ೧೯೩೦.

೪. ,, ದಾದಾಸಾಹೇಬ ಫಾಳಕೆ, ೧೯೧೬.

೫. ,, ದಾಮಲೆ, ಡಾ. ಮುಂಜೆ, ಭಿಡೆ, ೧೯೩೨.

೬. ,, ಭಾಸ್ಕರರಾವ ಜಾಧವ, ೧೯೩೦.

೭. ,, ಬಾಬಾಸಾಹೇಬ ಘೋರಪಡೆ, ೧೯೨೨.

೮. ,, ಶೇಟಿ ಫಾಲಚಂದ ಹಿರಾಚಂದ, ೧೯೪೦.

೯. ,, ಚೌಂಡೆ ಮಹಾರಾಜ, ೧೯೨೬.

೧೦. ,, ಬಾಬಾಸಾಹೇಬ ದೇವಧರ, ಶ್ರೀ. ವೈಕುಂಠಲಾಲ ಮೆಹಥಾ,
ರಮಣೀಕಲಾಲ ಮೆಹಥಾ ಮತ್ತು ರಾಜಾಜ್ಞೆ, ೧೯೩೩.

೧೧. ,, ನರಿಮನ್, ೧೯೩೭.

ನಮಗೆ ದೊರೆಯುವದಲ್ಲ?" ಎಂದರು. ಅವರು ತಮ್ಮ ಕಲ್ಪನೆಯಂತೆಯೇ ಕಾರ್ಯ ಪ್ರವೃತ್ತರಾದರು. ಸಾತಾರೆಯ ಪಾಟಣ ಭಾಗದಲ್ಲಿ ಕಬ್ಬಿಣದ ಅದರುಗಳಿವೆ ಎಂಬುದನ್ನು ಕೇಳಿ ಇಬ್ಬರು ಸಂಗಡಿಗರೊಡನೆ ಅಲ್ಲಿಗೆ ಹೊರ ಟರು. ಅದು ಸಹ್ಯಾದ್ರಿಯ ಭಾಗ. ದಟ್ಟಡವಿ, ಅಲ್ಲಿಯ ಗಿರಿಕಂದರಗಳಲ್ಲಿ ಅಲೆದಾಡಿದರು. ಒಮ್ಮೆ ಅಜಗರದ ಕೈಯಲ್ಲಿ ಸಿಕ್ಕು ಪಾರಾದರು. ಅಲ್ಲಿ ಸಂಗ್ರಹಿಸಿದ ಕಲ್ಲುಗಳನ್ನೆಲ್ಲ ಪುಣೆಯ ವೈಜ್ಞಾನಿಕ ಪ್ರಯೋಗ ಶಾಲೆಗೆ ಕಳಿಸಿ ಅವುಗಳಲ್ಲಿ ಕಬ್ಬಿಣದ ಅಂಶವು ಎಷ್ಟಿದೆ ಎಂಬುದನ್ನು ಪರೀಕ್ಷಿಸಹತ್ತಿದರು.

ಮುಂದೆ ಅವರು ಕೊಲ್ಹಾಪುರದ ಕಡೆಗೆ ತಿರುಗಿದರು. ಪನ್ಹಾಳ, ಅಜರೆ, ಸಾವಂತವಾಡಿ, ರೇಡಿ, ಮೊದಲಾದ ಸ್ಥಳಗಳಲ್ಲಿಯ ಕಲ್ಲುಗಳನ್ನು ಸಂಗ್ರ ಹಿಸುವಷ್ಟರಲ್ಲಿ ಹಳೇ ಬಗೆಯಿಂದ ಕಬ್ಬಿಣ ತೆಗೆಯುವ ಉದ್ಯೋಗವನ್ನು ರಾನು ಘಾಟದಲ್ಲಿ ಧಾವಡೀ ಜನರು ಈಗಲೂ ಮಾಡುತ್ತಾರೆಂದು ತಿಳಿದು ಬಂದಿತು. ಆಗ ಅವರು ಅಲ್ಲಿಗೆ ಹೋಗಿ ಅದರ ತಂತ್ರದ ಪೂರ್ಣ ಜ್ಞಾನವನ್ನು ಮಾಡಿ ಕೊಂಡರು.

ಗೋವಾ ಪ್ರಾಂತದಲ್ಲಿ ಹೆಚ್ಚು ಕಬ್ಬಿಣವಿದ್ದ ಕಲ್ಲುಗಳು ಸಿಗುತ್ತವೆಂದು ಸುದ್ದಿ ಬಂದಿತು. ರಾಯರ ಸ್ವಾರಿ ಅತ್ತ ಕಡೆಗೆ ತಿರುಗಿತು. ಈ ಪ್ರವಾಸದಲ್ಲಿ ಮಲೇರಿಯಾ ಜಂತುಗಳ ಕಾಟ, ಊಟದ ಅವ್ಯವಸ್ಥೆ ಮೊದಲಾದವುಗಳನ್ನು ರಾಯರು ಸಹಿಸಬೇಕಾಯಿತು. ಗೋವೆಯಲ್ಲಿಯ "ಪಾಂಡವ ಸಡಾ" ಎಂಬ ಬೆಟ್ಟದಲ್ಲಿ ಉತ್ತಮವಾದ ಕಬ್ಬಿಣದ ಅದುರುಗಳು ದೊರೆತವು. ಆಗ ಅವರು ಗೋವೆಯ ಸರಕಾರದಿಂದ ಹತ್ತು ವರ್ಷಗಳ ವರೆಗೆ ಕಲ್ಲುಗಳನ್ನು ತೆಗೆದು ಕೊಂಡು ಹೋಗಲು ಅಪ್ಪಣೆ ಪಡೆದರು.

ಕಿರ್ಲೋಸ್ಕರವಾಡಿಗೆ ಕಲ್ಲುಗಳ ವಾಗೀನುಗಳು ಬರಹತ್ತಿದವು. ರಾಯರ ಪ್ರಯೋಗವು ತೀವ್ರಗತಿಯಿಂದ ಪ್ರಾರಂಭವಾಯಿತು. ಮೊದಲಿನ ಬೀಡಿನ ಭಟ್ಟಿ ಗಳಲ್ಲಿಯೇ ಕಲ್ಲುಗಳನ್ನು ಕರಗಿಸುವ ಪ್ರಯತ್ನ ನಡೆಯಿತು. ಆದರೆ ಕರಗಿಸಿದ ರಸ ಹೊರ ಬರುವ ಮುಂದೆ ಕಿಟ್ಟದಿಂದ ಕೂಡಿ ಬರಹತ್ತಿತು. ಈ ಕಬ್ಬಿಣವು ಲೋಹಚುಂಬಕದಿಂದ ಎಳೆಯಲ್ಪಟ್ಟರೂ ಕೆಲಸಕ್ಕೆ ನಿರುಪಯೋಗಿ ಎಂದು ಗೊತ್ತಾಯಿತು.

ಕಬ್ಬಿಣ ನಿರ್ಮಿಸುವ ಪ್ರಯೋಗವು ಯಶಸ್ವಿಯಾಗಲು ರಾಯರು ವಿಶ್ವ ಪ್ರಯತ್ನ ನಡೆಸಿದರು. ಆದರೆ ಅದು ಸಾಧಿಸಲಿಲ್ಲ. ಕೊನೆಗೆ ಈ ಕೆಲಸ

ಕ್ಕಾಗಿಯೇ ಒಂದು ದೊಡ್ಡ ಭಟ್ಟಿಯನ್ನು ಕಟ್ಟುವ ಸಿದ್ಧತೆಯಲ್ಲಿದ್ದರು. ಅಷ್ಟ ರಲ್ಲಿ ಟಾಟಾರವರ ಜಮಶೆಡ್‌ಪುರದ ಕಾರಖಾನೆಯನ್ನು ಕಟ್ಟಿ ನಿಲ್ಲಿಸಿದ, ಪ್ರಸಿದ್ಧ ಅಮೇರಿಕನ್ ಕಾರಖಾನೆದಾರರಾದ ಮಿ॥ ಫೇರಿನ್ನರು ಕಿರ್ಲೋಸ್ಕರವಾಡಿ ಯನ್ನು ನೋಡಲು ಬಂದರು. ಅವರು ಮೈಸೂರಿನಲ್ಲಿಯ ಭದ್ರಾವತಿಯ ಕಬ್ಬಿಣದ ಕಾರಖಾನೆಯನ್ನು ಕಟ್ಟಿ ಕಾರ್ಯ ಪ್ರಾರಂಭಿಸಿದ್ದರು. ಈ ಕಬ್ಬಿಣವು ಕಟ್ಟಿಗೆಯ ಇದ್ದಲಿಯಿಂದಲೇ ಸಿದ್ಧವಾಗುತ್ತಿತ್ತು. ನಿಜವಾಗಿಯೂ ಈ ಕಬ್ಬಿ ಣವು ಶ್ರೇಷ್ಠತರಗತಿಯದಿತ್ತು. ಆದರೆ ವ್ಯಾಪಾರಸ್ಥರು ಅದರ ಬಗ್ಗೆ ಕಲುಷಿತ ವಾತಾವರಣವನ್ನು ಬುದ್ಧಿಪೂರ್ವಕವಾಗಿ ಉಂಟು ಮಾಡಿದ್ದರು. ಅದರಿಂದ ಅದು ಪೇಟೆಯ ಮೋರೆಯನ್ನು ಕಾಣದೆ ಕುಳಿತಿತ್ತು. ಫೇರಿನ್ ಸಾಹೇಬರ ಪ್ರವಾಸವು ಇದಕ್ಕಾಗಿಯೇ ಇದ್ದಿತು.

"ಗುಣೀ ಗುಣಂ ವೇತ್ತಿ" ಎಂಬ ನ್ಯಾಯದಿಂದ ಲಕ್ಷ್ಮಣರಾಯರ ಯಾಂತ್ರಿಕ ಹಾಗೂ ಔದ್ಯೋಗಿಕ ಕಾರ್ಯಗಳನ್ನು ನೋಡಿ, ಫೇರಿನ್ ಸಾಹೇಬ ರಿಗೆ ಅತ್ಯಾನಂದವಾಯಿತು. ಈ ಸಂದರ್ಶನದ ಸಮಯದಲ್ಲಿ ಅವರು ಭದ್ರಾವತಿಯ ಪಿಗ್ ಅಯರ್ನದ ಬಗೆಗೆ ಆವಶ್ಯವಿದ್ದ ಮಾಹಿತಿಯನ್ನು ಕೊಟ್ಟರಲ್ಲದೆ, ಭದ್ರಾ- ವತಿಯನ್ನು ಸಂದರ್ಶಿಸಲು ಆಗ್ರಹದ ಅಮಂತ್ರಣವನ್ನಿತ್ತರು. ಲಕ್ಷ್ಮಣ ರಾಯರು ತಮ್ಮ ಇಬ್ಬರು ಸಹಕಾರಿಗಳೊಡನೆ ಭದ್ರಾವತಿಯನ್ನು ಸಂದರ್ಶಿಸಿ ಕಾರಖಾನೆಯನ್ನೆಲ್ಲ ನೋಡಿದರು. ಬ್ಲಾಸ್ಟ ಫರ್ನೇಸದ ಶೆಡ್ಡು ಹಾಗೂ ಆಡ ಳಿತೆಗಾರರ ಮತ್ತು ಕೂಲಿಕಾರರ ಸಲುವಾಗಿ ಕಟ್ಟಿದ ಕೆಲವು ಮನೆಗಳನ್ನು ಬಿಟ್ಟರೆ ಅಲ್ಲಿ ದಟ್ಟಡವಿಯೇ ಹಬ್ಬಿತ್ತು. ಕಾರಖಾನೆಯ ಆವಾರದಲ್ಲೆಲ್ಲ ಪಿಗ್ ಅಯರ್ನದ ಗುಂಪುಗಳಿದ್ದವು. ಈ ಮಾಲು ಖರ್ಚಾಗುವದಿಲ್ಲವೆಂದ ಮೇಲೆ ಅದನ್ನು ನಿಲ್ಲಿಸಿಯೇ ಬಿಡಬೇಕೆಂದು ಕೆಲ ವಿಘ್ನ ಸಂತೋಷಿಗಳು ಗುಲ್ಲೆಬ್ಬಿಸಿದ್ದ ರೆಂದು ರಾಯರಿಗೆ ತಿಳಿದುಬಂದಿತು.

ಇದನ್ನು ಕೇಳಿ ಲಕ್ಷ್ಮಣರಾಯರಿಗೆ ಬಹಳ ಕೆಡುಕೆನಿಸಿತು. ತಮ್ಮ ಉದ್ಯೋಗದ ರಾಷ್ಟ್ರೀಯ ಮಹತ್ವವನ್ನರಿತ ರಾಯರು, ಈ ಭದ್ರಾವತಿಯ ಬೀಡನ್ನೇ ಉಪಯೋಗಿಸುವ ನಿಶ್ಚಯವನ್ನು ಮಾಡಿ, ನೂರಾರು ಟನ್ನುಗಳಿಗೆ ಆರ್ಡರಕೊಟ್ಟರು. ಇಷ್ಟು ದೊಡ್ಡ ಬೇಡಿಕೆಯು ಬಂದುದು ಇದೇ ಮೊದಲು. ಈ ಬೀಡಿನಿಂದ ಉತ್ತಮವಾದ ರಂಟೆ ಹಾಗೂ ಗಾಣಗಳು ಆಗುತ್ತವೆಂದು ಸಿದ್ಧವಾದ ಬಳಿಕ ಬೇರೆ ಕಡೆಯಿಂದಲೂ ಬೇಡಿಕೆಗಳು ಬರಹತ್ತಿದವು. ರಾಯರ

ಈ ಉತ್ತೇಜನವು ಕಾರಖಾನೆಗೆ ಹೊಸ ಜೀವ ಕೊಟ್ಟಿತು. ಮುಂದೆಯೂ ಕೂಡ ಭದ್ರಾವತಿಯು ಸಾವಿರಾರು ಟನ್ನು ಬೀಡನ್ನು ಕೊಂಡು, ಆ ಕಾರಖಾನೆಯು ಮುಂದೆ ಬರುವಂತೆ ರಾಯರು ಬಹಳ ಸಹಾಯ ಮಾಡಿದರು.

ಭದ್ರಾವತಿ ಕಾರಖಾನೆಯ ಜನರಲ್ ಮ್ಯಾನೇಜರರಾದ ಶ್ರೀ ವೆಂಕಟನಾರಾಯಣಪ್ಪನವರು ಬಹು ಬುದ್ಧಿವಂತರೂ ಅನುಭವಿಗಳೂ ಕರ್ತವ್ಯದಕ್ಷರೂ ಇದ್ದರು. ಲಕ್ಷ್ಮಣರಾಯರಿಂದ ದೊರೆತ ಈ ನೆರವನ್ನು ಅವರು ಎಂದೂ ಮರೆಯಲಿಲ್ಲ. ಅವರು ಕಿರ್ಲೋಸ್ಕರ ಕಾರಖಾನೆಯ ಹಿತಚಿಂತಕರೂ ಸ್ನೇಹಿತರೂ ಆದರು. ಮುಂದೆ ಹರಿಹರದಲ್ಲಿ ಮಶಿನ್ ಟೂಲ್ಸಿನ ಹೊಸ ಕಾರಖಾನೆಯನ್ನು ತೆರೆಯಬೇಕೆಂಬ ವಿಚಾರಬಂದಾಗ ಶ್ರೀ ವೆಂಕಟನಾರಾಯಣಪ್ಪನವರು ರಾಯರಿಗೆ ಪೂರ್ಣ ನೆರವಾಗಿ ಹಿಂದಿನ ಋಣ ತೀರಿಸಿದರು. ಆದರೆ ಕಾರಖಾನೆಯ ಪ್ರಾರಂಭೋತ್ಸವಕ್ಕೆ ಅವರು ಬದುಕಿರಲಿಲ್ಲ.

ಹೀಗೆ ಕಬ್ಬಿಣದ ಪ್ರಶ್ನೆಯು ಬಿಟ್ಟದ್ದರಿಂದ ಗೋವೆಯಿಂದ ತಂದ ಕಲ್ಲುಗಳ ಪುಡಿಮಾಡಿ ಅದರ ಅಯರ್ನ ಆಕ್ಸಾಯಿಡ ಮಾಡುವ ಬದಲು ಪಡಿಯಚ್ಚುಗಳನ್ನು ಮಾಡುವ ವಿಭಾಗದಲ್ಲಿ ಅದರ ಉಪಯೋಗವನ್ನು ಮಾಡಿಕೊಂಡರು.

ರಾಯರು ಕಬ್ಬಿಣದ ಶೋಧಾರ್ಥವಾಗಿ ಸಂಚರಿಸುವಾಗ, ಟಾಟಾರವರು ಕೋಯಿನಾ ನದಿಗೆ ಒಡ್ಡು ಹಾಕಿ ವಿದ್ಯುತ್ತು ನಿರ್ಮಿಸುವ ಯೋಜನೆಯಲ್ಲಿರುವರೆಂಬುದು, ಆ ನದಿಯ ದಂಡೆಯ ಮೇಲೆ ಕೆಲಸ ನಡೆಯಿಸಿದ್ದ ಇಂಜನೀಯರಿಂದ ತಿಳಿಯಿತು. ಮಹಾರಾಷ್ಟ್ರಕ್ಕಾಗಿ ವಿದ್ಯುತ್‌ಕೇಂದ್ರ ನಿರ್ಮಾಣವಾಗಲಿರುವದೆಂದು ಕೇಳಿ ಬಹಳ ಆನಂದವಾಯಿತು. ಈ ಯೋಜನೆ ಮುಗಿದನಂತರ ಅದು ತಮ್ಮ ಕಾರಖಾನೆಗೂ ವಿದ್ಯುತ್ತನ್ನು ಪೂರೈಸಬಹುದೆಂಬ ಸುಖಸ್ವಪ್ನಗಳನ್ನು ಅವರು ಕಾಣದೆ ಇರಲಿಲ್ಲ. ಮುಳಸಿ ಆಣೆಕಟ್ಟು ಮುಗಿದ ನಂತರ ಟಾಟಾರವರು ಇದಕ್ಕೆ ಕೈಹಾಕುವವರಿದ್ದರು. ಈ ಆಣೆಕಟ್ಟಿನಿಂದ ಕೆಲವು ಭೂಮಿಯು ಮುಳುಗುವದು ಸ್ವಾಭಾವಿಕವಿದ್ದಿತು. ಅದಕ್ಕಾಗಿ ಅಲ್ಲಿ ಸತ್ಯಾಗ್ರಹವು ಪ್ರಾರಂಭವಾಯಿತು. ರಾಷ್ಟ್ರ ಹಿತದ ದೃಷ್ಟಿಯಿಂದ ಇಂತಹ ಕಾರ್ಯಗಳು ಎಷ್ಟು ಅವಶ್ಯವೆಂಬ ಸಾದಾ ವಿಚಾರವೂ ಕೂಡ ಇಂತಹ ಸಮಯದಲ್ಲಿ ಉಳಿಯುವದಿಲ್ಲ. ಮುಳಸಿ ಆಣೆಕಟ್ಟು ಅನೇಕ ಅಡೆತಡೆಗಳಿಂದ ಹೇಗೋ ಮುಗಿಯಿತು. ಇದರ ಕಟು ಅನುಭವಗಳಮೂಲಕ ಟಾಟಾರವರು ಕೋಯಿನಾ ಯೋಜನೆಯ ಕೈಬಿಟ್ಟರು. ಅದರಿಂದ ದೇಶಕ್ಕೆ ಹಾನಿ ಆಯಿತು.

ಆವರೆ ಲಕ್ಷ್ಮಣರಾಯರು ಈ ಯೋಜನೆಯನ್ನು ಎಂದೂ ಮರೆಯಲಿಲ್ಲ. ಕಿರ್ಲೋಸ್ಕರವಾಡಿಗೆ ಗವ್ಹರ್ನರರಂಥ ಯಾವುದೇ ದೊಡ್ಡ ಅಧಿಕಾರಿಗಳು ಬಂದರೂ ಅವರ ಸ್ವಾಗತ ಭಾಷಣದ ಕೊನೆಗೆ "ಸರಕಾರವು ಈ ಯೋಜನೆಯನ್ನು ಕೂಡಲೇ ಕೈಕೊಳ್ಳಬೇಕು." ಎಂಬ ಪಲ್ಲವಿ ಇದ್ದದ್ದೇ. ಈಗ ರಾಷ್ಟ್ರದ ಪುನರ್ರಚನೆಯ ದೃಷ್ಟಿಯಿಂದ ಪಂಚವಾರ್ಷಿಕ ಯೋಜನೆಗಳು ರೂಪಿಸಲ್ಪಟ್ಟಿವೆ. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಕೋಯಿನಾದ ಹೆಸರು ಕೂಡ ಇರದ್ದನ್ನು ಕಂಡು, ರಾಯರಿಗೆ ಆಶ್ಚರ್ಯವಾಯಿತು. ಈ ಯೋಜನೆಯು ಅವಶ್ಯ ಆಗಬೇಕೆಂದು ಬಯಸುವ ಕಿರ್ಲೋಸ್ಕರವಾಡಿ ಹಾಗೂ ಓಗಲೆವಾಡಿಯ ಅನುಯಾಯಿಗಳೆಲ್ಲರೂ ಕೂಡಿ ದಕ್ಷಿಣ ಮಹಾರಾಷ್ಟ್ರ ಕಾರಖಾನೆದಾರರ ಬೆಂಬಲ ಪಡೆದು ಈ ಸಂಘದ ಆಶ್ರಯದಲ್ಲಿಯೇ ಚಳವಳಿಯನ್ನು ಹೂಡಿದರು. ಕೋಯಿನಾ ಪರಿಷತ್ತನ್ನು ಕೂಡಿಸಿದರು. ಮಹಾರಾಷ್ಟ್ರದ ಎಲ್ಲ ಪಕ್ಷಗಳ ಏಕವಾಕ್ಯತೆಯು ಈ ಪ್ರಶ್ನೆಯ ಬಗ್ಗೆ ಇದೆ ಎಂಬ ಕೂಗೂ ದಿಲ್ಲಿಗೆ ಮುಟ್ಟುವಂತೆ ಮಾಡಿದರು. ಈ ಸಂಘಟಿತ ಪ್ರಯತ್ನದಿಂದ ಸರಕಾರವು ಇತ್ತ ಲಕ್ಷ್ಯವೀಯಿತು. ಮುಂದೆ ಯೋಜನೆಯಲ್ಲಿ ಸೇರಿಸಿತು. ಕೋಯಿನಾ ಯೋಜನೆಯು ಅನೇಕ ಜನರ ಇಚ್ಛೆಯ ಫಲವಾಗಿದ್ದರೂ ಲಕ್ಷ್ಮಣರಾಯರಲ್ಲಿ ಅದರ ಬಗ್ಗೆ ಇದ್ದ ಕಳವಳ, ಉತ್ಕಟೇಚ್ಛೆಗಳಿಂದ ಅದರಲ್ಲಿ ಅವರೊಬ್ಬ ಪ್ರಮುಖರು ಎಂಬುದು ಮುಂದಿನ ವಿವರದಿಂದ ತಿಳಿಯುವದು.

ಲಕ್ಷ್ಮಣರಾಯರು ಪುಣೆಯ "ಅರ್ಥ"ದ ಸಂಪಾದಕರಿಗೆ ಬರೆದ ೧೭-೧೧-೪೦ ರ ಪತ್ರವು ಈ ಯೋಜನೆಯನ್ನು ಸಮರ್ಥಿಸುವದು. ಅದರ ಕೆಲ ಭಾಗವನ್ನು ಇಲ್ಲಿ ಕೊಡುತ್ತೇವೆ.

"ತಾವು ಅರ್ಥದಲ್ಲಿ ಬರೆದದ್ದನ್ನೂ ಮತ್ತು ಕಿರ್ಲೋಸ್ಕರದ ದೀಪಾವಳಿಯ ಅಂಕಿನಲ್ಲಿ ಬರೆದ "ಕೊಯಿನಾ ವ್ಯಾಲಿ ಹಾಯಿಡ್ರೊ ಇಲೆಕ್ಟ್ರಿಕ್ ಸ್ಕೀಮ" ಎಂಬುದರ ವರ್ಣನೆಯನ್ನೂ ನಾನು ಉತ್ಸುಕತೆಯಿಂದ ಓದಿದೆ. ಈ ಕಲ್ಪನೆ ಮಹಾರಾಷ್ಟ್ರದ ಕಾರಖಾನೆದಾರರಿಗೆಲ್ಲ ಉಪಯುಕ್ತವಿದೆ. ಇದು ಮಹಾರಾಷ್ಟ್ರದ ವೈಭವದ ದೂರದರ್ಶಿ ಕಲ್ಪನೆಯೆಂದು ನನ್ನ ಮನವರಿಕೆಯಾಗಿದೆ. ಯಾವ ಅರ್ಥದಿಂದ ಈ ಕಲ್ಪನೆಗೆ ಪ್ರೋತ್ಸಾಹನ ಕೊಟ್ಟು ತಾವು ಪುರಸ್ಕರಿಸಿರುವಿರೋ ಆ ಅರ್ಥದಲ್ಲಿ ಒಂದೆರಡು ಮಾಸಿಕ ಪುಸ್ತಕಗಳಲ್ಲಿ ಲೇಖಗಳನ್ನು ಬರೆಯುವ ಮಟ್ಟಿಗೆ ಮಾತ್ರ ಇದು ನಿಲ್ಲದೆ, ಮಹಾರಾಷ್ಟ್ರದ ಎಲ್ಲ ವೃತ್ತಪತ್ರಗಳಲ್ಲಿಯೂ ಈ

ಯೋಜನೆಯ ವರ್ಣನೆಯ ಲೇಖಗಳು ಪ್ರಕಟವಾಗುವಂತೆ ವ್ಯವಸ್ಥೆಯಾಗಬೇಕು. ಕಾರಖಾನೆದಾರರಿಂದ, ವ್ಯಾಪಾರಿಗಳಿಂದ, ಅದರಂತೆ ಈ ಯೋಜನೆಯ ಉಪಯೋಗವು ಹೆಚ್ಚಾಗಿ ಆಗುವ ರೈತರಿಂದ ಮತ್ತು ಕೋ-ಆಪರೇಟಿವ್ಹ ಸಂಸ್ಥೆಗಳಿಂದ ಈ ಕಲ್ಪನೆಗೆ ಸರಕಾರವು ಕೂಡಲೇ ಮೂರ್ತಸ್ವರೂಪ ಕೊಡಬೇಕು, ಎಂಬ ಕೂಗನ್ನು ಎಷ್ಟು ಎಬ್ಬಿಸುವಿರೋ ಅಷ್ಟು ಬೇಗ ಈ ಕಾರ್ಯವು ಸರಕಾರದಿಂದ ಆಗುವದೆಂದು ನಾನು ಭಾವಿಸುತ್ತೇನೆ. ಇದರಲ್ಲಿ ಕಾರಖಾನೆಗಳ ಸ್ವಾರ್ಥ ಪರಾರ್ಥಗಳೆರಡೂ ಇವೆ. ಈ ಎಲ್ಲ ಉಪಾಯಗಳನ್ನು ಯೋಜಿಸಿ ಕೊಯ್ನಾ ಯೋಜನೆಯು ಜನರ ಮುಂದೆ ಬರುವಂತೆ ತಾವು ಸ್ವತಃ ಪ್ರಯತ್ನಿಸಬೇಕೆಂದು ನನ್ನ ಆಗ್ರಹದ ಬಿನ್ನಹವಿದೆ. ಈ ಕಲ್ಪನೆ ಹಳೆಯದು ಹುಡುಗಾಟಿಕೆಯದು ಎಂಬ ಭಾವನೆ ಬರಕೂಡದು. ಆದ್ದರಿಂದ ತಾವು ಈ ವಿಷಯದಲ್ಲಿ ಯಾವ ರೀತಿಯಿಂದ ಮುಂದುವರೆಯುವಿರಿ ಎಂಬ ಬಗ್ಗೆ ಸ್ಪಷ್ಟಕಲ್ಪನೆಯನ್ನು ಕೊಟ್ಟರೆ ಉಪಕಾರವಾಗುವದು."

# ೧೩

# ಬೀಳು ಭೂಮಿಯಲ್ಲಿ ದ್ರಾಕ್ಷೆಯ ತೋಟ

ಕಿರ್ಲೋಸ್ಕರ ರಂಟೆಗಳ ಪ್ರಸಾರವನ್ನು ಹೆಚ್ಚಿಸುವದಕ್ಕಾಗಿ ಜಾಹೀರಾತು ಕೊಡುವ ಮತ್ತು ಏಜಂಟರನ್ನು ನಿಯಮಿಸುವ ಕಾರ್ಯವು ನಡೆದೇಯಿದ್ದಿತು. ಈ ಕಾರ್ಯವು ಇದಕ್ಕಿಂತ ಸಮರ್ಥ ರೀತಿಯಿಂದ ಸಾಗಬೇಕಾದರೆ ಸಂಚಾರಿ ಪ್ರಚಾರಕರ ಅವಶ್ಯಕತೆ ಇದೆ ಎಂದು ಅನಿಸಹತ್ತಿತು.

ರಂಟೆಯ ಪ್ರಚಾರಕ್ಕೆ ಯೋಗ್ಯ ಕ್ಷೇತ್ರವನ್ನು ಹುಡುಕುವದು, ಅಲ್ಲಿಯ ರೈತರಿಗೆ ಸುಧಾರಿಸಿದ ರಂಟೆಯ ಲಾಭವನ್ನು ತಿಳಿಸಿಕೊಡುವದು ಮತ್ತು ಅದನ್ನು ಪ್ರತ್ಯಕ್ಷ ಉಪಯೋಗಿಸಿ ತೋರಿಸುವದು, ಮಾರಲು ಅವುಗಳನ್ನು ಅಂಗಡಿಯಲ್ಲಿಡಲು ವ್ಯಾಪಾರಿಗಳ ಮನ ಒಲಿಸುವದು, ಇವೇ ಮೊದಲಾದ ಕಾರ್ಯಗಳನ್ನು ಈ ಸಂಚಾರೀ ಪ್ರಚಾರಕನಿಂದ ಮಾಡಿಸಬೇಕೆಂಬುದೇ ರಾಯರ ಧೋರಣ.

ರಾಯರ ಕಲ್ಪನೆಯಂತೆ, ಕಾರ್ಯ ಮಾಡುವ ಒಕ್ಕಲತನದ ಜ್ಞಾನವಿದ್ದ ಹಾಗು ರೈತರ ಕಲ್ಯಾಣ ಬಯಸುವ ಭಾವೂ ರಾಯಗೌಂಡಾ ಪಾಟೀಲ ಎಂಬ ವ್ಯಕ್ತಿಯು ರಾಯರ ಕಣ್ಣಿಗೆ ಬಿದ್ದಿತು. ಅವರು ಆನಂದಿತರಾಗಿ ಅವನನ್ನು ಕೆಲಸಕ್ಕೆ ತೆಗೆದುಕೊಂಡು ತಮ್ಮ ವಿಚಾರಗಳನ್ನೆಲ್ಲ ಅವರಿಗೆ ತಿಳಿಸಿ ಪ್ರಚಾರಕ್ಕೆ ಕಳಿಸಿದರು.

ಸುಪ್ರಸಿದ್ಧ ಸಮಾಜ ಸುಧಾರಕರೂ ದಲಿತೋದ್ಧಾರಕರೂ ಎಂದು ಪ್ರಸಿದ್ಧ ರಾದ ಭಾವೂಸಾಹೇಬರು ಇವರೇ ! ಅವರು ಕಿರ್ಲೋಸ್ಕರವಾಡಿಯಲ್ಲಿ ಕೆಲಸ ಹಿಡಿದೊಡನೆ ಕುಟುಂಬ ಸಹಿತವಾಗಿ ಬಂದು ವಾಡಿಯಲ್ಲಿಯೇ ನೆಲೆಸಿದರು. ಭಾವೂರಾಯರು ಪ್ರಚಾರಕ್ಕೆ ಹೊರಟರೆಂದರೆ ತೀರಿತು, ಪತ್ರಗಳ ಸುರಿಮಳೆ. ಗಿರಾಕಿಗಳನ್ನು ದೊರಕಿಸಿ ಒಮ್ಮೊಮ್ಮೆ ಅವರನ್ನು ಕಾರಖಾನೆಗೇ ಕರೆತಂದು ಕಾರಖಾನೆಯ ಪ್ರತ್ಯಕ್ಷ ಸಂಬಂಧ ತಂದು ಕೊಡುತ್ತಿದ್ದರು.

ಒಮ್ಮೆ ಅವರು ಬಾರಾಮತಿಯ ರಾಮಚಂದ ಅಮೀಚಂದ ಎಂಬ ವ್ಯಾಪಾರಿಯನ್ನು ಕರೆತಂದರು. ಅವನಿಗೆ ಕೆಲವು ರಂಟೆಗಳೂ ೩೦೦ ಕಬ್ಬಿ

ಣದ ಕಬ್ಬಿನ ಗಾಣಗಳೂ ಬೇಕಾಗಿದ್ದವು. ಬಾರಾಮತಿಯ ಭಾಗದಲ್ಲಿ ನೀರಾದ ಕಾಲುವೆಯು ಇದ್ದು, ಮುಖ್ಯ ಬೆಳೆಯೇ ಕಬ್ಬು ಇದ್ದುದರಿಂದ ಈ ಬೇಡಿಕೆಯು ಸ್ವಾಭಾವಿಕವಿದ್ದಿತು.

ಈ ಕಬ್ಬಿನ ಗಾಣಕ್ಕೂ ಒಂದು ಇತಿಹಾಸವಿದೆ. ಮೊದಲಿನ ಕಾಲದಲ್ಲಿ ಕಟ್ಟಿಗೆಯ ನೇಗಿಲುಗಳಂತೆ ಕಟ್ಟಿಗೆಯ ಗಾಣಗಳೇ ಇದ್ದವು. ೧೮೮೦ ರಲ್ಲಿ ಪುಣೆಯ ರಾಮಚಂದ್ರ ರಘುನಾಥ ಬಾರಿ ಎಂಬುವವರು ಬೀಡಿನ ಗಾಣವನ್ನು ಮಾಡಿದೊಡನೆಯೆ ಕಟ್ಟಿಗೆಯ ಗಾಣಗಳು ಹಿಂದೆ ಬಿದ್ದವು. ಈ ಗಾಣವು ಸುಧಾರಿಸಿದ್ದು ಇದ್ದರೂ ಇದರಲ್ಲಿ ಅನೇಕ ದೋಷಗಳಿದ್ದವು. ಇದರಲ್ಲಿ ಕಬ್ಬನ್ನು ಎರಡುಸಲ ಹಾಕಬೇಕಾಗುತ್ತಿತ್ತಲ್ಲದೆ ರಸದ ಪ್ರಮಾಣವೂ ಕಡಿಮೆ ಇದ್ದಿತು. ಚಿಪ್ಪಾಡಿಯಲ್ಲಿ ರಸ ಉಳಿಯುತ್ತಿತ್ತು.

ಬಾರಾಮತಿಯ ರಾಮಚಂದ ಅಮಿಚಂದರಿಗೆ ಬೇಕಾದುದು ಇಂತಹ ಗಾಣಗಳೇ. ಈ ಗಾಣದ ದೋಷಗಳನ್ನರಿತ ರಾಯರು ಈ ದೊಡ್ಡ ಬೇಡಿಕೆಯನ್ನು ನಿರಾಕರಿಸಿದರು. ಕೆಲಸಗಾರರಿಗೆ ಆಶ್ಚರ್ಯವಾಯಿತು. ಆಗ ರಾಯರು "ಸುಧಾರಿಸಿದ ರಂಟೆಗಳನ್ನು ಮಾಡಲು ಹೊರಟ ನೀವು ೫೦ ವರ್ಷದ ಹಿಂದಿನ ಅನೇಕ ದೋಷಗಳುಳ್ಳ ಗಾಣವನ್ನು ಹಣಕ್ಕಾಗಿ ಮಾಡುವದು ಯೋಗ್ಯವೇ? ಅದರಿಂದ ನಿಮ್ಮ ಹೆಸರು ಕೆಟ್ಟೀತು! ನೀವು ಗಾಣಗಳನ್ನು ಅವಶ್ಯ ಮಾಡಬಹುದು. ಆದರೆ ಅವು ಸುಧಾರಿಸಿದ ಹೊಸ ಸ್ವರೂಪವುಳ್ಳವಾಗಬೇಕು ಎಂಬುದನ್ನು ಲಕ್ಷ್ಯದಲ್ಲಿಡಿರಿ" ಎಂದರು.

"ಇಂತಹ ಸುಧಾರಿಸಿದ ಗಾಣಗಳನ್ನು ಮಾಡಲು ೩–೪ ವರ್ಷಗಳಾದರೂ ಬೇಕು. ಅಲ್ಲಿಯ ವರೆಗೆ ತಾನಾಗಿಯೇ ಮನೆಯ ವರೆಗೆ ನಡೆದು ಬಂದ ಇಂತಹ ದೊಡ್ಡ ಬೇಡಿಕೆಯನ್ನು ನಿರಾಕರಿಸಬೇಕೇ? ಲಕ್ಷ್ಮಣರಾಯರು ಒಪ್ಪಿದರಲ್ಲವೇ ಮುಂದಿನ ಮಾತು?"

ಆಗ ಕೆಲಸಗಾರರೊಬ್ಬರು "ಈ ಗಾಣಗಳನ್ನು ನಮ್ಮವೇ ಎಂದು ಪೇಟೆಯಲ್ಲಿ ಮಾರಿರಿ ಬೇಕಾದರೆ ಬಿಡಿರಿ. ಅವುಗಳ ಮೇಲೆ ನಮ್ಮ ಹೆಸರನ್ನು ಹಾಕದಿದ್ದರೆ ತೀರಿತು. ನಾವು ಯಾರಾದರೂ ತಂದ ವಸ್ತುಗಳನ್ನು ಅದರಂತೆಯೇ ಎರಕ ಹೊಯ್ದು ಕೊಡುವದಿಲ್ಲವೇ? ಹಾಗೆಯೇ ಇದೂ ಒಂದು ಕೆಲಸವೆಂದು ಏಕೆ ತಿಳಿಯಬಾರದು? ಅವರಿಗೆ ನಾವು ಇಲ್ಲವೆಂದು ಹೇಳಬಹುದು. ಆದರೆ ಇದರಿಂದ ಜನರ ತೊಂದರೆಯು ದೂರವಾಗುವ ಬಗೆ

ಹೇಗೆ? ಆದುದರಿಂದ ನಾವು ಸದ್ಯಕ್ಕೆ ಅವರ ಬೇಡಿಕೆಯನ್ನು ಪೂರ್ಣ-ಮಾಡೋಣ ಮತ್ತು ಸುಧಾರಿಸಿದ ಗಾಣವನ್ನು ಮಾಡಲು ಕೈ ಹಾಕೋಣ" ಎಂದು ಹಾವೇರಿ ನ್ಯಾಯುವನ್ನು ಹೇಳಿದರು. ಅದಕ್ಕೆ ಲಕ್ಷ್ಮಣರಾಯರು "ಒಳ್ಳೇದು ಹಾಗೇ ಆಗಲಿ. ಹೊಸ ಮಾದರಿಯು ಸಿದ್ಧವಾದೊಡನೆಯೆ ಹಳೆಯುದನ್ನು ನಿಲ್ಲಿಸಿಬಿಡಬೇಕು" ಎಂದರು.

ಅದರಂತೆ ಹೊಸ ಮಾದರಿಗೆ 'ಕಮಾಲ ಗಾಣ'ವೆಂದು ಹೆಸರಿಟ್ಟು ಅದರ ನಕ್ಷೆ, ಸಿದ್ಧಪಡಿಸಲಾಯಿತು. ಈ ಗಾಣದಲ್ಲಿ ಮೂರು ಲಾಟಗಳನ್ನು (ಕಂಬ) ಜೋಡಿಸಲಾಯಿತು. ಗಾಣದ ಬಾಯಿಗೆ ಕಬ್ಬು ಕೊಟ್ಟರೆ, ಈ ಮೂರೂ ಲಾಟಗಳಲ್ಲಿ ಹಿಂಡಿಯೇ ಅದು ಹೊರಗೆ ಬರುವಂತೆ ಯೋಜಿಸಲ್ಪಟ್ಟಿತ್ತು. ಕಟ್ಟಿಗೆಯ ಗಾಣದಲ್ಲಿ ನೂರಕ್ಕೆ ೫೦-೫೫ ರಂತೆ ಹಾಲು ಹೊರಟರೆ ಕಮಾಲ ದಲ್ಲಿ ನೂರಕ್ಕೆ ೭೦ ರಷ್ಟು ರಸ ಹೊರಡುವ ಯೋಜನೆಯಾಗಿತ್ತು.

ಯಾವುದೇ ಹೊಸ ಯಂತ್ರದ ಮೊದಲನೆಯ ಪ್ರಯೋಗವು ಪರಿಪೂರ್ಣವಾಗುವದೆಂತು? ಅದರಲ್ಲಿ ಮತ್ತೆ ಮತ್ತೆ ಸುಧಾರಣೆಗಳನ್ನು ಮಾಡಬೇಕಾಗುತ್ತದೆ. ಕಬ್ಬು ಒಚಕುವ ಲಾಟವು ಒಡೆಯಬಾರದೆಂದು ಅದರ ಗಾತ್ರವನ್ನು ಹೆಚ್ಚಿಸಿದರೆ ಅಚ್ಚು ಮುರಿಯುತ್ತದೆ. ಅದು ಮುರಿಯಬಾರದೆಂದು ಉಕ್ಕಿನ ಅಚ್ಚು ಹಾಕಿತು. ಇಷ್ಟು ಮಾಡಿದ ನಂತರ ಕೀಲು ಹಾಕಿದ ಕಂಬವು (ಲಾಟ) ಸೈಲು ಆಗುವ ಲಕ್ಷಣಗಳು ಕಂಡುಬಂದವು. ಆಗ ಕೀಲುಗಳನ್ನು ಕೂಡಿಸುವ ಬದಲು ಹೈಡ್ರಾಲಿಕ್ ಒತ್ತಡದಿಂದ ಅಚ್ಚು ಕಂಬದಲ್ಲಿ ಸೇರಿಸುವ ಯೋಜನೆಯನ್ನು ಮಾಡಲಾಯಿತು. ಹೀಗೆ ಎಷ್ಟಲ್ಲ ಮೂರುಸಲ ಪ್ರಯೋಗ ಮಾಡಿದ ಮೇಲೆ ಸರ್ವಾಂಗ ಸುಂದರವಾದ ಕಮಾಲ ಗಾಣವು ಹೊರಬರಲು ಸಿದ್ಧವಾಯಿತು.

ಗಾಣವು ಸಿದ್ಧವಾದೊಡನೆ ರಾಯರು ಪ್ರತ್ಯಕ್ಷ ಪ್ರಯೋಗಕ್ಕಾಗಿ, ಅದನ್ನು ತೆಗೆದುಕೊಂಡು ಬಾರಾಮತಿಗೆ ದಾದಾಸಾಹೇಬ ಸೇಂಜೆಯವರ ತೋಟಕ್ಕೆ ಹೋದರು. ಈ ಯಂತ್ರವನ್ನು ಒಯ್ದು ಕೂಡಿಸಿದೊಡನೆ ಸುತ್ತುಮುತ್ತಲಿನ ಒಕ್ಕಲಿಗರು ನೋಡಲು ಗುಂಪುಗೂಡಿದರು. ಈ ಹೊಸ ಗಾಣವು ಪ್ರಾರಂಭವಾಗುವ ಮೊದಲೇ ಅದರ ಬಗೆಗೆ ಅಸಮ್ಮತಿಯನ್ನು ಜನ ವ್ಯಕ್ತಪಡಿಸಿತು. ಲಕ್ಷ್ಮಣರಾಯರು ಯಾರ ಮಾತಿಗೂ ಕಿವಿಗೊಡಲಿಲ್ಲ. ಅವರಿಗೆ ಉತ್ತರ ಕೊಡುವ ಹೊಸ ಯುಕ್ತಿಯನ್ನು ಹುಡುಕಿದರು. ಸುತ್ತುಮುತ್ತಲು

ಕಿರ್ಲೋಸ್ಕರವಾಡಿಯ ದ್ರಾಕ್ಷಿಯ ತೋಟದಲ್ಲಿ



ಶ್ರೀ ಬಾಳಾಸಾಹೇಬ ಪಂತಪ್ರತಿನಿಧಿ ಹಾಗು ಲಕ್ಷ್ಮಣರಾಯರು



ಕಿರ್ಲೋಸ್ಕರವಾಡಿಯಲ್ಲಿಯ ಕೃತ್ರಿಮ ಗರ್ಭಧಾರಣದಿಂದ ಹುಟ್ಟಿದ ಕರ

ನಡೆಯುತ್ತಿದ್ದ ಗಾಣಗಳ ಹತ್ತರ ಬಿದ್ದಿದ್ದ ಕಬ್ಬಿನ ಚಿಪ್ಪಾಡಿಗಳನ್ನು ತಂದು, ಕಬ್ಬಿನ ಬದಲು ಚಿಪ್ಪಾಡಿಗಳನ್ನೇ ತಮ್ಮ ಯಂತ್ರದ ಬಾಯಿಗೆ ಕೊಟ್ಟರು. ಆಗ ಆ ಚಿಪ್ಪಾಡಿಗಳಿಂದಲೇ ರಸ ಹೊರ ಬರುವದನ್ನು ಕಂಡು ರೈತರು ಆಶ್ಚರ್ಯ ಚಕಿತರಾದರು. ಕುಚೇಷ್ಟೆಗಾರರ ಬಾಯಿ ಬಂದಾಗಿ ತದ್ವಿರುದ್ಧ ಹೊಸ ಗಾಣ ವನ್ನು ಬಾಯತುಂಬ ಹೊಗಳಹತ್ತಿದರು.

ಕಮಾಲಗಾಣವು ತನ್ನ ಉಪಯುಕ್ತತೆಯನ್ನು ಪ್ರಸ್ಥಾಪಿಸಿದ ಕೂಡಲೇ ಅದರ ಲೋಕಪ್ರಿಯತೆಯು ಎಲ್ಲ ಕಡೆಗೂ ಹಬ್ಬಿತು. ಈ ಗಾಣದಿಂದ ಬೆಲ್ಲದ ಹುಟ್ಟುವಳಿಯು ನೂರಕ್ಕೆ ಇಪ್ಪತ್ತೈದರಂತೆ ಹೆಚ್ಚಾಗುವದೆಂದು ಸಿದ್ಧವಾದ ಮೇಲೆ ಹಳೆಯ ಗಾಣಗಳನ್ನು ಕೇಳುವವರಾರು? ಅವು ಪುರಾಣ ವಸ್ತು ಸಂಶೋಧನಾಲಯಗಳಲ್ಲಿ ಸ್ಥಾನವನ್ನು ಪಡೆದವು.

ಕಮಾಲಗಾಣದ ಬೆನ್ನು ಮೇಲೆಯೇ ಅದರದೇ ತಮ್ಮನಂತಿರುವ ಎರಡೆ-ತ್ತಿನ "ಕರಾಮತ್" ಗಾಣವು ಹೊರಬಿದ್ದಿತು. ಅದು ಬೇಗ ಜನಪ್ರಿಯ ವಾಯಿತು. ಆದರೆ ಜಗತ್ತಿನಲ್ಲಿ ಸ್ಥಿರವಾವುದಿದೆ? ಹಳೆಯದೆಲ್ಲವೂ ಮಾಯ ವಾಗಿ ಹೊಸದು ಉದಯವಾಗುವದು ಪ್ರಕೃತಿಯ ಧರ್ಮ. ಅದರಂತೆಯೇ ಕಮಾಲ್, ಕರಾಮತ್ ಗಾಣಗಳು ಹಿಂದೆ ಬೀಳುವ ಲಕ್ಷಣಗಳು ಕಾಣ ಹತ್ತಿದವು. ಎತ್ತುಗಳ ಬದಲು ಇಂಜನಿನ ಶಕ್ತಿಯನ್ನು ಒಕ್ಕಲಿಗರು ಉಪ ಯೋಗಿಸುವ ಚಿನ್ಹವು ಕಂಡು ಬಂದಿತು. ಆಗ ಕರಾಮತ್ ಗಾಣಕ್ಕೆ ಬೇಕಾ-ದರೆ ಇಂಜನವನ್ನು ಜೋಡಿಸಲು ಬರುವಂತೆ ಒಂದು ಜೋಡಣೆ (ಅಟ್ಯಾಚ-ಮೆಂಟ) ಯನ್ನು ಕಾರಖಾನೆಯಲ್ಲಿ ಸಿದ್ಧಪಡಿಸಲಾಯಿತು. ಅದರ ಪ್ರಸಾರವೂ ಹೆಚ್ಚಾಗಿ ಆಗಹತ್ತಿತು. ಈಗ ಈ ಮಾದರಿಯೂ ಹಿಂದೆ ಬಿದ್ದಿದ್ದು ಕೇವಲ ಯಾಂತ್ರಿಕ ಶಕ್ತಿಯಿಂದಲೇ ನಡೆಯುವ ಗಾಣಗಳ ಕಡೆಗೆ ರೈತರ ಒಲವು ಕಂಡು ಬರುತ್ತಿದೆ. ಆದುದರಿಂದ ವಿದ್ಯುತ್ತಿನಿಂದ ನಡೆಯುವ ಗಾಣಗಳನ್ನು ನಿರ್ಮಿಸುವ ಕಾರ್ಯದಲ್ಲಿ ಕಾರಖಾನೆಯು ಹೆಚ್ಚು ಲಕ್ಷ್ಯಪೂರ್ವಕವಾಗುತ್ತಿದೆ.

ಬಾರಾಮತಿಯ ಸಂಚಾರದಲ್ಲಿ ಲಕ್ಷ್ಮಣರಾಯರ ಹಾಗೂ ದಾದಾ ಸಾಹೇಬ ಸೋಂಬೇಕರರ ಗೆಳೆತನವು ಬೆಳೆದುಬಂದಿತು. ಇಬ್ಬರೂ ಸ್ವಂತ ಪ್ರಯತ್ನದಿಂದ ಮೇಲಕ್ಕೇರಿದವರು, ಕರ್ತೃತ್ವವುಳ್ಳವರು. ಲಕ್ಷ್ಮಣರಾಯರು ಡ್ರಾಯಿಂಗ ಮಾಸ್ತರರೆಂದು ತಮ್ಮ ಜೀವನವನ್ನು ಪ್ರಾರಂಭಿಸಿದ್ದರೆ, ದಾದಾ ಸಾಹೇಬರು ಹತ್ತು ರೂಪಾಯಿಯ ಪಗಾರದ ಮೇಲೆ ಕಾಲುವೆಯ ಕಾರಕೂನ

ರೆಂದು ಜೀವನವನ್ನು ಸುರುವು ಮಾಡಿದವರು. ಒಬ್ಬರು ಒಕ್ಕಲುತನದ ಯಂತ್ರಗಳನ್ನು ಸಿದ್ಧಪಡಿಸುವದರಲ್ಲಿ ತಲ್ಲೀನರಾಗಿದ್ದರೆ, ಇನ್ನೊಬ್ಬರು ಒಕ್ಕಲು ತನದಲ್ಲಿ ಮಗ್ನರಾಗಿದ್ದರು. ಇಬ್ಬರೂ ಸರಳರು. ಆದರೆ ಇಬ್ಬರೂ ಎರಡನೆ ಯವರೊಡನೆ ಹೊಂದಿಕೊಂಡು ಹೋಗದವರು. ಒಂದು ಏಟು ಎರಡು ತುಂಡು, ಎಂಬುದೇ ಇಬ್ಬರ ಸ್ವಭಾವ. ಈ ಸಮಾನಶೀಲರು ಪ್ರಥಮ ದರ್ಶನ ದಲ್ಲಿಯೇ ಇಬ್ಬರೂ ಜೀವದ ಗೆಳೆಯರಾದರು.

ಕಮಾಲ್, ಕರಾಮತ್ ಗಾಣಗಳನ್ನು ನಿರ್ಮಿಸಿ, ರಾಯರು ಎಂತಹ ಉಪಕಾರ ಮಾಡಿದರೆಂಬುದನ್ನು ಕಬ್ಬಿನ ತೋಟಗಾರರೇ ತಿಳಿಯಬಲ್ಲರು. ಏಕೆಂದರೆ ಈ ಸುಮಾರಿಗೆ ಕಬ್ಬಿನ ಜಾತಿಯನ್ನು ಸುಧಾರಿಸುವ ಪ್ರಯೋಗವು ಯಶಸ್ವಿಯಾಗಿ, ಕೊಯಿಮುತ್ತೂರಿನ ಹೊಸ ಕಬ್ಬನ್ನು ಬಿತ್ತಲು ರೈತರೆಲ್ಲರೂ ಪ್ರಾರಂಭಿಸಿದ್ದರು. ಈ ಹೊಸ ಕಬ್ಬು ಗಂಡು ಬಿದಿರಿನಂತೆ ಬಹು ಬಿರುಸಾಗಿ ದ್ದಿತು. ಹಳೆಯ ಗಾಣಗಳು ಇದಕ್ಕೆ ಪೂರ್ಣ ನಿರುಪಯೋಗಿ. ಆದುದರಿಂದ ರಾಯರು ಕಮಾಲ್, ಕರಾಮತ್‌ಗಳಂತಹ ಸುಧಾರಿಸಿದ ಗಾಣಗಳನ್ನು ಸಿದ್ಧ-ಪಡಿಸದಿದ್ದರೆ, ಕಡಲೆಯಿದ್ದು ಹಲ್ಲುಗಳಿಲ್ಲದಂತಾಗುತ್ತಿತ್ತು.

ಒಂದು ದಿನ ಸೇಂಬೆಯವರು ತಮ್ಮ ದ್ರಾಕ್ಷೆಯ ತೋಟವನ್ನು ತೋರಿಸಲು ರಾಯರನ್ನು ಕರೆದುಕೊಂಡು ಹೋದರು. ದ್ರಾಕ್ಷೆಯ ಗೊಂಚಲುಗಳನ್ನು ನೋಡಿ ಲಕ್ಷ್ಮಣರಾಯರು ಹಿರಿಹಿರಿ ಹಿಗ್ಗಿದರು. ಅವರು ದ್ರಾಕ್ಷೆಯನ್ನು ಬೆಳೆ ಸುವ ಬಗ್ಗೆ ಕೆದರಿ ಕೆದರಿ ವಿಚಾರಿಸಲು ಪ್ರಾರಂಭಿಸಿದರು. ದಾದಾಸಾಹೇಬರು ಉತ್ತರ ಕೊಡಕೊಡುತ್ತ "ದ್ರಾಕ್ಷೆಯ ಬಗ್ಗೆ ಇಷ್ಟೆಲ್ಲ ವಿವರವು ನಿಮಗೆ ಏಕೆ ಬೇಕು ? ಕಿರ್ಲೋಸ್ಕರವಾಡಿಯಲ್ಲಿ ದ್ರಾಕ್ಷೆಯನ್ನು ಬೆಳೆಸುವ ಇಚ್ಛೆಯು ನಿಮ್ಮ ಮನಸ್ಸಿನಲ್ಲಿ ಬಂದಿದೆಯೇ ?" ಎಂದರು.

ಆಗ ಲಕ್ಷ್ಮಣರಾಯರು "ನಿಮ್ಮ ತೋಟವನ್ನು ನೋಡಿದ ನಂತರ ಆ ಬಗೆಯ ವಿಚಾರಗಳು ನನ್ನಲ್ಲಿ ಸುಳಿಯಹತ್ತಿದ್ದು ನಿಜ" ಎಂದರು.

"ನಿಮ್ಮ ವಾಡಿಯಲ್ಲಿಯ ಭೂಮಿ ಹಾಗೂ ಹವೆ, ನೀರುಗಳು ದ್ರಾಕ್ಷೆಯ ಬೆಳೆಗೆ ಅನುಕೂಲವಿವೆ, ಎಂದು ನನಗೆ ಅನಿಸುವದಿಲ್ಲ" ಎಂದರು.

"ಆದರೆ ನಾಶಿಕದಲ್ಲಿ ದ್ರಾಕ್ಷೆ ಬೆಳೆಯುವದೆಂದು ಮೊದಲು ಯಾರಿಗೆ ಗೊತ್ತಿದ್ದಿತು ? ಅದು ಬೆಳೆಯುವದೆಂದು ಹೇಳಿದ್ದರೆ ಯಾರಾದರೂ ನಂಬು ತ್ತಿದ್ದರೇ" ಎಂದರು ಲಕ್ಷ್ಮಣರಾಯರು ರಾಯರು ಬಾರಾಮತಿಯಂತೆ

ದ್ರಾಕ್ಷೆಯ ತೋಟವನ್ನು ಮಾಡುವ ಧೃಡ ನಿರ್ಧಾರದಿಂದ ಊರಿಗೆ ಹಿಂತಿರುಗಿದರು.

ಯಂತ್ರಗಳಲ್ಲಿಯೇ ಮಗ್ನರಾಗಿರುತ್ತಿದ್ದ ರಾಯರು, ಈ ಮುಂದೆ ಒಕ್ಕಲುತನದಲ್ಲಿಯೂ ಮನಸ್ಸು ಹಾಕಹತ್ತಿದರು. ಬಾರಾಮತಿಯಿಂದ ಬಂದೊಡನೆ ಕಾರಖಾನೆಯ ಹತ್ತರ ನಾಲ್ಕು ಎಕರೆ ಭೂಮಿಯನ್ನು ಕೊಂಡು ಕೊಂಡು, ಅದರಲ್ಲಿ ಒಂದು ಭಾವಿಯನ್ನು ತೋಡಿಸಿ ದ್ರಾಕ್ಷೆಯ ತೋಟವನ್ನು ಮಾಡುವ ಪ್ರಯತ್ನಕ್ಕೆ ಕೈಹಾಕಿದರು. ದ್ರಾಕ್ಷೆಯ ಬೆಳೆಯ ಬಗ್ಗೆ ಎಲ್ಲ ಜ್ಞಾನ ಸಂಪಾದಿಸಿದರು. ಕಾರ್ಯಕ್ಕೆ ಪ್ರಾರಂಭವಾಯಿತು. ದಿನಾಲು ಕಾರಖಾನೆಯು ಬಿಟ್ಟೊಡನೆ ರಾಯರು ತೋಟದಲ್ಲಿಯೇ !

ಲಕ್ಷ್ಮಣರಾಯರ ದ್ರಾಕ್ಷೆಯ ತೋಟವು ದೊಡ್ಡ ದೊಡ್ಡ ದ್ರಾಕ್ಷಿಯ ಗೊಂಚಲಗಳನ್ನು ಬಿಡಹತ್ತಿತು. ಆಗ ರಾಯರು ತೋಟವನ್ನು ನೋಡಲು ರಾಜಾಸಾಹೇಬರಿಗೆ ಅಮಂತ್ರಣವನ್ನು ಕೊಟ್ಟರು. ತೋಟದಲ್ಲಿ ತಿರುಗಾಡಿ ಬಂದನಂತರ ರಾಜಾಸಾಹೇಬರು ಅತ್ಯಂತ ಆಶ್ಚರ್ಯದಿಂದ " ಲಕ್ಷ್ಮಣರಾಯರೇ, ನೀವು ಇಲ್ಲಿಯವರೆಗೆ ಒಬ್ಬ ಕಾರಖಾನೆದಾರರಾಗಿದ್ದಿರಿ. ಆದರೆ ಈಗ ನೀವು ರೈತರೂ ಆದದ್ದು ನೋಡಿ ನನಗೆ ಬಹಳ ಆನಂದವಾಗಿದೆ. ನಿಮ್ಮ ಕೈಯಲ್ಲಿಯೇ ಯಶದ ರೇಖೆ ಇದ್ದಂತಿದೆ. ಕೈಹಾಕಿದಲ್ಲೆಲ್ಲ ನಿಮಗೆ ಕೀರ್ತಿಯಿದೆ. ಎಂದು ನಮ್ಮ ಮನಸ್ಸು ಸಾಕ್ಷಿ ನುಡಿಯುತ್ತಲಿದೆ. ಆದುದರಿಂದ ನಿಮ್ಮ ಒಕ್ಕಲುತನವು ಭರದಿಂದ ನಡೆಯಲಿ. ಜಗದಂಬೆಯು ನಿಮ್ಮ ಬೆನ್ನ ಹಿಂದೆ ಇರುವಳು " ಎಂದು ಉದ್ಗಾರ ತೆಗೆದರು.

ದಾದಾಸಾಹೇಬ ಸೇಂಬೆಕರರು ಬಂದು ದ್ರಾಕ್ಷೀ ತೋಟವನ್ನು ನೋಡಿ ಸಂತೋಷಬಟ್ಟರು. ಅವರ ಗೆಳೆತನವು ಇನ್ನೂ ಬೆಳೆಯಿತು. ಮುಂದೆ ಕಂಪನಿಯ ಡಾಯರೆಕ್ಟರರಾಗಿ ದಾದಾಸಾಹೇಬರು ಕಂಪನಿಯ ಆಧಾರಸ್ಥಂಭರಾದರು. ಕಿರ್ಲೋಸ್ಕರ ಮನೆತನದವರೆಂಬ ಸ್ಥಾನ ಪಡೆದರು. ಮನೆಯಲ್ಲಿ ಯಾವುದೇ ದೊಡ್ಡ ಸಮಾರಂಭವೇ ಆಗಲಿ, ದಾದಾಸಾಹೇಬರು ಬರಲಿಲ್ಲವೆಂದಾಗುತ್ತಿದ್ದಿಲ್ಲ. ಒಮ್ಮೆ ಇಂಥದೇ ಒಂದು ಸಮಾರಂಭಕ್ಕಾಗಿ ಹರಿಹರಕ್ಕೆ ಹೋದಾಗ ಹೃದಯವಿಕಾರದಿಂದ ರಾಜಾರಾಮ ಕಿರ್ಲೋಸ್ಕರರ ಮನೆಯಲ್ಲಿ (೩೧ನೇ ಅಗಸ್ಟ ೧೯೫೫) ದಾದಾಸಾಹೇಬರು ದಿವಂಗತರಾದರು. ಇದೆಂತಹ ಯೋಗಾಯೋಗವು.

ಈ ಪ್ರಕರಣದ ಮೊದಲಿಗೆ ಭಾವೂರಾವ ಪಾಟೀಲರ ಹಳ್ಳೀಖವಿದೆಯಷ್ಟೆ. ಅವರು ತಮ್ಮ ಕೆಲಸವನ್ನು ಮನಃಪೂರ್ವಕವಾಗಿ ಮಾಡುತ್ತಿದ್ದರು. ಆದರೆ ಅವರ ಮನದ ಒಲವು ಸಮಾಜಸೇವೆಯ ಕಡೆಗೆ. ಅದರಲ್ಲಿಯೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಕಡೆಗೆ ಇದ್ದಿತು. ಅದಕ್ಕಾಗಿ ತಮ್ಮ ಸರ್ವಸ್ವವನ್ನು ಅರ್ಪಿಸಲು ಸಿದ್ಧರಾಗಿ ತಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟರು. ಅದನ್ನು ಸ್ವೀಕರಿಸುವಾಗ ಲಕ್ಷ್ಮಣರಾಯರು ಭಾವೂರಾಯರಿಗೆ ಬರೆದ ಪತ್ರದ ಕೆಲವು ಸಾಲುಗಳನ್ನು ಇದರ ಅಡಿಯಲ್ಲಿ ಕೊಡುತ್ತೇವೆ. ಇದರಿಂದ ಭಾವೂರಾಯರ ಬಗ್ಗೆ ಲಕ್ಷ್ಮಣರಾಯರಲ್ಲಿ ಎಷ್ಟು ಆದರಾಭಿಮಾನಗಳು ಇದ್ದವೆಂಬುದು ವ್ಯಕ್ತವಾಗುತ್ತದೆ.

"Mr. Bhavurao Patil has rendered very important services in the development of our factory. He has worked very hard and conscientiously. Having a bent of mind towards the "Satya Shodhak Samaj" I allowed him full liberty to work in his line, so far as it did not come against the interest of the factory......... However, it appears, that the idea of Volunteering his services in developing the education of non-Brahmins has got an upper hand in his mind. It is a laudable object and only because he is leaving us to serve my country in a better way I, with deep regret, sanction his resignation from 1st November 1921."

| | |
|---|---|
| Kirloskarwadi | **L. K. Kirloskar** |
| 29th October, 1921 | Kirloskar Brothers, Ltd. |

ಹೋಗ ಹೋಗುತ್ತ ಭಾವೂರಾಯರು ಇನ್ನೊಂದು ಕೆಲಸವನ್ನು ಮಾಡಿದರು. ಸಾತಾರೆಯಲ್ಲಿಯ ಪಾರಸಿ ಶ್ರೀಮಂತ ಕಾಂಟ್ರ್ಯಾಕ್ಟರ ಖಾನಬಹಾದ್ದೂರ ಧನಜೀಶಾ ಕೂಪರ ಎಂಬುವವರ ಮನಸ್ಸಿನಲ್ಲಿ ಕಬ್ಬಿಣ ದಂಟೆಯ ಕಾರಖಾನೆಯನ್ನು ತೆಗೆಯಬೇಕೆಂದಿದೆ ಎಂಬುದನ್ನು ತಿಳಿಸಿದರು. ಅಲ್ಲಿಗೆ ಹೋಗಿ ಅವನಿಗೆ ಅವಶ್ಯವಿರುವ ಸಹಕಾರವನ್ನಿತ್ತು ಸಾತಾರಾ ರೋಡಿನ

ಹತ್ತ್ರ ಕಾರಖಾನೆಯನ್ನು ಸುರುವು ಮಾಡಿಸಿದರು. ಇದಕ್ಕೆ ಕಿರ್ಲೋಸ್ಕರ ವಾಡಿಯಲ್ಲಿಯ ತಂತ್ರಜ್ಞರನ್ನು ಉಪಯೋಗಿಸಿದರೆಂದು ಬೇರೆ ಹೇಳಬೇಕೇ.

ಶ್ರೀ ಭಾವೂರಾಯರು ಸಾವಿರಾರು ದಲಿತವರ್ಗದ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣದ ಬಾಗಿಲವನ್ನು ತೆರೆದು ಕೊಟ್ಟಿರಲ್ಲವೆ. ಕಿರ್ಲೋಸ್ಕರ ಕಾರಖಾನೆಯ ಒಂದು ಸಸಿಯನ್ನು ಸಾತಾರೆಗೆ ಒಯ್ದು, ಅಲ್ಲಿ ಅದನ್ನು ಊರಿದರೆಂದು ಹೇಳಿದರೆ ಭಾವೂರಾಯರ ಕಾರ್ಯದ ಮಹತ್ವವನ್ನು ವರ್ಣಿಸಿದಂತಾಗುವದು.

## ೧೪

# ಮಂದತೆಯೊಡನೆ (ಇಳಿಕೆ) ಹೋರಾಟ

ಲಕ್ಷ್ಮಣರಾಯರ ಕಾರ್ಯದ ವ್ಯಾಪ್ತಿಯು ಎಷ್ಟು ದೊಡ್ಡದೆಂಬುದು ಈವರೆಗಿನ ಅವರ ಚರಿತ್ರೆಯಿಂದ ತಿಳಿದಿರಲು ಸಾಕು. ಒಬ್ಬನು ಎಷ್ಟೇ ಉದ್ಯೋಗ ಶೀಲನಿದ್ದರೂ ಅನೇಕ ಪ್ರಚಂಡ ಕಾರ್ಯಗಳ ಭಾರಹೊತ್ತು ಅವನ್ನು ಯಶಸ್ವಿ ಗೊಳಿಸುವದು ಸಾಧ್ಯವೇ ? ಎಂಬ ವಿಚಾರ ಸಾಮಾನ್ಯವಾಗಿ ಸುಳಿಯದೇ ಹೋಗುವದಿಲ್ಲ. ಮುಂದುವರೆಯುವ ಮುಂಚೆ ಇದರ ಚರಿತ್ರದ ಸ್ಪಷ್ಟೀಕರಣವು ಅವಶ್ಯವೆನಿಸುತ್ತದೆ.

೩೦–೪೦ ವರ್ಷ ಅವರ ಹತ್ತಿರವಿದ್ದು, ಅವರ ಕಾರ್ಯಶಕ್ತಿಯನ್ನು ಕಂಡ ಈ ಲೇಖಕರಿಗೆ ಇದೇನು ಆಶ್ಚರ್ಯವೆನಿಸುವದಿಲ್ಲ.

ಲಕ್ಷ್ಮಣರಾಯರು ಏನಾದರೂ ಸಾಧಿಸಿದ್ದರೆ, ಅವು ಮೂರು ಮಾತು ಗಳು. ತಮ್ಮ ಸುಪ್ತ ಕರ್ತೃತ್ವ ಶಕ್ತಿಯನ್ನು ಜಾಗೃತಗೊಳಿಸಿ, ಅದರ ಉಪ ಯೋಗವನ್ನು ಪೂರ್ಣ ಮಾಡಿಕೊಂಡರು. ಇದೇ ಮೊದಲಿನದು. ಈ ಶಕ್ತಿಯು ಎಲ್ಲರಲ್ಲಿಯೂ ಇವೆ. ಅದು ಅದ್ಭುತಶಕ್ತಿ. ಅದನ್ನು ಬಳಸಿದರೆ ಮಾತ್ರ ಅದರ ಬೆಳಕು ಬೀಳುವದು. ಬ್ಯಾಟರಿಯಲ್ಲಿ ಅದ್ಭುತ ಶಕ್ತಿಯಿದ್ದರೂ ಬಿರಡಿಯನ್ನು ಒತ್ತದೆ, ಅದರ ಪ್ರಕಾಶವು ಜಗತ್ತಿಗೆ ಕಾಣುವ ಬಗೆ ಹೇಗೆ? ಬಹು ಜನರು ಆ ಸುಪ್ತ ಶಕ್ತಿಯನ್ನು ಜಾಗ್ರತ ಮಾಡಿಕೊಳ್ಳುವದಿಲ್ಲ. ಯಾವುದೇ ಕಾರ್ಯದಲ್ಲಿ ಅಯಶಸ್ವಿಯಾದೊಡನೆ ದೈವವನ್ನು ದೂರುತ್ತಾರೆ.

ಲಕ್ಷ್ಮಣರಾಯರು ಪ್ರತಿ ಕ್ಷಣವನ್ನು ಉಪಯೋಗಿಸಲು ಲಕ್ಷ್ಯವೀಯು ತ್ತಿದ್ದರು. ಅವರ ಕೋಶದಲ್ಲಿ ಆಲಸ್ಯವೆಂಬುದೇ ಇರಲಿಲ್ಲ. ಸದಾ ಕಾರ್ಯ ದಲ್ಲಿ ಮಗ್ನರು. 'ಶೇತೆ ನಿಪದ್ಯೇ ಮಾನಸ್ಯ ಚರಾತಿ ಚರತೋ ಭಗಃ' 'ಮಲ ಗುವವನ ದೈವವು ಮಲಗುತ್ತದೆ. ನಡೆಯುವವನ ದೈವವು ಅವನೊಡನೆ ಮುಂದೆ ಸಾಗುತ್ತದೆ.' ಎಂಬ ಮಾತು ತೀರ ಸತ್ಯವಿದೆ. ರಾಯರು ಸದಾ ಮುಂದುವರಿಯುವವರಾದ್ದರಿಂದ ಇತರರಿಗೆ ಕಷ್ಟವೆನಿಸುವ ಪರ್ವತವನ್ನು ಕೂಡಾ ಸಹಜವಾಗಿ ಅವರು ಏರಿ ಹೋಗುತ್ತಿದ್ದರು.

ರಾಯರು ಸಾಧಿಸಿದ ಎರಡನೆಯ ಮಹತ್ವದ ಕಾರ್ಯವೆಂದರೆ, ಶಕ್ಯವಿದ್ದಷ್ಟು ಹೆಚ್ಚು ಜನರನ್ನು ಕಾರ್ಯದಲ್ಲಿ ತೊಡಗಿಸುವದು. ದೊಡ್ಡ ದೊಡ್ಡ ಕಾರ್ಯಗಳು ಒಬ್ಬರಿಂದಲೇ ಆಗುವದಿಲ್ಲವೆಂಬುದನ್ನು ಅರಿತ ಅವರು, ತಮ್ಮ ಕಾರ್ಯದಲ್ಲಿ ಈ ತಂತ್ರವನ್ನು ಉಪಯೋಗಿಸುತ್ತಿದ್ದರು.

ಮೂರನೆಯ ಮಾತೆಂದರೆ, ತಮ್ಮ ಶರೀರದ ಬಗ್ಗೆ ಯೋಗ್ಯ ಲಕ್ಷ್ಯವೀಯುವದು. 'ಶರೀರಮಾದ್ಯಂ ಖಲು ಧರ್ಮಸಾಧನಂ' ಎಂಬುದೇ ಅವರ ಮಂತ್ರ. ಆಹಾರ ವಿಹಾರಗಳಲ್ಲಿ ಮಿತಿ, ಬೆಳಿಗ್ಗೆ ಏಳುವದು, ಕಾರಣವಿಲ್ಲದೆ ನಿದ್ದೆಗೆಡದಿರುವದು. ಇದರಿಂದ ಬೇನೆಗಳು ಇವರ ಸಮೀಪಕ್ಕೆ ಕೂಡ ಸುಳಿಯುತ್ತಿದ್ದಿಲ್ಲ. ಆದ್ದರಿಂದಲೇ ಅವರಿಗೆ ೮೫ ವರ್ಷಗಳಾಗಿದ್ದರೂ ಅವರ ಯಾವ ವ್ಯಾಪಾರಗಳೂ ನಿಂತಿರಲಿಲ್ಲ. ನಾವು ಈಗ ಅವರ ಮಧ್ಯಮ ವಯಸ್ಸಿನವರೆಗೆ ಬಂದಿದ್ದೇವೆ. ಇನ್ನು ಮುಂದೆಯೂ ಅವರ ಪ್ರಚಂಡ ಕಾರ್ಯದ ದರ್ಶನವು ನಮಗಾಗುವದಿದೆ. ಆದುದರಿಂದ ಇಷ್ಟೆಲ್ಲ ವಿವೇಚನೆ ಮಾಡುವ ಕಾರ್ಯಕ್ಕೆ ಕೈ ಹಾಕಿದ್ದೇವೆ. ಇರಲಿ.

ಇನ್ನು ಲಕ್ಷ್ಮಣರಾಯರ ಮುಂದಿನ ಚರಿತ್ರೆಯ ಕಡೆಗೆ ಹೊರಳೋಣ. ಕಂಪನಿಯು ಸ್ಥಾಪನೆಯಾಗಿ ಅದರ ಕಾರ್ಯವು ಭರದಿಂದ ಸಾಗಿದ್ದನ್ನು ನಾವು ಹಿಂದೆ ತಿಳಿದಿದ್ದೇವೆ. ಚಿಂತೆಯ ದಿನಗಳು ಮುಗಿದವು, ಎಂದು ಚಾಲಕರು ಸುಖಸ್ವಪ್ನಗಳನ್ನು ಕಾಣಹತ್ತಿದರು. ಆದರೆ ಮಾನವನ ಎಣಿಕೆ ಎಲ್ಲಿ ನಡೆಯುವದು? ಯುದ್ಧದಿಂದ ಸರ್ವ ಉದ್ಯೋಗಗಳು ಕಳೆಕಟ್ಟಿ ಯುದ್ಧಾನಂತರ ಮೆಲ್ಲನೆ ಕಳೆಗುಂದುವವು. ಮಂದತೆಯ ನೆರಳು ಎಲ್ಲ ಕಡೆಗೂ ವ್ಯಾಪಿಸುವದೆಂಬುದು ಅನುಭವದ ಮಾತು.

೧೯೨೫ನೆಯ ಇಸ್ವಿಯಲ್ಲಿ ದೇಶದ ಎಲ್ಲ ಉದ್ಯೋಗಗಳಿಗೆ ಮಂದಿಯ ಗ್ರಹಣ ಹಿಡಿಯಿತು. ಆ ವರ್ಷ ಹಂಗಾಮಿಗೆಂದು ೨೦-೨೫ ಸಾವಿರ ಕಬ್ಬಿಣ ರಂಟೆಗಳನ್ನು ಸಿದ್ಧಪಡಿಸಲಾಗಿತ್ತು. ಆದರೆ ಈ ಸೈನ್ಯವು ವಾಡಿಯನ್ನು ಬಿಟ್ಟು ಹೊರಬೀಳಲೇ ಇಲ್ಲ. ಅದರಿಂದ ವಿಪರೀತ ಪರಿಣಾಮ ಉಂಟಾಯಿತು. ಈ ಇಳಿಕೆಯು ಕಾರಖಾನೆಯನ್ನು ೮-೧೦ ವರ್ಷ ಒಳಲಿಸಿತು.

ಕಂಪನಿಯ ಕಾರಭಾರವು ಸುರುವಾದ ಮೊದಲನೆಯ ವರ್ಷವೇ ೬ ರಂತೆ ಡೆವ್ಹಿಡೆಂಡು ಹಂಚಲಾಯಿತು. ಆದರೆ ಅದರ ಮುಂದಿನ ವರ್ಷ ಹಾನಿಯಾದ ಮೂಲಕ ಡೆವ್ಹಿಡೆಂಡು ನಿಂತಿತು. ಜನ ಗುಜುಗುಜು ಮಾತನಾಡಹತ್ತಿದರು.

ಜನಮತವೆಂದರೆ ಗಡಿಯಾರದ ಪೆಂಡಾಲು ಇದ್ದಂತೆ. ಅದು ಒಮ್ಮೆ ಒಂದೆಡೆಗೆ ಹೋಯಿತೆಂದರೆ ಮತ್ತೊಮ್ಮೆ ಅದರ ವಿರುದ್ಧ ದಿಶೆಗೆ ಹೋಗುವದು.

ಮೊದಲನೆಯ ಯುದ್ಧವು ಮುಗಿದ ನಂತರ ದೇಶದಲ್ಲಿ ಉದ್ಯೋಗಗಳಿಗೆ ಭರತಿ ಬಂದು, ಒಂದು ಹೊಸ ಔದ್ಯೋಗಿಕ ಯುಗವೇ ಪ್ರಾರಂಭವಾಗುವದೆಂಬ ಕಲ್ಪನೆಯಿಂದ, ಅನೇಕ ಪ್ರಕಾರದ ವಸ್ತುಗಳನ್ನು ನಿರ್ಮಿಸುವ ಅನೇಕ ಕಂಪನಿಗಳು ತಲೆಯೆತ್ತಿದವು. ಆದರೆ ಮುಂದಣ ಹೊಡೆತಕ್ಕೆ ಕೆಲವೇ ಕಂಪನಿಗಳು ಉಳಿದವು. ಅರ್ಥಾತ್ ಕಿರ್ಲೋಸ್ಕರ ಕಂಪನಿಗೂ ಈ ಕಾಲ ಪರೀಕ್ಷೆಯುಂಟೇ.

ತಮ್ಮ ಸರಕುಗಳಿಗೆ ಬೇಡಿಕೆ ಇರದಾಗ, ಜನಕ್ಕೆ ಬೇಕಾಗುವ ವಸ್ತುಗಳನ್ನು ನಿರ್ಮಿಸುವದೊಂದೇ ಇಳಿಕೆಯನ್ನು ಎದುರಿಸುವ ಉಪಾಯವಾಗಿದ್ದಿತು. ಇಂತಹ-ಯಾವ ಯಾವ ಸರಕುಗಳನ್ನು ತಮಗೆ ಮಾಡಲು ಸಾಧ್ಯವಿದೆ? ಎಂಬುದನ್ನು ವಿಚಾರ ಮಾಡಲು ಕಾರ್ಯಕರ್ತರ ಸಭೆಯನ್ನು ಲಕ್ಷ್ಮಣ ರಾಯರು ಕರೆದರು. ಅದರಲ್ಲಿ ಅನೇಕರಿಂದ ಅನೇಕ ಕಲ್ಪನೆಗಳು ಮುಂಡಿಸಲ್ಪಟ್ಟವು. ಅವುಗಳಲ್ಲಿ ನಟ್, ಬೋಲ್ಟ್ ಉತ್ಪಾದಿಸುವ ಯೋಜನೆಯು ಕೂಡಲೇ ಮಾನ್ಯ ಮಾಡಲ್ಪಟ್ಟಿತು. ನಟ್ ಹಾಗೂ ಬೋಲ್ಟುಗಳು ನೋಡಲು ಸಾದಾ ಕಂಡರೂ ದೇಶಕ್ಕೆ ಇವುಗಳ ಅವಶ್ಯಕತೆ ಬಹಳವಿದ್ದ ಮೂಲಕ, ಪ್ರತಿ ವರ್ಷ ಲಕ್ಷಾಂತರ ರೂಪಾಯಿಗಳ ಮಾಲು ಆಯಾತವಾಗುತ್ತಿದ್ದಿತು. ವಾಡಿಗೇ ಟನ್ನಗಟ್ಟಲೆ ನಟ್-ಬೋಲ್ಟುಗಳು ಬೇಕಾಗುತ್ತಿದ್ದವು. ಆದ್ದರಿಂದ ಅದಕ್ಕೆ ಎರಡು ಯಂತ್ರಗಳನ್ನು ತರಿಸಿ ಕೆಲಸಕ್ಕೆ ಪ್ರಾರಂಭವಾಯಿತು. ಈ ಬೋಲ್ಟುಗಳಿಗೆ ಬೇಕಾಗುವ ಕಚ್ಚಾ ಮಾಲೆಂದರೆ, ಕಬ್ಬಿಣದ ಸಳಿ ಹಾಗೂ ಪಟ್ಟಿಗಳು. ಅವಕ್ಕೆ ತೊಂದರೆ ಇರಲಿಲ್ಲ. ಸಾಧಾರಣವಾಗಿ ಸಳಿಗಳ ಮೂರು ಪಟ್ಟು ಈ ಬೋಲ್ಟುಗಳ ಬೆಲೆ ಇದ್ದಿತು. ಆದ್ದರಿಂದ ಸ್ವತಃ ಕಾರಖಾನೆಯಲ್ಲಿ ಮಾಡಹತ್ತಲು ಸ್ವಾಭಾವಿಕವಾಗಿ ಅವು ಅಗ್ಗವಾದವು. ಮುಂಬಯಿಯ ವ್ಯಾಪಾರಿಗಳೂ ಇವುಗಳನ್ನು ಕೊಳ್ಳಹತ್ತಿದರು. ಬೇಡಿಕೆ ಬರಹತ್ತಿದೊಡನೆ ಆ ಉದ್ಯೋಗವನ್ನು ಬೆಳೆಸಬೇಕೆಂಬ ಕಲ್ಪನೆ ಬರುವದು ಸ್ವಾಭಾವಿಕವಿದ್ದಿತು. ಅದರ ಸಿದ್ಧತೆಯೂ ನಡೆಯಿತು.

ಈ ಸಿದ್ಧತೆ ನಡೆಯುವಷ್ಟರಲ್ಲಿ ಪರಿಸ್ಥಿತಿಯು ಹದಗೆಟ್ಟಿತು. ಸರಕಾರವು ಟಾಟಾ ಕಾರಖಾನೆಗೆ ಸಂರಕ್ಷಣೆಯನ್ನು ಕೊಡುವದಕ್ಕಾಗಿ ಕಬ್ಬಿಣದ ಆಯಾತದ ಮೇಲೆ ಕರ ಹೇರಿತು. ವಿಲಾಯತಿಯ ನಟ್-ಬೋಲ್ಟುಗಳಿಗೆ ಮಾತ್ರ ಸುಂಕ

ಪಿಕ್ಸೆಂಪು ಸಾರಿತು. ಇದರಿಂದ ಕಬ್ಬಿಣದ ಸಳಿ ಹಾಗೂ ನಟ್‌ಬೋಲ್ಟುಗಳ ಬೆಲೆಯಲ್ಲಿಯ ಅಂತರವು ಕಡಿಮೆಯಾಗಿ, ತುಟ್ಟಿ ಕಬ್ಬಿಣದ ಸಳಿಗಳನ್ನು ತಗೆದು ಕೊಂಡು ಸೋವಿ ದರದ • ನಟ್‌ಬೋಲ್ಟುಗಳನ್ನು ಸ್ಪರ್ಧಿಸುವದು ಅಶಕ್ಯವಾ ಯಿತು. ಸರಕಾರವು ಉದ್ಯೋಗಗಳ ಗಂಟಲವನ್ನು ಹೇಗೆ ಹಿಡಿಯಬಹುದೆಂಬುವಕ್ಕೆ ಇದು ಒಳ್ಳೇ ಉದಾಹರಣೆ. ಈ ಪೇಟಿಸಿಂದ ಪಾರಾಗಲು ಕೂಡಲೇ ಟ್ಯಾರೀಫ ಬೋರ್ಡಿಗೆ ಬಿನ್ನವಿಸಲಾಯಿತು. ಸ್ವತಃ ಲಕ್ಷ್ಮಣರಾಯರು ಮುಂಬಯಿಗೆ ಹೋಗಿ ಬೋರ್ಡಿನ ಮುಂದೆ ಸಾಕ್ಷಿಯಿತ್ತರು; ಎಲ್ಲವೂ ವ್ಯರ್ಥವಾಯಿತು. ಹೀಗಾಗಿ ಬೋಲ್ಟ-ನಟ್ಟುಗಳನ್ನು ಮಾಡುವ ಉದ್ಯೋಗಕ್ಕೆ ನೀರು ಬಿಡ ಬೇಕಾಯಿತು.

ಕಟ್ಟಿಗೆಯ ಖುರ್ಚಿ, ಮೇಜು ಹಾಗೂ ಮಂಚಗಳು ದಿನದಿನಕ್ಕೆ ತುಟ್ಟಿ ಯಾಗ ಹತ್ತಿದ್ದರಿಂದಲೂ ಮನೆಯಲ್ಲಿ ಅವುಗಳನ್ನಿಡಲು ಸ್ಥಳಾಭಾವ ಆಗ ಹತ್ತಿದ್ದರಿಂದಲೂ ಮಡಿಚುವ ಖುರ್ಚಿ- ಮೇಜು, ಮಂಚಗಳನ್ನು ಮಾಡಿದರೆ ಸಾಕಷ್ಟು ಬೇಡಿಕೆಬರುವದೆಂದು ಅನಂತರಾಯರು ಸೂಚಿಸಿದರು. ಮತ್ತು ಅವರು ಆ ಉದ್ಯೋಗಕ್ಕೆ ಹತ್ತಿದರು. ಅದಕ್ಕೆ ಬೇಕಾಗುವ ಡಾಯ ಪಂಚನ್ನು ಮಾಡಿದರು. ಮತ್ತು ಕಬ್ಬಿಣ ಪಟ್ಟಿಗಳಿಂದ ಸಳಿಗಳನ್ನು ಸಿದ್ಧಪಡಿಸುವ ಒಂದು ಯಂತ್ರವನ್ನೂ ಸಿದ್ಧಪಡಿಸಿದರು. ಹೊಸ ಬಗೆಯ ಖುರ್ಚಿ, ಮೇಜುಗಳೂ ಮಂಚಗಳೂ ಕಾರಖಾನೆಯಿಂದ ಹೊರಬಿದ್ದವು. ಖುರ್ಚಿಯ ಬೆಲೆ ಕೇವಲ ಮೂರು ರೂಪಾಯಿ, ಮಂಚದ ಬೆಲೆಯು ೧೦ ರೂಪಾಯಿ ಮಾತ್ರ. ಇದರಲ್ಲಿ ಲಾಭ ಎಷ್ಟು ಬಂದೀತು ? ಆದರೆ ಅಪೇಕ್ಷೆಯಂತೆ ಮಾಲುಗಳ ಮಾರಾಟವು ಭರದಿಂದ ಸಾಗಿತು. ಇದನ್ನು ಕಂಡು, ಸೋಫಾಸೆಟ್, ಮಡಿಚುವ ಟೇಬಲ್, ಸೆಲ್ಫ ಹಾಗೂ ದವಾಖಾನೆಯ ಮೇಜು, ಖುರ್ಚಿ ಮೊದಲಾದವೂ ಸಿದ್ಧವಾಗ ಹತ್ತಿದವು.

ಮುದ್ರಣಾಲಯದ ವ್ಯವಸ್ಥಾಪಕರಾದ ಪಿಡಾವುರೆ ಗಣಪತರಾಯರು ಕಟಿಂಗ್ ಮಶಿನ್, ಪ್ರೂಫ್ ಪ್ರೆಸ್, ಲೆಡ್, ರೂಲ ಕಟರ ಮೊದಲಾದವುಗಳನ್ನು ಮಾಡಲು ಸೂಚಿಸಿದರು. ಇವುಗಳಿಗೆ ಬೇಡಿಕೆ ಕಡಿಮೆ ಇದ್ದುದರಿಂದ ಕೆಲವರಿಗೆ ಕೆಲಸ ಸಿಕ್ಕಿತು. ಇದೇ ಲಾಭ.

ಮತ್ತೊಬ್ಬರು ಉಕ್ಕಿನ ತಗಡುಗಳಿಂದ ಬಸ್ಸುಗಳ ಬಾಡಿಗಳನ್ನು ಕಟ್ಟ ಬೇಕೆಂದು ಸೂಚಿಸಿದರು. ಇದರಲ್ಲಿ ಮುಖ್ಯ ಕೆಲಸವೆಂದರೆ ವೆಲ್ಡಿಂಗಸದು.

ಅದು ನಮ್ಮಲ್ಲಿಯೇ ಇದೆ. ಈ ಕಬ್ಬಿಣ ಬಾಡಿಗಳು ಕಟ್ಟಿಗೆಗಳಿಗಿಂತಲೂ ಘಟ್ಟಿ ಎಂದು ಹೇಳಲಿಕ್ಕೇಬೇಡ. ಒಕ್ಕಿ ಅರಾಮವಾಗುವವಲ್ಲದೆ ನೋಡಲೂ ಬಹು ಅಂದವಾಗುವವು. ಅಲ್ಲದೆ ಭಾರದಲ್ಲಿ ಹಗುರಾಗುವವು. ಎಂದು ಪ್ರತಿಪಾದಿಸಿದರು. ಈ ಕಲ್ಪನೆಗೂ ಒಪ್ಪಿಗೆ ದೊರೆಯಿತು. ಆ ಭಾಗದ ಬಸ್ ಕಂಪನಿಗಳು ಕೂಡ ಅಂತಹ ಬಾಡಿಗಳನ್ನು ಕಟ್ಟಿಸಲು, ತಮ್ಮ ಗಾಡಿಗಳನ್ನು ಕಳಿಸಿಕೊಟ್ಟರು. ಆ ಕೆಲಸವೂ ಪ್ರಾರಂಭವಾಯಿತು.

ಸರ್ವರೂ ಒಮ್ಮತದಿಂದ ಒಪ್ಪಿದ ಕಲ್ಪನೆಯೆಂದರೆ, ಕೈ ಪಂಪುಗಳನ್ನು ಸಿದ್ಧಪಡಿಸುವದು. ಈ ಸಾಧನದ ಉಪಯೋಗವು ಬಹು ಬೆಳೆದಿತ್ತು. ಈ ಪಂಪುಗಳನ್ನು ಅಮೇರಿಕೆಯು ಪೂರೈಸುತ್ತಿತ್ತು. ವಿ. ಕೆ. ಬಿ. ಜೋಶಿ ಮತ್ತು ಕಂಪನಿ ಎಂಬುವವರು ಅವರ ಮುಂಬಯಿಯ ಪ್ರತಿನಿಧಿಗಳಾಗಿದ್ದರು. ಕಂಪನಿಗೂ ಅವರಿಗೂ ಮತಭೇದವಾಗಿ ಜೋಶಿಯವರಿಂದ ಏಜನ್ಸಿಯನ್ನು ಕಿತ್ತುಕೊಂಡು ಎರಡನೆಯವರಿಗೆ ಕೊಟ್ಟಿದ್ದರು. ಈ ಯೋಗಾಯೋಗದ ಲಾಭಪಡೆದು ಕಿರ್ಲೋಸ್ಕರವಾಡಿಯಲ್ಲಿ ೮-೧೦ ಬಗೆಯ ಅಮೇರಿಕೆಯ ಮಾದರಿಯ ಪಂಪುಗಳನ್ನು ಸಿದ್ಧಪಡಿಸಿ, ಶ್ರೀ ಕೆ. ಬಿ. ಜೋಶಿಯವರನ್ನೇ ಪ್ರಚಾರ ಮಾಡಲು ರಾಯರು ಹಚ್ಚಿದರು.

ಕಿರ್ಲೋಸ್ಕರ ಪಂಪುಗಳ ಮುಂಬಯಿಯಲ್ಲಿಯ ಪ್ರದರ್ಶನಾಲಯದ ಉದ್ಘಾಟನೆಯು ದೇ. ತಾತ್ಯಾಸಾಹೇಬ ಕೇಳಕರರಿಂದ ೩-೮-೧೯೧೫ ನೇ ದಿವಸ ನಡೆಯಿತು. ಈ ಸಮಯದಲ್ಲಿ " ಪರದೇಶದ ಪಂಪುಗಳಿಗಾಗಿ ಭಾರತದಿಂದ ಹರಿಯುತ್ತಿದ್ದ ಹೊನ್ನಿನ ಹೊಳೆಗೆ, ಸ್ವದೇಶಿ ಸರ್ವೋತ್ಕೃಷ್ಟ ಕಿರ್ಲೋಸ್ಕರ ಪಂಪುಗಳು ಒಡ್ಡುಹಾಕಿದ್ದನ್ನು ಕಂಡು ಯಾರಿಗೆ ಆನಂದವಾಗಲಿಕ್ಕಿಲ್ಲ! ಕಬ್ಬಿಣದ ರಂಟೆಗಳಂತೆಯೇ ಈ ಕಿರ್ಲೋಸ್ಕರ ಪಂಪುಗಳ ಕೀರ್ತಿಯೂ ಹಬ್ಬುವದರಲ್ಲಿ ಸಂಶಯವಿಲ್ಲ. ಕಿರ್ಲೋಸ್ಕರ ಲಕ್ಷ್ಮಣರಾಯರು ನಮ್ಮ ನಾಡಿನ ಹೇನ್ರಿ ಫೋರ್ಡರು. ಅವರು ಗಳಿಸಿದ ಯಶಸ್ಸಿಗಾಗಿ ನಿಮ್ಮೆಲ್ಲರ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುವೆ " ಎಂದು ಕೇಳಕರರು ಉದ್ಗಾರ ತೆಗೆದರು.

ಈ ಉದ್ಗಾರಗಳು ಲಕ್ಷ್ಮಣರಾಯರ ಬಗೆಗೆ ಇದ್ದ ಆದರವನ್ನೂ ರಾಷ್ಟ್ರಕ್ಕೆ ಅವರ ಅಗತ್ಯವನ್ನೂ ಸೂಚಿಸುವವು. ಫೋರ್ಡ ಕಾರಖಾನೆಯೆತ್ತ ! ಕಿರ್ಲೋಸ್ಕರ ಕಾರಖಾನೆಯೆತ್ತ ! ಅಜ ಗಜಾಂತರ. ಅಂದ ಮೇಲೆ ಅವರೊಡನೆ

ಲಕ್ಷ್ಮಣರಾಯರ ತುಲನೆ ಮಾಡುವದೆಂತು ? ಆದರೂ ಇಬ್ಬರೂ ಬಡತನ ದಿಂದ ತಮ್ಮ ಸ್ವಂತ ಪರಿಶ್ರಮದಿಂದ ತಮ್ಮ ಉತ್ಕರ್ಷವನ್ನು ಮಾಡಿ ಕೊಂಡವರು.

ಒಬ್ಬರು, ಸಾಮಾನ್ಯ ವ್ಯಕ್ತಿಗೂ ಅಲ್ಪ ಬೆಲೆಯಲ್ಲಿ ಮೋಟಾರನ್ನುಪೂರೈಸಿ ಪ್ರವಾಸವನ್ನು ಸುಲಭಗೊಳಿಸಿದ್ದರೆ, ಇನ್ನೊಬ್ಬರು, ಒಕ್ಕಲಿಗನಿಗೆ ಉಪಯುಕ್ತ ಸೋವಿ ರಂಟೆಗಳನ್ನು ಪೂರೈಸಿ, ಅವನ ಭೂಮಿಯು ಅವನಿಗೆ ಹೆಚ್ಚು ಫಲ ಕೊಡುವಂತೆ ಮಾಡಿದ್ದಾರೆ. ಇಷ್ಟರ ಮಟ್ಟಿಗೆ ಇಬ್ಬರ ತುಲನೆಯನ್ನು ಮಾಡ ಬಹುದು.

ಇಳಿಕೆಯ ತೀವ್ರತೆಯನ್ನು ಕಡಿಮೆ ಮಾಡಲು ಇನ್ನೊಂದು ಉಪಾಯವು ಸೂಚಿಸಲ್ಪಟ್ಟಿತು. ಕಾರಖಾನೆಯಲ್ಲಿ ರಂಟೆ, ಗಾಣಗಳೊಡನೆ ಸೆಂಗಾ ಒಡೆ ಯುವ ಯಂತ್ರವೂ ಮಾಡಲ್ಪಡುತ್ತಿತ್ತು. ಅದರಲ್ಲಿ ಕಾಳುಗಳು ಪುಡಿ ಪುಡಿ ಯಾಗಿ ಕಡಿಮೆ ಬರುತ್ತಿದ್ದವು. ಈ ದೋಷಗಳನ್ನೆಲ್ಲ ತಿದ್ದಿ, ಹೊಸ ಯಂತ್ರ- ವನ್ನು ರಚಿಸಬೇಕೆಂಬುದೇ ಸೂಚನೆ. ಅದರಂತೆ ನಿರ್ದುಷ್ಟವಾದ 'ಕಲ್ಯಾಣ' ಸೇಂಗಾ ಯಂತ್ರವು ಜನ್ಮ ತಾಳಿತು. ಇದರ ಲಾಭಾಂಶಗಳನ್ನು ಕಂಡು ಬೇಡಿಕೆಗಳಿಗೆ ಪೂರ ಬಂದಿತು.

ಕಾರಖಾನೆಯಲ್ಲಿಯ ಚಕ್ರಗಳು ಸತತವಾಗಿ ತಿರುಗಬೇಕೆಂಬ ಉದ್ದೇಶ ದಿಂದಲೂ ಅದರಲ್ಲಿಯ ಆರು ನೂರು ಜನ ಕೆಲಸಗಾರರು ನಿರುದ್ಯೋಗಿಗಳಾಗ ಬಾರದೆಂಬ ದೃಷ್ಟಿಯಿಂದಲೂ ಲಕ್ಷ್ಮಣರಾಯರು ಮಾಡಿದ ಭಗೀರಥ ಪ್ರಯತ್ನದ ಕಲ್ಪನೆಯು ಇದರಿಂದ ಬರಬಹುದು. ಇಂತಹ ಜೀವನ-ಮರಣದ ಪರಿಸ್ಥಿತಿ ಯನ್ನು ಎದುರಿಸಲು ಇನ್ನೂ ಅನೇಕ ಸರಕುಗಳನ್ನು ರಾಯರು ನಿರ್ಮಿಸಿದರು. ವಿಸ್ತಾರ ಭಯದಿಂದ ಅವುಗಳ ಉಲ್ಲೇಖವನ್ನು ಮಾಡದಿರುವದೇ ಒಳ್ಳೇದು.

ಯಾವ ಉಪಕ್ರಮದಿಂದ ಲಾಭವು ಆಗದಿದ್ದರೂ ಕಾರಖಾನೆಯ ಧೋರಣೆಯಲ್ಲಿಯೇ ಕ್ರಾಂತಿಯಾಯಿತೋ ಅದನ್ನು ಮಾತ್ರ ಇಲ್ಲಿ ಉಲ್ಲೇಖಿಸು ತ್ತೇವೆ. ಇಲ್ಲಿಯವರೆಗೆ ಕಾರಖಾನೆಯ ಧೋರಣವು, 'ನಾವಾಯಿತು ನಮ್ಮ ಕೆಲಸ ನಾಯಿತು' ಎಂದು ಇದ್ದಿತು. ಹೊರಗಿನ ಚಳುವಳಿಯ ಸಂಬಂಧವು ಅಷ್ಟಕ್ಕಷ್ಟೆ. ಸಮಯ ಸಿಕ್ಕಾಗ ವರ್ತಮಾನ ಪತ್ರವನ್ನೋದಿ ಅದರ ಭಗ್ಗೆ ಚರ್ಚಿಸುವದಷ್ಟೇ ಕಿರ್ಲೋಸ್ಕರವಾಡಿಯ ರಾಜಕಾರಣವಾಗಿತ್ತು.

ರಾಷ್ಟ್ರದ ಸೂತ್ರಗಳನ್ನು ಗಾಂಧೀಜಿಯವರು ಕೈಯಲ್ಲಿ ತೆಗೆದುಕೊಂಡು ಚರಖಾದ ಮುಖಾಂತರ ಹಳ್ಳಿ ಹಳ್ಳಿಗೂ ರಾಷ್ಟ್ರದ ಸಂದೇಶವನ್ನು ಮುಟ್ಟಿಸಿದರಷ್ಟೇ! ಕಿರ್ಲೋಸ್ಕರವಾಡಿಗೂ ಇದು ಬಂದು ಮುಟ್ಟಿತು. ಗಾಂಧೀ ಭಕ್ತರಾದ ಶ್ರೀ. ಎಸ್. ಕೆ. ಅಳತೇಕರರು ಲಕ್ಷ್ಮಣರಾಯರಿಗೆ ಖಾದೀ ದೀಕ್ಷೆಯನ್ನು ಕೊಟ್ಟರು.

ಕಿರ್ಲೋಸ್ಕರವಾಡಿಯಲ್ಲಿ ರಾಟೆಗಳು ತಿರುಗ ಹತ್ತಿದೊಡನೆ, ಈ ರಾಟೆಗಳಲ್ಲಿ ಏನು ಸುಧಾರಣೆಗಳನ್ನು ಮಾಡಲು ಶಕ್ಯವಿದೆ? ಎಂಬ ವಿಚಾರವು ರಾಯರ ತಲೆಯಲ್ಲಿ ತಿರುಗಹತ್ತಿತು. ಇಷ್ಟರಲ್ಲಿಯೇ ಗಣೇಶ ಭಾಸ್ಕರ ಕಾಳೆ ಎಂಬುವವರು ಚರಖದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದ ರಾಟೆಯೊಂದನ್ನು ಔಂಧಕ್ಕೆ ತಂದ ಸುದ್ದಿಯು ಬಂದಿತು. ರಾಜಾಸಾಹೇಬರ ಆಮಂತ್ರಣದ ಮೇರೆಗೆ ಅದನ್ನು ನೋಡಲು ಲಕ್ಷ್ಮಣರಾಯರು ಔಂಧಕ್ಕೆ ಹೋದರು.

ಈ ಭೆಟ್ಟಿಯಲ್ಲಿ ಶ್ರೀ ಕಾಳೆಯವರು ತಮ್ಮ ಮುಂದಿನ ಸಂಶೋಧನೆಗಳನ್ನು ಮಾಡಲು ಕಿರ್ಲೋಸ್ಕರವಾಡಿಯಲ್ಲಿಯೇ ಬಂದು ನಿಲ್ಲಬೇಕೆಂತಲೂ ಕಾರಖಾನೆಯಲ್ಲಿ ಇದರ ಬಗ್ಗೆ ಒಂದು ಪ್ರತ್ಯೇಕ ಖಾತೆಯನ್ನು ನಿರ್ಮಿಸಿ ಈ ವಿಷಯದಲ್ಲಿ ಶಕ್ಯವಿದ್ದ ಸಹಾಯವನ್ನೆಲ್ಲ ಒದಗಿಸಬೇಕೆಂತಲೂ ರಾಯರು ನಿರ್ಣಯಿಸಿದರು. ಅದರಂತೆ ಕಾಳೆಯವರು ಕಿರ್ಲೋಸ್ಕರವಾಡಿಗೆ ಬಂದು ನೆಲೆಸಿದರು. ಅವರ ಕಾರ್ಯವು ಪ್ರಾರಂಭವಾಯಿತು. ಅರ್ಥಾತ್ ಲಕ್ಷ್ಮಣರಾಯರ ನೆರವು ಅವರಿಗೆ ಪೂರ್ಣ ದೊರೆಯಿತು. ರೂ. ೩–೬–೦ ಬೆಲೆಯ ಒಂದು ಕಬ್ಬಿಣದ ರಾಟೆಯೂ ಹೊರಬಿದ್ದಿತು.

ಮೊದಲಿನ ಸಭೆಯಲ್ಲಿ ಬೇರೆ ಬೇರೆ ಜನರು ಬೇರೆ ಬೇರೆ ಕಲ್ಪನೆಗಳನ್ನು ಮಂಡಿಸಿದ ನಂತರ ಲಕ್ಷ್ಮಣರಾಯರು "ನೀವೆಲ್ಲರೂ ನಾವೇನು ಮಾಡಬೇಕೆಂಬುದನ್ನು ಹೇಳಿರುವಿರಿ.. ನನ್ನ ಅಭಿಪ್ರಾಯವೇನೆಂಬುದನ್ನು ನಾನು ನಿಮಗೆ ಹೇಳಲೇ?" ಎಂದರು.

ರಾಯರು ಏನು ಮಾತಾಡುವರೋ ಎಂಬುವದರ ಕಡೆಗೆ ಎಲ್ಲರೂ ಲಕ್ಷ್ಯ ಕೊಟ್ಟು ಕುಳಿತರು.

ಪಂ. ಜವಾಹರಲಾಲರ ಕಿರ್ಲೋಸ್ಕರವಾಡಿಯ ಭೆಟ್ಟಿ—೧೯೪೦



ಪಂ. ಜವಾಹರರು ಮತ್ತು ಲಕ್ಷ್ಮಣರಾಯರು



ಒಕ್ಕಲಿಗನಾಗುವ ಬಯಕೆಯಿಂದ ರಂಟೆ ನಿರೀಕ್ಷಿಸುವ ನೆಹರು



ಡಾ. ಶ್ಯಾಮಪ್ರಸಾದರ ಪುಣೆಯ ಕಾರಖಾನೆಗೆ ಭೆಟ್ಟಿ, ೧೯೪೯

೧೫

# ಕನಸು ನನಸಾಯಿತು

"ನಾವು ಇನ್ನು ಮುಂದೆ ಕಾರಖಾನೆಯಲ್ಲಿ ಆಯಿಲ್ ಮತ್ತು ಗ್ಯಾಸ್ ಇಂಜನುಗಳನ್ನು ನಿರ್ಮಿಸಬೇಕೆಂದು ನನ್ನ ಮತವಿದೆ. ಅನೇಕ ಸಲ ಇದನ್ನು ನಿಮ್ಮ ಮುಂದೆ ಮಂಡಿಸಿದ್ದೇನೆ. ಆದರೆ ಬೇರೆ ಬೇರೆ ತೊಂದರೆಗಳ ಮೂಲಕ ಅದು ಮುಂದೆ ಬೀಳುತ್ತ ನಡೆದಿದೆ. ಇನ್ನು ಮಾತ್ರ ಮುಂದೆ ಹಾಕಗೊಡಲಾರೆ" ಎಂದು ಲಕ್ಷ್ಮಣರಾಯರು ಮಾತಿಗೆ ಮೊದಲು ಮಾಡಿದರು.

ಕುಳಿತ ಜನ ಲಕ್ಷ್ಯಗೊಟ್ಟು ಕೇಳುತ್ತಿದ್ದರು. ಈ ಕೆಲಸವು ಎಣಿಸಿದಷ್ಟು ಸುಲಭವಿಲ್ಲೆಂದು ಕೆಲವರಿಗೆ ಅನಿಸಿದರೂ ಲಕ್ಷ್ಮಣರಾಯರ ದೃಢ ನಿರ್ಧಾರವನ್ನು ಕಂಡು ಮಾತನಾಡದೆ ಸುಮ್ಮನೆ ಕುಳಿತರು.

ಲಕ್ಷ್ಮಣರಾಯರು ಮುಂದುವರಿಯುತ್ತ "ಕಟ್ಟಿಗೆಯ ರಂಟೆಗಳು ಹೋಗಿ ಕಬ್ಬಿಣದ ರಂಟೆಗಳು ಪ್ರಚಾರದಲ್ಲಿ ಬಂದವು. ಆದರೆ ಇದೇನು ಅಂತಹ ಮಹತ್ವದ ಸುಧಾರಣೆಯಲ್ಲ. ಏಕೆಂದರೆ ಎರಡಕ್ಕೂ ಎತ್ತುಗಳು ಬೇಕು. ಆದರೆ ಎತ್ತುಗಳ ಬದಲು ಯಂತ್ರಶಕ್ತಿಯನ್ನು ಉಪಯೋಗಿಸುವ ದಿನಗಳು ಸಮೀಪಿಸಿವೆ. ಕುದುರೆಯ ಗಾಡಿಗಳು ಮಾಯವಾಗಿ ಮೋಟಾರಿನಲ್ಲಿ ಜನ ತಿರುಗಾಡುವದನ್ನು ನಾವು ನೋಡುತ್ತಿದ್ದೇವೆ. ಸರಕುಗಳನ್ನು ಸಾಗಿಸುವದಕ್ಕಾಗಿ ಟ್ರಕ್ಕು ಬಂದಿವೆ. ಈ ಗಾಡಿಗಳನ್ನು ನಡೆಯಿಸಲು, ಕೆಟ್ಟರೆ ನೆಟ್ಟಗೆ ಮಾಡಲು ಅಶಿಕ್ಷಿತರೆಂದು ಕಾಣುವ ಪಕ್ಕಿಯ ಜನ ಮುಂದೆ ಬಂದಿದ್ದಾರೆ. ಹಳ್ಳಿಗಳಲ್ಲಿ ಯಂತ್ರ ಜಾಗ್ರತಿಯು ಹೆಚ್ಚತೊಡಗಿದೆ. ಆದುದರಿಂದ ಭೂಮಿಗೆ ನೀರುಣಿಸಲು ಮೊಟ್ಟೆ ಅಥವಾ ರಾಟೆಯ ಗಡಿಗೆಗಳು, ಎಲ್ಲ ಕಡೆಗೆ ಉಪಯೋಗಿಸಲ್ಪಡುತ್ತಿದ್ದರೂ ಸ್ವಲ್ಪ ದಿನಗಳಲ್ಲಿಯೇ ಆ ಕೆಲಸವನ್ನು ಇಂಜಿನ ಇಲ್ಲವೆ ಪಂಪುಗಳಿಂದ ಮಾಡಿಕೊಳ್ಳುವ ಇಚ್ಛೆಯು ರೈತರಲ್ಲಿ ಉಂಟಾಗುವದು. ಇದಕ್ಕೇ ನಿಜವಾದ ಸುಧಾರಣೆ ಎನ್ನಬಹುದು.

'ಇಂಜಿನ ಮಾಡುವ ಈ ಕೆಲಸವು ರಂಟೆ–ಗಾಣಗಳನ್ನು ಮಾಡುವದಕ್ಕಿಂತಲೂ ಹೆಚ್ಚು ಕಠಿಣವಿದೆ. ನಮ್ಮ ದೇಶದಲ್ಲಿ ಈ ಕೆಲಸವನ್ನು ಮಾಡಲು

ಯಾರೂ ಇನ್ನೂ ಮುಂದೆ ಬಂದಿಲ್ಲ. ಆದರೆ ಇದು ಅಶಕ್ಯವೆಂದು ಯಾರೂ ಭಾವಿಸಬಾರದು. ನಾವು ಇತರ ಮಾಲುಗಳ ಭಾಗಗಳನ್ನು ಯರಕ ಹೊಯ್ಯುತ್ತೇವೆ. ನಂತರ ಜೋಡಿಸಿ ಯಂತ್ರ ನಿರ್ಮಿಸುತ್ತೇವೆ. ಅದರಂತೆಯೇ ಇಂಜಿನಿನ ಭಾಗಗಳನ್ನೂ ಸಿದ್ಧಪಡಿಸಬೇಕು. ಅದರಲ್ಲಿ ಕೆಲ ವಿಶಿಷ್ಟ ಭಾಗಗಳನ್ನು ನಮ್ಮಲ್ಲಿ ಸಧ್ಯಕ್ಕೆ ನಿರ್ಮಿಸಲು ಶಕ್ಯವಿಲ್ಲದಿದ್ದರೆ, ಅಂಥವುಗಳನ್ನು ಪರದೇಶದಿಂದ ತರಿಸೋಣ. ಅಂದರೆ ಆಯಿತಲ್ಲವೇ?" ಎಂದರು. ರಾಯರು ಈ ಬಗ್ಗೆ ಪೂರ್ಣ ವಿಚಾರ ಮಾಡಿದ್ದರು. "ತಾವು ಗ್ಯಾಸ ಇಂಜನುಗಳನ್ನು ನಿರ್ಮಿಸಿದರೆ ವೆಚ್ಚ ಕಡಿಮೆ ಬರುವದು. ಒಕ್ಕಲಿಗನಿಗೆ ಸಹಜ ದೊರೆಯುವ ಕಟ್ಟಿಗೆಗಳಿಂದ ಇದ್ದಲಿ ಮಾಡಿ ಅದರ ಗ್ಯಾಸಿನಿಂದ ಇಂಜನು ನಡೆಸುವಂತಾದರೆ, ಅಲ್ಪ ಬೆಲೆಯಲ್ಲಿ ಶಕ್ತಿಯು ದೊರೆತು ದೊಡ್ಡ ಲಾಭವಾಗುವದು. ಆಗ ರೈತರು ತಾವಾಗಿಯೇ ಇವುಗಳನ್ನು ಕೊಳ್ಳಲು ಮುಂದೆ ಬರುವರು" ಎಂದು ರಾಯರ ವಾದ.

"ನಾವು ಗ್ಯಾಸ ಇಂಜಿನವನ್ನೇ ಸಿದ್ಧಪಡಿಸಿದರೆ, ಅದರೊಡನೆ ನಾವು ಗ್ಯಾಸ ಜನರೇಟರವನ್ನೂ ಪೂರೈಸಬೇಕಾಗುವದು. ಈ ಎರಡೂ ಯಂತ್ರಗಳ ಬೆಲೆಯು ರೈತನಿಗೆ ಭಾರವಾಗುವದು. ಇದಲ್ಲದೆ ಚಿಕ್ಕ ಆಕಾರದ ಗ್ಯಾಸ ಇಂಜಿನಗಳು ವಿಲಾಯತಿಯಲ್ಲಿಯೂ ಲೋಕಪ್ರಿಯವಾದಂತಿಲ್ಲ. ಈ ಹೊಸ ಯಂತ್ರವು ಪರಿಪೂರ್ಣವಾಗಲು ಎಷ್ಟು ಸಮಯ ಹಿಡಿಯುವದೋ ಯಾರಿಗೆ ಗೊತ್ತು? ಪ್ರಯೋಗದಲ್ಲಿಯೂ ಬಹಳ ಸಮಯ ಹೋಗದಂತೆ ನಾವು ನೋಡಿಕೊಳ್ಳಬೇಕಲ್ಲವೇ?" ಎಂದು ಒಬ್ಬರು ಶಂಕಿಸಿದರು.

ಆಗ ಲಕ್ಷ್ಮಣರಾಯರು "ಹಾಗಾದರೆ ತಾವು ಯಾವ ಬಗೆಯ ಇಂಜನವನ್ನು ಮಾಡಲು ಸೂಚಿಸುವಿರಿ?" ಎಂದರು.

"ನಮ್ಮಲ್ಲಿರುವ ೮ ಅಶ್ವ ಶಕ್ತಿಯ ಇಂಜಿನಿನಂಥವುಗಳನ್ನು ನಿರ್ಮಿಸಬೇಕು. ಈ ಇಂಜಿನಗಳು ಬಹಳ ಖರ್ಚಾಗುತ್ತವೆ. ಅವು ಜನಪ್ರಿಯವಾಗಿವೆ. ಅದರ ರಚನೆಯು ಸಾದಾಯಿದೆ. ಅಲ್ಲದೆ ನಮ್ಮ ಕಡೆಗೆ, ೫೩ ಇಂಚಿನ ವರೆಗೆ, ಫ್ಲಾಯವ್ಹೀಲ ಘೋರ ಮಾಡಲು ಬರುವ ಟೋರಿಂಗ ಮಿಲ್ ಹಾಗು ದೊಡ್ಡ ಪ್ಲೇಜನಿಂಗ್ ಮಶಿನ್‌ದಂತಹ ಯಂತ್ರಗಳಿರುವ ಮೂಲಕ; ಇಂತಹ ಇಂಜಿನಗಳನ್ನು ಸಿದ್ಧಪಡಿಸುವದು ನಮ್ಮ ಅಳವಿನೊಳಗಿದೆ." ಎಂದು ಉತ್ತರಿಸಿದರು.

ಆಗ ಲಕ್ಷ್ಮಣರಾಯರು ನಿಮ್ಮ ಸೂಚನೆಯು ಯೋಗ್ಯವೆಂದು ನನಗೂ ಅನಿಸುತ್ತದೆ. ಆದರೆ ಒಂದು ಮಾತು ಮಾತ್ರ ನೆನಪಿಡಬೇಕು. ನಾನು ಈ ಯಂತ್ರದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ, ಅದು ಗ್ಯಾಸಿನಿಂದ ನಡೆಯುವಂತೆ ಪ್ರಯೋಗ ಮಾಡುವವನಿರುವೆ."

ಹೀಗೆಯೇ ಚರ್ಚೆ ನಡೆದಿರುವಾಗ ಸೌ. ರಾಧಾಬಾಯಿಯವರು ಬಾಗಿಲಲ್ಲಿ ಬಂದು ನಿಂತು "ನಿಮ್ಮ ಮಾತು ಮುಗಿಯಿತೋ ಇಲ್ಲವೋ? ಅಡಿಗೆಯೆಲ್ಲ ಆರಿ ತಣ್ಣಗಾಯಿತು. ಈಗಲಾದರೂ ಏಳಿರಿ " ಎಂದರು.

ರಾಯರು ಹೊತ್ತು ನೋಡುತ್ತಾರೆ ! ಒಂದೂವರೆಯಾಗಿತ್ತು. ಎಲ್ಲರೂ ಎದ್ದು ಹೊರಟರು. ರಾಯರ ಹಿಂದೆ ರಾಧಾಬಾಯಿಯವರು ಸುಮ್ಮನೆ ಹೊರಟರು. ಬಾಯಿಯವರಿಗೆ ಇದು ನಿತ್ಯದ ಸಾವು. ಇಂದು ಅವರ ಪುಣ್ಯ. ಏಕೆಂದರೆ ಕರೆದೊಡನೆಯೇ ರಾಯರು ಹೊರಟರು. ಒಂದೊಂದು ದಿನ ಅವರು ಕೆಲಸದಲ್ಲಿ ಮಗ್ನರಾಗಿದ್ದಾಗ ಕರೆದರೆ ತೀರಿತು. ಕರೆದವರ ಅವಸ್ಥೆ. ಹುಲಿಯಂತೆ ಅವರ ಮೈಮೇಲೆ ಏರಿ ಹೋಗಿ 'ಊಟ ಉಡಿಗೆಯ ಹೊರತು ಜಗತ್ತಿನಲ್ಲಿ ನಿಮಗೆ ಮತ್ತೇನು ಕಾಣುವದಿಲ್ಲ. ಹೊರಡು ಇಲ್ಲಿಂದ' ಎಂದು ಗದ್ದರಿಸುತ್ತಿದ್ದರು.

ಸಭೆಯಲ್ಲಿ ಗೊತ್ತಾದ ಇಂಜಿನಿನ ಚಿತ್ರವನ್ನು ತೆಗೆಯಲಾಯಿತು. ಬಿಚ್ಚಿದ ಇಂಜನಿನ ಬಿಡಿ ಭಾಗಗಳ ಅಳತೆಗಳನ್ನು ಬೇಗ ಬೇಗ ತೆಗೆದುಕೊಂಡರು. ಅದರ ಬ್ಲ್ಯೂ ಪ್ರಿಂಟ್ಸುಗಳನ್ನು ತೆಗೆದುಕೊಂಡು ಬಡಿಗರು ಪ್ಯಾಟರ್ನ್ಸ ಹಾಗೂ ಕೋಅರ ಪೆಟ್ಟಿಗೆ ಮಾಡಲು ಪ್ರಾರಂಭಿಸಿದರು. ಈ ಕೆಲಸ ನಡೆದಾಗ ಲಕ್ಷ್ಮಣರಾಯರು ಆಯಾ ಕೆಲಸಗಾರರ ಮುಂದೆ ಧರಣೀ ಕೂಡುತ್ತಿದ್ದರು. ಅವರಿಗೆ ಎಲ್ಲಕಡೆಗೂ ಇಂಜಿನನ ಹೊರತು ಬೇರೆ ಏನೂ ಕಾಣುತ್ತಿದ್ದಿಲ್ಲ.

ಆದರೆ ಇಂಜಿನಿನ ಭಾಗಗಳನ್ನು ಎರಕ ಹೊಯ್ಯಬೇಕೆಂದು ಭಟ್ಟಿಯು ಕಡೆಗೆ ಹೋದಾಗ, ರೈತರಲ್ಲಿ ಪ್ರಚಾರ ಮಾಡುವ ದೃಷ್ಟಿಯಿಂದ ಈ ಇಂಜಿನು ಬಹಳ ದೊಡ್ಡದಾಗುವದೆಂದು ಎಲ್ಲರಿಗೂ ಅನಿಸಿತು. ಅದು ರಾಯರಿಗೂ ಸತ್ಯವೆನಿಸಿತು. ಪುನಃ ೫ ಅಶ್ವಶಕ್ತಿಯ ಇಂಜಿನದ ರಚನೆಯ ಪ್ರಯತ್ನ ನಡೆದು, ಅದರ ಒಂದೊಂದು ಭಾಗಗಳು ಸಿದ್ಧವಾಗಿ ಹೊರಬಿದ್ದವು. ಅವೆಲ್ಲವುಗಳನ್ನು ಜೋಡಿಸಿದ ನಂತರ, ಚಿಕ್ಕ–ಪುಟ್ಟ ಬದಲಾವಣೆಗಳ ಅವಶ್ಯಕತೆಯು ತೋರಹತ್ತಿತು. ಇಲ್ಲವೇ ಹೊಸ ಕಲ್ಪನೆಯೇ ಮುಂದೆ ಬರುತ್ತಿತ್ತು. ಅದನ್ನು ಅಂತರ್ಭಾವ

ಮಾಡುವದಕ್ಕಾಗಿ ಕೆಲ ಹಳೆ ಭಾಗಗಳಿಗೆ ಜೋಕೊಟ್ಟು ಹೊಸದವುಗಳನ್ನು ಕೂಡಿಸಬೇಕಾಗುತ್ತಿತ್ತು. ಹೀಗೆ ಮಾಡುತ್ತ ಮಾಡುತ್ತ ಜೋಡಿಸಿ ಇಂಜಿನು ಪೂರ್ಣವಾಯಿತು. ಪೂಜೆಮಾಡಿ ಕಾಯಿ ಒಡೆದು ಎಲ್ಲರಿಗೂ ಪ್ರಸಾದ ಹಂಚಿದರು. ಟಾಕಿಯಲ್ಲಿ ಎಣ್ಣೆ ತುಂಬಿ ಹ್ಯಾಂಡಲ್ ಕೂಡಿಸಿ ಫ್ಲಾಯವ್ಹೀಲ ತಿರುಗಿಸ ಹತ್ತಿದರು.

ಮೂರುನಾಲ್ಕು ಸಲ ತಿರುಗಿಸಿದ ನಂತರ ಕೂಡಲೇ ತೋ ತೋ ಎಂದು ಧ್ವನಿ ಮಾಡುತ್ತ ಫ್ಲಾಯವ್ಹೀಲ ತಿರುಗಹತ್ತಿತು. ಅದಕ್ಕೆ ಪಟ್ಟಿಯನ್ನು ಜೋಡಿಸಿದ ಯಂತ್ರಗಳು ಕಾರ್ಯ ಮಾಡಹತ್ತಿದವು. ಲಕ್ಷ್ಮಣರಾಯರ ಇಂಜಿನುಗಳನ್ನು ಮಾಡುವ ಕನಸು ನನಸಾಯಿತು. ಕಾರಖಾನೆಯಲ್ಲೆಲ್ಲ ಆನಂದವೇ ಆನಂದ! ಲಕ್ಷ್ಮಣರಾಯರು ಸಂತೋಷದಿಂದ 'ಲ-ಲ-ಲಾ' ಎಂದು ಹಾಡಹತ್ತಿದರು.

ಇಂಜಿನು ಸಿದ್ಧವಾಯಿತೆಂದು ಲಕ್ಷ್ಮಣರಾಯರು ಸುಮ್ಮನೆ ಕೂಡಲಿಲ್ಲ. ಕಟ್ಟಿಗೆಯ ಇದ್ದಲಿಯ ಗ್ಯಾಸಿನಿಂದ ಅದು ನಡೆಯುವಂತೆ ಮಾಡುವ ಪ್ರಯತ್ನದಲ್ಲಿ ತೊಡಗಿದರು. ಅದರಲ್ಲಿಯ ವಿಶೇಷ ಕೌಶಲವು ಗ್ಯಾಸ ಸಿದ್ಧಪಡಿಸಲು ಬೇಕಾಗುವ ಪಾತ್ರೆ, ಜನರೇಟರ ಕೂಡಿಸುವದರಲ್ಲಿದ್ದಿತು. ಗ್ಯಾಸ ಬೇಗನೆ ಸಿದ್ಧವಾಗುವದಂತೂ ಸರಿಯೇ! ಆದರೆ ಅದರಲ್ಲಿಯ ಡಾಂಬರವಂತಹ ಅಪಾಯಕಾರಕ ದ್ರವ್ಯವು ಬೇರೆಯಾಗಿ ಶುದ್ಧ ಗ್ಯಾಸಷ್ಟೇ ಯೋಗ್ಯ ಪ್ರಮಾಣದಲ್ಲಿ ತಣ್ಣಗಾಗಿ ಇಂಜಿನಿಗೆ ಪೂರೈಸಬೇಕು. ಅದನ್ನೂ ಲಕ್ಷ್ಮಣರಾಯರು ಯಶಸ್ವಿಯಾಗಿ ಸಿದ್ಧಪಡಿಸಿದ್ದರಿಂದ ಗ್ಯಾಸ ಇಂಜಿನ ಸಿದ್ಧವಾಯಿತು.

ಇಷ್ಟರಲ್ಲಿಯೇ ೧೮೮೮ ನೇ ಅಕ್ಟೋಬರ ತಿಂಗಳಲ್ಲಿ ಪುಣೆ ಪಟ್ಟಣದಲ್ಲಿ ಒಕ್ಕಲತನದ ದೊಡ್ಡಪ್ರದರ್ಶನವೊಂದು ನಡೆಯಿತು. ಇಂತಹ ಪ್ರದರ್ಶನವು ಈ ಮೊದಲು ಎಂದೂ ಆಗಿದ್ದಿಲ್ಲ. ಆದ್ದರಿಂದ ಅದನ್ನು ನೋಡಲು ದೂರ ದೂರ ದೇಶದಿಂದ ಜನರು ಹಿಂಡುಗಟ್ಟಿಕೊಂಡು ಬಂದರು. ಅದರಲ್ಲಿ ಸರಕಾರದ ಒಕ್ಕಲತನದ ಖಾತೆಯವರು ಒಕ್ಕಲಿಗರಿಗೆ ಉಪಯುಕ್ತ ಹಾಗು ಆಕರ್ಷಕವಾದ ಅನೇಕ ಪ್ರಕಾರದ ವಸ್ತುಗಳನ್ನೂ ಕಾಯಿಪಲ್ಯ, ಧಾನ್ಯಗಳ ಮಾದರಿಗಳನ್ನೂ ವಿವಿಧರೀತಿಯ ಗೊಬ್ಬರಗಳನ್ನೂ ಅದರಂತೆಯೇ ಆಕಳು, ಎತ್ತು, ಎಮ್ಮೆ ಕೋಳಿಗಳನ್ನೂ ಇಟ್ಟಿದ್ದರು. ಅನೇಕ ವಿದೇಶಿ ಕಂಪನಿಗಳು ತಮ್ಮ ಯಂತ್ರಗಳನ್ನೂ ಉಪಕರಣಗಳನ್ನೂ ಇಟ್ಟಿದ್ದರು. ಅವರೂ ಈ ಎಲ್ಲ ಅಂಗಡಿ



ಪುಣೆಯ ಕಾರಖಾನೆಗೆ ನೆಹರೂರ ಭೆಟ್ಟಿ, ೧೯೫೦



ಕೆಲಸಗಾರರನ್ನು ಪ್ರೇಮದಿಂದ ವಿಚಾರಿಸುತ್ತಿರುವ ಲಕ್ಷ್ಮಣರಾಯರು, ೧೯೫೦



ಹರಿಹರ ಕಾರಖಾನೆಗೆ ನೆಹರೂರ ಭೇಟ್ಟಿ, ೧೯೫೬



ಹರಿಹರದಲ್ಲಿ ರಾಜಾರಾಮಪಂತರ ಮನೆಯಲ್ಲಿ ನೆಹರು

ಗಳಿಗಿಂತಲೂ ಕಿರ್ಲೋಸ್ಕರರ ಮಳಿಗೆಯಲ್ಲಿಯೇ ಗದ್ದಲ ಹೆಚ್ಚು. ಏಕೆಂದರೆ, ಕಿರ್ಲೋಸ್ಕರ ಕಾರಖಾನೆಯಲ್ಲಿಯೇ ಸಿದ್ಧವಾದ ಆಯಿಲ್ ಇಂಜಿನ ಹಾಗು ಗ್ಯಾಸ್ ಇಂಜಿನುಗಳನ್ನು, ಕಿರ್ಲೋಸ್ಕರ ಪಂಪುಗಳಿಗೆ ಹಚ್ಚಿ ನೀರು ಎತ್ತುವ ಪ್ರತ್ಯಕ್ಷ ದೃಶ್ಯವನ್ನು ಅಲ್ಲಿ ತೋರಿಸಿದ್ದರು.

ನಮ್ಮಲ್ಲಿ ಮೊದಲನಿಂದಲೂ ಮೊಟ್ಟೆಯಿಂದ ಭೂಮಿಗೆ ನೀರುಣಿಸುವ ಪದ್ಧತಿ. ಮೊಟ್ಟೆ ಹೊಡೆಯುವಾಗ ಎತ್ತುಗಳಿಗೆ ಆಗುವ ಕಷ್ಟವನ್ನು ಎಲ್ಲರೂ ಬಲ್ಲರು. ಈ ಕಷ್ಟದಿಂದ ಮುಕ್ತವಾಗುವ ದಾರಿ ಇಲ್ಲಿ ಕಂಡಿತು. ಇಂಜಿನವನ್ನು ಸುರುವು ಮಾಡುವದೇ ತಡ; ನೀರೇ ನೀರು. ಬೇಕಾದಷ್ಟು ಭೂಮಿಗೆ ನೀರು ಉಣಿಸಬಹುದು. ಈ ಪ್ರದರ್ಶನದಲ್ಲಿಟ್ಟ ವಾಸುದೇವರಾಯರ ಬಿತ್ತುವ ಯಂತ್ರವು ಕೂಡ ಪ್ರೇಕ್ಷಕರ ಮನಸ್ಸನ್ನು ಸೆಳೆಯಿತು.

ಈ ಪ್ರದರ್ಶನವನ್ನು ರೈತರೂ ಭೂ ಒಡೆಯರೂ ಸರಕಾರದ ಪ್ರತಿಷ್ಠಿತ ಅಧಿಕಾರಿಗಳೂ ಪ್ರಸಿದ್ಧ ನಾಗರಿಕರೂ ಕೆಲ ಯುರೋಪಿಯನ್ನರೂ ನೋಡಲು ಬಂದರು. ಒಮ್ಮೆ ಒಬ್ಬ ಯುರೋಪಿಯನ್ನನು ಕಿರ್ಲೋಸ್ಕರರ ಮಳಿಗೆಗೆ ಬಂದು, ಯಂತ್ರದ ಬಗ್ಗೆ ಬಹು ಸೂಕ್ಷ್ಮ ವಿಚಾರವನ್ನು ಮಾಡತೊಡಗಿದನು. ಅವನು ಕೇಳುವ ಪ್ರಶ್ನೆಗಳಿಂದ ಅವನು ಇಂಜನಿಯರನಿರಬೇಕೆಂದು ಅನಿಸು ತ್ತಿತ್ತು. ಹೀಗೆ ಪ್ರಶ್ನೋತ್ತರಗಳು ಸ್ವಲ್ಪ ಸಮಯ ನಡೆದಮೇಲೆ, ಅವನು ಗಂಭೀರವಾಗಿ "ನನ್ನನ್ನು ಕ್ಷಮಿಸಬೇಕು. ಈ ಇಂಜಿನ, ಈ ಪಂಪು ನಿಜವಾಗಿ ಭಾರತದಲ್ಲಿಯೇ ಸಿದ್ಧವಾಗಿದೆ ಎಂದು ನನಗನಿಸುವದಿಲ್ಲ" ಎಂದನು.

ಆಗ ಲಕ್ಷ್ಮಣರಾಯರು "ಈ ಇಂಜಿನಿನ ಎಲ್ಲ ಸಾಮಾನಗಳಲ್ಲಿಯ ಎಲ್ಲ ಭಾಗಗಳು ಇಲ್ಲಿಯೇ ಸಿದ್ಧವಾಗಿವೆ ಎಂದು ಸಿದ್ಧವಾದರೆ, ನೀವು ಏನು ಕೊಡು ವಿರಿ ? ನೀವು ಬೇಕಾದಾಗ ಕಾರಖಾನೆಯನ್ನು ಸಂದರ್ಶಿಸಿರಿ, ಮತ್ತು ಖಾತ್ರಿ ರಿಕೆ ಮಾಡಿಕೊಳ್ಳಿರಿ. ಇದಕ್ಕೆ ನಿಮ್ಮ ಒಪ್ಪಿಗೆಯೇ ?" ಎಂದರು.

"ನೀವು ಇಷ್ಟು ಧೈರ್ಯದಿಂದ ಹೇಳುತ್ತೀರಿ ಎಂದಮೇಲೆ, ನಿಮ್ಮ ಮಾತನ್ನು ನಂಬುವೆನಲ್ಲದೆ, ಯಾಂತ್ರಿಕ ಪ್ರಗತಿಯಲ್ಲಿ ಹಿಂದುಳಿದ ಈ ದೇಶದಲ್ಲಿ ತಾವು ಯಾವತ್ತೂ ಯಂತ್ರಗಳನ್ನು ಸಿದ್ಧಪಡಿಸುವದನ್ನು ಕಂಡು, ನಿಮ್ಮ ಅಭಿ ನಂದನೆಯನ್ನು ಮಾಡುತ್ತೇನೆ. ಮತ್ತು ನಿಮ್ಮ ಉದ್ಯೋಗದಲ್ಲಿ ನಿಮಗೆ ಪೂರ್ಣ ಯಶ ದೊರೆಯಲೆಂದು ಹಾರೈಸುತ್ತೇನೆ" ಎಂದನು.

ಈ ಪ್ರದರ್ಶನದಲ್ಲಿ ಕಿರ್ಲೋಸ್ಕರ ಮಾಲುಗಳಿಗೆ ಒಂದು ಸುವರ್ಣ ಪದಕ ಮತ್ತು ೪ ಇತರ ಪದಕಗಳು ದೊರೆತವು.

ಲಕ್ಷ್ಮಣರಾಯರ ಮಕ್ಕಳಾದ ಶಂತನುರಾಯರು ತಮ್ಮ ನಾಲ್ಕು ವರ್ಷದ ಅಭ್ಯಾಸವನ್ನು ಮುಗಿಸಿಕೊಂಡು, ಅಮೇರಿಕೆಯಿಂದ ಮರುಳಿ ಸ್ವದೇಶಕ್ಕೆ ಇದೇ ಸಮಯಕ್ಕೆ ಬಂದುದರಿಂದ ಎಲ್ಲರ ಆನಂದವು ಉಕ್ಕೇರಿತು. ಅಲ್ಲಿಯ ಮಾಸ ಚೂಸೇಟ್ಸ ಇನ್‌ಸ್ಟಿಟ್ಯೂಟ ಆಫ್ ಟೆಕ್ನಾಲಜಿ ಎಂಬ ವಿಖ್ಯಾತ ಸಂಸ್ಥೆಯಲ್ಲಿ ಶಿಕ್ಷಣ ಪಡೆದು, ಯಂತ್ರ ಶಾಸ್ತ್ರದಲ್ಲಿಯ ಉಚ್ಚ ಪದವಿಯನ್ನು ಪಡೆದು, ಅನೇಕ ಕಾರಖಾನೆಗಳಲ್ಲಿ ಸ್ವತಃ ದುಡಿದು ಅನುಭವವನ್ನೂ ಸಂಪಾದಿಸಿದ್ದರು. ಅವರು ಬಂದುದರಿಂದ ಕಾರಖಾನೆಯ ಗಾಡಿಗೆ ಒಂದು ಹೊಸ ಶಕ್ತಿಯ ಇಂಜಿನ ಹಚ್ಚಿದಂತಾಯಿತು.

ಲಕ್ಷ್ಮಣರಾಯರಂತ, ಶಂತನು ಕೂಡ ಹುಟ್ಟಾ ಯಂತ್ರ ನಿಪುಣ. ಮಕ್ಕಳ ಗುಣ ಎಳೆತನದಲ್ಲಿಯೇ ಕಾಣುವದು. ೧೧ ವರ್ಷದ ವಯಸ್ಸಿನವನಿರುವಾಗಲೇ ಅವನು ತೆಗೆದ ಆಯಿಲ್ ಇಂಜಿನದ ರೇಖಾಚಿತ್ರವು ಅವನ ಯಂತ್ರಜ್ಞತೆಯನ್ನು ಸೂಚಿಸುತ್ತದೆ. ಅದನ್ನು ಕೆಳಗೆ ಕೊಡಲಾಗಿದೆ.



ಪುಣೆಯ ಪ್ರದರ್ಶನ ಮುಗಿದಮೇಲೆ, ಕಾರಖಾನೆಯಲ್ಲಿ ಆಯಿಲ್ ಮತ್ತು ಗ್ಯಾಸ್ ಇಂಜಿನುಗಳ ಉತ್ಪಾದನೆಯನ್ನು ಶಾಸ್ತ್ರೀಯವಾಗಿ ಹೇಗೆ ಪ್ರಾರಂಭಿಸಬೇಕೆಂಬ ಬಗ್ಗೆ ಚರ್ಚೆ ಪ್ರಾರಂಭವಾಯಿತು. ಲಕ್ಷ್ಮಣರಾಯರಿಗೆ, ಶಂತನುರಾಯನಂಥ ತಜ್ಞ ಇಂಜಿನೀಯರನು ಈಗ ಸಹಾಯಕ್ಕೆ ದೊರೆತುದರಿಂದ ಕೆಲಸವನ್ನು ಪ್ರಾರಂಭಿಸಲು ಅವರಿಗೆ ಎಷ್ಟು ಅಭಿಮಾನ, ಹಾಗು ಆನಂದಗಳು ಆಗಿರಬೇಕೆಂಬುದನ್ನು ಕಲ್ಪಿಸುವದೇ ಒಳಿತು. ಒಮ್ಮೆ ಪಿತಾ–ಪುತ್ರರು ಮುಂದಿನ ಯೋಜನೆಯನ್ನು ಮಾಡಲು ಕುಳಿತಾಗ ಇಬ್ಬರಲ್ಲಿಯೂ ಮಹತ್ವದ ವಿಷಯದ ಬಗ್ಗೆ ಒಮ್ಮತವಾಗದೇ ಹೋಯಿತ .

"ಹಿರಿಯರೆ, ತಾವು ಮಾಡಿದ ಈ ಇಂಜಿನು ಒಳ್ಳೇ ರೀತಿಯಿಂದ ಕೆಲಸವನ್ನು ಕೊಡಬಹುದು. ಆದರೂ ಮಂದಗತಿಯ ಅಡ್ಡ ಇಂಜಿನುಗಳು ಈಗ ಹಿಂದೆ ಬೀಳುತ್ತ ನಡೆದಿದ್ದು, ತೀವ್ರಗತಿಯ ಮತ್ತು ಎದ್ದು ನಿಂತ ಇಂಜಿನುಗಳು ಮೆಲ್ಲನೆ ಪ್ರಚಾರದಲ್ಲಿ ಬರುತ್ತಲಿವೆ. ವಿಮಾನಗಳಿಗಾಗಿ ನಿರ್ಮಿಸುವ ಇಂಜಿನುಗಳ ತೂಕ ಹಾಗೂ ಆಕಾರಗಳು ಕಡಿಮೆ ಇದ್ದು, ಹೆಚ್ಚು ಶಕ್ತಿಯನ್ನು ಅವುಗಳಲ್ಲಿ ಹೇಗೆ ಉತ್ಪಾದಿಸಬೇಕೆಂಬುದನ್ನೇ ಮುಖ್ಯವಾಗಿ ನೋಡಬೇಕಾಗುತ್ತದೆ. ಈ ವಿಷಯದಲ್ಲಿ ಅಮೇರಿಕೆ ಹಾಗೂ ಯುರೋಪದಲ್ಲಿ ತೀವ್ರತೆಯಿಂದ ಈ ಬಗ್ಗೆ ಅಭ್ಯಾಸ ನಡೆದಿದ್ದು, ಇಂಜಿನಿನ ರಚನೆಯಲ್ಲಿ ಬಹು ದೊಡ್ಡ ಕ್ರಾಂತಿಯಾಗಹತ್ತಿದೆ. ಈಗ ಡೀಝೆಲ್ ಮಾದರಿಯ ಇಂಜಿನುಗಳ ಯುಗವು ಪ್ರಾರಂಭವಾಗಿದೆ. ಆದುದರಿಂದ ನಾವು ಸಾವಕಾಶವಾಗಿ ನಡೆಯುವ ಹಳೆಯ ಅಡ್ಡ ರಚನೆಯ ಇಂಜನುಗಳನ್ನು ಮಾಡುವದಕ್ಕಿಂತ ಆಧುನಿಕ, ರೀತಿಯ ಎದ್ದು ನಿಂತ ಇಂಜನುಗಳನ್ನು ಸಿದ್ಧಪಡಿಸಬೇಕೆಂದು ನನಗೆ ಅನಿಸುತ್ತಿದೆ" ಎಂದು ಶಂತನುರಾಯನು ತಮ್ಮ ಅಭಿಪ್ರಾಯವನ್ನು ಹೇಳಿದನು.

ಆಗ ಲಕ್ಷ್ಮಣರಾಯರು "ಈ ಹೊಸ ಇಂಜನುಗಳ ಲಾಭವು ನನಗೆ ಗೊತ್ತಿದೆ. ಆದರೆ ಅವುಗಳ ವೇಗವು ನಮ್ಮ ಒಕ್ಕಲಿಗರಿಗೆ ಹಿಡಿಯಬಹುದೆ? ಮಿನೀಟಿಗೆ ೧೪೦೦ ರಿಂದ ೧೫೦೦ ರ ಸುತ್ತಿನವರೆಗೆ ವೇಗವುಳ್ಳ ಇಂಜನುಗಳಿಗಿಂತಲೂ ೫೦೦–೬೦೦ ಸುತ್ತುಗಳಿಂದ ನಡೆಯುವ ಇಂಜನುಗಳನ್ನು ಅವರು ವಿಶೇಷವಾಗಿ ಮನ್ನಿಸುವರೆಂದು ನನಗೆ ಅನಿಸುತ್ತಿದೆ" ಎಂದರು.

"ಆ ಮಾತು ನಿಜ. ಆದರೆ ವೇಗವು ಕೂಡ ಮೆಲ್ಲ ಮೆಲ್ಲನೆ ಮನುಷ್ಯನಿಗೆ ರೂಢಿಯಾಗುತ್ತ ಹೋಗುತ್ತದೆ. ಮೊದಲು ರೈಲುಗಳು ತಾಸಿಗೆ ೧೫

ಷ್ಟೊಲು ವೇಗದಿಂದ ಹೋಗುತ್ತಿದ್ದವು. ಆಗ ಈ ವೇಗವು ಮನುಷ್ಯನಿಗೆ ಸಮಾನಿಸುವದಿಲ್ಲೆಂದು ಇಂಗ್ಲೀಷರು ಹೇಗೆ ಚಳವಳಿಯನ್ನು ಮಾಡಿದರೆಂಬುದು ನಿಮಗೆ ಗೊತ್ತಿದೆ. ನಮಗೆ ಯಾವ ಗತಿಯು ಮಾಣಿಸಿರುವದೋ ಅದು ಹೆಚ್ಚಿದೊಡನೆಂಯೇ ನಮಗೆ ತೊಂದರೆಯಾಗುವದು ಸಹಜ. ಆದರೆ ಇಷ್ಟ ರಿಂದಲೇ ಹೆಚ್ಚು ವೇಗವುಳ್ಳ ಯಂತ್ರಗಳನ್ನು ಉಪಯೋಗಿಸುವದನ್ನು ಮಾನ ವನು ಬಿಡುವದಿಲ್ಲ. ವೇಳೆ, ಶ್ರಮ, ದುಡ್ಡು ಉಳಿಯುತ್ತಿದ್ದರೆ, ಅಂಥ ಯಂತ್ರ ವನ್ನೇ ಮನುಷ್ಯನು ಅಪೇಕ್ಷಿಸುವನು. ಆದುದರಿಂದ ಇಂಜನುಗಳನ್ನು ಮಾಡುವ ದಿದ್ದರೆ, ನಾವು ಸುಧಾರಿಸಿದ ಹಾಗೂ ಹೆಚ್ಚು ವೇಗವುಳ್ಳವುಗಳನ್ನು ಮಾಡೋಣ" ಎಂದು ಶಂತನುರಾಯನು ಉತ್ತರಿಸಿದನು.

"ಸರಿ. ನಾವು ಈ ಎರಡು ಮೂರು ವರುಷ ಮಾಡಿದ ಪ್ರಯತ್ನವು ವ್ಯರ್ಥವೆಂದೆನ್ನಬೇಕು. ಆದರೂ ನಿನ್ನ ಹೇಳಿಕೆಯು ನನಗೆ ಮನವರಿಕೆಯಾಗಿದೆ. ಈ ಹೊಸ ಮಾದರಿಯ ಇಂಜನುಗಳನ್ನು ಸಿದ್ಧಪಡಿಸಲು ನಮಗೆ ಅಂತಹ ಮಾದರಿಯನ್ನು ಮೊದಲು ತರಿಸಬೇಡವೇ?" ಎಂದು ಲಕ್ಷ್ಮಣರಾಯರು ಕೇಳಿದರು.

"ಈ ಪ್ರಶ್ನೆಯೇನು ಅಷ್ಟು ಕಠಿಣವಿಲ್ಲ. ಅಂತಹ ಹೊಸ ಮಾದರಿಯ ಜರ್ಮನ್ ಹಾಗೂ ಇಂಗ್ಲೀಷ ಇಂಜನುಗಳು ಮುಂಬೈಯಲ್ಲಿ ಸಿಗಹತ್ತಿವೆ. ನಿಮ್ಮ ಒಪ್ಪಿಗೆ ಇದ್ದರೆ, ನಾನು ಕೂಡಲೇ ಮುಂಬೈಗೆ ಹೋಗಿ ನನಗೆ ಸರಿ ಬಂದ ಒಂದು ಇಂಜನವನ್ನು ತರುವೆ" ಎಂದನು.

"ಹಾಗಾದರೆ ಒಳ್ಳೇಯದು. ನೀನು ಆ ಕೆಲಸಕ್ಕೆ ನಾಳೆಗೇ ಹೊರಡು" ಎಂದರು ಲಕ್ಷ್ಮಣರಾಯರು.

ಅದರಂತೆ ಶಂತನುರಾಯನು ವೋಟಾರನ್ನು ತೆಗೆದುಕೊಂಡು ಎರಡನೆಯ ದಿನ ಮುಂಬೈಗೆ ಹೊರಟನು.

ತನ್ನ ಒಬ್ಬನು ಮಗನು ಅಮೇರಿಕೆಯಿಂದ ಮರಳಿದೊಡನೆ ರಾಧಾ-ಬಾಯಿಗೆ, ಮನೆಗೆ ಸೊಸೆಯು ಬೇಗನೆ ಬರಬೇಕೆಂದು ಅನಿಸುವದು ಸ್ವಾಭಾವಿಕ ವಿದೆ. ಕನ್ಯೆಗಳು ಬರಹತ್ತಿದ್ದವು. ಇಂತಹ ಒಳ್ಳೆಯ ವರದ ಮೇಲೆ ಅನೇಕರ ಕಣ್ಣುಗಳಿರುವದು ಸ್ವಾಭಾವಿಕ. ಅನೇಕರು ಬಂದು ಕೇಳಿ ಹೋಗುತ್ತಿದ್ದರು. ರಾಧಾಬಾಯಿಯು ಲಕ್ಷ್ಮಣರಾಯರ ಮುಂದೆ ಈ ವಿಷಯವನ್ನು ತೆಗೆದಳು. ಆಗ ಅವರು "ಶಂತನು ಈಗ ಇಂಜನನ್ನು ತರಲು ಮುಂಬೈಗೆ ಹೋಗಿದ್ದಾನೆ.

ಅವನು ಬಂದ ನಂತರ ಅವನಿಗೆ ಕನ್ಯೆಯನ್ನು ನೋಡಲು ಹೇಳೋಣ" ಎಂದರು.

ಶಂತನುರಾಯನು ಈ ಪ್ರಶ್ನೆಯನ್ನು ತಂದೆ-ತಾಯಿಗಳಿಂದ ತಪ್ಪಿಸಿದನು. ಅವನು ಒಂದು ವಾರದ ನಂತರ ಕಿರ್ಲೋಸ್ಕರವಾಡಿಗೆ ತಿರುಗಿ ಬಂದನು. ಅವನು ಬಂದಾಗ ರಾತ್ರಿ ಎಂಟು ಗಂಟೆಯಾಗಿತ್ತು. ಲಕ್ಷ್ಮಣರಾಯರು ಹಾಗೂ ಉಳಿದ ಜನ ಊಟಕ್ಕೆ ಕುಳಿತಿದ್ದರು. ರಾಧಾಬಾಯಿಯವರು ಬಡಿಸುತ್ತಿದ್ದರು. ಇಷ್ಟರಲ್ಲಿ ಬಾಗಿಲಲ್ಲಿ ಮೋಟರು ನಿಂತ ಸಪ್ಪಳವನ್ನು ಕೇಳಿ, ಶಂತನು ಬಂದ ಹಾಗೆ ಕಾಣುತ್ತದೆ ಎಂದು ರಾಧಾಬಾಯಿಯು ಅಂದರು.

ಅರ್ಧಮಿನೀಟಿನಲ್ಲಿ ಶಂತನು ರಾಯನು ಅಡುಗೆಯ ಮನೆಗೆ ಬಂದನು. ಅವನ ಹಿಂದೆ ೧೬-೧೭ ವರ್ಷದ ಒಬ್ಬ ಕೆಂಪು ಹುಡುಗೆಯು ನಿಂತಿದ್ದಳು. ಶಂತನುರಾಯನು ಕೂಡಲೇ ಅವಳ ಪರಿಚಯವನ್ನು ಎಲ್ಲರಿಗೂ ಮಾಡಿಕೊಟ್ಟನು. ಆಗ ಅವನು ಎರಡೂ ಕೈಗಳನ್ನು ತಿಕ್ಕುತ್ತ "ಅವ್ವಾ ನೋಡು! ಇವಳೇ ನಿನ್ನ ಭಾವೀ ಸೊಸೆಯು. ನಿನಗೆ ತೋರಿಸುವದಕ್ಕಾಗಿ ಕರಕೊಂಡು ಬಂದಿದ್ದೇನೆ. ಈಕೆಯ ಹೆಸರು ಯಮೂತಾಯಿ" ಎಂದನು. ಆಗ ಯಮೂತಾಯಿಯು ಮುಂದೆ ಬಂದು ಅತ್ತೆ ಮಾವಂದಿರಿಗೆ ವಿನಯದಿಂದ ನಮಸ್ಕಾರ ಮಾಡಿದಳು. ಆಗ ರಾಧಾಬಾಯಿಯು "ಹುಡುಗೆಯ ಅಡ್ಡ ಹೆಸರು ಹೇಳಲಿಲ್ಲವಲ್ಲ" ಎಂದಳು. "ಯಮೂತಾಯಿ ಘಾಟಕ. ಇವಳ ತವರುವಾಯಿ" "ಘಾಟಕರೆಂದರೆ ಕೊಂಕಣಸ್ಥರೆಂದು ಕಾಣುತ್ತದೆ" ಎಂದು ರಾಧಾಬಾಯಿಯು ಮಣೆಯನ್ನು ಮುಂದೆ ಸರಿಸಿ ಹುಡಿಗೆಗೆ ಕೊಡಲು ಹೇಳಿದರು.

೧೬

# ಮಾದರಿಯ ಲಗ್ನಸಮಾರಂಭ

ಶಂತನು ರಾಯರ ಲಗ್ನದ ನಿಶ್ಚಯವಾಗಿದೆ ಎಂಬ ಸುದ್ದಿಯು ಎಲ್ಲ ಆಪ್ತೇಷ್ಟರನ್ನು ಆನಂದದಲ್ಲಿ ಮುಳುಗಿಸಿತು. ಈ ಸಮಾರಂಭಕ್ಕೆ ಬೇರೆ ಬೇರೆ ಕಡೆಗಿದ್ದ ಕಿರ್ಲೋಸ್ಕರ ಮನೆತನದವರು ಬರುವದಲ್ಲದೆ, ಅವರ ಸಂಬಂಧಿಕರೆಲ್ಲರೂ ಬರುವದು ಸ್ವಾಭಾವಿಕವಿದ್ದಿತು. ಅವರಂತೆಯೇ ಅನೇಕ ನಿಮಂತ್ರಿತ ಅತಿಥಿಗಳೂ ಬರುವವರಿದ್ದರು. ಕಿರ್ಲೋಸ್ಕರವಾಡಿಯಲ್ಲಿ ಇದು ದೊಡ್ಡ ಸಮಾರಂಭ. ಆದುದರಿಂದ ಆ ಪ್ರಮಾಣದಲ್ಲಿಯೇ ಅದರ ಸಿದ್ಧತೆಯು ನಡೆಯಿತು.

ಜೂನ ೧೧-೧೯೫೭ ಕ್ಕೆ ಲಗ್ನದ ಮುಹೂರ್ತವು ನಿಶ್ಚಿತವಾಯಿತು. ಸಿದ್ಧತೆಗೆ ಒಂದು ತಿಂಗಳು ಮಾತ್ರವಿದ್ದಿತು. ಇಂತಹ ಯಾವುದೇ ಉತ್ಸವವನ್ನು ಕಿರ್ಲೋಸ್ಕರವಾಡಿಯಲ್ಲಿ ಮಾಡಬೇಕಾದಾಗ ರಾಯರು ಒಂದು ಪದ್ಧತಿಯನ್ನು ಅನುಸರಿಸುತ್ತಿದ್ದರು. ಅದರಂತೆ ಈ ಸಮಾರಂಭಕ್ಕಾಗಿ ಒಂದು ಸಮಿತಿಯು ನಿಯಮಿಸಲ್ಪಟ್ಟು, ಎಲ್ಲ ವ್ಯವಸ್ಥೆಯನ್ನು ಅದರ ಕಡೆಗೆ ಒಪ್ಪಿಸಲಾಯಿತು. ಈ ಸಮಿತಿಯು ಭಾವೀ ಕಾರ್ಯದ ರೂಪ-ರೇಷೆಗಳನ್ನು ಗೊತ್ತುಮಾಡಿತು. ಅಲ್ಲಿಯೇ ಶಂತನುರಾಯನು ಇದ್ದನು. ಆಗ ಅವನು "ನಿಮ್ಮ ಕಾರ್ಯವು ನಡೆಯಲಿ. ಆದರೆ ಸಮಾರಂಭವು ಆಡಂಬರವಿಲ್ಲದೆ ಸಾಗಲಿ. ನಾನು ಬಾಸಿಂಗವನ್ನು ಮಾತ್ರ ಕಟ್ಟಿಕೊಳ್ಳತಕ್ಕವನಲ್ಲವೆಂಬುದನ್ನು ನಿಮಗೆ ಮೊದಲೇ ಹೇಳಿ ಇಡುವೆ" ಎಂದನು.

ಅದಕ್ಕೆ ಕೂಡಲೇ ಉತ್ತರ ದೊರೆಯಿತು. "ಈ ವಿಷಯದಲ್ಲಿ ನಿಮ್ಮ ಸಲಹೆ ನಮಗೆ ಬೇಡ. ಹೆಣ್ಣನ್ನು ನಿಶ್ಚಯಿಸುವದು ಮಾತ್ರ ನಿನ್ನ ಕೆಲಸ. ಅದನ್ನು ನೀನು ಮಾಡಿರುವೆ. ಈಗ ನಾವು ನಮ್ಮ ಕೆಲಸವನ್ನು ನಮ್ಮ ಇಚ್ಛೆಯಂತೆ ಮಾಡುವವರು. ಇದು ಅಮೇರಿಕೆಯಲ್ಲ, ಹಿಂದುಸ್ಥಾನವಿದೆ, ತಿಳಿಯಿತೇ ರಾಜಶ್ರೀಯವರೇ."

ಸಮಾರಂಭದ ಮಾರ್ಗದರ್ಶಕರು ಶಂಕರರಾಯರು. ವ್ಯವಸ್ಥಾಪಕರು ಅನಂತರಾಯರು. ಕೋಶಾಧ್ಯಕ್ಷರು ಮಂಗೇಶರಾಯರು. ಅತಿಥಿಸತ್ಕಾರದ

ಪ್ರಮುಖರು ಕೆ. ಕೆ. ಮತ್ತು ಅವರ ಸಹಾಯಕ್ಕೆ ಗಣಪತಿರಾವ ವಿಜಾಪೂರ, ನಾಂಬರಾವ ದರ್ಶನೆ, ರಾ. ಗ. ಮೋಘೆ, ಠಾಕೂರ ಹಾಗೂ ರಾಮಕೃಷ್ಣ ಜಾಂಭೇಕರ. ಅವರ ಕೈಯ್ಯಲ್ಲಿ ಅವಶ್ಯವಿದ್ದಷ್ಟು ಸ್ವಯಂಸೇವಕರನ್ನು ಕೊಡಲಾಯಿತು. ಆಮಂತ್ರಣ ಹಾಗೂ ಪತ್ರವ್ಯವಹಾರ, ಮಂಟಪ ಮತ್ತು ಸಭಾಸ್ಥಾನ, ಊಟ–ಉಪಹಾರ, ಧಾರ್ಮಿಕ ಕೃತ್ಯಗಳು, ಕೋಠಿ, ಅತಿಥಿಗಳ ವ್ಯವಸ್ಥೆ, ನೀರು ಹಾಗೂ ದೀಪಗಳ ವ್ಯವಸ್ಥೆ, ವಾಹನಗಳ ಅನುಕೂಲತೆ, ಮನರಂಜನೆ ಹಾಗೂ ಕೌಟುಂಬಿಕ ಸಮ್ಮೇಲನ. ಹೀಗೆ ಸಮಾರಂಭದಲ್ಲಿಯ ಬೇರೆ ಬೇರೆ ಕಾರ್ಯಗಳನ್ನು ವಿಚಾರ ಮಾಡಿ ಬೇರೆ ಬೇರೆ ಜನರಿಗೆ ಒಪ್ಪಿಸಲ್ಪಟ್ಟಿತು. ಮೇಲ್ವಿಚಾರಣೆಗಾಗಿ ಒಂದು ಚಿಕ್ಕ ಕಚೇರಿಯನ್ನು ಪ್ರಾರಂಭಿಸಲಾಯಿತು.

ಕಿರ್ಲೋಸ್ಕರ ಮನೆತನದ ಕುಲದೈವತವು ವಿಜಯಾದುರ್ಗಾ. ಇದು ಗೋವೆಯಲ್ಲಿ "ಕೇರಿ" ಎಂಬ ಗ್ರಾಮದಲ್ಲಿದೆ ಈ ದೇವಾಲಯ. ಕಿರ್ಲೋಸ್ಕರ ಮನೆತನವು ಗೋವೆಯಿಂದ ಬಂದುದು ಎಂಬುದಕ್ಕೆ ಇದೊಂದು ಪ್ರಬಲವಾದ ಆಧಾರ. ಈ ಕುಲದೇವತೆಯನ್ನು ಆವ್ಹಾನಿಸಿ ಆಮಂತ್ರಣ ಪತ್ರಿಕೆಗಳು ಹೊರಟು, ಕುಟುಂಬದ ಹಿರಿಯರಾದ ರಾಮೂ ಅಣ್ಣಾರವರ ಅಂಕಿತವು ಲಗ್ನಪತ್ರಕ್ಕೆ ಹಾಕಲ್ಪಟ್ಟಿತು.

ಯೋಗಾಯೋಗವೆಂದರೆ ರಾಮೂಅಣ್ಣಾನ ಮೂರನೆಯ ಮಗನಾದ ಕೇಶವರಾಯನ ಲಗ್ನವೂ ಇದೇ ವೇಳೆಯಲ್ಲಿಯೇ ನಿಶ್ಚಯ ಮಾಡಲ್ಪಟ್ಟಿತು. ಶ್ರೀ ನೀಲಕಂಠರಾವ ಪುಸಾಳಕರರ ಎರಡನೆಯ ಮಗಳಾದ ಮಾಲೂತಾಯಿಯನ್ನು ಕೇಶವರಾಯನಿಗೆ ಕೊಡುವದು ನಿಶ್ಚಯವಾಯಿತು. ರಾಮೂಅಣ್ಣಾನ ಮೊದಲನೆಯ ಮಗಳು ಸೌಭಾಗ್ಯವತಿ ಇಂದಿರಾ ಇವಳು ಅನಂತರಾವ ಫಳನೀಕರರ ಹೆಂಡತಿ. ಮಾಲೂತಾಯಿಯು ಇವರ ಮನೆಯಲ್ಲಿಯೇ ಬೆಳೆದು ದೊಡ್ಡವಳಾಗಿದ್ದಳು. ನಗುಮೊಗದ ಚಪಲ ಹುಡುಗಿಯೆಂದು ಎಲ್ಲರೂ ಆಕೆಯನ್ನು ವರ್ಣಿಸುತ್ತಿದ್ದರು. ಕೇಶವರಾಯನು ಇಂಜನಿಯರನೆಂದು ಕಾರಖಾನೆಯಲ್ಲಿ ಎರಡು ವರ್ಷಗಳಿಂದ ಕೆಲಸಮಾಡುತ್ತಿದ್ದನು. ಅರ್ಥಾತ್ ಅನಂತರಾಯನು ಅವನ ಮಾವ. ದಿನಾಲು ಕೇಶವರಾಯನು ಅವರ ಮನೆಗೆ ಬಂದು ಹೋಗುತ್ತಿದ್ದನು. ಮಾಲೂತಾಯಿಗೆ ಚೇಷ್ಟೆ ಮಾಡುತ್ತಿದ್ದನು. ಆದರೆ ಮಾಲೂತಾಯಿಯು ತನ್ನ ಅರ್ಧಾಂಗಿ ಎಂದು ನಿಶ್ಚಿತವಾದೊಡನೆಯೇ ಇಬ್ಬರೂ ಒಬ್ಬರಿಗೊಬ್ಬರು ನಾಚಹತ್ತಿದರು.

ಲಗ್ನದಲ್ಲಿ ಊಟ-ಉಡಿಗೆಯು ಹಾಗೂ ಫಲಹಾರದ ವ್ಯವಸ್ಥೆಯು ಸ್ವಾಭಾವಿಕವಾಗಿ ಹೆಣ್ಣುಮಕ್ಕಳ ಕಡೆಗೆ ಇರುತ್ತದೆ. ಲಗ್ನ ಸಮಾರಂಭ ವಲ್ಲಿಯೂ ಕೂಡ ಅವರಿಗೆ ವಿರಾಮವಿರದೆ ಕೆಲಸದ ಒತ್ತಡವಿರುತ್ತದೆ. ಆದರೆ ವ್ಯವಸ್ಥಾಪಕರು ಒಬ್ಬ ಒಳ್ಳೆ ಅಡಿಗೆಯವನನ್ನು ಹುಡಿಕಿ, ಅಡಿಗೆಯ ಹೊಣೆ ಗಾರಿಕೆಯನ್ನೆಲ್ಲ ಅವನಿಗೆ ಒಪ್ಪಿಸಿದರು. ಅದರಂತೆಯೇ ಚಹಾ, ಉಪಹಾರ ಕ್ಕಾಗಿ ಒಂದು ಉಪಹಾರದ ಮಂದಿರವನ್ನೇ ತೆರೆದರು. ಇದರಿಂದ ಸ್ತ್ರೀಯರು ಅವರನ್ನು ಹಾಡಿ ಹರಸಿದರು,

ಹಂದರದ ಸಿದ್ಧತೆಯಾಯಿತು. ಸಮಾಜ ಮಂದಿರವು ಶೃಂಗರಿಸಲ್ಪಟ್ಟಿತು. ಸಾಂಗ್ಲಿ, ಮಿರಜಿಯ ರಾಜೇಸಾಹೇಬರ ಕಡೆಯಿಂದ ತಂದ ಏಳೆಂಟು ಡೇರೆಗಳನ್ನು ಬಯಲಿನಲ್ಲಿ ಹೊಡೆಯಲಾಯಿತು. ಬಜಂತ್ರಿಯ ಮಂಜುಳ ಧ್ವನಿಯು ಕಿರ್ಲೋಸ್ಕರವಾಡಿಯಲ್ಲೆಲ್ಲ ಕೇಳಬರಹತ್ತಿತು.

ರಾಮೂಅಣ್ಣಾನನ್ನು ಕರೆತರಲು ಹೋದ ಕಾರಿನಲ್ಲಿಯೇ ಕಕ್ಕಿಯು ಮಕ್ಕಳೊಡನೆ ಔಂಧದಿಂದ ಬಂದಳು. ರಾಮೂಅಣ್ಣಾ ಅವರು ಕಾರಖಾನೆಯ ಕೆಲಸದಿಂದ ನಿವೃತ್ತರಾದ ನಂತರ, ಔಂಧದಲ್ಲಿ ಮನೆಮಾಡಿಕೊಂಡಿರಹತ್ತಿದ್ದರು. ರಾಜಾಸಾಹೇಬರ ಪ್ರೀತಿಯು ಅವರ ಮೇಲೆ ಬಹಳ. ರಾಮೂಅಣ್ಣಾನ ಸ್ವಭಾವ ಬಹು ಸಾತ್ವಿಕ ಮತ್ತು ಪರೋಪಕಾರಿ. ಪ್ರತಿಯೊಬ್ಬರ ಕೆಲಸದ ಬಗ್ಗೆ ಅವರಿಗೆ ತುಂಬಾ ಕೌತುಕ. ಅವರಿಗೆ ೬೮ ವರ್ಷಗಳಾಗಿದ್ದರೂ ಅವರ ಉತ್ಸಾಹವು ಮಾತ್ರ ತರುಣರಷ್ಟೇ ಇದ್ದಿತು. ಆದ್ದರಿಂದ ಅವರ ವಿಷಯವಾಗಿ ಚಿಕ್ಕ-ದೊಡ್ಡವರಿಗೆಲ್ಲ ಆದರವೆನಿಸುತ್ತಿದ್ದಿತು. ರಾಮೂಅಣ್ಣನ ಹೆಸರು ತೆಗೆದುಕೊಂಡೊಡನೆಯೇ ಲಕ್ಷ್ಮಣರಾಯರು "ಇಂದಿನ ಕಿರ್ಲೋಸ್ಕರ ಕಾರಖಾನೆಯು ನನ್ನ ಉದ್ಯೋಗದಿಂದ ಇಷ್ಟು ದೊಡ್ಡದಾಗಿದೆ ಎಂದು ಅನ್ನುವದಕ್ಕಿಂತ ರಾಮೂಅಣ್ಣನ ಕಳಕಳಿಯ ಪ್ರೋತ್ಸಾಹದ ಮೂಲಕ ಅದಕ್ಕೆ ಈ ಸ್ಥಿತಿಯು ಪ್ರಾಪ್ತವಾಗಿದೆ ಎನ್ನುವದು ಹೆಚ್ಚು ಯೋಗ್ಯವು" ಎಂದು ಅನ್ನುತ್ತಿದ್ದರು. ಯಾವ ಕುಟುಂಬಕ್ಕೆ ಇಂತಹ ಶುದ್ಧ ಅಂತಃಕರಣದ, ಪ್ರೇಮದ, ಕರ್ತವ್ಯದಕ್ಷರಾದ ಹಿರಿಯರ ಛತ್ರವು ದೊರೆಯುವದೋ ನಿಜವಾಗಿ ಅವರ ಭಾಗ್ಯವು ದೊಡ್ಡದೆಂದೇ ಹೇಳಬೇಕು.

ಸೊಲ್ಲಾಪುರದಿಂದ ಡಾಕ್ಟರ ವಾಸುದೇವರಾವ ಮತ್ತು ಲಕ್ಷ್ಮಣರಾವ ಟಿಕೇಕರ ಮತ್ತು ಹೈದ್ರಾಬಾದದಿಂದ ಡಾಕ್ಟರ ಗಂಗಾಧರಪಂತ ಹಾಗೂ



ಶಂತನು ಹಾಗು ಕೇಶವನ ವಿವಾಹ, ೧೯೨೭



ನೂಲಿನ ವರ್ಗ, ೧೮೩೨



ರಾಜಾರಾಮ, ಶಂತನು, ಸೌ. ರಾಧಾಬಾಯಿ



ಔಂಧದಲ್ಲಿ ರಾಧಾಬಾಯಿಯವರ ಸಂಜೆಯ ಕೆಲಸ, ೧೯೦೪

ಅವರ ಹೆಂಡತಿ ಮೊದಲಾದವರು ಬಂದರು. ಡಾಕ್ಟರ ವಾಸುದೇವರಾಯರು ಹೆಸರು ಪಡೆದ ಡಾಕ್ಟರರೆಂದು ಪ್ರಸಿದ್ಧರಿರದೆ, ಒಬ್ಬ ಸಮಾಜ ಸುಧಾರಕ, ಯಂತ್ರಜ್ಞ, ಕಲಾಪ್ರೇಮಿ, ವಿದ್ವಾಂಸರೆಂದು ಹೆಸರಾಗಿದ್ದರು. ಅವರ ಅಂತಃ ಕರಣವು ಬಹಳ ದೊಡ್ಡದು.

ಲಕ್ಷ್ಮಣರಾವ ಉರ್ಫ ಅಣ್ಣಾ ಟಿಕೇಕರ ಇವರು ಲೇಖಕರೆಂದು ಹೆಸರಾದ "ಧನುರ್ಧಾರಿ"ಗಳ ಚಿಕ್ಕ ತಮ್ಮ. ಅಣ್ಣಾನಿಗೆ ಶಿಕ್ಷಣ ಹಾಗೂ ವ್ಯವಸಾಯದ ಮಾರ್ಗದರ್ಶನವು ಡಾ|| ವಾಸುದೇವರಾಯರಿಂದ ದೊರೆತಿತ್ತು. ೧೯೦೦ ರಲ್ಲಿ ಕೈಮಗ್ಗದಿಂದ ಪ್ರಾರಂಭ ಮಾಡಿ ಮುಂದೆ "ಟಿಕೇಕರ ಟೆಕ್ಸ-ಟಾಯಿಲ್ ಮಿಲ್' ಎಂಬ ಹೆಸರಿನ ದೊಡ್ಡ ಕಾರಖಾನೆ ತೆರೆದರು. ಅದಕ್ಕಾಗಿ ಔದ್ಯೋಗಿಕ ಊರನ್ನೊಂದು ನಿರ್ಮಾಣ ಮಾಡಿದರು. ಆದ್ದರಿಂದಲೇ ಅವರ ಹೆಸರನ್ನು ಆದ್ಯ ಮಹಾರಾಷ್ಟ್ರೀಯ ಕಾರಖಾನೆದಾರರಲ್ಲಿ ಎಣಿಕೆ ಮಾಡಬೇಕು. ಅವರ ಸ್ವಭಾವವು ಉಪಕಾರಿ ಹಾಗೂ ವಿನೋದಿ. ಅವರು ಇದ್ದಲ್ಲೆಲ್ಲ ನಗೆ ಗಡಲು. ಅವರಂತೆ ಅವರು ಮನಸ್ಸು ಕೂಡ ಅಷ್ಟೇ ಉತ್ಸಾಹಿ. ದೊಡ್ಡವರಲ್ಲಿ ದೊಡ್ಡವರು, ಚಿಕ್ಕವರಲ್ಲಿ ಚಿಕ್ಕವರು ಆಗಿ ಎಲ್ಲರಿಗೂ ಬೇಕಾಗಿದ್ದರು. ಅವರಿಲ್ಲದೆ ಯಾವುದೇ ಸಮಾರಂಭಕ್ಕೂ ಕಳೆ ಬರುತ್ತಿದ್ದಿಲ್ಲ.

ಧಾರವಾಡದಿಂದ ಶಂಭೂರಾವ ಹಾಗೂ ಶ್ರೀಪಾದರಾವ ಕಿರ್ಲೋಸ್ಕರರು ತಮ್ಮ ಕುಟುಂಬದೊಡನೆ ಬಂದರು. ರಿಯಾಸತ್ಕಾರರಾದ ಸರದೇಸಾಯಿ ಬಂಧುಗಳು ಮುಂಬೈಯಿಂದ ಬಂದರು. ಸರದೇಸಾಯಿ, ಕಿರ್ಲೋಸ್ಕರ, ಟಿಕೇಕರ, ಜಾಂಭೇಕರ, ಫಳನೀಕರ, ಟೇಂಬೆ ಇವರೆಲ್ಲರೂ ಒಬ್ಬರಿಗೊಬ್ಬರು ಸಮೀಪದ ಆಪ್ತರು. ಅಂದಮೇಲೆ ಈ ಎಲ್ಲ ಜನ ಕೂಡಿದ ಕಿರ್ಲೋಸ್ಕರ ವಾಡಿಯಲ್ಲಿ ಸಮಾರಂಭವು ಹೇಗೆ ಸಾಗಬೇಕು. ಬೇಗರಾದ ಫಾಟಕ ಕುಟುಂಬವು ಒಂದುದಿನ ಮೊದಲೇ ಬಂದಿತ್ತು.

ಲಕ್ಷ್ಮಣರಾಯರು ಇಷ್ಟು ಪ್ರಖ್ಯಾತರಾಗಿದ್ದರೂ ತಮ್ಮ ಅಣ್ಣ–ತಮ್ಮಂದಿರೊಡನೆ, ಅತ್ತಿಗೆ–ನಾದಿನಿಯರೊಡನೆ ಅತ್ಯಂತ ಸೌಜನ್ಯಪೂರ್ಣರಾಗಿ ನಡೆದುಕೊಳ್ಳುತ್ತಿದ್ದರು. ಅವರಲ್ಲಿ ಆಢ್ಯತೆಯ ಲವಲೇಶವೂ ಕೂಡ ಇರಲಿಲ್ಲ. ಅವರ ಅಕ್ಕ, ರಾಮೂಅಣ್ಣಾ, ಹಾಗೂ ಡಾ|| ವಾಸುದೇವರಾಯರು ಅವರನ್ನು "ಏ, ಲಖೂ" ಎಂದೇ ಕೂಗುತ್ತಿದ್ದರು. ಅವರೂ ಕೂಡ ಹಿರಿಯರನ್ನು ಹಾಗೇ ಸಂಬೋಧಿಸುತ್ತಿದ್ದರು. ಈ ಹಳೆಯ ಜನರೆಲ್ಲ ಹೀಗೆ ಏಕವಚನದಿಂದ

ಮಾತಾಡುವದನ್ನು ಕಂಡು ಹೊಸ ಜನರಿಗೆ ಕೌತುಕವಾಗುತ್ತಿತ್ತು. ಅವರಲ್ಲಿ ಎಷ್ಟು ಆತ್ಮೀಯತೆ ಇತ್ತೆಂಬುದು ಇದರಿಂದ ವ್ಯಕ್ತವಾಗುವದು.

ಬೇರೆ ಬೇರೆ ಸ್ಥಳಗಳಿಂದ ಕೂಡಿದ ಈ ಜನರಲ್ಲಿ ಹರಟೆ–ಚೇಷ್ಟೆ, ಹಾಸ್ಯ–ವಿನೋದಗಳಿಗೆ ಏನು ಕೊರತೆ! ಅದರಲ್ಲಿಯೂ ಲಗ್ನದ ನಿಮಿತ್ತದಿಂದ ಒಂದು ವಾರದ ವರೆಗೆ ಪ್ರಕಾಶಿತವಾಗುತ್ತಿದ್ದ ಅಂತರ್ಪಟವಂತೂ ವಿನೋದಕ್ಕೆ ಕಳಸವಿಟ್ಟಿತು.

ಮದುಮಕ್ಕಳ ಬಿನದದ ಆಟಗಳನು
ಹದನು ಬೆಡಗುಗಳ ನೋಟ।
ಮದುವೆಯೊಂದಿಗಿನ ಮೋಜುಗಳೆಲ್ಲವ
ಕಥಿಸುವದಿದು ಅಂತರ್ಪಾಟ॥

ಇದೇ ಆ ದೈನಿಕ ಪತ್ರದ ಗುರಿ. ಹಾಗೂ ಉದ್ದೇಶ. "ಲಗ್ನದ ಉಂಡಿಯನ್ನು ತಿಂದು ಮಂದವಾದ ಬುದ್ಧಿಗೆ ತೀಕ್ಷ್ಣತೆಯನ್ನು ತರುವದೂ, ಲಗ್ನದಲ್ಲಿಯ ಆಗು–ಹೋಗುಗಳ ರಸಭರಿತವಾದ ವರ್ಣನೆ ಮಾಡುವದೂ ಹಂದರದಲ್ಲಿಯ ಹೊಸ ಹೊಸ ಶೋಧಗಳನ್ನು ಪ್ರಕಟಿಸುವದೂ ಇತ್ಯಾದಿ ಇತ್ಯಾದಿ" ಹೀಗೆ ಪ್ರಸಿದ್ಧಿಸಿದ್ದರಿಂದ ಅಂತರ್ಪಟದ ಅಂತರಂಗದ ಬಗ್ಗೆ ಹೆಚ್ಚಿಗೆ ಬರೆಯುವ ಕಾರಣವಿಲ್ಲ. ಆ ಅಂಕು ಹೊರಬಿದ್ದೊಡನೆ ಎಲ್ಲರೂ ಮುಗಿಬೀಳುತ್ತಿದ್ದರು.

ಇದಲ್ಲದೆ ಕೂಡಿದ ಕರ್ನಾಡಿ ಜನಕ್ಕೆ ಹಾಗೂ ಆಮಂತ್ರಿತರಿಗೆ ವೇಳೆಯು ಆಲ್ಹಾದಕರವಾಗಿ ಹೋಗುವದಕ್ಕಾಗಿ "ಮನೋರಂಜನ ಮಹಾಲ" ಎಂಬ ಹೆಸರಿನ ಸ್ವತಂತ್ರ ಹಂದರವನ್ನು ಹಾಕಿ, ವಿವಿಧ ಮನರಂಜನ ಕಾರ್ಯಕ್ರಮಗಳನ್ನು ಅಲ್ಲಿ ಏರ್ಪಡಿಸಲಾಗಿದ್ದಿತು. ಅಲ್ಲಿ ಪೇಂಟರರ ನೇತಾಜಿ ಫಿಲ್ಮು, ನಾನೀ ವಡೆಕರರ ಚೇಷ್ಟೆ, ಮಾಸ್ತರ ಕೃಷ್ಣಾರವರ ಗಾಯನಗಳು ನಡೆದವು.

ಈ ಎಲ್ಲ ಕಾರ್ಯಕ್ರಮಗಳು ಗೊತ್ತುಪಡಿಸಿದಂತೆ ವ್ಯವಸ್ಥಿತವಾಗಿ ನಡೆದವು. ಆದರೆ ಲಗ್ನಕ್ಕೆ ಜನ ಮಿತಿಮೀರಿ ಬಂದುದರಿಂದ ಎಲ್ಲರ ವ್ಯವಸ್ಥೆಯನ್ನು ಸಮಾಜ ಮಂದಿರದಲ್ಲಿ ಮಾಡಲು ಶಕ್ಯವಾಗಲಿಲ್ಲ. ಎಷ್ಟೋ ಜನರ ವ್ಯವಸ್ಥೆಯನ್ನು ಹೊರಗೇ ಮಾಡಬೇಕಾಯಿತು.

ಅಕ್ಷತೆಗೆ ಔಂಧ, ಸಾಂಗಲಿ, ಈಚಲಕರಂಜಿಗಳ ರಾಜೇಸಾಹೇಬರೂ ಚಾಪಳದ ಶ್ರೀ ಸ್ವಾಮಿ ಮಹಾರಾಜರೂ ಶ್ರೀ ಜಗನ್ನಾಥ ಮಹಾರಾಜರೂ

ಸರದಾರ ಭಾವೂಸಾಹೇಬ ಪಾಟಣಕರ, ಪಂಡಿತ ಸಾತವಳೇಕರ, ರಾವಬಹಾದ್ದೂರ ಕಾಳೆ, ವಾಗ್ಭಟ ದೇಶಪಾಂಡೆ, ಓಗಲೇ ಬಂಧುಗಳು, ಕೆ. ಬಿ. ಜೋಶಿ, ಜಾಲನದ ನಾಗೋರಿ ಬಂಧುಗಳು, ಕಾದಂಬರಿಕಾರರಾದ ನಾ. ಹ. ಆಪ್ಟೆ ಮೊದಲಾದ ಜನರು ಉಪಸ್ಥಿತರಿದ್ದಮೇಲೆ ಸಮಾರಂಭಕ್ಕೆ ಎಂತಹ ಅಪೂರ್ವ ಕಳೆ ಏರಿತ್ತೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಉಂಡೆಗಳಿಂದ ಸೀಪುಗಳ ಖೋಲಿಗಳೇ ತುಂಬಲ್ಪಟ್ಟಿದ್ದವು. ಹಂದರವು ರಸ್ತೆಯಲ್ಲೆಲ್ಲ ಹಾಕಲ್ಪಟ್ಟಿತ್ತು. ಅದರಲ್ಲಿ ಮೊದಲು ಗಡಿಗೆ ನೀರು, ಅನಂತರ ಊಟಗಳಾದವು. ರಂಗೋಲಿ, ಹಾಡು, ಶ್ಲೋಕ, ಹಾಸ್ಯ–ವಿನೋದ, ತುತ್ತು ಹಾಕಿಸುವದು ಇವೇ ಮೊದಲಾದವುಗಳಿಂದ ಪಂಕ್ತಿಯು ಶೋಭಿಸುತ್ತಿತ್ತು. ಸಾಕ್ಷಾತ್ ಅನ್ನಪೂರ್ಣಾದೇವಿಯೋ ಎಂಬಂತೆ ಸೌ|| ಮಮ್ಮಾ (ರಾಧಾಬಾಯಿ) ಳು ಊಟಕ್ಕೆ ಕುಳಿತವರ ಸಮಾಚಾರವನ್ನು ತೆಗೆದುಕೊಳ್ಳಲು ತಿರುಗಾಡುತ್ತಿದ್ದಳು. ಉಪಸ್ಥಿತರಿದ್ದ ಜನ ಆ ಹೆಣ್ಣುಮಗಳ ಭಾಗ್ಯವನ್ನು ಕೊಂಡಾಡುತ್ತಿದ್ದರು. ಹಳ್ಳಿಗಳ ಕೆಲಸಗಾರರ ಪಂಕ್ತಿಗಳಲ್ಲಿ ಆಗ್ರಹಕ್ಕೆ ಉಕ್ಕೇರುತ್ತಿತ್ತು. ಅಲ್ಲಿಯ ಮೋಜೇ ಬೇರೆ. ಸ್ವಲ್ಪದರಲ್ಲಿ ಹೇಳಬೇಕೆಂದರೆ, ಅಣ್ಣಾಸಾಹೇಬರು ನಾರದರ ಮಾತಿನಲ್ಲಿ ವರ್ಣಿಸಿದಂತೆ "ಇಂಥ ಮೋಜು ನೋಡಲು ಮಾನವರಿಗೆ ದೊರೆಯಲಾರದು" ಎಂಬಂತೆ ಕಿರ್ಲೋಸ್ಕರವಾಡಿಯಲ್ಲಿಯ ಈ ಸಮಾರಂಭವು ನಡೆಯಿತು.

ಇಷ್ಟೆಲ್ಲ ವರ್ಣಿಸಿದರೂ ವಿಶಿಷ್ಟಪೂರ್ಣವಾದ ಒಂದು ಹೊಸ ಕಾರ್ಯಕ್ರಮವನ್ನು ಬುದ್ಧಿಪೂರ್ವಕ ಹಿಂದೆ ಇಟ್ಟಿದ್ದೇವೆ. ಅದೇ 'ಕಿರ್ಲೋಸ್ಕರ ಸಮ್ಮೇಲನ' ಲಗ್ನಕ್ಕೆ ಆಪ್ತೇಷ್ಟರೆಲ್ಲರೂ ಬರುವರು. ಅಕ್ಷತೆ ಹಾಕಿ ಉಂಡು ಹರಟೆ ಹೊಡೆದು ಮರಳುವರು. ಆದರೆ ಲಗ್ನಕ್ಕೆ ಬಂದವರಲ್ಲಿ ಯಾರು ಯಾರಿಗೆ ಏನಾಗಬೇಕು? ಎಂಬುದನ್ನು ಯಾರೂ ವಿಚಾರಮಾಡುವದಿಲ್ಲ. ಸಮಾರಂಭಕ್ಕೆ ಬಂದವರಲ್ಲಿ ಪರಸ್ಪರ ಪರಿಚಯವಾಗಬೇಕು, ಆತ್ಮೀಯತೆಯು ಬೆಳೆಯಬೇಕು, ಎಂಬುದೇ ಈ ಸಮ್ಮೇಲನಕ್ಕೆ ಕಾರಣ. ಇದನ್ನು ಸಮರ್ಥಿಸುವ ಒಂದು ಪ್ರಸಂಗವೂ ಈ ಸಮಯದಲ್ಲಿ ಒದಗಿತು.

ಈ ಪ್ರಸಂಗವು ಒದಗಿದುದು ಪುಣೆಯ ಸ್ಟೇಶನ್ನಿನಲ್ಲಿ. ಅಲ್ಲಿ ಹೈದರಾಬಾದದಿಂದ ಬಂದ ಕೆಲ ಪ್ರವಾಸಿಕರು ಗಾಡಿಯನ್ನು ಬದಲಿಸಿ, ಎಂ ಎಸ್.ಎಮ್. ರೇಲ್ವೆಗೆ ಹತ್ತಿದರು. ಅವರು ಮೊದಲು ಬಂದುದರಿಂದ ಅವರಿಗೆ ಸಾಕಷ್ಟು ಸ್ಥಳ

ದೊರೆಯಿತು. ಇಷ್ಟರಲ್ಲಿ ಮುಂಬೈಯ ಗಾಡಿಯಿಂದ ಇಳಿದ ಜನ ಈ ಡಬ್ಬಿಗೆ ಬಂದು ಸ್ಥಳ ದೊರಕಿಸಲು ಯತ್ನಿಸಿತು. ಏಕೆಂದರೆ ಅಷ್ಟು ಹೊತ್ತಿಗೆ ಉಳಿದ ಡಬ್ಬಿಗಳೆಲ್ಲ ತುಂಬಿಹೋಗಿದ್ದವು. ಈ ಹೈದರಾಬಾದಕರರು ಮುಂಬೈಕರರಿಗೆ ಸಮಾಧಾನದಿಂದ ಸ್ಥಳ ಮಾಡಿಕೊಡುವರೇ! ಆಗ ಒಳಗಿನ ಹಾಗೂ ಹೊರಗಿನ ಜನರಲ್ಲಿ ವಾಗ್ಯುದ್ಧವಾದ ನಂತರ ಹೊರಗಿನ ಜನಕ್ಕೆ ಒಳಗೆ ಸ್ಥಳ ದೊರೆಯಿತು. ಈ ಎರಡೂ ಗುಂಪುಗಳಲ್ಲಿ ಚಿಕ್ಕ ಮಕ್ಕಳಿದ್ದರು. ಅವರಲ್ಲಿ ಮೊದಲು ಮಾತು-ಕತೆಗಳು ಪ್ರಾರಂಭವಾದವು. ಆ ಮಾತುಗಳಿಂದ ಈ ಹೊರಗಿನ ಜನ ಮುಂಬೈಯವರು ಇರದೆ ಧಾರವಾಡದವರಿರುವರು. ಅವರು ಮುಂಬೈಗೆ ಒಂದು ಲಗ್ನಕ್ಕೆ ಹೋಗಿ, ಕಿರ್ಲೋಸ್ಕರವಾಡಿಯಲ್ಲಿಯ ಲಗ್ನಕ್ಕೆ ಇಳಿದು ಮುಂದೆ ಹೋಗುವವರಿದ್ದಾರೆಂದು ತಿಳಿಯಿತು. ಹೈದರಾಬಾದದ ಮಂಡಳಿಯು ಕೂಡ ಲಗ್ನಕ್ಕಾಗಿಯೇ ಕಿರ್ಲೋಸ್ಕರವಾಡಿಗೆ ಹೊರಟಿತ್ತು. ಇದರಲ್ಲಿ ಆಶ್ಚರ್ಯದ ಸಂಗತಿ ಎಂದರೆ ಇಬ್ಬರೂ ಕಿರ್ಲೋಸ್ಕರರೇ. ಮತ್ತು ತೀರ ಸಮೀಪದ ಬಂಧುಗಳು. ಈ ವಸ್ತುಸ್ಥಿತಿಯು ತಿಳಿದೊಡನೆಯೆ ಇಬ್ಬರಿಗೂ ಎಷ್ಟು ಆಶ್ಚರ್ಯ ಹಾಗೂ ಆನಂದವಾಗಿರಬೇಕು! ಒಂದು ದೊಡ್ಡ ಕುಟುಂಬದ ಜನರು ಮೇಲಿಂದ ಮೇಲೆ ಭೆಟ್ಟಿಯಾಗದಿದ್ದರೆ ಮತ್ತು ಹೋಗಿ ಬರುವ ಸಂಬಂಧವು ತಪ್ಪಿದರೆ, ಆ ಕುಟುಂಬದಲ್ಲಿಯ ಗುರುತು ಹೇಗೆ ಮರೆಯುವದೆಂಬುದರ ಬಗ್ಗೆ ಇದೊಂದು ಒಳ್ಳೇ ಉದಾಹರಣೆಯಾಗಿದೆ.

ಈ ಸಮ್ಮೇಲನವು ಬೆಳಿಗ್ಗೆ ಇಡಲ್ಪಟ್ಟಿತ್ತು. ಹಿರಿಯರು ಚಿಕ್ಕವರೆಲ್ಲ ಸೇರಿ ೫೦–೬೦ ಜನ ಇದರಲ್ಲಿ ಭಾಗವಹಿಸಿದ್ದರು. ರಿಯಾಸತ್ಕಾರರಾದ ನಾನಾ ಸಾಹೇಬ ಸರದೇಸಾಯಿಯವರು ಇದರ ಅಧ್ಯಕ್ಷತೆ ವಹಿಸಿದ್ದರು. ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ "ಪ್ರತಿ ರಾಷ್ಟ್ರಕ್ಕೆ ಹೇಗೆ ಇತಿಹಾಸವಿರುವದೋ ಹಾಗೆಯೇ ಪ್ರತ್ಯೇಕ ಕುಲಕ್ಕೂ ಕುಟುಂಬಕ್ಕೂ ಒಂದು ಇತಿಹಾಸವಿದೆ. ಅಥವಾ ಇಂಥ ದೊಡ್ಡ ಕುಟುಂಬಗಳ ಇತಿಹಾಸ ಕೂಡಿ ಯಾವುದೇ ದೇಶದ ಇತಿಹಾಸವು ನಿರ್ಮಾಣವಾಗುತ್ತಿದೆ. ಆದುದರಿಂದ ಪ್ರತಿಯೊಬ್ಬರಿಗೆ ತಮ್ಮ ದೇಶದ ಇತಿಹಾಸವು ಗೊತ್ತಿರುವದು ಎಷ್ಟು ಅವಶ್ಯವಿದೆಯೋ ಅಷ್ಟೇ ತಮ್ಮ ಮನೆತನದ ಇತಿಹಾಸದ ಜ್ಞಾನವಿರುವದು ಅವಶ್ಯವಿದೆ. ಇತಿಹಾಸವು ಒಂದು ದೊಡ್ಡ ಸಂಪತ್ತು. ಮತ್ತು ದೊಡ್ಡ ಶಕ್ತಿ. ಆದ್ದರಿಂದ ಅದು ನಮ್ಮ ಬೆನ್ನ ಹಿಂದೆ ಇದ್ದರೆ, ಅದರ ಉಪಯೋಗವು ನಮಗೆ ಆಗದೆ ಇರದು. ನಾವು ಇಂಥ

ಬಗ್ಗೆ ನಿಮಿತ್ತದಿಂದ ಒಂದೆಡೆ ಕೂಡುತ್ತೇವೆ. ಆ ಪ್ರಸಂಗದಲ್ಲಿ ನಮ್ಮ ಹಳೆಯ ಜನರ ಬಾಯಿಂದ ನಮ್ಮ ಮನೆತನದ ಎಷ್ಟೋ ಸಂಗತಿಗಳನ್ನು ತಿಳಿದುಕೊಳ್ಳಲು ಒಂದು ಉತ್ತಮ ಸಂಧಿಯು ದೊರೆಯುತ್ತದೆ. ಅದರ ಉಪಯೋಗವನ್ನು ನಾವು ಮಾಡಿಕೊಳ್ಳಲೇಬೇಕು. ಅದರಿಂದ ನಮ್ಮಲ್ಲಿಯ ಪರಸ್ಪರ ಸಂಬಂಧವು ಹೆಚ್ಚು ಸ್ಪಷ್ಟವಾಗಿ ತಿಳಿದು ಐಕ್ಯ ಸಂವರ್ಧನಕ್ಕೆ ಒಳ್ಳೇ ಉಪಯೋಗವಾಗುವದು. ಈ ದೃಷ್ಟಿಯಿಂದ ಈ ಸಮ್ಮೇಲನದ ಕಲ್ಪನೆಯು ನನಗೆ ಅಭಿನಂದನೀಯವೆನಿಸುತ್ತದೆ" ಎಂದು ಮಾತನಾಡಿದರು.

ಈ ಸಮಾರಂಭದ ಪ್ರಾರಂಭವು, ಕೈಲಾಸವಾಸಿ ಕಾಶೀನಾಥಪಂತರು ಠಕ್ಕರು ಬಲಿ ತೆಗೆದುಕೊಂಡ ತಮ್ಮನಾದ ಕೃಷ್ಣಾಜಿಪಂತನ ಉದ್ದಿಶ್ಯವಾಗಿ ಬರೆದ ಪತ್ರದ ವಾಚನದಿಂದ ಪ್ರಾರಂಭವಾಯಿತು. ಈ ದುರ್ಘಟನೆಯು ಇತ್ತೀಚಿನ ಜನರಿಗೆ ಅಷ್ಟು ತಿಳಿದಿರಲಿಲ್ಲ. ಇದರಿಂದ ಕಾಶೀನಾಥಪಂತರ ಮೇಲೆ ಎಂತಹ ಕಠಿಣ ಪ್ರಸಂಗ ಒದಗಿತು ? ಅದನ್ನು ಕಾಶೀನಾಥಪಂತರು ಹೇಗೆ ಎದುರಿಸಿದರು ? ತಮ್ಮ ಕುಟುಂಬವನ್ನು ಹೇಗೆ ಪಾಲನ ಮಾಡಿದರು ? ಎಂಬುದರ ಕಲ್ಪನೆಯು ಶ್ರೋತೃಗಳಿಗೆ ಬಂದಿತು.

ಈ ಪ್ರಸಂಗದಲ್ಲಿ ಕೂಡಿದವರಲ್ಲಿ ಕೆಲವರು ಡಾಕ್ಟರರು, ಕೆಲವರು ಕಾರಖಾನೆದಾರರು, ಕೆಲವರು ಪೇನಶನ್‌ದಾರರು, ಕೆಲವರು ಸುಖವಸ್ತುಗಳು ಇದ್ದರೂ ಅವರು ಚಿಕ್ಕಂದಿನಲ್ಲಿ ಅನುಭವಿಸಿದ ಆಪತ್ತುಗಳ ಕಲ್ಪನೆಯು ಬಂದೊಡನೆಯೆ ಎಲ್ಲ ಜನರು ಅವರ ಕಡೆಗೆ ಅತ್ಯಂತ ವಿನಮ್ರತೆಯಿಂದ, ಆದರದಿಂದ, ನೋಡದೆ ಗತ್ಯಂತರವಿರಲಿಲ್ಲ.

ಆಮೇಲೆ ರಾಮೂಅಣ್ಣಾ, ವಾಸುದೇವರಾವ, ಶಂಭುರಾವ ಕಿರ್ಲೋಸ್ಕರ ಮೊದಲಾದವರು ಮೊದಲಿನ ಗುರ್ಲಹೊಸೂರ ಹಾಗೂ ಧಾರವಾಡದಲ್ಲಿಯ ಹಳೆಯ ದಿವಸಗಳ ಸಂಗತಿಗಳನ್ನು ಹಾಗೂ ಅವರಲ್ಲಿಯ ವಿನೋದದ ಸಂಗತಿಗಳನ್ನು ಹೇಳಿದರು. ಆ ದಿವಸಗಳಲ್ಲಿ ಸರ್ವರೂ ಒಬ್ಬರೊಬ್ಬರಿಗೆ ಹೇಗೆ ಸಹಾಯ ಮಾಡಿದರು. ಯಾರಿಗೂ ಕಡಿಮೆ ಬೀಳದಂತೆ ಹೇಗೆ ನೋಡಿಕೊಂಡರು ಎಂಬ ಸಂಗತಿಯನ್ನು ವರ್ಣಿಸುವಾಗ ಅನೇಕ ಜನರ ಕಣ್ಣುಗಳಲ್ಲಿ ನೀರುಬಂದವು. ಆದರಂತೆ ಮಾತಾಡುವವರ ಪರಿಸ್ಥಿತಿಯೂ ಆಯಿತು. ನಮ್ಮ ಅಣ್ಣಾಸಾಹೇಬ ಟಿಕೇಕರರಂತೂ ಹೆಣ್ಣುಗರಳಿನವರು. ಕುತ್ತಿಗೆಯು ಬಿಗಿದು ಬಂದುದರಿಂದ ಅವರ ಭಾಷಣವು ಅರ್ಧಕ್ಕೇ ನಿಂತಿತು. ಈ ಭಾಷಣದ

ಓಘದಲ್ಲಿ ಯಾರು ಯಾರ ಸಂಬಂಧಿಕರೆಂಬುದು ಪ್ರತಿಯೊಬ್ಬರಿಗೂ ತಿಳಿಯಿತು. ಕಾರ್ಯಕ್ರಮದಲ್ಲಿ ನಾಲ್ಕು ತಾಸುಗಳು ಹೇಗೆ ಹೋದವೆಂಬುದು ಯಾರಿಗೂ ತಿಳಿಯಲಿಲ್ಲ. ಈ ಸಮಯದಲ್ಲಿ ಪ್ರತಿಯೊಬ್ಬರಿಗೂ ಒಂದು ಅತ್ಯಂತ ಉತ್ಕಟ ಭಾವನೆಯ ಅನುಭವವು ಬಂದಿತಲ್ಲದೆ, ಅವರಿಗೆ ಹೊಸ ಉತ್ಸಾಹವೂ ಉತ್ಪನ್ನವಾಯಿತು. ಈ ಕಾರ್ಯಕ್ರಮವನ್ನು ಏರ್ಪಡಿಸಿದ ಬಗ್ಗೆ ಎಲ್ಲರಿಗೂ ಸಂತೋಷವಾಯಿತು.

ಈ ಸಮಾರಂಭಗಳನ್ನು ನೋಡುವಾಗ ಲಕ್ಷ್ಮಣರಾಯರ ಹಾಗೂ ರಾಧಾಭಾಯಿಯವರ ಮುಖ ಮುದ್ರೆಯಮೇಲೆ ಆನಂದವು ನಲಿದಾಡುತ್ತಿದ್ದಿತು. ರಾಧಾಬಾಯಿಯು ಸೊಸೆಗೆ ಕಮಲಾ ಎಂದು ಹೆಸರಿಟ್ಟಳು. ಆ ಹೆಸರಿನಿಂದಲೇ ಅವರು ಕರೆಯುತ್ತಿದ್ದರು. ಉಳಿದವರು ಮಾತ್ರ ಯಮುನಾತಾಯಿಯೆಂದೇ ಕರೆಯುತ್ತಿದ್ದರು.

ಲಕ್ಷ್ಮಣರಾಯರಿಗೆ ಲಗ್ನಕ್ಕಾಗಿ ಇಷ್ಟು ಸಮಯವನ್ನು ಕಳೆಯುವದು ಇಷ್ಟವಿಲ್ಲ ಎಂದು ನಡು ನಡುವೆ ಕಂಡುಬರುತ್ತಿದ್ದಿತು. ಸ್ವಲ್ಪ ಸಮಯ ಸಿಕ್ಕರೆ ಸಾಕು, ಹಂದರದಿಂದ ನುಸುಳಿಕೊಂಡು ಹೋಗಿ ಮುಂಬೈಯಿಂದ ತಂದ ಹೊಸ ಎದ್ದುನಿಂತ ಜರ್ಮನ್ ಇಂಜನವನ್ನು ನಿರೀಕ್ಷಿಸುತ್ತ ನಿಲ್ಲುತ್ತಿದ್ದರು.

ಕಳವೂಟ ಮುಗಿಯಿತು, ಮೊರ ಬಡೆಯಿತು. ಊರೂರಿಂದ ಬಂದ ಜನ ತಮ್ಮ ತಮ್ಮ ಊರಿಗೆ ಹೊರಟರು. ಕಿರ್ಲೋಸ್ಕರವಾಡಿಯು ಮೊದಲಿನಂತೆ ಕಾಣಹತ್ತಿತು. ಆಗ ಲಕ್ಷ್ಮಣರಾಯರು ತಮ್ಮ ಮಗನನ್ನು ಕರೆದು "ಶಂತನೂ ಲಗ್ನ ಮುಗಿಯಿತು. ಇನ್ನು ನಾಳೆನಿಂದ ಇಂಜನಿನ ಕೆಲಸವನ್ನು ಕೈಯ್ಯಲ್ಲಿ ತೆಗೆದುಕೋ ತಿಳಿಯಿತೆ? ಎಂದರು.

## ೧೭

# ಕಿರ್ಲೋಸ್ಕರ ವಾಡಿಯಲ್ಲಿ ಚರಖಾ ಹಾಗೂ ರಾಜಕಾರಣ

ಕಬ್ಬಿಣದ ರಂಟೆ ಹಾಗೂ ಸುಧಾರಿಸಿದ ಸಾಧನಗಳನ್ನು ಹೆಚ್ಚಾಗಿ ಉತ್ಪಾದಿಸುವ ಒಂದು ಭವ್ಯ ಔದ್ಯೋಗಿಕ ಕೇಂದ್ರವನ್ನು ಸ್ಥಾಪಿಸುವ ಮಹತ್ವಾಕಾಂಕ್ಷೆಯಿಂದ ಲಕ್ಷ್ಮಣರಾಯರು ತಳಕವಾಡಿಯಿಂದ ಕುಂಡಲಕ್ಕೆ ಹೊರಟ-ರಷ್ಟೆ! ಈ ಕಾರ್ಯವನ್ನು ಸಾಧಿಸುವಾಗ ಅವರು ಅನೇಕ ಸಾಮಾಜಿಕ ಸುಧಾರಣೆಗಳನ್ನು ಹೇಗೆ ಕೈಕೊಂಡರೆಂಬುದನ್ನು ವಾಚಕರು ಬಲ್ಲರು. ಮುಂದೆ ರಾಷ್ಟ್ರದ ಪರಿಸ್ಥಿತಿಯೇ ಬದಲಾಗಿ, ರಾಷ್ಟ್ರೀಯ ಆಂದೋಲನವು ರಾಷ್ಟ್ರವ್ಯಾಪಿ-ಯಾದಾಗ ಕಿರ್ಲೋಸ್ಕರವಾಡಿಯು ಅದರಿಂದ ಹೊರಗುಳಿಯುವ ಬಗೆ ಹೇಗೆ? ಆಗ ಲಕ್ಷ್ಮಣರಾಯರು ರಾಜಕೀಯ ಚಳವಳಿಯ ಬಗೆಗೂ ನಿಶ್ಚಿತ ನಿಲುವೆಯನ್ನು ತಾಳಬೇಕಾಯಿತು.

ಲಕ್ಷ್ಮಣರಾಯರಿಗೆ ಇದೊಂದು ಒಳ್ಳೇ ಪರೀಕ್ಷೆಯ ವೇಳೆ. "Business & Politics do not mix" ಎಂಬ ಗಾದೆಯಂತೆ ಉದ್ಯೋಗ ಹಾಗೂ ರಾಜಕಾರಣಗಳು ಎಂದೂ ಕೂಡಿ ನಡೆಯಲಾರವೆಂಬ ಸಂಗತಿಯು ಲಕ್ಷ್ಮಣರಾಯರ ಲಕ್ಷ್ಯದಲ್ಲಿದ್ದಿತು. ಆದುದರಿಂದ ರಾಜಕೀಯ ಕ್ಷೇತ್ರದಿಂದ ಅವರು ಹತ್ತು ಹೆಜ್ಜೆ ಯಾವಾಗಲೂ ದೂರೇ ಇರುತ್ತಿದ್ದರು. ಆದರೆ ಲಕ್ಷ್ಮಣ-ರಾಯರಿಗೆ ರಾಜಕಾರಣದೊಡನೆ ಹಸ್ತಾಂದೋಲನ ಮಾಡುವ ಪ್ರಸಂಗವು ಬಂದಿತು. ಈ ಬೈಲುಗುಂಬಾರನ ರಾಜಕಾರಣದ ಕಥೆ ಕೇಳಿರಿ.

ಕಾಂಗ್ರೆಸ್ ಚಳವಳಿಯ ಬೀಜವನ್ನು ಕಿರ್ಲೋಸ್ಕರವಾಡಿಯಲ್ಲಿ ಬಿತ್ತಿದ ಶ್ರೇಯಸ್ಸೆಲ್ಲವೂ ಕರ್ಹಾಡದ ದೇಶಭಕ್ತರಾದ ಶ್ರೀ ಸದಾಶಿವ ಖಂಡೋ ಆಳತೇ-ಕರರಿಗೇ ಸಲ್ಲುವದು. ಸದಾಶಿವರಾಯರು ನಿಜವಾದ ತಳಮಳವುಳ್ಳ ದೇಶ-ಭಕ್ತರು. ಲೋಕಮಾನ್ಯರ ಕಟ್ಟಾ ಅನುಯಾಯಿಗಳು. ಮುಂದೆ ಗಾಂಧೀ ಯುಗವು ಪ್ರಾರಂಭವಾದೊಡನೆಯೇ ಮಹಾತ್ಮರ ನೇತೃತ್ವದಲ್ಲಿ ಕಾಂಗ್ರೆಸ್

ಕಾರ್ಯವನ್ನು ಕೈಕೊಂಡವರು. ಅವರು ೧೯೨೭ನೆಯ ಇಸ್ವಿಯ ಅಗಷ್ಟ ತಿಂಗಳಲ್ಲಿ ಕಾಂಗ್ರೆಸ್ ಕಾರ್ಯಕ್ಕಾಗಿ ಕಿರ್ಲೋಸ್ಕರವಾಡಿಗೆ ಬಂದರು.

ಅವರು ತಾವು ಬಂದ ಉದ್ದೇಶವನ್ನು ಲಕ್ಷ್ಮಣರಾಯರಿಗೆ ತಿಳಿಸಿದರು. ಆಗ ಲಕ್ಷ್ಮಣರಾಯರ ಮನಸ್ಸಿನಲ್ಲಿ ಅನೇಕ ವಿಚಾರ ತರಂಗಗಳೇಳುವದು ಸ್ವಾಭಾವಿಕ. ಅವರು ಗಂಭೀರರಾಗಿ ವಿಚಾರಮಗ್ನರಾದರು. ರಾಜ್ಯಕರ್ತರ ವಿರುದ್ಧವಾಗಿ ನಡೆದ ಆಂದೋಲನದಲ್ಲಿ ನಮ್ಮಂತಹ ಕಾರಖಾನೆದಾರರು ಸಂಬಂಧವನ್ನಿಟ್ಟುಕೊಳ್ಳುವದು ಕಷ್ಟ. ದೇಶದ ಉದ್ಯೋಗ ಹಾಗೂ ವ್ಯವಸಾಯಗಳ ಜೀವವು ಸರಕಾರದ ಕೈಯಲ್ಲಿದೆ. ಅವರನ್ನು ಅಸಂತುಷ್ಟಗೊಳಿಸಿ ಕಾರಖಾನೆದಾರರು ಜೀವಿಸುವ ಬಗೆ ಹೇಗೆ? ಕಾರಖಾನೆಯನ್ನು ಸ್ಥಾಪಿಸುವದೇ ಬ್ರಿಟೀಶ ಸರಕಾರವನ್ನು ಆಹ್ವಾನಿಸಿದಂತೆ ಎಂದು ತಿಳಿಯುವ ಕಾಲವೊಂದಿತ್ತು. ಇಂತಹ ಪರಿಸ್ಥಿತಿಯಲ್ಲಿ ಕಾರಖಾನೆಯ ಹೊಣೆ ಹೊತ್ತ ನಮ್ಮಂತಹರು ಕಾಂಗ್ರೆಸ್ಸಿನ ಪ್ರತ್ಯಕ್ಷ ಸಂಬಂಧವಿಟ್ಟುಕೊಳ್ಳುವದು ಜಾಣತನದ್ದಾದೀತೆ?

ಆದರೆ ದೇಶದಲ್ಲಿ ಪರಕೀಯರ ಅಧಿಕಾರವಿರುವದರಿಂದ ಉದ್ಯೋಗಗಳನ್ನು ಬೆಳಿಸಲು ಹೆಜ್ಜೆಹೆಜ್ಜೆಗೆ ಆತಂಕವಾಗುತ್ತದಲ್ಲ? ಭಾರತದ ಔದ್ಯೋಗಿಕರಣವು ತೀವ್ರ ಹಾಗೂ ಅನಿರ್ಬಂಧವಾಗಿ ಆಗಲೇಬೇಕಿದ್ದರೆ, ನಮ್ಮ ದೇಶದ ರಾಜ್ಯಾಧಿಕಾರವು ನಮ್ಮ ಕೈಯಲ್ಲಿಯೇ ಇರಬೇಕು. ಇದು ಸುಲಭವಲ್ಲ. ಅದಕ್ಕಾಗಿ ಹೋರಾಡಬೇಕು. ಆದುದರಿಂದ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಮಹಾತ್ಮರು ಹೂಡಿದ ಆಂದೋಲನಕ್ಕೆ ನೆರವು ನೀಡುವದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ಸರಕಾರವು ಹುಲಿಯೆಂದರೂ ತಿನ್ನುವದು. ಹುಲಿಯಪ್ಪನೆಂದರೂ ತಿನ್ನುವದು. ಅಂದಮೇಲೆ ಅಂಜುವದೇಕೆ? ಎಂದು ವಿಚಾರಾಂತ್ಯದಲ್ಲಿ ನಿರ್ಣಯಕ್ಕೆ ಬಂದರು.

ಅಂದು ಸಾಯಂಕಾಲ ಆಳತೇಕರರು ಕೂಲಿಕಾರರ ಹಾಗೂ ಕಿರ್ಲೋಸ್ಕರವಾಡಿಯ ನಾಗರಿಕರ ಮುಂದೆ 'ಕಾಂಗ್ರೆಸ್ಸಿನ ಕಾರ್ಯ ಹಾಗೂ ಸ್ವದೇಶಿಯ ಮಹತ್ವ, ಎಂಬ ವಿಷಯದ ಮೇಲೆ ಉಪನ್ಯಾಸವನ್ನಿತ್ತರು. ಅದರ ಪರಿಣಾಮವು ಕೂಡಲೇ ಕಂಡುಬಂದಿತು. ಸಭೆಯಲ್ಲಿ ೨೩ ಜನ ಕಾಂಗ್ರೆಸ್ ಸಭಾಸದರಾದರು. ಮತ್ತು ಕಾಂಗ್ರೆಸ್ ಕಮಿಟಿಯು ಸ್ಥಾಪಿಸಲ್ಪಟ್ಟಿತು. ಲಕ್ಷ್ಮಣರಾಯರು ಕಾಂಗ್ರೆಸ್ಸಿನ ಸಭಾಸದರಾದರಲ್ಲದೆ ಗಾಂಧೀಟೊಪ್ಪಿಗೆಯನ್ನು ಧರಿಸಿ, ಖಾದೀಧಾರಿಗಳಾದರು. ಯಾವುದೇ ಕೆಲಸವನ್ನು ಅರ್ಧಮರ್ಧ ಮಾಡುವದು



ಮಹಾತ್ಮಾಜಿ ಮತ್ತು ಚರಖಾ ಸಂಶೋಧಕ ಕಾಳೆ ಹಾಗು ಚರಖಾ



ಕೆಲಸಗಾರರ ಸಭೆಯಲ್ಲಿ ಲಕ್ಷ್ಮಣರಾಯರ ಭಾಷಣ, ೧೯೫೦



ದಿಲ್ಲಿಯ ಔದ್ಯೋಗಿಕ ಪ್ರದರ್ಶನದಲ್ಲಿ, ೧೯೫೬



ಕಿರ್ಲೋಸ್ಕರ ಕಾರಖಾನೆಯಲ್ಲಿ ಜವಾಹರಲಾಲರು

ಲಕ್ಷ್ಮಣರಾಯರಿಗೆ ಗೊತ್ತಿರಲಿಲ್ಲ. ಒಮ್ಮೆ ನಿಶ್ಚಯವಾಯಿತೆಂದರೆ ತೀರಿತು. ಮಾಡಿಯೇಬಿಡುವವರು. ಕೆಲ ಮಂದಗಾಮಿಗಳಿಗೆ ಲಕ್ಷ್ಮಣರಾಯರು ಚಳವಳಿಯ ಪ್ರತ್ಯಕ್ಷ ಸಂಬಂಧವನ್ನಿಟ್ಟುಕೊಂಡದ್ದು ಅಷ್ಟೊಂದು ಸರಿಯೆನಿಸಲಿಲ್ಲ.

ದೀಕ್ಷೆಯಾದನಂತರ ವಾಡಿಯಲ್ಲಿ ಚರಖಗಳು ತಿರುಗಹತ್ತಿದವು. ಮುಖಂಡರ ಸಂದರ್ಶನಗಳು, ಉಪನ್ಯಾಸಗಳು ನಾಗರಿಕರ ಮನ ಸೆಳೆದವು. ಇದೇ ಸಮಯಕ್ಕೆ ರಂಗರಾವ ದಿವಾಕರರು ವಾಡಿಗೆ ಬಂದರು. "ನನ್ನ ರಾಜಕಾರಣ" ಎಂಬ ವಿಷಯದ ಮೇಲೆ ಮಾತನಾಡಿದರು. ಅದರ ಪರಿಣಾಮವು ಒಳ್ಳೆಯದಾಯಿತು. ಗಾಂಧೀಜಿಯವರು ಕಾಯದೆಭಂಗ ಚಳವಳಿಯಲ್ಲಿ ಬಂಧಿಸಲ್ಪಟ್ಟರು. ೭ನೇ ಮೇ ೧೯೩೦ ನೆಯ ದಿವಸ ಎಲ್ಲ ಕೆಲಸಗಾರರು ಹರತಾಳವನ್ನು ಆಚರಿಸಿದರು. ಕಾರಖಾನೆಯನ್ನು ಮುಚ್ಚುವ ಪ್ರಸಂಗ ಬಂದಿತು. ವಾಡಿಯಲ್ಲಿಯ ಚಳುವಳಿಗೆ ಉಕ್ಕು ಬಂದಿತು. ನಗರ ಸಂಕೀರ್ತನ ಝೇಂಡಾವಂದನೆ ಇತ್ಯಾದಿ ಕಾರ್ಯಕ್ರಮಗಳು ಪ್ರಾರಂಭವಾದವು. "ಚರಖಾ ಚಲಾಚಲಾಕೆ, ಲೇಂಗೆ ಸ್ವರಾಜ್ಯ ಲೇಂಗೆ". "ನಹಿ ರಖನಾ ನಹಿ ರಖನಾ ಜಾಲೀಮ ಸರಕಾರ ನಹಿ ರಖನಾ" ಇಂತಹ ಭಾವನೆಯನ್ನುದ್ದೀಪನಗೊಳಿಸುವ ಹಾಡುಗಳು ಬೆಳಗಿನಲ್ಲಿ ದಿನಾಲು ಕೇಳತೊಡಗಿದವು. ಈ ನಗರ ಸಂಕೀರ್ತನೆಗಳಲ್ಲಿ, ನೂಲುವಲ್ಲಿ ಕುಂ|| ಸೌ|| ರಾಧಾಬಾಯಿಯವರು ಮುಖ್ಯರು.

ಗಾಂಧೀಜಿಯವರ ಚಳವಳಿಯಲ್ಲಿ ರಾಟಿಗೆ ಅಗ್ರಪೂಜೆಯು ದೊರೆಯಿತು. ಇದು ಲಕ್ಷ್ಮಣರಾಯರಿಗೆ ಬಹಳ ರುಚಿಸಿತು. ಏಕೆಂದರೆ ಮೊದಲಿನ ಕಾಲದಿಂದ ರಾಟಿಯು ಬಂದಿದ್ದರೂ ಅದೂ ಒಂದು ಯಂತ್ರವೇ ಅಲ್ಲವೇ? ಈ ಯಂತ್ರದಲ್ಲಿ ಮನಸ್ಸು ಹಾಕಿ ಸುಧಾರಣೆಗಳನ್ನು ಮಾಡುವದು ಅಶಕ್ಯವಿಲ್ಲೆಂದು ಅವರಿಗೆ ಅನಿಸುತ್ತಿದ್ದಿತು. ಆ ದಿಶೆಯಲ್ಲಿ ಅವರು ಪ್ರಯತ್ನವನ್ನು ನಡೆಸಿದರು.

ಚರಖಾತಜ್ಞರೆಂದು ಈ ಮೊದಲು ಶ್ರೀ ಗಣೇಶ ಭಾಸ್ಕರ ಕಾಳೆ ಅವರ ಉಲ್ಲೇಖವು ಬಂದಿದೆ. ಅವರು ಒಬ್ಬ ಅತ್ಯಂತ ಕಲ್ಪಕ ಯಂತ್ರಜ್ಞರು. ಹೊಸ ಹೊಸ ಯಂತ್ರಗಳನ್ನು ನಿರ್ಮಿಸುವ ಹುಚ್ಚು ಅವರಿಗೆ ಬಹಳ. ಚರಖದ ವಿಷಯದಲ್ಲಿಯಂತೂ ಅವರು ದೊಡ್ಡ ತಪಶ್ಚರ್ಯವನ್ನೇ ಮಾಡಿದ್ದರು. ೧೯೨೦ ರಲ್ಲಿಯೇ ಅವರ ಸುಧಾರಿಸಿದ ಚರಖಾ ಮಹಾರಾಷ್ಟ್ರದ ಮನಸ್ಸನ್ನೆಲ್ಲ ಸೆಳೆದಿದ್ದಿತು.

ಲಕ್ಷ್ಮಣರಾಯರು ಕಾಳೆಯವರಿಗೆ ಅವಶ್ಯಕವಾದ ಸಹಾಯಗಳನ್ನಿತ್ತು ವಾಡಿಯಲ್ಲಿಯೇ ಅವರನ್ನು ಇಟ್ಟುಕೊಂಡ ಸಂಗತಿಯು ಹಿಂದೆ ಬಂದಿದೆ. ಇಬ್ಬರೂ ಕಲ್ಪಕರು. ಆದ್ದರಿಂದ ಚರಖಾದ ಪ್ರಯೋಗದಲ್ಲಿ ಇಬ್ಬರೂ ಮನಸ್ಸು ಹಾಕಿ ಸುಧಾರಣೆಗಳನ್ನು ಮಾಡಿ ಅದನ್ನು ಪೂರ್ಣಾವಸ್ಥೆಗೆ ಮುಟ್ಟಿಸಲು ಶೋಧ ಮಾಡಹತ್ತಿದರು. ಇಬ್ಬರೂ ಯಂತ್ರ ನಿಪುಣರು. ಆದರೆ ಇಬ್ಬರೂ ಹಟವಾದಿಗಳು. ತಮ್ಮ ಮತವೇ ಸರಿಯೆಂದು ಪ್ರತಿಯೊಬ್ಬರ ಅಭಿಪ್ರಾಯ. ಆದ್ದರಿಂದ ಇಬ್ಬರಲ್ಲಿಯೂ ಚಕಮಕಿಯಾಗುತ್ತಿತ್ತು. ಆದರೆ ಅದು ಆ ವೇಳೆಯ ಮಟ್ಟಿಗೆ. ಆದರಿಂದ ಅವರ ಕೆಲಸಕ್ಕೆ ಎಂದೂ ತಡೆಯಾಗಲಿಲ್ಲ.

ಇದರಿಂದ ಹೊಸ ಬಗೆಯ ಇಂಜಿನುಗಳನ್ನು ನಿರ್ಮಿಸುವ ಲಕ್ಷ್ಮಣ ರಾಯರ ವಿಚಾರವು ಹಿಂದೆ ಬಿದ್ದಿತ್ತೆಂದು ಮಾತ್ರ ಯಾರೂ ತಿಳಿಯಕೂಡದು. ಆ ಕೆಲಸವು ನಡೆದೇ ಇದ್ದಿತು. ಮತ್ತು ಅವರು ಅದರಲ್ಲಿ ಯಶಸ್ವಿಯಾದರು. ೧೯೩೩ ನೇ ಡಿಶೆಂಬರದಲ್ಲಿ ಅದನ್ನು ಮಾರಲು ಹೊರತೆಗೆದರು. ಈಗ ಲಕ್ಷ್ಮಣರಾಯರಿಗೆ ಶಾಂತನು ಹಾಗೂ ರಾಜಾರಾಮರ ಸಹಾಯವು ದೊರೆ ತಿದ್ದುದರಿಂದ ಚರಖಾ ಖಾತೆಯಲ್ಲಿ ಹೆಚ್ಚು ಸಮಯವನ್ನು ಕಳೆಯಲು ಅವರಿಗೆ ಅನುಕೂಲವಾಗಿದ್ದಿತು.

ಯಾವ ಕೆಲಸವು ಯಂತ್ರದಿಂದ ಸಯವಾಗಿ, ಅಗ್ಗವಾಗಿ ಮಾಡಲು ಸಾಧ್ಯವೋ ಅದನ್ನು ಕೈಯಿಂದ ಮಾಡುವದು ಹಿನ್ನಡೆಯೆಂದು ಲಕ್ಷ್ಮಣ ರಾಯರ ಮತವಿದ್ದರೂ, ದೊಡ್ಡ ಯಂತ್ರದ ಸರಿಸಮಾನವಾಗಿ ಮನೆಮನೆ ಗಳಲ್ಲಿ ತಿರುಗುವಂತೆ ಒಂದು ಚಿಕ್ಕ ನೂಲುವ ಯಂತ್ರವನ್ನು ನಿರ್ಮಿಸಿದರೆ ಅದಕ್ಕೆ ಸಾಕಷ್ಟು ಬೇಡಿಕೆ ಬರುವದೆಂದು ರಾಯರ ಮತವಿದ್ದಿತು. ಮಹಾ ತ್ಮರು ರಾಟೆಯನ್ನು ಪುನರುಜ್ಜೀವನಗೊಳಿಸಲು ಯತ್ನಿಸುತ್ತಿದ್ದರೂ ಈ ರಾಟೆಯು ಯಂತ್ರಗಳನ್ನೆದುರಿಸಲಾರದೆಂದು ಅವರ ಮನಸ್ಸು ಹೇಳುತ್ತಿತ್ತು. ಕೇವಲ ಭಾವನೆಯ ಮೇಲೆ ನಿಂತ ಈ ಚಳವಳಿಯು ಬಾಳದೆ ಹೋದರೆ, ರಾಷ್ಟ್ರೀಯ ಚಳವಳಿಗೇ ಪೆಟ್ಟು ಬೀಳುವದೆಂದು ರಾಯರಿಗೆ ಭೀತಿ ಎನಿಸಿತು. ಆದುದರಿಂದ ಎಲ್ಲ ರೀತಿಯಿಂದ ಪ್ರಯತ್ನಿಸಿ ಕಾಳೇಯವರ ನೇತೃತ್ವದಲ್ಲಿ ಒಂದು ಚರಖಾ ನಿರ್ಮಿಸಿದರೆ, ಒಂದು ಮಹತ್ವದ ಕಾರ್ಯ ಸಾಧಿಸಿದಂತಾಯಿತೆಂದು ಅವರಿಗೆ ಅನಿಸಹತ್ತಿತು. ಇದರಿಂದ ಅಕಸ್ಮಾತ್ ಮಹಾತ್ಮರ ಸಂಬಂಧ

ಬಂದರೆ, ಅವರಿಗೆ ನೆರವಾಗುವ ಅಪೂರ್ವಸಂಧಿ ದೊರೆಯುವದೆಂದೂ ಅವರು ಭಾವಿಸಿದ್ದರು.

ಇದೇ ಸಮಯಕ್ಕೆ ಸಾಕಷ್ಟು ನೂಲನ್ನು ಉತ್ಪಾದಿಸುವ ಮನುಷ್ಯ ಶಕ್ತಿಯ ಮೇಲೆ ನಡೆಯುವ ಸರ್ವೋತ್ಕೃಷ್ಟ ರಾಟಿಯನ್ನು ಮಾಡುವ ಶೋಧ ಕರಿಗೆ ಒಂದು ಲಕ್ಷ ರೂಪಾಯಿಯ ಮೆಚ್ಚು ಕೊಡಲಾಗುವದೆಂದು ಅಖಿಲ ಭಾರತೀಯ ಸ್ಪಿನರ್ಸ ಅಸೋಸಿಯೇಶನ್‌ವು ಜಾಹೀರ ಮಾಡಿದೆ ಎಂದು ಲಕ್ಷ್ಮಣರಾಯರಿಗೆ ತಿಳಿದೊಡನೆಯೇ ಕಿರ್ಲೋಸ್ಕರ ಕಾರಖಾನೆಯಲ್ಲಿಯ ಚರಖಾ ಖಾತೆಗೆ ಹೊಸ ಜೀವನ ಬಂದಿತು.

ಈ ಸ್ಪರ್ಧೆಯು ಕೆಳಗಿನಂತಿದ್ದಿತು. "ಒಬ್ಬ ಮನುಷ್ಯನು ಎಂಟು ತಾಸಿನಲ್ಲಿ ೪೦ ನಂಬರಿನ ೧೫ ಸಾವಿರ ಯಾರ್ಡ ನೂಲನ್ನು ಈ ಚರಖಾದಿಂದ ತೆಗೆಯ-ಬೇಕು. ಆ ಚರಖಾ ಕೆಟ್ಟರೆ ಹಳ್ಳಿಯಲ್ಲಿಯೇ ಅದು ನೆಟ್ಟಗೆಮಾಡಲು ಬರುವಂತಿರಬೇಕು. ಅದಕ್ಕೆ ೨೫೦ ರೂಪಾಯಿಗಳಿಗಿಂತಲೂ ಹೆಚ್ಚು ಬೆಲೆ ಬೀಳಬಾರದು. ಪರೀಕ್ಷಕರು ಕೊಟ್ಟ ನಿರ್ಣಯವು ಮಾನ್ಯಮಾಡಲ್ಪಡಬೇಕು. ಪರೀಕ್ಷಕರಲ್ಲಿ ಮತಭೇಧವಾದಾಗಮಾತ್ರ ಗಾಂಧೀಜಿಯವರು ಕೊಟ್ಟ ನಿರ್ಣಯ ವನ್ನು ಎಲ್ಲರೂ ಒಪ್ಪಬೇಕು" ಇವೇ ಆ ಸ್ಪರ್ಧೆಯ ನಿಯಮಗಳಿದ್ದವು. ಈ ಕರಾರುಗಳು ಸುಲಭವಿರಲಿಲ್ಲ. ಆದರೆ ಶ್ರೀ ಕಾಳೆಯವರಿಗೆ ತಮ್ಮಿಂದ ರಚಿತವಾದ ಚರಖವು ಸ್ಪರ್ಧೆಯ ಎಲ್ಲ ನಿಯಮಗಳನ್ನು ಪೂರ್ಣಮಾಡುವ-ದೆಂದು ಆತ್ಮವಿಶ್ವಾಸವನ್ನುಂಟುಮಾಡಿತ್ತು. ಈ ಸ್ಪರ್ಧೆಯು ೧೯೩೧ನೇ ಎಪ್ರಿಲ್‌ದಲ್ಲಿ ಎಂದು ಸಾರಲ್ಪಟ್ಟಿತ್ತು.

ಹೀಗೆ ಸಾರಲ್ಪಟ್ಟ ಮಹತ್ವದ ಸ್ಪರ್ಧೆಯಲ್ಲಿ ಭಾಗವಹಿಸಲು ಅನೇಕ ಚರಖಗಳು ಬಂದವು. ಅದರಲ್ಲಿ ಕೆಲವು ಪರದೇಶಗಳಿಂದಲೂ ಬಂದಿದ್ದವು. ಆದರೆ ಅಸೋಸಿಯೇಶನ್ನದ ಪರೀಕ್ಷಾ ಮಂಡಲವು ನಿರೀಕ್ಷಿಸಿದ ನಂತರ ಅವರ ಒರೆಗೆ ಕಾಳೇಯವರ ಚರಖಾ ಒಂದೇ ಹತ್ತಿತು. ಇಷ್ಟರಿಂದಲೇ ಸ್ಪರ್ಧೆಯ ನಿರ್ಣಯವಾಗಬೇಕಿದ್ದಿತು. ಆದರೆ ಪರೀಕ್ಷಕರು ಕಾಳೇಯವರ ಮಾದರಿಯಲ್ಲಿ ಕೆಲವು ಸುಧಾರಣೆಗಳನ್ನು ಸೂಚಿಸಿದ್ದರಿಂದ ಕಾಳೇಯವರು ಅವುಗಳನ್ನು ಪೂರ್ಣಮಾಡಲು ಕಿರ್ಲೋಸ್ಕರವಾಡಿಗೆ ಬಂದರು.

ಅವಶ್ಯವಿರುವ ಸುಧಾರಣೆಗಳನ್ನು ಅತ್ಯಂತ ಲಕ್ಷ್ಯಪೂರ್ವಕವಾಗಿ ಉತ್ಸಾಹದಿಂದ, ಪೂರ್ಣ ಮಾಡಿದರು. ಅದನ್ನು ಪ್ರತ್ಯಕ್ಷ ಅವಲೋಕಿಸಲು

ಶ್ರೀ ಸತೀಶಗುಪ್ತರೆಂಬ ಅಸೋಸಿಯೇಶನ್ನದ ಸದಸ್ಯರು ೧೯೩೩ ರ ಜನೆವರಿಯಲ್ಲಿ ವಾಡಿಗೆ ಬಂದು ಹೋದರು. ವರಂದೆ ಮುಂಬೈಯಲ್ಲಿ ನಡೆದ ಪ್ರದರ್ಶನದಲ್ಲಿ ಈ ಚರಖದಿಂದ ಪ್ರತ್ಯಕ್ಷ ನೂಲು ತೆಗೆದು ತೋರಿಸಲಾಯಿತು. ಈ ಚರಖಾ ದನ್ನು ನೋಡಿ ಮಹಾತ್ಮರು ಸಮಾಧಾನವನ್ನು ವ್ಯಕ್ತಪಡಿಸಿ, ಕಾಳೆಯವರು ಅದನ್ನು ತೆಗೆದುಕೊಂಡು ಸಾಬರಮತಿ ಆಶ್ರಮಕ್ಕೆ ಬರಬೇಕೆಂದು ಸೂಚಿಸಿದರು. ಆಶ್ರಮದಲ್ಲಿ ಮಹಾತ್ಮಾಗಾಂಧೀ ಹಾಗೂ ಕಸ್ತೂರಬಾರವರು ಅದರ ಮೇಲೆ ನೂತರು. ಅವರಿಗೆ ಈ ಚರಖವು ಸೇರಿತೆಂದು ಅವರ ಪತ್ರವನ್ನೋದಿ ಲಕ್ಷ್ಮಣ ರಾಯರಿಗೆ ಬಹಳ ಆನಂದವಾಯಿತು. ಅಸೋಸಿಯೇಶನ್‌ದ ಪರೀಕ್ಷಕರಿಗೂ ಪೂರ್ಣ ಸಮಾಧಾನವಾಯಿತು. ಎಲ್ಲರೂ ನಿರ್ಣಯದ ದಾರೀ ಕಾಯ ಹತ್ತಿದರು.

ಆದರೆ ನೊಣವು ಎಲ್ಲಿ ಒಡೆಯಿತೊ ಯಾರಿಗೆ ಗೊತ್ತು? ಮರುಳಿ ವಿಚಾರ ಮಾಡಿದಾಗ ಮಹಾತ್ಮರಿಗೆ ಚರಖವು ಅಷ್ಟು ಮನಸ್ಸಿಗೆ ಬರದೇ ಇದ್ದ ಮೂಲಕ ಬಹುಮಾನ ಕೊಡುವದನ್ನು ನಿಲ್ಲಿಸಲಾಗಿದೆ? ಎಂದು ಅಸೋಸಿ-ಯೆಶನ್ನದಿಂದ ತಿಳಿಯಿತು. ಈ ಪತ್ರದಿಂದ ಕಾಳೆ ಹಾಗೂ ಲಕ್ಷ್ಮಣರಾಯರಿಗೆ ಬಹಳ ಆಶ್ಚರ್ಯವೂ ಅಸಮಾಧಾನವೂ ಆಯಿತು. ಕೂಡಲೇ ಕಾಳೆಯವರು ವರ್ಧಾಕ್ಕೆ ಧಾವಿಸಿದರು. ಆದರೆ ಅಲ್ಲಿ ತಮ್ಮ ಬೇಳೆ ಬೇಯುವದಿಲ್ಲವೆಂಬ ಲಕ್ಷಣವು ಕಂಡೊಡನೆಯೇ ಅವರು ಲಕ್ಷ್ಮಣರಾಯರಿಗೆ ವರ್ಧಾಕ್ಕೆ ಬರಲು ತಂತಿ ಕೊಟ್ಟರು. ಅದರಂತೆ ರಾಯರು ತಮ್ಮೊಡನೆ ಶಂಕರರಾವ, ಶಂತನುರಾವ ಹಾಗೂ ನಾನಾಸಾಹೇಬ ಗುರ್ಜರರನ್ನು ಕರಕೊಂಡು ಹೋದರು. ಶೇಠ ಜಮುನಾಲಾಲ ಬಜಾಜರು ಅವರನ್ನು ಇಳಿಸಿಕೊಳ್ಳಲು ಸ್ಟೇಶನ್ನಕ್ಕೆ ಬಂದಿದ್ದರು. ಅವರೆಲ್ಲರನ್ನು ಆಶ್ರಮಕ್ಕೆ ಕರೆದುಕೊಂಡು ಹೋದರು.

ಸ್ವಲ್ಪ ಸಮಯದಲ್ಲಿ ಅವರಿಗೆ ಮಹಾತ್ಮರ ದರ್ಶನವಾಯಿತು. ಎಲ್ಲರೂ ಅವರಿಗೆ ಅ[illegible]ಕನಾಗಿ ನಮಸ್ಕರಿಸಿದರು ಮಹಾತ್ಮರೂ ಕೂಡ ನಗೆಮುಖದಿಂದ ಎಲ್ಲರನ್ನೂ ಸ್ವಾಗತಿಸಿದರು. ಮೃದು ಶಬ್ದಗಳಿಂದ ಕುಶಲ ಪ್ರಶ್ನೆಗಳನ್ನು ಕೇಳಿದರು. ಆದರೆ ಈ ವೇಳೆಯಲ್ಲಿ ಅವರೊಡನೆ ಮಾತ-ನಾಡುವದಕ್ಕಿಂತ ಅವರ ಮುಖಮುದ್ರೆಯ ಕಡೆಗೆ ಮತ್ತು ಅವರ ಚಲನವಲನದ ಕಡೆಗೆ ಇವರೆಲ್ಲರ ದೃಷ್ಟಿಯು ನಟ್ಟು ಹೋಗಿತ್ತು. ಇವರೇಯೋ! ಆ ಪಂಜೆಯು-ಸ್ನಷ್ಟಿ ಕೃಶ ವಾಮನಮೂರ್ತಿ! ಸತ್ಯ ಹಾಗೂ ಅಹಿಂಸೆಗಳ ಬಲದಿಂದ



ಪುಣೆ ಕಾರಖಾನೆಯಲ್ಲಿ ಡಿಝೆಲ ಇಂಜನನ್ನು ರಾಯರು ಪರೀಕ್ಷಿಸುತ್ತಿರುವರು



ಮಕ್ಕಳು, ಸೊಸೆಯರೊಡನೆ ಲಕ್ಷ್ಮಣರಾಯರು



ಲಕ್ಷ್ಮಣರಾಯರ ಸಹಾಯಕರು, ೧೯೧೪



ಔಂಧಕ್ಕೆ ಹೋದ ಕ್ರಿಕೇಟನ ಮೊದಲನೇ ಗುಂಪು, ೧೯೧೫

ಬಲಾಢ್ಯರಾದ ಪ್ರತಿಪಕ್ಷರ ವಿರುದ್ಧ ಹೋರಾಡಲು ಸಿದ್ಧವಾಗಿ ನಿಂತ ಮೂರ್ತಿ! ಈ ಬಡಮನುಷ್ಯನ ಶರೀರವಲ್ಲಿ ಎಷ್ಟು ಶಕ್ತಿ ಇದ್ದೀತು? ಆದರೆ ಅವರ ಒಂದು ಶಬ್ದದಿಂದ. ಲಕ್ಷಾಂತರ ಸ್ತ್ರೀ--ಪುರುಷರು. ತಮ್ಮ ಜೀವದ ಹಂಗುದೊರೆದು ಸತ್ಯಾಗ್ರಹ ಮಾಡಲು, ಲಾಠಿಯ ಪೆಟ್ಟನ್ನು ತಿನ್ನಲು ಮತ್ತು ಬಂದೂಕದ ಗುಂಡಿಗೆ ಎದೆಯೊಡ್ಡಲು ಸಿದ್ಧರಾಗುತ್ತಾರೆ! ಎಂತಹ ಅಸಾಮಾನ್ಯ ಸಾಮರ್ಥ್ಯ ಇದು! ಭಾರತ ಮಾತೆಯನ್ನು ದಾಸ್ಯದಿಂದ ಮುಕ್ತಮಾಡಲು ಯಾರಲ್ಲಿ ಯಾದರೂ ಶಕ್ತಿಯಿದ್ದರೆ, ಅದು ಈ ಲೋಕೋತ್ತರ ಪುರುಷನಲ್ಲಿ ಮಾತ್ರ! ಅವರನ್ನು ಪ್ರತ್ಯಕ್ಷ ಸಮೀಪದಿಂದ ನೋಡುವ ಮತ್ತು ಮಾತನಾಡುವ ಸೌಭಾಗ್ಯವು ದೊರೆತುದು ತಮ್ಮ ಪುಣ್ಯ.

ಗಾಂಧೀಜಿಯವರು ಅವರಿಗೆ ತಮ್ಮ ಆಶ್ರಮವನ್ನೆಲ್ಲ ತೋರಿಸಿದರು. ಗಾಂಧೀಜೀಯವರ ಸಾದಾ ವೇಷ ಮತ್ತು ನಡತೆಗಳು ಅವರಿಗೇ ಶೋಭಿಸು ತ್ತಿದ್ದವು. ಇತರರು ಅವರ ಅನುಕರಣವನ್ನು ಮಾಡಿದರೆ, ಹೇಗೆ ಹಾಸ್ಯಕ್ಕೆ ಗುರಿಯಾಗುತ್ತಿದ್ದರೆಂಬುದನ್ನು ನೋಡಲು ಆಶ್ರಮದಲ್ಲಿಯೇ ಸಿಕ್ಕಿತು. ದಪ್ಪ ಖಾದಿಯನ್ನುಡುವದು ದೇಶಭಕ್ತಿಯ ಚಿಹ್ನವೆಂದು ಕಲ್ಪನೆಯಾದ ಮೂಲಕ ಖಾದಿಗಿಂತಲೂ ಮುಂದೆ ಹೋಗಿ ಗೋಣೀತಟ್ಟನ್ನು ಧರಿಸಿದ ಒಂದು. ವ್ಯಕ್ತಿಯು ಅಲ್ಲಿ ಕಂಡಿತು. ಒಬ್ಬ ಆಂಗ್ಲ ಮಹಿಳೆಯು ಅಲ್ಲಿದ್ದಳು. ಆದರೆ ಆಕೆಯು ಸೀರೆಯನ್ನುಟ್ಟು ಮುಂಡನವನ್ನು ಮಾಡಿಸಿಕೊಂಡಿದ್ದಳು. ಕೆಲವು ಪುರುಷರು ಬೀಸುತ್ತಿದ್ದರೆ, ಕೆಲವರು ಕಸಬರಿಗೆಯಿಂದ ಕಸವನ್ನು ಗೂಡಿಸುತ್ತಿ ದರು. ಅಲ್ಲಿ ಖುರ್ಚಿ, ಮೇಜುಗಳಿರಲಿಲ್ಲ. ಅವುಗಳ ಬದಲು ಚ್ಯಾಪಿ, ಆಸನ ಮೊದಲಾದವುಗಳಿದ್ದವು. ಅರ್ಥಾತ್ ಈ ಎಲ್ಲ ವ್ಯವಸ್ಥೆಯು ಮನುಷ್ಯನು ತನ್ನ ಆವಶ್ಯಕತೆಗಳನ್ನು ಕಡಿಮೆಮಾಡಿಕೊಳ್ಳಬೇಕು. ಮತ್ತು ಯಂತ್ರದ ಉಪಯೋಗವನ್ನು ಆದಷ್ಟು ಕಡಿಮೆಮಾಡಿ ಸಾದಾ ರೀತಿಯಿಂದ ಹೇಗೆ ಇರಬೇಕೆಂಬುದನ್ನು ಕಲಿಸುವದಕ್ಕಾಗಿಯೇ ಎಂದು ಒಡೆದು ಕಾಣುತ್ತಿತ್ತು. ಆದರೆ ಯಂತ್ರ ವಿರಹಿತ ಜೀವನ ಸಾಗಿಸಲು ಕಷ್ಟವೆಂಬುದನ್ನು ಬಾವಿಗೆ ಹಚ್ಚಿದ ಪಂಪು ಸಾರುತ್ತಿತ್ತು.

ಊಟದ ವ್ಯವಸ್ಥೆಯೂ ಅರ್ಥಾತ್ ತೀರಸಾದಾ. ಅದು ಮುಗಿದ ನಂತರ ಎಲ್ಲರೂ ಗಾಂಧೀಜಿಯವರ ಕೋಣೆಗೆ ಹೊರಟರು. ಎಲ್ಲರೂ ಕುಳಿತ ನಂತರ ಗಾಧೀಜಿಯವರು ತಮ್ಮ ಪೆಟ್ಟಿಗೆಯೊಳಗಿನ ಚರಖವನ್ನು ತೆಗೆದು

ನೂಲು ಪ್ರಾರಂಭಿಸಿದರು. ಅವರ ಆಪ್ತ ಕಾರ್ಯದರ್ಶಿಯು ಸಮೀಪದಲ್ಲಿಯೇ ಇದ್ದ ಡೆಸ್ಕಿನ ಮುಂದೆ ಕುಳಿತನು. ಸ್ವಲ್ಪ ಹೊತ್ತು ಆ ಮಾತು ಈ ಮಾತು ನಡೆದ ನಂತರ ಲಕ್ಷ್ಮಣರಾಯರು ತಾವು ವರ್ಧಾಕ್ಕೆ ಬಂದ ಉದ್ದೇಶವನ್ನು ತಿಳಿಸಿದರು. ಮತ್ತು ಅವರು :

"ನಮ್ಮ ರಾಟಿಯು ತಮ್ಮ ನಿಯಮಗಳನ್ನು ಪೂರ್ಣಮಾಡಿದ್ದರೂ ತಮಗೆ ಈಗ ಅದು ಮನಸ್ಸಿಗೆ ಬಂದಿಲ್ಲವೆಂದು ತಿಳಿದು ಬಂದಿತು. ಇದು ಸತ್ಯವಿದ್ದರೆ, ಅದರ ಕಾರಣಗಳನ್ನು ತಿಳಿದುಕೊಳ್ಳಲು ಅಪೇಕ್ಷಿಸುತ್ತೇವೆ" ಎಂದರು.

"ಅದರ ಕಾರಣವಿಷ್ಟೆ, ನಿಮ್ಮ ಚರಖಾ ಸಮಾಧಾನಕಾರಕವಾಗಿ ಕೆಲಸ ಕೊಡುತ್ತಿದ್ದರೂ ಅದು ಒಂದು ಯಂತ್ರವೇ ಆಗಿದೆ. ಆದುದರಿಂದ ನಾನು ಅದು ಮೆಚ್ಚು ಪಡೆಯಲು ಯೋಗ್ಯವೆಂದು ಎಣಿಸುವದಿಲ್ಲ." ಎಂದರು ಗಾಂಧೀಜಿ.

"ತಮ್ಮ ಈ ಆಕ್ಷೇಪವು ಸರಿಯೇ? ಒಬ್ಬ ಮನುಷ್ಯನ ಕಡೆಯಿಂದ ಕೇವಲ ಕೈಯ್ಯಿಂದಾಗುವ ಕೆಲಸಕ್ಕಿಂತ ಹೆಚ್ಚು ಒಳ್ಳೆಯ ಮತ್ತು ಬಹಳ ಕೆಲಸ ವಾಗುವದಕ್ಕಾಗಿ ಎಂಥದೇ ಸಾಧನವನ್ನು ನಿರ್ಮಿಸಿದರೂ ಅದು ಯಂತ್ರದ ವರ್ಗದಲ್ಲಿಯೇ ಬರುವದು. ಅಷ್ಟೇ ಏಕೆ, ತಾವು ನೂಲು ತೆಗೆಯುತ್ತಿರುವ ಈ ರಾಟಿಯೂ ಕೂಡ ಒಂದು ಯಂತ್ರವಲ್ಲವೆ?" ಎಂದರು ಶಂತನುರಾಯರು.

"ಅಲ್ಲದೆ, ಸ್ಪರ್ಧೆಯ ಜಾಹೀರಾತಿನ ನೇಮಗಳಲ್ಲಿ ರಾಟಿಯಿಂದ ಎಷ್ಟು ಕೆಲಸವಾಗಬೇಕೆಂಬುದು ಸ್ಪಷ್ಟ ಉಲ್ಲೇಖಿಸಲ್ಪಟ್ಟಿದೆ. ಆ ಚರಖವು ಯಂತ್ರದಂತೆ ಕಾಣಬಾರದೆಂದು ಅದರಲ್ಲೇನೂ ಉಲ್ಲೇಖವಿಲ್ಲವಲ್ಲ?" ಎಂದು ಧ್ವನಿಗೂಡಿಸಿದರು ಶಂಕರರಾಯರು.

"ನಿಮ್ಮ ಹೇಳಿಕೆಯು ನನಗೆ ಮಾನ್ಯವಿದೆ. ಆದರೆ ಇದನ್ನು ಉಪಯೋಗಿಸುವ ಜನರ ಬಗ್ಗೆ ವಿಚಾರ ಮಾಡಬೇಡವೇ? ಒಬ್ಬ ಅಶಿಕ್ಷಿತ ಮತ್ತು ಯಂತ್ರದ ಬಗ್ಗೆ ಏನೂ ಅರಿಯದ ರೈತನಿಗೆ ಅದನ್ನು ನಡೆಸಲು ಕೊಡುವದಿದೆ. ಯಂತ್ರಕ್ಕೆ ಅವನು ಎಷ್ಟು ಬೆದರುವನು ಎಂಬುದು ನಿಮಗೆ ಹೇಳಲಿಕ್ಕೇ ಬೇಡ" ಎಂದರು ಗಾಂಧೀಜಿ.

"ನಮಗೆ ಅದರ ಪೂರ್ಣ ಕಲ್ಪನೆ ಇದೆ. ಆದರೆ ಅದರೊಡನೆಯೆ ಒಂದು ಯಂತ್ರದಿಂದ ವಿಶೇಷ ಲಾಭವಾಗುವದೆಂದು ತಿಳಿದೊಡನೆಯೇ ಆ ಅಶಿಕ್ಷಿತನೆಂದು

ಕಾಣುವ ರೈತನು ಯಂತ್ರದ ಉಪಯೋಗವನ್ನು ಎಷ್ಟು ಉತ್ಸಾಹದಿಂದ ಮಾಡುತ್ತಾನೆಂಬುದನ್ನೂ ನಾವು ಅನುಭವದಿಂದ ತಿಳಿದಿದ್ದೇವೆ. ಹಳ್ಳಿಯಲ್ಲಿಯ ಜನ ಹೊಲಿಗೆಯ ಯಂತ್ರ, ಸಾಯಕಲ್ ಮೊದಲಾದವುಗಳನ್ನು ಸಾಮಾನ್ಯ ವಾಗಿ ಉಪಯೋಗಿಸುತ್ತಾರೆ. ಮತ್ತು ಇಂಜಿನ ಪಂಪಿನಂಥ ಯಂತ್ರ ಗಳನ್ನು ಉಪಯೋಗಿಸಲು ಅವರಲ್ಲಿ ಎಷ್ಟು ಉತ್ಸುಕತೆ ಇದೆ ಎಂಬು ದನ್ನು ನಾವು ದಿನಾಲು ನೋಡುತ್ತೇವೆ. ಆದುದರಿಂದ ಈ ಚರಖದಿಂದ ಹೊರಡುವ ನೂಲಿನ ಮೂಲಕ ತಮ್ಮ ಹೊಟ್ಟೆ ತುಂಬಿಕೊಳ್ಳಲು ಸಮರ್ಥ ರಾಗುತ್ತೇವೆ ಎಂದು ಅವರಿಗೆ ಕಂಡುಬಂದರೆ, ಯಾವುದೇ ಹಳ್ಳಿಯಲ್ಲಿಯೂ ಅದಕ್ಕೆ ಸ್ವಾಗತ ದೊರೆಯುತ್ತದೆಂದು ನನಗೆ ನಿಶ್ಚಯವಾಗಿದೆ" ಎಂದರು ಲಕ್ಷ್ಮಣರಾಯರು.

"ಆದರೆ ಈ ರಾಟೆಯು ಮುರಿದರೆ ಏನು ಮಾಡಬೇಕು ?" ಎಂದರು ಗಾಂಧೀಜಿ.

"ಅದರ ಬಿಡಿ ಭಾಗಗಳು ಕೂಡಲೇ ಸಿಗುವ ವ್ಯವಸ್ಥೆ ಮಾಡೋಣ. ಅಥವಾ ಅದು ಸತತವಾಗಿ ಒಳ್ಳೇ ಸ್ಥಿತಿಯಲ್ಲಿರುವಂತೆ ಸೇವೆಯನ್ನು ಸಲ್ಲಿಸುವ ವ್ಯವಸ್ಥೆಯನ್ನು ಮಾಡೋಣ" ಎಂದರು ನಾನಾಸಾಹೇಬ ಗುರ್ಜರರು.

"ನಿಮ್ಮ ಹೇಳಿಕೆ ಸರಿಯಾಗಿದೆ. ಆದರೆ ನನ್ನ ಸ್ವಪ್ನದಲ್ಲಿ ಯಾವ ಸಾದಾ ರಚನೆಯು, ಹಳ್ಳಿಯ ಬಡಿಗನಿಗೂ ಕೂಡ ಮಾಡಲು ಬರುವ, ಚರಖಾದ ಚಿತ್ರ ವಿದ್ದಿತೋ ಅಂತಹ ಚರಖವು ನಿಮ್ಮದಲ್ಲ. ಅದಕ್ಕೆ ನಾನಾದರೂ ಏನು ಮಾಡಲಿ ?" ಎಂದರು ಗಾಂಧೀಜಿ.

"ಹೀಗಿದ್ದರೆ ತಮ್ಮ ಚರಖಾ ಇಷ್ಟು ಸುಲಭ ರೀತಿಯಿಂದ ಸಿದ್ಧವಾಗುವ ದೆಂದು ತಮ್ಮ ಕಲ್ಪನೆ ಇದ್ದರೆ ಅದರ "ಬ್ಲೂಪ್ರಿಂಟ್"ನ್ನು ನಮಗೆ ಕಳಿಸಿದ್ದರೆ ಚೆನ್ನಾಗಿತ್ತು ?" ಎಂದನು ಶಂತನುರಾಯ.

ಈ ಮಾತಿಗೆ ಗಾಂಧೀಜಿಯವರು ಏನೂ ಉತ್ತರ ಕೊಡದೆ ಅವರ ಕಡೆಗೆ ಸುಮ್ಮನೆ ನೋಡಿದರು.

"ನಮ್ಮ ಮಾತು ತಮಗೆ ರುಚಿಸದಿದ್ದರೆ ಆ ವಿಷಯವಾಗಿ ನಾವು ತಮ್ಮ ಕ್ಷಮೆ ಕೇಳುತ್ತೇವೆ" ಎಂದರು ಲಕ್ಷ್ಮಣರಾಯರು. "ಆದರೆ ತಾವು ನಮ್ಮ ಮನಸ್ಥಿತಿಯ ಕಲ್ಪನೆಯನ್ನು ಮಾಡಿದರೆ ನೆಟ್ಟಗಾಗುವದು. ಈ ಚರಖವನ್ನು ಮಾಡಲು ನಾವು ಬಹು ಶ್ರಮಪಟ್ಟಿದ್ದೇವೆ. ಸಾವಿರಾರು ರೂಪಾಯಿಗಳನ್ನು

ಖರ್ಚು ಮಾಡಿದ್ದೇವೆ. ಆದರೆ ಇದೆಲ್ಲವೂ ಕೇವಲ ಒಂದು ಉಚ್ಚ ಉದ್ದೇಶಕ್ಕಾಗಿ. ರಾಜಕಾರಣವು ನಮ್ಮ ಕ್ಷೇತ್ರವಲ್ಲದಿದ್ದರೂ ತಾವು ಕೈಯ್ಯಲ್ಲಿ ತೆಗೆದುಕೊಂಡ ಈ ಚರಖಾ ಚಳವಳಿಯು ಯಶಸ್ವಿಯಾಗಲು ಅವಕ್ಕೆ ಯಂತ್ರಜ್ಞರು ಸಹಾಯ ಮಾಡುವದು ಅವಶ್ಯವೆಂಬುದನ್ನರಿತು, ನಾವು ಇದರಲ್ಲಿ ಮನಸ್ಸು ಹಾಕಿದ್ದೇವೆ. ಲಕ್ಷ ರೂಪಾಯಿಗಳೆಂದರೆ ಬಹು ದೊಡ್ಡ ಹಣವಾಗಬಹುದು, ಆದರೆ ಅದು ನಮ್ಮಬಾಯಿಯಲ್ಲಿ ನೀರು ಬಿಡಿಸಲಿಲ್ಲ. ಬೇಕಾದರೆ ಈ ಮೊಬಲಗನ್ನು ಈ ಚರಖಾಕ್ಕೆ ಕೊಟ್ಟಿದ್ದೇವೆ ಎಂದಿಷ್ಟೇ ಪ್ರಸಿದ್ಧಿಸಿರಿ. ಮತ್ತು ಈ ಹಣ ನಮ್ಮ ಅಲ್ಪ ಸೇವೆಯೆಂದು ತಾವು ಯಾವುದಕ್ಕೂ ಉಪಯೋಗಿಸಬಹುದು. ತಾವೇ ಇಲ್ಲಿಯ ವರೆಗೆ ನೀರೆರೆದು ಬೆಳೆಯಿಸಿದ ನಮ್ಮ ಅಪೇಕ್ಷೆಯ ಸಸಿಯನ್ನು ತಾವೇ ಕಮರಿಸಬಾರದು" ಎಂಬುದೇ ನಮ್ಮ ನಮ್ರ ಬಿನ್ನಹ.

ತಮ್ಮ ಯಾವ ಯುಕ್ತಿವಾದವೂ ಅವರ ಮುಂದೆ ನಡೆಯುವದಿಲ್ಲೆಂದು ಲಕ್ಷ್ಮಣರಾಯರಿಗೆ ತಿಳಿದೊಡನೆಯೇ ಶಾಂತರೀತಿಯಿಂದ "ಒಳ್ಳೇದು ನಮ್ಮ ಚರಖಾ ತಮ್ಮ ಮನಸ್ಸಿಗೆ ಬಂದಿಲ್ಲವೆಂಬ ನಿರ್ಣಯ ತಿಳಿದ ಮೇಲೆ ನಾವು ಕೂಡ ಇದರ ಬಗ್ಗೆ ಹೆಚ್ಚು ಚರ್ಚಿಸುವದು ಒಳ್ಳೇದಲ್ಲ. ತಾವು ರಾಷ್ಟ್ರದ ಮುಖಂಡರು. ತಾವು ಹೇಳಿದ ಮಾತನ್ನು ಆನಂದದಿಂದ ಸ್ವೀಕರಿಸುವದೇ ನಮ್ಮ ಕರ್ತವ್ಯ. ಆದರೂ ಇಲ್ಲಿಂದ ಮರಳುವ ಮೊದಲು ಈ ಚರಖದ ಬಗ್ಗೆ ನಮ್ಮ ಯಾವ ತಕರಾರುಗಳು ಇಲ್ಲವೆಂದು ತಮ್ಮಲ್ಲಿ ಬಿನ್ನವಿಸಲು ಇಚ್ಛಿಸುತ್ತೇವೆ. ಈ ಚರಖಾದ ನಿಮಿತ್ತವಾಗಿ ತಮ್ಮಂಥ ಮಹಾಪುರುಷರ ನಿಕಟ ಸಂಬಂಧವು ಬಂದುದು ಒಂದು ದೊಡ್ಡ ಲಾಭವೆಂದು ನಾವು ತಿಳಿಯುತ್ತೇವೆ" ಎಂದರು ಲಕ್ಷ್ಮಣರಾಯರು. ಚರಖಾದ ಈ ಮೆಚ್ಚು ಯಾರಿಗೂ ಕೊಡಲ್ಪಡಲಿಲ್ಲ.

ವರ್ಧಾದಿಂದ! ಎಲ್ಲರೂ ಕಿರ್ಲೋಸ್ಕರವಾಡಿಗೆ ಬಂದರು. ಲಕ್ಷ್ಮಣರಾಯರಿಗೆ ಔಂಧದಿಂದ ಒಂದು ತಾರು ಬಂದಿತ್ತು. ಟೇಬಲ್ಲಿನ ಮೇಲೆ ಅದು ಅವರ ದಾರಿಯನ್ನು ಕಾಯುತ್ತಿತ್ತು. ಅದರಲ್ಲಿ ಇಷ್ಟೇ ಸಂಗತಿ ಇದ್ದಿತು.

"ಅಭಿನಂದನ ನಿಮ್ಮನ್ನು ಔಂಧ ಸಂಸ್ಥಾನದ ಲೋಕನಿಯುಕ್ತ ಮಂತ್ರಿಗಳನ್ನಾಗಿ ಆರಿಸಲಾಗಿದೆ. ಆದುದರಿಂದ ಈ ಕಡೆಗೆ ತಾವು ತೀವ್ರವಾಗಿ ಬರಬೇಕು." ರಾಜಾಸಾಹೇಬ.



ವರ್ಧಾದಲ್ಲಿ ಮಹಾತ್ಮರೊಡನೆ ಲಕ್ಷ್ಮಣರಾಯರ ಚರ್ಚೆ, ೧೯೩೫



ಪುಣೆಯ ತೋಟದಲ್ಲಿ ಕೂಲಿಕಾರರೊಡನೆ ಲಕ್ಷ್ಮಣರಾಯರು



ಕಿ. ವಾಡಿಯಲ್ಲಿ
ಶ್ರೀ. ಬಾಳಾಸಾಹೇಬ
ರಿಂದ ಧ್ವಜವಂದನೆ
(೧೯೩೧)

(ಕೆಳಗಿನದು)
ದಕ್ಷಿಣ ಮಹಾರಾಷ್ಟ್ರ
ಔದ್ಯೋಗಿಕ
ಶಂಕುಸ್ಥಾಪನೆ
ಲಕ್ಷ್ಮಣರಾಯಗಿಂದ



# ೧೮

# ಕಾರಖಾನೆಯಿಂದ ದಿವಾಣಗಿರಿಗೆ

ಕಾರಖಾನೆಯನ್ನು ನಡೆಯಿಸುವದೇ ಬೇರೆ, ಸಂಸ್ಥಾನದ ಕಾರಭಾರ ಮಾಡುವದೇ ಬೇರೆ. ಎರಡೂ ಭಿನ್ನಕಾರ್ಯಗಳು. ಇವುಗಳನ್ನು ನಿರ್ವಹಿಸಲು ಬೇಕಾಗುವ ಅನುಭವ ಹಾಗೂ ಕೌಶಲ್ಯಗಳೂ ಭಿನ್ನ. ನಡೆಯಿಸುವ ಕೆಲಸ ಒಂದೇ ಎಂದು ಟಾಂಗಾದವನು ಮೋಟಾರು ನಡೆಯಿಸಬಹುದೇ !

ಆದರೆ ಒಂದರ ಹೊಣೆ ಹೊತ್ತವರಿಗೆ ಅನಪೇಕ್ಷಿತವಾಗಿ ಕೆಲವು ವೇಳೆ ಹೊಸ ಹೊಣೆ ಹೊರಲು ಮುಂದಾಗ ಬೇಕಾಗುತ್ತದೆ. ಇದು ನಿತ್ಯದ ಅನುಭವ. ಆಗ ಅವರಿಗೆ 'ಆಗುವದು ಅಥವಾ ಇಲ್ಲ' ಎಂದು ಹೇಳಲೂ ಅವಕಾಶ ಇರುವದಿಲ್ಲ. ಲಕ್ಷ್ಮಣರಾಯರಿಗೆ ಬಂದ ದಿವಾಣಗಿರಿಯ ಕರೆಯೂ ಅಂತಹ ಪ್ರಸಂಗದಲ್ಲೊಂದು.

ಈ ದಿವಾಣಗಿರಿಯ ಸ್ಥಾನವು ಮುಳ್ಳಿನ ಹಾಸಿಗೆ ಎಂಬುವದನ್ನು ರಾಯರು ಪೂರ್ಣವಾಗಿ ತಿಳಿದಿದ್ದರು. ಈ ಕಾರ್ಯಕ್ಕೆ ಮುತ್ಸದ್ದಿತನ, ಕಾಯಿದೆಯ ಪಾಂಡಿತ್ಯ, ಯುಕ್ತಿಪ್ರಯುಕ್ತಿಗಳನ್ನು ಉಪಯೋಗಿಸುವ ಕಲೆ, ಅವಶ್ಯ. ಆದರೆ ಲಕ್ಷ್ಮಣರಾಯರು ಇವುಗಳನ್ನು ಕನಸಿನಲ್ಲಿಯೂ ಅರಿಯರು. ಒಳಗೊಂದು ಹೊರಗೊಂದು ಎಂಬುದು ಅವರಿಗೆ ಗೊತ್ತೇಯಿಲ್ಲ. ಮನದಲ್ಲಿರುವುದನ್ನು ನಿರ್ದಾಕ್ಷಿಣ್ಯವಾಗಿ ಆಡಿಬಿಡುವವರು. ಹೀಗಿದ್ದರೂ ಯಾವುದೇ ಮುಂದಾಳುತನ ವಹಿಸುವ ಪ್ರಸಂಗ ಬಂದರೆ ಅವರು ಎಂದೂ ಹಿಂಜರಿಯುತ್ತಿದಿಲ್ಲ. 'ಮಾಡುತ್ತ ಹೋದಂತೆ ಆಗುತ್ತದೆ. ಆದ್ದರಿಂದ ಮೊದಲು ಮಾಡಿಯೇ ಬಿಡಬೇಕು.' ಎಂಬುದೇ ಅವರ ಬೀಜಮಂತ್ರ. ಹಿಡಿದದ್ದನ್ನು ಪೂರ್ಣ ಮಾಡದೆ ಅವರು ಎಂದೂ ಬಿಡುತ್ತಿದ್ದಿಲ್ಲ.

ಸಂಸ್ಥಾನಕ್ಕೆ ಸೇವೆಯನ್ನು ಸಲ್ಲಿಸಬೇಕೆಂದು ನಿಶ್ಚಯ ಮಾಡಿದ ಮೇಲಂತೂ ಲಕ್ಷ್ಮಣರಾಯರು ಅದರ ಸೇವೆಯನ್ನು ನಾನಾ ಬಗೆಯಾಗಿಯೂ ಸಂಸ್ಮರಣೀಯವಾಗಿಯೂ ಮಾಡಿತೋರಿಸಿದರೆಂಬ ಸಂಗತಿಯು ಓದುಗರಿಗೆ

ಪ್ರಿಯವೆನಿಸದಿರದು. ಈ ಕೆಲಸಕ್ಕೆಂದೇ ಅವರು ವಾರದಲ್ಲಿ ಮೂರುದಿನ ಔಂಧಕ್ಕೆ ಹೋಗ ಬೇಕಾಗುತ್ತಿತ್ತು.

ಆ ವರುಷ ಸಂಸ್ಥಾನದಲ್ಲಿಯ ಗುಣದಾಳ ತಾಲೂಕಿನ ಬೆಳೆಯ ಸ್ಥಿತಿಗತಿ ಕೆಟ್ಟು ಹೋದುದರಿಂದ ಅಲ್ಲಿಯ ರೈತರು ಹಪ್ತೆಯನ್ನು ತುಂಬಲು ತಕರಾರು ಹೂಡಿದರು. ಆದಕಾರಣ ಅಲ್ಲಿಯ ಪ್ರತ್ಯಕ್ಷ ಪರಿಸ್ಥಿತಿ ಹೇಗಿರುವದೆಂಬುದನ್ನು ಕಣ್ಣಾರೆ ಕಾಣಲು, ಲಕ್ಷ್ಮಣರಾಯರು ಆ ಭಾಗದಲ್ಲೆಲ್ಲ ಸಂಚರಿಸಿ ಬರಬೇಕೆಂದು ರಾಜೇಸಾಹೇಬರು ಸೂಚಿಸಿದರು. ಬೆಳೆಗೇಡಾದ ಭಾಗವು ಸಂಸ್ಥಾನದ ಕನ್ನಡ ವಿಭಾಗವಾಗಿತ್ತು. ಲಕ್ಷ್ಮಣರಾಯರಿಗೆ ಕನ್ನಡ ಮಾತನಾಡಲು ಬರುತ್ತಿದ್ದುದರಿಂದ ರಾಜೇಸಾಹೇಬರು ಅದರ ಉಪಯೋಗವನ್ನು ಮಾಡಿ-ಕೊಳ್ಳದೆ ಬಿಡಲಿಲ್ಲ. ಲಕ್ಷ್ಮಣರಾಯರು ಆ ಭಾಗದ ಪರಿಸ್ಥಿತಿಯನ್ನು ಅವ-ಲೋಕಿಸಿ ಬಂದನಂತರ ತಾ. ೫–೭–೧೯೩೩ ನೇ ದಿನ ರಾಜೇಸಾಹೇಬರಿಗೆ ಕೆಳಗಿನಂತೆ ವರದಿ ಮಾಡಿದರು.

"ನಿನ್ನೆ ರಾತ್ರಿ ನಾನು ಧನ್ನರಗಿ ಯಿಂದ ಮರಳಿದೆನು. ಅಲ್ಲಿಯ ಸುತ್ತು-ಮುತ್ತಲಿನ ೮–೧೦ ಹಳ್ಳಿಗಳ ಹಾಗೂ ಗುಣಧಾಳದೊಳಗಿನ ರೈತರೊಡನೆ ವಿಚಾರ–ವಿನಿಮಯ ಮಾಡಿದೆನು. ಅಲ್ಲಿಯ ಬೆಳೆಯ ಆಣೆವಾರಿ ೩–೪ ಆಣೆ ಯಷ್ಟೇ ಇದೆ ಎಂದು ಅವರ ಅಭಿಪ್ರಾಯವಿದೆ. ಗಲಗಲಿ, ಹೊಸೂರ, ಜಮ್ಮಗಿ, ಕಣಬೂರ, ಕೆಂಗೆಲಗುತ್ತಿ ಮೊದಲಾದ ಹಳ್ಳಿಗರು "ಎರಡನೇ ಹಪ್ತೆಯನ್ನು ತುಂಬುವ ತ್ರಾಣವು ತಮಗಿರುವದಿಲ್ಲ; ಸೂಟು ಬಿಡಬೇಕು" ಎಂದು ಬೇಡಿ ಕೊಳ್ಳುತ್ತಿದ್ದಾರೆ. ಒಕ್ಕೊರಲಿನ ಈ ಬೇಡಿಕೆಯನ್ನು ನಾನು ಕೂಲಂಕುಷವಾಗಿ ವಿಚಾರ ಮಾಡಿದೆನು. ಚಳವಳಿಯ ಕೆಲವೊಂದು ಮುಂದಾಳುಗಳ ಕೈವಾಡವು ಇದರಲ್ಲಿರುವಂತೆ ನನಗೆ ಕಂಡುಬಂದಿತು. ಇಲ್ಲಿಯ ಪರಿಸ್ಥಿತಿಯೇನೋ ಕೆಟ್ಟದೆ. ಆದರೆ ಎಲ್ಲ ತಕರಾರುಗಳು ನಿಜವಾದವು ಎಂದು ಹೇಳಲಿಕ್ಕೇ ಬರುವಂತಿಲ್ಲ. ವಸ್ತುಸ್ಥಿತಿಯನ್ನು ವಿಪರ್ಯಸ್ತ ಮಾಡಿರುವರು. ಅತಿರಂಜಿತವನ್ನಾಗಿ ಮಾಡುವ ಪ್ರವೃತ್ತಿಯು ಕಂಡುಬರುತ್ತಿದೆ. ಯಾಕಂದರೆ ಹಲ–ಕೆಲವರು ತಮ್ಮ ಎತ್ತುಗಳನ್ನು ಮಾರಿ ಜೀವಿಸಿದರೆಂಬುದನ್ನು ಕೇಳಿ ನಾನು ಹಾಗೆ ಎಷ್ಟು ಜನರು, ಎಷ್ಟು ಎತ್ತುಗಳನ್ನು ಮಾರಿ ಜೀವಿಸಿದರೆಂಬುದನ್ನು ಪಟ್ಟಿ ಮಾಡಿಕೊಡಲು ಕುಲಕರ್ಣಿಯವರನ್ನು ಕೇಳಿದೆನು. ಆದರೆ ಅದು ದೊರೆಯಲಿಲ್ಲ. ಜನರು ಹಟ ಹಿಡಿಯುತ್ತಾರೆಂದು ಹಪ್ತೆಯನ್ನು ಸೂಟು ಬಿಟ್ಟಿದ್ದಾದರೆ

ಎಲ್ಲ ಕಡೆಗೂ ಇದು ಆರಂಭವಾಗದಿರದು. ಪರಿಸ್ಥಿತಿಯು ಸೂಕ್ಷ್ಮವಾಗಿರುವದ ರಿಂದ ಇದಕ್ಕೆ ಯೋಗ್ಯ ಉಪಾಯ ಕೈಕೊಳ್ಳಬೇಕು. ನಾನು ಈ ತಕರಾರೀ ತಂಡದವರಿಗೆ ನಾಕಷ್ಟು ತಿಳಿಸಿ ಹೇಳಿದೆನು. ಆದರೆ ಅದು ಡಬ್ಬುಗೊಡದ ಮೇಲೆ ನೀರು ಸುರುವಿದಂತಾಯಿತು.

ಈ ಜನರಿಗೆ ಉಪ್ಪನ್ನು ತಯಾರಿಸುವಂಥ ಕೆಲವು ಉದ್ಯೋಗಗಳನ್ನು ಕೈಕೊಳ್ಳಿರಿ. ಅದಕ್ಕಾಗಿ ಸಹಕಾರೀ ಸಂಘ ಸ್ಥಾಪಿಸಿರಿ. ಎಂದು ಸೂಚಿಸಿದರೆ, ಅವರಿಂದ 'ನಮ್ಮ ಸಾವುಕಾರನೇ ನೆಟ್ಟಗೆ' ಎಂದು ಉತ್ತರ ದೊರಕಿತು. ಅವನು ಒಂದು ಒಂದೂವರೆ ರೂಪಾಯಿ ಬಡ್ಡಿ ಹಾಕಿದರೂ ಒಂದಕ್ಕೆ ಎರಡರಂತೆ ಕಾಗದವನ್ನು ಬರೆಯಿಸಿಕೊಂಡರೂ ಅವನ ಕಾಲುಗಳಿಗೆ ಬಿದ್ದರೆ ಎಷ್ಟಾದರೂ ನೆರವು ದೊರೆತೇ ತೀರುವದೆಂದು ಅವರ ಗ್ರಹಿಕೆಯಾಗಿದೆ. ಸಹಕಾರೀ ಸಂಘಗಳು ಸರಕಾರೀ ಕಾನೂನಗಳಂತೆ ನಡೆಯತಕ್ಕವು. ಈ ಸಂಘಗಳಿಂದ ಸಾವುಕಾರೀ ಪದ್ಧತಿಯ ಸೌಲಭ್ಯಗಳು ದೊರೆಯಲಾರವು ಎಂದು ಈ ಜನರ ತಿಳುವಳಿಕೆಯಾ ಗಿದೆ. ಈ ಹುಂಬ ತಿಳವಳಿಕೆಯನ್ನು ತೊಡೆದುಹಾಕಲು ನಾನು ವಿಶ್ವ ಪ್ರಯತ್ನ ವನ್ನೇ ಮಾಡಬೇಕಾಯಿತು.

ಈ ಪ್ರಕಾರವಾಗಿ ನನ್ನ ಈ ಐದು ದಿನಗಳ ಸಂಚಾರದಲ್ಲಿ ನನ್ನ ಕಣ್ಣಿಗೆ ಬಿದ್ದ ಸಂಗತಿಗಳನ್ನು ಬರೆದು ವರದಿಯನ್ನೊಪ್ಪಿಸಿದ್ದೇನೆ. ಇದರಲ್ಲಿ ಸಂಸ್ಥಾನ ದೊಳಗಿನ ಕೆಲವು ವ್ಯಕ್ತಿಗಳ ನಾಮ ನಿರ್ದೇಶವಾಗಿದ್ದರೂ ಅವರ ವಿಷಯಕ್ಕೆ ನನಗಾವುದೇತರದದ ವೈಯಕ್ತಿಕ ವಿರೋಧವಿರುವದಿಲ್ಲ. ಆದರೆ ರೈತರಿಗೆ ಹಿತವಾಗುವ ಯೋಗ್ಯವಾದ ದಾರಿಯನ್ನು ತೋರಿಸದೆ, ಅವರನ್ನು ಅಡ್ಡ ಮಾರ್ಗಕ್ಕೆ ಹಚ್ಚಿ ತಮ್ಮ ಲೋಕಪ್ರಿಯತೆಯನ್ನು ಬೆಳೆಗಿಸಿಕೊಳ್ಳುವಂಥ ಕೃತ್ಯವು ನನಗೆ ಸರಿದೋರದು. ಇಷ್ಟೇ".

ಲಕ್ಷ್ಮಣರಾಯರು ಯಾವುದೇ ಕೆಲಸವನ್ನು ಇಷ್ಟೊಂದು ಮನಸ್ಸಿಗೆ ಹಚ್ಚಿಕೊಂಡು ಏಕೆ ದುಡಿಯುತ್ತಿದ್ದರೆಂಬ ಪ್ರಶ್ನೆಯು ಇಲ್ಲಿ ಉದ್ಭೂತವಾಗದಿ ರದು. ಈ ಲೋಕದಲ್ಲಿ ಇಬ್ಬಗೆಯ ಜನರು ಕಾಣುತ್ತಾರೆ. ಸುಗ್ರಾಸಭೋಜನ ವನ್ನುಂಡು ಜಿಡಗಿನ ಬಟ್ಟೆಗಳನ್ನುಟ್ಟು, ಉಂಡುಟ್ಟು ನಾಟಕ–ಸಿನೇಮಾ- ಗಳನ್ನು ನೋಡುತ್ತ, ಚಕ್ಕಂದದಿಂದ ಸಂಸಾರ ಸಾಗಿಸಿದರೆ, ಜೀವನವು ಕೃತಾರ್ಥವಾಯಿತು; ಗಂಗೆಯಲ್ಲಿ ಮಿಂದ ಪುಣ್ಯವು ಲಭಿಸಿತು, ಎಂದು ತಿಳಿ ಯುವ ಜನರೂ ಉಂಟು. ಕೆಲ ಜನರು ವಿಲಕ್ಷಣ ಮಹತ್ವಾಕಾಂಕ್ಷಿಗಳಾಗಿ

ತಮ್ಮ ಸ್ವಭಾವಗಳಿಗನುಸರಿಸಿಯೋ ಅಥವಾ ಕಲೆಯ ಬಗ್ಗೆ ಇರುವ ತಮ್ಮ ಪ್ರೀತಿಯ ಪ್ರಗತಿಯನ್ನು ಸಾಧಿಸಿಕೊಳ್ಳುವದಕ್ಕಾಗಿಯೋ ಜೀವನವನ್ನೇ ಪಣಕ್ಕಿಟ್ಟು ಅಖಂಡ ಹೋರಾಡುವವರೂ ಉಂಟು ಆದರೆ ಲಕ್ಷ್ಮಣರಾಯರ ಕಡೆಗೆ ನೋಡಿದರೆ, ಅವರು ಕೇವಲ ತಮ್ಮ ಸ್ವಂತ ಮಹತ್ವಾಕಾಂಕ್ಷೆಯ ಪೂರ್ತಿಗಾಗಲೀ ಇಲ್ಲವೆ ಸುಖಮಯವಾದ ಸಂಸಾರವನ್ನು ಸಾಗಿಸಬೇಕೆಂಬ ಉದ್ದಿಶ್ಯವನ್ನಿಟ್ಟುಕೊಂಡವರಾಗಲೀ ಅಲ್ಲವೆಂಬ ಮಾತು ಒಡೆದು ಕಾಣುವದು. ಅವರ ಕೆಲಸವು ಕಾರಖಾನೆಯದೇ ಆಗಿರಲಿ—, ಇಲ್ಲವೇ ಹೊರಗಿನದೇ ಆಗಿರಲಿ, ಅದರಿಂದ ಜಗತ್ತಿನ ಸೌಖ್ಯ ಸೌಲಭ್ಯತೆಗಳಿಗೆ ತಮ್ಮ ಕಾಣಿಕೆ ಎಷ್ಟು ಸಲ್ಲಿತು? ಎಂಬ ವಿಚಾರವೇ ಅವರ ಕಣ್ಮುಂದೆ ಯಾವಾಗಲೂ ಇರುತ್ತಿತ್ತು. ಅವರ ಸ್ವಭಾವ ಚಿತ್ರಣವನ್ನು ಸ್ವಲ್ಪದರಲ್ಲಿಯೇ ಚಿತ್ರಿಸಬೇಕೆಂದರೆ, "ತಮ್ಮ ನೆರೆಹೊರೆಯವರು—ಅವರು ಕಾರಖಾನೆಯವರೇ ಇರಲಿ, ಹಳ್ಳಿಯ ರೈತನೇ ಇರಲಿ, ಗಂಡು—ಹೆಣ್ಣು ಎಂಬ ಯಾವ ಭೇದವನ್ನು ಎಣಿಸದೆ ಅವರ ಪರಿಸ್ಥಿತಿಯು ಹೇಗೆ ಸುಧಾರಿಸಿತು ಎಂಬುದರ ಕಡೆಗೇ ಅವರ ಲಕ್ಷ್ಯವಿರುತ್ತಿತ್ತು. ಜಗತ್ತಿನ ಕಲ್ಯಾಣ ಮಾಡಲು ಹುಟ್ಟಿಬಂದ ಅವತಾರೀ ಪುರುಷ ಅಥವಾ ಪ್ರೇಷಿತ ಪ್ರತಿನಿಧಿಯೆಂದು ಅವರು ಜಂಭ ಕೊಚ್ಚಿಕೊಳ್ಳುವವರಾಗಿರಲಿಲ್ಲ. ಸಮಾಜ ಸುಧಾರಕನೆಂದು ಯಾರಾದರೂ ತಮ್ಮ ಉಘೋ ಉಘೋ ಮಾಡಬೇಕೆಂದು ಬಯಸುವವರಲ್ಲ. ತಾವು ಕೈಕೊಳ್ಳತಕ್ಕ ಕೆಲಸದಿಂದ ಯಾರಿಗಾದರೂ ಲಾಭವಾಗುವಂತಿದ್ದರೆ ಅವರು ಆ ಕೆಲಸಕ್ಕೆ ಬೆನ್ನು ಹತ್ತಿಯೇ ಬಿಡುವರು. ಎಂದು ಚಿತ್ರಿಸಬಹುದು.

ಲಕ್ಷ್ಮಣರಾಯರ ಹಲವಾರ ಉದ್ಯೋಗಗಳ ಹಿಂದಿನ ಈ ಮನೋಭೂಮಿಕೆ ಗೊತ್ತಿರದಿದ್ದರೆ, ಅವರು ಕಾರಖಾನೆಯ ಕೆಲಸಗಳ ಹೊರತು ಇನ್ನಿತರ ಕಾರ್ಯ ಕೈಕೊಳ್ಳುವದೆಂದರೆ 'ಮನೆಯನ್ನವನ್ನುಂಡು ಸೈನಿಕರಿಗೆ ಭಕ್ಕರಿ ಬಡಿಯುವ ಉದ್ಯೋಗವೆಂದು' ಎಷ್ಟೋ ಜನರಿಗೆ ಅನಿಸಬಹುದು. "ಈ ಮನುಷ್ಯನಿಗೆ ತನ್ನ ಕಾರಖಾನೆಯ ಉದ್ಯೋಗಕ್ಕೇನು ಕಡಿಮೆ! ಯಾಕೆ ಬೇಕಾಗಿತ್ತಿವನಿಗೆ! ಗಲಗಲಿ ಹಾಗೂ ಕೆಂಗಲಗುತ್ತಿಯಂಥ ಹಳ್ಳಿಗಳಿಗೆ ಹೋಗಿ ಆ ಅಡಮುಟ್ಟ ಜನರ ಮುಂದೆ ತಲೆಯೊಡೆದುಕೊಳ್ಳಲು ಇವರಿಗೆ ತಮ್ಮ ಮನೆ-ಮಾರಿನ ವಿಚಾರ ಗಿಚಾರವಿದೆಯೋ ಇಲ್ಲವೋ" ಎಂದು ಜನರು ಆಡದೆ ಇರುತ್ತಿದ್ದಿಲ್ಲ. ಇದೆ-ಇಗದೆ ಏನು ಮಾಡೀತು? ಆದರೆ ಸ್ವಲ್ಪ ಬೇರೆ ವಿಧವಾಗಿದೆ.

ನಾವು-ನೀವು ಮನೆಯೆಂದರೆ ನಾಲ್ಕು ಗೋಡೆಗಳ ನಡುವಿರುವದಷ್ಟೇ ನವು ಮನೆ ಎಂದು ತಿಳಿದುಕೊಂಡಿದ್ದೇವೆ. ಆದರೆ ಲಕ್ಷ್ಮಣರಾಯರ ಮನೆಯು ಬಹಳ ದೊಡ್ಡದಿದ್ದು ಆದಕ್ಕೆ ಗೋಡೆಗಳೇ ಇದ್ದಿದ್ದಿಲ್ಲ.

ಲಕ್ಷ್ಮಣರಾಯರು ಗ್ರಾಮೋದ್ಧಾರದ ಕಡೆಗೆ ಹೇಗೆ ಒಲಿದರೆಂಬ ಮಾತನ್ನು ಈಗ ಹೇಳುವದು ಇಷ್ಟ. ನಾವು ಇದಕ್ಕಾಗಿ ಕೆಲವು ವರುಷಗಳ ಹಿಂದೆ ಹೋಗಬೇಕು.

ಔಂಧದ ರಾಜೇಸಾಹೇಬರು ತಮ್ಮ ಪ್ರಜೆಗಳ ಹಿತವಾಗಬೇಕೆಂದು ಬಯಸುವವರು. ಹೊಸ ಪರಿಸ್ಥಿತಿಯನ್ನರಿತ ಅವರು ಪ್ರಜರಿಗೂ ಕೆಲವೊಂದು ಅಧಿಕಾರಗಳನ್ನು ಕೊಟ್ಟು ಸಂಸ್ಥಾನದಲ್ಲಿ ಪ್ರಜಾಪ್ರಭುತ್ವದ ಬೀಜಾರೋಪಣ ಮಾಡಬೇಕೆಂದು ಬಯಸುವವರು ಇಷ್ಟರ ಸಲುವಾಗಿಯೇ ಅವರು ೧೯೧೭ರಲ್ಲಿ ಔಂಧದಲ್ಲಿ ಮೊದಲನೆಯ ರೈತ ಸಭೆಯನ್ನು ನೆರವೇರಿಸಿ, ೩೦೦ ಜನಸಂಖ್ಯೆಗಿಂತ ಹೆಚ್ಚು ವಸತಿಯುಳ್ಳ ಸಂಸ್ಥಾನದಲ್ಲಿಯ ಪ್ರತಿಯೊಂದು ಹಳ್ಳಿಯಲ್ಲಿ ಗ್ರಾಮ ಪಂಚಾಯತಿಯನ್ನು ಆರಂಭಿಸಲಾಗುವದೆಂದು ಸಾರಿದರು. ಅದರಂತೆ ೧೯೩೩ ರಲ್ಲಿಯೇ ಕಿರ್ಲೋಸ್ಕರವಾಡಿಯ ಗ್ರಾಮಪಂಚಾಯತಿಯು ಸ್ಥಾಪನೆಗೊಂಡು ಲಕ್ಷ್ಮಣರಾವ ಕಿರ್ಲೋಸ್ಕರರು ಅದರ ಆಯ್ಕೆ ಹೊಂದಿದ ಅಧ್ಯಕ್ಷರಾಗಿದ್ದರು. ಈ ಗ್ರಾಮಪಂಚಾಯತಿಗೆ ಶಂಕರರಾವ ಕಿರ್ಲೋಸ್ಕರರು ಉಪಾಧ್ಯಕ್ಷರೂ ಅನಂತರಾವ ಫಳಣೀಕರ, ಸೌ|| ರಾಧಾಬಾಯಿ ಕಿರ್ಲೋಸ್ಕರ, ಸೌ|| ಗಂಗೂಬಾಯಿ ಜಾಂಭೇಕರ, ಮಂಗೇಶರಾವ ರೇಘೆ, ಗಣಪತರಾವ ವಿಜಾಪುರ, ಸ್ವಾಮಿರಾವ ಕೊಳ್ಳಿ, ಬಾಬೂರಾವ ಚೌಗುಲೆ ಮತ್ತು ಜ್ಞಾನೂ ಮಾನೆ ಎಂಬವರು ಸಭಾಸದರಾಗಿದ್ದರು.

ಗ್ರಾಮಪಂಚಾಯತಿಯು ಕಾರ್ಯಗಳಾದ ದೀಪ, ಆರೋಗ್ಯ, ಶಿಕ್ಷಣ ಮೊದಲಾದವು ಈ ಮೊದಲೇ ಕಾರಖಾನೆಯಿಂದ ನಡೆಯುತ್ತಿದ್ದವು. ಲಕ್ಷ್ಮಣರಾಯರು ಕುಂಡಲ, ರಾಮಪೂರ ಮೊದಲಾದ ಪಂಚಾಯತಿಗಳಿಗೆ ಸಹಾಯ ಮಾಡುತ್ತಿದ್ದರು.

ಹಳ್ಳಿಗಳ ಸುಧಾರಣೆಯ ವಿಚಾರ, ಕಾರ್ಯರೂಪಕ್ಕೆ ಇಳಿದಂತೆ ಸಹಕಾರೀ ಸಂಘಗಳ ಮಹತ್ವವೆಷ್ಟಿದೆ ಎಂಬ ಮಾತು ಲಕ್ಷದಲ್ಲಿ ಬರಲು ಲಕ್ಷ್ಮಣರಾಯರಿಗೆ ತಡ ಹಿಡಿಯಲಿಲ್ಲ. ಅವರು ಈ ಕೆಲಸದ ಮುಂದಾಳ್ತನವನ್ನು ವಹಿಸಿ, ಕಿರ್ಲೋಸ್ಕರವಾಡಿಯಲ್ಲಿ ಕೆಲಸಗಾರರ ಮತ್ತು ಸುತ್ತು-ಮುತ್ತಲಿನ

ಹಳ್ಳಿಗಳ ಸಲುವಾಗಿ ಅನೇಕ ಸಂಘಗಳನ್ನು ಸ್ಥಾಪಿಸಿದರು. ಈ ಎಲ್ಲ ಸಂಘಗಳ ಕಾರ್ಯಪ್ರವೃತ್ತಿ ಹಾಗೂ ಪ್ರಗತಿಯನ್ನು ಕಂಡು, ದಿ ಬಾಂಬೆ ಪ್ರಾವಿನ್ಶಿಯಲ್ ಕೊ–ಆಪರೇಟಿವ್ ಬ್ಯಾಂಕಿನ ಡಾಯರೆಕ್ಟರ ಬೋರ್ಡಿನಲ್ಲಿ ಲಕ್ಷ್ಮಣರಾಯರು ಒಮ್ಮತದಿಂದ ಆಯ್ಕೆ ಹೊಂದಿದರು. ಮತ್ತು ಅಲ್ಲಿಯು ಕೆಲಸವನ್ನು ಒಳ್ಳೇ ದಕ್ಷತೆಯಿಂದಲೂ ಜಾಣಾಕ್ಷತನದಿಂದಲೂ ಸಾರುಗಾಣಿಸಿದರು.

ಮುಂದೆ ೧೯೩೩ರಲ್ಲಿ ಶ್ರೀಮಂತ ಬಾಳಾಸಾಹೇಬರ ಹಿರಿಯ ಮಗನಾದ ರಾಜೇಸಾಹೇಬರು ವಿಲಾಯಿತಿಯಿಂದ ಬ್ಯಾರಿಸ್ಟರರಾಗಿ ಬಂದ ಮೇಲೆ ಅವರ ವಿಚಾರ ಪ್ರಚೋದನೆಯಿಂದ ಔಂಧ ಸಂಸ್ಥಾನದಲ್ಲಿ ಒಂದು ಪ್ರಾತಿನಿಧಿಕ ಸಭೆಯನ್ನು ಸ್ಥಾಪಿಸಲಾಯಿತು. ಈ ಸಭೆಯಲ್ಲಿ ೨೦ ಜನರ ಒಂದು ಕಾಯದೆ ಮಂಡಳವು ಇದ್ದು, ಅದರಲ್ಲಿ ಅರ್ಧಜನರು ಸರಕಾರಿ ನಿಯುಕ್ತರೂ ಇನ್ನರ್ಧ-ಜನರು ಲೋಕನಿಯುಕ್ತರೂ ಇದ್ದರು. ಲಕ್ಷ್ಮಣರಾಯರು ಲೋಕನಿಯುಕ್ತ ಸಭಾಸದರಾದರು.

ಈ ರೀತಿಯಾಗಿ ಲಕ್ಷ್ಮಣರಾಯರು ಔಂಧ ಸಂಸ್ಥಾನದ ಕಾಯದೆ ಮಂಡಳದಲ್ಲಿ ಪ್ರವೇಶಿಸಿದ ಮೇಲೆ ೧೯೩೫ರಲ್ಲಿ ಔಂಧ ಸ್ಟೇಟ ಬ್ಯಾಂಕ ಸ್ಥಾಪಿಸಿ ಮೊದಲನೆಯ ಮಹತ್ವದ ಕೆಲಸವನ್ನು ಸಾಧಿಸಿದರು. ಇದಕ್ಕೂ ಮೊದಲು 'ವ್ಯಾಪಾರೀಖಾತೆ' ಎಂಬ ಹೆಸರಿನ ಟ್ರೆಝರಿ ಆಫೀಸರನ ನೇತೃತ್ವದಲ್ಲಿ ಒಂದು ಖಾತೆಯಿತ್ತು. ಅದರಿಂದ ಜನರಿಗೆ ಹಣ ದೊರಕುವ ಸೌಲಭ್ಯವಿತ್ತು. ಆದರೆ ಈ ವ್ಯವಸ್ಥೆಯು ಕಾರ್ಯಕ್ಷಮವೂ ನಿಷ್ಪಕ್ಷಪಾತವೂ ಆಗಿರಲಿಲ್ಲ. ಆದ ಕಾರಣ ಲಕ್ಷ್ಮಣರಾಯರು ತಜ್ಞರೊಬ್ಬರ ಸಹಾಯದಿಂದ ಈ ಬ್ಯಾಂಕಿನ ಘಟನೆಯನ್ನು ಸಿದ್ಧಪಡಿಸಿಕೊಂಡರು. ಈ ಕೆಲಸದಲ್ಲಿ ಅವರಿಗೆ ಶ್ರೀ. ವಾಮನ-ರಾವ ಕಾಳೆ, ಜ. ಸ. ಮರಾಠೆ ಮತ್ತು ಎಂ ಆರ್. ಕಾಳೆ ಮೊದಲಾದವರ ನೆರವು ದೊರೆಯಿತು. ಈ ಬ್ಯಾಂಕಿನ ಬೋರ್ಡ ಆಫ್ ಡೈರೆಕ್ಟರರ ಅಧ್ಯಕ್ಷ ಪೀಠದ ಮೇಲೆ ಲಕ್ಷ್ಮಣರಾಯರು ನಿಯಮಿಸಲ್ಪಟ್ಟರು. ಲಕ್ಷ್ಮಣರಾಯರ ದಕ್ಷ ಆಡಳಿತೆಯಲ್ಲಿ ಈ ಬ್ಯಾಂಕು ಭರದಿಂದ ಸಾಗಿತು. ಅದರ ಈ ಪ್ರಗತಿಯ ಮೂಲಕ ಆಟಪಾಡೀ, ಕುಂಡಲ, ಗುಣದಾಳ, ದಿಘಂಚಿ, ಹಿಗಲೇವಾಡಿ ಮತ್ತು ಬಿಚೂದಗಳಲ್ಲಿ ಇದರ ಶಾಖೆಗಳು ತೆರೆಯಲ್ಪಟ್ಟವು. ಔಂಧ ಹಾಗೂ ಭವಾನೀನಗರ ( ಬಿಚೂದ ) ಗಳಲ್ಲಿ ಬ್ಯಾಂಕಿನ ಸ್ವತಂತ್ರ ಕಟ್ಟಡಗಳು ನಿರ್ಮಾಣವಾದವು. ಈ ಬ್ಯಾಂಕಿನಿಂದ ಸಂಸ್ಥಾನದೊಳಗಿನ ರೈತ, ವ್ಯಾಪಾರಿ

ಮತ್ತು ಉದ್ಯೋಗ–ದಂಧೆ ಮಾಡುವವರಿಗೆ ಬಹಳೇ ಅನುಕೂಲ ವಾಯಿತು.

೧೯೩೨ರ ಎಪ್ರಿಲ್‌ದಲ್ಲಿ, ಔಂಧ ಸಂಸ್ಥಾನದ ರಾಜ್ಯಕಾರಭಾರದ ಸಲುವಾಗಿ ಲೋಕನಿಯುಕ್ತ ದಿವಾಣನೊಬ್ಬನನ್ನು ನಿಯಮಿಸಿಕೊಳ್ಳಲಾಗುವದೆಂದು ರಾಜೇಸಾಹೇಬರು ತಮ್ಮ ಬೆಳ್ಳಿಯ ಹಬ್ಬದ ನಿಮಿತ್ತವಾಗಿ ಜರುಗಿದ ದರಬಾರ-ದಲ್ಲಿ ಸಾರಿದರು. ಈ ಮಾನವು ಲಕ್ಷ್ಮಣರಾಯರಿಗೆ ದೊರೆಯುವದೆಂಬ ಸುದ್ದಿಯನ್ನು ಕೇಳಿ ಕಿರ್ಲೋಸ್ಕರವಾಡಿಯಲ್ಲಿ ಆನಂದವೇ ಆನಂದವಾಯಿತು. ಈ ಸನ್ಮಾನದ ದ್ಯೋತಕವೆಂದು ಕಿರ್ಲೋಸ್ಕರ ವಾಡಿಯಲ್ಲಿ ಪ್ರಚಂಡ ಸಭೆಯು ನಡೆದು ಲಕ್ಷ್ಮಣರಾಯರಿಗೆ ತಮ್ಮ ಗೌರವಾದರಗಳನ್ನೂ ಹಾರ್ದಿಕ ಅಭಿನಂದನೆ ಗಳನ್ನೂ ಸಲ್ಲಿಸಿತು.

ತಮ್ಮ ದಿವಾಣಗಿರಿಯ ಕಾಲ ಕಿರ್ದಿಯಲ್ಲಿ ಲಕ್ಷ್ಮಣರಾಯರು ಎಂಥ ಸಂಸ್ಮರಣೀಯ ಕಾರ್ಯಗಳನ್ನು ಜರುಗಿಸಿದರೆಂಬ ಸಮಗ್ರ ದರ್ಶನವನ್ನು ಇಲ್ಲಿ ವರ್ಣಿಸುವದು ಅಸಾಧ್ಯವಾದ ಮಾತು. ಆದರೂ ಅವರು ಕಾಯದೆದಲ್ಲಿ ತಂದ ಕೆಲವು ಮಹತ್ವದ ಸುಧಾರಣೆಗಳನ್ನು ಇಲ್ಲಿ ಉದಹರಿಸಲಾಗುವದು. ಇದ ರಿಂದ ಅವರ ಕೆಲಸಗಳ ಹಾಗೂ ಧೋರಣೆಯ ಕಲ್ಪನೆಯು ಬರುವಂತಿದೆ.

(೧) ಒಕ್ಕಲುತನದ ಖಾತೆಯಿಂದ ವಿರಾಮ ಪಡೆದ ಪ್ರಾಧ್ಯಾಪಕರಾದ ರಾವಸಾಹೇಬ ಎಲ್. ಬಿ. ಕುಲಕರ್ಣಿ ಎಂಬವರನ್ನು ಸಲಹೆಗಾರರೆಂದು ನಿಯ ಮಿಸಿಕೊಂಡು ಸಂಸ್ಥಾನದೊಳಗಿನ ಒಕ್ಕಲುತನವನ್ನು ಸುಧಾರಿಸಲು ಪ್ರಯ ತ್ನಿಸಲಾಯಿತು.

(೨) ಸಂಸ್ಥಾನದ ಕ್ಷೇತ್ರದಲ್ಲಿರುವ ಗಿಡಗಳನ್ನು ಕಡಿಯುವ ಕಾಯದೆ ಯನ್ನು ತರಲಾಯಿತು. ಹಳೆಯ ಗಿಡಗಳನ್ನು ಕಡಿಯುವದೆಂದರೆ— ಇಂತಿಷ್ಟು ಕೆಲವು ಹೊಸ ಗಿಡಗಳನ್ನು ನೆಟ್ಟ ಹೊರತು ಕೊಯ್ಯಲು ಅನುಮತಿ ಸಿಗ ಲಾರದು— ಎಂಬಿತ್ಯಾದಿ ನಿರ್ಬಂಧನೆಗಳು ಈ ಕಾಯದೆಯಲ್ಲಿ ಅಂತರ್ಭೂತ ವಾಗಿದ್ದವು.

(೩) ದಿಧಂಚಿ ಮತ್ತು ಗುಣದಾಳ ಹಳ್ಳಿಗಳಲ್ಲಿ ಜಿನ್ನಿಂಗ–ಫ್ಯಾಕ್ಟರಿ ಆರಂಭಿಸಲ್ಪಟ್ಟವು.

(೪) ಭವಾನೀನಗರ (ಬಿಚೂದ)ದಲ್ಲಿ ಕಲ್ಲುಸಕ್ಕರೆ ತಯಾರಿಸುವ ಕೇಂದ್ರವು ಸ್ಥಾಪಿಸಲ್ಪಟ್ಟಿತು.

(೫) ಔಂಧದಲ್ಲಿ ದವಾಖಾನೆಯ ಕಟ್ಟಡವು ಕಟ್ಟಲ್ಪಟ್ಟಿತು.

(೬) ಮುಂಬಯಿ ಸರಕಾರದ ಕಡೆಯಿಂದ ಪ್ರತಿ ವರುಷ ೩೦-೩೫ ಸಾವಿರ ರೂಪಾಯಿಗಳು ಅಬಕಾರೀ ಕಾಂಪೆನ್‌ಸ್ಸೆಶನ್ ಎಂದು ಔಂಧ ಸಂಸ್ಥಾನಕ್ಕೆ ದೊರೆಯುವಂತಾಯಿತು. ಈ ಹಣವನ್ನು ರಸ್ತೆಗಳನ್ನು ಮಾಡುವ ಸಲುವಾಗಿ ವಿನಿಯೋಗಿಸಬೇಕೆಂದು ನಿರ್ಣಯಿಸಿ, ಆ ಪ್ರಕಾರ ಆ ಯೋಜನೆಯನ್ನು ಕಾರ್ಯಗತ ಮಾಡಲಾಯಿತು.

(೭) ಅಲ್ಲಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೋಡಿಸಲಾಯಿತು.

(೮) ಸಂಸ್ಥಾನದಲ್ಲಿ ಔದ್ಯೋಗಿಕ ಪ್ರದರ್ಶನ ಜರಗುವಂತೆ ಏರ್ಪಾಟು ಮಾಡಲಾಯಿತು.

ಈ ಸುಮಾರಿಗೆ ಭಾವನಗರದ ದಿವಾಣರಾದ ಸರ ಪ್ರಭಾಕರ ಪಟ್ಟಣಿಯವರು ತಮ್ಮ ಸಂಸ್ಥಾನದೊಳಗಿನ ರೈತರನ್ನು ಸಾಲದಿಂದ ಮುಕ್ತಗೊಳಿಸಿದ್ದರು. ಇದರ ಕಿತ್ತಿಯನ್ನು ತಾವೂ ತೀಡಬೇಕಾದರೆ ಎಷ್ಟು ಪ್ರಮಾಣದಿಂದ ಸಾಧ್ಯವಾಗಬಹುದು ಎಂಬುದರ ವಿಚಾರ ಮಾಡಬೇಕೆಂದು ರಾಜೇಸಾಹೇಬರು ಲಕ್ಷ್ಮಣರಾಯರಿಗೆ ಹೇಳಿದರು. ಆ ಪ್ರಕಾರ ಲಕ್ಷ್ಮಣರಾಯರು ರೈತರ ಸಾಲದ ಅಂಕಿಗಳನ್ನೆಲ್ಲ ಕಲೆ ಹಾಕಿ ೧೮ ಲಕ್ಷ ರೂಪಾಯಿಗಳಾಗುವವೆಂದು ರಾಜೇಸಾಹೇಬರಿಗೆ ವರದಿ ಮಾಡಿದರು. ಇಷ್ಟು ದೊಡ್ಡ ಭಾರವನ್ನು ಸಂಸ್ಥಾನವು ಹೊರಲು ಶಕ್ಯವಿಲ್ಲೆಂದು ಕಂಡು ಬಂದದ್ದರಿಂದ ಮೊದಲು ಮಾದರಿಗಾಗಿ ಒಂದು ಹಳ್ಳಿಯ ರೈತರನ್ನು ಸಾಲದಿಂದ ಮುಕ್ತಮಾಡುವ ಪ್ರಯೋಗವನ್ನು ಮಾಡಿ ನೋಡಬೇಕೆಂದು ಲಕ್ಷ್ಮಣರಾಯರು ಸೂಚಿಸಿದರು. ಆ ಪ್ರಯೋಗವು ಯಶಸ್ವಿ ಎಂದೆನಿಸಿದರೆ ಇಡೀ ಸಂಸ್ಥಾನಕ್ಕೆ ಅನ್ವಯಿಸುವಂಥ ಸಾಲ ಪರಿಹಾರ ಕಾಯಿದೆಯನ್ನು ಅಮಲಿನಲ್ಲಿ ತರಬಹುದೆಂದು ಲಕ್ಷ್ಮಣರಾಯರು ಯೋಜಿಸಿದರು. ಈ ಕಾಯಿದೆಯ ಸ್ವರೂಪವನ್ನು ನೋಡಿದರೆ— ಅಂದು ಮುಂಬೈ ಇಲಾಖೆಯಲ್ಲಿ ಅಮಲಿನಲ್ಲಿದ್ದ ಬಿ. ಎ. ಡಿ. ಆರ್. ಆ್ಯಕ್ಟಿಗೆ ಔಂಧ ಸಂಸ್ಥಾನದಲ್ಲಿ ಜನ್ಮ ಕೊಡಬೇಕೆಂದು ಲಕ್ಷ್ಮಣರಾಯರು ಯೋಚಿಸಿ, ಅದನ್ನು ಪೂರ್ತಿಗೊಳಿಸಿದರೆಂದು ಹೇಳಲು ಯಾವ ಅಭ್ಯಂತರವೂ ಇಲ್ಲ.

ಈ ಕಾಯದೆಯ ಪ್ರಯೋಗವನ್ನು ಆಟಪಾಡೀ ತಾಲೂಕಿನೊಳಗಿನ ಗಳವೇವಾಡಿ ಮತ್ತು ಕಾಮಥ ಎಂಬ ಹಳ್ಳಿಗಳಲ್ಲಿ ಆರಂಭಿಸಬೇಕೆಂದು ಗೊತ್ತು-

ಪಡಿಸಲಾಯಿತು. ಈ ನಿರ್ಣಯ ಕೈಕೊಂಡೊಡನೆ ಒಂದು ಸ್ವಾರಸ್ಯಕರವಾದ ಸಂಗತಿಯು ಜರುಗಿತು.

ಗಳವೇವಾಡಿ ಊರಿನಲ್ಲಿರುವವರೆಲ್ಲರೂ ಕುರುಬರು. ಅಲ್ಲಿಗೆ ಲಕ್ಷ್ಮಣರಾಯರು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಹೋಗಿ ವಿಚಾರಣೆಯನ್ನು ನಡೆಯಿಸಿದರು. ಅಲ್ಲಿಯ ಸಾವುಕಾರರೊಡನೆಯೂ ವಿಚಾರ ವಿನಿಮಯ ಮಾಡಿದರು. ಆದರೆ ಅಲ್ಲಿಯ ಸಾವುಕಾರರು 'ನಮಗೆ ಯಾರ ಕಡೆಯಿಂದಲೂ ಒಂದು ಕಪರ್ದಿ ಕಾಸೂ ಬರುವದಿರುವದಿಲ್ಲ' ಎಂದು ಉತ್ತರವನ್ನು ಕೊಟ್ಟರು. ಆ ನಂತರ ರೈತರನ್ನು ವಿಚಾರಿಸಲಾಗಿ ಅವರು 'ನಾವು ಯಾರಿಗೂ ಒಂದು ಕಾಸು ಕೂಡ ಕೊಡುವದಿರುವದಿಲ್ಲ' ಎಂದು ಹೇಳಿದರು. ಇದನ್ನು ಕೇಳಿ ಎಲ್ಲರೂ ಆಶ್ಚರ್ಯಚಕಿತರಾಗಿ ಗೊಂದಲದಲ್ಲಿ ಬಿದ್ದರು.

ಜನರನ್ನು ಸಾಲದಿಂದ ಮುಕ್ತಗೊಳಿಸುವ ಸಲುವಾಗಿ ಸಂಸ್ಥಾನದ ಯೋಜನೆಯು ಎಷ್ಟೊಂದು ಲಾಭದಾಯಕವಾಗಿರುವದೆಂಬದನ್ನು ಮನಗಾಣಿಸಿ ಕೊಡಲು ಲಕ್ಷ್ಮಣರಾಯರು ಬಹು ಪ್ರಯತ್ನಿಸಿದರು. ಆದರೆ ಎಲ್ಲವೂ ವ್ಯರ್ಥ! ಕೊನೆಗೆ ಈ ಕಾಯದೆಯು ನಿಮಗೆ ಬೇಡವೆಂದ ಮೇಲೆ ಹಾಗೆ ಸಹಿ ಹಾಕಿ ಇಲ್ಲವೆ ಹೆಬ್ಬೊಟ್ಟೊತ್ತಿ ಬರೆದು ಕೊಡಬೇಕೆಂದು ಹೇಳಿದಾಗ, ಅವರೆಲ್ಲರೂ 'ಹೆಬ್ಬೊಟ್ಟಿನ ಗುರುತು ಬೇಕಾದರೆ ಅದನ್ನು ಕತ್ತರಿಸಿ ತೆಗೆದು ಕೊಳ್ಳಿರಿ. ಆದರೆ ಕಾಗದದ ಮೇಲೆ ಅದನ್ನು ಮೂಡಿಸಲಾರೆವು' ಎಂದು ಸ್ಪಷ್ಟವಾಗಿ ಚೀರಾಡಿಬಿಟ್ಟರು.

ಅವರು ಇದಕ್ಕೆ ಇಷ್ಟೊಂದು ವಿರೋಧವನ್ನು ಯಾಕೆ ತೋರಿಸಿದರೆಂಬುವದಕ್ಕೆ ಒಂದು ಕಾರಣವೂ ಇದ್ದಿತು. ಅದೇನೆಂದರೆ ಲಕ್ಷ್ಮಣರಾಯರು ಈ ಊರಿಗೆ ಬರುವಮೊದಲೇ ಅಲ್ಲಿಯ ಉಪದ್ವ್ಯಾಪಿ ಸಾವುಕಾರನೊಬ್ಬನು ಆಟಪಾಡೀ ಭಾಗದಲ್ಲಿ ಕಬ್ಬಿಣದ ಅದಿರುಗಳು ದೊರೆಯುವವೆಂದೇ ಕಿರ್ಲೋಸ್ಕರರು ಇಲ್ಲಿ ಒಂದು ಕಬ್ಬಿಣದ ಕಾರಖಾನೆಯನ್ನು ಹಾಕುವದಕ್ಕಾಗಿ ಜನರ ಭೂಮಿಯನ್ನೆಲ್ಲ ತೆಗೆದುಕೊಳ್ಳಬೇಕೆಂದು ಈ ಯುಕ್ತಿಯನ್ನು ಹೂಡಿದ್ದಾರೆಂದೂ, ಇದಕ್ಕೆ ಯಾರೂ ಮೋಸಹೋಗಬಾರದೆಂದೂ ಉಪದೇಶಿಸಿ ಅಲ್ಲಿಯ ಜನರ ಮನಸನ್ನು ಕೆಡಿಸಿಬಿಟ್ಟಿದ್ದನು. ಆದುದರಿಂದ ಅಲ್ಲಿ ಸಾಲಪರಿಹಾರದ ಕಾರ್ಯಾರಂಭ ಮಾಡುವ ನಿರ್ಣಯವನ್ನು ರದ್ದುಗೊಳಿಸಿ ಲಕ್ಷ್ಮಣರಾಯರು ಔಂಧದ

ದಾರಿಯನ್ನು ಹಿಡಿಯಬೇಕಾಯಿತು. ಇದರಿಂದ ಅವರ ಕಾರ್ಯ ಹಾಗು ಉತ್ಸಾಹಗಳಲ್ಲಿ ಏನೂ ಕಡಿಮೆಯಾಗಲಿಲ್ಲ.

ಲಕ್ಷ್ಮಣರಾಯರು ದಿವಾಣರಾಗುವ ಮೊದಲು ಶೇಣೋಲಿ ಮತ್ತು ತಾಕಾರಿಗಳ ನಡುವೆ ಬಿಚೂದ ಎಂಬ ಹೆಸರಿನ ಹೊಸ ರೇಲ್ವೆನಿಲ್ದಾಣವನ್ನು ರೇಲ್ವೆಯವರು ತೆರೆದರು. ಈಗ ಅದಕ್ಕೆ ಭವಾನೀನಗರವೆಂದು ಹೆಸರನಿಟ್ಟರು-ವರು. ಈ ಸ್ಥಳವು ಔಂಧ ಸಂಸ್ಥಾನದೊಳಗಿನದು. ಆದ್ದರಿಂದ ಈ ನಿಲ್ದಾಣದ ಸಮೀಪದಲ್ಲಿ ಒಂದು ಆಧುನಿಕ ವಸಾಹತನ್ನೂ ಪೇಟೆಯನ್ನೂ ತೆರೆದರೆ, ಅದೊಂದು ಮಹತ್ವದ ಪಟ್ಟಣವಾಗದಿರದೆಂದೂ ಅದರ ಸುತ್ತುಮುತ್ತಲಿನ ೨೫-೩೦ ಹಳ್ಳಿಗಳಿಗೆ ತುಂಬಾ ಲಾಭದಾಯಕವಾಗುವದೆಂದೂ ಲಕ್ಷ್ಮಣ ರಾಯರ ಮನಸ್ಸಿನಲ್ಲಿ ಬಂದಿತು. ವಸಹಾತಿನ ನಕ್ಷೆಯೂ ಸಿದ್ಧವಾಯಿತು. ಪ್ಲಾಟುಗಳು ಸುಲಭ ಬೆಲೆಗೆ ದೊರೆಯಲೆಂಬ ಉದ್ದೇಶದಿಂದ ಎಕರಗೆ ೪೦೦ ರೂ. ಗಳನ್ನಿರಿಸಲಾಯಿತು. ಅದರಿಂದ ಪ್ಲಾಟುಗಳು ಬೇಗಬೇಗನೇ ಮಾರಾಟವಾದವು. ಸಣ್ಣ-ದೊಡ್ಡ ಮನೆಗಳು ಎದ್ದವು. ಈ ಹೊಸ ವಸಾ-ಹತಿಗೆ ಕೃಷ್ಣಾ ನದೀತೀರದ ಹಳ್ಳಿಗಳಿಂದ ಮಾಲು ಬರಲು ಅನುಕೂಲ ವಾಗಿತ್ತು. ಆದರೆ ಪೂರ್ವದ ಕಡೆಯ ಗುಡ್ಡದವಾರಿಯಲ್ಲಿರುವ ದೇವರಾಷ್ಟ್ರ, ಸೋನಕಿರೆ, ಶಿರಸಗಾಂವ ಮೊದಲಾದ ಹಳ್ಳಿಗಳಿಂದ ಮಾಲು ಬರಲು ರಾಜ-ಮಾರ್ಗವಿಲ್ಲದ್ದರಿಂದ ಅಶಕ್ಯವಾಗಿತ್ತು.

ಈ ಹಳ್ಳಿಗಳಿಗೆ ಸಾರಿಗೆ ಸಂಪರ್ಕವನ್ನು ಬೆಳೆಯಿಸಲು ಘಟ್ಟದಲ್ಲಿ ದಾರಿಯನ್ನು ಮಾಡುವ ಸಲುವಾಗಿ ಲಕ್ಷ್ಮಣರಾಯರು ಕಾಲ್ನಡಿಗೆಯಿಂದಲೇ ತಿರುಗಾಡಿ ಅದರ ರೂಪರೇಷೆಯನ್ನು ತಯಾರಿಸಿದರು; ಕಾಯದೆಮಂಡಳದಿಂದ ಈ ಕೆಲಸಕ್ಕೆ ಅನುಮತಿಯನ್ನು ಪಡೆದರು. ಇದು ಸಾಧ್ಯವೇ? ಎಂದು ಅನೇಕ ಜನರು ಸಂಶಯವನ್ನು ವ್ಯಕ್ತಗೊಳಿಸಿದರು. ಆದರೂ ಲಕ್ಷ್ಮಣ ರಾಯರು ತಮ್ಮ ವಿಶ್ವಾಸಿಕರಾದ ರಾಮಾ ವಡ್ಡರ ಹಾಗೂ ಅವನ ೩೦೦-೪೦೦ ಜನರನ್ನು ಈ ಕೆಲಸದಲ್ಲಿ ತೊಡಗಿಸಿದರು. ಅವರ ಅವಿಶ್ರಾಂತ ದುಡಿಮೆಯಿಂದ ಮಾರ್ಗವು ಸಿದ್ಧವಾಗತೊಡಗಿತ್ತು. ಬೇಸಿಗೆಯ ದಿವಸ; ಬಿಸಿಲಿನ ಟೊಪ್ಪಿಗೆ ಧರಿಸಿಕೊಂಡು ಲಕ್ಷ್ಮಣರಾಯರು ಆಗಾಗ ಬಂದು ಕೆಲಸದ ಪ್ರಗತಿಯನ್ನು ನೋಡುತ್ತಲೇ ಇದ್ದರು. ಒಮ್ಮೆಯಂತೂ ಬಿಸಿಲಿನ ತಾಪದಿಂದ ಅವರಿಗೆ ಮೂರ್ಛೆಯ ಪ್ರಸಂಗವೂ ಬಂದಿತು. ಮಧ್ಯಾನದಲ್ಲಿ

ಗುಡ್ಡದ ಕಡೆಗೆ ಹೋಗಕೂಡದೆಂದು ಡಾಕ್ಟರರು ಲಕ್ಷ್ಮಣರಾಯರಿಗೆ ನಿರ್ಬಂಧಿಸಿದರು. ಆದರೆ ಅವರ ಸಲಹೆಯಂತೆ ನಾಲ್ಕು ದಿನ ಮಾತ್ರ ನಡೆದುಕೊಂಡರು. ಮತ್ತೆ ಯಥಾಪ್ರಕಾರವಾಗಿ ತಮ್ಮ ರೀತಿಯನ್ನೇ ಅನುಸರಿಸಿದರು. ಮಾರ್ಗವು ಪೂರ್ತಿಗೊಂಡಿತು. ರಾಜೇಸಾಹೇಬರು ಅದರ ಉದ್ಘಾಟನೆಯ ಸಮಾರಂಭವನ್ನು ನೆರವೇರಿಸಿದರು.

ಒಮ್ಮೆ ಗ್ರಾಮೋದ್ಧಾರದ ಕೆಲಸಕ್ಕೆ ಮನಸ್ಸು ಮಾಡಿದ ಮೇಲೆ ರೈತ ಬಾಂಧವರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಯಾವ ಯಾವ ಉದ್ಯೋಗ ವ್ಯವಹಾರಗಳು ಉಪಯುಕ್ತವಾದವು? ಎಂಬುದರ ಬಗ್ಗೆ ಲಕ್ಷ್ಮಣರಾಯರ ಪ್ರಯೋಗಗಳೂ ಅಭ್ಯಾಸವೂ ಆರಂಭವಾದವು. ಕೋಳಿ ಸಾಕುವ ಉದ್ಯೋಗವು ಅವರಿಗೆ ಒಳ್ಳೇದೆಂದೆನಿಸಿದ್ದರಿಂದ ಅವರು ಕಿರ್ಲೋಸ್ಕರವಾಡಿಯಲ್ಲಿ ಒಂದು ಪೌಲ್ಟ್ರೀ ಫಾರ್ಮನ್ನು (ಕೋಳಿ ಸಾಕುವದನ್ನು) ಆರಂಭ ಮಾಡಿದರು. ಈ ವಿಷಯದಲ್ಲಿ ತಜ್ಞರಾದ ಶ್ರೀ. ಡಿ. ಎ. ಲೋಟಲೀಕರ ಎಂಬವರ ಸಹಕಾರದ ಲಾಭವು ದೊರೆತದ್ದರಿಂದ ಈ ಫಾರ್ಮ ಒಳ್ಳೇ ರೀತಿಯಿಂದ ಬೆಳೆಯಿತು. ಈ ಫಾರ್ಮಿನಲ್ಲಿ ವ್ಹಾಯಿಟ್ ಲೆಗ್‌ಹಾರ್ನ ಮತ್ತು ಹೋಡ, ಅಯಲಂಡ ರೆಡ್ ಎಂಬ ಜಾತಿಯ ಕೋಳಿಗಳ ಉತ್ಪತ್ತಿಯನ್ನೇ ವಿಶೇಷವಾಗಿ ಕೈಕೊಳ್ಳಲಾಯಿತು. ಇದಕ್ಕೆ ಬೇಕಾಗುವ ಉಪಕರಣಗಳನ್ನು ಮೊದ ಮೊದಲು ಹೊರ ಪೇಟೆಯಿಂದ ತರಿಸಲಾಯಿತು. ಮುಂದೆ ಅಂಥ ಉಪಕರಣಗಳನ್ನೆಲ್ಲ ಕಿರ್ಲೋಸ್ಕರವಾಡಿಯಲ್ಲಿಯೇ ಸಿದ್ಧಪಡಿಸುವ ಕಾರ್ಯವನ್ನು ಕೈಕೊಳ್ಳಲಾಯಿತು. ಇಲ್ಲಿ ಹುಟ್ಟುವ ತತ್ತಿಗಳ ಮಾರಾಟ ಹೇಗೆ ಮಾಡಬೇಕೆಂಬ ಪ್ರಶ್ನೆ ಬಂದಿತು. ಅಲ್ಲಿಯ ಸ್ಥಳಿಕ ಪೇಟೆಯಲ್ಲಿ ಇವು ಮಾರಾಟವಾಗುತ್ತಿದ್ದಿಲ್ಲ. ದೇಶೀ ಕೋಳಿಗಳ ತತ್ತಿಗಳು ಇದಕ್ಕಿಂತ ಚಿಕ್ಕವಿದ್ದರೆ ಸ್ವಲ್ಪ ಕಡಿಮೆ ಬೆಲೆಗೆ ಸಿಗುತ್ತಿದ್ದವು. ಈ ತೊಂದರೆಯ ಮೂಲಕ ಆ ತತ್ತಿಗಳ ಮಾರಾಟಕ್ಕೆ ಪೇಟೆಯನ್ನು ಹುಡುಕುವದಕ್ಕೆಂದು ಪುಣೆ, ಮಹಾಬಳೇಶ್ವರ, ಮುಂಬಯಿಗಳಲ್ಲಿ ವಾಸಿಸುವ ಯುರೋಪ್ಯರ ಊಟದ–ಮನೆಗಳ ಸಂಪರ್ಕವನ್ನು ಲಕ್ಷ್ಮಣರಾಯರು ಬೆಳೆಯಿಸಿಕೊಳ್ಳಬೇಕಾಯಿತು. ಈ ಮಾಲು ಸುರಕ್ಷಿತವಾಗಿ ಪರ–ಊರುಗಳಿಗೆ ತಲಪುವ ಸಲುವಾಗಿ ವಿಶಿಷ್ಟತರದ ಪೆಟ್ಟಿಗೆಗಳನ್ನು ತಯಾರಿಸಿದರು. ಇದೆಂಥ ಪ್ರಯತ್ನವು!

ಲಕ್ಷ್ಮಣರಾಯರ ಈ ತಳಮಳವನ್ನು ಕಂಡು ಭವಾನೀನಗರದ

ಪ್ರಮುಖ ಕಾರ್ಯಕರ್ತರಾದ ಶ್ರೀ: ಪಂಡಿತರಾವ ರಾಜಹಂಸ ಎಂಬವರು ಒಮ್ಮೆ "ಲಕ್ಷ್ಮಣರಾಯರೇ, ನಿಮ್ಮದೇ ಆದ ಇಂಥ ದೊಡ್ಡ ಕಾರಖಾನೆ ಇದ್ದಾಗ್ಯೂ ಕೂಡ ನೀವು ಈ ಯಾತನೆಯನ್ನೇಕೆ ಸೋಸುತ್ತಿರುವಿರಿ ?" ಎಂದು ವಿಚಾರಿಸಿದರು.

"ಓಹೋ ! ನಮ್ಮೊಬ್ಬರ ಸ್ಥಿತಿಗತಿಯು ಸುಧಾರಿಸಿತೆಂದರೆ ಆಯಿತೇ ? ನಮ್ಮ ನೆರೆಹೊರೆಯ ಜನತೆಯೂ ಸುಧಾರಿಸಲಿಕ್ಕೆಬೇಕು. ಅದಕ್ಕಾಗಿ ನಾವು ಅದರೊಡನೆ ಸಂಪರ್ಕ ಬೆಳೆಯಿಸಿ, ನಮ್ಮಿಂದ ಸುಧಾರಿಸಲು ಎಷ್ಟು ಶಕ್ಯವಿದೆಯೋ ಅಷ್ಟನ್ನು ಮಾಡುವದೇ ವಿಹಿತ ನಾವು ಸುಮ್ಮನೆ ಕುಳಿತುಬಿಟ್ಟರೆ ಹೇಗೆ ನಡೆಯುವದು ? ಎಂದು ಲಕ್ಷ್ಮಣರಾಯರು ಬಗೆಗೆ ಉತ್ತರಿಸಿದರು.

ರಾಯರ ಗರಡಿಯಲ್ಲಿ ಸಿದ್ಧರಾಗಿ ಸ್ವತಂತ್ರ ರೀತಿಯಿಂದ ಒಕ್ಕಲತನವನ್ನು ಮಾಡಿ ಮುಂದಾದವರುಂಟು. ಅಂಥವರಲ್ಲಿ ಜ್ಞಾನಬಾ, ವಿಠೋಬಾ, ಜಾಧವ ಎಂಬವರು ಲಕ್ಷ್ಮಣರಾಯರ ಈ ಬಗೆಯಾಗಿ ಉದ್ಗಾರ ತೆಗೆದರು.

"ನಾನು ೧೯೩೦ ರಲ್ಲಿ ಲಕ್ಷ್ಮಣರಾಯರ ದ್ರಾಕ್ಷಿಯ ತೋಟದಲ್ಲಿ ಕೆಲಸಕ್ಕೆ ನಿಂತೆನು. ಅಲ್ಲಿ ನಾವು ತಗ್ಗುಗಳನ್ನು ತೋಡುತ್ತಿರುವಾಗ ರಾಮಾಪುರದಲ್ಲಿಯ ಕೆಲವು ರೈತಬಾಂಧವರು ನನ್ನನ್ನು ಕಾಣಲು ಬಂದರು. ನಾವು ಅಂಥ ಸ್ಥಳದಲ್ಲಿ ದ್ರಾಕ್ಷಿಯ ಬಳ್ಳಿಯನ್ನು ಬೆಳೆಯಿಸತಕ್ಕವರಿದ್ದೇವೆ ಎಂಬದು ತಿಳಿದೊಡನೆ ಅವರು ಆಶ್ಚರ್ಯಚಕಿತರಾದರು. ಆಗ ಲಕ್ಷ್ಮಣರಾಯರು "ನೀವು ಎರಡು ವರುಷಗಳ ಮೇಲೆ ಇಲ್ಲಿಗೆ ಬನ್ನಿರಿ. ಅಂದರೆ ನಿಮಗೆ ತಿನ್ನಲು ದ್ರಾಕ್ಷಿಯನ್ನು ಕೊಡುತ್ತೇನೆ" ಎಂದು ಅವರಿಗೆ ಹೇಳಿದರು. ಹಾಗೆ ಮಾಡಿಯೇ ತೋರಿಸಿದರು. ಅಲ್ಲದೆ ಆ ಭೂಮಿಯಲ್ಲಿಯೇ ಜೋಳವನ್ನು ಬಿತ್ತಿ ಒಂದು ಎಕರೆಗೆ ೨೨ ಮಣ ಕಾಳನ್ನು ಒಕ್ಕಿ ತೋರಿಸಿದರು. ಒಮ್ಮೆ ಮೇವಿನ ತುಟಾಗ್ರತೆಯು ಬಿದ್ದಾಗ ಮುಳುಗಳ್ಳಿಯ ಎಲೆಗಳನ್ನು ಹುರಪಳಿಸಿ, ಅವುಗಳಲ್ಲಿಯ ಮುಳ್ಳುಗಳನ್ನು ಸುಟ್ಟು, ನೀರಿನಲ್ಲಿ ನೆನಿಸಿ ದನ–ಕರುಗಳಿಗೆ ಹಾಕಿದರು. ದನ-ಕರುಗಳು ಪ್ರೀತಿಯಿಂದ ಅದನ್ನು ಮೇದು ಬದುಕಿಕೊಂಡವು. ಹೀಗೆ ಲಕ್ಷ್ಮಣರಾಯರ ದೃಷ್ಟಿಯು ಹೊಸ ಹೊಸ ಶೋಧನೆ ಮಾಡುವುದರಲ್ಲಿ ಯಾವಾಗಲೂ ಜಾಗರೂಕವಾಗಿದ್ದಿತು.

"ಒಮ್ಮೆ ನಾವು ತೋಟದಲ್ಲಿ ಕೆಲಸ ಮಾಡುತ್ತಿರುವಾಗ ಹರಿಜನನೊಬ್ಬನು ಚೀಟಿಯನ್ನು ತೆಗೆದುಕೊಂಡು ಬಂದನು. ಅವನು ಆ ಚೀಟಿಯನ್ನು

ದೂರಿನಿಂದಲೇ ಚೆಲ್ಲಿದ ಮೂಲಕ ಅದು ಗಾಳಿಗೆ ಹಾರಿಹೋಯಿತು. ಲಕ್ಷ್ಮಣ ರಾಯರು ಸಿಟ್ಟಿಗೆದ್ದರು. ಆಗ ಅವನು 'ನಾನು ಹರಿಜನ, ನಿಮ್ಮ ಕೈಯಲ್ಲಿ ಚೀಟಿಯನ್ನು ಕೊಟ್ಟರೆ ನಿಮಗೆ ಮೈಲಗೆ ಆಗುವದಿಲ್ಲವೇ?" ಎಂದು ಕೇಳಿ ದನು. ನಮ್ಮ ಒಡೆಯರು (ಲಕ್ಷ್ಮಣರಾಯರು) "ನೀನು ಹರಿಜನನಲ್ಲ; ಮನುಷ್ಯನಾಗಿರುವೆ. ನಾನು ಹೇಗೆ ಮನುಷ್ಯನೋ ಹಾಗೆಯೇ ನೀನೂ ಮನುಷ್ಯನು. ಆ ಚೀಟಿಯನ್ನು ತೆಗೆದುಕೊಂಡು ಬಂದು ಮೊದಲು ನನ್ನ ಕೈಯಲ್ಲಿ ಕೊಡು, ನೋಡೋಣ!' ಎಂದು ಹೇಳಿದರು.

"ಅವರು ಸಿಟ್ಟಿಗೇಳುವರು; ಆದರೆ ಅವರು ಅಂತಃಕರಣಿಗಳು, ಮನಸ್ಸು ಮತ್ತು ಕೈ-ಕಾಲು ಗಟ್ಟಿಯಿದ್ದರೆ ಪರಮೇಶ್ವರನು ಸಹಾಯ ನೀಡುವನು' ಎಂಬ ವಾಕ್ಯವು ಅವರ ಬಾಯಿಂದ ಯಾವಾಗಲೂ ಹೊರಡುತ್ತಿತ್ತು. ಅವರ ಈ ಉಪದೇಶದಿಂದ ನನ್ನ ಮನಸ್ಸಿನ ಮೇಲೆ ಬಹಳ ಪರಿಣಾಮವಾಯಿತು. ಅವರು ನಿರ್ವ್ಯಸನಿಗಳು. ಅವರ ಸಹವಾಸದಿಂದ ನಾನು ಯಾವುದೇ ತರದ ವ್ಯಸನದ ಮೋಹಕ್ಕೆ ಒಳಗಾಗಲಿಲ್ಲ.

"ನಾನೀಗ ಕರ್ಖಾಡ, ಕುರ್ಲ ಮತ್ತು ಸಿಪ್ಪಾಣಿಗಳಲ್ಲಿ ದ್ರಾಕ್ಷಿಯ ತೋಟ ವನ್ನು ಮಾಡಿ, ಈ ಉದ್ಯಮದಲ್ಲಿ ಅನೇಕ ಬಹುಮಾನಗಳನ್ನು ದೊರಕಿಸಿ ದ್ದೇನೆ. ಯಶಸ್ವಿಯಾಗಿದ್ದೇನೆ ಆದರೂ ಈ ಕಲೆಯಲ್ಲಿ ನನ್ನ ನಿಜವಾದ ಗುರುಗಳೆಂದರೆ ಲಕ್ಷ್ಮಣರಾಯರೇ. ಆದ್ದರಿಂದಲೇ ನನಗೆ ಅವರ ನೆನಪು ಮೇಲಿಂದಮೇಲೆ ಆಗುತ್ತಿರುತ್ತದೆ.'

ಅನಿಶ್ಚಿತ ಮಳೆಯ ಮೇಲೆ ಅವಲಂಬಿಸಿರುವ ಒಕ್ಕಲುತನವನ್ನು ಯಶಸ್ವಿ ಯಾಗಿ ಮಾಡಲು ಬಹಳ ಕಠಿಣತರದ್ದೆಂಬ ಮಾತು ಅವರ ಧ್ಯಾನದಲ್ಲಿ ಜಾಗ್ರತ ವಿದ್ದುದರಿಂದ ನದಿಯ ನೀರಿನ ಉಪಯೋಗವನ್ನು ಸಂಸ್ಥಾನದೊಳಗಿನ ರೈತರಿಗೆ ಮಾಡಿಕೊಡಬೇಕೆಂದೂ ಇಲ್ಲವೆ ಆ ಭಾಗದ ಮಟ್ಟಿಗಾದರೂ ಈ ಪ್ರಶ್ನೆಯನ್ನು ಬಿಡಿಸಬೇಕೆಂದೂ ಲಕ್ಷ್ಮಣರಾಯರು ನಿಶ್ಚಯಿಸಿದರು. ಗುಣದಾಳ ತಾಲೂಕಿ ನೊಳಗಿನ ಚಿಕ್ಕ ಗಲಗಲಿ ಎಂಬ ಹಳ್ಳಿಯ ಹತ್ತಿರ ಒಂದು ಪಂಪಿಂಗ್ ಸ್ಟೇಶನ್ ಆರಂಭಿಸಿದರೆ ಎಷ್ಟೋ ಎಕರೆ ನೀರುಣ್ಣುವದೆಂದು ಅವರಿಗೆ ಕಂಡುಬಂದಿತು. ಸಮಾಜವಾದಿ ವಿಚಾರಪರರಾದ ರಾಜಪುತ್ರ ಶ್ರೀಮಂತ ಅಪ್ಪಾಸಾಹೇಬ ಪಂತರು ಈ ಕೆಲಸದಲ್ಲಿ ಲಕ್ಷ್ಮಣರಾಯರಿಗೆ ಬೆಂಬಲವಾಗಿ ನಿಂತರು.

ಈ ಕೆಲಸವನ್ನು ಆರಂಭಿಸಲು ಮಾಡಿಕೊಡುವುದಕ್ಕಾಗಿ ಸ್ವತಃ ಲಕ್ಷ್ಮಣರಾಯರು ಅಲ್ಲಿ ಹೋಗಿ ಇರಬೇಕಾಯಿತು. ಆ ಕೆಲಸವು ಸುಸೂತ್ರವಾಗಿ ಪೂರ್ತಿಗೊಂಡಿತು. ಆದರೆ ೨–೧೦ ದಿನಗಳ ವರೆಗೆ ೬ ಇಂಚಿನ ಪಾಯಿಪನ್ನು ಅವ್ಯಾಹತವಾಗಿ ನಡೆಯಿಸಿದರೂ ಅರ್ಧ ಎಕರೆಯಷ್ಟಾದರೂ ಭೂಮಿ ತೋಯಲಿಲ್ಲ. ನದೀತೀರದ ಭೂಮಿ. ದೊಡ್ಡ ದೊಡ್ಡ ಕೊರಕಲು ಹಾಗೂ ಬಿರುಕು ಬಿಟ್ಟಂಥ ನೆಲವು ಎಲ್ಲ ನೀರನ್ನು ಕುಡಿದುಬಿಟ್ಟಿತು. ಆಗ ತಗಡಿನ ಹರನಾಳಿಗೆಗಳನ್ನು ಹಾಕಿ, ಅದರಿಂದ ನೀರು ಕೊಡತೊಡಗಿದರು. ಅದರಿಂದ ಭೂಮಿಯು ನಿರುಂಡು ಬೆಳೆಗೆ ಅನುಕೂಲವಾಯಿತು. ಅಲ್ಲಿ ಗೋವಿನಜೋಳ ಜೋಳ ಮೊದಲಾದ ಪೈರು ಹುಲುಸಾಗಿ ಬೆಳೆಯತೊಡಗಿತು. ಈ ಪ್ರಯತ್ನದ ಹೊಟ್ಟೆಯೊಳಗಿಂದಲೇ ಮುಂದೆ ಆ ಭಾಗದಲ್ಲಿ ಸಕ್ಕರೆ ಕಾರಖಾನೆಯನ್ನು ಸ್ಥಾಪಿಸುವ ಯೋಜನೆಗೆ ಚಾಲನೆ ದೊರೆಯಿತು.

ಈ ಪ್ರಕಾರದ ಕೆಲಸದಲ್ಲಿ ಮಗ್ನವಾಗಿರುವ ವ್ಯಕ್ತಿಗೆ ತನ್ನ ಸಂಸಾರದ ಕಡೆಗೆ ಲಕ್ಷ್ಯವೀಯಲು ಎಷ್ಟು ವೇಳೆ ದೊರೆಯುತ್ತಿತ್ತೆಂಬದನ್ನು ಯಾಕೆ ಹೇಳಬೇಕು? ಕೆಲದಿನದಿಂದ ಅವರ ಹೆಂಡತಿ ಸೌ. ರಾಧಾಭಾಯಿಯವರ ಪ್ರಕೃತಿಯು ಸರಿಯಾಗಿರಲಿಲ್ಲ. ಅವರು ಹಾಸಿಗೆಯನ್ನು ಹಿಡಿದಿದ್ದರೂ ಲಕ್ಷ್ಮಣರಾಯರಿಗೆ ಅವರ ಹತ್ತರ ಕುಳಿತು ಅವರ ಯೋಗಕ್ಷೇಮವನ್ನೂ ವಿಚಾರಿಸಿಕೊಳ್ಳಲು ಸಮಯವೇ ದೊರೆಯುತ್ತಿರಲಿಲ್ಲ.

ಲಕ್ಷ್ಮಣರಾಯರು ದಿವಾಣಗಿರಿಯ ಪದವಿಗೇರಿದ್ದರೂ ತಮ್ಮ ಹತ್ತಿರ ಪಟ್ಟೇವಾಲಾ ಸಿಪಾಯಿಯನ್ನು ನಿಯಮಿಸಿಕೊಂಡಿರಲಿಲ್ಲ. ಅವರು ಹಳ್ಳಿಹಳ್ಳಿಗೆ ಹೋದಾಗಲಂತೂ ತಮ್ಮನ್ನೇ ಮರೆತು ಆ ಜನರೊಡನೆ ಬೆರೆತು ತಾದಾತ್ಮ್ಯರಾಗಿ ಬಿಡುತ್ತಿದ್ದರು. ಕಿರ್ಲೋಸ್ಕರವಾಡಿಯಿಂದ ೮–೧೦ ಮೈಲು ದೂರವಿರುವ ವೇರಳಾ ನದಿಯ ದಂಡೆಯ ಮೇಲಿರುವ ರಾಮಾಪೂರವು ಅವರಿಗೆ ಪ್ರಿಯವಾದ ಹಳ್ಳಿಯಾಗಿತ್ತು. ಈ ಹಳ್ಳಿಯ ಸುಧಾರಣೆಗಾಗಿ ಅವರು ವಿಶೇಷ ಪರಿಶ್ರಮಪಟ್ಟರು. ಈ ಹಳ್ಳಿಯ ತರುಣನಾದ ಮ್ಹಾದಬಾ ಗಾಯಕವಾಡ ಎಂಬವನ ಮೇಲಂತೂ ರಾಯರ ಮರ್ಜಿ ಬಹಳ. ಆದಕಾರಣ ಲಕ್ಷ್ಮಣರಾಯರ ಕೆಲಸವು ಈ ಸ್ಥಳದಲ್ಲಿ ಹೇಗೆ ನಡೆಯಿತೆಂಬದನ್ನು ಅವನ ಶಬ್ದಗಳಿಂದಲೇ ಹೇಳಿದರೆ ಒಳಿತೆಂದು ಅದನ್ನು ಕೆಳಗೆ ಕೊಡಲಾಗಿದೆ:—

"ಒಡೆಯರಾದ ಲಕ್ಷ್ಮಣರಾಯರು ಪ್ರತಿ ರವಿವಾರಕೊಮ್ಮೆ ಮುಂಜಾನೆ ೮ ಗಂಟೆಗೆ ರಾಮಾಪುರಕ್ಕೆ ಬರುತ್ತಿದ್ದರು; ಕೆಲಸ ತೀರಿದ ಮೇಲೆ ತಿರುಗಿ ಹೋಗುತ್ತಿದ್ದರು. ಅವರು ಸಾಮುದಾಯಿಕ ಒಕ್ಕಲುತನದ ಕಲ್ಪನೆಯನ್ನು ನಮಗೆ ಹೇಳಿಕೊಟ್ಟಿದ್ದರಿಂದಲೇ ನಾವು ಆ ಕೆಲಸವನ್ನು ಆರಂಭಿಸಿದೆವು. ಈ ಸಾಮುದಾಯಿಕ ಒಕ್ಕಲುತನದ ಉಪದೇಶದೊಂದಿಗೆ ಅವರು ನಮಗೆ ಜೋಳ, ಶೇಂಗಾಗಳ ಬೆಳೆಯನ್ನು ಬೆಳೆಸುವ ಪದ್ಧತಿಯನ್ನು ತಿಳುಹಿಸಿಕೊಟ್ಟರು. ಅದರಂತೆ ೨೭ ಇಂಚಿನ ಚೌಕಟ್ಟಿನಿಂದ ಸಮಾಂತರ ಚೌಕಗಳನ್ನು ಗುದ್ದಲಿ ಯಿಂದ ಅಗಿದು ಸಾಲುಗಳನ್ನು ಮಾಡಲಾಯಿತು. ಆದರೆ ಸಾಕಷ್ಟು ಹಸಿಯಿಲ್ಲ ದ್ದರಿಂದ ಕೊಡಗಳಿಂದ ನೀರನ್ನು ತಂದು ಸುರುವುತ್ತಿದ್ದೆವು. ಅಷ್ಟರಲ್ಲಿ ಒಡೆಯರು ಅಲ್ಲಿಗೆ ದಯಮಾಡಿಸಿದರು. ನೀರು ಹೊತ್ತು ತರುವಂಥವರ ಬೆನ್ನುಮೇಲೆ ಕೈಯ್ಯಾಡಿಸಿ 'ತಡೆಯಿರಿ, ಸುಮ್ಮನೆ ಏಕೆ ಶ್ರಮಪಡುವಿರಿ ? ನನ್ನ ಮೋಟಾರ ತೆಗೆದುಕೊಳ್ಳಿರಿ, ಅದರಿಂದ ನೀರುತೆಗೆದುಕೊಂಡು ಬನ್ನಿರಿ' ಎಂದು ಹೇಳಿದರು. ಆಮೇಲೆ ಕೇಳುವದೇನು ? ನೀರೇ ನೀರಾಯಿತು. ಸಸಿಗಳನ್ನು ನೆಡುವ ಕೆಲಸವು ಕೂಡಲೆ ಪೂರೈಸಿತು."

"ಅಷ್ಟರಲ್ಲಿ ಮಧ್ಯಾಹ್ನವಾಯಿತು. ಜಾಜೂಮು ಹಾಸಿಕೊಂಡು ಎಲ್ಲರೂ ಊಟಕ್ಕೆ ಕುಳಿತೆವು. ಒಡೆಯರು ಮೊಸರನ್ನ, ಗೋದಿರೊಟ್ಟಿ, ಪಲ್ಯ ಮೊದಲಾದವುಗಳ ಒಂದು ಡಬ್ಬಿಯನ್ನೇ ತಂದಿದ್ದರು, ಅವರು ಎಲ್ಲರಿಗೂ ತಮ್ಮ ಬುತ್ತಿಯನ್ನು ಹಂಚಿಹಾಕಿದರು. ಒಡೆಯರೂ ನಮ್ಮ ಪಂಕ್ತಿಯಲ್ಲಿಯೇ ಊಟಕ್ಕೆ ಕುಳಿತರು. ಇನ್ನು 'ಪುಂಡಲೀಕವರದ' ಎಂದೆನ್ನುವಷ್ಟರಲ್ಲಿ 'ನಾನು ನಿಮಗೆ ನನ್ನ ಬುತ್ತಿರೊಟ್ಟಿಯನ್ನು ಹಾಕಿದ್ದೇನೆ. ನೀವೆಲ್ಲರೂ ನಿಮ್ಮ ಬುತ್ತಿ ಯನ್ನು ಒಂದು ಸ್ವಲ್ಪಸ್ವಲ್ಪ ಹಾಕಿರಿ' ಎಂದಂದರು. ಆಗ ನಾವು ಅವರಿಗೆ ಕುದಿಸಿದ ಗೆಣಸು, ಝುಣಕ, ಪುಂಡಿಯಪಲ್ಯ, ಉದ್ದಿನಹಿಟ್ಟು, ಖಾರಬ್ಯಾಳಿ ಮೊದಲಾದ ನಮ್ಮ ಬುತ್ತಿಯನ್ನು ಅವರಿಗೆ ಬಡಿಸಿದೆವು. ನಗುತ್ತ, ಕೆಲೆಯುತ್ತ ಊಟಮಾಡಿ ನಮ್ಮ ನಮ್ಮ ಮನೆಗೆ ತೆರಳಿದೆವು. ನಮ್ಮ ಒಡೆಯರು ಕೃಷ್ಣ-ನೆಂದಾದರೆ ನಾವೆಲ್ಲರೂ ಗೋಪಾಲಕರಾದೆವು."

"ನಮ್ಮ ಊರಿನ ಸಲುವಾಗಿ ಅವರು ಏನೇನು ಮಾಡಿದರೆಂಬ ಪಟ್ಟಿ-ಯನ್ನು ಕೊಟ್ಟರೆ ಮುಗಿಯುವದೇ ಇಲ್ಲ. ಅವರು ನೆರೆಹೊರೆಯ ಸೋನ-ಹಿರೆಗೆ ಕಾಂಕ್ರೀಟದ ಒಡ್ಡನ್ನು ಕಟ್ಟಿ ೬೦ ಯಕರೆಗೆ ನೀರು ದೊರೆಯುವಂತೆ

ಮಾಡಿದರು. ಅದಕ್ಕಾಗಿ ಬ್ಯಾಂಕಿನಿಂದ ಸಾಲ ಪಡೆದರು. ರ್‍ಯಾಷೇಸಾಹೇಬರಿಂದ ಐದು ವರ್ಷದ ನೀರಿನ ತೆರಿಗೆಯನ್ನು ಸೂಟಬಿಡಿಸಿ, ಬ್ಯಾಂಕಿನ ಸಾಲವನ್ನು ಕಂತುಗಳಿಂದ ತೀರಿಸಿದರು. ಈ ಒಡ್ಡಿನ ಮೇಲಿರುವ ಭೂಮಿಯ ಬೆಳೆಯಿಂದ ಮೂರು ತಿಂಗಳ ಗಾಣವಾಡುತ್ತದೆ. ಆದರಿಂದ ಕ್ಷಣಕ್ಷಣಕ್ಕೂ ನಮ್ಮೊಡೆಯರ ನೆನಪು ತೆಗೆಯದೆ ನಮ್ಮಿಂದಿರುವದೇ ಆಗುವದಿಲ್ಲ."

"ನಮ್ಮ ಹಳ್ಳಿಯಲ್ಲಿ ದೇವಋಷಿಯೊಬ್ಬನ ಪ್ರಸ್ತವು ಬಹಳ ಬೆಳೆದಿತ್ತು. ಅವನ ಆಟವು ಸಾಗದಂತೆ ನಮ್ಮೊಡೆಯರೇ ಮಾಡಿದರು. ರಾಮಾಪುರದಲ್ಲಿ ಒಂದು ಗರಡೀ ಮನೆಯನ್ನು ಕಟ್ಟಿಸಿದರು. ಹಳ್ಳಿಯಲ್ಲಿ ಪ್ಲೇಗ ಹಬ್ಬಬಹುದೆಂಬ ಸಂಶಯವುಂಟಾದಾಗ ವ್ಹೈಲಿಪಸನ್ನು ಚುಚ್ಚುವದಕ್ಕೆಂದು ಡಾಕ್ಟರ ದಿವಾಣ ಎಂಬವರನ್ನು ಕರೆತಂದರು."

"ಅಂದಿನ ಮುಂಜಾವಿನಲ್ಲಿ ಒಡೆಯರೂ ಡಾಕ್ಟರರೂ ಬಂದರು. ವ್ಹೈಲಿ ಚುಚ್ಚುವ ಕೆಲಸವನ್ನಾರಂಭಿಸಿಯೇ ಬಿಟ್ಟರು. ಅಲ್ಲಿ ನೆರೆದವರಲ್ಲೊಬ್ಬರೊಡನೆ ಒಡೆಯರು ಮಾತು-ಕತೆಯಾಡುತ್ತಿದ್ದರು. ಅಷ್ಟರಲ್ಲಿ ಮೋಟಾರಿನ ಹಾರ್ನ ಕೇಳಬಂದಿತು. ನಮ್ಮೆಲ್ಲರ ಲಕ್ಷ್ಯವು ಅದರಕಡೆಗೆ ಸೆಳೆಯಿತು. ಅದು ಕಿರ್ಲೋಸ್ಕರವಾಡಿಯದೇ ಮೋಟಾರ, ಮೋಟಾರಿನಿಂದ ಅನಂತರಾವ ಫಳಣೀಕರರು ಇಳಿದರು. ಅವರ ಮುಖಲಕ್ಷಣಗಳು ಖಿನ್ನವಾಗಿದ್ದಂತೆ ಕಂಡು ಬಂದಿತು."

ಅವರನ್ನು ನೋಡಿ ಒಡೆಯರು 'ಅಂತೋಬಾ, ಇಲ್ಲಿಗೇತಕ್ಕಾಗಿ ಬಂದಿರಿ,' ಎಂದು ಅವರನ್ನು ವಿಚಾರಿಸಿದರು

ಅಂತೋಬಾ ನಮ್ಮೊಡೆಯರಿಗೆ 'ನಿಮ್ಮನ್ನು ಕರೆದುಕೊಂಡು ಹೋಗಲು ಬಂದಿರುವೆನು.' ಎಂದು ಹೇಳಿದರು.

'ಅಂಥದೇನು ಅವಸರದ ಕೆಲಸ?'

'ಮಾಮಾ ಮುಂಜಾನೆ ಹೋದರು!' ಎಂದು ಅಂತೋಬಾ ಹೇಳಿದರು. ಮುಂದೆ ಅವರ ಬಾಯಿಂದ ಶಬ್ದ ಹೊರಡಲೇ ಇಲ್ಲ.'

'ಒಡೆಯರು ಅವರೊಡನೆ ಗಾಡಿಯನ್ನು ಹತ್ತಿದರು. ನೋಡನೋಡು ವಷ್ಟರಲ್ಲಿಯೇ ಮೋಟಾರು ಕಣ್ಮರೆಯಾಯಿತು.'

"ಆ ಪ್ರಸಂಗದಿಂದ ನಾವೆಲ್ಲರೂ ದಂಗಾಗಿ ಹೋದೆವು. ತಮ್ಮ ಹೆಂಡತಿಯು ಬೇನೆಬಿದ್ದು ಬಳಲುತ್ತಿರುವಾಗ, ಆಕೆಯ ಆರೈಕೆಯನ್ನು ಇನ್ನಿತರರ ಮೇಲೆ ಬಿಟ್ಟು, ನಮ್ಮ ಹಳ್ಳಿಯೊಳಗಿನ ಜನರನ್ನು ಗಂಟು ರೋಗದಿಂದ ಉಳಿಸಿಕೊಳ್ಳಬೇಕೆಂದು ಅವರು ರಾಮಾಪುರಕ್ಕೆ ಬಂದಿದ್ದರು. ಇಂಥ ಮಹಾತ್ಮನು ಮಾಡಿದ ಉಪಕಾರವನ್ನು ನಮ್ಮಿಂದ ತೀರಿಸುವದಾದೀತೇ?"

## ೧೯

# ಕಿರ್ಲೋಸ್ಕರವಾಡಿಯ ' ಮಮ್ಮಾ '

ಇತ್ತೀಚೆಗೆ ೫-೬ ವರ್ಷಗಳಿಂದ ಸೌ|| ರಾಧಾಬಾಯಿಯವರ ಆರೋಗ್ಯವು ಕೆಡುತ್ತಲೇ ನಡೆದಿತ್ತು. ಈ ಅವಧಿಯಲ್ಲಿ ಎರಡುಸಲ ಕ್ಯಾನ್ಸರಾಯಿತು. ಆದರೆ ಸಕಾಲಕ್ಕೆ ಶಸ್ತ್ರಕ್ರಿಯೆ ನಡೆದು ಗುಣಮುಖರಾದರು. ಆದರೆ ಅಷ್ಟರಲ್ಲಿ ಮಧುಮೇಹವು ಅವರನ್ನು ಆವರಿಸಿತು. ಪಥ್ಯಾಹಾರದಿಂದಿದ್ದರೂ ಪಿತ್ತಾಶಯದ ವಿಕಾರವು ತಲೆದೋರಿತು. ಮಿರಜಿಗೆ ಕರೆದುಕೊಂಡು ಹೋಗಿ ಮತ್ತ ಶಸ್ತ್ರಕ್ರಿಯೆಯನ್ನು ಮಾಡಿಸಲಾಯಿತು. ಆಗ ಮಾತ್ರ ಎಲ್ಲರೂ ಚಿಂತೆಗೊಳಗಾದರು.

ರಾಧಾಬಾಯಿಯವರ ಪ್ರಕೃತಿ ಸೂಕ್ಷ್ಮವಾದರೂ ಅವರದು ಸೋಸಿಕ ಜೀವ. ಅವರು ಬೇನೆಗೀಡಾಗಿದ್ದರೂ ತಮ್ಮ ಬೇನೆಯು ಮಿಕ್ಕವರ ಲಕ್ಷ್ಯಕ್ಕೆ ಬಾರದಂತೆ ಪ್ರಯತ್ನಿಸುತ್ತಿದ್ದರು. ಅವರು ಇಲ್ಲಿಯ ವರೆಗೆ ಅನೇಕ ಸಂಕಟಗಳಿಂದ ಪಾರಾಗಿದ್ದರು. ಮುಂಬಯಿಯಲ್ಲಿರುವಾಗ ಪ್ಲೇಗದಿಂದ ಪಾರಾದ ವಿಷಯ ವಾಚಕರಿಗೆ ಗೊತ್ತಿದೆ. ಆಕೆ ಹತ್ತು ವರ್ಷದವಳಿರುವಾಗ ಇಂತಹವೇ ಒಂದು ಸಂಕಟವು ಬಂದಿತ್ತು. ಅದೇ ಅವರ ಮದುವೆಯಾಗಿತ್ತು. ಆಪ್ತರೊಬ್ಬರ ಮದುವೆಗಾಗಿ ಹುಬ್ಬಳ್ಳಿಗೆ ಹೋಗಿದ್ದರು. ಮದುವಣಗಿತ್ತಿ ಎಂದಮೇಲೆ ಮೈಮೇಲೆ ಕೆಲ ಆಭರಣಗಳಿದ್ದವು. ಒಡವೆಗಳ ಮೇಲೆ ಕಣ್ಣಿಟ್ಟ ಇಬ್ಬರು ನೀಚರು ಮದುವೆಯ ಗಡಿಬಿಡಿಯಲ್ಲಿ ರಾಧಾಬಾಯಿಯ ಬಾಯಿಗೆ ಅರಿವೆ ತುರುಕಿ; ಒಂದು ಹಾಳು ಬಾವಿಯಿದ್ದಲ್ಲಿಗೆ ಕರೆದುಕೊಂಡು ಹೋಗಿ, ಮೈಮೇಲಿನ ಒಡವೆಗಳನ್ನೆಲ್ಲ ಅಪಹರಿಸಿ ಅವರನ್ನು ಭಾವಿಯಲ್ಲಿ ಒಗೆಯಬೇಕೆಂಬಷ್ಟರಲ್ಲಿ, ಕರ್ಮ-ಧರ್ಮ ಸಂಯೋಗದಿಂದ ಯಾರದೋ ಕಾಲು ಸಪ್ಪಳ ಕೇಳಿಸಿತು. ಅದರಿಂದ ಅವರು ಗೊಂದಲಗೆಟ್ಟು ಓಡಿಹೋದರು. ಜೀವದ ಮೇಲೆ ಬಂದ ಕುತ್ತು ಆಭರಣಗಳ ಮೇಲೆ ಹೋಯಿತು. ಇದನ್ನರಿತ ಜನ ಶಸ್ತ್ರಕ್ರಿಯೆಯ ಈ ಆಪತ್ತಿನಿಂದಲೂ ಅವರು ಪಾರಾಗುವರೆಂದು ನಂಬಿದ್ದರು.

ರಾಧಾಬಾಯಿಯವರು ಶಸ್ತ್ರಕ್ರಿಯೆಯಿಂದ ಸುಧಾರಿಸಿ ತಿರುಗಾಡು-ತ್ತಿರುವದನ್ನು ಕಂಡು ಎಲ್ಲರಿಗೂ ಸಂತೋಷವಾಯಿತು. ಕಿರ್ಲೋಸ್ಕರವಾಡಿಗೇ ಅವರು 'ಮಮ್ಮಾ' ಆಗಿದ್ದರು. ಎಲ್ಲರೂ ಅವರನ್ನು ತಾಯಿಯಂತೆ ಪ್ರೀತಿ-ಸುತ್ತಿದ್ದರು. ಈ ಆನಂದದ ನಿಮಿತ್ತವಾಗಿ ಈ ದೀಪಾವಳಿಯನ್ನು ಬಹು ಸಂಭ್ರಮದಿಂದ ಜರುಗಿಸಬೇಕೆಂದು ಎಲ್ಲರೂ ನಿರ್ಣಯಿಸಿದರು.

ಈ ವರ್ಷದ ಲಕ್ಷ್ಮೀಪೂಜೆಯನ್ನು ಲಕ್ಷ್ಮಣರಾಯರೂ ರಾಧಾಬಾಯಿ-ಯವರೂ ಕೂಡಿಯೇ ಮಾಡಬೇಕೆಂಬ ಯೋಜನೆಗೆ ಅವರಿಬ್ಬರ ಅನುಮತಿಯು ದೊರೆತಾಕ್ಷಣವೇ ಸಮಾರಂಭದ ಸಂಭ್ರಮದಸಿದ್ಧತೆ ನಡೆಯಿತು ಸಮಾಜ ಮಂದಿರವು ಸಿಂಗರಿಸಲ್ಪಟ್ಟಿತು. ಚಿತ್ರಕಾರನು ಲಕ್ಷ್ಮಿಯ ಪೂರ್ಣಾಕಾರದ ಸುಂದರ ಮೂರ್ತಿಯನ್ನು ಚಿತ್ರಿಸಿದನು. ಆಕೆಯ ಎದುರಿನಲ್ಲಿ ಕಾರಖಾನೆ-ಯಲ್ಲಿ ತಯಾರಾಗುವ ರಂಟೆ, ಚರಖ, ಪಂಪು ಇವೇ ಮೊದಲಾದ ಸಾಮಾನು-ಗಳನ್ನು ಚಿತ್ತಾಕರ್ಷಕವಾಗುವಂತೆ ಮಂಡಿಸಿ, ಲಕ್ಷ್ಮಿಯು ತನ್ನ ಕರಕಮಲ-ಗಳಿಂದ ಅವುಗಳನ್ನೆತ್ತಿ ಹಿಡಿದಿರುವಂತೆ ತೋರಿಸಲಾಗಿತ್ತು. ಈ ಎಲ್ಲ ಸಾಧನ ಗಳ ಫಲವಾಗಿ ಒಕ್ಕಲಿಗರ ಮನೆಗಳಲ್ಲಿ ಧನಧಾನ್ಯ ಸಮೃದ್ಧಿಯು ಹೇಗೆ ಆಗುತ್ತಿದೆ ಎಂಬುದನ್ನೂ ಈ ಭವ್ಯನೋಟದಲ್ಲಿ ಚಿತ್ರಿಸಲಾಗಿತ್ತು. ಈ ದೃಶ್ಯವು ಇನ್ನಿಷ್ಟು ಸುಂದರವಾಗಿ ಕಾಣಲು ಅಲ್ಲಿ ಬಣ್ಣಬಣ್ಣದ ದೀಪಗಳನ್ನಿಡಲಾಗಿತ್ತು.

ಸನಾಯಿ ವಾದ್ಯದ ಸುಸ್ವರವು ಸಾಯಂಕಾಲದ ೫ ಗಂಟೆಗೆ ಕೇಳಬರ-ಹತ್ತಿತು. ವಾಡಿಯ ನಾಗರಿಕರಿಂದ ಸಮಾಜಮಂದಿರವು ಕಿಕ್ಕಿರಿದು ತುಂಬಿತು. ಅಷ್ಟರಲ್ಲಿ ಬಾಗಿಲಲ್ಲಿ ಮೋಟಾರ ಬಂದಿತು. ಲಕ್ಷ್ಮಣರಾವ ದಂಪತಿಗಳು ಒಳಗೆ ಪ್ರವೇಶಿಸಿದರು. ಜನರು ಚಪ್ಪಾಳೆಯಿಕ್ಕಿ ಸ್ವಾಗತಿಸಿದರು ಲಕ್ಷ್ಮಣ ರಾಯರು ಬಿಳಿದಾದ ಖಾದಿ ಬಟ್ಟೆಯನ್ನು ಧರಿಸಿದ್ದರು. ರಾಧಾಬಾಯಿ-ಯವರು ಅಂಜೂರಿಬಣ್ಣದ ಅಂಚಿನ ಸೀರೆಯನ್ನುಟ್ಟಿದ್ದರು. ಮೂಗಿನಲ್ಲಿ ನತ್ತು ಮತ್ತು ಮೈಮೇಲೆ ಕೆಲವು ಮುಖ್ಯ ಆಭರಣಗಳನ್ನು ಹಾಕಿಕೊಂಡಿ-ದ್ದರು. ಇಂದು ಶಾಸ್ತ್ರಿಗಳು ಪೂಜೆಮಾಡಿಸುವ ರೀತಿಯೇ ಬೇರೆ ವಿಧವಾಗಿತ್ತು. ಆರತಿ, ಮಂತ್ರಪುಷ್ಪ, ಪ್ರಸಾದ ಮೊದಲಾದವುಗಳು ಮುಗಿದ ಮೇಲೆ ನೆರೆದ ಜನಸಮುದಾಯವು ಆನಂದದಿಂದ ತಮ್ಮ ತಮ್ಮ ಮನೆಗೆ ತೆರಳಿತು.

ಎರಡನೆಯ ದಿನ ಕಿರ್ಲೋಸ್ಕರವಾಡಿಯಲ್ಲಿ ನಡೆದ ಇನ್ನೊಂದು ಉತ್ಸಾಹ ಜನಕ ಕಾರ್ಯಕ್ರಮವೆಂದರೆ, ಬಾಲಕರ ಪ್ರದರ್ಶನ. ಆದಕ್ಕೂ ರಾಧಾ

ಬಾಯಿಯವರೇ ಅಧ್ಯಕ್ಷಿಣಿಯರು. ಕಿರ್ಲೋಸ್ಕರವಾಡಿಯ ಆರೋಗ್ಯದಾಯಕ ವಾತಾವರಣದಲ್ಲಿ ಬೆಳೆದ ಬಾಲಕ-ಬಾಲಕಿಯರೆಲ್ಲ ವೈತುಂಬಿಕೊಂಡು ನಗು ಮುಖವುಳ್ಳವರಾಗಿದ್ದರು. ಪರೀಕ್ಷಕರು ಬಹುಮಾನಗಳನ್ನು ಸಾರಿದರು. ರಾಧಾಬಾಯಿಯವರು ಅಂದಿನ ಪ್ರಸಂಗವನ್ನೆತ್ತಿ ಒಂದು ಚಿಕ್ಕ ಭಾಷಣವನ್ನು ಮಾಡಿದರು. ಆನಂತರ ಅವರ ಅಮೃತಹಸ್ತದಿಂದ ಬಹುಮಾನಗಳನ್ನು ಹಂಚಲಾಯಿತು. ಅಂದು ಭಾವ-ಬಿದಿಗೆಯಾದ್ದರಿಂದ ಲಕ್ಷ್ಮಣರಾಯರು ಬಟುಅಕ್ಕನ ಕಡೆಗೆ ಹೋಗಿ ಆಕೆಗೆ ನಮಸ್ಕರಿಸಿ ಬಂದರು. ರಾತ್ರಿಯಲ್ಲಿ ಚಂದ್ರ ಜ್ಯೋತಿ, ಬಾಣ, ಹೂಬಾಣ, ಕುಳ್ಳಿ ಮೊದಲಾದ ಮನೋಹರ ಮದ್ದಿನ ಗರ್ಜನೆಯಿಂದ ಇಡೀ ಕಿರ್ಲೋಸ್ಕರವಾಡಿಯು ಶೋಭಿಸಿತು.

ಮಾರನೆಯದಿನ ಬೆಳಗಿನ ಗಂಟೆ ಬಾರಿಸಿತು. ಹೊಸ ಹುರುಪಿನಿಂದ ಕೆಲಸಗಾರರು ಕಾರಖಾನೆಯನ್ನು ಪ್ರವೇಶಿಸಿ ಕೆಲಸದಲ್ಲಿ ತೊಡಗಿದರು. ಲಕ್ಷ್ಮಣರಾಯರು ಡಾಕ್ಟರರನ್ನು ಕರೆದುಕೊಂಡು ರಾಮಪುರದ ಜನರಿಗೆ ಪ್ಲೇಗ ಮೈಲಿಯನ್ನು ಚುಚ್ಚಿಸುವದಕ್ಕಾಗಿ ತೆರಳಿದರು. ನಿನ್ನಿನ ಶ್ರಮದಿಂದ ರಾಧಾಬಾಯಿಯವರಿಗೆ ಹೆಚ್ಚು ನಿದ್ದೆ ಹತ್ತಿರಬೇಕೆಂದು ಅವರ ಕೋಣೆಗೆ ಹೋಗಿ ಯಾರೂ ಅವರನ್ನು ಎಬ್ಬಿಸಲಿಲ್ಲ. ಅಂದೇ ಬಡೋದೆಯ ಡಾಕ್ಟರ ಪಂಡಿತರೆಂಬವರು ಅತಿಥಿಗಳಾಗಿ ಆಗಮಿಸಿದ್ದರು. ಅವರ ಲಕ್ಷ್ಯವು ಅಕ ಸ್ಮಾತ್ತಾಗಿ ಆ ಕೋಣೆಯ ಕಡೆಗೆ ಹೋದುದರಿಂದ ಅವರಿಗೆ ಸಂದೇಹವು ಬಂದು ಪಕ್ಕದಲ್ಲಿ ನಿಂತಿದ್ದ ಪ್ರಭಾಕರಪಂತನನ್ನು ಕರೆದು ನಿಮ್ಮ ಮಾತೋಶ್ರೀಯವ ರನ್ನು ಎಬ್ಬಿಸು ಎಂದು ಹೇಳಿದರು.

ಪ್ರಭಾಕರಪಂತರು ತಾಯಿಯ ಮಂಚದ ಹತ್ತಿರ ಹೋಗಿ ನೋಡುತ್ತಾರೆ, ರಾಧಾಬಾಯಿಯವರ ಆತ್ಮವು ಅವರ ಶರೀರವನ್ನು ಬಿಟ್ಟು ಯಾವಾಗಲೋ ಹೊರಟುಹೋಗಿತ್ತು.

ಕಾರಖಾನೆಯ ಗಂಟೆಯು ಗಣ ಗಣ ಬಾರಿಸತೊಡಗಿತು. ಕೂಡಲೆ ಪಾವರಹೌಸ ಬಂದಾಯಿತು. ಎಲ್ಲರೂ ಏನಾಯಿತೆಂಬ ಗೊಂದಲದಲ್ಲಿ ಬಿದ್ದರು. ಅಷ್ಟರಲ್ಲಿ ಮಮ್ಮಾ ಸ್ವರ್ಗಸ್ಥರಾದರೆಂಬ ಸುದ್ದಿಯು ಬಂದಿತು. ಆದರೆ ಜನರು ಅದನ್ನು ನಂಬದೇ ಹೋದರು. ನಿನ್ನೆ ಸಾಯಂಕಾಲ ಬಾಲಕರ ಪ್ರದರ್ಶನದ ಅಧ್ಯಕ್ಷಿಣಿಯರಾಗಿದ್ದರು. ಎಲ್ಲರೊಡನೆ ಮಾತು-ಕತೆಯಾಡಿದ್ದರು. ಅಂಥ ವರು ಇಂದು ಒಮ್ಮಿಂದೊಮ್ಮೆಲೆ ಹೇಗೆ ಸ್ವರ್ಗಸ್ಥರಾದರು? ಅವರ ಪ್ರಕೃತಿಯು

ಅಷ್ಟು ಕೆಟ್ಟಿದ್ದರೆ, ಶಂತನುರಾವ, ರಾಜಾರಾಮರಾಯರು ಕೆಲಸಕ್ಕೇಕೆ ಬಂದರು? ಒಡೆಯರು ರಾಮಪುರಕ್ಕೇಕೆ ಹೋದರು? ಛೇ! ಈ ಸುದ್ದಿ ಸುಳ್ಳಿರಬೇಕು!

ಆದರೆ ಇಂಥ ಅಶುಭವಾರ್ತೆಗಳು ಎಂದಿಗೂ ಸುಳ್ಳಾಗುವದಿಲ್ಲ. ಈ ವಾರ್ತೆಯು ನಿಜವೆಂದು ಕಂಡುಬಂದಾಗ ಇಡೀ ವಾಡಿಯೇ ಶೋಕಸಾಗರದಲ್ಲಿ ಮುಳುಗಿ, ಕೆಲಸಗಾರರೆಲ್ಲರೂ ಅಂತ್ಯದರ್ಶನಕ್ಕೆಂದು ಅವರ ಮನೆಯ ಕಡೆಗೆ ತೆರಳಿದರು.

ಅನಂತರಾವ ಫಳಣೀಕರರು ರಾಮಪುರದಿಂದ ಲಕ್ಷ್ಮಣರಾಯರನ್ನು ಕರೆದುಕೊಂಡು ಬಂದರು. ಅವರು ರಾಧಾಬಾಯಿಯ ಪಾರ್ಥಿವ ದೇಹದ ಕಡೆಗೆ ನೆಟ್ಟನೋಟದಿಂದ ನೋಡುತ್ತ ಸ್ವಲ್ಪ ಸುಮ್ಮನೆ ನಿಂತುಕೊಂಡು "ನಿಜ-ವಾಗಿಯೂ ನೀನು ನನ್ನನ್ನು ಬಿಟ್ಟು ದೇವರ ಮನೆಗೆ ಹೋದೆಯಾ?" ಎಂದಂದು ಕಣ್ಣುಗಳನ್ನೊರಿಸಿಕೊಂಡರು. ಆಪ್ತೇಷ್ಟರ ಆಕ್ರೋಶದಿಂದ ಅಲ್ಲಿಯ ವಾತಾವರಣವು ತುಂಬಿಹೋಯಿತು. ರಾಧಾಬಾಯಿಯವರ ಜಡಶರೀರ-ವನ್ನು ಕಿರ್ಲೋಸ್ಕರವಾಡಿಯ ಪ್ರವೇಶದ್ವಾರದ ಸಮೀಪದಲ್ಲಿರುವ ಬಯಲು ಸ್ಥಳದಲ್ಲಿ ಅಗ್ನಿನಾರಾಯಣನಿಗೆ ಅರ್ಪಿಸಲಾಯಿತು.

ಮರಣ ಸಮಯಕ್ಕೆ ರಾಧಾಬಾಯಿಯವರಿಗೆ ೫೫ ವರುಷಗಳಾಗಿದ್ದವು. ಅವರು ಕೊಂಕಣದಲ್ಲಿಯ ಧೋಪೇಶ್ವರ ಎಂಬ ಹಳ್ಳಿಯಲ್ಲಿ ಹುಟ್ಟಿದರು. ಅವರು ತೀರ ಚಿಕ್ಕವರಿರುವಾಗಲೇ ಅವರ ತಂದೆ ತೀರಿಕೊಂಡರು. ಆಗ ಅವರ ತಾಯಿ, ತಮ್ಮ ಎರಡೂ ಹೆಣ್ಣುಮಕ್ಕಳನ್ನು ಕಟ್ಟಿಕೊಂಡು ಕುಂದಗೋಳದಲ್ಲಿ ತಮ್ಮ ತಂದೆಯವರಾದ ದಾಮೋದರಪಂತ ಟೇಂಬೆಯವರ ಮನೆಯಲ್ಲಿ ಬಂದು ನಿಂತರು. ಮುಂದೆ ೧೦ ವರುಷಗಳ ನಂತರ ರಾಧಾಬಾಯಿಯ ವಿವಾಹವು ಅಸೋಗೆ ಎಂಬಲ್ಲಿ ಲಕ್ಷ್ಮಣರಾಯರೊಡನೆ ಆಯಿತು.

ಅವರು ಮದುವೆಯಾಗಿ ಲಕ್ಷ್ಮಣರಾಯರೊಡನೆ ೪೨ ವರ್ಷ ಸಂಸಾರ ಮಾಡಿದರು. ಅವರು ತಮ್ಮ ಪತಿಯ ವೈಭವದ ಪಾಲುಗಾರರಾಗಿ ಬಾಳಿದರು. ಅವರು ದೊಡ್ಡ ಕಾರಖಾನೆದಾರರ ಹೆಂಡತಿಯಾದಮೇಲೆ ಅವರಿಗೆ ಯಾವುದರ ಕೊರತೆಯೆನಿಸಬೇಕು? ಆಭರಣ, ಬಟ್ಟೆ—ಬರೆ, ಆಳು—ಹೋಳು, ಎದ್ದರೆ—ನಿಂತರೆ ಮೋಟಾರ— ಎಲ್ಲ ತರದ ವೈಭವವು ಅವರಿಗೆ ದೊರೆಯಿತು. ಆದರೆ ಅವರಿಗೆ

ಇದೆಲ್ಲವೂ ಆಯತ್ತವಾಗಿ ಬಂದಿತೆಂದು ಯಾರೂ ಭಾವಿಸಬಾರದು. ಅದನ್ನು ದೊರಕಿಸಲು ರಾಧಾಬಾಯಿಯವರು ಕಡಿಮೆ ಕಷ್ಟ ಸೋಸಿದರೆಂದು ಯಾರೂ ತಿಳಿದುಕೊಳ್ಳಬಾರದು.

ಅವರು ಮದುವೆಯಾದ ಮೇಲೆ ೧೮೫೩ ರ ಮಧ್ಯದಲ್ಲಿ ಮುಂಬೈಗೆ ಮೊದಲಸಲ ಬಂದರು. ಆಗ ತಿಂಗಳಿಗೆ ೩೫ ರೂ. ಸಂಬಳ ತರಬಲ್ಲ, ಶೀಘ್ರ ಕೋಪಿ ಸ್ವಭಾವದ, ಡ್ರಾಯಿಂಗ ಮಾಸ್ತರರ ಹೆಂಡತಿಯೆಂದು ದಾಂಪತ್ಯ ಜೀವನವನ್ನು ಆರಂಭಿಸಿದರು. ಆ ಕಾಲದಲ್ಲಿ ಇಂಥ ತರುಣ ದಂಪತಿಗಳ ಜೀವನದಲ್ಲಿ ಸರಸ-ಸಲ್ಲಾಪಗಳಿಗೆ (Romance) ಸಮಯವು ಕಡಿಮೆ ಇರುತ್ತಿತ್ತು. ಅದರಿಂದ ಹೆಂಡತಿಗೆ ಗಂಡನ ಉದ್ಯೋಗದ ಪೂರ್ಣ ಕಲ್ಪನೆ ಇರುತ್ತಿದ್ದಿಲ್ಲ. ಅವನ ವಿಚಾರ, ಮತ, ಧೋರಣೆ ಮೊದಲಾದವುಗಳ ಬಗ್ಗೆ ಕ್ವಚಿತ್ತಾಗಿ ಅವರಲ್ಲಿ ಮಾತು ನಡೆಯುತ್ತಿತ್ತು. ಗಂಡನಿಗೆ ಏನು ಸೇರುತ್ತದೆ, ಏನು ಸೇರುವದಿಲ್ಲವೆಂಬುದು ಗೊತ್ತಿದ್ದರೆ ಸಾಕು ಎಂಬ ಕಲ್ಪನೆ ಅವರಿಗೆ ಇದ್ದಿತು. ಇನ್ನಿತರ ಕಾರ್ಯ-ಕಲಾಪಗಳ ಅರಿವು ಅವರಿಗಿರುತ್ತಿದ್ದಿಲ್ಲ.

ಆನಂತರ ಮುಂಬೈ ಬಿಟ್ಟು ಬೆಳಗಾವ-ಔಂಧಗಳಲ್ಲಿ ಲಕ್ಷ್ಮಣರಾಯರು ಇರತೊಡಗಿದ ಮೇಲೆ ಸಂಸಾರದ ಭಾರವು ರಾಧಾಬಾಯಿಯವರ ಮೇಲೆ ಬಿದ್ದಿತು. ಈ ಹೊತ್ತಿಗೂ ಕೂಡ ಲಕ್ಷ್ಮಣರಾಯರ ಗಳಿಕೆಯು ಅಷ್ಟಕ್ಕಷ್ಟೇ. ಆಗ ರಾಧಾಬಾಯಿಯವರೇ ಅಡಿಗೆ-ನೀರು ಮಾಡುತ್ತಿದ್ದರು ಅವರಿಗೆ ಅದು ಕಷ್ಟವೇ ಎನಿಸುತ್ತಿರಲಿಲ್ಲ. ದಿನಾಲು ಉಪವಾಸವಿದ್ದು ಗಂಡನು ಮನೆಗೆ ಬರುವ ದಾರಿ ಕಾಯಬೇಕಾಗುತ್ತಿತ್ತು. ಪತಿವ್ರತೆಗೆ ಪತಿಯ ಊಟಾದನಂತರವೇ ಊಟವಲ್ಲವೇ ?

ಲಕ್ಷ್ಮಣರಾಯರು ಔಂಧದಲ್ಲಿ ಮನೆ ಮಾಡಿದ ಮೇಲೆ, ರಾಧಾಬಾಯಿಯವರಿಗೂ ರಾಜವಾಡೆಯಿಂದ ನಡನಡುವೆ ಆಮಂತ್ರಣಗಳು ಬರುತ್ತಿದ್ದವು. ರಾಜವಾಡೆಯೊಳಗಿನ ರೀತಿ-ರಿವಾಜುಗಳೂ ಶಿಷ್ಟಾಚಾರಗಳೂ ಭಿನ್ನವಿದ್ದರೂ ರಾಧಾಬಾಯಿಯವರು ಅವುಗಳನ್ನು ಬೇಗನೆ ತಿಳಿದುಕೊಂಡು ನಡೆಯಹತ್ತಿದ್ದರಿಂದ, ಅವರು ಅವರ ಬಳಗದವರೇ ಆದರು. ಅವರ ಮೂಲಕವಾಗಿಯೇ ರಾಜಾಸಾಹೇಬರು, ಅಜಂತಾ, ವೇರೂಳ ಇಲ್ಲವೆ ಪ್ರತಾಪಗಡ, ಮಹಾಬಳೇಶ್ವರಗಳಿಗೆ ಹೊರಟರೆಂದರೆ, ಲಕ್ಷ್ಮಣರಾಯರನ್ನು ಬಹಳ ಆಗ್ರಹದಿಂದ

ಆಮಂತ್ರಿಸುತ್ತಿದ್ದರೋ ಅಷ್ಟೇ ಆಗ್ರಹದಿಂದ ರಾಧಾಬಾಯಿಯವರನ್ನೂ ಕರೆಯುತ್ತಿದ್ದರು.

ಬೆಳಗಾವಿಯಲ್ಲಿರುವಾಗಲೇ ಲಕ್ಷ್ಮಣರಾಯರು ರಂಟಗಳನ್ನು ಮಾಡಲು ಪ್ರಾರಂಭಿಸಿದ್ದರು. ಮನೆಗೆಹತ್ತಿಯೇ ಕಾರಖಾನೆಯ ಶೆಡ್ಡು. ಅಲ್ಲಿ ಒಂದು ಭಟ್ಟಿ. ಆ ಕಾಲಕ್ಕೆ ೪೦–೫೦ ಪಡಿಯಚ್ಚುಗಳನ್ನು ಹಾಕಬೇಕಾಗುತ್ತಿತ್ತು. ರಾಧಾಬಾಯಿಗೆ ಇದು ಒಂದು ಮೋಜು. ಆಕೆಯು ಕಮಲಾಬಾಯಿ, ಭಾಗೀರಥಿಬಾಯಿ, ಲಕ್ಷ್ಮೀಬಾಯಿ ಮೊದಲಾದ ಅಕ್ಕ–ತಂಗಿಯರನ್ನು ಕರೆದುಕೊಂಡು ಪಡಿಯಚ್ಚುಗಳನ್ನು ಹಾಕುವದರಲ್ಲಿ ಗಂಡನಿಗೆ ನೆರವಾಗುತ್ತಿದ್ದಳು. ಹೆಂಡತಿಯು ತಮಗೆ ಸಹಾಯ ಮಾಡಲು ಮುಂದೆ ಬರುತ್ತಿರುವುದನ್ನು ಕಂಡು, ಲಕ್ಷ್ಮಣರಾಯರಿಗೆ ಅವರ್ಣನೀಯ ಆನಂದವಾಗುತ್ತಿತ್ತು. ಪುರುಷರಿಗೆ ತಮ್ಮ ಹೆಂಡಂದಿರಿಂದ ಶಾರೀರಕ್ಕಿಂತಲೂ ಮಾನಸಿಕ ಸಹಕಾರದ ಅಪೇಕ್ಷೆಯು ಇರುತ್ತದೆ. ಪ್ರತಿಯೊಬ್ಬ ಸ್ತ್ರೀಯು ತನ್ನ ಗಂಡನಿಗೆ ಹೆಂಡತಿಯಾಗಿರುವಳಲ್ಲದೆ, ಅವನಿಗೆ ಸ್ಫೂರ್ತಿಯನ್ನೀಯುವ ದೇವತೆಯೂ ಆಗಿದ್ದಾಳೆಂಬುದನ್ನು ಎಷ್ಟು ಜನ ಸ್ತ್ರೀಯರು ಬಲ್ಲರು? ಆದುದರಿಂದ ಸೌ|| ರಾಧಾಬಾಯಿಯವರ ಕಿರ್ತಿಯನ್ನು, ನಮ್ಮ ಅಕ್ಕ-ತಂಗಿಯರು ತೀಡಿದರೆ ಎಷ್ಟು ಒಳಿತಾಗುವದು?

ಕಿರ್ಲೋಸ್ಕರವಾಡಿಯ ಸ್ಥಾಪನೆಯ ಕಾಲಕ್ಕೆ ರಾಧಾಬಾಯಿಯು ಜರುಗಿಸಿದ ಕೆಲಸಗಳು ಅಷ್ಟೇ ಮಹತ್ವದ್ದಾಗಿರುವವು. ಮೇಲೆ ಆಕಾಶ, ಕೆಳಗೆ ಭೂಮಿಯೇ ಅವರ ಮನೆ. ಸುತ್ತೆಲ್ಲ ಮುಳ್ಳುಗಳ್ಳೇ, ಜಾಲಿಯ ಮುಳ್ಳು. ನೀರಿನ ಅಭಾವವೆಂದರೆ ಹೇಳತೀರದು. ಪಿಶಾಚಿಗಳ ವಿಹಾರವಂತಿದ್ದ ಸ್ಥಳದಲ್ಲಿ ಬಂದು ನಿಂತು ಒಲೆಯನ್ನು ಹೊತ್ತಿಸಲು ಎಷ್ಟುಜನ ಹೆಂಗಸರು ಆನಂದದಿಂದ ಸಿದ್ಧರಾಗಬಲ್ಲರು? ಪ್ರಭು ರಾಮಚಂದ್ರನೊಡನೆ ವನವಾಸಕ್ಕೆ ತೆರಳಿದ ಸೀತೆಯಂತೆಯೇ ಲಕ್ಷ್ಮಣರಾಯರ ಸಂಗಡ ರಾಧಾಬಾಯಿಯವರು ಈ ವನವಾಸವನ್ನು ಸ್ವೀಕರಿಸಿದ್ದರು. ಇಂಥ ಗಂಭೀರ ಸ್ಥಿತಿಯಲ್ಲಿಯೂ ಅವರು ಯಾವಾಗಲೂ ಸುಹಾಸ್ಯವದನರಾಗಿಯೂ ಶಾಂತಮನಸ್ಕರಾಗಿಯೂ ಇರುತ್ತಿದ್ದರು. ಅವರು ಇಷ್ಟೊಂದು ಜನರನ್ನು ಕೂಡಿಕೊಂಡು ಈ ಬಯಲಭೂಮಿಗೆ ಬಂದುದು ಒಂದು ಆಪತ್ತಾಗಿರದೆ, ವನಭೋಜನದ ದೆಶೆಯಿಂದ ಬಂದಿರಬಹುದು, ಎಂದು ಅವರನ್ನು ಕಂಡವರಿಗೆಲ್ಲ ಅನಿಸುವಂತಾಗಿತ್ತು. ಈ ಸಂಗತಿಯನ್ನು ಬರೆಯುತ್ತಿರುವಾಗ ಲೇಖಕನ ಕಣ್ಮುಂದೆ, ಜಾಲಿಯಗಿಡದ ಬುಡದಲ್ಲಿ ತನ್ನ ಸಂಸಾರವನ್ನು

ಹೊಡಿದ ಸ್ತ್ರೀ–ಪುರುಷರ ಚಿಕ್ಕ ತಂಡದಲ್ಲಿ, ಟೊಂಕದ ಮೇಲೆ ಎರಡೂ ಕೈಗಳನ್ನಿಟ್ಟುಕೊಂಡು ನಗುನಗುತ್ತ ಅವರೆಲ್ಲರ ಯೋಗ–ಕ್ಷೇಮವನ್ನು ವಿಚಾರಿಸುತ್ತಿರುವ ಅಕ್ಕಯ ಚಿತ್ರವು ನಿಲ್ಲದೆ ಹೋಗುವದಿಲ್ಲ.

ಲಕ್ಷ್ಮಣರಾಯರ ಚರಿತ್ರವನ್ನು ಬರೆಯುತ್ತಿರುವಾಗ, ರಾಧಾಬಾಯಿಯ ಪರಿಚಯವನ್ನು ಒಂದೇ ಪ್ರಕರಣದಲ್ಲಿ ಮುಗಿಸುವದೆಂದರೆ ಈ ಲೇಖಕನಿಗೆ ಬಹಳ ಕಠಿಣವೆನಿಸುತ್ತದೆ. ಅವರ ಮಕ್ಕಳು ಅವರಿಗೆ 'ಮಮ್ಮಾ' ಎಂದು ಕರೆಯುತ್ತಿದ್ದರು. ವಾಡಿಯಲ್ಲೆಲ್ಲ ಇದೇ ಹೆಸರು ಅವರಿಗೆ ರೂಢಿಯಾಯಿತು. ಆದರೆ ಅವರು ತಮ್ಮ ಐದು ಮಕ್ಕಳಿಗಷ್ಟೇ ತಾಯಿಯಾಗಿರದೆ, ವಾಡಿಗೆಲ್ಲ ತಾಯಿಯಾಗಿದ್ದರು. ಅವರು ಜನರಿಗೆ ಮಾಡಿದ ಉಪಕಾರಗಳನ್ನು ಸ್ವಲ್ಪದರಲ್ಲಿ ಹೇಳಿದರೆ ಮುಗಿಯಲಾರದು. ಆದರೂ ಅವರು ಮಾಡಿದ ಕೆಲಸಗಳಲ್ಲಿಯ ಕೆಲ ಉದಾಹರಣೆಗಳನ್ನಾದರೂ ಕೊಡದೆ ಸಮಾಧಾನವಾಗುವದಿಲ್ಲ.

ವಾಡಿಯಲ್ಲಿ ಆರಂಭಕ್ಕೆ ಪ್ರತ್ಯೇಕವಾದ ಹೆರಿಗೆಯ ಆಸ್ಪತ್ರೆಯಿರಲಿಲ್ಲ. ಈ ಕೆಲಸವನ್ನು ಸೌ॥ ರಾಧಾಬಾಯಿ ಹಾಗೂ ಸೌ॥ ಗಂಗೂಬಾಯಿ ಜಾಂಭೇಕರ ಅವರು ಹೊತ್ತುಕೊಂಡರು. ಯಾರಾದರೂ ಬೇನೆತಿನ್ನುವ ಸುದ್ದಿಯನ್ನು ಕೇಳಿದೊಡನೆಯೇ ರಾಧಾಬಾಯಿಯವರು ಅವರ ಮನೆಗೆ ಹೊರಟೇಬಿಡುತ್ತಿದ್ದರು. ಅಲ್ಲಿ ಕುಲ–ಗೋತ್ರ ಹೊತ್ತು–ವೇಳೆಗಳ ವಿಚಾರಗಳಿಗೆ ಆಸ್ಪದವೇ ಇರುತ್ತಿದ್ದಿಲ್ಲ. ಗಣಪತರಾವ ವಿಜಾಪುರರವರ ಹೆಂಡತಿಯ ಬಾಣಂತಿತನವನ್ನು ಎಷ್ಟು ಕಾಳಜಿಯಿಂದ ಮಾಡುತ್ತಿದ್ದರೋ ಅಷ್ಟೇ ಕಾಳಜಿಯಿಂದ ತುಕಾರಾಮಾಂಗನ ಹೆಂಡತಿಯ ಬಾಣಂತಿತನವನ್ನೂ ಮಾಡುತ್ತಿದ್ದರು.

ರಾಧಾಬಾಯಿಯ ನಿಧನದ ನಂತರ ಅವರ ಬಗ್ಗೆ ಲಕ್ಷ್ಮಣರಾಯರಿಗೆ ಅನೇಕರಿಂದ ಸಂತಾಪವನ್ನು ವ್ಯಕ್ತಪಡಿಸಿದ ಅನೇಕ ಪತ್ರಗಳು ಬಂದವು. ಅಂಥವುಗಳಲ್ಲಿಯ ಎರಡು ಪತ್ರಗಳೊಳಗಿನ ಸಾರಾಂಶವನ್ನು ಮುಂದೆ ಕೊಡಲಾಗುವದು. ಅವುಗಳಲ್ಲಿ ರಾಧಾಬಾಯಿಯವರ ಸ್ತ್ರೀಯರ ಸೇವೆಯ ಚಿತ್ರವು ಸ್ಪಷ್ಟವಾಗಿ ಮೂಡಿದೆ.

ಕಿರ್ಲೋಸ್ಕರವಾಡಿಯ ಸ್ಟೇಶನ್ ಮಾಸ್ತರರಾಗಿದ್ದ ಶ್ರೀ ಭಿಡೆ ಎಂಬ ಗೃಹಸ್ಥರು ಬರೆದ ಪತ್ರದಲ್ಲಿ:—

"ನನ್ನ ಮೊದಲನೆಯ ಹುಡುಗನ ಜನನ ಕಾಲಕ್ಕೆ ಸೌ॥ ರಾಧಾಬಾಯಿಯವರು ಬಾಣಂತಿಗೆ ಮಾಡಿದ ಸಹಾಯ, ಮಗುವಿಗಾಗಿ ಆಕಳ ಹಾಲು

ಕಿರ್ಲೋಸ್ಕರವಾಡಿಯ
ಮಮ್ಮಾ



ಮುಂಬಯಿಯಲ್ಲಿಯ ವಾಸ, ೧೯೪೪

ಕುರ್ಚಿಯಮೇಲೆ:– ಕುಂ. ಸೌ. ರಾಧಾಬಾಯಿ
ಹಿಂದಿನವರು:– ಕು. ಅಂಬೂತಾಯಿ ಪಂಡಿತ
ಕುಳಿತವರು:– ಶಂಭುರಾವ



ತುಳಸೀ ಪೂಜೆ



ವೈ. ಸೌ. ರಾಧಾಬಾಯಿಯವರ ಸಂಗಮರವರಿ ಪ್ರತಿಮೆ

ಅನಾವರಣ:— ೮-೩-೧೯೩೬

ಒಕ್ಕಲಿಗರೇ!

ರಂಟೆ ಹೊಡೆಯುವ ಶ್ರಮ

ಹಾಗು

ಸಮಯ ಉಳಿಸುವ, ಉತ್ಪನ್ನ ಹೆಚ್ಚಿಸುವ

ಕಿರ್ಲೋಸ್ಕರ ಬಂಧುಗಳ

ಸುಧಾರಿಸಿದ

ಕಬ್ಬಿಣ ರಂಟೆ



ನಂ. ೬

ಉಪಯೋಗಿಸಿರಿ

ಕಿರ್ಲೋಸ್ಕರ ಬಂಧುಗಳು

ಟಿಳಕವಾಡಿ, ಬೆಳಗಾವಿ.

ಕಳಿಸಿದ್ದು, ಇವೇ ಮೊದಲಾದ ಉಪಕಾರಗಳ ನೆನಪಾಗದೆ ಉಳಿಯುವದಿಲ್ಲ. ಅವರ ನಿಧನದಿಂದ ವಾಡಿಯೊಳಗಿನ ಲಕ್ಷ್ಮಣರಾಯರ ಸರಿಸಮಾನ ಶಕ್ತಿಯುಳ್ಳ ಇನ್ನೊಂದು ಶಕ್ತಿಯು ಸಮಾಪ್ತವಾಯಿತು ಎಂದು ನನಗನಿಸುತ್ತದೆ."

ಶ್ರೀ ಭಾವೂರಾವ ಪಾಟೀಲ (ಕರ್ಮವೀರ)ರ ಪತ್ರದಲ್ಲಿ ಹೀಗಿದೆ:—

"ನನ್ನ ಸೌಭಾಗ್ಯವತಿಯು ಬೇನೆಗೀಡಾಗಿ ಹಾಸಿಗೆ ಹಿಡಿದಾಗ, ನಮ್ಮವರೇ ಎಂಬ ಭಾವನೆಯಿಂದ ರಾಧಾಬಾಯಿಯವರು ಆಕೆಯ ಮನಸ್ಸನ್ನು ಒಲಿಸಿ, ಆಪರೇಶನ್ ಮಾಡಿಸಿಕೊಳ್ಳಲು ಆಕೆಯನ್ನು ಒಪ್ಪಿಸಿದರು. ಮತ್ತು ಆಪರೇಶನ್ನಿನ ಕಾಲಕ್ಕೆ ಮಿರಜಿಯ ಆಸ್ಪತ್ರೆಗೆ ಸ್ವತಃ ಬಂದು ಅಲ್ಲಿದ್ದುಕೊಂಡು ಅವರು ಸಲ್ಲಿಸಿದ ಸಹಾಯದ ನೆನಪು ನನ್ನ ಹೃತ್ಪಟಲದಿಂದ ಹೋಗುವದು ಎಂದೂ ಶಕ್ಯವಿಲ್ಲ."

ವಾಡಿಯು ಸ್ಥಾಪನೆಯಾದ ನಂತರ ೧೦-೧೨ ವರುಷಗಳ ವರೆಗೆ ಅಡಿಗೆ ಮಾಡಲು ಅಡಿಗೆ ಭಟ್ಟನಿರಲಿಲ್ಲ. ಒಲೆಯನ್ನು ಸಂಭಾಳಿಸುವ ಕೆಲಸವನ್ನು ರಾಧಾಬಾಯಿಯವರೇ ನೋಡಿಕೊಳ್ಳುತ್ತಿದ್ದರು. ಅತಿಥಿ-ಅಭ್ಯಾಗತರಿಗೆ ತೆರಪೇ ಇರುತ್ತಿದ್ದಿಲ್ಲ. ಎಲ್ಲರ ಪರಾಮರ್ಶವನ್ನು ಅವರು ಮನಗೊಟ್ಟು ಮಾಡುತ್ತಿದ್ದರು. ಬಹುತರ ಅತಿಥಿಗಳು ಒಂದೇ ದಿನ ಇರುತ್ತಿದ್ದರು. ಆದರೆ ಕೆಲಸಕ್ಕಾಗಿ ಬಂದವರು ಹೆಚ್ಚುದಿನ ನಿಲ್ಲಬೇಕಾಗುತ್ತಿತ್ತು. ಒಬ್ಬರಂತೂ ಅಖಂಡ ಎರಡು ವರುಷ ತಳ ಊರಿಯೇ ಬಿಟ್ಟಿದ್ದರು. ಆದರೆ ರಾಧಾಬಾಯಿಯವರು ಅವನ ಬಗ್ಗೆ ಚಕಾರ ಶಬ್ದವಾಡಲಿಲ್ಲ.

ಕಾರಖಾನೆಯಲ್ಲಿ ಯಾರಿಗಾದರೂ ಸುಟ್ಟು ಗಾಯವಾಗಿರಲಿ, ಇಲ್ಲವೆ ಮತ್ತೇನಾದರೂ ಆಗಿರಲಿ, ಅವರ ಶುಶ್ರೂಷೆಯನ್ನು ಮಾಡಲು ರಾಧಾಬಾಯಿಯವರು ಸದಾ ಸಿದ್ಧರಿದ್ದರು. ಹೊಸ ದಂಪತಿಗಳ ಸಂಸಾರವನ್ನು ಹೂಡಿಕೊಡಲೂ ಅವರು ಮುಂದಾಗಿ ಹೋಗುತ್ತಿದ್ದರು. ಹೆಂಗಸರ ಆಟಕ್ಕೂ ಅವರೇ ಮುಂದಾಳು. ವಟಸಾವಿತ್ರಿ, ನಾಗಪಂಚಮಿ, ಪುರಾಣ, ಕೀರ್ತನೆ, ಮೊದಲಾದೆಡೆಗಳಲ್ಲಿ ಅವರು ಇರತಕ್ಕವರೇ. ನೂಲು ತೆಗೆಯುವದರಲ್ಲಂತೂ ಅವರ ಕೈ ಹಿಡಿವವರೇ ಇರಲಿಲ್ಲ. ಅಷ್ಟೊಂದು ನಿಷ್ಣಾತರೆನಿಸಿಕೊಂಡಿದ್ದರು. ಪ್ರಭಾತಫೇರಿಯಲ್ಲಿಯೂ ಅವರು ತಪ್ಪದೇ ಅಗ್ರಭಾಗದಲ್ಲಿರುವವರೇ.

ಶಂತನುರಾಯರ ಲಗ್ನವಾದ ಮೇಲೆ ಅವರ ಕಿರಿಯ ತಮ್ಮ ರಾಜಾರಾಮ ಪಂತ ಇವರ ಮದುವೆಯು, ಜಾವಳಿಯಲ್ಲಿಯ (ಮಂಗಳೂರ) ಶಾಸ್ತ್ರಿ

ಪ್ಲ್ಯಂಟರರಾದ ಶ್ರೀ ಕೃಷ್ಣರಾವ ಗುರ್ಜರ ಇವರ ಕನ್ಯಾ ಲೀಲಾಬಾಯಿ ಇವಳೊಡನೆ ತಾ|| ೧೨–೬–೧೯೩೯ ರಂದು ಕಿರ್ಲೋಸ್ಕರವಾಡಿಯಲ್ಲಿ ಒಹಳ ವೈಭವದಿಂದ ನೆರವೇರಿತು.

ರಾಜಾರಾಮಪಂತರು ಹುಟ್ಟಾ ಇಂಜಿನಿಯರೆಂದೇ ಹೇಳಬೇಕು. ಅವರ ತಲೆಯು ನಡೆಯಲಾರದಂಥ ಯಂತ್ರವೇ ಇಲ್ಲವೆನ್ನಬಹುದು. ಅವರು ಬಿಡುವಿನ ವೇಳೆಯಲ್ಲಿ ವಾಡಿಗೆ ಬಂದಾಗ ಇಡೀ ದಿವಸವನ್ನು ಕಾರಖಾನೆಯಲ್ಲಿಯೇ ಕಳೆಯುತ್ತಿದ್ದರು. ಅದರಿಂದ ತೀರ ಚಿಕ್ಕ ವಯಸ್ಸಿನಲ್ಲಿಯೇ ಅವರ ಮೇಲೆ ಬೇರೆ ಬೇರೆ ತರದ ಹೊಣೆಗಾರಿಕೆಗಳು ಬೀಳತೊಡಗಿದವು. ಔಂಧ ಸಂಸ್ಥಾನದ ವಿದ್ಯುತ್ ಪೂರೈಸುವ ಯೋಜನೆಯನ್ನು ಅವರು ಮತ್ತು ಶಾಮರಾವ ಭಿರಂಗಿ ಎಂಬವರು ಪೂರ್ತಿಗೊಳಿಸಿದರು. ಅದರಂತೆಯೇ ಕಾರಖಾನೆಯಲ್ಲಿ ಬಂದ ೧೨೫ ಹಾರ್ಸ ಪಾವರದ ಜಿ. ಎಂ. ಎ. ಜರ್ಮನ್ ಆಯಿಲ್ ಇಂಜಿನವನ್ನು ರಾಜಾ-ರಾಮಪಂತನು ಸರಿಯಾಗಿಯೂ ವ್ಯವಸ್ಥಿತವಾಗಿಯೂ ಕೂಡಿಸಿದನು. ಅದನ್ನು ಪರೀಕ್ಷಿಸಲು ಬಂದಂಥ ಜರ್ಮನ್ ಇಂಜಿನಿಯರನು ಆ ಕೆಲಸವನ್ನು ನೋಡಿ ಆಶ್ಚರ್ಯಚಕಿತನಾದನು. ಇದರ ಮೂಲಕವಾಗಿಯೇ ರಾಜಾರಾಮಪಂತರ ಕಡೆಗೆ ಪಾವರ ಹೌಸಿನ ವ್ಯವಸ್ಥೆಯನ್ನು ವಹಿಸಿಕೊಡಲಾಯಿತು. ಮುಂದೆ ಕಂಪನಿಯು ಉಜ್ಜಯನಿಯಲ್ಲಿ ತಮ್ಮ ಡಿಪೋ ತೆರೆಯಬೇಕೆಂದು ಗೊತ್ತುಪಡಿಸಿದ ನಂತರ, ಆ ಕೆಲಸದ ಮೇಲೆ ರಾಜಾರಾಮಪಂತರನ್ನು ನಿಯಮಿಸಿ ಅಲ್ಲಿಗೆ ಅವರನ್ನು ಕಳಿಸಲಾಯಿತು. ಮುಂದೆ ಅವರು ಹೆಚ್ಚು–ಹೆಚ್ಚಿನ ಹೊಣೆಗಾರಿಕೆಯ ಕೆಲಸವನ್ನು ನಿರ್ವಹಿಸತೊಡಗಿದರು. ಕಂಪನಿಯು ಹರಿಹರದಲ್ಲಿ ಹೊಸ ಯಂತ್ರ ಸಾಮಗ್ರಿಗಳ ಕಾರಖಾನೆಯನ್ನು ತೆರೆಯಿತು. ಆಗ ರಾಜಾರಾಮಪಂತರನ್ನು ಹರಿಹರಕ್ಕೆ ಕಳಿಸಿದರು. ೧೯೫೫ ರಲ್ಲಿ ಶ್ರೀ ಶಂಭೂರಾವ, ಜಾಂಭೇಕರರು ವಯೋಮಾನದ ಸಲುವಾಗಿ ಹರಿಹರ ಕಾರಖಾನೆಯ ನೊಗವನ್ನು ಕೆಳಗಿಳಿಸಿದರು. ಆಗ ಈ ಕಾರಖಾನೆಯ ಸೂತ್ರಗಳೆಲ್ಲ ರಾಜಾರಾಮಪಂತರ ಕಡೆಗೆ ಕೊಡಲ್ಪಟ್ಟವು. ಆಗ ಇವರು ಕುಶಲತೆಯಿಂದ ಅದನ್ನು ನಡೆಯಿಸಿ ಯಶಸ್ವಿಯಾದರು. ಅದಕ್ಕೆ ಈಕಾರಖಾನೆಯ ಪ್ರಗತಿಯೇ ಸಾಕ್ಷೀಭೂತವಾಗಿದೆ. ಇಂದು ಖಾಸಗಿ ಒಡೆತನದ ಯಂತ್ರ ಸಾಮಗ್ರಿಗಳನ್ನು ತಯಾರಿಸುವಂಥ ಕಾರಖಾನೆಗಳಲ್ಲಿ ಈ ಕಾರಖಾನೆಯು ಭಾರತದಲ್ಲಿಯೇ ಎಲ್ಲಕ್ಕೂ ದೊಡ್ಡದು.

ಇಬ್ಬರೂ ಗಂಡಸುಮಕ್ಕಳ ಮದುವೆಯಾದಮೇಲೆ ಐದಾರು ವರ್ಷಗಳಲ್ಲಿ

ರಾಧಾಬಾಯಿಯವರ ತೊಡೆಯ ಮೇಲೆ ಚಂದ್ರಕಾಂತ, ಶ್ರೀಕಾಂತ, ಛಬೀ ಮತ್ತು ಸುಧಾ ಎಂಬ ಮೊಮ್ಮಕ್ಕಳು ಆಟವಾಡತೊಡಗಿದವು. ರಾಧಾ-ಬಾಯಿಯವರು ತಮ್ಮ ಸೊಸೆಯನ್ನು ಮಗಳಂತೆಯೇ ಪ್ರೀತಿಸುತ್ತಿದ್ದರು. ಆಳು-ಹೋಳುಗಳ ಮನಸ್ಸಿಗೆ ಹತ್ತುವಂಥ ಮಾತುಗಳು ಅವರ ಬಾಯಿಂದ ಎಂದೂ ಹೊರಡುತ್ತಿದ್ದಿಲ್ಲ. ಯಾವ ಮನೆಯಲ್ಲಿ ಪ್ರೇಮ, ಶಾಂತಿ–ಸಮಾಧಾನಗಳು, ಕರ್ತವ್ಯ ಬುದ್ಧಿಯು ನೆಲೆಸಿರುವವೋ ಅಂಥ ಮನೆಯು ಸುಖದ ಸಂಸಾರವಾಗದೆ ಹೇಗಿದ್ದೀತು ?

ತಮ್ಮ ಇನ್ನುಳಿದ ಇಬ್ಬರು ಗಂಡುಮಕ್ಕಳ ಹಾಗೂ ಹೆಣ್ಣುಮಗಳ ಮದುವೆಯು ತಮ್ಮ ಕಣ್ಣೆದುರಿನಲ್ಲಿಯೇ ಆಗಬೇಕೆಂದು ಬಯಸಿದ ರಾಧಾ ಬಾಯಿಯವರ ಇಚ್ಛೆಯು ಸಫಲವಾಗಲಿಲ್ಲ ಆದರೂ ಅವರ ತರುವಾಯ ಅವರಿಗೆ ಯೋಗ್ಯ ಸ್ಥಳಗಳು ದೊರೆತು, ಅವರ ಸಂಸಾರವು ಸಾಗಿ ಅವರಿಗೂ ಸವಿ ಫಲಗಳಾದವು.

ಮೂರನೆಯ ಚಿರಂಜೀವ ಪ್ರಭಾಕರಪಂತನ ಲಕ್ಷ್ಯವು, ವಿಶೇಷವಾಗಿ ಒಕ್ಕಲುತನದ ಮೇಲೆ ಇತ್ತು. ಹಿರಿಯರು ಆರಂಭಿಸಿದ ಪೋಲ್ಟ್ರೀಫಾರ್ಮ (ಕೋಳೀ ಸಾಕುವದ)ನ್ನು ಮುಂದೆ ಸಾಗಿಸುವ ಕೆಲಸವನ್ನು ಪ್ರಭಾಕರಪಂತರ ಮೇಲೆ ಹೊರಿಸಲಾಯಿತು. ಅವರು ಅಮೇರಿಕೆಗೆ ಹೋಗಿ, ಕಾರ್ನೆಲ್ ಯುನಿವ್ಹರ್ಸಿಟಿಯಲ್ಲಿ ಪೋಲ್ಟ್ರೀ ಮತ್ತು ಆ್ಯನಿಮಲ್ ಹಜಬಂಡರಿ ವಿಷಯಗಳ ಶಿಕ್ಷಣವನ್ನು ಪಡೆದು ಮರುಳಿದರು. ಅವರ ಲಗ್ನವು .೨೩–೪–೧೯೩೭ ರಂದು ನ್ಯಾಯಮೂರ್ತಿ ಲೋಕೂರ ಅವರ ಮೊಮ್ಮಗಳಾದ ವಿನೋದಿನಿಯೊಡನೆ ಜರುಗಿತು. ಅವರು ಸದ್ಯಕ್ಕೆ ಕಿರ್ಲೋಸ್ಕರವಾಡಿಯೊಳಗಿನ ಕಾರಖಾನೆಯ ಶ್ರೇಷ್ಠ ಅಧಿಕಾರಿಗಳಾಗಿರುವರು.

ಎಲ್ಲಕ್ಕೂ ಕಡೆಯ ಮಗ ರವೀಂದ್ರ. ಇವರಾದರೂ ಅಮೇರಿಕೆಯೊಳಗಿನ ಇಲೆಕ್ಟ್ರಿಕಲ್ ಇಂಜಿನಿಯರಿಂಗದ ಶಿಕ್ಷಣವನ್ನು ಪಡೆದುಕೊಂಡು ೧೯೪೭ರಲ್ಲಿ ಸ್ವದೇಶಕ್ಕೆ ಮರಳಿದ ಮೇಲೆ, ನಾಸಿಕದೊಳಗಿನ ಶ್ರೀ ನಾನಾಸಾಹೇಬ ಭಾಗವ-ತರ ಕನ್ಯಾ ಇಂದೂತಾಯಿಯೊಡನೆ ಎಪ್ರಿಲ್ ೨೩ ನೇ ತಾರೀಖಿನಂದು ವಿವಾಹವಾದರು.

ರಾಯರ ಒಬ್ಬಳೇ ಹೆಣ್ಣುಮಗಳಾದ ಪ್ರಭಾವತಿಯ ವಿವಾಹವು, ಆಫ್ರಿಕದೊಳಗಿನ ದಾರ–ಏ–ಸಲಾಮದಲ್ಲಿ ಸರಕಾರಿ ನೌಕರಿಯಲ್ಲಿದ್ದ ಶ್ರೀ ರಾಜಾ

ಬಾಪ್ಪೂ ಕಾಂಡೋಳ್ಕರ ಎಂಬವರೊಡನೆ ೧೦–೧೨–೧೯೩೩ ರಂದು ಜರುಗಿತು. ವಿವಾಹವಾದ ಮೇಲೆ ಪ್ರಭಾವತಿಯು ಬೇಗನೆ ಗಂಡನ ಮನೆಗೆ ಪ್ರಯಾಣ ಬೆಳೆಸಿದಳು.

ರಾಧಾಬಾಯಿಗೆ ವಾಡಿಯೊಳಗಿನ ಸ್ತ್ರೀಯರ ಬಗ್ಗೆ ಎಷ್ಟೊಂದು ಕಳಕಳಿ ಎನಿಸುತ್ತಿತ್ತೆಂಬ ಬಗ್ಗೆ ವಾಚಕರಿಗೆ ಹೇಳುವದೇ ಬೇಡ. ಹೆಣ್ಣುಮಕ್ಕಳ ಹಿತದ ವಿಚಾರಗಳೇ ಅವರ ಮನಸ್ಸಿನಲ್ಲಿ ಯಾವಾಗಲೂ ಸುಳಿಯುತ್ತಿದ್ದವು. ಅಷ್ಟರ ಸಲುವಾಗಿಯೇ ಕಿರ್ಲೋಸ್ಕರವಾಡಿಯೊಳಗಿನ ಹೆರಿಗೆಯ ಆಸ್ಪತ್ರೆಯನ್ನು ತೆರೆಯುವದಕ್ಕಾಗಿ ೨೩ ಸಾವಿರ ರೂಪಾಯಿಗಳನ್ನು ತೆಗೆದಿರಿಸಿ, ಅಲ್ಲಿಯ ಸ್ತ್ರೀಯರ ಸಲುವಾಗಿ ಶಾಶ್ವತ ಉಪಕಾರವನ್ನು ಅವರು ಮಾಡಿದರು.

ಇಂಥ ಉಪಕಾರ ಮಾಡುವ ಸ್ತ್ರೀಯ ಒಂದು ಪುತ್ಥಳಿಯನ್ನು, ಅವರ ಚಿರಂತನ ಸ್ಮಾರಕವನ್ನು ವಾಡಿಯಲ್ಲಿಡಬೇಕೆಂಬ ವಿಚಾರವು, ಅಲ್ಲಿಯ ಜನರ ಮನಸ್ಸಿನಲ್ಲಿ ಬರದೆ ಇರುವ ಬಗೆಯೆಂತು? ಔಂಧದ ಶಿಲ್ಪಕಾರರಾದ ಪಾಂಡೋಬಾ ಕೋಳೇಕರರು ರಾಧಾಬಾಯಿಯವರ ಸಂಗಮರವರಿಯ ಭವ್ಯ ಪುತ್ಥಳಿಯನ್ನು ಸಕಾಲದಲ್ಲಿ ಸುಂದರವಾಗಿ ಕಟೆದುಕೊಟ್ಟರು.

ಈ ಪುತ್ಥಳಿಯ ಅನಾವರಣ ಸಮಾರಂಭವು ತಾ|| ೮–೩–೧೯೩೬ ರಂದು ಶ್ರೀಮಂತ ರಾಜೇಸಾಹೇಬರ ಅಮೃತಹಸ್ತದಿಂದ ನಡೆಯಿತು. ಈ ಕಾರ್ಯಕ್ರಮದ ಸಲುವಾಗಿ ಶ್ರೀಮಂತ ಸೌ|| ರಾಣೀಸಾಹೇಬ, ಯುವರಾಜ ಬಾಪ್ಪೂಸಾಹೇಬ, ಭಯ್ಯಾಸಾಹೇಬ ರಾಜಕುಮಾರಿ ಅಕ್ಕಾಸಾಹೇಬ ಮೊದಲಾದವರಲ್ಲದೆ, ನಾಗ್ಪಟ, ದೇಶಪಾಂಡೆ ಪ್ರಭೃತಿ ಮುತ್ಸದ್ದಿ ಅಧಿಕಾರಿಗಳೂ ಆಗಮಿಸಿದ್ದರು.

ಡಾ|| ವಾ. ಕಾ. ಕಿರ್ಲೋಸ್ಕರವರು ಕಾರ್ಯಾರಂಭವನ್ನು ಮಾಡುತ್ತ ಸಮಯೋಚಿತ ಭಾಷಣವನ್ನು ಮಾಡಿ, ಪುತ್ಥಳಿಯ ಅನಾವರಣ ಮಾಡಬೇಕೆಂದು ರಾಜಾಸಾಹೇಬರಿಗೆ ಬಿನ್ನವಿಸಿಕೊಂಡರು. ಆ ಸಂದರ್ಭದಲ್ಲಿ ಶ್ರೀಮಂತರು ಹೃದಯಸ್ಪರ್ಶವಾದ ಭಾಷಣವನ್ನು ಮಾಡಿದರು.

“ಕುಂ. ಸೌ|| ರಾಧಾಬಾಯಿಯವರ ಪರಿಚಯವು ನಮಗೆ ೧೯೦೩ ರಲ್ಲಿ ಆಯಿತು. ಮತ್ತು ಕೊನೆಯವರೆಗೆ ಅದು ದೃಢವಾಗುತ್ತ ನಡೆಯಿತು. ಬಂಧುಗಳು ಭಗಿನಿಯರ ಮೇಲೆ ಅಥವಾ ಭಗಿನಿಯರು ಬಂಧುಗಳ ಮೇಲೆ ಎಷ್ಟು ಉತ್ಕಟತೆಯಿಂದ ಪ್ರೇಮ ಮಾಡಲು ಶಕ್ಯವಿದೆಯೋ ಅಷ್ಟು ಪ್ರೇಮವು ನಮ್ಮಿಬ್ಬರಲ್ಲಿ ಇದ್ದಿತು.”

"ಅಖಿಲ ಮಹಾರಾಷ್ಟ್ರದಲ್ಲಿ ಅಥವಾ ಭಾರತದ ಔದ್ಯೋಗಿಕ ಕ್ಷೇತ್ರದಲ್ಲಿ ನಾಮದಾರ ಲಕ್ಷ್ಮಣರಾವ ಕಿರ್ಲೋಸ್ಕರ ಅವರು ಯಾವ ಕಾರ್ಯಗಳನ್ನು ಮಾಡಿದರೋ ಯಾವ ಯಶಸ್ಸನ್ನು ಅಥವಾ ಲೌಕಿಕವನ್ನು ದೊರಕಿಸಿದರೋ ಅವರಲ್ಲಿ ಅರ್ಧಕ್ಕಿಂತಲೂ ಅಧಿಕವಾಗಿ ಆ ಶ್ರೇಯಸ್ಸು, ಸೌ|| ರಾಧಾಬಾಯಿಯವರಿಗೇ ನ್ಯಾಯವಾಗಿ ಸಲ್ಲತಕ್ಕದ್ದು. ಯಾಕಂದರೆ ಕಾರ್ಯಕ್ಷಮ ಪುರುಷರಿಗೆ ಬೇಕಾಗುವಂಥ ಕೌಟುಂಬಿಕ ಶಾಂತಿ ಮತ್ತು ಅವರ ಕಾರ್ಯದಲ್ಲಿ ಪ್ರತಿ ಕ್ಷಣಕ್ಕೆ ಉತ್ಸಾಹಪೂರ್ವಕವಾದ ನೆರವು ಹಾಗೂ ಹುರುಪನ್ನು ಸೌ|| ರಾಧಾಬಾಯಿಯವರಂತಹ ಗೃಹಿಣಿಯರಿಗೆ ಮಾತ್ರ ಕೊಡಲು ಸಾಧ್ಯ."

"ಆದುದರಿಂದ ಸೌ|| ರಾಧಾಬಾಯಿಯ ಸ್ಮಾರಕವು ಒಂದರ್ಥದಿಂದ ಕೌಟುಂಬಿಕ ಸಮಾರಂಭವಾಗಿದ್ದರೂ ಅವರು ಆರ್ಯ ಸ್ತ್ರೀಯರ ಮುಂದೆ ಇರಿಸಿದ ಗೃಹಿಣೀ ಪದದ ಆದರ್ಶವು, ಸರ್ವ ಭಗಿನಿಯರಿಗೆ ಅನುಕರಣೀಯವೆನಿಸುವದು. ಮತ್ತು ಅದರಿಂದ ಈ ಪ್ರಸಂಗವು ಸಾರ್ವಜನಿಕ ದೃಷ್ಟಿಯಿಂದಲೂ ಅಮೌಲ್ಯವಾಗಿದೆ."

"ನಾಮದಾರ ಕಿರ್ಲೋಸ್ಕರರೇ! ಹಿಂದಿನ ನೆನಪಿನಿಂದ ತಮ್ಮ ಮನಸ್ಸು ಈ ಹೊತ್ತಿಗೆ ಶೋಕಾಕುಲವಾಗಿರಲಿಕ್ಕೆ ಸಾಕು ಎಂಬುದನ್ನು ನಾವು ಬಲ್ಲೆವು. ಈ ರಾಜನೂ ಸಹ ನಿಮ್ಮ ಈ ದುಃಖದಲ್ಲಿ ಸಮಭಾಗಿಯಾಗಿದ್ದಾನೆ · ಎಂಬುದನ್ನು ಲಕ್ಷ್ಯದಲ್ಲಿ ತಂದುಕೊಂಡರೆ ಸಾಕು. ನೀವು ನಿಮ್ಮ ಶೋಕಾವೇಗವನ್ನು ತಡೆಹಿಡಿಯಿರಿ. ಈ ಪ್ರಸಂಗದಲ್ಲಿ ನಮ್ಮ ಬಾಯಿಂದ ಹೆಚ್ಚಿಗೆ ಶಬ್ದಗಳು ಹೊರಡಲಾರವು. ಅದಕ್ಕಾಗಿ ಸರ್ವರೂ ಕ್ಷಮಿಸಬೇಕಾಗಿ ವಿನಂತಿ."

ಲಕ್ಷ್ಮಣರಾಯರಿಗೆ ಈಗ ೬೪ ವರುಷಗಳಾಗಿ ಹೋಗಿದ್ದರೂ ಅವರ ಕರ್ತವ್ಯದಕ್ಷತೆಯ ದೊಡ್ಡ ಉತ್ಸಾಹವನ್ನು ನೋಡಿದರೆ, ಅವರಿಗೆ ಇಷ್ಟೊಂದು ವಯಸ್ಸು ಆಗಿರಬಹುದೆಂಬ ಕಲ್ಪನೆಯು ಯಾರಿಗೂ ಬರಲಾರದು. ಆದರೂ ಈಗ ಮಾತ್ರ ಅವರ ಮುಖಲಕ್ಷಣಗಳಲ್ಲಿ ಒಮ್ಮೆಲೇ ಕಳೆಯು ಬದಲಾಯಿತು. ರಾಧಾಬಾಯಿಯ ನಿಧನದ ನಂತರ, ಅವರು ೪-೫ ದಿನಗಳ ಮೇಲೆ ಕಾರಖಾನೆಗೆ ಬಂದು ಎಂದಿನಂತೆ ಕಾರ್ಯಾಸಕ್ತರಾದುದೇನೋ ನಿಜ. ಆದರೆ ಅವರು ಈ ಹೊತ್ತಿನಿಂದ ಹೆಚ್ಚು ಗಂಭೀರರಾಗಿ ಕಾಣಿಸತೊಡಗಿದರು, ಮತ್ತು ಅವರ ವೃತ್ತಿಯಲ್ಲಿ ಕೊನೆಯವರೆಗೂ ಯಾವ ಬದಲಾವಣೆಯೂ ಕಾಣಬರಲಿಲ್ಲ.

# ೨೦

# ವ್ಯಕ್ತಿತ್ವದ ವಿವಿಧ ದರ್ಶನ

೧೯೨೫ ರಿಂದ ತಲೆಯೆತ್ತಿದ ಔದ್ಯೋಗಿಕ ಇಳಿತವು ಒಂದು ತಪಕ್ಕಿಂತ ಹೆಚ್ಚಾಗಿಯೇ ಭಾರತದಲ್ಲಿ ಹಾವಳಿಯನ್ನು ಮಾಡಿತು. ಈ ಸಂಧಿಯಲ್ಲಿ ಜಪಾನವು ತನ್ನ ಅಗ್ಗ ಮಾಲುಗಳಿಂದ ಜಗತ್ತಿನ ಪೇಟೆಯನ್ನೇ ವಶಪಡಿಸಿ ಕೊಳ್ಳಲು ಹವಣಿಸಿತು. ಈ ಗ್ರಹಣದಿಂದ ಮುಕ್ತರಾಗಲು ಲಕ್ಷ್ಮಣರಾಯರು ಮಾಡಿದ ಭಗೀರಥ ಪ್ರಯತ್ನಗಳನ್ನು ವಾಚಕರು ಬಲ್ಲರು. ಕಾರಖಾನೆಯಲ್ಲಿ ಸಿದ್ಧವಾದ ಇಂಜಿನ ಮತ್ತು ಪಂಪುಗಳ ಪ್ರಚಾರವೂ ಇವುಗಳಲ್ಲಿ ಒಂದು. ಅದರ ಜೊತೆಗೆ ಅಲ್ಪ ಪ್ರಮಾಣದಿಂದ ಸಕ್ಕರೆಯನ್ನು ಸಿದ್ಧಪಡಿಸುವ ಸಾಧನವನ್ನೂ ರೈತರಿಗೆ ಒದಗಿಸಬೇಕೆಂದು "ಶುಗರ ಸೆಂಟ್ರಿ ಫ್ಯುಗಲ್ಸ" ಸಿದ್ಧಮಾಡಿ ಅವುಗಳ ಪ್ರಚಾರವನ್ನೂ ಕೈಕೊಂಡಿದ್ದರು.

ಈ ಸಕ್ಕರೆಯ ಯಂತ್ರಗಳ ಉಪಯುಕ್ತತೆಯನ್ನು ಪ್ರತ್ಯಕ್ಷ ತೋರಿಸುವ ಪ್ರಯೋಗಗಳೂ ಸಾಗಿದ್ದವು. ಬೇಡಿಕೆಯೂ ಬರಹತ್ತಿದವು. ಆದರೆ ಈ ಯಂತ್ರಗಳನ್ನು ಉಪಯೋಗಿಸುವವರು ದೊಡ್ಡ ಕಾರಖಾನೆದಾರರೊಡನೆ ತೀವ್ರವಾಗಿ ಸ್ಪರ್ಧಿಸಬೇಕಾಗುತ್ತಿತ್ತು. ಆದ್ದರಿಂದ ಇವುಗಳ ಮಾರಾಟವು ಪರಿಮಿತವಾಗುವದು ಅಪರಿಹಾರ್ಯವಿದ್ದಿತು.

ಇಂಥ ಸಂದರ್ಭದಲ್ಲಿ ಲಕ್ಷ್ಮಣರಾಯರ ಲಕ್ಷ್ಯವು ಬಟ್ಟೆಯ ಉದ್ಯೋಗದ ಕಡೆಗೆ ತಿರುಗಿತು. ಅದಕ್ಕಾಗಿ ಯಾವ ಮಾಲನ್ನು ತಯಾರಿಸಲು ಬಂದೀತು? ಎಂಬ ವಿಚಾರದಲ್ಲಿ ಅವರು ಮಗ್ನರಾದರು. ಯಾಂತ್ರಿಕ ಮಗ್ಗಗಳಿಗೆ ಬೇಕಾಗುವಂಥ ಡಾಬೀಜ್‌ಗಳನ್ನು ಕಾರಖಾನೆಯಲ್ಲಿ ಸಿದ್ಧಪಡಿಸಲು ಬರುತ್ತದೆಂದು ಕಂಡುಬಂದುದರಿಂದ ಅವರು ಆ ಕೆಲಸಕ್ಕೆ ಬೆನ್ನುಹತ್ತಿದರು.

ಮೆಲ್ಲನೆ ಕಿರ್ಲೋಸ್ಕರ ಡಾಬೀಜ್‌ಗಳು ಸಿದ್ಧವಾಗಿ ಅವುಗಳ ಮಾರಾಟವೂ ನಡೆಯಹತ್ತಿತು. ಗಿರಾಕಿಗಳು ಈ ಮಾಲಿನ ಬಗ್ಗೆ ಒಳ್ಳೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರಲ್ಲದೆ, ಮಗ್ಗಗಳಿಗೆ ಬೇಕಾಗುವ ಕೆಲ ಭಾಗಗಳನ್ನಷ್ಟೇ ಸಿದ್ಧಪಡಿಸದೆ, ಇಡೀ ಮಗ್ಗವನ್ನೇ ತಯಾರಿಸುವ ಕೆಲಸವನ್ನು ಕೈಕೊಳ್ಳಬೇ

ಕೆಂದು ಸೂಚಿಸಿದರು. ಅವರ ಸೂಚನೆಯನ್ನು ಕುರಿತು ವಿಚಾರ-ವಿನಿಮಯ ನಡೆದನಂತರ, ಈ ಕೆಲಸಕ್ಕೆ ತರುಣ ಇಂಜಿನಿಯರರಾದ ಶ್ರೀ ಪಾಧ್ಯೆಯವರನ್ನು ನಿಯಮಿಸಲಾಯಿತು. ಅವರು ಮುಂಬಯಿ, ಬೆಂಗಳೂರ, ಸಾಂಗಲಿ ಮೊದಲಾದ ಪಟ್ಟಣಗಳಿಗೆ ಹೋಗಿ, ಅಲ್ಲಿಯ ಗಿರಣಿಗಳ ಚಾಲಕರೊಡನೆ ವಿಚಾರ ವಿನಿಮಯ ಮಾಡಿ, ಎಲ್ಲ ಕಡೆಗಳಲ್ಲಿಯೂ ಒಪ್ಪಿತವಾಗುವಂಥ ಮಗ್ಗದ ಮಾದರಿ ಯಾವುದು ? ಮತ್ತು ಅದರಲ್ಲಿ ಯಾವ ಸುಧಾರಣೆಯನ್ನು ಮಾಡಿದರೆ ಒಳ್ಳೆಯದಾಗುವದು— ಎಂಬುದನ್ನು ತಿಳಿದುಕೊಂಡು ಶ್ರೀ ಪಾಧ್ಯೆಯವರು ಮರುಳಿ ಬಂದಮೇಲೆ, ಈ ಮಗ್ಗಗಳನ್ನು ಸಿದ್ಧಪಡಿಸುವ ಕೆಲಸವನ್ನು ಕೈಯಲ್ಲಿ ತೆಗೆದುಕೊಳ್ಳಲಾಯಿತು.

೩೬ ಇಂಚಿನಿಂದ ೬೦ ಇಂಚು ಅಗಲವಾದ ಮಗ್ಗಗಳು ತಯಾರಾದನಂತರ, ಅವುಗಳು ಸಮಾಧಾನಕರವಾಗಿ ಕೆಲಸವನ್ನು ಕೊಡಬಲ್ಲವೆಂಬುದನ್ನು ಪ್ರಮಾಣಿಸಿ ನೋಡುವದಕ್ಕಾಗಿಯೂ ಮತ್ತು ಭಾವೀ ಗ್ರಾಹಕರಿಗೆ ಅದರ ಕಾರ್ಯವನ್ನು ಪ್ರತ್ಯಕ್ಷ ಕಣ್ಣಾರೆ ನೋಡಲು ಸಿಗಲೆಂದೂ ಕಿರ್ಲೋಸ್ಕರವಾಡಿಯಲ್ಲಿಯೇ "ರಾಧಾ ವೀವ್ಹಿಂಗ ಮಿಲ್" ಎಂಬ ಹೆಸರಿನ ಚಿಕ್ಕ ಕಾರಖಾನೆಯೊಂದನ್ನು ತೆರೆಯಲಾಯಿತು.

ಈ ಉಪಕ್ರಮವು ಉತ್ಸಾಹವರ್ಧಕವೆಂದು ಕಂಡುಬಂದುದರಿಂದ "ಅಂಡರ ಪಿಕ್" ಮಾದರಿಯ ಮಗ್ಗವನ್ನೂ ಅದರಂತೆಯೇ ೨ ಮತ್ತು ೪ ಖುಂಕಿಯ "ಡ್ರಾಪ್ ಬಾಕ್ಸಿಸ್" ಮಾಡುವ ಕೆಲಸವನ್ನೂ ಕೈಕೊಳ್ಳಲಾಯಿತು. "ಲೂಮ್ ಡಿಪಾರ್ಟಮೆಂಟ್" ಎಂಬುದೊಂದು ಹೊಸ ಖಾತೆಯನ್ನೇ ಕಾರಖಾನೆಗೆ ಜೋಡಿಸಲಾಯಿತು ಈ ಖಾತೆಯನ್ನು ಆರಂಭಿಸಿದ ಮೇಲೆ ಕಿರ್ಲೋಸ್ಕರ ಮಗ್ಗಗಳ ಮಾರಾಟವು ೧೫೦೦ ವರೆಗೆ ಏರಿತು. ಅದರ ಬೆಳವಣಿಗೆಯೂ ಕೂಡಲೇ ಆಗುವದೆಂದು ಕಂಡುಬಂದಿತು ಆಗ ರಾಯರು ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿ ಎಷ್ಟು ಎಂಬುದನ್ನು ವಿಚಾರ ಮಾಡಿ ಮುಂದಕೆಯೊಡನೆ ಹೋರಾಡಲೆಂದು ಪ್ರಾರಂಭಿಸಿದ ಮಗ್ಗಗಳನ್ನು ಮುಗ್ಗಟ್ಟಿ ಮುಗಿದೊಡನೆಯೇ ನಿಲ್ಲಿಸಿ, ವಿವಕ್ಷಿತ ಮಾಲಿನ ತಯಾರಿಕೆಯ ಕಡೆಗೆ ತಮ್ಮ ಲಕ್ಷ್ಯವನ್ನು ಕೇಂದ್ರೀಕರಿಸಿದರು.

ಇಲೆಕ್ಟ್ರಿಕ್ ಮೋಟಾರ್ಸಗಳೇ ಈ ವಿವಕ್ಷಿತ ಮಾಲುಗಳು. ಇವುಗಳ ಸಿದ್ಧತೆಯ ಕಥೆಯೂ ಬಹಳ ಮನೋರಂಜಕ ಸಂಗತಿಯಾಗಿದೆ. ಈ ಮೊದಲು

ಕಾರಖಾನೆಯೊಳಗಿನ ಯಂತ್ರಗಳೆಲ್ಲವೂ ಬಹುತರವಾಗಿ ಪಟ್ಟಿಯ ಮೇಲಿಂದ ನಡೆಯುತ್ತಿದ್ದವು. ಆದರೆ ಈಗ ಪಟ್ಟಿಯ ಪಳಿಯ ತರಹವು ಮಾಯವಾಗಿ, ಯಂತ್ರಗಳು ಮೋಟಾರಿನ ಸಹಾಯದಿಂದ, ವಿದ್ಯುತ್ ಶಕ್ತಿಯಿಂದ ನಡೆಯಲ್ಪಡತೊಡಗಿವೆ. ಈ ಮೋಟಾರಿನ ಆರ್ಮೇಚರ್ ಸುಟ್ಟು ಹೋದರ ಅದನ್ನು ಮುಂಬೈಗೆ ಕಳಿಸಿ 'ರಿ ವಾಯಿಂಡಿಂಗ' ಮಾಡಿಸಿ ತರಬೇಕಾಗುತ್ತಿತ್ತು.

ಈ ಕೆಲಸವನ್ನು ತಾವೇಕೆ ಸ್ವತಃ ಮಾಡಬಾರದು? ಎಂದು ಕಾರಖಾನೆಯ ಕುಶಲ ಇಂಜಿನಿಯರರಾದ ಶ್ರೀ ಎನ್. ಕೆ. ಜೋಶಿಯವರು ಸೂಚಿಸಿದರು. ಈ ಕಲ್ಪನೆಗೆ ಲಕ್ಷ್ಮಣರಾಯರು ಬಹಳ ಆನಂದದಿಂದ ಬೆಂಬಲವಿತ್ತರು.

ಹೀಗೆ ಹಳೆಯ ಮೋಟಾರುಗಳು ಕಾರಖಾನೆಯಲ್ಲಿಯೇ ನೆಟ್ಟಗಾಗುತ್ತಿರುವದನ್ನು ಕಂಡು, ಜೋಶಿಯವರು ಉತ್ತೇಜಿತರಾಗಿ ಇಲೆಕ್ಟ್ರಿಕ್ ಮೋಟಾರುಗಳನ್ನೇ ನಿರ್ಮಿಸುವ ವಿಚಾರವನ್ನು ರಾಯರ ಮುಂದೆ ಇಟ್ಟರು. ರಾಯರಿಗೆ ಈ ಸೂಚನೆಯಿಂದ ಬಹಳ ಸಂತೋಷವಾಯಿತು. ಬಹಳ ದಿವಸಗಳಿಂದ ಇದನ್ನೇ ರಾಯರು ಬಯಸುತ್ತಿದ್ದರು. ಇದನ್ನು ಕಲಿಯುವದಕ್ಕಾಗಿಯೇ ಅಮೇರಿಕಗೆ ಹೋಗಿದ್ದ ರವೀಂದ್ರನು ಬರುವ ದಾರಿಯನ್ನು ಕಾಯದೆ ಜೋಶಿಯವರಿಗೆ ಮುಂದಡಿ ಇಡಲು ಬೆಂಬಲವಿತ್ತರು.

ಅದರಂತೆ ಅವರ ಸಾಧನ ಸಾಮುಗ್ರಿಗಳು ಕೈಗೆ ಬಂದಕೂಡಲೇ ಈ ಉದ್ಯೋಗಕ್ಕೆ ಬೆನ್ನು ಹತ್ತಿದರು. ೧೯೩೮ ರ ಡಿಸೆಂಬರದಲ್ಲಿ ಅವರು ೫ ಹಾರ್ಸ ಪಾವರದ ಮೊದಲನೆಯ 'ಇಂಡಕ್ಶನ್ ಸ್ಕ್ವಿರಲ್ ಕೇಜ್ ಟಾಯಿಪ್' ಮೋಟಾರವನ್ನು ಕಿರ್ಲೋಸ್ಕರವಾಡಿಯಲ್ಲಿ ಸಿದ್ಧಪಡಿಸಿದರು. ಲಕ್ಷ್ಮಣರಾಯರು ೧೯೩೦ ರಲ್ಲಿ ಸಂಕಲ್ಪಿಸಿದ ಕಾರ್ಯದ ರೂಪ-ರೇಷೆಯು ಅವರು ಅಪೇಕ್ಷಿಸಿದ ಅವಧಿಗಿಂತಲೂ ಮೊದಲೇ ಮೂರ್ತ ಸ್ವರೂಪವನ್ನು ಪಡೆದಂತಾಯಿತು.

ಈಗ ಅವಶ್ಯಕವಾದ ವಾಚಿಂಗ ಪ್ರೆಸ್‌ದಂಥ ಯಂತ್ರಗಳನ್ನು ತರಿಸಿ ಇಲೆಕ್ಟ್ರಿಕ ಮೋಟಾರಿನ ಸ್ವತಂತ್ರ ಖಾತೆಯನ್ನು ಕಾರಖಾನೆಯಲ್ಲಿ ತೆರೆಯಲು ಯಾವ ತೊಂದರೆಗಳೂ ಉಳಿದಿರಲಿಲ್ಲ. ಈ ಮಾಲು ತಮ್ಮಲ್ಲಿಯೇ ಸಿದ್ಧವಾಗದ್ದರಿಂದ ಕಿರ್ಲೋಸ್ಕರ ಇಲೆಕ್ಟ್ರಿಕ್ ಪಂಪಿಂಗ ಸೆಟ್ಟುಗಳನ್ನು ಗ್ರಾಹಕರಿಗೆ ಪೂರೈಸಲು ವಿಲಾಯತಿ ಮೋಟಾರಗಳನ್ನು ಉಪಯೋಗಿಸಲಾಗುತ್ತಿತ್ತು.

ಆದರೆ ಕಿರ್ಲೋಸ್ಕರ ಕಾರಖಾನೆಯಲ್ಲಿಯೇ ಈ ಮಾಲನ್ನು ಸಿದ್ಧಮಾಡುವದ ರಿಂದ ಪಾರತಂತ್ರ್ಯವು ತಪ್ಪಿ ಪರದೇಶಕ್ಕೆ ಹೋಗುವ ಅಪಾರ ಹಣವು ಉಳಿ ತಾಯವಾಗಿ ಕಾರಖಾನೆಯ ಒಂದು ಹೆಜ್ಜೆಯು ಮುಂದೆ ಬಿದ್ದಂತಾಗುತ್ತಿತ್ತು.

ಆದರೂ ಈ ಯೋಜನೆಯು ತ್ವರಿತಗತಿಯಿಂದ ಸಾಗಲಿಲ್ಲ. ಯಾಕಂದರೆ, ಈ ಸುಮಾರಿಗೆ ಯುರೋಪದಲ್ಲಿ ಎರಡನೆಯ ಮಹಾ ಯುದ್ಧವು ಮೊಳಗಿ, ಇಡೀ ಜಗತ್ತಿನ ಶಾಂತಿ, ಸುವ್ಯವಸ್ಥೆಗಳು ಕದಡಿದವು. ದೇಶ ದೇಶಗಳ ನಡು ವಿನ ಸಂಪರ್ಕವು ಕತ್ತರಿಸಿತು. ವಿಲಾಯತಿಯಿಂದ ಹೊಸ ಯಂತ್ರಗಳು ದೊರಕುವದು ಕಠಿಣವಾಯಿತು. ಅದರಿಂದ ಕಿರ್ಲೋಸ್ಕರವಾಡಿಯಲ್ಲಿಯೇ ಇಲೆಕ್ಟ್ರಿಕ್ ಮೋಟಾರಿನ ಖಾತೆಯನ್ನು ಆರಂಭಿಸಲು ೧೯೪೨ ರ ವರೆಗೆ ದಾರಿ ಯನ್ನು ಕಾಯಲೇಬೇಕಾಯಿತು. ಇದೇ ವರುಷ ರವೀಂದ್ರನು ಅಮೇರಿಕೆ ಯಿಂದ ಮರಳಿದನು. ಅವನ ನೇತೃತ್ವದಲ್ಲಿ ೧೯೪೮ ರ ವರೆಗೆ ಈ ಖಾತೆಯು ಕಿರ್ಲೋಸ್ಕರವಾಡಿಯಲ್ಲಿಯೇ ಬೆಳೆಯಿತು. ಅದಕ್ಕೆ ಒಂದು ಸ್ವತಂತ್ರ ಕಾರ ಖಾನೆಯ ಸ್ವರೂಪ ಕೊಡುವ ನಿಶ್ಚಯವನ್ನು ಮಾಡಿ "ಕಿರ್ಲೋಸ್ಕರ ಇಲೆ- ಕ್ಟ್ರಿಕ್ ಕಂಪನಿ ಲಿಮಿಟೆಡ್" ಎಂಬ ಸಂಸ್ಥೆಯನ್ನು ಬೆಂಗಳೂರಿನಲ್ಲಿ ೧೯೪೬ ರಲ್ಲಿ ಸ್ಥಾಪಿಸಿದರು. ಇಂದು ಅದರ ವಿಶಾಲ ಸ್ವರೂಪವನ್ನು ನೋಡಿದರೆ, ಅದು ೧೦ ವರ್ಷಗಳಲ್ಲಿ ಎಷ್ಟು ಬೆಳೆದಿದೆ ಎಂಬುದರ ಕಲ್ಪನೆ ಬರುವದು.

ಈ ಎಲ್ಲ ಪ್ರಯತ್ನಗಳಲ್ಲಿ ಲಕ್ಷ್ಮಣರಾಯರು ಸೂಕ್ಷ್ಮವಾಗಿ ಲಕ್ಷ್ಯ ವನ್ನು ಹಾಕಬೇಕಾಯಿತು. ಅವರ ಸಹಾಯಕರೆಲ್ಲರೂ ತಮ್ಮ ತಮ್ಮ ಹೊಣೆ ಗಾರಿಕೆಯನ್ನು ನಿರ್ವಹಿಸುವದರಲ್ಲಿ ತರಬೇತಿ ಹೊಂದಿದವರಾಗಿದ್ದರು. ಆದರೂ ಪ್ರತಿಯೊಂದು ಸಣ್ಣ-ಪುಟ್ಟ ಕೆಲಸವೂ ಕೂಡ ಸರಿಯಾಗಿ ಆಯಿತೋ ಇಲ್ಲವೋ ಎಂಬುದನ್ನು ನಿರೀಕ್ಷಿಸುವದು ಲಕ್ಷ್ಮಣರಾಯರ ಸ್ವಭಾವವೇ ಆಗಿತ್ತು. ಅವ ರಿಗೆ ಕಾರಖಾನೆಯ ಕೆಲಸವನ್ನೇನೂ ಮಾಡಬೇಕಾಗಿರಲಿಲ್ಲ. ಪ್ರತ್ಯಕ್ಷ ಕಾರ ಖಾನೆಯ ಉತ್ಪಾದನಕ್ಕೆ ಸಂಬಂಧವಿಲ್ಲದಿದ್ದರೂ ತಮ್ಮ ಇಡೀ ಉದ್ಯೋಗದ ಮೇಲೆ, ವಸಹಾತಿನ ಮೇಲೆ, ದೇಶದ ದೃಷ್ಟಿಯಿಂದ ಮಹತ್ವದ ಪರಿಣಾಮ ವನ್ನುಂಟು ಮಾಡುವಂತಹ ಪ್ರಸಂಗಗಳು ಬಂದು, ಅದರಲ್ಲಿ ಲಕ್ಷ್ಮಣರಾಯರ ಯಾಂತ್ರಿಕ ತಜ್ಞತೆಗಿಂತ ಉಳಿದ ಗುಣಗಳ ಪರೀಕ್ಷೆಯೇ ಆಗುತ್ತಿತ್ತು. ಆದರೆ ಅವರು ಇಂತಹ ಪ್ರಸಂಗದಲ್ಲಿಯೂ ಪಾರಾಗುತ್ತಿದ್ದರು.

ಈ ಕಾಲವೆಂದರೆ ೧೯೩೦ನೇ ಇಸ್ವಿ. ಸಂಪು, ಸತ್ಯಾಗ್ರಹ, ಲಾಠೀ ಹೊಡೆತ ಗಳಿಂದ ದೇಶದ ತುಂಬ ಗೊಂದಲವೆದ್ದಿತ್ತು. ಮಹಾತ್ಮಾಜೀಯವರ ಬಂಧನದ ಸುದ್ದಿಯು ಹತ್ತಿದ ಕೂಡಲೆ ಕಿರ್ಲೋಸ್ಕರವಾಡಿಯೊಳಗಿನ ಕೆಲಸಗಾರರೂ ಹರತಾಳವನ್ನು ಆಚರಿಸಿದರು. ದೇಶದ ವಾತಾವರಣವು ಹೀಗೆ ಕ್ಷುಬ್ಧವಾಗಿರು ವಾಗ ಒಂದು ಸರಕಾರೀ ಕಾಗದ ಲಕ್ಷ್ಮಣರಾಯರ ಕೈಗೆ ಬಂದಿತು. ಅದು ಮುಂಬಯಿಯ ಗವ್ಹರ್ನರರ ಪ್ರಾಯವ್ಹೇಟ ಸೆಕ್ರೆಟರಿಯ ಪತ್ರವಾಗಿದ್ದು, ಅದ ರಲ್ಲಿ ಕಿರ್ಲೋಸ್ಕರವಾಡಿಯನ್ನು ನೋಡಲು, ಹೀಜ ಎಕ್ಸಲೆನ್ಸೀಜರವರು ಮುಂದಿನ ಕೆಲವು ದಿವಸಗಳಲ್ಲಿಯೇ ಭೆಟ್ಟಿಯನ್ನು ಕೊಡಬಯಸುತ್ತಾರೆ. ಇದಕ್ಕೆ ಯಾವ ವೇಳೆಯು ತಮಗೆ ಅನುಕೂಲವಾಗುವದು ? ಎಂದು ವಿಚಾರಿಸಲಾಗಿತ್ತು.

ಕಿರ್ಲೋಸ್ಕರವಾಡಿಗೆ ಗವ್ಹರ್ನರಸಾಹೇಬರ ಈ ಭೆಟ್ಟಿಯು ಅಪೂರ್ವ ಎಂದಿರಲಿಲ್ಲ. ಇದಕ್ಕೂ ಮೊದಲು ಎರಡು ಸಲ ಮುಂಬಯಿಯ ಗವ್ಹರ್ನರರ ಆಗಮನದ ಲಾಭವು ವಾಡಿಗೆ ಸಂಭವಿಸಿತ್ತು. ಮೊದಲನೆಯ ಭೆಟ್ಟಿಯು, ಸರ ಜಾರ್ಜಲಾಯಿಡ್ ಅವರು ಗವ್ಹರ್ನರರಿರುವಾಗ ೧೬-೭-೧೯೨೦ ರಲ್ಲಿ ಆಯಿತು ಎರಡನೆಯದು, ಲಾರ್ಡ ಮತ್ತು ಲೇಡಿ ವಿಲ್‌ಸನ್ ಅವರು ೧೯೨೮ ನೆಯ ಎಪ್ರಿಲ್ ತಿಂಗಳ ೧೨ ನೇ ತಾರೀಖಿಗೆ ಭೆಟ್ಟಿಯಿತ್ತರು. ಈ ಎರಡೂ ವೇಳೆಯಲ್ಲಿ ಈ ಮಹಾ ಅತಿಥಿಗಳ ಸ್ವಾಗತವನ್ನು ವಾಡಿಯು ಬಹಳ ಉತ್ಸಾಹದಿಂದಲೂ ಸಂಭ್ರಮದಿಂದಲೂ ಮಾಡಿತ್ತು. ಅದರಿಂದ ಕಾರಖಾನೆಯ ಗೌರವ ಹಾಗೂ ಪ್ರತಿಷ್ಠೆಗಳು ಬೆಳೆದವು. ಸ್ವತಃ ಗವ್ಹರ್ನರರಿಗೆ ಕಾರಖಾನೆಯ ಪ್ರತ್ಯಕ್ಷ ಪರಿ ಚಯವಾಗಿ ಅವರು ಅದರ ಬಗ್ಗೆ ಅಭೀಷ್ಟ ಚಿಂತನವನ್ನು ಮಾಡಿದರು. ಆದ್ದ ರಿಂದ ಸರಕಾರದಲ್ಲಿ ಅದಕ್ಕೆ ತನ್ನಷ್ಟಕ್ಕೆ ತಾನೇ ಒಂದು ಮಾನ್ಯತೆಯು ದೊರ ಕಿತು. ಗವ್ಹರ್ನರಸಾಹೇಬರ ಭೆಟ್ಟಿಯಿಂದ ಹೇಳಿಕೊಳ್ಳುವಷ್ಟು ತಾತ್ಕಾಲ ಲಾಭವು ಕಿಸೆಯಲ್ಲಿ ಬೀಳದಿದ್ದರೂ ಅವರ ಭೆಟ್ಟಿಯು ಫಲವಾಗಿ ಕಾರಖಾನೆಯ ಮೇಲೆ ಅನುಕೂಲ ಪರಿಣಾಮವಾಗದೆ ಉಳಿಯುತ್ತಿರಲಿಲ್ಲ. ಇಷ್ಟರಸಲು ವಾಗಿಯೇ ಇಂಥ ಭೆಟ್ಟಿಯ ಬಗ್ಗೆ ಲಕ್ಷ್ಮಣರಾಯರಿಗೂ ಸಹ ಅಗತ್ಯ ವೆನಿಸುತ್ತಿತ್ತು.

ಆದರೆ ಈಗ ಕಾಲವು ಇದಕ್ಕೆ ಅನುಕೂಲವಿರಲಿಲ್ಲ. ಮಹಾತ್ಮರ ಚಳ ವಳಿಯಿಂದ ಬ್ರಿಟಿಶರ ಬಗ್ಗೆ ಗೌರವಾದರಗಳು ಉಳಿದಿರಲಿಲ್ಲ. ಇಂಥ ವೇಳೆ

ಯಲ್ಲಿ ಗವ್ಹರ್ನರರ ಭೆಟ್ಟಿಯು ಸ್ವಾಗತಾರ್ಹವೂ ಶ್ರೇಯಸ್ಕರವೂ ಆದೀತೇ?

ಇತ್ತ ಗಾಂಧಿಯವರನ್ನು ಸರಕಾರವು ಸೆರೆಮನೆಯಲ್ಲಿ ಹಾಕಿದ್ದರಿಂದಂತೂ ಅದರ ಪ್ರತಿನಿಧಿಯನ್ನು ಸ್ವಾಗತಿಸಲು ಕಾರಖಾನೆಯು ಮುಂದೆ ಬರುವದೆಂದರೆ, ಎಷ್ಟೋ ಜನರಿಗೆ ಅದು ಅನುಚಿತವೆಂದು ಕಾಣಿಸುವ ಸಂಭವವಿತ್ತು. ಈ ಎಲ್ಲ ವಿಚಾರಗಳನ್ನು ಬದಿಗಿರಿಸಿ, ಗವ್ಹರ್ನರರಿಗೆ 'ಮಹಾಸ್ವಾಮಿಗಳೇ ಬರ ಬೇಕು' ಎಂದು ತಿಳಿಸಿದರೆ, ಅವರು ಬಂದ ಕಾಲಕ್ಕೆ ತಲೆತಿರುಕನೊಬ್ಬನು ಈ ಸಮಾರಂಭಕ್ಕೆ ನ್ಯೂನ್ಯತೆಯುಂಟಾಗುವ ಪ್ರಸಂಗ ತಂದೊಡ್ಡಿದರೆ ಹೇಗೆ ಮಾಡ ಬೇಕು! ಭಿಕ್ಷೆ ಬೇಡ ನಾಯಿಯನ್ನು ಕರೆದುಕೋ ಎಂಬಂತಾಗುವದೋ ಏನೋ?

ಆದರೆ ಪತ್ರಕ್ಕೆ ಉತ್ತರವನ್ನು ಏನೆಂದು ಕಳಿಸಬೇಕು? ಮಾರ್ಕಾಂಡೇ ಯನಿಗೆ ಸಂಕಟ ಬಂದರೆ ಶಿವನ ಪಿಂಡಿಕೆಯನ್ನು ಅಪ್ಪಿಕೊಂಡಂತೆ, ಕಿರ್ಲೋಸ್ಕರ ವಾಡಿಗೆ ಚಿಂತೆ ಆವರಿಸಿತೆಂದರೆ ಲಕ್ಷ್ಮಣರಾಯರು ರಾಜೇಸಾಹೇಬರ ಸಹಾಯ ಕ್ಕಾಗಿ ಔಂಧಕ್ಕೆ ಹೊರಟರೇ.

ಅವರು ರಾಜೇಸಾಹೇಬರಿಗೆ ಪರಿಸ್ಥಿತಿಯನ್ನು ತಿಳಿಸಿ ಹೇಳಿ ಅದನ್ನು ಸ್ಥಗಿತಗೊಳಿಸುವದಕ್ಕಾಗಿ ಯಾವ ಉಪಾಯವನ್ನು ಕೈಕೊಳ್ಳಬೇಕು? ಎಂಬು ದರ ಬಗ್ಗೆ ಅವರೊಡನೆ ವಿಚಾರ-ವಿನಿಮಯ ಮಾಡಿದರು. ರಾಜೇಸಾಹೇಬ ರಿಗೆ ಲಕ್ಷ್ಮಣರಾಯರ ಅಭಿಪ್ರಾಯವು ಯೋಗ್ಯವೆನಿಸಿದರೂ ಇಂಥ ಸೂಕ್ಷ್ಮ ವಿಷಯದಲ್ಲಿ ಅವರು ಯಾವ ಸಲಹೆ ಕೊಡಬಲ್ಲರು?

ಗವ್ಹರ್ನರರು ಬರುವ ವಿಚಾರ ಮಾಡಿರದಿದ್ದರೆ, ಯಾರೂ ಅವರಿಗೆ ಆಮಂತ್ರಿಸಿ ಆಗ್ರಹಪಡಿಸುತ್ತಿರಲಿಲ್ಲ. ಆದರೆ ಅವರಾಗಿಯೇ ಸ್ವತಃ ಬರುತ್ತೇವೆ ಎಂದು ತಿಳಿಸಿದಾಗ ಅವರಿಗೆ ಬರಬೇಡಿರೆಂದು ಹೇಳುವದು ಹೇಗೆ? ಹಾಗೆ ಹೇಳುವದೆಂದರೆ ಬ್ರಿಟಿಶ್ ಸಾಮ್ರಾಜ್ಯದ ಅಪಮಾನ ಮಾಡಿದಂತಾಗುವದು. ಸರಕಾರವು ಅದನ್ನು ಹೇಗೆ ಸಹಿಸೀತು?

ರಾಜೇಸಾಹೇಬರು "ನಾನಾದರೂ ನಿಮಗೆ ಏನು ಹೇಳಲಿ. ಆದರೆ ಇಬ್ಬರಿಗೂ ಕಾಯದೆ ಸಲಹೆಗಾರರಾದ ರಾ. ಬ. ಕಾಳೆಯವರು ಏನಾದರೂ ಮಾರ್ಗವನ್ನು ಸೂಚಿಸುವರೋ ಹೇಗೆ? ಕೇಳಿ ನೋಡಿರಿ" ಎಂದರು.

ಕಿರ್ಲೋಸ್ಕರವಾಡಿಯ ಮೋಟಾರು ಸಾತಾರೆಯ ದಾರಿ ಹಿಡಿಯಿತು. ಲಕ್ಷ್ಮಣರಾಯರು ಆ ರಾತ್ರಿ ರಾ. ಬ. ಕಾಳೆಯವರ ಮುಂದೆ ಈ ಪ್ರಶ್ನೆಯ

ನ್ನಿಟ್ಟರು. ಅವರಿಗೂ ಸಹ ನಿರ್ಣಾಯಕ ಮತವನ್ನು ಕೊಡುವದಾಗಲಿಲ್ಲ. ಇತ್ತ ಬಾವಿ, ಅತ್ತ ಕೆರೆ. ಇದರಲ್ಲಿ ಮಾರ್ಗವು ಹೇಗೆ ಸಿಗಬೇಕು.

ಎರಡನೆಯ ದಿವಸ ಕಾಳೆಯವರು ಮತ್ತು ರಾಯರೂ ಕೂಡಿ ಔಂಧಕ್ಕೆ ಬಂದರು. ರಾಜೇಸಾಹೇಬರೊಡನೆ ಚರ್ಚಿಸಿ, ಕೊನೆಗೆ ಪೋಲಿಟಿಕಲ್ ಏಜೆಂಟ ಸಾಹೇಬರ ವಿಚಾರದಂತೆ ಹೆಜ್ಜೆ ಹಾಕುವದು ಸುರಕ್ಷಿತವೂ ಯೋಗ್ಯವೂ ಎಂದು ಅವರು ನಿರ್ಣಯಿಸಿದರು. ರೆಸಿಡೆಂಟ ಅಂದರೆ ಕಲೆಕ್ಟರಸಾಹೇಬರು.

ಪುನಃ ಸಾತಾರೆಗೆ ಆಗಮಿಸಿದರು. ಕಲೆಕ್ಟರರು "ನಿಮ್ಮ ಇಚ್ಛೆಯಿಲ್ಲ ದಿದ್ದರೆ, ಗವ್ಹರ್ನರಸಾಹೇಬರು ತಮ್ಮ ಹಂಚಿಕೆಯನ್ನು ನಿಲ್ಲಿಸಬಹುದು. ಅವ ರಾದರೂ ನಿಮ್ಮನ್ನು ದುರ್ಘಟ ಪರಿಸ್ಥಿತಿಗೆ ನೂಕಬೇಕೆಂದು ಯಾಕೆ ಇಚ್ಛಿಸಿ ಯಾರು? ಈ ತೆರದ ಆಶೆಯುಳ್ಳ ಒಂದು ಪತ್ರವನ್ನು ಅವರಿಗೆ ಬರೆದುಬಿಟ್ಟ ರಾಯಿತು." ಎಂದು ಹೇಳಿದರು. ಲಕ್ಷ್ಮಣರಾಯರು ಕಲೆಕ್ಟರರ ಸೂಚನೆ ಯನ್ನು ರಾಜೇಸಾಹೇಬರ ಕಿವಿಯ ಮೇಲೆ ಹಾಕಿದನಂತರ ಆ ಪ್ರಕಾರ ಪತ್ರ ವನ್ನು ಬರೆದು ಕಳಿಸಲಾಯಿತು. ಅದರ ಪರಿಣಾಮವೇನಾಯಿತು? ಕಲೆಕ್ಟರರ ಕೈಗೆ ಕೊಳ್ಳಿ ಕೊಡಲು ಒಂದು ಕೋಲನ್ನೇ ಕೊಟ್ಟಂತಾಯಿತು. ಈ ಪತ್ರ ವೆಂದರೆ, ಒಂದು ತರಹದ ರಾಜದ್ರೋಹವೇ ಎಂದು ಅವನು ಅದನ್ನು ಟೀಕಿಸಿ ದ್ದನು. ಅಷ್ಟಕ್ಕಾಗಿ ಮೂರು ಸಲ ಸಿಮ್ಲಾಕ್ಕೆ ಎಡತಾಕಿ ರಾಜೇಸಾಹೇಬರು ವ್ಹಾಯಿಸ್‌ರಾಯರವರ ಮನಸ್ಸಿನಲ್ಲಿಯ ಕಿಲ್ಮಿಷವನ್ನು ತೆಗೆದುಹಾಕಬೇಕಾ ಯಿತು. ರಾವಬಹಾದ್ದೂರರು ಮಾತ್ರ ಮಂತ್ರಿಯಾಗುವ ಯೋಗವನ್ನು ಗಳಿಸಿ ಕೊಂಡರು. ಗವ್ಹರ್ನರರ ಕಿರ್ಲೋಸ್ಕರವಾಡಿಯ ಭೆಟ್ಟಿಯು ಸ್ಥಗಿತ ವಾಯಿತು.

ಈ ಸಮ್ಮಂಧವಾಗಿ ಒಂದು ಮಾತನ್ನು ಲಕ್ಷ್ಯದಲ್ಲಿರಿಸಿಕೊಳ್ಳಬೇಕಾಗಿದೆ. ಅದೆಂದರೆ. ಕಾರಖಾನೆಯ ಕಡೆಯಿಂದ ಈ ರೀತಿಯಾಗಿ ಸರಕಾರದ ಅಪಮಾನ ವಾದರೂ ಸರಕಾರವು ಮುಂದೆ ಯಾವದೇ ರೀತಿಯಿಂದಲೂ ಕಾರಖಾನೆಗೆ ತೊಂದರೆ ಕೊಡಲಿಲ್ಲ. ಮತ್ತು ಸೇಡು ತೀರಿಸಿಕೊಳ್ಳುವ ವೃತ್ತಿಯನ್ನು ತಳೆಯ ಲಿಲ್ಲ. ಆದುದರಿಂದಲೇ ಈ ವೃತ್ತಿಯುಳ್ಳ ಬ್ರಿಟಿಶ್ ಸರಕಾರವು ಭಾರತದ ಮೇಲೆ ಎಷ್ಟೋ ವರುಷಗಳಿಂದ ರಾಜ್ಯವನ್ನು ಮಾಡುತ್ತ ಬಂದಿತ್ತು.

ಸಾತಾರೆಯ ಕಲೆಕ್ಟರ ಮಿ. ಮಾಯಸೆಯವರ ಪ್ರಕರಣವು ಇದರ ವಿರುದ್ಧ ವಾಗಿದೆ. ಅವನಿಗೆ ಕಿರ್ಲೋಸ್ಕರಕಾರಖಾನೆಯ ಮೇಲೆ ಬಹಳ ಪ್ರೀತಿ. ಈ

ಭಾಗದಲ್ಲಿ ಅವನ ಕ್ಯಾಂಪು ಆಯಿತೆಂದರೆ ಅವನು ವಾಡಿಗೆ ಭೆಟ್ಟಿಯನ್ನೀಯದೆ ಇರುತ್ತಿದ್ದಿಲ್ಲ. ಅವನು ಎಲ್ಲರೊಡನೆ ಮುಕ್ತ ಮನಸ್ಸಿನಿಂದ ವರ್ತಿಸುತ್ತಿದ್ದನು. ಅದರಲ್ಲೂ ಲಕ್ಷ್ಮಣರಾಯರ ವಿಷಯಕ್ಕೆ ಅವನಿಗೆ ಬಹಳ ಗೌರವವಿತ್ತು.

ಮುಂದೆ ಮಾಯಸೆಸಾಹೇಬರಿಗೆ ಸೇವಾ ನಿವೃತ್ತರಾಗುವ ವೇಳೆ ಬಂದಿತು. ಆಗ ಅವರು ಲಕ್ಷ್ಮಣರಾಯರ ನಿರೋಪವನ್ನು ತೆಗೆದುಕೊಳ್ಳಲು ಕಿರ್ಲೋಸ್ಕರ ವಾಡಿಗೆ ಬಂದರು.

ಚಹಾ ಮೊದಲಾದ ಆತಿಥ್ಯ ಮುಗಿದ ಮೇಲೆ, ಅವನು 'ನಾನೀಗ ನವಕರಿಯಿಂದ ಬೇಗನೆ ನಿವೃತ್ತನಾಗಿ ವಿಲಾಯತಿಗೆ ಹೋಗುವೆನು. ನನ್ನಿಂದೇನಾದರೂ ನಿಮ್ಮ ಕೆಲಸವಾಗುವಂತಿದ್ದರೆ ಹೇಳಿರಿ. ಅದರಿಂದ ನಿಮಗೆ ಉಪಯೋಗವಾದರೆ ನನಗೆ ಆನಂದವೆನಿಸುವದು' ಎಂದನು.

ಲಕ್ಷ್ಮಣರಾಯರು 'ನಾನೇನು ನಿಮಗೆ ಹೇಳವದಿದೆ? ನಮ್ಮದೆಲ್ಲಾ ಸರಿಯಾಗಿ ಸಾಗಿದೆ. ನಮ್ಮ ಉದ್ಯೋಗದಲ್ಲಿ ಬರುವ ಆಪತ್ತುಗಳನ್ನು ನಾವೇ ಬಿಡಿಸಿಕೊಳ್ಳಬೇಕು ಆದರೂ ನೀವು ಇಷ್ಟೆಲ್ಲ ವಿಚಾರಿಸುತ್ತಿರುವಿರಿ. ಅದಕ್ಕಾಗಿ ನಾವು ನಿಮಗೆ ಆಭಾರಿಯಾಗಿದ್ದೇವೆ.' ಎಂದು ಹೇಳಿದರು.

ಯಾವುದೇ ಬೇಡಿಕೆಯನ್ನು ಮಂಡಿಸಲು ಲಕ್ಷ್ಮಣರಾಯರಿಗೆ ಮನಸ್ಸೇ ಆಗುತ್ತಿರಲಿಲ್ಲ ಮನುಷ್ಯನು ಯಾವುದಕ್ಕಾದರೂ ಬಾಯಿ ತೆರೆದರೆ ಅವನ ಬೆಲೆಯೇ ಕಡಿಮೆಯಾಗುವದೇ ಹೊರತು, ಉಳಿಯಲಾರದೆಂದು ಅವರ ನಿಶ್ಚಿತ ಅಭಿಪ್ರಾಯವಾಗಿತ್ತು.

ಕಲೆಕ್ಟರನು 'ನಿಮಗೆ ಯಾವ ಅಡಚಣಿಗಳಿಲ್ಲದಿರುವದು ಸಂತೋಷ. ಆದರೆ ನನಗೆ ಮಾತ್ರ ನಿಮ್ಮ ಸ್ವಲ್ಪ ಸಹಾಯ ಬೇಕಾಗಿದೆ. ನೀವು ನೆರವಾದರೆ ನನಗೆ ಆನಂದವೆನಿಸುವದು' ಎಂದನು.

"ಯಾವ ತರದ ಸಹಾಯ ಎಂಬುದರ ರೂಪರೇಷೆಯನ್ನು ಹೇಳಿರಿ."

"ರಾಜಬಾ ಎಂಬ ಬಟ್ಲರನೊಬ್ಬನು ನನ್ನಲ್ಲಿ ಬಹಳ ದಿನಗಳಿಂದ ಕೆಲಸ ಮಾಡುತ್ತ ಬಂದವನು. ಅವನು ಪಡೂಜದಲ್ಲಿರುವಾಗ ಹೃದಯ ವಿಕಾರದಿಂದ ಒಮ್ಮೆಲೆ ತೀರಿಕೊಂಡನು. ಅವನ ಹೆಂಡತಿ ಹಾಗೂ ಐದು ಮಕ್ಕಳು ಅನಾಥರಾಗಿದ್ದಾರೆ ನಾನಿಲ್ಲಿಯೇ ಇದ್ದಿದ್ದರೆ ಅವರ ಜೋಪಾನವನ್ನು ಮಾಡುತ್ತಿದ್ದೆ; ಆದರೆ ನಾನೀಗ ಹೊರಡಲಿರುವೆನು. ಆದಕಾರಣ ಈ ತಾಯಿ–ಮಕ್ಕ

ಅವನ್ನು ನಿಮ್ಮ ಸ್ವಾಧೀನಕ್ಕೆ ಕೊಡಬೇಕೆಂದು ನನ್ನ ಇಚ್ಛೆಯಾಗಿದೆ. ಅವರ ಭಾರ ನಿಮ್ಮ ಮೇಲೆ ಬೀಳಲಾರದು. ಹುಡುಗರು ದೊಡ್ಡವರಾಗುವವರೆಗೆ ಅವರ ವೆಚ್ಚಕ್ಕೆಂದು ನಾನು ಚೆಕ್ ಕಳಿಸುತ್ತ ಹೋಗುವೆನು."

ಲಕ್ಷ್ಮಣರಾಯರು ಕಲ್ಕೆಕರರ ಮುಖ ಲಕ್ಷಣಗಳ ಮೇಲೆ ಸೂಕ್ಷ್ಮ ದೃಷ್ಟಿಯನ್ನು ಬೀರುತ್ತ 'ನಿಮ್ಮ ಈ ಕೆಲಸವನ್ನು ನಾನು ಒಂದು ಕರಾರಿನ ಮೇಲೆ ಒಪ್ಪಿಕೊಳ್ಳುತ್ತೇನೆ' ಎಂದು ಉತ್ತರಿಸಿದರು.

'ಆ ಕರಾರು ಏನು ?'

"ನೀವು ಚೆಕ್ಕು ಕಳಿಸುವ ಗೋಜಿಗೆ ಹೋಗಬೇಡಿರಿ. ಇವರೆಲ್ಲರ ಯೋಗ-ಕ್ಷೇಮದ ವ್ಯವಸ್ಥೆಯು ನನಗೆ ಒಪ್ಪಿತು. ಅವರನ್ನು ವಾಡಿಗೆ ಕಳಿಸಿಕೊಡಿರಿ."

ಈ ಮಾತು–ಕತೆ ನಡೆದಿರುವಾಗ ಅಲ್ಲಿ ಲಕ್ಷ್ಮಣರಾಯರ ಸಹಾಯಕನೊಬ್ಬನಿದ್ದನು. ಅವನು ಮಾಯಸೆಸಾಹೇಬನು ಹೊರಡುತ್ತಿರುವಾಗ ಅವನ ಕಿವಿಯಲ್ಲಿ ಮೆಲ್ಲನೆ "ನಮ್ಮದೊಂದು ಕೆಲಸವನ್ನು ಮಾಡಿಕೊಡುವದಿದ್ದಲ್ಲಿ, ನಿಮಗೆ ಇಲ್ಲಿಯ ಸ್ಟೇಶನ್ನದ— ಕುಂಡಲರೋಡ ಎಂಬ ಹೆಸರನ್ನು ಬದಲಾಯಿಸಿ ಕಿರ್ಲೋಸ್ಕರವಾಡಿ ಎಂದಿಡಬೇಕೆಂದು ರೇಲ್ವೆ ಅಧಿಕಾರಿಗಳಿಗೆ ಹೇಳಲಿಕ್ಕೆ ಬರುವಂತಿದ್ದರೆ ಹೇಳಿರಿ. ನಾವು ಈ ಬಗ್ಗೆ ಅನೇಕ ಸಲ ಮನವಿಗಳನ್ನು ಕಳಿಸಿ, ಬೇಸತ್ತಿರುವೆವು. ರೇಲ್ವೆ ಕಂಪನಿಯು ಕಿವಿಯಮೇಲೆ ಹಾಕಿಕೊಳ್ಳುವದೇ ಇಲ್ಲ" ಎಂದು ಹೇಳಿದನು.

ಮುಂದೆ ಸ್ಟೇಶನ್ನಿನಲ್ಲಿ ಒಂದು ದಿನ ಕುಂಡಲರೋಡ ಎಂಬುದನ್ನು ಅಳಿಸಿ ಕಿರ್ಲೋಸ್ಕರವಾಡಿಯೆಂದು ಬರೆಯುವದು ಕಂಡಿತು. ಮುಂದೆ ಅದರ ಉದ್ಘಾಟನೆ ಸಮಾರಂಭವೂ ದೊಡ್ಡ ಪ್ರಮಾಣದಿಂದ ಜರುಗಿಸಲ್ಪಟ್ಟಿತು. ಮಾಯಸೆ ಸಾಹೇಬನು ಎಲ್ಲಿ ಕೀಲಿ ತಿರುವಿದನೋ ಯಾರಿಗೆ ಗೊತ್ತು !

ತುಳಸಾಬಾ[illegible]ಯುಕಸ್ವಾರ ತನ್ನ ಐದು ಮಕ್ಕಳೊಡನೆ ಕಿರ್ಲೋಸ್ಕರವಾಡಿಗೆ ಬಂದಿರತೊಡಗಿದಳು. ಆಕೆಗೆಂದೇ ಒಂದು ತಗಡಿನ ಗುಡಿಸಲನ್ನು ಕಟ್ಟಿಸಿಕೊಡಲಾಯಿತು. ರಂಟೆಗಳಿಗೆ ಬಣ್ಣ ಕೊಡುವ ಹೆಂಗಸರಲ್ಲಿ ಈಕೆಗೂ ಕೆಲಸ ಕೊಡಲಾಯಿತು. ಆಕೆಯ ಹುಡುಗರು ಶಾಲೆಗೆ ಹೋಗತೊಡಗಿದವು. ದೊಡ್ಡವರಾದಮೇಲೆ ಅವರನ್ನು ಸಹ ಕಾರಖಾನೆಯ ಕೆಲಸದಲ್ಲಿ ತೊಡಗಿಸಲಾಯಿತು. ಅವರು ಒಳ್ಳೇ ಆಟಗಾರರಾಗಿದ್ದರು. ಅವರು ಕ್ರಿಕೆಟ್, ಟೇನಿಸ್,

ಆಟಗಾರರೆಂದು ಕಿರ್ಲೋಸ್ಕರವಾಡಿಯ ಹೆಸರನ್ನು ಮಹಾರಾಷ್ಟ್ರದಲ್ಲಷ್ಟೆ ಅಲ್ಲದೆ ಹೊರಗೂ ಮೆರೆಯಿಸಿದರು.

ಲಕ್ಷ್ಮಣರಾಯರಿಗೆ ದಾನಶೂರರೆಂಬ ಪದವಿಯನ್ನು ಕೊಟ್ಟರೆ ಶೋಭಿಸಲಾರದು. ಯಾಕಂದರೆ, ಅವರು ಯಾವುದೇ ಸಂಸ್ಥೆಗಳಿಗೆ ಕಣ್ಣಲ್ಲಿ ತುಂಬುವಂತೆ ದಾನ ಕೊಟ್ಟಿರುವದಿಲ್ಲ. ಅದು ಅವರಿಗೆ ಸಾಧಿಸಲಿಕ್ಕೂ ಬರುವಂತಿರಲಿಲ್ಲ. ಯಾಕಂದರೆ, ಇಂಜಿನಿಯರಿಂಗ ಉದ್ಯೋಗದಲ್ಲಿ ಕಷ್ಟಕಾರ್ಪಣ್ಯಗಳು ಬಹಳ; ಲಾಭಾಂಶ ಅಷ್ಟಕ್ಕಷ್ಟೇ. ಅಲ್ಲದೆ, ಲಕ್ಷ್ಮಣರಾಯರು ತಾವಾಗಿಯೇ ತಮ್ಮ ವರಮಾನವನ್ನು ಬಹಳ ಕಡಿಮೆ ಇಟ್ಟುಕೊಂಡಿದ್ದರು. ೧೯೩೮ ರಿಂದ ೧೯೪೦ ರ ಇಳಿತರದ ವರುಷಗಳಲ್ಲಿ ಮ್ಯಾನೇಜಿಂಗಏಜೆಂಟ್ಸ ಎಂದು ಕಾರಖಾನೆಯ ಎಲ್ಲ ಹೊಣೆಗಾರಿಕೆಯು ಅವರ ಮೇಲಿದ್ದರೂ ಮ್ಯಾನೇಜಿಂಗ ಏಜೆಂಟ್ಸ ಕವಿ೯ೕಶನ್ ಎಂಪು ಅವರಿಗೆ ಯಾವುದೇ ತರಹದ ಪ್ರಾಪ್ತಿಯಾಗಲು ಶಕ್ಯವಾಗಲಿಲ್ಲ.

ಅವರ ಉಗ್ರಸ್ವಭಾವದ ಮೂಲಕ ಅವರ ಹತ್ತಿರ ಏನನ್ನಾದರೂ ಬೇಡುವ ಎದೆಗಾರಿಕೆಯು ಯಾರಿಗೂ ಆಗುತ್ತಿರಲಿಲ್ಲ. ಯಾರಾದರೂ ಅವರನ್ನು ಕಾಣಬಯಸಿದರೆ, ಅವರ ಭೆಟ್ಟಿಯೇ ಆಗುವದು ಕಷ್ಟ. ಭೆಟ್ಟಿಯಾಯಿತೆಂದರೆ, ಕೆಲಸ ಮಾಡಿರಿ, ಅಂದರೆ ಹಣ ದೊರೆಯುವದು ಎಂದಿಷ್ಟೇ ಹೇಳಿ ಬಿಡುತ್ತಿದ್ದರು.

ಇದು ಹೇಗೆ ನಿಜವೋ ಹಾಗೆಯೇ ಅವರಿಗೆ ಹಣದ ಮೋಹವು ಎಂದಿಗೂ ಆಗಲಿಲ್ಲೆಂಬುದು ಅಷ್ಟೇ ನಿಜವಿದೆ. ಒಂದು ಒಳ್ಳೇ ಕೆಲಸಕ್ಕಾಗಿ ಅವರು ವೆಚ್ಚ ಮಾಡಲು ಎಂದೂ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಆದ್ದರಿಂದ ಅವರು ಅನೇಕರಿಗೆ ಶಿಕ್ಷಣಕ್ಕೂ ಹೊಸ ಕಾರಖಾನೆಗಳನ್ನು ತೆಗೆಯಲಿಕ್ಕೂ ಸಹಾಯ ಇಲ್ಲವೆ ಸಾಲವೆಂದು ಬಹಳ ಹಣ ಕೊಟ್ಟಿದ್ದಾರೆ. ಅದರಲ್ಲಿ ತಿರುಗಿ ಎಷ್ಟು ಹಣ ಬಂತೆಂದು ಅವರು ಎಂದೂ ಕೇಳಲಿಲ್ಲ. ಯಾಕಂದರೆ, ಇಂಥ ಕೊಡ ಕೊಳ್ಳುವ ನಿಮಿತ್ತವಾಗಿ ಕೋರ್ಟಿನ ಕಟ್ಟೆಯನ್ನು ಏರಕೂಡದೆಂದು ಅವರ ನಿಶ್ಚಯ. ಆದರಿಂದ ಯಾರಾದರೂ ಮುಳುಗಿಸಿದರೂ ಅವರು ಅಷ್ಟೊಂದು ಮನಸ್ಸಿಗೆ ಹಚ್ಚಿಕೊಳ್ಳುತ್ತಿರಲಿಲ್ಲ.

೧೯೪೩ ರ ಸಪ್ಟಂಬರ ೨೫ ನೇ ತಾರೀಖಿಗೆ ಕಿರ್ಲೋಸ್ಕರವಾಡಿಯ ಸ್ಟೇಶನ್ನಿನ ಮೇಲೆ ಪುಣೆಯಿಂದ ಬಂದ ಅತಿಥಿಗಳಿಬ್ಬರು ಇಳಿದರು. ಅವರಲ್ಲಿ ಒಬ್ಬರು

'ಸಕಾಳ'ದ ಸಂಪಾದಕರಾದ ಡಾ|| ಪರುಳೇಕರ, ಇನ್ನೊಬ್ಬರು ಮಹಾರಾಷ್ಟ್ರದ ಖ್ಯಾತನಾಮರಾದ ಧನ್ವಂತರೀ ಡಾ|| ದಾದಾಸಾಹೇಬ ಭಡಕಮಕರರು.

ಲಕ್ಷ್ಮಣರಾಯರ ಸಹಾಯಕರಿಗೂ, ಬಂದಂಥ ಈ ಅತಿಥಿಗಳಿಗೂ ಮೊದಲನೆಯ ಸಲ ಭೆಟ್ಟಿಯಾದಾಗ, ಅವರು ತಾವು ಕಿರ್ಲೋಸ್ಕರವಾಡಿಗೆ ಬರುವ ಉದ್ದೇಶವನ್ನು ಅವರ ಮುಂದೆ ಹೇಳಿದ್ದರು. ಆ ಹೊತ್ತಿಗೆ ಬಂಗಾಲ ದಲ್ಲಿ ಭಯಂಕರ ಬರಗಾಲ ತಾಂಡವವಾಡುತ್ತಿತ್ತು. ಆ ದುರ್ದೈವೀ ಆಪದ್ ಗ್ರತಸ್ತರಿಗೆ ನೆರವನ್ನು ದೊರಕಿಸಬೇಕೆಂದು ಸಕಾಳದ ಫಂಡನ್ನು ಎತ್ತುವ ಪರೋಪಕಾರದ ಕೆಲಸವನ್ನು ಅವರು ಕೈಕೊಂಡಿದ್ದರು. ಈ ಫಂಡಿಗೆ ನೆರ ವಾಗಬೇಕೆಂದು ಪರುಳೇಕರರು ಬಂದಿದ್ದರು. ಲಕ್ಷ್ಮಣರಾಯರ ಮೇಲೆ ವರ್ಚಸ್ಸು ಬೀಳಬೇಕೆಂದು ಅವರು ದಾದಾಸಾಹೇಬರನ್ನು ತಮ್ಮ ಸಂಗಡ ಕರೆದುಕೊಂಡು ಬಂದಿದ್ದರು. ಯಾಕೆಂದರೆ, ದಾದಾಸಾಹೇಬರು ಪ್ರಸಿದ್ಧ ಡಾಕ್ಟರರೆಂದು ಅವರಿಗೆ ಎಲ್ಲ ಕಡೆಗೂ ಗೌರವಾದರಗಳು ದೊರೆಯುತ್ತಿದ್ದವು. ಮತ್ತು ಕಿರ್ಲೋಸ್ಕರರಿಗೆ ಅವರು ಹತ್ತಿರಿನ ಸಂಬಂಧಿಕರೂ ಆಗಿದ್ದರು. ಆಗ ಪರುಳೇಕರರು ತಮ್ಮ ನೆರವಿಗೆಂದು ಅವರನ್ನು ಕರಕೊಂಡು ಬಂದುದರಲ್ಲಿ ಒಂದು ಜಾಣಾಕ್ಷತನವೂ ಅಡಗಿತ್ತೆಂಬುವದರಲ್ಲಿ ಸಂಶಯವೇ ಇರಲಿಲ್ಲ.

ಈ ದೊಡ್ಡ ಜನ ತಮ್ಮ ಮನೆಗೆ ಬಂದುದರ ಸಲುವಾಗಿ ಲಕ್ಷ್ಮಣರಾಯ ರಿಗೆ ಬಹಳ ಆನಂದವಾಯಿತು. ಅವರ ಚಹಾ-ಪಾನವು ಮುಗಿದಮೇಲೆ ಸಕಾಳಕಾರರು ತಮ್ಮ ಆಗಮನದ ಉದ್ದೇಶವನ್ನು ಸಾವಕಾಶವಾಗಿ ಶ್ರುತ ಪಡಿಸಿದರು. ಬಂಗಾಲದಲ್ಲಿ ಬರಬಿದ್ದು, ಹಾಹಾಕಾರವೆದ್ದ ಕಲ್ಪನೆಯು ಸಾಧಾರಣವಾಗಿ ಎಲ್ಲರಿಗೂ ಗೊತ್ತಿತ್ತು. ಕಾರಣ ಸಕಾಳದ ಫಂಡಿಗೆ ಸಹಾಯ ನೀಡಬೇಕೋ ಬೇಡವೋ ಎಂಬ ಪ್ರಶ್ನೆಯೇ ಉಳಿದಿರಲಿಲ್ಲ. ಸುಮಾರಾಗಿ ಅಂಕಿಯನ್ನು ಎಷ್ಟು [illegible]ಬೇಕು ? ಎಂಬುದೇ ಲಕ್ಷ್ಮಣರಾಯರಿಗೆ ಬಿದ್ದ ತೊಡಕು. ಅದಕ್ಕಾಗಿಯೇ ಅವರು ದಾದಾಸಾಹೇಬರ ಮುಖದ ಕಡೆಗೆ ನೋಡಿ ಅವರೇನಾದರೂ ಸೂಚಿಸಬಹುದೋ ಎಂದು ದಾರಿ ನೋಡಿದರು. ಆಗ ದಾದಾಸಾಹೇಬರಿಗೆ ಒಂದು ಅಂಕಿಯನ್ನು ಹೇಳುವದೆಂದರೆ ಬಿಕ್ಕಟ್ಟೆನಿಸಿತು. ಅದಕಾರಣ ಅವರು ಗಲ್ಲಕ್ಕೆ ಕೈ ಹಚ್ಚಿಕೊಂಡು ನಗುತ್ತ ಸುಮ್ಮನೆ ಕುಳಿತು ಕೊಂಡರು.

ಅಷ್ಟರಲ್ಲಿ ಲಕ್ಷ್ಮಣರಾಯರು ಸೆಕ್ರೆಟರಿ ಚಾಕುಳಕರರನ್ನು ಕರೆಯಿಸಿ 'ಚಾಕುಳಕರರೇ, ಇಂದಿನ ಮಿತಿಗೆ ನನ್ನ ಖಾತೆಗೆ ಎಷ್ಟು ರೋಖ ಶಿಲುಕು ಇದೆ ಎಂಬದನ್ನು ಹೇಳಬಹುದೇ?' ಎಂದು ಕೇಳಿದರು.

'೮೦೦೦ ರೂ. ಶಿಲುಕು ಇದೆ'

'ಒಳ್ಳೇದು, ಈ ಎಲ್ಲ ಹಣವನ್ನು ತೆಗೆದು ಚೆಕ್ ಇವರಿಗೆ ಕೊಟ್ಟು ಬಿಡಿರಿ.'

ಮುಂದೆ ಐದೇ ನಿಮಿಷಗಳಲ್ಲಿ ಆ ಹಣದ ಬಾಂಬೆ ಫ್ರಾವ್ಹಿನ್ಸಿಯಲ್ ಕೋ–ಆಪರೇಟಿವ್ಹ ಬ್ಯಾಂಕಿನ ಮೇಲಿನ ಚೆಕ್ ಅತಿಥಿಗಳ ಕೈಯಲ್ಲಿ ಬಿದ್ದಿತು. ಅವರು ತೆಗೆದುಕೊಂಡ ಶ್ರಮದ ಸಾರ್ಥಕವೂ ಆಯಿತು.

* * * * *

ಕೇವಲ ಹಣದ ನೆರವಷ್ಟೇ ಅಲ್ಲ— ಇನ್ನಿತರ ಹಲವಾರು ತರದ ಸಹಾಯವನ್ನು ನೀಡಲು ಲಕ್ಷ್ಮಣರಾಯರಿಗೆ ಆಗಾಗ ಮುಂದೆ ಬರಲೇ ಬೇಕಾಗುತ್ತಿತ್ತು. ಆ ಕೆಲಸವನ್ನು ನೀಗಿಸುವದಕ್ಕಾಗಿ ಲಕ್ಷ್ಮಣರಾಯರಲ್ಲಿ ತತ್ಪರತೆಯು ತುಂಬಾ ಕಾಣಬರುತ್ತಿತ್ತು. ಟಿಳಕ ಪಂಚಾಯತನಕ್ಕೂ ಅವರು ಸಹಾಯಮಾಡಿದುದು ಇದೇ ವೃತ್ತಿಯಿಂದಲೇ ಎಂದೆನಬಹುದು.

ಈ ಟಿಳಕ ಪಂಚಾಯತನವೆಂದರೇನು? ಈ ಪಂಚಾಯತನೆಂದರೆ ಟಿಳಕ ಮಹಾವಿದ್ಯಾಲಯದಿಂದ ಹೊರಬಿದ್ದಿರುವ ಮೊದಲನೆಯ ವಾಙ್ಮಯ ವಿಶಾರದರು— ಖರೆ, ಹರೋಲೀಕರ, ಗೋಗಟೆ, ಲಾಗವಣಕರ, ಮತ್ತು ಜೋಶಿ. ಅಸಹಕಾರದ ಚಳವಳಿಯಲ್ಲಿ ಕಾಲೇಜಕ್ಕೆ ಬಹಿಷ್ಕಾರ ಹಾಕಿ ಈ ಐವರು ಹೊರಬಿದ್ದರು. ಇಂಥ ಸ್ವಾರ್ಥತ್ಯಾಗೀ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನುಕೂಲವಾಗಬೇಕೆಂದು ಪುಣೆಯಲ್ಲಿಯ ದೇಶಭಕ್ತ ಮುಂದಾಳುಗಳು ಟಿಳಕ ಮಹಾವಿದ್ಯಾಲಯವನ್ನು ಸ್ಥಾಪಿಸಿದರು. ಅದರಲ್ಲಿ ಪ್ರವೇಶಹೊಂದಿ ಅವರು ಕೊನೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆದರೆ ಮುಂದೇನು? ಅವರು ಟಿ. ಮ. ದ ವಾ. ವಿ. ನಿ— ಹೊಟ್ಟೆಯನ್ನು ಹೇಗೆ ತುಂಬಿಸಿಕೊಳ್ಳುವದು? ಸರಕಾರೀ ನವಕರೀ ಸಿಗುವಂತಿಲ್ಲ. ಸ್ವತಂತ್ರ ಉದ್ಯೋಗವನ್ನು ಮಾಡಿಕೊಂಡಿರಬೇಕೆಂದರೆ ಅಂಥ ಶಿಕ್ಷಣವೂ ಇಲ್ಲ. 'ಇಹಂ ಚ ನಾಸ್ತಿ, ಪರಂ ನ ಲಭ್ಯತೆ' ಎಂಬಂತೆ ಅವರ ಅವಸ್ಥೆಯಾಯಿತು.

ಟಿಳಕ ಮಹಾವಿದ್ಯಾಲಯಕ್ಕೆ ಶಾಸ್ತ್ರ್ಯಾಸಾಹೇಬ ಕೇಳಕರರು ಪ್ರಮುಖರು. ಅವರು ಒಂದು ಪತ್ರವನ್ನು ಕೊಟ್ಟು ಈ ಪಂಚಾಯತನವನ್ನು ಸರಳವಾಗಿ ಕಿರ್ಲೋಸ್ಕರವಾಡಿಗೆ ಅಟ್ಟಿದರು. ಲಕ್ಷ್ಮಣರಾಯರು ಅವರ ವ್ಯವಸ್ಥೆಯನ್ನು ಚನ್ನಾಗಿ ಮಾಡಿದರು. ಕಾರಖಾನೆಯಲ್ಲಿ ಮೂರು ವರುಷಗಳವರೆಗೆ ಶಿಕ್ಷಣ ಪಡೆದನಂತರ ಈ ಮಂಡಳಿಯು, ತಮ್ಮ ತಮ್ಮ ಮಾರ್ಗವನ್ನು ಹಿಡಿದು ಸಾಗಿದರು. ಬೇರೆ ಬೇರೆ ಉದ್ಯೋಗದಲ್ಲಿ ತೊಡಗಿ ತಮ್ಮ ತಮ್ಮ ಯೋಗ–ಕ್ಷೇಮವನ್ನು ಚನ್ನಾಗಿ ನೋಡಿಕೊಂಡರು.

× × × × ×

ಕಿರ್ಲೋಸ್ಕರವಾಡಿಯ ಉತ್ಸಾಹೀ ತರುಣರು ಆ ವರುಷದ ಗಣೇಶೋತ್ಸವದಲ್ಲಿ 'ಏಕಚಪ್ಯಾಲಾ' ನಾಟಕವನ್ನು ಮಾಡಿ ತೋರಿಸಬೇಕೆಂದು ನಿಶ್ಚಯಿಸಿದರು. ಅದರಲ್ಲಿ ಗಣಪತರಾವ ವಿಜಾಪುರ, (ಸುಧಾಕರ), ದೇಸಾಯಿ (ಸಿಂಧು), ಶಾಳಗಾಂವಕರ (ತಳೀರಾಮ), ಚೌಕುಳಕರ (ಗೀತಾ) ಹೀಗೆ, ಒಬ್ಬರಿಗಿಂತ ಒಬ್ಬ ಕುಶಲ ನಟರು ಪಾತ್ರ ವಹಿಸಿದಮೇಲೆ ನಾಟಕಕ್ಕೆ ಕಳೆ ಬಾರದೆ ಇದ್ದೀತೆ? ರಾಜೇಸಾಹೇಬರಿಗೆ ಆಗ್ರಹದ ಅಮಂತ್ರಣ ಹೋಗುತ್ತಲೆ ಅವರು ರಾಣೀಸಾಹೇಬರು ಸಹಿತವಾಗಿ ಆಗಮಿಸಿದರು. ಮಂಡಳಿಯ ಉತ್ಸಾಹವು ದ್ವಿಗುಣಿತವಾಯಿತು. ಆದರೂ ಈ ಪ್ರಯೋಗಕ್ಕೆ ಶ್ರೀಮಂತ ಅಪ್ಪಾಸಾಹೇಬ ಮತ್ತು ರಾಮುಅಣ್ಣಾ ಅವರು ಬರಲೇಬೇಕೆಂದು ಮಂಡಳಿಯು ಆಗ್ರಹತೊಟ್ಟಿದ್ದರಿಂದ ಅವರನ್ನು ಕರೆತರಲು ಲಕ್ಷ್ಮಣರಾಯರು ಮೋಟಾರನ್ನು ಕಳಿಸಿದರು. ಆದರೆ ನಾಟಕ ಆರಂಭವಾಗುವ ಹೊತ್ತಾದರೂ ಅವರ ಸುಳಿವೇ ಹತ್ತಲಿಲ್ಲ. ದೂರಿನಿಂದ ಮೋಟಾರಿನ ದೀಪವೇನಾದರೂ ಕಾಣುತ್ತದೆಯೋ ಹೇಗೆ ನೋಡಬೇಕೆಂದು ಈ ಮಂಡಳಿಯು ಹೊರಗೇ ಕಣ್ಣಿಟ್ಟು ಸುಳಿದಾಡುತ್ತಿತ್ತು. ಉತ್ತರದಕಡೆಗೆ ನೋಡಬೇಕೆಂದರೆ ಆಕಾಶ ಕರ್‍ರಗೆ ಕಾಣುತ್ತಿತ್ತು, ಗುಡುಗಿನ ಖಟ್‌ಖಟಲ್ ಶಬ್ದ! ಆಗ ಮಳೆಯ ಮೂಲಕ ತೊಂದರೆಯಿಂದಲೇ ಹೊರಡುವದಾಗಿರಲಿಕ್ಕಿಲ್ಲೆಂದು ತರ್ಕ ಮಾಡಿ ಮಂಡಳಿಯು ಸುಮ್ಮನೆ ಕುಳಿತುಕೊಂಡಿತ್ತು. ಆದರೆ ಆದದ್ದೆ ಮತ್ತೊಂದು!

ಹಳ್ಳಕ್ಕೆ ನೀರು ಅಕಸ್ಮಾತ್ ಏರಿದ್ದರಿಂದ ಅವರ ಮೋಟಾರು ನೀರಿನ ಸೆಳವಿಗೆ ಸಿಕ್ಕು ಹರಿದುಹೋಯಿತು! ಇಡೀ ರಾತ್ರಿ ಅವರು ದೊಡ್ಡ ಮಳೆಯಲ್ಲಿ

ಗಿಡದ ಬುಡದಲ್ಲಿ ಕಾಲ ಕಳೆಯಬೇಕಾಯಿತು! ಆ ಮೋಟಾರು ಎರಡನೆಯ ದಿನ ನೀರು ಇಳಿದಮೇಲೆ ಅರ್ಧಮೈಲಿನ ಮೇಲೆ ಸೊಟ್ಟ–ಡೊಂಕಾಗಿ ಸಿಕ್ಕಿತು. ಅದನ್ನು ಹೊರಗೆ ತೆಗೆದು, ಎತ್ತುಗಳನ್ನು ಹೂಡಿ ಕಿರ್ಲೋಸ್ಕರವಾಡಿಗೆ ಕಳಿಸುವ ವ್ಯವಸ್ಥೆಯನ್ನು ಮಾಡಬೇಕಾಯಿತು. ನಾಟಕವನ್ನು ನೋಡಿ ಔಂಧಕ್ಕೆ ತಿರುಗಿ ಹೋಗುತ್ತಿರುವಾಗ ಮಹಾರಾಜರಿಗೆ ಈ ಸುದ್ದಿಯು ತಿಳಿಯಿತು. ಅವರು ಲಕ್ಷ್ಮಣರಾಯರಿಗೆ ಒಂದು ಪತ್ರ ಬರೆದು ಈ ಸುದ್ದಿಯನ್ನು ತಿಳಿಸಿದರು.

"ಆ ಮೋಟಾರಿಗೆ ಎತ್ತುಗಳನ್ನು ಹೂಡಿ ಕಿರ್ಲೋಸ್ಕರವಾಡಿಗೆ ಕಳಿಸುವ ವ್ಯವಸ್ಥೆ ನಡೆದಿದೆ. ರಾ. ರಾಮುಅಣ್ಣಾ ಇವರಿಗೆ ಲಾಂಡೇ ಮಹಾದೇವನ ಹಳ್ಳದ ಹತ್ತಿರ ಈ ವ್ಯವಸ್ಥೆಯನ್ನು ಮಾಡುವ ಸಲುವಾಗಿ ಬಿಟ್ಟು ನಾವು ಇಲ್ಲಿಗೆ ಬಂದಿರುವೆವು. ಅವರ ಮಂಡಳಿಯನ್ನು ಮೋಟಾರದಿಂದ ಇತ್ತಕಡೆಗೆ ಕರತರಲಾಗಿದೆ. ಶ್ರೀಯು ತಂದೊಡ್ಡಿದನು. ಮೋಟಾರ ಹಳ್ಳದಲ್ಲಿರುವಾಗ್ಗ ಸೆಳವಿಗೆ ನೀರು ಏರಿಬಿಟ್ಟಿತು. ದೈವಬಲದಿಂದ ಅದರಲ್ಲಿದ್ದವರು ಹೊರ ಬಂದರು.

ಸಹಿ

**ಚೀಫ್ ಆಫ್ ಔಂಧ**

ಈ ಎಲ್ಲ ಅನರ್ಥಕ್ಕೆ 'ಏಕಚಪ್ಯಾಲಾ' ಕಾರಣ. ಶ್ರೀ ಗಡಕರಿಯು ಇದನ್ನು ಬರೆಯುವಾಗ ಮದ್ಯದ ವ್ಯಸನಕ್ಕೆ ಬಿದ್ದ ಸುಧಾಕರನಂಥ ತರುಣನ ಸಂಸಾರವು ಹೇಗೆ ಹಾಳಾಯಿತೆಂಬುದನ್ನಷ್ಟೆ ಚಿತ್ರಿಸಿದ್ದಾನೆ. ಆದರೆ ಈ ನಾಟಕವನ್ನು ನೋಡಲು ಬರುವ ಪ್ರೇಕ್ಷಕರ ಜೀವನದ ಮೇಲೆ ಎಂಥ ಪ್ರಸಂಗವು ಬರುತ್ತದೆಂಬುದು ಎಂದಾಗ ಜನರಿಗೆ ಕಲ್ಪನೆಯೋ ಇರಲಿಕ್ಕಿಲ್ಲ.

ಸೆಳವಿನಲ್ಲಿ ಸಿಕ್ಕ ದುರ್ದೈವೀ ಮೋಟಾರ ಕಿರ್ಲೋಸ್ಕರವಾಡಿಗೆ ಬಂದ ನಂತರ ದೊಡ್ಡ ಗೊಂದಲವೇ ಎದ್ದಿತು. ಮೋಟಾರನ್ನು ಔಂಧಕ್ಕೆ ತೆಗೆದುಕೊಂಡು ಹೋಗಿದ್ದ ಆದಮ ಮತ್ತು ಮುಲಾಣಿ ಮತ್ತು ದಾಮುಅಣ್ಣಾ ಭಿರಂಗಿ ಇವರ ಮುಖಗಳು ಬಾಡಿ ಬತ್ತಿಹೋಗಿದ್ದವು. ಅಷ್ಟರಲ್ಲಿ ಲಕ್ಷ್ಮಣರಾಯರು ಅಲ್ಲಿಗೆ ಬಂದರು. ಅವರನ್ನು ಕಂಡಕೂಡಲೇ ದಾಮುಅಣ್ಣಾನಂತೂ ಕಣ್ಣೀರು ಹಾಕತೊಡಗಿದನು. ಗಾಡಿಯು ಕೆಟ್ಟ ಬಗ್ಗೆ ಏನು ಅನ್ನುವರೋ ಎಂದು.

ಆದರೆ ಅವರು ಹಾಗೇನೂ ಮಾಡಲಿಲ್ಲ. ಅವರು ದಾಮುಅಣ್ಣಾನ ಬೆನ್ನ ಮೇಲೆ ಕೈಯ್ಯಾಡಿಸಿ "ಸುಮ್ಮನಾಗು! ಹೋದರೆ ಹೋಗಲೊಲ್ಲದು ಮೋಟಾರ! ಎಲ್ಲರೂ ಬದುಕಿ ಬಂದಿರಷ್ಟೆ? ನೀನು ಮಾಡಿದ ದೊಡ್ಡ ಕೆಲಸವೆಂದರೆ— ಯಾರೂ ಅಪಾಯಕ್ಕೀಡಾಗದಂತೆ ನೋಡಿಕೊಂಡುದು" ಎಂದರು.

ಎರಡನೆಯ ದಿವಸ ಎಲ್ಲ ಕೆಲಸಗಾರರ ಸಭೆ ಸೇರಿಸಿ, ಆ ಇಬ್ಬರು ಡ್ರೈವ್ಹರರು ತೋರಿಸಿದ ಪ್ರಸಂಗಾವಧಾನದ ಬಗ್ಗೆ ಅವರಿಗೆ ಅಭಿನಂದನೆ ಸಲ್ಲಿಸಲಾಯಿತು. ಡಾ. ವಾಸುದೇವರಾವ ಕಿರ್ಲೋಸ್ಕರ ಇವರ ಹಸ್ತದಿಂದ ದಾಮು ಅಣ್ಣಾನಿಗೆ ಒಂದು ಕೈಗಡಿಯಾರವನ್ನೂ ಆದಮನಿಗೆ ಒಂದು ಜರದ ಫಟಕಾವನ್ನೂ ಉಡುಗೊರೆ ಕೊಟ್ಟು ಮನ್ನಿಸಲಾಯಿತು.

× × × ×

ಲಕ್ಷ್ಮಣರಾಯರನ್ನು ಬಹಳ ಗೊಂದಲದಲ್ಲಿ ಕೆಡವಿದವರು ಅವರವರೇ ಆದ ಕಿರ್ಲೋಸ್ಕರ ಮಾಸಪತ್ರಿಕೆಯ ಸಂಪಾದಕರು. ಮಾಸಿಕದ ಧ್ಯೇಯ, ಉದ್ಯೋಗ, ಉತ್ಸಾಹ, ಉತ್ಕರ್ಷಗಳ ಪ್ರಚಾರ ಮಾಡುವ ಈ ಉದ್ದೇಶಕ್ಕಾಗಿ ಹೆಸರಿಡುವವರಾರು! ಆದರೆ ಸಮಾಜಕ್ಕೆ ಅಂಜದೆ ಮನೋಮಾಲಿನ್ಯವನ್ನೂ ಕೆಗ್ಗಳನಾಮ ಸಂವತ್ಸರದ ಕಲ್ಪನೆಗಳ ಪ್ರಭಾವವನ್ನೂ ದೂರಿರಿಸದೆ, ಕಿತ್ತೊಗೆಯದೇ ಹೊಸ ಹುರುಪಿನ ವೃತ್ತಿಯು ಹೇಗೆ ನಿರ್ಮಾಣವಾಗಬೇಕು? ಅದಕ್ಕಾಗಿ 'ಹಳೆಯದೆಲ್ಲ ಹೊನ್ನು' ಎನ್ನುವಂಥ ರೂಢಿಯನ್ನು ತೊರೆದು ತಮ್ಮ ಆಚಾರ–ವಿಚಾರಗಳನ್ನು ತರ್ಕ ಶುದ್ಧವಾಗಿಯೂ ಬುದ್ಧಿವಾದ ದೃಷ್ಟಿಯಿಂದಲೂ ಚಿಕಿತ್ಸೆ ಮಾಡಿ ಯೋಗ್ಯವಾದ ನವಸುಧಾರಣೆಗಳನ್ನು ನಿರ್ಭಯದಿಂದ ಸ್ವೀಕರಿಸಬೇಕೆಂಬುದು ನಿರ್ವಿವಾದ. ಸ್ವಲ್ಪದರಲ್ಲಿ ಹೇಳಬೇಕೆಂದರೆ— ಅಂಧ ವಿಶ್ವಾಸ ಮತ್ತು ರೂಢಿಯ ದಾಸ್ಯವನ್ನು ಕಿತ್ತೊಗೆದು ನಾವು ಯಾವ ಆಧುನಿಕ ಜಗತ್ತಿನಲ್ಲಿ ವಾಸಿಸುತ್ತೇವೆಯೋ ಅದಕ್ಕೆ ಶೋಭಿಸುವ ಹಾಗೆ ನಮ್ಮ ವಿಚಾರದಲ್ಲಿ ಕ್ರಾಂತಿಯನ್ನುಂಟು ಮಾಡುವದೇ ನಮ್ಮ ಸಮಾಜಕ್ಕೆ ಕ್ರಮ ಪ್ರಾಪ್ತವಾದುದು.

ತಾತ್ವಿಕ ದೃಷ್ಟಿಯಿಂದ ಈ ಕಲ್ಪನೆಯಲ್ಲಿ ಏನಾದರೂ ಆಕ್ಷೇಪಿಸುವಂಥ ದಿಡೆಯೆಂದು ಯಾರೂ ಅನ್ನಲಾರರು. ಆದರೆ ವ್ಯವಹಾರದಲ್ಲಿ ಅದನ್ನು ತರುವಾಗ ನಮ್ಮ ಸಮಾಜದಲ್ಲಿ ತಾಂಡವವಾಡುವ ಸೋಗಿನ ಸಾಧಕರುಗಳ ಡಾಂಭಿಕ


किर्लोस्कर त्रिमूर्ति
होती नाट्यकला अशिक्षित जनीं हीन स्थिती भोगित
विद्वानांत तिला यथोचित नसे सन्मान तो निश्चित
उद्धारार्थ तिच्या तनू-मन-धनें आण्णा तदा झटले
हो लोकप्रिय नाट्य, आज म्हणुनी उत्कर्ष तें पावलें ॥१
होते नाटककार आणि नटही, ते सव्यसाची खरे
इष्ट क्रान्ति म्हणून ये घडविता नाट्यांत त्यांना स्वरें
नाट्याची उपयुक्तता पटविली त्यांनींच लोकांप्रती
नाट्याचार्य अशी तयांस पदवी अन्वर्थ सार्थ किती ! ॥२
* * *
देशाची निज आर्थिक स्थिति अती खालावली जाणुन
त्यासाठीं अवलंबिला प्रगतिचा उद्योग कोणीं पण ?
लोकीं दुर्मिळ कर्मवीर असती, त्यांच्यांत किर्लोस्कर
नामें लक्ष्मणराव हेच गणले जातात अग्रेसर ॥१
आहे देश कृषिप्रधान अपुला, शेती सुधारावया
व्हावा यत्न अवश्यमेव म्हणुनी काढून यंत्रालया
शेतीला उपयुक्तशीं नवनवीं जे आउतें निर्मिती
तें किर्लोस्कर पूर्ण विश्रुत महाराष्ट्रांत सर्वांप्रती ॥२
* * *
उद्योगप्रियता जनीं रुजविण्या, उत्साह यावा तया
त्याची वाढवुनी विचारपरता, उत्कर्ष साधावया
आधीं काढुनि अल्पशी 'खबर' ती केली पुढें विस्तृत
श्री किर्लोस्कर अन मनोहर तिजे, हीं मासिकें प्रस्तुत ॥१
लोकीं जागृति आणिली त्वरेनें उद्दिष्ट हेतूपरी
केलें रूढ मतांत संक्रमण तें इष्ट प्रकारान्तरीं
हें उद्बोधक राष्ट्रकार्य बघुनी कोणा न हो संमत ?
झाले मासिककार उत्तम असे शंवाकि नामांकित ! ॥२
वि. ज. सहस्रबुद्धे.
S. N. KULKARNI

## ಇದರ ಹಿಂದಿನ ಪುಟದಲ್ಲಿದ್ದ ಬ್ಲಾಕಿನೊಳಗಿನ ಮರಾಠಿ ಶ್ಲೋಕಗಳ ಕನ್ನಡ ಅನುವಾದ

ನಾಟ್ಯಕಲೆಯಂದಶಿಕ್ಷಿತರ ಕೈಯಲ್ಲಿ ಸಿಲುಕಿ ದುರ್ದಶೆಯ ಭೋಗಿಸುತ್ತಿರೆ-
ಪಂಡಿತರ ತಂಡದಲಿ ಸರಿಯಾದ ಸನ್ಮಾನ ಆ ಕಲೆಗೆ ದೊರೆಯದೆ ಇದೆ-
ಅದನು ಉದ್ಧರಿಸಬೇಕೆಂದು ತನು-ಮನ-ಧನವನರ್ಪಿಸುತೆ ಸತತ ದುಡಿದು
ಲೋಗರೆಲ್ಲರನತ್ತ ಸೆಳೆದು ಒಲಿಸಿದರಾರು ಕಲೆಗೆ ಉನ್ನತಿಯಬಲಿದು ?

ನಟರು ಅಹುದಹುದು ನಾಟಕಕಾರರೂ ಆಹುದು, ಅವರು ದಿಟ ಸವ್ಯಸಾಚಿ!
ಬೇಕೆನಿಸುವಂತೆ ಕ್ರಾಂತಿಯ ಸಾಧಿಸಿದದವರು ಕಲೆಯ ದೋಷಗಳ ಬಾಚಿ;
ನಾಟ್ಯಕಲೆಯೆನಿತು ಉಪಯುಕ್ತವೆಂಬುದ ಜನಕೆ ಮನವರಿಕೆ ಗೆಯ್ದರವರು-
ಕಿರ್ಲೋಸ್ಕರಾರ್ಯ ಅಣ್ಣಾ 'ನಾಟಕಾಚಾರ್ಯ' ರೆಂಬ ಪದವಿಗೆ ಯೋಗ್ಯರು !

× × × × ×

ನಾಡಿನೆಲ್ಲ ಆರ್ಥಿಕದಶೆ ಕೆಳಗಿಳಿದುದ ಕಂಡು
ಅದನು ತನಿಸಲೆಂದು ಪ್ರಗತಿಯುದ್ಯಮ ಕೈಕೊಂಡು,
ಜನವೃಂದದಿ ದುರ್ಧಿಳವಶ 'ಕರ್ಮವೀರ'ನೆಂದು
ಹೆಸರು ಪಡೆದ ಧೀರರಾರು ? ಲಕ್ಷ್ಮಣರಾಯರೆ ಅಹುದು !

ನಮ್ಮದೇಶ ಕೃಷಿಕರದಿದು , ಹದಗೊಳಿಸುವೆ ಹೊಲವನು-
ಎಂದು ಯತ್ನದಿಂದೆ ತೆರೆದು ಯಂತ್ರಶಾಲೆಯೊಂದನು:
ಕೃಷಿಕಾರ್ಯಕೆ ಉಪಯುಕ್ತದ ಹೊಸ ಸಾಧನ ಸೃಜಿಸಿ
ಮೆರೆಯಿಸಿದರು 'ಕಿರ್ಲೋಸ್ಕರ' ಹೆಸರ ನಾಡ ಪಸರಿಸಿ !

× × × × ×

ಉದ್ಯೋಗಪ್ರಿಯತೆಯ ಜನರೆದೆಯೊಳು ಬೆಳೆಸುತ್ತೆ, ಹೊಸ ಹುರುಪ
ನವವಿಚಾರ ನಿರ್ಝರನ ರೂಢಿಸುತೆ ಹರಿಸಿದನೀ ಭೂಪ !
ಮೊದಲು ಹೊರಡಿಸಿದ 'ಖಬರ'ನೇ ಬೆಳೆಸಿ ಚಿತ್ತರಿಸಿದನೀತ-
ಸ್ತ್ರೀ-ಕಿರ್ಲೋಸ್ಕರ-ಮನೋಹರಗಳಿವು ಜನರಲಿ ಪ್ರಖ್ಯಾತ !

ಜನರಲಿ ಹುಟ್ಟಿಸಿತಂದು ಗುರಿಯ ಎಚ್ಚರನಾ 'ಖಬರು'...
ನಡೆದುಬಂದ ಹಳನಡೆಗಳ ಕಸಕೊಳೆ ಕಳೆಯಿತಿದರ ಉಸಿರು-
ಈಯುದ್ಬೋಧಕ ರಾಷ್ಟ್ರಕಾರ್ಯ ಕಂಡೊಲಿಯೆ ನಾಡಜನರು....
ಎಲ್ಲಿಯು ಮೊಳಗಿತು 'ಶಂವಾಕಿ'ಯವರ ಲೆಕ್ಕಣಿಕೆಯ ಹೆಸರು !

ತನ, ಕ್ಷೇತ್ರದ ಮೋಜು ಜಾತೀಯವಾದ, ಹಾಗೂ ಸ್ತ್ರೀಯರ ದಾಸ್ಯ ಮೊದಲಾದವುಗಳ ಮೇಲೆ ಮಾಸಪತ್ರಿಕೆಯು ತೀಕ್ಷ್ಣವಾದ ಬೆಳಕನ್ನು ಬೀರಲು ಆರಂಭಿಸಿದಾಗ ಮಾತ್ರ ಸಮಾಜವು ಬಡಿದೆಬ್ಬಿಸಿದಂತೆ ಎಚ್ಚರವಾಯಿತು. ಈ ನಿರ್ಭಯ ಮತ್ತು ಮಹತ್ವದ ವಿಚಾರ ಜಾಗ್ರುತಿಯನ್ನುಂಟು ಮಾಡಿದ್ದಕ್ಕಾಗಿ ಮಾಸಿಕವನ್ನು ಅಭಿನಂದಿಸುವ ಪತ್ರಗಳು ಸುತ್ತೂ ಕಡೆಯಿಂದ ಬರತೊಡಗಿದವು.

ಆದರೂ ಮಾಸಿಕದೊಳಗಿನ ಹೊಸ ವಿಚಾರ ಪ್ರವರ್ತಕ ಲೇಖನಗಳ ಮೂಲಕ ಸಮಾಜದಲ್ಲಿಯ ಸನಾತನಿ ವರ್ಗವು ಕೋಪಗೊಂಡಿತು- ಅವರು ಮಾಸಿಕದ ವಿರುದ್ಧ ಕತ್ತಿಯನ್ನು ಹಿರಿದರು. ಈ ಯುದ್ಧದಲ್ಲಿ ಎರಡೂ ಪಕ್ಷದ ಅತಿರಥಿ, ಮಹಾರಥಿಗಳು ರಣರಂಗಕ್ಕೆ ಇಳಿದರು. ೭–೮ ವರ್ಷಗಳ ವರೆಗೆ ಒಳ್ಳೇ ಹೋರಾಟ ನಡೆಯಿತು.

'ವಾದೇ ವಾದೇ ಜಾಯತೇ ತತ್ವಬೋಧಃ' ಈ ತತ್ವವು ಒಳ್ಳೆಯದಿದೆ. ಸಮಾಜದ ಜೀವನಕ್ಕೆ ಅಂಟಿಕೊಂಡಿರುವ ಸರ್ವಕಲ್ಪನೆಯು ಸಂಬಂಧವಾಗಿ ಬಿಚ್ಚುಮನಸಿನಿಂದ ಚರ್ಚೆಯಾದರೆ, ಅದು ಕೊನೆಗೆ ಹಿತಕಾರಿಯೇ ಎಂದು ನಿರ್ಣಯಿಸಲ್ಪಡುವದು. ಆದರೂ ಅಷ್ಟು ಧೈರ್ಯ ಸನಾತನಿ ವರ್ಗದಲ್ಲಿ ದೊರೆಯುವದು ದುರ್ಲಭ. ಆದರಿಂದ ಇಂಥ ಚರ್ಚೆಯನ್ನು ಆರಂಭಿಸುವದಕ್ಕಿಂತ ಬೇರೆ ಬೇರೆ ತರದ ಆಘಾತಗಳಗಳನ್ನು ತಂದು ಹೊಸ ವಿಚಾರಗಳಿಗೆ ಚಾಲನೆಯನ್ನು ಕೊಡಬೇಕು.

ಕಿರ್ಲೋಸ್ಕರ ಮಾಸಿಕದ ಮೇಲೆ 'ಪುರುಷಾರ್ಥ' ದಂಥ ಪತ್ರಿಕೆಯು ಕೂಡ ಟೀಕೆ ಮಾಡಿತು. ಅದರಲ್ಲಿ ಎಲ್ಲವೂ ವ್ಯರ್ಥವಾಗಿರಲಿಲ್ಲ. ಈ ಟೀಕಾಕಾರರು ಕಾರಖಾನೆಯ ಪಾಲುಗಾರರು, ಡಾಯರೆಕ್ಟರರು, ಅವರು ಸಂಸ್ಥಾನದ ರಾಜೇಸಾಹೇಬರಿಗೆ ಹೇಳಿಕೊಂಡು ಮಾಸಿಕವನ್ನು ನಿಲ್ಲಿಸಬೇಕೆಂದು ಯತ್ನಿಸಿದರು. ಆಗ ಮಾತ್ರ ಈ ಪ್ರಕರಣವು ಗಂಭೀರ ಸ್ವರೂಪವನ್ನು ತಾಳಿತು.

'ಕಿರ್ಲೋಸ್ಕರ ಕಾರಖಾನೆಯು ರೈತಬಾಂಧವರಿಗೆ ಸುಧಾರಿಸಿದ ಒಕ್ಕಲುತನದ ಸಾಮುಗ್ರಿಗಳನ್ನು ಒದಗಿಸುವ ಸಲುವಾಗಿ ಸ್ಥಾಪಿತವಾಗಿದೆಯೇ ಹೊರತು ಮಾಸಿಕವನ್ನು ನಡೆಸುವದು ಅದರ ಕ್ಷೇತ್ರದೊಳಗೆ ಬರುವದಿಲ್ಲ. ಈ ಮಾಸಿಕದಲ್ಲಿಯ ಲೇಖನಗಳು ಸಮಾಜದೊಳಗಿನ ಹಳೇಸಂಪ್ರದಾಯವಂತರ ಮನಸ್ಸನ್ನು ನೋಯಿಸಬಹುದು. ಇದು ಕೆಡುಕಾದ ವಿಷಯ. ಇವರಿಂದ ಕಾರಖಾನೆಯ ಮುಖ್ಯ ವ್ಯವಸಾಯಕ್ಕೆ ಧಕ್ಕೆಯಾಗುವ ಸಂಭವವಿದೆ. ಆದಕಾರಣ

ಈ ಮಾಸಿಕವನ್ನು ನಿಲ್ಲಿಸಿ ಬಿಡುವದೇ ಉತ್ತಮ ಮಾರ್ಗ'—ಎಂದು ಈ ಮಂಡಳಿಯು ಹುಯಿಲೆಬ್ಬಿಸಿತು.

ಈ ದೂರು ಲಕ್ಷ್ಮಣರಾಯರವರೆಗೂ ಹೋಯಿತು. ಆಗ ಅವರು ಇದನ್ನು ವಿಚಾರ ಮಾಡುವ ಪ್ರಸಂಗ ಬಂದಿತು. ಅವರು ಸಂಪಾದಕರನ್ನು ಕರೆಯಿಸಿ ಈ ಬಗ್ಗೆ ವಿಚಾರಿಸಿದರು.

ಸಂಪಾದಕರು 'ನಾನು ಯಾವ ವಿಚಾರಗಳ ಪುರಸ್ಕಾರವನ್ನು ಮಾಡುತ್ತೇನೆಯೋ ಅವು ಸುಮ್ಮನೆ ಒಬ್ಬರ ಚೇಷ್ಟೆ ಅಥವಾ ಹುಡುಗಾಟಿಕೆಯನ್ನು ಮಾಡುವ ಸಲುವಾಗಿ ಮಾಡಿದ್ದಲ್ಲ— ಎಂಬುದನ್ನು ನಿಮಗೆ ಹೇಳುವದೇ ಬೇಡ. ಅಲ್ಲದೆ ಆ ವಿಚಾರಗಳು ಕೇವಲ ನನ್ನವೇ ಎಂದು ಯಾರೂ ಕಲ್ಪಿಸಬಾರದು. ನಮ್ಮ ಮನೆತನವು ಎಂದಿನಿಂದಲೂ ಸುಧಾರಕ ಮನೆತನವು. ಆದ್ದರಿಂದ ಚಿಕ್ಕಂದಿನಿಂದಲೂ ಮನೆಯೊಳಗಿನ ಯಾವ ಆಚಾರ ವಿಚಾರಗಳ ಸಂಸ್ಕಾರವು ನನ್ನ ಮೇಲಾಯಿತೋ ಅದಕ್ಕನುಸರಿಸಿಯೇ ಈ ಹೊಸ ವಿಚಾರಗಳನ್ನು ನಮ್ಮ ಮಾಸಿಕದ ಮುಖಾಂತರ ಹರಿಬಿಟ್ಟಿದ್ದೇನೆ. ಈ ಹೊಸ ಕಲ್ಪನೆಗೆ ಜನರು ಮೊದ ಮೊದಲು ವಿರೋಧವನ್ನು ವ್ಯಕ್ತಗೊಳಿಸುವವರೇ. ತಾವು ಕಬ್ಬಿಣದ ನೇಗಿಲವನ್ನು ಮಾಡಿದಾಗಲೂಕೂಡ ಆರಂಭಕ್ಕೆ ವಿರೋಧ ಪ್ರಕಟವಾಗಲಿಲ್ಲವೇ. ಕಿರ್ಲೋಸ್ಕರವಾಡಿಯಿಂದ ಅಸ್ಪೃಶ್ಯತೆಯು ಉಚ್ಚಾಟನೆಯಾದಾಗ ಅದು ಹಳೆಯ ಸಂಪ್ರದಾಯವಂತರಿಗೆ ಎಷ್ಟರಮಟ್ಟಿಗೆ ಸೇರಿತು? ಇಲ್ಲಿ ಸ್ತ್ರೀಯರು ನಾಟಕದಲ್ಲಿ ಪಾತ್ರ ವಹಿಸಲು ಆರಂಭಿಸಿದರೆಂದು ಎಷ್ಟೋ ಜನರು ಮೂಗು ಮುರಿಯುತ್ತಾರೆ. ಅದಕ್ಕಾಗಿ ಈ ಸುಧಾರಣೆಯನ್ನು ನಾವು ನಿಲ್ಲಿಸಿ ಬಿಡಬೇಕೇ? ಅಲ್ಲದೆ ಇಂದು ಯಾವ ಸುಧಾರಣೆಗಳು ಹೊಸವೆನಿಸುವವೋ ಅವು ಕೆಲವು ದಿನಗಳಲ್ಲಿ ರೂಢಿಗೊಂಡಮೇಲೆ ಇಲ್ಲವೆ ವ್ಯೆಯ್ಯುಂಡ ಮೇಲೆ ಅದರ ಬಗ್ಗೆ ಯಾರೂ ಯಾವ ವಿಚಾರವನ್ನೂ ಮಾಡುವದಿಲ್ಲ. ಆದಕಾರಣ ಜನರ ಟೀಕೆಗೆ ಎಷ್ಟು ಭಿಕ್ಷೆಯನ್ನು ಹಾಕಬೇಕು ಎಂಬದನ್ನು ನಾವೇ ನೋಡಬೇಕು. ನಮ್ಮ ಮಾಸಿಕದೊಳಗಿನ ಲೇಖ ವಿಚಾರಗಳು ವಾಚಕರಿಗೆ ಸೇರುತ್ತವೆಂದೇ ಅವರ ಪ್ರಸಾರವು ಬೆಳೆಯುತ್ತಲಿದೆ. ಇನ್ನು ನಮ್ಮ ಉದ್ಯೋಗದ ಸಲುವಾಗಿ ವಿಚಾರಮಾಡಿದರೆ ನಮ್ಮ ಮಾಸಿಕದಲ್ಲಿ ಹೊಸ ವಿಚಾರಗಳ ಸುರಿಮಳೆಯೇ ಇರುತ್ತದೆ. ಕಾರಣ ನಿಮ್ಮ ನೇಗಿಲ ಬೇಡ—ಎಂದು ಇಂದಿನವರೆಗೂ ಒಬ್ಬರೂ ಪತ್ರ ಬರೆದಂತಿಲ್ಲ, ಬರೆದೇ ಇಲ್ಲ. ಆದ್ದರಿಂದ ಸುಮ್ಮನೆ

ಅದನ್ನು ಬೌ ಏಕೆ ಮಾಡಬೇಕು? ಮುಂದೆ ಅಂಥ ಪ್ರಸಂಗವೇನಾದರೂ ಉಂಟಾದಲ್ಲಿ, ಆಗ ಮಾಸಿಕದ ಧೋರಣೆಯಲ್ಲಿ ಸರಿಕಂಡ ಬದಲಾವಣೆ ಮಾಡಲು ಬಂದೀತು' ಎಂದು ಹೇಳಿದರು.

ಲಕ್ಷ್ಮಣರಾಯರು "ಒಳ್ಳೇದಾಯಿತು; ನೀನು ನಿನ್ನಕೆಲಸವನ್ನು ಮಾಡು. ನನ್ನ ಮುಂದೆ ಇನ್ನು ಯಾರಾದರೂ ದೂರು ತಂದರೆ ಏನು ಉತ್ತರ ಕೊಡಬೇಕೆಂಬದನ್ನು ನೋಡಿಕೊಳ್ಳುತ್ತೇನೆ" ಎಂದಂದರು.

× × × × ×

ವಾರಕ್ಕೆ ಮೂರಾವರ್ತಿ ಔಂಧಕ್ಕೆ ಹೋಗಿ ಅಲ್ಲಿಯ ದಿವಾಣ ಕಚೇರಿಯ ಕೆಲಸವನ್ನೂ ಲಕ್ಷ್ಮಣರಾಯರು ನೀಗಿಸಿಕೊಳ್ಳಬೇಕಾಯಿತು. ಈಗ ಅವರ ವಯಸ್ಸು ೭೦ರ ಮನೆಯಲ್ಲಿ ಕಾಲಿಟ್ಟಂಥದು. ಇಷ್ಟೆಲ್ಲ ಗಡಿಬಿಡಿಯನ್ನು ಸೋಸುವಷ್ಟು ತ್ರಾಣ ಅವರಲ್ಲಿರಲಿಲ್ಲ. ಇತ್ತೀಚೆ ಅವರಿಗೆ ಗಾಲ ಬ್ಲ್ಯಾಡರದ ತೊಂದರೆಯಾಗಹತ್ತಿತ್ತು. ಕಣ್ಣುಗಳಲ್ಲಿ ಮೋತೀಬಿಂದು ಆಗುವ ಲಕ್ಷಣಗಳು ಆರಂಭವಾಗಿವೆ ಎಂದು ಡಾ. ಸರದೇಸಾಯಿಯವರ ಅಭಿಪ್ರಾಯವಾಗಿತ್ತು. ಇನ್ನು ಲಕ್ಷ್ಮಣರಾಯರು ತಮ್ಮ ಮೈಮೇಲಿನ ಎಲ್ಲ ಹೊಣೆಗಾರಿಕೆಯ ಕೆಲಸಗಳನ್ನು ಕೈಕೆಳಗಿನವರಿಗೆ ಒಪ್ಪಿಸಿ, ಉಳಿದಿರುವ ಆಯುಷ್ಯವನ್ನು ಸ್ವಸ್ಥಚಿತ್ತದಿಂದ ಕಳೆಯಬೇಕೆಂದು ಎಲ್ಲರಿಗೂ ಅನಿಸತೊಡಗಿತ್ತು.

ಆದರೆ ಅವರೇನು ಕೇಳುವವರೇ! ಬೆಕ್ಕಿನ ಕೊರಳಲ್ಲಿ ಗಂಟೆಯನ್ನು ಕಟ್ಟುವವರಾರು? ಅವರು ಅತ್ತಿತ್ತ ತಿರುಗಾಡುತ್ತಿರುವಾಗ ಅವರಿಗೆ ಬಿಸಿಲಿನ ತಾಪವಾಗಬಾರದೆಂದು, ಕೊಡೆ ಹಿಡಿಯುವ ಸಲುವಾಗಿ ಮನುಷ್ಯನೊಬ್ಬನು ಅವರ ಸಂಗಡವಿರಲೆಂದೂ, ಮಡಚುವ ಕುರ್ಚಿಯನ್ನೂ ಅವರು ಹೋದಲ್ಲಿ ಬಂದಲ್ಲಿ ಕೂಡ್ರಲು ಕೊಡಬೇಕೆಂದೂ ಮಾಡಿದ ಸಾಮಾನ್ಯ ತರದ ವ್ಯವಸ್ಥೆಯನ್ನೂ ಅವರು ನಿರಾಕರಿಸಿದರು. ತನ್ನ ಸಲುವಾಗಿ ಇಲ್ಲದ ಆಡಂಬರವನ್ನು ಮನುಷ್ಯನು ಹಬ್ಬಿಸಿಕೊಳ್ಳುವದು ಸರಿಯಲ್ಲ. 'ಆರಾಮ ಹರಾಮ ಹೈ' ಎಂಬುದೇನೂ ಸುಳ್ಳಲ್ಲ. ಆದರೆ ಮನುಷ್ಯನು ಯಾವುದಾದರೊಂದು ಉದ್ಯೋಗಕ್ಕೆ ಪೂರ್ಣ ಅಂಟಿಕೊಳ್ಳುವದು ಶ್ರೇಷ್ಠ ಧ್ಯೇಯವಾಗಿದ್ದರೂ ಆ ಉದ್ಯೋಗವೆಂದರೆ ಒಂದು ಪಂಚಾಗ್ನಿ ಸಾಧನ. ಅದನ್ನು ಮಾಡಿಕೊಳ್ಳುವದೆಂದರೆ ಎಷ್ಟು ಶ್ರೇಯಸ್ಕರ?

ಆದರೂ ಈ ಕಾರ್ಯವು ಎರಡನೆಯವರಿಂದ ಶಕ್ಯವಾಗದಿದ್ದರೂ ಒಂದು ಅಪಘಾತವು ಅಚಾನಕ ರೀತಿಯಿಂದ ಒದಗಿತು.

೧೯೩೭ ನೇ ಇಸ್ವಿಯ ಜುಲೈ ೩ನೇ ತಾರೀಖಿನ ದಿನ ಲಕ್ಷ್ಮಣರಾಯರು ಸಂಸ್ಥಾನದ ಪ್ರಾತಿನಿಧಿಕ ಸಭೆಯ ಕೆಲಸ ತೀರಿಸಿಕೊಂಡು ಔಂಧದಿಂದ ಮಧ್ಯಾಹ್ನ ವಾಡಿಗೆ ಹೊರಟರು. ದಾಮುಅಣ್ಣಾ ಔಂಧದಲ್ಲಿ ಇರುತ್ತಿದ್ದ. ಅಲ್ಲಿಗೆ ಹೋಗುವಾಗ ಮನೆಯವರಾರಾದರೂ ಅವರ ಭೆಟ್ಟಿಯ ಸಲುವಾಗಿ ಮೋಟಾರಿ ನೊಳಗೆ ಇರತಕ್ಕವರೇ. ಅದರಂತೆ ಅಂದು ಯಮೂತಾಯಿ ಮತ್ತು ಆಕೆಯ ಎರಡು ತಿಂಗಳ ಕೂಸು ಸರೋಜಿನಿ ಮತ್ತು ಪಾರ್ವತೀಬಾಯಿ ಔಂಧಕ್ಕೆ ಹೋಗಿದ್ದರು. ಈ ಮಂಡಳಿಯಲ್ಲದೆ ಒಬ್ಬ ಒಕ್ಕಲಗಿತ್ತಿ, ದಾದೂ ಡ್ರೈವ್ಹರ ಮೊದಲಾದವರೆಲ್ಲರೂ ವಾಡಿಗೆ ಹೊರಟರು. ಲಕ್ಷ್ಮಣರಾಯರೇ ಸ್ವತಃ ಮೋಟಾರ ನಡೆಸುತ್ತಿದ್ದರು.

ಅರ್ಧಕ್ಕಿಂತಲೂ ಹೆಚ್ಚು ಪ್ರವಾಸವು ಮುಗಿದು, ಮೋಟಾರು ರಾಮ-ಪುರದ ಹತ್ತರಿರುವ ಚಿಕ್ಕ ತಿರುವಿಗೆ ಬಂದಿತ್ತು. ಅಷ್ಟರಲ್ಲಿ ರಾಯರಿಗೆ ಮೂರ್ಛೆ ಬಂದಂತಾಗಿ ಚಕ್ರದ ಮೇಲಿರುವ ಅವರ ಕೈ ಸಡಿಲಾಯಿತು. ಗಾಡಿಯು ಮಾರ್ಗವನ್ನು ಬಿಟ್ಟು ಎತ್ತೆತ್ತಲೋ ಹೊರಟಿತು. ಲಕ್ಷ್ಮಣರಾಯರು ಅಷ್ಟ ರಲ್ಲಿ ಬ್ರೆಕ್ ಹಾಕಿದರು. ಆದರೆ ಅದರಿಂದ ಗಾಡಿಯು ನಿಲ್ಲಲಿಲ್ಲ. ಮೋಟಾರು ಅತ್ತಿತ್ತ ಸರಿದಾಡಿ ಮಗ್ಗುಲಲ್ಲಿರುವ ತೆಗ್ಗಿನಲ್ಲಿ ಬೊಕ್ಕಬೋರಲಾಗಿ ಬಿದ್ದುಬಿಟ್ಟಿತು.

ಅಷ್ಟರಲ್ಲಿ ಇಂಜಿನ್ ನಿಂತಿತೆಂದು ಒಳ್ಳೆಯದಾಯಿತು. ಇಲ್ಲದಿದ್ದರೆ ಹೊರಗೆ ಚೆಲ್ಲಿದ ಪೆಟ್ರೋಲಿಗೆ ಹೆಂಕಿ ಹತ್ತಿದ್ದರೆ ದೊಡ್ಡ ಅನರ್ಥ ಸಂಭವಿಸು ತ್ತಿತ್ತು. ಜೀವದ ಸುತ್ತು ಬಂದ ಸಂಕಟವು ಪಾರಾಯಿತು. ಹೊಡಮಳ್ಳಿ ಬಿದ್ದ ಗಾಡಿಯೊಳಗಿಂದ ಮಂಡಳಿಯು ಹೊರಬರಲು ಬಹಳ ಪ್ರಯಾಸವಾ ಯಿತು. ಯಾರಿಗೂ ದೊಡ್ಡ ಗಾಯಗಳಾಗಲಿಲ್ಲ. ಸಣ್ಣ-ಪುಟ್ಟ ಗಾಯ ಮಾತ್ರ ಆದವು. ಇದೇ ದೈವಬಲವೆನ್ನಬಹುದು.

ರಾಮಾಪುರದ ಮಂಡಳಿಯು ಈ ಅಪಘಾತಕ್ಕೀಡಾದ ಪ್ರವಾಸಿಕರಿಗೆ ಎಲ್ಲತರದ ವ್ಯವಸ್ಥೆಯನ್ನೂ ಸಹಾಯವನ್ನೂ ಮಾಡಿದರು. ಅಲ್ಲದೆ ವಾಡಿಗೆ ಎಲ್ಲ ಸಂಗತಿಯನ್ನು ಹೇಳಿಕಳಿಸಿದರು. ಅವರ ನಿರೋಪ ಬರುತ್ತಲೆ ವಾಡಿಯಿಂದ ಎರಡನೆ ಗಾಡಿಯನ್ನು ಕಳಿಸಿ, ಮಂಡಳಿಯನ್ನು ಮನೆಗೆ ತರಲಾಯಿತು.

ಇದಾದ ಎರಡು ದಿನಗಳಾದ ಮೇಲೆ ಲಕ್ಷ್ಮಣರಾಯರ ಕೈಕೆಳಗೆ ಕೆಲಸವನ್ನು ಮಾಡುತ್ತಿರುವ ವ್ಯವಸ್ಥಾಪಕ ಮಂಡಳಿಯ ಒಂದು ಶಿಷ್ಟ ಮಂಡಳವು ಅವರ ಭೆಟ್ಟಿಗೆ ಹೋಯಿತು. ಅದರ ನೇತೃತ್ವವು ಶಂತನುರಾಯರ ಕಡೆಗೆ ಇತ್ತು. ಅವರು ತಮ್ಮ ಹಿರಿಯರಿಗೆ "ನಾವೆಲ್ಲರೂ ತಮಗೊಂದು ವಿನಂತಿಯನ್ನು ಮಾಡಿಕೊಳ್ಳಲು ಬಂದಿರುವೆವು. ತಾವು ಅದನ್ನು ಮನ್ನಿಸಿದರೆ ನಮಗೆ ಅತ್ಯಾನಂದವಾಗುವದು. ತಾವು ಔಂಧದ ದಿವಾಣಗಿರಿಯನ್ನು ಬಿಡುವದು ಮೊದಲನೆಯ ಕೆಲಸ. ಎರಡನೆಯದೆಂದರೆ ಇನ್ನು ಮುಂದೆ ನೀವು ಸ್ವತಃ ಮೋಟಾರ ನಡೆಸಕೂಡದು. ಅಲ್ಲದೆ ಕಿರ್ಲೋಸ್ಕರವಾಡಿಯಲ್ಲಿಯೇ ಇದ್ದುಕೊಂಡು ಎಷ್ಟು ಸಹಜವಾಗಿ ಕೆಲಸ ಮಾಡಲು ಬರುತ್ತದೋ ಅಷ್ಟನ್ನು ಮಾತ್ರ ಮಾಡಬೇಕು" ಎಂದು ಹೇಳಿದರು.

ಅದಕ್ಕೆ ಲಕ್ಷ್ಮಣರಾಯರು "ಒಳ್ಳೇದು. ನಿಮ್ಮ ಅಭಿಪ್ರಾಯವನ್ನು ನಾನು ಆನಂದದಿಂದ ಮನ್ನಿಸುತ್ತೇನೆ" ಎಂದು ಹೇಳಿದರು.

## ೨೧

# ಉದ್ಯೋಗವೃಕ್ಷದ ವಿಸ್ತಾರ

ಭೂಮಿಯಲ್ಲಿ ಬೀಜ ಬಿತ್ತಿದರೆ ಅದು ಅಂಕುರ ಒಡೆಯುತ್ತದೆ. ಅದಕ್ಕೆ ನೀರುಣಿಸಿ, ಬೇಲಿಹಚ್ಚಿ, ಕಾಪಿಟ್ಟರೆ ಅದೇ ಗಿಡವಾಗುವದು. ಮುಂದೆ ಅದೇ ಗಿಡಕ್ಕೆ ಟೊಂಗೆ, ಟಿಸಿಲುಗಳೊಡೆದು ವಿಶಾಲವಾದ ಮರವಾಗುತ್ತದೆ. ಯಾವುದೇ ಉದ್ಯೋಗಕ್ಕೂ ಇದೇ ಮಾತು ಅನ್ವಯಿಸುವದು.

ಕಿರ್ಲೋಸ್ಕರವಾಡಿಯ ಬೀಳು ಭೂಮಿಯಲ್ಲಿ ಲಕ್ಷ್ಮಣರಾಯರು ಸ್ಥಾಪಿಸಿದ ಕಾರಖಾನೆಯು ಉದ್ಯೋಗದ ಒಂದು ಸಸಿಯೇ! ಅದನ್ನು ಬೆಳೆಸಲು ರಾಯರು ಎಷ್ಟು ಪರಿಶ್ರಮ ಪಟ್ಟರೆಂಬುದನ್ನು ವಾಚಕರು ಬಲ್ಲರು. ಈ ಸಸಿಯು ಚಿಗುರೊಡೆಯ ಬೇಕೆಂಬಷ್ಟರಲ್ಲಿಯೇ ಮಂದತೆಯ ಮಂಜು ಮುಸುಕಿ ಹೋಯಿತು. ಅದರಲ್ಲಿ ಅದು ಎಲ್ಲಿ ಕಮರಿ ಬಾಡಿಹೋಗುವದೋ? ಎಂಬ ಸ್ಥಿತಿಗೆ ಸಿಕ್ಕಿತು. ಈ ಪರಿಸ್ಥಿತಿಯಲ್ಲಿ ಕಾರಖಾನೆಯು ಲಾಭದಾಯಕವಾಗಿ ಹೇಗೆ ನಡೆಯಬೇಕು? ಅದರಿಂದ ಮೊದಲಿನ ನಾಲ್ಕು ವರುಷ ಜೀವ ಹಿಡಿದುಕೊಂಡಿರಬೇಕಾದರೆ ಅದಕ್ಕೆ ಪರಾಕಾಷ್ಟವಾಯಿತು. ಮುಂದೆ·೧೯೨೪ ರಿಂದ ೩೯ ರ ವರೆಗೆ, ಪಾಲುಗಾರರಿಗೆ ೪ ಕ್ಕಿಂತ ಹೆಚ್ಚು ಡೆವ್ಹಿಡೆಂಡ್ ಹಂಚಲು ಸಾಧ್ಯವಾಗಲಿಲ್ಲ.

೩೮–೩೯ ವರುಷ ಕಾರಖಾನೆಯ ಆರ್ಥಿಕ ಸ್ಥಿತಿಯು ಸುಧಾರಿಸಲಿಲ್ಲ. ಆದರೂ ಅದು ತಲೆಯೆತ್ತಿ ನಿಲ್ಲಲು ಮಾಡಿದ ಪ್ರಯತ್ನದಲ್ಲಿ ಬಂದ ಅನುಭವವು ಮಾತ್ರ ಬೆಲೆಯುಳ್ಳದ್ದಾಗಿದೆ. ಅನುಭವವು ಕೂಡ ದೊಡ್ಡ ಭಾಂಡವಲೇ! ಯೋಗ್ಯ ವೇಳೆಯಲ್ಲಿ ಅದರ ಲಾಭವಾಗದೆ ಹೋಗುವದಿಲ್ಲ. ೧೯೩೯ರಲ್ಲಿ ಎರಡನೇ ಮಹಾ ಯುದ್ಧವು ಸುರುವಾದೊಡನೆ, ಆ ಸಂಧಿಯು ದೊರೆಯಿತು.

ಈ ಯುದ್ಧಕಾಲದಲ್ಲಿ ಕಿರ್ಲೋಸ್ಕರ ಕಾರಖಾನೆಯು ಅದ್ಭುತವಾಗಿ ಬೆಳೆಯಿತು. ಅದಕ್ಕೆ ಮೂರು ಟಿಸಿಲೊಡೆದು, ಅದು ವಿಶಾಲ ರೂಪ ತಾಳಿತು.....

ಪುಣೆ, ಹರಿಹರ, ಬೆಂಗಳೂರಗಳಲ್ಲಿ ಹೊಸ ಕಾರಖಾನೆಗಳನ್ನು ತೆರೆದರು. ಈ ಉದ್ಯಮದಲ್ಲಿ ರಾಯರ ಮಕ್ಕಳೂ ರಾಯರ ಗರಡಿಯಲ್ಲಿಯೇ ನಿಪುಣರಾದ

ಹಳೆಯ ಚಾಲಕರೂ ಮುಂದಾಗಿದ್ದರೂ ಅದರ ಹಿಂದಿರುವ ಪ್ರೇರಕ-ಶಕ್ತಿ ಲಕ್ಷ್ಮಣ ರಾಯರೇ! ಅವರೀಗ ೭೦ ರ ಮನೆ ದಾಟಿದ್ದರಿಂದ ಮೊದಲಿನಷ್ಟು ಕೆಲಸ ವಾಗದಿದ್ದರೂ ಮುಂಜಾನೆಯ ಗಂಟೆಗೆ ಸರಿಯಾಗಿ ಅವರು ಕಾರಖಾನೆಯಲ್ಲಿ ಹಾಜರಿಲ್ಲದ ದಿನಗಳು ಕ್ವಚಿತ್ತಾಗಿಯೇ ಇರುವವು.

ರಾಯರು ದೂರದೃಷ್ಟಿಯಿಂದ ಸಂಸ್ಥೆಯ ಸೂತ್ರಗಳೆಲ್ಲವೂ ಒಬ್ಬರ ಕೈಯಲ್ಲಿರುವದು ಸುರಕ್ಷಿತವಲ್ಲೆಂದೂ ತಾವಿಲ್ಲದಿದ್ದರೂ ಸಂಸ್ಥೆಯು ಸುರಳೀತ ವಾಗಿ ಮುಂದೆ ಬಹುಕಾಲ ಬಾಳಬೇಕೆಂದೂ ವಿಚಾರಮಾಡಿ ತಮ್ಮ ಹೊಣೆ ಯನ್ನು ಮೆಲ್ಲಗೆ ತರುಣರ ಮೇಲೆ ಹೊರಿಸಿದರು. ಅವರೂ ಕಾರಖಾನೆಯ ಕೆಲಸದ ಮೇಲೆಲ್ಲ ಅವರ ಸೂಕ್ಷ್ಮದೃಷ್ಟಿಯೂ ಮಾರ್ಗದರ್ಶನವೂ ಇದ್ದೇ ಇರುತ್ತಿತ್ತು. ಇಂತಹ ದೂರ ದೃಷ್ಟಿಯ ಜನರು ನಮಗೆಷ್ಟು ಸಿಗುವರು.?

ರಾಯರ ಕರ್ತೃತ್ವ ಶಕ್ತಿಯ ಕಲ್ಪನೆಯಾಗಬೇಕಾದರೆ, ಅವರ ಉದ್ಯೋಗ ದಿಂದ ಪ್ರತ್ಯಕ್ಷ ಹಾಗು ಅಪ್ರತ್ಯಕ್ಷ ಎಷ್ಟು ಚಿಕ್ಕದೊಡ್ಡ ಕಾರಖಾನೆಗಳು ತಲೆ ಎತ್ತಿದವೆಂಬುದನ್ನು ತಿಳಿದುಕೊಳ್ಳಬೇಕು. ಅದನ್ನು ಕಂಡರೆ ಆಶ್ಚರ್ಯ ವಾಗುವದು. ಅದನ್ನು ನೋಡೋಣ.

ಎರಡನೇ ಮಹಾಯುದ್ಧವು ಆರಂಭವಾದೊಡನೆಯೇ ಕಬ್ಬಿಣ, ಉಕ್ಕು ಮೊದಲಾದ ಕಚ್ಚಾಮಾಲಿನ ಕೊರತೆ ಒಮ್ಮೆಲೆ ಆಯಿತು. ಎಲ್ಲ ಕಡೆಗೂ ಕಂಟ್ರೋಲ್ ಕುಳಿತಿತು. ಈ ಯುದ್ಧವು ಬಹಳ ದಿನ ನಡೆಯದೆಂಬ ಬ್ರಿಟೀಶರ ಭವಿಷ್ಯ ಸುಳ್ಳಾಯಿತು. ಅದರಿಂದ ಸೈನ್ಯಕ್ಕೆ ಯುದ್ಧ ಸಾಮಗ್ರಿಯ ಪೂರೈಕೆ ಯನ್ನು ಹೇಗೆ ಮಾಡಬೇಕು? ಎಂಬ ಚಿಂತೆ ಬಲವತ್ತರವಾಯಿತು.

ಯುದ್ಧ ನಡೆಯಲು ತೋಫು ಬೇಕು, ಗುಂಡುಗಳು ಇಲ್ಲದಿದ್ದರೆ ತೋಫಿನ ಉಪಯೋಗವೇನು? ಈ ಶೆಲ್ಸ ತಯಾರಿಸಲು ಶೆಲ್‌ಟರ್ನಿಂಗ ಲೇಥ ಬೇಕು. ಆಗ ಭಾರತದಲ್ಲಿ ಎಲ್ಲಿಯೂ ಈ ಲೇಥ ತಯಾರಾಗುತ್ತಿದ್ದಿಲ್ಲ. ಹಾಗಾದರೆ ಯುದ್ಧದ ಗತಿಯೇನು? ತೋಫಿನ ಹಣೆಬರೆಹದಂತೆ ಇನ್ನುಳಿದ ಸಾಧನ ಸಾಮಗ್ರಿಗಳ ಗತಿ. ಅವೆಲ್ಲವುಗಳನ್ನು ತಯಾರಿಸುವ ಯಂತ್ರ ಸಾಮಗ್ರಿಗಳನ್ನು ಮೊದಲು ಸಂಗ್ರಹಿಸಬೇಕಾಗುವದು. ಯುದ್ಧದ ತಯಾರಿಯು ಈ ಯಂತ್ರ ಸಾಮಗ್ರಿಯ ಮೇಲೆ ಅವಲಂಬಿಸಿರುವದು.

ಈ ಯಂತ್ರದ ಕೊರತೆಯನ್ನು ಹೇಗೆ ಬಿಡಿಸಲು ಬಂದೀತು? ಎಂಬ ವಿಚಾರ ಮಾಡಲು ಭಾರತೀಯ ಕೆಲವು ಪ್ರಮುಖ ಕಾರಖಾನೆದಾರರ ಸಭೆ

ಯನ್ನು ಸರಕಾರವು ದಿಲ್ಲಿಯಲ್ಲಿ ಕರೆಯಿತು. ಅದಕ್ಕೆ ಶಂತನುರಾವ ಮತ್ತು ನಾನಾಸಾಹೇಬರು ಹೋಗಿದ್ದರು. ಕಿರ್ಲೋಸ್ಕರವಾಡಿಯಲ್ಲಿ ಯಾವ ಯಾವ ಯಂತ್ರಗಳನ್ನು ಮಾಡಲು ಬಂದೀತು ಎಂಬ ಸಂಗತಿಯನ್ನು ಅಧಿಕಾರಿಗಳಿಗೆ ತಿಳಿಸಲಾಯಿತು. ಸರಕಾರದ ಗಡಿಬಿಡಿ ಎಂದರೆ ಗಡ್ಡಕ್ಕೆ ಬೆಂಕಿ ಹತ್ತಿದಾಗ ಬಾವಿ ತೋಡಲು ಹೊರಟಂತೆಯಾಗಿತ್ತು. ಆದರೆ ಅದಕ್ಕೆ ಬೇರೆ ಮಾರ್ಗವೇ ಇರಲಿಲ್ಲ.

ಅಧಿಕಾರಿಯು 'ಶೆಲ್ ಟರ್ನಿಂಗ ಲೇಥ್ ಇಲ್ಲದೆ ಕೆಲಸ ನಿಂತು ಬಿಟ್ಟಿದೆ. ನಾವು ಬ್ರಿಟಿಶ್ ಯುದ್ಧ ಮಂತ್ರಿಗೆ ಈ ಯಂತ್ರವನ್ನು ಇಲ್ಲಿಯೇ ಮಾಡಿಸಿದರೆ ಆದೀತೇ ? ಎಂದು ವಿಚಾರಿಸಲಿದ್ದೇವೆ. ಆದರೆ ಅಲ್ಲಿಯವರೆಗೆ ಈ ಬಗ್ಗೆ ನಿಮಗೆ ಏನಾದರೂ ಮಾಡಲು ಬರುವಂತಿದ್ದರೆ ಮಾಡಿ ನೋಡಿರಿ. ನಿಮಗೆ ತೋರಿಸಲು ನಮ್ಮ ಹತ್ತರ ಯಂತ್ರದ ನಮೂನೆಯೇ ಇರುವದಿಲ್ಲ. ಕ್ಯಾಟಲಾಗದಲ್ಲಿರುವ ಚಿತ್ರ ಮಾತ್ರ ಇದೆ, ಅಷ್ಟೇ. ಬೇಕಾದರೆ ಇದನ್ನು ತೆಗೆದುಕೊಂಡು ಹೋಗಿರಿ' ಎಂದು ಹೇಳಿದನು.

ಕಿರ್ಲೋಸ್ಕರವಾಡಿಗೆ ಮರಳಿದ ಮೇಲೆ ಶಂತನುರಾವ, ಶಂಭೂರಾವ, ಅನಂತರಾವ, ರಾಜಾರಾಮಪಂತ ಮತ್ತು ಇನ್ನಿತರ ಇಂಜನಿಯರರ ಮಂಡಳಿಯು ಈ ಉದ್ಯೋಗದಲ್ಲಿ ತೊಡಗಿತು. ಅವರು ರಾತ್ರಿಯನ್ನು ಹಗಲನ್ನಾಗಿ ಮಾಡಿ ಕೆಲಸ ಮಾಡಿ ಮೂರೇ ತಿಂಗಳಲ್ಲಿ ಅದನ್ನು ಸಿದ್ಧಪಡಿಸಿದರು. ಈ ಯಂತ್ರದ ರಚನೆಯಲ್ಲಿ ಪರಾಕಾಷ್ಟತೆಯ ಸೂಕ್ಷ್ಮತೆಯನ್ನು ಇರಿಸಬೇಕಾಗುತ್ತದೆ. ಅದಕ್ಕೆ ಪ್ರೆಸ ಜಿನ್ ಮಶಿನ್ನ ಎಂದು ಹೆಸರಿದೆ. ಈ ಕೆಲಸವು ಇಷ್ಟು ಕಠಿಣವಿದ್ದುದರಿಂದ ಇಂಗ್ಲಂಡ, ಅಮೇರಿಕೆ, ಜರ್ಮನಿಯಂಥ ದೇಶಗಳನ್ನು ಬಿಟ್ಟು ಈ ಯಂತ್ರಗಳು ಎಲ್ಲಿಯೂ ತಯಾರಿಸುತ್ತಿದ್ದಿಲ್ಲ. ಆದರೆ ಪ್ರಯತ್ನಿಸುವವರಿಗೆ ಈ ಜಗತ್ತಿನಲ್ಲಿ ಯಾವುದು ಅಶಕ್ಯವಿದೆ ?

"ಲೇಥ ಸಿದ್ಧವಾಗಿವೆ. ಪರೀಕ್ಷಿಸಲು ಪ್ರತಿನಿಧಿಯನ್ನು ಕಳಿಸಿರಿ." ಎಂಬ ತಾರು ಕಿರ್ಲೋಸ್ಕರವಾಡಿಯಿಂದ ದಿಲ್ಲಿಯ ಅಧಿಕಾರಿಗಳಿಗೆ ಹೋಯಿತು. ಅದೇ ಹೊತ್ತಿಗೆ ಲಂಡನ್ನದಿಂದ ಯುದ್ಧ ಮಂತ್ರಿಯ ಪತ್ರವೂ ಬಂದಿತ್ತು. ಅವನು ಅದರಲ್ಲಿ ತಿಳಿಸಿದ್ದೇನೆಂದರೆ— "ಈ ಲೇಥ ಭಾರತದಲ್ಲಿ ತಯಾರಾದವು ಎಂದು ನಮಗೆನಿಸುವದಿಲ್ಲ. ಆದರೆ ಬೇರೆ ಉಪಾಯಗಳೇನಿದ್ದರೂ ಯತ್ನಿಸಿ ನೋಡಿರಿ" ಎಂದು ತಿಳಿಸಿದ್ದನು.

ಕಿರ್ಲೋಸ್ಕರವಾಡಿಯು ಅಡ್ಡಮಾರ್ಗದ ದಾರಿಯ ಮೇಲಿನ ಊರು. ಈ ಸ್ಥಳಕ್ಕೆ ಹೋಗಲು ನಕಾಶದಲ್ಲಿ ರಸ್ತೆಯನ್ನು ತೋರಿಸಿರುವದಿಲ್ಲ. ಅದರಿಂದ ವಾಡಿಗೆ ಬರಲು ಹೊರಟ ಲಷ್ಕರೀ ಅಧಿಕಾರಿಯು ದಾರಿ ತಪ್ಪಿ ಪಂಢರಪುರದ ಕಡೆಗೆ ಹೋದನು. ಆ ದಿವಸಗಳಲ್ಲಿ ಮೋಟಾರಿನ ದೀಪಗಳಿಗೂ ಮುಸುಕುಹಾಕಲು ಸರಕಾರಿ ಕಟ್ಟಾಜ್ಞೆ! ಅದರಿಂದ ರಾತ್ರಿಯಲ್ಲಿ ಎಲ್ಲ ಕಡೆಗೂ ಅಂಧಕಾರ! ಕೊನೆಗೆ ರಸ್ತೆಯನ್ನು ಶೋಧಿಸುತ್ತ ಆ ಅಧಿಕಾರಿಯು ಮಧ್ಯ ರಾತ್ರಿಗೆ ವಾಡಿಗೆ ಬಂದು ತಲುಪಿದನು.

ಧೂಳಿನಿಂದ ಮುಸುಕಿದ ಆ ಲಷ್ಕರೀ ಅಧಿಕಾರಿಯು ಮೋಟಾರಿನಿಂದ ಇಳಿಯುತ್ತಲೇ ಅವನ ಮೊದಲನೆಯ ಪ್ರಶ್ನೆಯೆಂದರೆ:– 'ಲೇಥ್ ಎಲ್ಲಿ ಇದೆ? ಮೊದಲು ಅದನ್ನು ನಮಗೆ ತೋರಿಸಿರಿ." ಅಂದನಂತೆ. ಅವನನ್ನು ಕೂಡಲೇ ಮಶಿನ್ ಶಾಪಿಗೆ ಕರೆದುಕೊಂಡು ಹೋಗಿ, ಲೇಥ್ ಮತ್ತು ಅದರ ಮೇಲೆ ತಯಾರಿಸಿದ ಗುಂಡು ತೋರಿಸುತ್ತಲೆ, ಅವನಿಗೆ ಆದ ಆನಂದದ ವರ್ಣನೆಯನ್ನು ಮಾಡುವದು ಸಾಧ್ಯವೇ ಇಲ್ಲ. ಆ ಆನಂದದ ಭರದಲ್ಲಿ ಅವರಲ್ಲಿಯ ಒಬ್ಬ ಆಫೀಸರನು ಕುಣಿಯತೊಡಗಿದನು. 'ಯಾವ ರಾಷ್ಟ್ರವು ತನ್ನ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಬೇಕೆನ್ನುತ್ತಿದೆಯೋ ಅದು ತನ್ನ ಯಂತ್ರ ನಿರ್ಮಾಣದ ಕಾರಖಾನೆಯ ಕಾಳಜಿಯನ್ನು ತೆಗೆದುಕೊಳ್ಳಲೇಬೇಕು?' ಎಂದನು ಅಧಿಕಾರಿ.

ಕಿರ್ಲೋಸ್ಕರ ಕಾರಖಾನೆಯಲ್ಲಿ ಒಳ್ಳೇ ತರಗತಿಯ ಮಶಿನ್ ಟೂಲ್ಸ ಆಗಲು ಶಕ್ಯವಿದೆ ಎಂಬ ಸಂಗತಿಯು ಸಪ್ಲಾಯ ಡಿಪಾರ್ಟಮೆಂಟಿನ ಲಕ್ಷ್ಯದಲ್ಲಿ ಬಂದ ನಂತರ, ಲೇಥ್ಸ ಪ್ಲೇನಿಂಗ್ ಮಶಿನ್ಸ, ಪ್ರೆಸೆಸ್ ಮೊದಲಾದ ಯಂತ್ರಗಳನ್ನು ದೊಡ್ಡ ಪ್ರಮಾಣದಲ್ಲಿ ಪೂರೈಸಲು ಕಾರಖಾನೆಯು ಸಿದ್ಧವಾಗಬೇಕಾಯಿತು. ಅದರಲ್ಲಿಯೂ ಪಂಪುಗಳ ಸಂಖ್ಯೆ ಅವರ ಕಣ್ಣಲ್ಲಿ ಒತ್ತಿತ್ತು. ಕಾರಖಾನೆಯಿಂದ ಸೈನ್ಯ ಖಾತೆಗೆ ಬೇರೆ ಬೇರೆ ಆಕಾರದ ಒಂದು ಲಕ್ಷ ಪಂಪುಗಳನ್ನು ಪೂರೈಸಲಾಯಿತು. ಅದರಂತೆ ೫೦ ಸಾವಿರ ಕಬ್ಬಿಣದ ಖಾಟಾ ಮತ್ತು ಹ್ಯಾಂಡ ಗ್ರೆನೆಡದ ಸಲುವಾಗಿ ಲಕ್ಷಾವಧಿ ಸ್ಪ್ರಿಂಗುಗಳನ್ನು ಒದಗಿಸಲಾಯಿತು. ಅದಕ್ಕಾಗಿ ಕಾರಖಾನೆಯಲ್ಲಿ ಕೆಲಸದ ಮೂರು ಪಾಳಿಗಳು ಆರಂಭಿಸಲ್ಪಟ್ಟವು. ಕಾಮಗಾರರ ಸಂಖ್ಯೆಯು ೧೭೦೦ ಕ್ಕೆ ಏರಿತು.

ಮಶಿನ್ ಟೂಲ್ಸಿನ ಖಾತೆಗೆ ಇಷ್ಟು ದೊಡ್ಡ ಚಾಲನೆ ದೊರಕಿದ ಮೇಲೆ ಅದಕ್ಕಾಗಿ ಒಂದು ಸ್ವತಂತ್ರ ಖಾತೆಯನ್ನೇ ಸ್ಥಾಪಿಸಬೇಕೆಂಬ ವಿಚಾರ ನಡೆ

ಯಿತು. ಅದಕ್ಕಾಗಿ ಭೂಮಿ, ನೀರು, ವಿದ್ಯುತ್‌ಶಕ್ತಿ ಮತ್ತು ಸಂಸ್ಥಾನದ ಸಹಕಾರ ಈ ಮೊದಲಾದವುಗಳ ದೃಷ್ಟಿಯಿಂದ ಮೈಸೂರ ಸಂಸ್ಥಾನದೊಳಗಿನ ಹರಿಹರವು ಒಳ್ಳೆಯದೆಂದೆನಿಸಿ, [illegible]ರ ಏಪ್ರಿಲ್ ತಿಂಗಳಿನಲ್ಲಿ 'ಮೈಸೂರ-ಕಿರ್ಲೋಸ್ಕರ ಲಿಮಿಟೆಡ್'' ಎಂಬ ಕಂಪನಿಯು ೫ ಲಕ್ಷ ಬಂಡವಲಿನಿಂದ ಹರಿಹರದಲ್ಲಿ ಸ್ಥಾಪಿಸಲ್ಪಟ್ಟಿತು.

ಕಿರ್ಲೋಸ್ಕರವಾಡಿಯ ಆರಂಭವು ಒಂದು ಪಡ ಭೂಮಿಯ ಮೇಲೆ ಆದಂತೆ ಹರಿಹರ ಕಾರಖಾನೆಯು ಕೂಡ ಪಡಭೂಮಿಯ ಮೇಲೆಯೆ ಆಯಿತು. ಈ ಹೊಸ ಕಾರಖಾನೆಯ ಮುಖ್ಯ ಸೂತ್ರಗಳನ್ನು ಒಬ್ಬ ಹಳೆಯ ಅನುಭವಿಕ ಚಾಲಕರಾದ ಶ್ರೀ ಶಂಭೋರಾವ ಜಾಂಭೇಕರರ ಕಡೆಗೆ ಕೊಡಲಾಗಿತ್ತು. ಅವರಿಗೆ ತರುಣರೂ ಯಂತ್ರಕುಶಲರೂ ಆದ ರಾಜಾರಾಮ ಪಂತರ ನೆರವು ದೊರೆಯಿತು. ಇವರಿಬ್ಬರ ಪ್ರಯತ್ನದ ಫಲವಾಗಿ ೧೦ ತಿಂಗಳ್ಳಲ್ಲಿಯೇ ಕಾರಖಾನೆಯು ಕಟ್ಟಲ್ಪಟ್ಟು ಮೊದಲನೆಯ ಲೇಥ ಹೊರಬಿದ್ದಿತು.

ಈ ಕಾರಖಾನೆಯ ಉದ್ಘಾಟನೆಯು ಮೈಸೂರು ಸಂಸ್ಥಾನದ ಆಗಿನ ದಿವಾಣರಾದ ಶ್ರೀ. ಎನ್. ಮಾಧವರಾವ ಅವರ ಹಸ್ತದಿಂದ ೯ನೇ ಫೆಬ್ರುವರಿ ೧೯೪೨ರಂದು ಬಹು ವಿಜೃಂಭಣೆಯಿಂದ ಜರುಗಿತು. ಈ ಸಮಾರಂಭಕ್ಕಾಗಿ ಕಿರ್ಲೋಸ್ಕರ ಕಾರಖಾನೆಯ ೩೦೦ ಜನ ಕೆಲಸಗಾರರು ವಿಶೇಷ ಗಾಡಿಯಿಂದ ಹರಿಹರಕ್ಕೆ ತರಲ್ಪಟ್ಟರು. ಆ ಕಾರ್ಯಕ್ರಮವು ಸಮಾಪ್ತಗೊಂಡ ಮೇಲೆ ಅವರನ್ನು ಭದ್ರಾವತಿಯ ಕಾರಖಾನೆಯನ್ನು ತೋರಿಸಲು ಕರೆದೊಯ್ಯಲಾಯಿತು.

ಪೌರಾಣಿಕ ಕಾಲದಲ್ಲಿ ಇಲ್ಲಿರುವ ತುಂಗಭದ್ರೆಯ ತೀರದಲ್ಲಿ ಹರಿ ಮತ್ತು ಹರರ ಭೆಟ್ಟಿಯು ಆಯಿತು. ಅದರಿಂದ ಇದು ಹರಿಹರ ಎಂಬ ಧಾರ್ಮಿಕ ಕ್ಷೇತ್ರವಾಯಿತೆಂಬ [illegible]ವೆ. ಈ ಸ್ಥಳದಲ್ಲಿ ಇಂದು ಮಹಾರಾಷ್ಟ್ರ ಮತ್ತು ಕರ್ನಾಟಕದ ಕಾರಖಾನೆಯು ಸಂಗಮವಾದ್ದರಿಂದ ಅದಕ್ಕೊಂದು ಔದ್ಯೋಗಿಕ ಕ್ಷೇತ್ರದ ಹೊಸ ಮಹತ್ವವು ಬಂದಿತು. ಹರಿಹರದೊಳಗಿನ ಕಾರಖಾನೆಯಲ್ಲಿ ಇಂದು ೧೪೦೦ ಕೆಲಸಗಾರರು ಕೆಲಸ ಮಾಡುತ್ತಿದ್ದಾರೆ. ಮಶಿನ್ ಟೂಲ್ಸ ಮಾಡುವಂಥ ಭಾರತದೊಳಗಿನ ಖಾಸಗೀ ಕಾರಖಾನೆಗಳಲ್ಲಿ ಇದು ಅಗ್ರೇಸರವಾಗಿದೆ.

ಇನ್ನೆರಡು ಕಾರಖಾನೆಗಳ ಜನ್ಮದ ಕಥೆಯು ಭಿನ್ನತರಹದ್ದಾಗಿದೆ. ಜಗತ್ತನ್ನೇ ತ್ರಾಹಿ ತ್ರಾಹಿ ಮಾಡಿದ ಮಹಾಯುದ್ಧವು ಬೇಗನೆ ಮುಗಿಯುವ ಚಿನ್ಹಗಳು ಕಂಡವು. ಅದರಿಂದ ಯುದ್ಧ ನಿಂತೊಡನೆ ತಮ್ಮ ತಮ್ಮ ದೇಶಗಳ ಪುನರ್ರಚನೆಯನ್ನು ಹೇಗೆ ಮಾಡತಕ್ಕದ್ದು ? ಎಂಬದನ್ನು ಎಲ್ಲ ರಾಷ್ಟ್ರಗಳೂ ವಿಚಾರ ಮಾಡತೊಡಗಿದವು. ಭಾರತಕ್ಕೂ ತನ್ನ ಔದ್ಯೋಗಿಕ ಹೆಜ್ಜೆಯನ್ನು ಮುಂದೆ ಹಾಕಲು ಒಳ್ಳೇ ಸಂಧಿ ದೊರೆತಿತು. ಈ ಪರಿಸ್ಥಿತಿಯನ್ನವಲೋಕಿಸಿ ಕಿರ್ಲೋಸ್ಕರ ಕಾರಖಾನೆಯು ತನ್ನ ಭಾವೀ ವಿಕಾಸದ ಯೋಜನೆಯನ್ನು ಕಾರ್ಯರಂಗಕ್ಕಿಳಿಸಲು ಅಣಿಯಾಯಿತು.

ಕಾರಖಾನೆಯಲ್ಲಿ ಸಿದ್ಧವಾದ ಆಯಿಲ್ ಇಂಜಿನ್ಸ್ ಮತ್ತು ಇಲೆಕ್ಟ್ರಿಕ್ ಮೋಟರ್ಸಗಳ ವ್ಯಾಪಾರವು ಯುದ್ಧ ಕಾಲದಲ್ಲಿ ಚನ್ನಾಗಿ ಆಯಿತು. ಆದರೂ ಯುದ್ಧ ಸಮಾಪ್ತಿಯೊಂದಿಗೆ ಪರದೇಶೀ ಯಂತ್ರಗಳ ಆಯಾತವು ಆರಂಭವಾದ ಮೇಲೆ ಅವುಗಳೊಂದಿಗೆ ಸ್ಪರ್ಧೆಗೆ ನಿಲ್ಲಬೇಕಾಗಿ ಬಂದಿತು. ಪರದೇಶೀ ಕಾರಖಾನೆದಾರರು ಮೊದಲೇ ಈ ಉದ್ಯಮದಲ್ಲಿ ಮುಂದುವರಿದವರು. ಅಲ್ಲದೆ ಅವರು ಯುದ್ಧದ ದಿವಸದಲ್ಲಿ ಪ್ರಚಂಡ ಪ್ರಗತಿಯನ್ನು ಹೊಂದಿದವರು. ಆದ್ದರಿಂದ ಅವರೊಡನೆ ಸ್ಪರ್ಧಿಸುವದು ಅಷ್ಟೊಂದು ಸುಲಭವಾಗಿರಲಿಲ್ಲ.

ಈ ಸ್ಪರ್ಧೆಯನ್ನು ಎದುರಿಸಲು, "ಕಿರ್ಲೋಸ್ಕರ ಕಾರಖಾನೆಯು ಹೆಸರುವಾಸಿಯಾದ ವಿಲಾಯತಿಯ ಯಾವುದೊಂದು ಕಾರಖಾನೆಯ ಸಹಕಾರ ದೊರಕಿಸಿ, ಯೋಗ್ಯ ಕರಾರುಗಳ ಮೇಲೆ, ಅವರಿಂದ ತಾಂತ್ರಿಕಜ್ಞಾನ, ಹಾಗು ಸಂಶೋಧನೆಯ ಅನುಕೂಲ, ಹಾಗು ಅನುಭವ ಪಡೆದರೆ, ನಮಗೂ ವಿಲಾಯತಿಯಂತಹ ವಸ್ತುಗಳನ್ನು ನಿರ್ಮಿಸಲು ಶಕ್ಯವಿದೆ. ಅಂದರೆ ಅವುಗಳ ಪ್ರಸಾರಕ್ಕೆ ಯಾವ ಆತಂಕವೂ ಉಳಿಯಲಾರದು. ನಮ್ಮ ರಾಷ್ಟ್ರದ ದೃಷ್ಟಿಯಿಂದ ಈ ಯೋಜನೆಯೇ ಹಿತಕರ" ಎಂಬ ಉಪಾಯವು ಸೂಚಿಸಲ್ಪಟ್ಟಿತು. ಅದು ಚಾಲಕರಿಗೂ ಮನಸ್ಸಿಗೆ ಬಂದಿತು. ಅಂಥ ಸಹಕಾರ ನೀಡಲು ಅಮೇರಿಕೆಯ ಯಾವುದಾದರೂ ಕಾರಖಾನೆಯೊಂದು ಸಿದ್ಧವಾಗಬಹುದೇ— ಎಂಬ ಶೋಧನೆಗಾರಂಭವಾಯಿತು.

ಅಷ್ಟರಲ್ಲಿ ಮದ್ರಾಸದ ಪ್ಯಾರಿ ಆ್ಯಂಡ ಕಂಪನಿಯವರಿಗೆ ಕಿರ್ಲೋಸ್ಕರ ಕಾರಖಾನೆಯ ಈ ಚಲನವಲನವು ಗೊತ್ತಾಯಿತು. ೧೭೮೮ ರಲ್ಲಿ ಭಾರತದಲ್ಲಿ ಪ್ರಸ್ಥಾಪಿತವಾದ ಈ ಕಂಪನಿಯು ಆ ಇಲಾಖೆಯಲ್ಲಿ ಬಹಳ ಪ್ರಖ್ಯಾತವಾಗಿತ್ತು.

ಅಲ್ಲಿಯು ವ್ಯಾಪಾರೀ ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿ ಅದರ ಪ್ರಸ್ಥವು ಗಣನೀಯವಾಗಿ ಬೆಳೆದಿತ್ತು. ಅದರ ಕಡೆಗೆ ಇಂಗ್ಲಂಡದೊಳಗಿನ ಅನೇಕ ಏಜೆನ್ಸಿಗಳು ಇದ್ದವು. ಈ ಕಂಪನಿಯೇ ಮದ್ರಾಸ ವಿಭಾಗದಲ್ಲಿ ಕಿರ್ಲೋಸ್ಕರ ಕಂಪನಿಯ ಮಾಲಿನ ಅಧಿಕೃತ ಹಂಚಿಗೆಗಾರವಾಗಿತ್ತು.

ಅದು ಇಂಗ್ಲಂಡದೊಳಗಿನ ಕಾರಖಾನೆದಾರರಿಗೆ ಸೂಚಿಸಿದ್ದೇನೆಂದರೆ— ಕಿರ್ಲೋಸ್ಕರ ಬ್ರದರ್ಸ ಲಿ. ಅವರು ಒಂದು ಅಮೇರಿಕನ್ ಕಾರಖಾನೆದಾರರ ಸಂಬಂಧವನ್ನು ಪ್ರಸ್ಥಾಪಿಸಲು ಇಚ್ಛಿಸುತ್ತಿದ್ದಾರೆ. ಆ ಕಾರಣದಿಂದ ನೀವೇ ಮುಂದಾಗಿ ಬಂದು ಅವರೊಡನೆ ಸಹಕಾರವನ್ನೇಕೆ ನೀಡಬಾರದು ? ಸುದೈವ ದಿಂದ ಈ ಸೂಚನೆಯು ಆ ಕಾರಖಾನೆದಾರರಿಗೆ ಮಾನ್ಯವಾಗಿ, ಅವರು ಆ ಪ್ರಕಾರ ಕಿರ್ಲೋಸ್ಕರರಿಗೆ ಪತ್ರ ಬರೆದು ನಿಮ್ಮ ಪ್ರತಿನಿಧಿಯನ್ನು ಇಂಗ್ಲಂಡಕ್ಕೆ ಕಳಿಸಿಕೊಡಬೇಕೆಂದು ಆಮಂತ್ರಣವನ್ನೂ ಕೊಟ್ಟುಬಿಟ್ಟರು.

ಆದರೆ ಅದು ೧೯೪೪ ನೇ ಇಸ್ವಿ. 'ಚಲೇಜಾವ' ಘೋಷಣೆಯ ಮೂಲಕ ದೇಶದಲ್ಲಿ ಬ್ರಿಟಿಶ್ ವಿರೋಧಿ ಚಳವಳಿಯು ಶಿಖರಕ್ಕೇರಿತ್ತು. ಈ ಹೊತ್ತಿಗೆ ಬ್ರಿಟಿಶ್ ಕಾರಖಾನೆದಾರರ ಸಹಕಾರವು ಯಾರಿಗೆ ರುಚಿಸಬೇಕು ? ಆದುದರಿಂದ ರಾಯರು ಈ ಬಗ್ಗೆ ರಾಜಕೀಯ ಹಾಗೂ ವ್ಯಾಪಾರೀ ಮುಖಂಡರ ಸಲಹೆ ಕೇಳಿದರು. ಅರ್ಥಾತ್ ಕೆಲವರು ಅನುಕೂಲ ಮತ್ತೆ ಕೆಲವರು ಪ್ರತಿಕೂಲ ಅಭಿಪ್ರಾಯವಿತ್ತರು. ಆದರೆ ಆ ಕಾಲದ ರಿಝರ್ವ ಬ್ಯಾಂಕಿನ ಗವ್ಹರ್ನರರಾದ ಚಿಂತಾಮಣರಾವ ದೇಶಮುಖರು ಮಾತ್ರ ಚಾಲಕರ ವಿಚಾರಸರಣಿಗೆ ಸಂಪೂರ್ಣ ಬೆಂಬಲವಿತ್ತರು. ಆಗ ಲಕ್ಷ್ಮಣರಾಯರು ಸಹ ಅದೇ ನಿರ್ಣಯು ವನ್ನು ತೆಗೆದುಕೊಂಡು, ಶಂತನುರಾವ ಮತ್ತು ನಾನಾಸಾಹೇಬ ಗುರ್ಜರ ಎಂಬ ತಮ್ಮ ಪ್ರತಿನಿಧಿಗಳನ್ನು ಇಂಗ್ಲಂಡಕ್ಕೆ ಕಳಿಸುವ ಆಲೋಚನೆಗೆ ಇಳಿದರು.

ಲಕ್ಷ್ಮಣರಾಯರು, ಶ್ರೀ ಶಂಭೂರಾವ, ಜಾಂಭೇಕರ, ಶಂಕರರಾವ, ಶಂತನುರಾವ, ಅನಂತರಾವ ಫಳನೀಕರ, ಮಂಗೇಶರಾವ ರೇಘೆಯವರನ್ನು ತಮ್ಮ ಹಸ್ತಕರೆಂದು ಆರಿಸಿದ್ದರು. ಕಾರಖಾನೆಯ ಪ್ರಗತಿಗೆ ಈ ಎಲ್ಲರಿಂದ ನೆರವೂ ಆಗುತ್ತಿತ್ತು. ೧೯೩೩ ರಲ್ಲಿ ಶ್ರೀ ನಾನಾಸಾಹೇಬ ಗುರ್ಜರೆಂಬವರ ಉತ್ಕೃಷ್ಟ ನೆರವು ರಾಯರಿಗೆ ಬಂದೊದಗಿತು. ನಾನಾಸಾಹೇಬರು ಎಲ್. ಎಲ್. ಬಿ. ಆದನಂತರ ಕಾರಖಾನೆಗೆ ಬಂದು ಕೂಡಿದರು. ಇವರು ಆಫೀಸಿನ ವ್ಯವಸ್ಥೆಯನ್ನು ನೋಡಹತ್ತಿದರು. ಅವರ ಕುಶಾಗ್ರ ಬುದ್ಧಿ, ತೀವ್ರ ಸ್ಮರಣಶಕ್ತಿ,

ಕಾರ್ಯೋತ್ಸಾಹ ಬಹಳ ದೊಡ್ಡವು. ನಡತೆ ನಿಷ್ಠುರವಿದ್ದರೂ ಸರಳ ಮನಸ್ಸು. ಇನ್‌ಕಮ್‌ಟ್ಯಾಕ್ಸ, ಕೂಲಿಕಾರ ಕಂಪನಿಯ, ಕಾಯದೆಜ್ಞಾನ ವಿದ್ದಂಥವರೊಬ್ಬರು ಕಾರಖಾನೆಗೆ ಬೇಕಾಗಿತ್ತು. ಈ ಎಲ್ಲ ಕೆಲಸಗಳಲ್ಲಿ ಗುರ್ಜ ರರು ಅತಿಶಯ ನಿಪುಣರು. ಇದರಿಂದ ತಮ್ಮ ಸದ್ಗುಣಗಳ ಪ್ರಭಾವದಿಂದ ಹೊಣೆಗಾರಿಕೆಯ ಕೆಲಸವನ್ನು ಮಾಡುತ್ತ ಮಾಡುತ್ತ, ಅವರು ಕಾರಖಾನೆಯ ಒಬ್ಬ ಪ್ರಮುಖ ಚಾಲಕರಾದದ್ದರಲ್ಲಿ ಏನು ಆಶ್ಚರ್ಯ? ವಿಲಾಯತಿಯಲ್ಲಿಯ ಕಂಪನಿಗಳೊಡನೆ ಕರಾರುಗಳನ್ನು ಮಾಡಲು, ಅವರೇ ಎಲ್ಲರಲ್ಲಿ ಯೋಗ್ಯತೆ ಯುಳ್ಳವರಾಗಿದ್ದರು.

ಯುದ್ಧದ ಮೂಲಕ ವಿಮಾನ ಸಿಗುವದು ಸುಲಭವಿದ್ದಿಲ್ಲ. ಪ್ರವಾಸವೂ ಸುರಕ್ಷಿತವಾಗಿದ್ದಿಲ್ಲ. ಇಂಥ ಬಿಕ್ಕಟ್ಟಿನಲ್ಲಿಯೂ ಬಹಳೇ ಶ್ರಮದಿಂದ ಒಂದು ವಿಮಾನದಲ್ಲಿ ಸ್ಥಳ ದೊರಕಿಸಿ ಇಬ್ಬರೂ ಲಂಡನ್ ಮುಟ್ಟಿದರು. ಆಗ ಲಂಡನ್ನಿನ ಮೇಲೆ ಜರ್ಮನಿಯವರು ರಾತ್ರಿಯಲ್ಲೆಲ್ಲ ಬಾಂಬುಗಳ ಮಳೆ ಗರೆಯುತ್ತಿದ್ದರು.

ಅಲ್ಲಿ ಬ್ರಶ್ ಇಲೆಕ್ಟ್ರಿಕ್ ಕಂಪನಿ ಮತ್ತು 'ಪೇಂಟರ' ಎಂಬ ಇಂಜನ್ ತಯಾರಿಕೆಯ 'ಬ್ರಿಟಿಶ್ ಆಯಿಲ್ ಇಂಜಿನ್ಸ್ ಎಕ್ಸಪೋರ್ಟ ಲಿಮಿಟೆಡ್',ದ ಪ್ರಮುಖರ ಕೂಡ ವಿಚಾರ–ವಿನಿಮಯ ಮಾಡಿ, ಕರಾರುಪತ್ರಗಳನ್ನು ಮಾಡಿ ಕೊಂಡು, ಕೈಕೊಂಡ ಕೆಲಸದಲ್ಲಿ ಯಶಸ್ವಿಗಳಾಗಿ ಮೂರು ತಿಂಗಳ ನಂತರ ಇಬ್ಬರೂ ಸ್ವದೇಶಕ್ಕೆ ಮರಳಿ ಬಂದರು.

ಈ ಸಹಕಾರದ ಫಲವೇ ಬೆಂಗಳೂರ, ಪುಣೆಗಳಲ್ಲಿ, ತಲೆಯೆತ್ತಿದ ಎರಡು ಹೊಸ ಕಾರಖಾನೆಗಳು. ಇವುಗಳಲ್ಲಿ ಬೆಂಗಳೂರ ಕಾರಖಾನೆಯಲ್ಲಿ, ಒಂದು ಸಾವಿರ ಕೆಲಸಗಾರರು ದುಡಿಯುತ್ತಿದ್ದು ಅಲ್ಲಿ ೨೫೦ ಹಾರ್ಸಪಾವರದ ವರೆಗಿನ ಇಲೆಕ್ಟ್ರಿಕ್ ಮೋಟಾರುಗಳೂ ೩೦೦೦ ಕೆ. ವ್ಹಿ. ಎ. ವರೆಗಿನ ಟ್ರಾನ್ಸಫಾರ್ಮರ್ಸ ಗಳು ಆಗುತ್ತವೆ. ಪುಣೆಯ ಕಾರಖಾನೆಯಲ್ಲಿ ೭೦೦ ಜನ ಕೆಲಸಗಾರರಿದ್ದು, ಅದ ರಲ್ಲಿ ೫, ೧೦, ೨೦, ೪೦ ಹಾರ್ಸ ಪಾವರಗಳ ೮೦೦ ಇಂಜಿನ್ನುಗಳು ತಿಂಗಳೊಂದಕ್ಕೆ ಸಿದ್ಧವಾಗುತ್ತಿವೆ. ಈ ಎರಡೂ ಕಾರಖಾನೆಗಳು, ಅವರ ಕ್ಷೇತ್ರದಲ್ಲಿಯೇ ಶ್ರೇಷ್ಠ ವಾಗಿವೆ. ಕಿರ್ಲೋಸ್ಕರವಾಡಿ ಕಾರಖಾನೆಯ ಪ್ರಗತಿಯು, ಆಗುತ್ತಲಿದ್ದು ಅದರಲ್ಲಿ ಉಳಿದ ಮಾಲುಗಳೊಡನೆ ಸೆಂಟ್ರಿಫ್ಯೂಗಲ್ ಪಂಪುಗಳೊಡನೆ ಸ್ಲೂಸವ್ಹಾಲ್ವಗಳ ಉತ್ಪಾದನೆಯೂ ದೊಡ್ಡ ಪ್ರಮಾಣದಿಂದ ಆಗುತ್ತಿರುವದು.

ಈ ಕಾರಖಾನೆಯ ಇತ್ತೀಚಿನ ಬಂಧುವೆಂದರೆ ಹಡಪಸರದ ಹತ್ತಿರ ಸ್ಥಾಪಿತವಾದ 'ಕಿರ್ಲೋಸ್ಕರ ನ್ಯೂಮಾಟೈಕ್ ಕಂಪನಿ ಲಿಮಿಟೆಡ್' ಎಂಬುದು. ಈ ಕಾರಖಾನೆಯಲ್ಲಿ ಏಅರ ಕಾಂಪ್ರೆಸರ ತಯಾರಾಗುತ್ತವೆ. ಲಕ್ಷ್ಮಣರಾಯರು ಹಚ್ಚಿದ ವೃಕ್ಷದ ಪ್ರತ್ಯಕ್ಷ ಶಾಖೆಗಳಿವು. ಅಲ್ಲದೆ ಅವರ ನೆರವಿನಿಂದುಂಟಾದ ಇನ್ನಿತರ ಕಾರಖಾನೆಗಳ ವಿವರಗಳು ಇಂತಿವೆ.

ಇದರಲ್ಲಿ ಓಗಲೆಯ ಕಾಜಿನ ಕಾರಖಾನೆಯು ಮೊದಲನೆಯದು. ಈ ಕಾರಖಾನೆಯ ಜನ್ಮ ಕಿರ್ಲೋಸ್ಕರವಾಡಿಯಲ್ಲಿಯೇ ಆಗಿದೆ ಎಂಬ ಸಂಗತಿಯನ್ನು ಬಹುಜನರು ಅರಿಯರು. ಓಗಲೇ ಬಂಧುಗಳಲ್ಲಿ ಎಲ್ಲಕ್ಕೂ ಹಿರಿಯರಾದ ಶ್ರೀ ಗುರುನಾಥರಾವ ಉರ್ಫ ನಾಗೂದಾದಾ ಇವರು, ೧೯೧೪ ರಲ್ಲಿ ಕಿರಲೋ-ಸ್ಕರ ಕಾರಖಾನೆಯಲ್ಲಿ ಇಂಜಿನಿಯರರೆಂದು ಕೆಲಸಕ್ಕೆ ಬಂದರು. ಅದೇ ಸುಮಾರಿಗೆ ಅವರ ಚಿಕ್ಕ ತಮ್ಮ ಶ್ರೀಪಾದರಾಯರು ತಳೇಗಾವದಲ್ಲಿಯ ಕಾಜಿನ ಶಾಲೆಯಲ್ಲಿ ತಮ್ಮ ಶಿಕ್ಷಣವನ್ನು ಮುಗಿಸಿ ಹೊರಬಿದ್ದರು. ಅವರು ಮುಂದಿನ ವಿಚಾರಕ್ಕಾಗಿ ಕಿರ್ಲೋಸ್ಕರವಾಡಿಗೆ ತಮ್ಮ ಬಂಧುಗಳ ಕಡೆಗೆ ಬಂದರು. ನಾಗೂದಾದಾ ಇವರು ಲಕ್ಷ್ಮಣರಾಯರಿಗೆ ಅವರ ಗಂಟು ಹಾಕಿಕೊಟ್ಟರು. ಲಕ್ಷ್ಮಣರಾಯರು ತಮ್ಮ ಪದ್ಧತಿಯ ಪ್ರಕಾರ "ನಿಮ್ಮ ಮನಸ್ಸಿನಲ್ಲಿ ಕಾಜಿನ ಕಾರಖಾನೆಯನ್ನು ತೆಗೆಯುವದಿದ್ದರೆ ನೀವು ಇದ್ದಲ್ಲಿಯೇ ಕೆಲಸ ಆರಂಭಿಸಿರಿ. ಸಾಕಷ್ಟು ನೆರವನ್ನೀಯಲು ನಾನು ಸಿದ್ಧನಿದ್ದೇನೆ" ಎಂದು ಹೇಳಿದರು. ಮರುದಿನವೇ ಶ್ರೀಪಾದರಾಯರು ಭಟ್ಟಿ ಕಟ್ಟಲು ಆರಂಭಿಸಿಯೇಬಿಟ್ಟರು. ೪-೫ ವರ್ಷಗಳಲ್ಲಿಯೇ ಆ ಕಾರಖಾನೆಯು ತಲೆಯೆತ್ತಿತು. ಆದರೆ ಮುಂದೆ ಎರಡೂ ಕಾರಖಾನೆಗಳ ಬೆಳವಣಿಗೆಗೆ, ಸ್ಥಳ ಸಾಲದೆಂದು ಕಂಡುಬಂದದ್ದರಿಂದ ಕಾಜಿನ ಕಾರಖಾನೆಯನ್ನು ಕರ್ಹಾಡ ಸ್ಟೇಶನ್ನದ ಹತ್ತಿರ ಔಂಧ ಸಂಸ್ಥಾನದ ಹದ್ದಿಗೆ ಸಾಗಿಸಲಾಯಿತು. ಅದೇ ಈ ಓಗಲೇವಾಡಿಯು. ಓಗಲೇ ಕಾಜಿನ ಕಾರಖಾನೆಯು ಕಳೆದ ೩೮ ವರ್ಷಗಳಲ್ಲಿ ಎಷ್ಟು ಭವ್ಯವಾಗಿದೆಂಬುದು ಎಲ್ಲರಿಗೂ ಗೊತ್ತಿದೆ. ಈ ಕಾರಖಾನೆಯಲ್ಲಿ ಕಾಜಿನ ಮಾಲಿನ ಸಂಗಡ ಪ್ರಭಾಕರ ಕಂದೀಲು, ಸೇಫ್ಟೀಸ್ಟೋ, ಎನಾಮಲಿನ ಪಾಟಿಗಳು, ಬಹಳ ದೊಡ್ಡ ಪ್ರಮಾಣದಲ್ಲಿ ಹುಟ್ಟುತ್ತವೆ. ಬೆಂಗಳೂರು, ಅಲವಾಯಿ (ಕೇರಳ), ನಾಗಪೂರಗಳಲ್ಲಿಯ ಕಾರಖಾನೆಗಳ ಉಗಮವೂ ಓಗಲೇವಾಡಿಯಿಂದಲೇ ಆಗಿರುತ್ತವೆ. ಇದರಂತೆಯೇ ಓಗಲೇವಾಡಿಯ ಕಾಗದದ ಕಾರಖಾನೆಯ ಶ್ರೀ ದಿಗಂಬರಪಂತ

ಓಗಲೆಯುವರೊಡನಿದ್ದು, ಕೊಲ್ಹಾಪುರದ ಒಬ್ಬ ಜಾಣ ತರುಣನು ಇವರ ಉತ್ತೇಜನದಿಂದಲೇ ಒಂದು ಯಾಂತ್ರಿಕ ಕಾರಖಾನೆಯನ್ನು ತೆರೆದನು. ಅದೂ ಈಗ ಪ್ರಸಿದ್ಧವಾಗಿದೆ. ಆ ತರುಣನ ಹೆಸರು ಎಮ್. ಡಿ. ಯಾದವ.

ಇನ್ನೊಂದು ಕಾರಖಾನೆಯ ಸಂಬಂಧವು ತೀರ ಸಮೀಪದ್ದು. ರಾಯರ ಅಕ್ಕಂದಿರಾದ ಬಟುಅಕ್ಕನ ಮೊಮ್ಮಗನಾದ ಪಂಡಿತ ಗಣಪತರಾಯನು ೧೯೩೬ರಲ್ಲಿ ಜರ್ಮನಿಯಿಂದ ರಸಾಯನ ಶಾಸ್ತ್ರದಲ್ಲಿ ಪಿ. ಎಚ್. ಡಿ. ಪದವಿ ಪಡೆದುಕೊಂಡು ಬಂದನು. 'ಅವನಿಗೆ ಸರಕಾರಿ ಕೆಲಸ ಸಹಜವಾಗಿ ಸಿಗಬಹುದಿತ್ತು. ಆದರೆ ಸ್ವತಂತಂತ್ರ ಉದ್ಯೋಗ ಮಾಡುವ ಇಚ್ಛೆ ಅವನಿಗೆ. ಲಕ್ಷ್ಮಣ ರಾಯರ ನೆರವಿನಿಂದ ಮೊದಲು 'ಫಾರ್ಮಲ್ ಡಿಹಾಯಿಡ' ಮಾಡಲು ಯಂತ್ರ ಗಳನ್ನು ಹಾಕಿದನು. ಆದರೆ ಅವನ ಮಾಲು ಪೇಟಿಗೆ ಬಂದೊಡನೆಯೇ ಪರದೇಶಿ ಕಂಪನಿಗಳು ೧೨ ಆಣೆಗೆ ಪೌಂಡು ಸಿಗುವ ಮಾಲನ್ನು ೨ ಆಣೆಗೆ ಪೌಂಡು ಮಾರತೊಡಗಿದವು. ಇದರಿಂದ ಡಾ. ಪಂಡಿತರಿಗೆ ಸಂಸ್ಥೆಯನ್ನು ಮುಚ್ಚಬೇಕಾಯಿತು. ಇದರಲ್ಲಿ ಲಕ್ಷ್ಮಣರಾಯರ ೨೫ ಸಾವಿರ ರೂಪಾಯಿ ಗಳು ಮುಳುಗಿದವು. ನಂತರ ಪಂಡಿತರು ಬಣ್ಣದ ಕಾರಖಾನೆಯನ್ನು ತೆರೆಯಲು ನಿಶ್ಚಯಿಸಿ, ೧೯೩೪ರಲ್ಲಿ ಪ್ರಾರಂಭಮಾಡಿ 'ಲಕಾಕಿ' ಡಿಸ್ಟೆಂಪರ ಹಾಗೂ ಪೇಂಟ್ಸಗಳನ್ನು ಪೇಟೆಗೆ ತಂದರು. ಈ ಕಾರಖಾನೆಯನ್ನು ೧೯೪೪ರಲ್ಲಿ ಲೋಣಾವಳಕ್ಕೆ ಸಾಗಿಸಲಾಯಿತು. 'ದಿ. ಲಕಾಕಿ ವರ್ಕ್ಸ ಲಿಮಿಟೆಡ್' ಎಂಬ ಹೆಸರಿನಿಂದ ಅದು ನಡೆದಿದೆ. ಲಕ್ಷ್ಮಣರಾಯರ ಸಹಾಯದ ನಿದರ್ಶನವೆಂದು ಅದಕ್ಕೆ 'ಲಕಾಕಿ' ಎಂಬ ಹೆಸರಿಟ್ಟಿರುವದು ಮೇಲೆಯೇ ಕಾಣುತ್ತದೆ.

ಟಿಕೇಕರವಾಡಿಯಲ್ಲಿ ಶಿವಾಜಿ ವರ್ಕ್ಸ ಲಿ. ಎಂಬ ಕಾರಖಾನೆಯನ್ನು ಲಕ್ಷ್ಮಣರಾಯರ ಹಿರಿಯ ಬಂಧು ಡಾ। ವಾಸುದೇವರಾಯರು ಸೊಲ್ಲಾಪುರ ದಲ್ಲಿ ೧೯೦೦ನೇ ಇಸ್ವಿಯಲ್ಲಿ ಸ್ಥಾಪಿಸಿದ್ದರು. ಅದರಲ್ಲಿ ಮೊದಲು ಕುಡಿಯುವ ನೀರಿನ ಫಿಲ್ಟರ, ನೀರುಕಾಸುವ ಬಾಯಲರ, ಇದ್ದಲಿ ಒಲೆಗಳು, ತಯಾರ ಆಗ ಹತ್ತಿದವು. ಬಂಡವಲಿನ ಕೊರತೆ ಹಾಗು ಉಳಿದ ತೊಂದರೆಗಳ ಮೂಲಕ ಈ ಕಾರಖಾನೆಯ ಯೋಗ್ಯ ಬೆಳವಣಿಗೆಯಾಗಲಿಲ್ಲ. ಕಿರ್ಲೋಸ್ಕರ ಕಾರಖಾನೆಯ ಸಹಕಾರ ದೊರಕಿದಂದಿನಿಂದ, ಅದರಲ್ಲಿ ಸರ್ವ ವಿಧದ ಪ್ರಗತಿಯು ಆಗ ಹತ್ತಿರುವದು. ಈ ಕಾರಖಾನೆಯಲ್ಲಿ ಸಧ್ಯಕ್ಕೆ ೩೦೦ ಜನ ದುಡಿಯುತ್ತಿರುವರು.

ಭಾವುರಾವ ಪಾಟೀಲರು ಕಿರ್ಲೋಸ್ಕರವಾಡಿಯ ಸಸಿಯೊಂದನ್ನು

ಒಯ್ದು ಸಾತಾರೆಯಲ್ಲಿ ಊರಿದರೆಂದು, ಈ ಹಿಂದೆ ಹೇಳಿದ್ದೇವಷ್ಟೆ! ಆ ಸಸಿಯು ಅಲ್ಲಿಯ ಹವೆಯು ಅದಕ್ಕೆ ಮಾನಿಸಿ, ಭರದಿಂದ ಬೆಳೆದು ಬೇರು ಬಿಟ್ಟಿತು. ಅದಕ್ಕೆ ಉದ್ಯೋಗಪತಿಗಳಾದ ಕೈ. ವಾಲಚಂದ ಹೀರಾಚಂದರ ನೆರವು ದೊರೆತು ಇಂದು ಮಹಾರಾಷ್ಟ್ರದಲ್ಲಿ "ಕೂಪರ ಇಂಜನಿಯರಿಂಗ ಲಿ." ಎಂದು ಖ್ಯಾತಿ ಗೊಂಡಿದೆ.

ನಾವು ಸ್ವಲ್ಪ ಚಿಕಿತ್ಸಕದೃಷ್ಟಿಯಿಂದ ನೋಡಿದರೆ ಮಹಾರಾಷ್ಟ್ರ ಹಾಗು ಕರ್ನಾಟಕದಲ್ಲಿ ಚಿಕ್ಕ ಹಾಗು ಮಧ್ಯಮ ತರಗತಿಯ ಅನೇಕ ಕಾರಖಾನೆಗಳಿಗೆ ಲಕ್ಷ್ಮಣರಾಯರು ನೆರವು ನೀಡಿದ ಕೃತಜ್ಞತೆಯ ಉದ್ಗಾರಗಳು ಕೇಳ ಬರುತ್ತಿವೆ.

ಬೆಳಗಾವಿಯ 'ಜಕ್ಸ' ಕಾರಖಾನೆಯ ಶ್ರೀ ಬಾಬೂರಾವ ಪುಸಾಳಕರರ ಉದ್ಗಾರಗಳು: "ನನ್ನ ಮೋಟಾರ ಸರ್ವ್ಹಿಸ ಇದ್ದುದರಿಂದ ಕೆರೋಸಿನದಿಂದ ನಡೆಯುವ ಕಾರ್ಬ್ಯುರೇಟರ ಮಾಡುವ ಇಚ್ಛೆ ನನಗಾಯಿತು. ಆದರೆ ಪ್ರಯೋಗ ಮಾಡಲು ಸಾಧನಗಳೆಲ್ಲಿ? ಪಪ್ಪಾರವರು ಇದಕ್ಕೆ ಕಿರ್ಲೋಸ್ಕರ ವಾಡಿಯಲ್ಲಿ ಪೂರ್ಣ ನೆರವನ್ನಿತ್ತರು. ಅದರ ಬಗ್ಗೆ ನನ್ನಿಂದ ಏನೂ ತೆಗೆದು ಕೊಳ್ಳಲಿಲ್ಲ. ನಾನೀಗ ಸ್ವತಃ ಕಾರಖಾನೆದಾರನಿರುವದರಿಂದ ಲಕ್ಷ್ಮಣರಾಯ ರಿಂದ ದೊರೆತ ಸಹಾಯ ಹಾಗು ಪ್ರೋತ್ಸಾಹಗಳ ಬೆಲೆ ಎಷ್ಟು ಅಮೌಲ್ಯ ವಾದುದೆಂಬುದನ್ನು ನಾನು ಬಲ್ಲೆ".

ಬೆಳಗಾಂವಿಯಿಂದ ಸಂಕೇಶ್ವರಕ್ಕೆ ನಡೆಯಿರಿ. ಅಲ್ಲಿ ನಿಮಗೆ 'ಭಾರತ ಮೆಟಲ್ ವರ್ಕ್ಸ' ಎಂದು ಫಲಕ ಕಾಣುವದು. ಅದರೊಳಗೆ ಇಣಿಕಿ ನೋಡಿದರೆ ಅಲ್ಲಿ ಐದು ಲೇಥಗಳು, ಎರಡು ಶೇಪಿಂಗಮಶಿನ್ಸ್, ಒಂದು ಡ್ರಿಲಿಂಗಮಶಿನ್ ಇತ್ಯಾದಿ ಯಂತ್ರಗಳು ವಿದ್ಯುತ್ತಿನ ಮೇಲಿಂದ ನಡೆಯುತ್ತಿದ್ದು ೨೦ ಮಂದಿ ಕೆಲಸಗಾರರು ಯಂತ್ರದ ಬೇರೆ ಬೇರೆ ಭಾಗಗಳನ್ನು ನಿರ್ಮಾಣ ಮಾಡುತ್ತಿರು ವದು ಕಾಣುವದು. ಈ ಕಾರಖಾನೆಯ ಒಡೆಯನ ಹೆಸರು ತುಕಾರಾಮ ವಿಠೋಬಾ ಸುತಾರ ಎಂದಿದೆ. ಆತನ ಶಿಕ್ಷಣ ಅತಿ ಸ್ವಲ್ಪ, ಬಡತನವು ಹೆಚ್ಚು. "ನೀವು ಕಾರಖಾನೆದಾರರು ಹೇಗೆ ಆದಿರಿ" ಎಂದು ಕೇಳಲು ಅವರು "ನಾನು ೧೯೩೨ರಲ್ಲಿ ಕಿರ್ಲೋಸ್ಕರ ಕಾರಖಾನೆಯಲ್ಲಿ ಫಿಟರ್ ಎಂದು ಕೆಲಸಕ್ಕೆ ನಿಂತೆ. ನನ್ನ ಉತ್ತಮ ಕೆಲಸ ನೋಡಿ, ಶಂಭುರಾಯರು ನನ್ನನ್ನು ಹರಿಹರಕ್ಕೆ ಕರೆದೊಯ್ದರು. ಅಲ್ಲಿ ೧೯೪೦ ರ ವರೆಗೆ ಸುಪರವಾಯಿಜರ ಹುದ್ದೆಯ ವರೆಗೆ ಏರಿದೆ. ಮುಂದೆ ನಾನು ಸ್ವತಃ ಒಂದು ಸಣ್ಣ ಕಾರಖಾನೆಯನ್ನು ತೆಗೆಯಬೇಕೆಂದು ರಾಜಾರಾಮ

ಬಾಪೂ, ಹಾಗು ಅಣ್ಣಾ ಜಾಂಭೇಕರರನ್ನು ಕೇಳಿದೆ. ಅವರು ಎಲ್ಲ ಬಗೆಯಿಂದ ಸಹಾಯ ಮಾಡಿದರು. ಅಲ್ಲಿಂದ ಇಲ್ಲಿಗೆ ಬಂದು, ಎರಡು ಲೇಥ್ಸುಗಳ ಮೇಲೆ ಇದನ್ನು ಆರಂಭಿಸಿದೆನು. ಹರಿಹರ ಕಾರಖಾನೆಯಿಂದ ನಮಗೆ ಕೆಲಸ ಸಿಗಹತ್ತಿತು. ಹೀಗೆ ನಮ್ಮ ಕಾರಖಾನೆಯು ಬೆಳೆದಿರುವದು. ಅರ್ಥಾತ್ ಈ ಕಾರ್ಯದಲ್ಲಿ ನಿಮ್ಮ ಗುರುಗಳು ಯಾರೆಂದು ಕೇಳಿದರೆ, ಲಕ್ಷ್ಮಣರಾಯರೆಂದೇ ಹೇಳುತ್ತಿದ್ದೇನೆ. ನನಗೆ ಅವರಿಂದ ಅಸಂಖ್ಯ ಉಪಕಾರಗಳು ಆಗಿರುತ್ತವೆ."

ವಿಶ್ರಾಮಬಾಗ ಕಾರಖಾನೆಯ ದಾದೂ ಕುಡಚಿಕರರ ಸಂಗತಿಯೂ ಹೀಗೆ ಇದೆ. ಇವನು ೧೯೩೩ ರಲ್ಲಿ ವಾಡಿಗೆ ಬಂದನು. ಮೊದಲು ಅವನಿಗೆ ರಂಟೆಯ 'ಪಿನ್‌ಟರ್ನರ' ಕೆಲಸ ಕೊಟ್ಟಿತು. ಬೇರೆ ಬೇರೆ ಕೆಲಸ ಮಾಡುತ್ತ ಯಾಂತ್ರಿಕ ಜ್ಞಾನವನ್ನು ಪಡೆದು "ನ್ಯೂ ವಿಜಯ ಇಂಡಸ್ಟ್ರೀಜ" ಎಂಬ ರಂಟೆ, ಪಂಪು ಹಾಗು ಇಂಜನಗಳನ್ನು ಮಾಡುವ ಕಾರಖಾನೆಯನ್ನು ಅವನು ತೆಗೆದನು. ೪೫ ಜನರು ಕಾರಖಾನೆಯಲ್ಲಿ ಕಾರ್ಯಮಾಡುತ್ತಿದ್ದಾರೆ.

ಕೊಲ್ಹಾಪುರದ ಆಯಿಲ್ ಇಂಜಿನ್ಸ ಮಾಡುವ 'ಪಕೊ' ಎಂಬ ಕಾರಖಾನೆಯ ಹೆಸರು ಸರ್ವರ ಪರಿಚಯದ್ದಾಗಿದೆ. ಶ್ರೀ ಶಂಕರರಾವ ಕೋಠಾವಳೆ ಇವರು ಈ ಕಾರಖಾನೆಯ ಚಾಲಕರಲ್ಲಿ ಒಬ್ಬರು. ರಾಯರ ವಿಷಯದಲ್ಲಿ ಅವರ ಉದ್ಗಾರಗಳು ಹೀಗಿವೆ "ಇಂಥ ಭಾಗ್ಯವಾನ್ ಪುರುಷನ ಕೈಯಲ್ಲಿ ೪ ವರ್ಷ ಕೆಲಸ ಮಾಡುವ ಸಂಧಿಯನ್ನು ಪರಮೇಶ್ವರನು ನನಗೆ ಒದಗಿಸಿ ಕೊಟ್ಟನು. ಆದರಿಂದ ನಾನು ಈ ಹೊತ್ತು, ಇಷ್ಟು ಊರ್ಜಿತಾವಸ್ಥೆಗೆ ಬಂದು ಮುಟ್ಟಿರುತ್ತೇನೆ. ನನ್ನಂತೆ ಅವರ ಕೃಪಾಲಾಭ ಪಡೆದ ಎಷ್ಟೋ ಜನರು ಇರುತ್ತಾರೆ. ಅವರೆಲ್ಲರೂ ದಿನಾಲು ಕಾರಖಾನೆಗೆ ಬಂದು, ಲಕ್ಷ್ಮಣರಾಯರ ನಾಮಸ್ಮರಣೆಯನ್ನು ಮಾಡಿ ಕೆಲಸ ಆರಂಭಿಸುವರು".

ಶ್ರೀ ಕೋಠಾವಳೆಯವರ ಮಾತಿನಲ್ಲಿ ಅತಿಶಯೋಕ್ತಿ ಇರುವದಿಲ್ಲ. ಲಕ್ಷ್ಮಣರಾಯರ ಹೆಸರನ್ನು ತೆಗೆದುಕೊಳ್ಳುವವರು, ಮಹಾರಾಷ್ಟ್ರದ ಹೊರಗೂ ಇದ್ದಾರೆ. ಮೋಟೇಬೆನ್ನೂರಿನಲ್ಲಿ ಬಸಪ್ಪ ಹಾವನೂರ ಎಂಬವರು ಇದ್ದಾರೆ. ಇವರ ಮುಖ್ಯ ವ್ಯವಸಾಯ ಒಕ್ಕಲುತನ. ಅವರಿಗೆ ಇಂಗ್ರೇಜಿಯ ಗಂಧ ಕೂಡ ಇಲ್ಲ. ಆದರೆ ಯಾಂತ್ರಿಕ ಪ್ರೀತಿಯು ಮಾತ್ರ ಬಹಳ. ಹರಿಹರದ ಕಾರಖಾನೆಯು ಪ್ರಾರಂಭವಾದಮೇಲೆ ವಾರಕ್ಕೆ ಎರಡು ಮೂರಾವರ್ತಿ ಬಸಪ್ಪನು ಕಾರಖಾನೆಗೆ ಬಂದು ಅಲ್ಲ ನಡೆಯುತ್ತಲಿರುವ ಯಂತ್ರಗಳನ್ನು

ನೋಡುವದರಲ್ಲಿ ತಾಸುಗಟ್ಟಲೆ ವೇಳೆಯನ್ನು ಕಳೆಯುತ್ತಿದ್ದನು. ಲಕ್ಷ್ಮಣ ರಾಯರು ಇದ್ದರೆಂದರೆ, ಅವರಿಗೆ ಭೆಟ್ಟಿಯಾಗಿ ಅವರ ಮಾತು ಕೇಳುತ್ತ ಕೂಡುತ್ತಿದ್ದನು.

ಒಂದು ದಿವಸ ಅವನು ಲಕ್ಷ್ಮಣರಾಯರಿಗೆ "ನಿಮ್ಮ ಮುಂದೆ ಹೇಗೆ ಮಾತಾಡಬೇಕು, ಎಂಬುದು ನನಗೆ ತಿಳಿಯುವದಿಲ್ಲ; ಆದರೆ ಒಂದು ಮಾತು ವಿಚಾರಿಸಬೇಕೆಂದು ಬಹಳ ಅಪೇಕ್ಷೆಯಿದೆ" ಎಂದನು.

ಆಗ ಲಕ್ಷ್ಮಣರಾಯರು "ಹೇಳಿರಿ, ನಿಮ್ಮ ಮನಸ್ಸಿನಲ್ಲಿರುವದನ್ನು" ಎಂದರು. ಬಸಪ್ಪನು ಸಂಕೋಚ ಪಡುತ್ತ "ಒಂದು ವರ್ಕಶಾಪ ತೆಗೆಯ ಬೇಕೆಂದು ಮಾಡಿರುವೆನು" ಎಂದನು. ಅದಕ್ಕೆ "ತೆಗೆಯಿರಿ; ನಿಮಗೆ ಜಡವೆನಿ ಸುವದು ಏನಿರುವದು ಅದರಲ್ಲಿ" ಎಂದರು ಲಕ್ಷ್ಮಣರಾಯರು.

ಲಕ್ಷ್ಮಣರಾಯರ ಆಶ್ವಾಸನದಂತೆ ಬಸಪ್ಪನು ಲೇಥ ತೆಗೆದುಕೊಂಡು ತನ್ನ ಹಳ್ಳಿಗೆ ಹೋಗಿ, ಕೆಲಸಕ್ಕೆ ಆರಂಭಿಸಿದನು. ಆತನ ವರ್ಕ್ಸಶಾಪ ಈಗ ಉತ್ತಮವಾಗಿ ನಡೆದಿದ್ದು, ಅವನ ಮಕ್ಕಳು ಅದರಲ್ಲಿ ತರಬೇತಿಯುಳ್ಳವ ರಾಗಿದ್ದಾರೆ. ಇವರ ಜೀವನ ಉತ್ತಮವಾಗಿ ಸಾಗಿದೆ.

ಒಬ್ಬ ಕಲಿಯದ ಅಶಿಕ್ಷಿತನಿಗೆ ಯಾಂತ್ರಿಕ ಕ್ಷೇತ್ರದಲ್ಲಿ ಮುಂದೆ ಬರಲು ಸಂಧಿ ದೊರೆಯುತ್ತಿರುವಾಗ ಕಲಿತ ಇಂಜಿನಿಯರನು ಖಂಡಿತವಾಗಿ ಅವರಿಗಿಂತ ದೊಡ್ಡ ಕೆಲಸವನ್ನು ಮಾಡಬಲ್ಲನು. ಇದಕ್ಕೆ ಸೋನಾಳ್ಕರರೇ ಸಾಕ್ಷಿ.

ಶ್ರೀ ಸೋನಾಳ್ಕರರು ಇಂಜಿನಿಯರಿಂಗ ಕಾಲೇಜಿನಲ್ಲಿ ಪದವಿಯನ್ನು ಪಡೆದು, ಮೊದಲು ಕಿರ್ಲೋಸ್ಕರ ಕಾರಖಾನೆಯಲ್ಲಿ ನೌಕರಿ ಹಿಡಿದರು. ಆ ಮೇಲೆ ಹರಿಹರಕ್ಕೆ ಹೋದರು. ಅವರಿಗೆ ಸ್ವತಂತ್ರ ಉದ್ಯೋಗ ಮಾಡ ಬೇಕೆಂದು ಇಚ್ಛೆ. ತನ್ನ ಈ ಮನೀಷೆಯನ್ನು ಲಕ್ಷ್ಮಣರಾಯರಿಗೆ ತಿಳಿಸಿದೊಡನೆ ಶಂಭುರಾಯರು ಅವರಿಗೆ ಶಾಬ್ದಿಕವಷ್ಟೇ ಅಲ್ಲ, ಆವಶ್ಯಕ ಸಹಾಯವನ್ನೂ ಮಾಡಿದರು. ಇದರಿಂದ ಸೋನಾಳಕರರು ೭–೮ ವರ್ಷಗಳ ಹಿಂದೆ ಒಂದು ಲೇಥದ ಮೇಲೆ ೪–೫ ಜನರ ಕೆಲಸಗಾರರ ಸಂಗಡ ಕೆಲಸ ಆರಂಭಿಸಿದರು. ಇಂದು ಈ ಕಾರಖಾನೆಯಲ್ಲಿ ೧೦೦ ಕೆಲಸಗಾರರು ಇದ್ದು, ಯಂತ್ರಸಾಮುಗ್ರಿ- ಗಳೂ ಲೇಥಕ್ಕೆ ಬೇಕಾಗುವ ಚೆಕ್ಸಗಳೂ ಸಿದ್ಧವಾಗುತ್ತಲಿವೆ.

ಕಿರ್ಲೋಸ್ಕರಕಾರಖಾನೆಯಲ್ಲಿಯ ಕೆಲಸಗಾರ ಶ್ರೀ ವೆಂಕಪ್ಪ ಸುತಾರ,

ಶ್ರೀ ರಾಮುಭಾವೂ ಸಾವಂತ, ಶ್ರೀ ಆಯ್. ಜಿ. ಚಿಂಚಣೀಕರ ಇವರು ಆರಂಭ ಮಾಡಿದ ಹರಿಹರದ ವರ್ಕ್ಸಶಾಪಗಳ ಸಂಗತಿಯೂ ಇದೇ ರೀತಿಯಾಗಿದೆ.

ಕೊಲ್ಹಾಪುರದ, ಉದ್ಯಮ ನಗರದಲ್ಲಿ, ವರ್ಕ್ಸಶಾಪ್ ತೆಗೆದ ಇಬ್ಬರು ಸಣ್ಣ ಕಾರಖಾನೆದಾರರು ಶ್ರೀ ಮೀರಾಸಾಹೇಬ ಹುದಲಿ, ಶ್ರೀ ಮಾಧವರಾವ ಕರಜಗಾರ ಇವರಿಬ್ಬರೂ ಕಿರ್ಲೋಸ್ಕರ ಕಾರಖಾನೆಯಲ್ಲಿ ೧೯೩೦–೩೨ ರಲ್ಲಿ ಟರ್ನರರೆಂದು ಕೆಲಸಕ್ಕೆ ಬಂದರು. ಇವರಲ್ಲಿ ಮೀರಾಸಾಹೇಬನ ವರ್ಕ್ಸಶಾಪ ದಲ್ಲಿ ಆರು ಜನ ಕೆಲಸಗಾರರಿದ್ದು, ದೊಡ್ಡ ಕಾರಖಾನೆಯಲ್ಲಿ ತಯಾರಾಗುವ ಹಾರಿಝೊಂಟಲ್ ಇಂಜನಗಳ ಕನೆಕ್ಟಿಂಗ್ ರ್‍ಯಾಡಸ್ ಮತ್ತು ಬಿಡಿ ಭಾಗಗಳು ತಯಾರ ಆಗುತ್ತವೆ. ಕರಜಗಾರ ಇವರ ಕಾರಖಾನೆಯಲ್ಲಿ ೪೮ ಮಂದಿ ಕೆಲಸ ಗಾರರಿದ್ದು ಸ್ವತಃ ಡೀಝಲ್ ಇಂಜಿನ್ ಮಾಡುತ್ತಾರೆ. ಅವರು ದೊರಕಿಸಿದ ಈ ಯಶಸ್ಸು ಪ್ರಶಂಸನೀಯವಿದೆ. ಅವರು "ಕಿರ್ಲೋಸ್ಕರ ಕಾರಖಾನೆಯಲ್ಲಿ ನಾನು ಸುಮಾರಾಗಿ ೮–೧೦ ವರ್ಷ ಕೆಲಸ ಮಾಡಿದೆ. ಈ ಅವಧಿಯಲ್ಲಿ ಟರ್ನಿಂಗ, ಫಿಟಿಂಗ, ಅಸೆಂಬ್ಲಿಂಗ ಇವುಗಳ ಬಗೆಗೆ ನನಗೆ ದೊರೆತ ಅನುಭವವು ಪ್ರತಿ ಹೆಜ್ಜೆ ಹೆಜ್ಜೆಗೆ ಉಪಯೋಗ ಬೀಳುವದು. ಅದನ್ನು ಶಬ್ದದಿಂದ ವರ್ಣನೆ ಮಾಡಿ ಹೇಳುವದು ಆಗದ ಮಾತು." ಎಂದು ಹೇಳುವರು.

ಹೀಗೆ ಕಿರ್ಲೋಸ್ಕರರಿಂದ, ಸ್ಫೂರ್ತಿ ಪಡೆದ ಕಾರಖಾನೆದಾರರ ಯಾದಿ ಯನ್ನು ಮಾಡಿದರೆ, ಅದು ೩೫ ಕ್ಕೂ ಮಿಕ್ಕುವದು. ವಿಸ್ತಾರ ಭಯದಿಂದ ಅದರಲ್ಲಿಯ ಎರಡು ಅನುಭವಗಳನ್ನಷ್ಟೇ ಇಲ್ಲಿ ವಿವರಿಸುವೆವು.

ಶ್ರೀ ಶಿರೋಡಕರ ಕೆ. ಬಿ. ಯವರ ಅನುಭವ—

"ನಾನು ಮೂಲತಃ ಗೋವಾ ಪ್ರಾಂತದ ಒಬ್ಬ ಒಕ್ಕಲಿಗನ ಮಗ. ಮನೆ ತನದ ಬಡತನದಿಂದ ನೌಕರಿಗಾಗಿ ಪುಣೆಗೆ ಬಂದೆನು. ಆದರೆ ನೌಕರಿಯು ಸಿಗುವ ಲಕ್ಷಣ ತೋರಲಿಲ್ಲ. ಇಂಥ ಸ್ಥಿತಿಯಲ್ಲಿ ರಸ್ತೆಗುಂಟ ಹತಾಶನಾಗಿ ತಿರುಗು ತ್ತಿರುವಾಗ ಒಂದು ಸ್ಥಳದಲ್ಲಿ ಒಂದು ದೊಡ್ಡ ಕಾರಖಾನೆ ಕಟ್ಟುವ ಕೆಲಸವು ನನ್ನ ಕಣ್ಣಿಗೆ ಬಿತ್ತು. ಅದರಲ್ಲಿ ಸುದೈವದಿಂದ ಬಡಿಗನೆಂದು ೧–೮–೦ ಯ ದಿನಗೂಲಿಯ ಕೆಲಸ ಸಿಕ್ಕಿತು. ಅದು ಕಿರ್ಲೋಸ್ಕರ ಆಯಿಲ್ ಇಂಜಿನ್ ಕಾರಖಾನೆಯಾಗಿತ್ತು. ಕೆಲಸ ಮಾಡುತ್ತಿರುವ ಸಮಯದಲ್ಲಿ ಲಕ್ಷ್ಮಣರಾಯರ ದೃಷ್ಟಿಯು ನನ್ನ ಮೇಲೆ ಬಿದ್ದಿತು. ಅವರು ತಮ್ಮ ಹೊಲದಲ್ಲಿ ಬಡಿಗತನದ

ಕೆಲಸಕ್ಕೆ ನನ್ನನ್ನು ತೆಗೆದುಕೊಂಡರು. ಕಾರಖಾನೆ ಆರಂಭವಾಗಿ ಇಂಜಿನುಗಳು ಹೊರಬೀಳಹತ್ತಿದವು. ಆಗ ಪಪ್ಪಾರ ಸೂಚನೆಯಂತೆ ನಾನು ಮಾಡಿದ 'ಪ್ಯಾಕಿಂಗ ಕೇಸ' ಅವರ ಮನಸ್ಸಿಗೆ ಬಂದು ಕಾರಖಾನೆಯಲ್ಲಿ ಪ್ಯಾಕಿಂಗ ಕೆಲಸದ ಬಡಿಗನೆಂದು ನನಗೆ ಕೆಲಸ ಸಿಕ್ಕಿತು. ಅಲ್ಲಿ ಮೆಲ್ಲ ಮೆಲ್ಲನೆ ಪ್ರತಿ ದಿವಸ ೨೫ ಇಂಜಿನ ತಯಾರಾಗಹತ್ತಿದವು. ಆಗ ನನ್ನ ಕಡೆಗೆ ಪ್ಯಾಕಿಂಗ ಡಿಪಾರ್ಟ ಮೆಂಟೇ ಒಪ್ಪಿಸಲ್ಪಟ್ಟಿತು.

"ಒಂದು ದಿವಸ ನಾನು ಕೆಲಸ ಮುಗಿಸಿ ಮನೆಗೆ ಹೊರಟಾಗ, ಪಪ್ಪಾರು ಕೂಗಿದುದು ಕೇಳಿಸಿತು. ಅವರು ತಮ್ಮ ಹೊಲದ ಒಡ್ಡಿನ ಮೇಲೆ ನಿಂತಿದ್ದರು. ಸಮೀಪಕ್ಕೆ ಹೋದ ಬಳಿಕ, ಅವರು ಸ್ವತಃ ಹಚ್ಚಿದ ಬದನೆಕಾಯಿಗಳನ್ನು ಪಲ್ಲೆಗಾಗಿ ಕೊಟ್ಟರು. ನನ್ನ ಮೇಲಿನ ಅವರ ಈ ಪ್ರೇಮವನ್ನು ನೋಡಿ ನನಗೆ ಎಷ್ಟು ಆನಂದವಾಯಿತೆಂಬುದು ನನಗೇ ಗೊತ್ತು."

ಅವರ ಕೂಡ ಮಾತನಾಡಲು ನಿರ್ಭಯವೆನಿಸಿದ ಬಳಿಕ ಒಂದು ದಿವಸ " ಕಾರಖಾನೆಗೆ ಹತ್ತುವ ಪೆಟ್ಟಿಗೆಗಳನ್ನು ನಾನು ಸ್ವತಃ ಮಾಡಿದರೆ ನಡೆಯ ಬಹುದೇ ? " ಎಂದು ವಿಚಾರಿಸಿದೆ. ಆಗ ಅವರು ನನ್ನ ಬೆನ್ನು ಚಪ್ಪರಿಸಿ ನೀನು ಅವಶ್ಯವಾಗಿ ಪ್ರಯತ್ನಿಸು. ದೇವರು ನಿನಗೆ ಯಶ ಕೊಡುವನು " ಎಂದರು. ಅವರ ಆಶೀರ್ವಾದದ ಪ್ರತ್ಯಕ್ಷ ಫಲವೆಂದರೆ, ೨೫–೬. ಸೋಮವಾರ ಪೇಟ ಪುಣೆ–೨ "ಶಿರೋಡಕರ ಮತ್ತು ಕಂಪನಿ" ಎಂಬ ಹೆಸರಿನಿಂದ ಆರಂಭಿಸಿದ ನನ್ನ ಕಾರಖಾನೆಯು. ಅದರಲ್ಲಿ ಮೂರು ಬ್ಯಾಡ್ ಸಾ ಮಶಿನ್ನುಗಳು ಇದ್ದು ೩೦ ಜನರು ಕೆಲಸ ಮಾಡುತ್ತಾರೆ. ನನ್ನ ಉದ್ಯೋಗದ ಕ್ಷೇತ್ರ ದಿನದಿನಕ್ಕೆ ಬೆಳೆಯುತ್ತಿರುವದು. ಆದರೆ ಇದೆಲ್ಲ ಉತ್ಕರ್ಷವು, ವಿಶಾಲ ಅಂತಃಕರಣದ ಪಪ್ಪಾನ ಕೃಪೆಯಿಂದ ಒದಗಿ ಬಂದಿರುವದು. ಅವರ ಗುಣವನ್ನು ಎಷ್ಟು ಹೊಗಳಿದರೂ ಅದು ಕಡಿಮೆಯೇ." ಎಂದು ಶಿರೋಡಕರರು ಕೃತಜ್ಞತೆ ವ್ಯಕ್ತಪಡಿಸಿರುವರು.

ಎರಡನೆಯದು ಹರಿ ವಾಸುದೇವ ನಗರಕರರ ಹೇಳಿಕೆ—"೧೯೫೧ ರಲ್ಲಿ ಪುಣೆ ಕಾರಖಾನೆಯಲ್ಲಿ ಟೂಲ ರೂಮುದಲ್ಲಿ ಒಬ್ಬ ಸಾದಾ ಫಿಟರ್ ನೆಂದು ನಾನು ಕೆಲಸ ಆರಂಭಮಾಡಿದೆನು. ಆ ಕಾಲಕ್ಕೆ ಪಪ್ಪಾಅವರು ಒಂದು ಯಾಂತ್ರಿಕ 'ಘಾಬರ, ಮಾಡುವ ಪ್ರಯತ್ನದಲ್ಲಿದ್ದರು. ಅದರಲ್ಲಿ ನಾನೂ ನನ್ನ ಸಹಕಾರಿಯೂ ಕೂಡಿ ಅವರ ಕಲ್ಪನೆಯಂತೆ ಆ ಕೆಲಸವನ್ನು ಪೂರೈಸಿದೆವು."

"ಈ ಕಾರಖಾನೆಯಲ್ಲಿ ನನಗೆ ಬಹಳ ಅನುಭವ ಬಂದಿತು. ನನ್ನ ಕೆಲಸವು ಪಪ್ಪಾಅವರ ಲಕ್ಷ್ಯದಲ್ಲಿ ಬಂದೊಡನೆಯೇ ಅವರು ಸ್ವತಂತ್ರ ವರ್ಕ್ಸ್ ಶಾಪ್ ತೆಗೆಯಲು ನನಗೆ ಉತ್ತೇಜನ ಕೊಟ್ಟರು. ಮತ್ತು ಹರಿಹರದಿಂದ ಒಂದು ಲೇಥ ದೊರಕಿಸಿ ಕೊಟ್ಟರು. ಅದರ ಜೊತೆಗೆ ಮತ್ತೆ ಕೆಲವು ಯಂತ್ರಗಳನ್ನು ಕೂಡಿಸಿ ಪುಣೆಯಲ್ಲಿ ೫೯೮ ಕಸಬಾಪೇಟೆಯಲ್ಲಿ ನನ್ನ ಕಾರಖಾನೆಯನ್ನು ಸ್ಥಾಪನೆ ಮಾಡಿದೆ. ಅದರಲ್ಲಿ ಐದು ಜನ ಗಂಡಸರು, ನಾಲ್ಕುಜನ ಹೆಂಗಸರು ಕೆಲಸ ಮಾಡುತ್ತಾರೆ. ಹೆಂಗಸರಿಗೆ ಕಾರಖಾನೆಯಲ್ಲಿ ಕೆಲಸಕೊಡುವ ಕಲ್ಪನೆಯನ್ನು ಸೌ|| ಯಮೂತಾಯಿ ಕಿರ್ಲೋಸ್ಕರರವರು ನನಗೆ ಸೂಚಿಸಿದ್ದರು. ಈ ಕಾರಖಾನೆಯಲ್ಲಿ ರೇಡಿಯೇಟರ ಅಸೆಂಬ್ಲಿ ಮತ್ತು ಕ್ಲಚ್ ಎಂಬ ಮಹತ್ವದ ವಸ್ತುಗಳನ್ನು ತಯಾರಿಸಲು ಪ್ರಾರಂಭಿಸಿದೆ. ಆಯಿಲ್ ಇಂಜನ್ ಮತ್ತು ಕಾರಖಾನೆಗೆ ಬೇಕಾಗುವ ಬಿಡಿ ಭಾಗಗಳನ್ನು ನಾನು ಪೂರೈಸುತ್ತೇನೆ."

ಲಕ್ಷ್ಮಣರಾಯರಂಥ ದೊಡ್ಡ ಮನಸ್ಸಿನ ಸದೈವ ದೇಶಹಿತದ ವಿಚಾರ ಮಾಡುವ ಕಾರಖಾನೆದಾರರು, ಸಣ್ಣ ಸಣ್ಣ ಕಾರಖಾನೆಗಳಿಗೆ ಸಹಾಯ ನೀಡಿ ಅವರನ್ನು ಹೇಗೆ ವಿವಂಚನೆಯೊಳಗಿಂದ ಮುಕ್ತ ಮಾಡಿದರೆಂಬುದಕ್ಕೆ ಈ ಕೆಳಗಿನ ಮಾತು ನಿದರ್ಶನವಾಗಿದೆ.

ಸಾಂಗಲಿಯ ಜಯದೇವ ರೋಪ ಫ್ಯಾಕ್ಟರಿಯ ಒಡೆಯರಾದ ಶ್ರೀ. ವಿಠ್ಠಲರಾವ ಜೋಶಿಯವರು ಊರಿಗೇ ಆದರ್ಶವ್ಯಕ್ತಿಗಳು. ಅವರು ಜಪಾನಕ್ಕೆ ಹೋಗಿ ಕಾರಖಾನೆಗೆ ಬೇಕಾಗುವ ಯಂತ್ರಗಳನ್ನು ತಂದರು. ಜಪಾನೀಯ ಯಂತ್ರಗಳು ಚೊಕ್ಕಟವಾದವುಗಳಲ್ಲದ್ದರಿಂದ ತರುವಾಗಲೇ ದಾರಿಯಲ್ಲಿ ಕೆಲವು ಮುರಿದವು. ಯಂತ್ರ ಕೂಡಿಸುವಾಗ ಮತ್ತೆ ಕೆಲವು ಲಟ್ ಎಂದವು. ಕಾರಖಾನೆಗೆ ಬಂತು ಸಂಕಟ. ಈ ಸುದ್ದಿಯು ಲಕ್ಷ್ಮಣರಾಯರಿಗೆ ತಿಳಿಯಿತು. ಅವರು ಅನಂತರಾವ ಫಳನೀಕರರನ್ನು ಕರೆಯಿಸಿ, ಅವೆಲ್ಲವುಗಳನ್ನು ತೀವ್ರವಾಗಿ ನೆಟ್ಟಗೆ ಮಾಡಲು ಹೇಳಿದರು. ಅವರೂ ಅಷ್ಟೇತೀವ್ರವಾಗಿ ಸರಿಪಡಿಸಿಕೊಟ್ಟರು.

ಈ ಕೆಲಸವಾದೊಡನೆ ಶ್ರೀ ವಿಠ್ಠಲರಾಯರು ಅದರ ಬಿಲ್ಲು ಎಷ್ಟೆಂಬುದನ್ನು ವಿಚಾರಿಸಲು ವಾಡಿಗೆ ಹೋದರು.

ಆಗ ಲಕ್ಷ್ಮಣರಾಯರು "ಈ ಕಾರ್ಯದ ಬಿಲ್ಲನ್ನು ನೀವು ಏಕೆ ಕೇಳುವಿರಿ? ನೀವು ಹೊಸ ಕಾರನೆಖಾನೆಯನ್ನು ಕಟ್ಟುತ್ತಿರುವಾಗ ನಾವು ಅದಕ್ಕೆ ಸಹಾಯ

ಮಾಡಬೇಡವೇ? ಇನ್ನೊಮ್ಮೆ ಸರಿಪಡಿಸುವ ಪ್ರಸಂಗ ಬಂದರೆ, ಆಗ ಬಿಲ್ಲನ್ನು ಎಷ್ಟು ಮಾಡಬೇಕೆಂಬುದನ್ನು ವಿಚಾರ ಮಾಡೋಣ. ಈಗ ತಾವು ಹೋಗಿರಿ" ಎಂದರು.

ಸಾಂಗಲಿಯ ಇನ್ನಿಬ್ಬರು ಕಾಖಾನೆದಾರರು ಕೈ. ರಾಮುಭಾವು ಭಿಡೆ ಮತ್ತು ಕೈ ಕೃಷ್ಣಾಜಿಪಂತ ದಾಂಡೇಕರರ ಮೇಲೆ ಲಕ್ಷ್ಮಣರಾಯರ ಪ್ರೇಮ ಬಹಳ. ಅವರಿಗೂ ಇದೇ ರೀತಿಯಾಗಿ ನೆರವನ್ನಿತ್ತರು.

ಕೈ. ರಾಮುಭಾವು ಅವರು ಕಿರ್ಲೋಸ್ಕರ ಕಾರಖಾನೆಯ ವಿಷಯವಾಗಿ ಎಂಥ ಆತ್ಮೀಯ ಭಾವವನ್ನು ತಳೆದಿದ್ದರು! ಎಂಬ ಬಗ್ಗೆ ಅವರ ಚಿರಂಜೀವ ಭಾಸ್ಕರರಾಯರ ಅಭಿಪ್ರಾಯ ನೋಡಿರಿ.

"ಕಿರ್ಲೋಸ್ಕರವಾಡಿಯೆಂದರೆ ರಾಮುಭಾವೂ ಅವರಿಗೆ ಕಾಶಿ ಅಥವಾ ಪಂಢರಪುರವಿದ್ದಂತೆಯಾಗಿತ್ತು. ಅವರು ತಮ್ಮ ಮಗ ರಘುನಾಥರಾಯರಿಗೆ ಪ್ರತ್ಯಕ್ಷ ಅನುಭವವು ಬರಲೆಂದು ಅವರನ್ನು ನಾಡಿಯಲ್ಲಿಟ್ಟಿದ್ದರು. ಇಂದು ಅದೇ ರಘುನಾಥರಾಯರು ಹೆಚ್ಚಿನ ಶಿಕ್ಷಣಕ್ಕಾಗಿ ಜರ್ಮನಿಗೆ ಹೋಗುತ್ತಿದ್ದಾರೆ"

"ಉದ್ಯೋಗಮಹರ್ಷಿ ಲಕ್ಷ್ಮಣರಾಯರು ೬೦ ವರುಷಗಳ ಹಿಂದೆ ಹಚ್ಚಿದಂಥಹ ಉದ್ಯೋಗವೃಕ್ಷದ ಸಸಿಯು, ಇಂದು ಭವ್ಯವೃಕ್ಷವಾದುದು ಕಂಡು ಬರುತ್ತದೆ. ಇಂಥ ವಟ ವೃಕ್ಷದ ನೆರಳಿನ ಕೆಳಗೆ ದನಕರಗಳು ವಿಶ್ರಾಂತಿಗಾಗಿ ಮಲಗಿಕೊಳ್ಳುವಂತೆ, ಇಂದು ಚಿಕ್ಕ ಚಿಕ್ಕ ಕಾರಖಾನೆಗಳು ಮತ್ತು ಕೆಲಸಗಾರರು ಈ ಉದ್ಯೋಗವೃಕ್ಷದ ಕೆಳಗೆ ಆತ್ಮವಿಶ್ವಾಸದಿಂದಲೂ ಸುಖದಿಂದಲೂ ಬಾಳುತ್ತಿದ್ದಾರೆ".

ಶ್ರೀ ಭಾಸ್ಕರರಾವ ಭಿಡೆಯವರು ಲಕ್ಷ್ಮಣರಾಯರ ಕಾರ್ಯದ ಸಾರವನ್ನು ಸ್ವಲ್ಪದರಲ್ಲಿ ಮೇಲಿನಂತೆಯೇ ವರ್ಣಿಸಿದ್ದಾರೆ. ಇದರಲ್ಲಿ ಅತಿಶಯೋಕ್ತಿ ಇದೆಯೆಂದು ಯಾರೂ ಅನ್ನಲಾರರು. ಮೇಲ್ಕಾಣಿಸಿದ ಚಿಕ್ಕ ಪುಟ್ಟ ಕಾರಖಾನೆಗಳು ಮುಂದೆ ಬರಲು ಆಯಾಯ ಚಾಲಕರ ಪ್ರಯತ್ನವೂ ಕೌಶಲ್ಯವೂ ಮುಖ್ಯವಾಗಿ ಕಾರಣೀಭೂತವಾಗುತ್ತವೆಂಬುದರಲ್ಲಿ ಸಂಶಯವೇ ಇಲ್ಲ. ಆದರೂ ಆ ಚಾಲಕರಿಗೆ ಆವಶ್ಯಕವಿರುವ ಆ ತಾಂತ್ರಿಕ ಶಿಕ್ಷಣವು ದೊರಕಲು ಮತ್ತು ಹೊಸ ಕ್ಷೇತ್ರದಲ್ಲಿ ಹೆಜ್ಜೆ ಹಾಕಲು ಕಿರ್ಲೋಸ್ಕರ ಕಾರ

ಖಾನೆಯು ಯಾವ ಸಂಧಿಯನ್ನು ಒದಗಿಸಿ ಕೊಟ್ಟಿತೋ ಅಷ್ಟೇ ಅದರ ಶ್ರೇಯ ಸ್ಸೆಂದು ಮನ್ನಿಸಿದರೂ ಲಕ್ಷ್ಮಣರಾಯರ ಈ ಔದ್ಯೋಗಿಕ ಸೇವೆಯು ಅಸಾಮಾನ್ಯವಾದುದೆಂದು ಗೊತ್ತಾಗುವದು.

ಲಕ್ಷ್ಮಣರಾಯರ ಉದ್ಯೋಗದಮೂಲಕ ಸಂಭವಿಸಿದ ಪ್ರತ್ಯಕ್ಷ ಅಪ್ರತ್ಯಕ್ಷ ಕಾರ್ಯದ ಅಢಾವೆಯನ್ನು ತೆಗೆದುಕೊಂಡರೆ, ಅದರಲ್ಲಿ ಇನ್ನಿಷ್ಟು ಮಹತ್ವದ ಭಾಗವನ್ನು ಸೇರಿಸಬೇಕಾಗುವದು.

೧೯೦೩ರಲ್ಲಿ ಬೆಳಗಾವಿಯಲ್ಲಿ ಮೇವನ್ನು ಕತ್ತರಿಸುವ ಯಂತ್ರವನ್ನು ತಯಾರಿಸಲು ಲಕ್ಷ್ಮಣರಾಯರು ಆರಂಭಿಸಿದರು. ಆ ಹೊತ್ತಿಗೆ ಮಹಾರಾಷ್ಟ್ರದಲ್ಲಿ ಕೈಬೆರಳಿನ ಮೇಲೆಣಿಸುವಷ್ಟು ಸಹ ಯಾಂತ್ರಿಕ ಕಾರಖಾನೆಗಳಿರಲಿಲ್ಲ. ಇಂಥ ಕಾರಖಾನೆಗಳನ್ನು ಮಹಾರಾಷ್ಟ್ರೀಯರಿಗೆ ತೆರೆಯಲು ಬರುತ್ತದೆಯೋ ಇಲ್ಲವೊ ಎಂದೆನಿಸುತ್ತಿತ್ತು.

ಔಂಧದ ರಾಜೇಸಾಹೇಬರ ಸಹಾಯವು ಲಕ್ಷ್ಮಣರಾಯರಿಗೆ ಯೋಗ್ಯ ಕಾಲಕ್ಕೆ ದೊರೆತದ್ದರಿಂದ ಕಿರ್ಲೋಸ್ಕರವಾಡಿಯ ಸ್ಥಾಪನೆಯಾಯಿತು. ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿಯೂ ಮಹಾರಾಷ್ಟ್ರವು ತನ್ನ ತೇಜಸ್ಸನ್ನು ಪ್ರಕಟಮಾಡಲು ಶಕ್ಯವಿದೆ ಎಂದು ಸಿದ್ಧವಾಯಿತು. ಕಿರ್ಲೋಸ್ಕರವಾಡಿ, ಓಗಲೆವಾಡಿಗಳೊಳಗಿನ ಕಾರಖಾನೆಗಳು ತಮ್ಮ ತಮ್ಮ ಉದ್ಯೋಗದಿಂದ ಮುಂದೆ ಬಂದವು. ಅದರಂತೆ ಯಾವ ಸಂಸ್ಥಾನವು ತನ್ನ ಕೈಲಾದಮಟ್ಟಿಗೆ ಸಹಾಯವನ್ನು ಮಾಡಿತೋ ಅಂಥ ಔಂಧಸಂಸ್ಥಾನವೂ ಮುಂದೆ ಬರಲು ಅವು ಉಪಯೋಗಬಿದ್ದವು.

ಕಾರಖಾನೆಯಿಂದ ಸಂಸ್ಥಾನದ ಮಹತ್ವವು ಬೆಳೆಯುವದೆಂದು ಕಂಡು ಬಂದಮೇಲೆ ಇಚಲಕರಂಜಿ, ಸಾಂಗಲಿ, ಮಿರಜ, ಕೊಲ್ಹಾಪುರ, ಫಲಟನ್ ಜಮುಖಂಡಿ, ಭೋರ ಮೊದಲಾದ ಸಂಸ್ಥಾನಗಳು ಈ ಕಿತ್ತಿಯನ್ನೇ ತೀಡಿದವು. ಮಹಾರಾಷ್ಟ್ರದ ಎಷ್ಟೋ ಕಾರಖಾನೆಗಳು ಈ ಸಂಸ್ಥಾನಗಳಲ್ಲಿಯೇ ವಿಶೇಷವಾಗಿ ಕೇಂದ್ರಿತವಾಗಿರುವದು ಕಾಣಬರುತ್ತಿದೆ.

ಒಬ್ಬರು ಕೆಡುವಿದ ಕಾಲುದಾರಿಯು ಮುಂದೆ ಕೆಲವು ಕಾಲದ ಮೇಲೆ ರಾಜಮಾರ್ಗವಾಗಿ ಪರಿಣಮಿಸುವದು. ಅದರಂತೆ ಔದ್ಯೋಗಿಕ ಕ್ಷೇತ್ರದಲ್ಲಿ ಮೊದಲು ಪದಾರ್ಪಣಮಾಡಿ ನಮ್ಮ ಯಂತ್ರಯೋಗಿಯು ಯಾವ ಹೊಸ

ದಾರಿಯನ್ನು ತೆಗೆದನೋ ಅದನ್ನೇ ಅನುಸರಿಸುವ ಯಾಂತ್ರಿಕರ ಸಂಖ್ಯೆಯು ಒಂದೇಸವನೆ ಬೆಳೆಯುತ್ತಲಿದೆ. ಇದೇ ದಾರಿಯಿಂದ ಹೋದರೆ ರಾಷ್ಟ್ರದ ಅಭ್ಯುದಯವಾಗಲು ಶಕ್ಯವಿದೆ ಎಂದೂ ಸಿದ್ಧವಾಗಿದೆ.

ಲಕ್ಷ್ಮಣರಾಯರು ಮಹಾರಾಷ್ಟ್ರದ ಆದ್ಯ ಕಾರಖಾನೆದಾರರೆಂದು ಖ್ಯಾತರಾಗಿ ಎಂಥ ದೊಡ್ಡ ಕೆಲಸವನ್ನು ಮಾಡಿ ತೋರಿಸಿದರು! ಎಂಬುದರ ಯಥಾರ್ಥ ಕಲ್ಪನೆಯಾದರೆ, ಪ್ರತಿಯೊಬ್ಬರಿಗೆ– ಸಾಭಿಮಾನವೂ ಆನಂದವೂ ಎನಿಸುವದರಲ್ಲಿ ಯಾವ ಸಂದೇಹವೂ ಇಲ್ಲ.

೨೨

# ತಾಟಸ್ಥ್ಯ ಧೋರಣೆ

ಸದ್ಯಕ್ಕೆ ಜಗತ್ತಿನಲ್ಲಿ ರಾಷ್ಟ್ರಗಳ ಎರಡು ಪ್ರಚಂಡ ಗುಂಪುಗಳು ನಿರ್ಮಾಣವಾಗಿವೆ. ಕುಸ್ತಿಯ ಕಣಕ್ಕಿಳಿದ ಇಬ್ಬರು ಜಟ್ಟಿಗಳಂತೆ ಅವರು ಒಬ್ಬರ ಮುಂದೆ ಒಬ್ಬರು ನಿಂತು ಸಡ್ಡನ್ನು ಹೊಡೆಯುತ್ತಿದ್ದಾರೆ. ಯಾವ ಕ್ಷಣಕ್ಕೆ ಇಬ್ಬರಲ್ಲಿಯೂ ಕಿಡಿಹಾರಿ ನಿಕರದ ಹೋರಾಟ ಹೂಡೀತು ಎಂಬದನ್ನು ಹೇಳುವದು ಕಠಿಣ.

ಮೂರನೇ ಮಹಾಯುದ್ಧವು ತಲೆಯೆತ್ತಿದರೆ ಇಡೀ ಜಗತ್ತಿನ ಪ್ರಳಯವೇ ಆಗಬಹುದು. ಅದರಿಂದ ಇಡೀ ಮಾನವ ಜಾತಿಯೇ ಸಮೂಲ ನಾಶವಾಗುವದೋ ಏನೋ ಎಂಬ ಸಂಶಯವು ಪ್ರತಿಯೊಬ್ಬ ವಿಚಾರವಂತನನ್ನು ಚಿಂತೆಗೀಡುಮಾಡಿದೆ. ಅದಕ್ಕಾಗಿಯೇ ಜಗತ್ತಿನಲ್ಲಿ ಶಾಂತತೆಯು ನೆಲೆಸಲೆಂದು ನಮ್ಮ ರಾಷ್ಟ್ರದ ನಾಯಕರು ಅತಿಶಯ ಕಳಕಳಿಯಿಂದ ಪ್ರಯತ್ನ ಮಾಡುತ್ತಿದ್ದಾರೆ. ಜಗತ್ತಿನೊಳಗಿನ ಸಂಘರ್ಷಣದಿಂದ ಭಾರತವನ್ನು ಅಲಿಪ್ತವಾಗಿಡುವ ಯತ್ನವೂ ಮಿತಿಮೀರಿ ನಡೆದಿದೆ.

ಭಾರತವು ಯಾವುದೇ ಪಂಗಡದಲ್ಲಿ ಸೇರಿಕೊಳ್ಳದೆ, ಒಂದು ತಟಸ್ಥ ರಾಷ್ಟ್ರವೆಂದು ಬಾಳಬೇಕೆಂದು ನಮ್ಮ ರಾಷ್ಟ್ರದ ನಾಯಕರ ಉತ್ಕಟ ಇಚ್ಛೆಯಾಗಿದೆ. ಈ ದೃಷ್ಟಿಕೋನವನ್ನೇ ಯಾವಾಗಲೂ ಇರಿಸಿಕೊಂಡೇ ಅವರು ತಮ್ಮ ಅಂತರ್‌ರಾಷ್ಟ್ರೀಯ ಧೋರಣವನ್ನು ರೂಪಿಸುತ್ತಲಿರುವರು. ಮತ್ತು ನೆರೆಹೊರೆಯವರೊಡನೆ ಸಾಮೋಪಚಾರದಿಂದ ನಡೆಯುತ್ತಿರುವರು.

ನಾವಾಯಿತು ನಮ್ಮ ಪಂಚವಾರ್ಷಿಕ ಯೋಜನೆಯಾತು, ಎಂದು ನಡೆಯಲು ಅನುಕೂಲವಾದರೆ ಎಷ್ಟು ಒಳ್ಳೇಯದಾದೀತು! ಅದರಿಂದ ನಾವು ನಮ್ಮ ಪ್ರಗತಿಯನ್ನು ತೀವ್ರವಾಗಿ ಸಾಧಿಸಬಹುದಲ್ಲವೇ! ಆದರೆ, ಎಲ್ಲರೊಡನೆ ಒಳ್ಳೇ ರೀತಿಯಿಂದ ವರ್ತಿಸಿ, ನಮ್ಮ ಅಭ್ಯುದಯವನ್ನು ಶಾಂತವಾಗಿ ಮಾಡಿಕೊಂಡೇವೆಂಬುದು ಅಷ್ಟು ಸುಲಭವಿಲ್ಲ. ಯಾಕಂದರೆ— ನಾವು ಹಿಡಿದ ತಟಸ್ಥವೃತ್ತಿಯು ಕೆಲ ದಿನ ಬಾಳೀತು ಎಂದು ಗ್ರಹಿಸಿದರೂ ಈ

ಸ್ಥಿತಿಯು ಶಾಶ್ವತವಾಗಿ ಉಳಿದೀತೆಂದು ಹೇಳಲು ಬರುವದಿಲ್ಲ. ಅದರಲ್ಲಿ ಜಗತ್ತಿನೊಳಗೆ ಎಲ್ಲಿಯಾದರೂ ಜಗಳ ತಲೆದೋರಿದರೆ ತಟಸ್ಥವೃತ್ತಿಯನ್ನು ಕಾಯ್ದುಕೊಳ್ಳುವದು ಅಶಕ್ಯಕೋಟಿಯೊಳಗಿನ ಮಾತು. ಇದಕ್ಕೆ ಪ್ರತ್ಯಕ್ಷ ನಿದರ್ಶನ ಬೇಕಿದ್ದರೆ— ದೇಶ ದೇಶದೊಳಗೆ ಯಾಕಾಗಲೊಲ್ಲದು– ಯುದ್ಧವು ಆರಂಭವಾದರೆ, ಅಲ್ಲಿಯ ಕಾರಖಾನೆಗಳ ಪರಿಸ್ಥಿತಿಯೇನಾಗುವದೆಂಬುದನ್ನು ಸ್ವಲ್ಪ ನೋಡಬೇಕು.

ಲಕ್ಷ್ಮಣರಾಯರ ಕೆಲಸವು ಕೇವಲ ಒಂದು ಕಾರಖಾನೆಯನ್ನು ನಡೆಸುವದು ಮಾತ್ರ. ಆದರೂ ಈ ಕೆಲಸವನ್ನು ಮಾಡಲು ಶಾಂತತೆಯೂ ಸುವ್ಯವಸ್ಥೆಯೂ ಅವಶ್ಯಬೇಕು. ಅದಕ್ಕಾಗಿಯೇ ಅವರು ಇನ್ನಿತರ ಯಾವ ಉದ್ಯೋಗದಲ್ಲಿ ಬೀಳದೆ ಹೊರಗಿನ ವಾತಾವರಣದಿಂದ ದೂರವಿದ್ದು, ತಮ್ಮ ಉದ್ಯೋಗವನ್ನು ನಡೆಸುವ ಕಾಳಜಿಯನ್ನು ತೆಗೆದುಕೊಳ್ಳುತ್ತಿದ್ದರು. ಆದರೆ ಈ ತಾಟಸ್ಥವೃತ್ತಿಯನ್ನು ಅವರಿಗೆ ಎಲ್ಲಿಯವರೆಗೆ ಕಾಯಲು ಸಾಧ್ಯವಾಯಿತು ? ಎಂಬುದನ್ನು ತೋರಿಸುವದೇ ಈ ಪ್ರಕರ್ಣದ ಉದ್ದೇಶವಾಗಿದೆ.

೧೯೨೭ ರಲ್ಲಿ ವಾಡಿಯಲ್ಲಿ ಅಳತೆಕರರಿಂದ ಕಾಂಗ್ರೆಸ್‌ದ ರಾಜಕಾರಣವು ಪ್ರವೇಶ ಮಾಡಿತು. ಮುಂದೆ ೧೯೩೦ ರಲ್ಲಿ ಮಹಾತ್ಮಾಜಿಯವರನ್ನು ಬಂಧಿಸಿದ್ದರಿಂದ ರಾಜಕಾರಣದ ತೆರೆಗಳು ಹಳ್ಳಿ ಪಳ್ಳಿಗಳನ್ನೂ ಬಡಿದೆಬ್ಬಿಸಿದವು. ಅಂದರೆ ಕಿರ್ಲೋಸ್ಕರವಾಡಿಯಲ್ಲಿಯ ಕೂಲಿಕಾರರೂ ದೇಶದ ಪರಿಸ್ಥಿತಿಯ ವಿಷಯವಾಗಿ ಹೆಚ್ಚು ಹೆಚ್ಚಾಗಿ ವಿಚಾರ ಮಾಡತೊಡಗಿದರು. ಹೊರಗಿನ ರಾಜಕೀಯ ಆಂದೋಲನದ ಪ್ರಸಾರವು ಕಾರಖಾನೆಯ ಅಂಗಳದಲ್ಲಿಯೂ ಪ್ರವೇಶಿಸಿತು.

ಇಷ್ಟರಲ್ಲಿ ಇಲ್ಲಿಯ ಹಳ್ಳಿಗಳೊಳಗಿನ ಜನತೆಯನ್ನು ರಾಜಕಾರಣದ ಕಡೆಗೆ ಒಲಿಸಿಕೊಳ್ಳುವ ಮನೋವೇಧಕ ಭಾಷಣವನ್ನು ಬಿಗಿಯುವಂಥ ಒಂದು ಪ್ರಭಾವೀ ವ್ಯಕ್ತಿಯು ಮುಂದೆ ಬಂದಿತು. ಅವನೇ ನಾನಾ ಪಾಟೀಲ. ಎಡೆ ಎಂಬುದು ಅವನ ಹಳ್ಳಿ. ಅದು ವಾಡಿಯಿಂದ ೧೫ ಮೈಲು. ನಾನಾ ಪಾಟೀಲನು ನಡುನಡುವೆ ವಾಡಿಗೆ ಬರುತ್ತಿದ್ದನು. ಅದರಿಂದ ಅವನು ಎಲ್ಲರಿಗೂ ಪರಿಚಿತನಾಗಿದ್ದನು. ಅವನ ವ್ಯಾಖ್ಯಾನಕ್ಕೆ ಜನ–ಜಂಗುಳಿಯು ಜಾತ್ರೆಯಂತೆಯೇ ನೆರೆಯುತ್ತಿತ್ತು. ಅವನ ಭಾಷೆ ಹುಂಬತನದ್ದು, ದೃಷ್ಟಾಂತ ಹಾಗೂ ವಿನೋದಗಳು ಗ್ರಾಮೀಣ; ಜನತೆಗೆ ತುಂಬಾ ಹಿಡಿಸತಕ್ಕಂಥವು.

ಬ್ರಿಟಿಶ್ ರಾಜ್ಯದಾಡಳಿತೆಯಿಂದ ಭಾರತೀಯ ಒಕ್ಕಲಿಗರಿಗೆ ಎಷ್ಟು ಒತ್ತಾಯ ವಾಗುತ್ತದೆಂಬುದರ ಚಿತ್ರವನ್ನು, ಅವನು ಬಹಳ ಪರಿಣಾಮಕಾರಿಯಾಗುವಂತೆ ಚಿತ್ರಿಸುತ್ತಿದ್ದನು. ಜನತೆ ಆ ಭಾಷಣದಲ್ಲಿ ಕ್ರಾಂತಿಯನ್ನು ಕಾಣುತ್ತಿದ್ದರು.

ಈ ಕಾಲದಲ್ಲಿ ಕೀರ್ತಿಶಾಲಿಗಳೂ ಲೋಕಪ್ರಿಯ ಮುಂದಾಳುಗಳೂ ಆದ ಪಂಡಿತ ಜವಾಹರಲಾಲ ನೆಹರು ಅವರು ಕಿರ್ಲೋಸ್ಕರವಾಡಿಗೆ ೩೧–೭–೧೯೪೦ ರಂದು ಬಂದರು. ಕಾರಖಾನೆಯ ಇತಿಹಾಸದಲ್ಲಿಯ ಈ ದಿವಸವು ಸುವರ್ಣಾಕ್ಷರಗಳಿಂದ ಬರೆದಿಡತಕ್ಕಂಥದ್ದಾಗಿದೆ.

ಪಂಡಿತಜೀಯವರು ಆ ವೇಳೆಗೆ ಪುಣೆಯಲ್ಲಿ ನೆರೆದ ಎ. ಆಯ್. ಸಿ. ಸಿ. ಕಮೀಟಿಯ ಸಭೆಗೆಂದು ಬಂದಿದ್ದರು. ಅಲ್ಲಿ ಶ್ರೀ. ಅಪ್ಪಾಸಾಹೇಬಪಂತ ಅವರು ಅವರ ಭೆಟ್ಟಿಯನ್ನು ತೆಗೆದುಕೊಂಡು ಔಂಧ ಸಂಸ್ಥಾನದಲ್ಲಿ ಆರಂಭಿಸಲ್ಪಟ್ಟ ಹೊಸ ರಾಜ್ಯ ಪದ್ಧತಿಯ ನಿರೀಕ್ಷಣೆಯನ್ನು ಮಾಡಲು ಆಮಂತ್ರಣವನ್ನಿತ್ತರು. ಆಗ ಅವರು ತಮ್ಮ ತಂಗಿ ವಿಜಯಲಕ್ಷ್ಮಿಪಂಡಿತ, ಮೃದುಲಾಬೇನ ಸಾರಾಭಾಯಿ, ರಾಘವದಾಸ ಎಂಬವರೊಡನೆ ಔಂಧಕ್ಕೆ ಬಂದರು. ಅಲ್ಲಿಂದ ಅಂದೇ ಮಧ್ಯಾಹ್ನ ಕಿರ್ಲೋಸ್ಕರವಾಡಿಗೆ ಆಗಮಿಸಿದರು.

ಅವರ ಆ ಭೆಟ್ಟಿಯೆಂದರೆ ಕಿರ್ಲೋಸ್ಕರವಾಡಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳಿಗೆ ಒಂದು ಹಬ್ಬವೇ ಎನಿಸಿತು. ಪಂಡಿತಜಿಯ ದರ್ಶನಕ್ಕೆಂದು ೭–೮ ಸಾವಿರ ಜನರು ನೆರೆದರು.

ಈ ಮಹಾ ಅತಿಥಿಯನ್ನು ಯಥೋಚಿತ ಶಬ್ದಗಳಿಂದ ಲಕ್ಷ್ಮಣ ರಾಯರು ಸ್ವಾಗತಿಸಿದಮೇಲೆ, ಚಪ್ಪಾಳೆಯ ಸಪ್ಪಳದಲ್ಲಿ ಪಂಡಿತ ಜವಾಹರಲಾಲ ನೆಹರು ಅವರು ಭಾಷಣ ಮಾಡಲು ಎದ್ದರು. ಅದರಲ್ಲಿ ತಾವು ಔಂಧಕ್ಕೆ ಯಾವ ಉದ್ದೇಶದಿಂದ ಬಂದೆವೆಂಬದನ್ನೂ ಕಿರ್ಲೋಸ್ಕರ ಕಾರಖಾನೆಯನ್ನು ನೋಡಿದ ಮೇಲೆ ಅದರ ಬಗ್ಗೆ ತಮ್ಮ ಮತವು ಏನಾಯಿತೆಂಬದನ್ನು ಕುರಿತು ಮಾತನಾಡಿ “ಇಂದು ನಮ್ಮೆದುರು ಎರಡು ಪ್ರಶ್ನೆಗಳಿವೆ. ಒಂದು— ನಾವು ಸ್ವಾತಂತ್ರ್ಯವನ್ನು ಹೇಗೆ ದೊರಕಿಸಬೇಕು ? ಎರಡನೆಯದು— ನಮ್ಮ ಬಡ-ತನವನ್ನು ಹೇಗೆ ನೀಗಿಸಿಕೊಳ್ಳಬೇಕು? ಭಾರತದೊಳಗಿನ ಬ್ರಿಟಿಶ್ ಹದ್ದಿಯಲ್ಲೇ ಹೋಗಲಿ, ಇಲ್ಲವೆ ಸಂಸ್ಥಾನಗಳ ಹದ್ದಿಯಲ್ಲೇ ಹೋಗಲಿ, ಎಲ್ಲೆಲ್ಲಿಯೂ ನಿರುದ್ಯೋಗ, ಬಡತನ, ಹಬ್ಬಿದ್ದು ಕಾಣುವದು. ಈ ಸ್ಥಿತಿಯು ಹೋಗಿ ಎಲ್ಲ ಕಡೆಗೂ ಸ್ವತಂತ್ರ ಜನತೆಯ ರಾಜ್ಯ ಆರಂಭವಾಗುವದು ಆವಶ್ಯಕವಾಗಿದೆ.”

"ಹಿಂದೀ ಸಂಸ್ಥಾನಗಳು ಈ ವಿಷಯವಾಗಿ ಬಹಳೇ ಹಿಂದಿರುವವು. ಆದರೆ ಚಿಕ್ಕದಾದ ಔಂಧ ಸಂಸ್ಥಾನವು ಬಹಳ ಪ್ರಗತಿ ಮತ್ತು ಔದಾರ್ಯದ ಧೋರಣವನ್ನಿರಿಸಿಕೊಂಡುದನ್ನು ನೋಡಿ ನನಗೆ ಆನಂದವೆನಿಸಿತು. ಇಲ್ಲಿ ಗ್ರಾಮಪಂಚಾಯತಿಯ ರೂಪದಿಂದ ಜನತೆಯ ಮೇಲೆಯೇ ರಾಜ್ಯಕಾರಭಾರ ವನ್ನು ಹೊರಿಸಲಾಗಿದೆ. ಜನರು ಮನಗೊಟ್ಟು ಕೆಲಸ ಮಾಡಿದರೆ ಈ ಪ್ರಯೋಗವು ನಿಜವಾಗಿಯೇ ಯಶಸ್ವಿಯಾಗುವದು. ದೊರಕಿದಂಥ ಅಧಿಕಾರದ ಯೋಗ್ಯ ಉಪಯೋಗವನ್ನು ಮಾಡಿಕೊಂಡರೆ, ಜನರು ಸಾಕ್ಷರರಷ್ಟೇ ಏಕೆ ಸುಶಿಕ್ಷಿತರೂ ಆಗುವರು. ಒಂದು ಕಾಲದಲ್ಲಿ ನಾವು ಜಗತ್ತಿನಲ್ಲಿ ಮುಂದೆ ಇದ್ದೆವು. ಆದರೆ ನಂತರ ನಾವು ನಿಂತೆವು. ಜಗತ್ತು ಮುಂದೆ ಸಾಗಿತು. ನಾವು ಶ್ರಮಿಸಿ, ಹೋರಾಡಿ, ರಾಜಕಾರಣವನ್ನು ತಿಳಿದುಕೊಂಡು ಮುಂದೆ ಹೋಗುವ ಆವಶ್ಯಕತೆಯಿದೆ. ಇನ್ನು ಜನತೆಯ ರಾಜ್ಯವಾಗಲಿದೆ. ಅದಕ್ಕಾಗಿ ಪ್ರತಿಯೊಬ್ಬರೂ ಕೆಲಸ ಮಾಡಬೇಕು. ಜಗತ್ತಿನಲ್ಲಿ ನಿದ್ದೆಬಡಕ ರಾಷ್ಟ್ರಗಳು ಹಿಂದೆ ಬೀಳುವವು. ಆದ್ದರಿಂದ ಎದ್ದೇಳಿರಿ. ಮುಂದೆ ನಡೆಯಿರಿ."

ಪಂ. ನೆಹರು ಅವರ ಈ ಚೈತನ್ಯದಾಯಕ ಭಾಷಣದಿಂದ ಜನರ ಮೈಯಲ್ಲಿ ವೀರಶ್ರೀಯೂ ದೇಶಭಕ್ತಿಯೂ ಉಕ್ಕತೊಡಗಿದವು. ದೇಶದ ಚಳವಳಿಯಲ್ಲಿ ಸೇರಿಕೊಳ್ಳಲು ಕಿರ್ಲೋಸ್ಕರ ಕಾರಖಾನೆಯೊಳಗಿನ ಕೆಲಸಗಾರರ ಬಾಹುಗಳು ಸ್ಫುರಣಹೊಂದತೊಡಗಿದವು. ಭಾರತದ ಜನತೆಯೊಡನೆ ಅವರೂ ಸ್ವಾತಂತ್ರ್ಯ ಸಂಪಾದನೆಯ ಯುದ್ಧದಲ್ಲಿ ಬೇಗನೆ ಹಾರಿಕೊಂಡರು.

೯–೮–೧೯೪೨ ರಲ್ಲಿ ಮಹಾತ್ಮಾಜಿಯವರು ಮುಂಬೈಯಲ್ಲಿ ಜರುಗಿದ ಪ್ರಚಂಡ ಸಭೆಯಲ್ಲಿ ಬ್ರಿಟಿಶ್ ಆಡಳಿತವನ್ನು ಕುರಿತು 'ಭಾರತದಿಂದ ತೊಲಗಿರಿ' ಎಂಬ ಘೋಷಣೆ ಮಾಡಿದರು. ಬ್ರಿಟಿಶ್ ಸರಕಾರವು ಚಿಕ್ಕ–ದೊಡ್ಡ ಮುಂದಾಳುಗಳನ್ನು ಬಂಧಿಸಿ, ಸೆರೆಮನೆಗೆ ಅಟ್ಟಿತು. ಅದರಿಂದ ಇಡೀ ದೇಶದ ತುಂಬ ಪ್ರಚಂಡ ಆಂದೋಲನವು ಎದ್ದಿತು. ಈ ಎಲ್ಲ ಇತಿಹಾಸವನ್ನು ಇಲ್ಲಿ ಹೇಳುವ ಆವಶ್ಯಕತೆಯಿಲ್ಲ.

ಒಂದು ಕಡೆಗೆ ಜನತೆ, ಇನ್ನೊಂದು ಕಡೆಗೆ ಬಲಾಢ್ಯ ಬ್ರಿಟಿಶ್ ಸರಕಾರ. ಈ ಎರಡು ಪಕ್ಷಗಳಲ್ಲಿ ಹೋರಾಟವು ಆರಂಭಿಸಲ್ಪಟ್ಟರೆ, ಇಲ್ಲಿಯ ಕಾರಖಾನೆಗಳಂಥ ಸಂಸ್ಥೆಗಳು ಈ ಸಂಘರ್ಷಣದಿಂದ ಎಷ್ಟು ಅಲಿಪ್ತವಾಗಿ ಇರಲು ಬಂದೀತು? ಅವರ ತಾಟಸ್ಥ್ಯವು ಎಷ್ಟುದಿನ ಬಾಳಬಹುದು?

ಅಗಸ್ಟ ೯ನೇ ತಾರೀಖಿನ ನಂತರ, ಒಂದುವಾರ ಕಳೆಯುವಷ್ಟರಲ್ಲಿ ಕಾರಖಾನೆಯಲ್ಲಿಯ ಶ್ರೀ ಸದುಭಾವು ಪೆಂಢಾರಕರ ಎಂಬ ಉತ್ಸಾಹೀ ತರುಣನು ಕಾರಖಾನೆಯ ಚಾಲಕರ ಕಡೆಗೆ ಬಂದು, ತನ್ನ ನವಕರಿಯ ತ್ಯಾಗಪತ್ರವನ್ನು ಅರ್ಪಿಸಿದನು. ಅವನು ಗಾಂಧಿ ಚಳವಳಿಯಲ್ಲಿ ಸೇರುವ ನಿಶ್ಚಯ ಮಾಡಿದ್ದನು. ಅವನನ್ನು ಅವನ ನಿಶ್ಚಯದಿಂದ ಪರಾವೃತ್ತಗೊಳಿಸಲು ಯಾರಿಗೂ ಶಕ್ಯವಿರಲಿಲ್ಲ. ಅವನನ್ನು ಸದಿಚ್ಛಾಪೂರ್ವಕ ಬೀಳ್ಕೊಡಲಾಯಿತು.

ಆಗಿನ ಕಾಲದ ವರ್ತಮಾನಪತ್ರಗಳಲ್ಲಿ ಬಂಧನಸತ್ರ, ಲಾಠೀಹೊಡೆತ, ಗೋಳೀಬಾರುಗಳ ಹೊರತಾಗಿ ಬೇರೆ ಸುದ್ದಿಗಳಿರುತ್ತಿದ್ದಿಲ್ಲ. ಎಲ್ಲರ ಬಾಯಲ್ಲಿಯೂ ಅದೇ ಮಾತು. ಕಾರಖಾನೆಯಲ್ಲಿಯೂ ಅದೇ ಚರ್ಚೆ! ಕಾರಖಾನೆಯವರೆಲ್ಲರೂ ಸೇರಿ ಸಾತಾರೆಗೆ ಹೋಗಿ, ಅಲ್ಲಿಯ ಕಚೇರಿಯ ಮೇಲೆ ರಾಷ್ಟ್ರಧ್ವಜ ಏರಿಸಿಬರಬೇಕೆಂಬ ವಿಚಾರ ಮಾಡಿದರು. ಶ್ರೀ ಗೋವಿಂದರಾವ ಖೋತ, ಹಾಗು ಮತ್ತಿತರ ಕೆಲಸಗಾರ ಮುಖಂಡರು ಈ ನಿರ್ಧಾರವನ್ನು ಚಾಲಕರ ಕಿವಿಯ ಮೇಲಿಟ್ಟರು. ಅವರು ಅದಕ್ಕೆ ಸಮ್ಮತಿಸಿದರು. ಅಲ್ಲದೆ ಅವರಿಗೆ ಶಿಸ್ತನ್ನು ಪಾಲಿಸಲೂ ಆಕ್ಷೇಪಕಾರಕ ಶಬ್ದಗಳನ್ನಾಡಕೂಡದೆಂದೂ ಉಪದೇಶಿಸಿದರು.

ಈ ಎಲ್ಲ ಕೆಲಸಗಾರರು ಡ್ರಿಲ್ ಕಲಿತು ತರಬೇತುಗೊಂಡರು. ಅವರಿಗೆ ಸುತ್ತಲಿನ ಹಳ್ಳಿಗಳಿಂದ ೩-೪ ಸಾವಿರ ಜನರು ಸಿಕ್ಕರು. ದೊಡ್ಡದೊಂದು ಸಮೂಹವೇ ಆಯಿತು. ೩ನೇ ಸಪ್ಟೆಂಬರ ೧೯೪೨ ರಂದು ಮುಂಜಾನೆ ಈ ಸಮೂಹ ಹೊರಟಿತು— ತಾಸಗಾವಿಗೆ.

ಅಂದು ಸಂತೆ ಇದ್ದುದರಿಂದ ಎರಡೂ ಬದಿಗಳಲ್ಲಿ ಹಣ್ಣು-ಹಂಪಲ, ಮಿಠಾಯಿಗಾರರ ಅಂಗಡಿಗಳು ಹಚ್ಚಲ್ಪಟ್ಟಿದ್ದವು. ಇತರ ಅಂಗಡಿಗಳೂ ಇದ್ದವು. ಘೋಷಣೆ ಮಾಡುತ್ತ ಬರುವ ಜನಸಮುದಾಯವನ್ನು ಕಂಡು ಅಂಗಡಿಕಾರರು ಗಾಬರಿಯಾದರು; ಆದರೆ ಅವರ ವಸ್ತುಗಳಿಗೆ ಯಾರೂ ಕೈಹಚ್ಚಲಿಲ್ಲ. ಆ ಸಮೂಹ ಶಿಸ್ತಿನಿಂದಲೂ ಸಂಯಮದಿಂದಲೂ ಸಾಗಿತ್ತು. ಅಲ್ಲಿಯ ಮಾಮಲೇದಾರರ ಕಡೆಯಿಂದ ಕಚೇರಿಯ ಮೇಲೆ ತಿರಂಗಿ ಧ್ವಜವನ್ನು ಏರಿಸಿ ಮಾಮಲೇದಾರನನ್ನು ಅಭಿನಂದಿಸಿದರು. ತಾಸಗಾವದಲ್ಲಿ ಇಷ್ಟೊಂದು ಉತ್ಸಾಹಪೂರ್ವಕವಾಗಿ ನಡೆದುದನ್ನು ನೋಡಿ ಸಂತುಷ್ಟರಾಗದೆ ಕಿರ್ಲೋಸ್ಕರವಾಡಿಯಿಂದ ಪಶ್ಚಿಮಕ್ಕೆ ೧೦ ಮೈಲುಗಳ ಮೇಲಿರುವ ಇಸ್ಲಾಮಪುರ ತಾಲೂಕಿನ

ಸ್ಥಳಕ್ಕೆ ಮೆರವಣಿಗೆಯನ್ನು ಒಯ್ಯಬೇಕೆಂದು ನಿರ್ಧರಿಸಿದರು. ೧೦ನೇ ಸಪ ಟೆಂಬರ ದಿವಸ ಹೊರಟ ಮೆರವಣಿಗೆಯು ಮಾತ್ರ ಸುನಿಯಂತ್ರಿತವಾಗಿ ಕಂಡು ಬರಲಿಲ್ಲ. ಕಾರಣ ಪರಿಣಾಮ ದುಃಖಾಂತವಾಯಿತು.

ಇಸ್ಲಾಂಪುರದಿಂದ ಸ್ವಲ್ಪ ದೂರದಲ್ಲಿದ್ದ ಮೂರುದಾರಿಗಳ ಸಂಗಮದಲ್ಲಿ ಬೇರೆ ಬೇರೆ ಕಡೆಯಿಂದ ಬಂದ ಎಲ್ಲ ಮೆರವಣಿಗೆಗಳು ಸೇರಿಕೊಂಡು, ಊರಲ್ಲಿ ಹೋಗಬೇಕೆಂದು ಮೊದಲೇ ನಿಶ್ಚಯವಾಗಿತ್ತು. ಹಾಗಾಗಿದ್ದರೆ, ಇದು ಯಶಸ್ವಿಯೂ ಆಗುವ ಸಂಭವವಿತ್ತು. ಆದರೆ ಎಲ್ಲವೂ ಸಕಾಲದಲ್ಲಿ ಬರಲಿಲ್ಲ. ಕಾರಣ ಮೊದಲೇ ಬಂದಿದ್ದ ಪಾಂಡು ಮಾಸ್ತರರ ನೇತೃತ್ವದಲ್ಲಿಯ ನಿಷ್ಪ್ರಾ-ಣಿಯ ಗುಂಪು ಸ್ವತಂತ್ರ ರೀತಿಯಿಂದ ಊರನ್ನು ಪ್ರವೇಶಿಸಿತು.

ಪೋಲೀಸರು ತಾಸಗಾವದಂತೆ, ಅಸಾವಧರಾಗಿರಲಿಲ್ಲ. ಇಸ್ಲಾಂಪುರದ ಮೇಲೆ ಏರಿಬರುತ್ತಿರುವ ಸುದ್ದಿಯು ಮೊದಲೇ ಪ್ರಕಟವಾದ್ದರಿಂದ, ಸಾತಾರೆಯ ಡಿ. ಎಸ್. ಪಿ. ಮಿ|| ಯೇಟ್ಸನು ಸಶಸ್ತ್ರ ಪೋಲೀಸರೊಂದಿಗೆ ಹಾಗೂ ಕೆಲವು ಅಧಿಕಾರಿಗಳೊಂದಿಗೆ ಕೋರ್ಟಿನಲ್ಲಿ ಚಳವಳಿಗಾರರ ದಾರೀ ಕಾಯುತ್ತಿದ್ದನು. ಪಾಂಡು ಮಾಸ್ತರನ ಗುಂಪು ಬಂದೊಡನೆ, ಮಾಸ್ತರನನ್ನು ಬಂಧಿಸಿ ಉಳಿದ ವರ ಮೇಲೆ ತೀವ್ರತರವಾದ ಲಾಠಿಹಲ್ಲೆಮಾಡಿ ಗುಂಪನ್ನು ಚದುರಿಸಿದನು. ಅಷ್ಟರಲ್ಲಿ ಪೂರ್ವದ ಕಡೆಯಿಂದ ಬರತಕ್ಕ ಮೆರವಣಿಗೆ ಇಸ್ಲಾಂಪುರಕ್ಕೆ ಬಂದಿತು. ಗೋವಿಂದರಾವ ಖೋತರು ಅದರ ಮುಂದಾಳುವಾಗಿದ್ದರು. ಲಾಠೀಪೆಟ್ಟು ತಿಂದವರು ಓಡಿಬಂದು ತಮ್ಮ ಸುದ್ದಿಯನ್ನು ಅವರಿಗೆ ತಿಳಿಸಿದರು. ಇದನ್ನು ಕೇಳಿ ತಾವು ಮುಂದೆ ಹೋಗಬೇಕೋ ಇಲ್ಲವೆ ಹಿಂದಿರುಗಬೇಕೋ ಎಂಬ ಪ್ರಶ್ನೆ ಅವರನ್ನು ಬಾಧಿಸತೊಡಗಿತು. ಪೋಲೀಸರ ಹಲ್ಲೆಯನ್ನು ಕೇಳಿ ಸಮು ದಾಯವೂ ಸಿಟ್ಟಿಗೆದ್ದಿತು. ಪೋಲೀಸರ ಸೊಕ್ಕನ್ನಡಗಿಸಿಯೇ ಹೋಗಬೇಕೆಂದು ಕೂಡಿದ ಜನರ ಅಭಿಪ್ರಾಯವಾಯಿತು. ಪೋಲೀಸರ ವಶದಲ್ಲಿದ್ದ ಪಾಂಡೂ ಮಾಸ್ತರರನ್ನು ಬಿಡಿಸಬೇಕೆಂದೂ ಕೂಗಿದರು. ಇದರ ಪರಿಣಾಮವೇನಾದೀ ತೆಂಬುದರ ವಿಚಾರ ಮಾಡುವ ತಾಳ್ಮೆ ಯಾರಿಗಿತ್ತು ?

ಈ ಮೆರವಣಿಗೆಯ ಮುಂಭಾಗದಲ್ಲಿ ಕಿರ್ಲೋಸ್ಕರ ಕಾರಖಾನೆಯ ಇಂಜಿ ನಿಯರಾದ ಉಮಾ ಶಂಕರ ಪಂಡ್ಯಾ ಎಂಬವರಿದ್ದರು. ಅವರು ಎರಡು ವರುಷ ಗಳ ಹಿಂದೆ ಬನಾರಸ ಹಿಂದೂ ಯುನಿವ್ಹರ್ಸಿಟಿಯಿಂದ ಪದವಿ ಪಡೆದು ವಾಡಿ ಯಲ್ಲಿ ಕೆಲಸ ಕೈಕೊಂಡಿದ್ದರು. ಅವರ ಸ್ವಭಾವ ಗುಣಗಳು ಬಹಳ

ನಮ್ರವಾಗಿದ್ದವು. ಕ್ರಿಕೆಟ್ ಆಟಗಾರರೆಂದೂ ಹೆಸರಾಗಿದ್ದರು. ವಾಡಿಗೆ ಬಂದಮೇಲೆ ಅವರು ಸವಿತಾದೇವಿಯೊಡನೆ ವಿವಾಹಿತರಾಗಿದ್ದರು. ಅವರಿಗೆ ಅದೇ ಒಂದು ಗಂಡು ಮಗುವು ಹುಟ್ಟಿತ್ತು. ಈ ಆನಂದಕ್ಕಾಗಿ ಅವರು ಪೇಢೆ ಹಂಚಿದ್ದರು. ೧೨ನೇ ದಿವಸದ ಸಲುವಾಗಿ ಅವರು ಅಂದಿನ ರಾತ್ರಿಯೇ ನಾಗಪುರಕ್ಕೆ ಹೋಗುವವರಿದ್ದರು.

ಕಾರಖಾನೆಯವರ ಜೊತೆಗೆ ಈ ಪಂಡ್ಯಾನು ತಾಸಗಾವಿಗೆ ಹೋಗಿ ಮೆರವಣಿಗೆಯಲ್ಲಿ ಸೇರಿಕೊಂಡನು. ಮೆರವಣಿಗೆ ಮುಗಿಸಿಕೊಂಡು ಸಾಯಂ ಕಾಲ ವಾಡಿಗೆ ತಿರುಗಬೇಕೆಂದು ಮಾಡಿದ್ದನು. ಆದರೆ ದುಷ್ಟಕಾಲನು ಅವನ ಮೇಲೆ ಜಪ್ಪಿಸಿ ಕುಳಿತಿದ್ದನು. ಅವನನ್ನು ವಿಚಾರಿಸುವವರು ಯಾರು ?

ಮೆರವಣಿಗೆಯು ಮುಂದೆ ಮುಂದೆ ಬರುವದನ್ನು ನೋಡಿ ಡಿ. ಎಸ್. ಪಿ. ಯು ಮುಂದೆ ಬರಕೂಡದೆಂದು ಆಜ್ಞಾಪಿಸಿದನು. ಮುಂದೆ ಬಂದರೆ ಗುಂಡು ಹಾರಿಸಲು ಪೋಲೀಸರಿಗೆ ಆಜ್ಞೆವಿಧಿಸಿದನು. ಹವೆಯಲ್ಲಿ ಗೋಳೀಬಾರು ನಡೆ ಯಿತು. ಅಷ್ಟಕ್ಕೆ ಮೆರವಣಿಗೆ ಹಿಂದಿರುಗದ್ದರಿಂದ ಮುಂದಾಳುಗಳನ್ನು ಕರೆಸಿ ಕೊಂಡನು. ಪಂಡ್ಯಾನು ಅವನಲ್ಲಿಗೆ ಹೋದನು. ಪಂಡ್ಯಾನು ಅವನ ಹತ್ತಿರ ಬಂದೊಡನೆ ಕೈಯಲ್ಲಿದ್ದ ಛಡಿಯಿಂದ ಅವನನ್ನು ಜೋರಿನಿಂದ ಥಳಿಸತೊಡ-ಗಿದನು. ಪಂಡ್ಯಾನು ಗಡಿಬಿಡಿಯಿಂದ ತಿರುಗಿ ಹೊರಟನು. ಈ ಪರಿಣಾಮದಿಂದ ಜನರು ಸಿಟ್ಟಿಗೆದ್ದು ಪೋಲೀಸರ ಮೇಲೆ ಕಲ್ಲು ತೂರತೊಡಗಿದರು. ಯಿಟ್ಸನಿಗೆ ಅಷ್ಟೇ ನಿಮಿತ್ತ ಬೇಕಾಗಿತ್ತು. ಅವನು ಪಿಸ್ತೂಲಿನಿಂದ ಹಿಂದಿರುಗಿ ಹೋಗು ತ್ತಿದ್ದ ಪಂಡ್ಯಾನಿಗೆ ಹೊಡೆದನು. ಎರಡನೇ ಗುಂಡಿಗೆ ಮತ್ತೊಬ್ಬನು ಆಹುತಿ ಯಾದನು. ಜನರು ಅವರ ಹತ್ತಿರ ಧಾವಿಸತೊಡಗಿದರು. ಆದರೆ ಅವರ ಮೇಲೆಯೂ ಪಿಸ್ತೂಲು ಹಿಡಿದದ್ದರಿಂದ ಹಿಂದಕ್ಕೆ ಸರಿದರು. ಎಲ್ಲ ಕಡೆಗೂ ಹಾಹಾಕಾರವೆದ್ದಿತು. ಸಮುದಾಯವು ಚದುರಿತು. ಮಧ್ಯಾಹ್ನ ೩|| ಗಂಟೆಗೆ ವಾಡಿಗೆ ತಾರು ಬಂದಿತು. 'ನಿಮ್ಮ ಇಂಜನಿಯರ ಪಂಡ್ಯಾನು ಇಸ್ಲಾಮಪುರದ ದಂಗೆಯಲ್ಲಿ ಮರಣಹೊಂದಿದನು. ಹೆಣವನ್ನು ಒಯ್ಯಬಹುದು' ಎಂದು ಡಿ. ಎಸ್. ಪಿ.ಯು ತಾರು ಕೊಟ್ಟನು. ಅದರಂತೆ ಪಂಡ್ಯಾನ ಶವವನ್ನು ಮರುದಿನ ಮುಂಜಾನೆ ವಾಡಿಗೆ ತರಲು, ಅಲ್ಲಿ ಹಾಹಾಕಾರ ಉಂಟಾಯಿತು.

ತನ್ನ ಗಂಡನ ದಾರಿಯನ್ನು ಉತ್ಸುಕತೆಯಿಂದ ನಿರೀಕ್ಷಿಸುತ್ತಿದ್ದ ಪಂಡ್ಯಾನ ಹೆಂಡತಿಗೆ, ಪತಿದೇವನ ಮರಣ ವಾರ್ತೆಯಿಂದ ಸಿಡಿಲು ಬಡಿದಂತಾ

ಯಿತು. ಆಕೆಯ ಅವಸ್ಥೆಯನ್ನು ಎಂತು ವರ್ಣಿಸುವದು. ದಬ್ಬಾಳಿಕೆಗೆ ಮೆರವಣಿಗೆಯು ಮುರಿದು ಹೋಯಿತು. ಅದರಿಂದ ಚಳವಳಿ ನಿಲ್ಲಲಿಲ್ಲ. ಕಾರ್ಯಕರ್ತರು ಭೂಗತರಾದರು. ಆಗ್ಗಾಡಿಗಳನ್ನು ಕೆಡವುವದು, ಪೋಸ್ಟು, ಕಚೇರಿಗಳನ್ನು ಸುಡುವದು, ಖಜಾನೆ ಲೂಟು ಮಾಡುವದು ಇತ್ಯಾದಿ ಕ್ರಮ ಗಳಿದ್ದವು. ಕಿರ್ಲೋಸ್ಕರವಾಡಿಯ ಸುತ್ತುಮುತ್ತು ಈ ರೀತಿ ಅನೇಕ ಸಲ ನಡೆಯಿತು. ತಾಸಗಾಂವದ ಮೆರವಣಿಗೆಯಾದನಂತರ ಒಂದು ತಿಂಗಳ ಮೇಲೆ ಕಾರಖಾನೆ ತೆರೆದಿದ್ದರೂ ಪರಿಸ್ಥಿತಿಯು ಬಹಳ ಅಸ್ಥಿರವಾಗಿತ್ತು. ಪೋಲೀಸರ ಲಾರಿಗಳು ಬರಹೋಗುವದಕ್ಕೆ ತೆರಪೇ ಇರಲಿಲ್ಲ. ಸಂಶಯ ಬಂದ ಕೆಲಸಗಾರರನ್ನು ಬಂಧಿಸಲು ಅವರು ಬರುತ್ತಿದ್ದರು. ಅವರಿಗೆ ಬೇಡೆಂದು ಹೇಳುವವರಾರು ?

ಈ ಹೊತ್ತಿಗೆ ವಾರಂಟು ಹೊರಟ ಕಾರಖಾನೆಯೊಳಗಿನ ೨೦ ಜನರ ಹೆಸರುಗಳು ವರ್ತಮಾನಪತ್ರದಲ್ಲಿ ಪ್ರಕಟಗೊಂಡವು. ಅದರಲ್ಲಿ ಕಾರ ಖಾನೆಯ ಮೆಡಿಕಲ್ ಆಫೀಸರ, ಡಾ. ದಿವಾಣ, ವರ್ಕ್ಸ ಮ್ಯಾನೇಜರ ಅನಂತ ರಾವ ಫಳಣೀಕರರ ಹೆಸರುಗಳು ಆ ಯಾದಿಯಲ್ಲಿದ್ದವು. ರಾಜಕಾರಣವನ್ನು ಸ್ವಪ್ನದಲ್ಲಿಯೂ ತಾರದ ವ್ಯಕ್ತಿಗಳ ಮೇಲೆ ಸರಕಾರದ ವಕ್ರದೃಷ್ಟಿ ಬಿದ್ದುದನ್ನು ಕಂಡು ರಾಯರಿಗೆ ಆಶ್ಚರ್ಯವೆನಿಸಿತು. ಅವರನ್ನು ಬಂಧಿಸಿ ಒಯ್ದೇ ಬಿಟ್ಟರೆ ಏನು ಮಾಡಬೇಕೆಂಬ ವಿಚಾರ ರಾಯರಿಗೆ ಬಂದಿತು. ಅವರನ್ನೊಯ್ಯಲು ಡಿ. ಎಸ್. ಪಿ. ಯೇ ಪಾರ್ಟಿಯೊಂದಿಗೆ ಬಂದನು. ಆಗ ಲಕ್ಷ್ಮಣರಾಯರು ನಿಷ್ಕಾರಣವಾಗಿ ಜನರನ್ನು ಒಯ್ದರೆ ಕಾರಖಾನೆಯ ಕೆಲಸಕ್ಕೆ ತಡೆಯುಂಟಾ ಗುವದೆಂದೂ, ಈ ಇಬ್ಬರೂ ರಾಜಕೀಯದಿಂದ ನಿರ್ಲಿಪ್ತರಿರುವರೆಂದೂ ಮನ ಗಾಣಿಸಿ ಕೊಟ್ಟರು. ಸರಕಾರದ ಅನೇಕ ಬೇಡಿಕೆಗಳು ಈ ಮೂಲಕ ಹಾಗೆಯೇ ಕುಳಿತುಬಿಟ್ಟಿವೆ ಎಂದೂ ಹೇಳಲಾಗಿ, ಆ ಎಲ್ಲ ವಾರಂಟುಗಳನ್ನು ಡಿ. ಎಸ್. ಪಿ. ಯು ಹಿಂದಕ್ಕೆ ತೆಗೆದುಕೊಂಡನು.

ಭೂಗತರು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದರು. ಪೋಲೀಸರೊಡನೆ ಚಕ ಮಕಿಗೆ ಆರಂಭವಾದವು. ಶ್ರೀ ಸದೂಭಾವು ಪೆಂಢಾರಕರರು ದೊಡ್ಡ ಸಾಹಸ ಮಾಡಿ ತೋರಿಸಿದರು. ಅವರು ಶಿರೋಡೆ ಸ್ಟೇಶನ್ ರಕ್ಷಣೆಗಿರುವ ಪೋಲೀಸರ ಮೇಲೆ ಬಿದ್ದು ಅವರಲ್ಲಿದ್ದ ಶಸ್ತ್ರಾಸ್ತ್ರಗಳನ್ನು ದೋಚಿಕೊಂಡರು. ಭೂಗತ ಚಳುವಳಿಯ ಸ್ವರೂಪವೇ ಬದಲಾಯಿತು. ಅವರು ಸಾತಾರೆ ಜಿಲ್ಹೆಯಲ್ಲಿ

ಪತ್ರಿ ಸರಕಾರ ಸ್ಥಾಪಿಸಿದರು. ಅದರಿಂದ ಪೋಲೀಸ ಖಾತೆಯು ಬೆದರಿ ಹೋಯಿತು. ಅಷ್ಟು ಪತ್ರಿ ಸರಕಾರದ ದರ್ಪ ಕೂತಿತು.

ಜನರಿಗೆ ಕಾಯದೆಯ ಬೆಲೆಯೇ ಇಲ್ಲದಾಯಿತು. ಲೂಟಿಗೆ ದೇಶ ಭಕ್ತಿಯ ಸ್ವರೂಪ ಬಂದಿತು. ಅದರ ಅನುಭವ ಕಿರ್ಲೋಸ್ಕರವಾಡಿಗೂ ಬಂದಿತು. ಚಳವಳಿಯಲ್ಲಿ ಸೇರಿದ ಕೆಲವು ಕಾಮಗಾರರು ಕಾರಖಾನೆಗೆ ತಮ್ಮ ಕೈಚಳಕವನ್ನು ತೋರಿಸಿದರು. ಒಮ್ಮೆ ಕಿರ್ಲೋಸ್ಕರವಾಡಿಯ ಪೋಷ್ಟ ಲೂಟಿಮಾಡಲಾಯಿತು. ೧೪ನೇ ಅಕ್ಟೋಬರ ೧೯೪೪ ರಂದು ಮಧ್ಯಾಹ್ನ ೧೨ ಗಂಟೆಗೆ ಬಾಂಬೆ ಪ್ರಾವ್ಹಿನ್ಸಿಯಲ್ ಕೋಆಪರೇಟಿವ್ಹ ಬ್ಯಾಂಕಿನ ಶಿಪಾಯಿಯ ಮೇಲೆ ಬಿದ್ದು, ಅವನ ಕೈಯಲ್ಲಿದ್ದ ೨೫೫೦೦ ರೂ. ಗಳ ಅಪಹರಣವಾಯಿತು. ಎರಡನೆಯ ದಿವಸ ಕಾರಖಾನೆಯ ಒಬ್ಬ ಭಂಡಾರಿ (ಕ್ಯಾಶರ್) ಶ್ರೀ ನವರೆ ಎಂಬವರ ಮನೆಗೆ ರಾತ್ರಿಯಲ್ಲಿ ಪ್ರವೇಶಿಸಿ, ಪಿಸ್ತೂಲ್ ತೋರಿಸಿ ತಿಜೋರಿಯ ಕೈಗಳನ್ನು ಹಸ್ತಗತ ಮಾಡಿಕೊಂಡರು. ಎರಡನೆಯ ದಿನ ಸಂಬಳ ಕೊಡ-ಬೇಕಾದ್ದರಿಂದ ತಿಜೋರಿಯಲ್ಲಿ ಬಹಳ ಹಣವಿತ್ತು. ಕರ್ಮಧರ್ಮ ಸಂಯೋಗ ದಿಂದ ರಾತ್ರಿಯ ಗಾಡಿಯಿಂದ ಹೋಗುವ ಜನರನ್ನು ಕಳಿಸುವದಕ್ಕೆಂದು ಕಾರ ಖಾನೆಯ ಮೋಟಾರು ರಸ್ತೆಯಿಂದ ಹೊರಟಿತ್ತು. ಅದರ ಬೆಳಕು ತಿಜೋರಿಯ ಕೋಣೆಯಮೇಲೆ ಬಿದ್ದುದರಿಂದ ದರೋಡೆಗಾರರ ಹಂಚಿಕೆ ಕೈಗೂಡಲಿಲ್ಲ. ಅವರ ಕಾಲು ಸಪ್ಪಳ ಕೇಳಿಸುತ್ತಲೆ ದೊಡ್ಡ ಗಲಿಬಿಲಿ ಎದ್ದುಬಿಟ್ಟಿತು. ಇಡೀ ವಾಡಿಯೇ ಎಚ್ಚರವಾಯಿತು. ತುಡುಗರು ಕೀಲೀಕೈ ತೆಗೆದುಕೊಂಡು ಕಾಲಿಗೆ ಬುದ್ಧೀ ಹೇಳಿದರು. ಮುಂದೆ ಪೂಜಾರಿ ಎಂಬ ಕಾರಖಾನೆಯ ಫೋರಮನ್‌ನನ್ನು ಓಡಿಸಿಕೊಂಡು ಹೋಗಲಾಯಿತು. ಅವನ ಜೀವದ ಸುತ್ತೇ ಬಂದಿತ್ತು. ದೈವವಿತ್ತೆಂದು ಇಷ್ಟರ ಮೇಲೆಯೇ ಪಾರಾಯಿತು. ಈ ಗೊಂದಲದಲ್ಲಿ ಕಾರಖಾನೆಯ ಕಚೇರಿಗೂ ಬೆಂಕಿಯನ್ನಿಡಲಾಯಿತು. ಅದರಿಂದ ಬಹಳ ಹಾನಿಯಾಯಿತು,

ದೇಶದಲ್ಲಿ ಇಂಥ ಪ್ರಚಂಡ ಆಂದೋಲನವೆದ್ದು ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಯಿತು. ಸುಮ್ಮಸುಮ್ಮನೆ ಯಾರ್ಯಾರಿಗೋ ಹಾನಿ ತಟ್ಟ ಹತ್ತಿತು. ೪೨ರ ಚಳವಳಿಯ ಸ್ವರೂಪವೇ ಬಹಳ ಉಗ್ರವಾಯಿತು. ಭೂಗತ ರನ್ನು ಹಿಡಿಯುವ ಸಲುವಾಗಿ ಬ್ರಿಟಿಶ್ ಸರಕಾರವು ವಿಶ್ವಪ್ರಯತ್ನ ಮಾಡಿತು. ಈ ಚಳವಳಿಗೆ ಸಾಮಾನ್ಯ ಜನತೆಯ ಸಹಾನುಭೂತಿ ಸಾಕಷ್ಟು ದೊರೆ

ಯುತ್ತಿತ್ತು. ದೊಡ್ಡ ದೊಡ್ಡವರ ಆಶ್ರಯವೂ ಸಿಕ್ಕಿತ್ತು. ಭೂಗತರಿಗೆ ದೊಡ್ಡವರ ಸಹಾಯವಿತ್ತೆಂಬುದರಲ್ಲಿ ಔಂಧ ಸಂಸ್ಥಾನದ ಗಣನೆಯನ್ನೂ ಮಾಡದೆ ಬಿಡುವ ಹಾಗಿರಲಿಲ್ಲ.

ಸಂಸ್ಥಾನದ ಧೋರಣೆಯೂ, ಕಾರಖಾನೆಯ ಧೋರಣವೂ ಸುಮಾರಾಗಿ ಒಂದೇ. ಆದ್ದರಿಂದಲೇ ಕೆಲವು ಭೂಗತರು ವಾಡಿಯಲ್ಲಿ ಆಶ್ರಯ ಪಡೆದರು. ಅವರನ್ನು ಪೋಲೀಸರ ವಶಕ್ಕೆ ಹೇಗೆ ಕೊಡುವದು? ಸದ್ಯದ ಮುಂಬಯಿ ಸರಕಾರದ ಮುಖ್ಯ ಮಂತ್ರಿ ಯಶವಂತರಾವಜಿ ಚವ್ಹಾಣ ಮತ್ತು ಇನ್ನುಳಿದ ಕೆಲವು ಕಾರ್ಯಕರ್ತರು ಆಗ— ಕೆಲವೊಂದು ದಿವಸ ಕಿರ್ಲೋಸ್ಕರ ವಾಡಿಯಲ್ಲಿ ಅಜ್ಞಾತವಾಸವನ್ನು ಕಳೆದರು. ಈಗ ಇದನ್ನು ಬಹಿರಂಗಪಡಿಸಲಡ್ಡಿಯಿಲ್ಲ. ಅಚ್ಯುತರಾವ ಪಟವರ್ಧನರೂ ಆಗಾಗ ಬರುತ್ತಿದ್ದರು.

ಭೂಗತರ ಶೋಧ ಪೋಲೀಸರಿಗೆ ತೀರ ಹತ್ತದೆ ಇರುತ್ತಿದ್ದಿಲ್ಲ. ಚಳುವಳಿಯವರನ್ನು ಹಿಡಿದುಕೊಡಲು ಕಾರಖಾನೆಯವರಿಗೆ ಪೋಲೀಸರು ಬಹಳ ಗಂಟುಬಿದ್ದರು. ನಾನಾತರದ ಆಸೆಗಳನ್ನು ತೋರಿಸಲೂ ಹಿಂದೆ ಮುಂದೆ ನೋಡಲಿಲ್ಲ. ಯಾವ ಸಹಕಾರವೂ ಸಿಗದ್ದರಿಂದ ಕಾರಖಾನೆಯ ಮೇಲೆ ಹಲ್ಲುಕಡಿಯುತ್ತಿದ್ದರು. ಈ ತಾಟಸ್ಥ್ಯ ಧೋರಣೆಯು— ತಂತಿಯ ಮೇಲಿನ ಕುಣಿತವಿದ್ದಂತೆ. ಅದು ಎಷ್ಟು ದಿವಸ ಹೀಗೆಯೇ ನಡೆದೀತು! ಎಂದಾದರೂ ಅದರ ಸೋಕ್ಷ–ಮೋಕ್ಷವಾಗಿಯೇತೀರಬೇಕು. ಆ ದಿನವೂ ಬಂದಿತು. ಚಾಲಕರು ಯಾವ ರೀತಿಯಿಂದಲೂ ತಮಗೆ ಅನುಕೂಲವಿಲ್ಲೆಂದು ಪೋಲೀಸರು 'ಇಂದ್ರಾಯ ತಕ್ಷಕಾಯ ಸ್ವಾಹಃ' ಎಂಬ ಮಂತ್ರದ ಉಪಯೋಗ ಮಾಡಿಕೊಳ್ಳಲು ನಿಶ್ಚಯಿಸಿದರು.

ಕಿರ್ಲೋಸ್ಕರವಾಡಿಯ ಚಾಲಕರು ಪಿಸ್ತೂಲು ತಯಾರಿಸಿ ಈ ಭೂಗತರಿಗೆ ಒದಗಿಸುತ್ತಿದ್ದಾರೆಂದು ನಿಶ್ಚಯಿಸಿ ಅವರಿಗೂ ಸೆರೆಮನೆಯ ಗಾಳಿ ತಿನಿಸಬೇಕೆಂಬ ಒಂದು ಕುಟಿಲ ಹಂಚಿಕೆಯನ್ನು ಅವರು ಹಾಕಿದರು. ಇದನ್ನು ಸಾಧಿಸಲು ಇಂಥ ಉದ್ಯಮವನ್ನು ಬಲ್ಲ ಒಬ್ಬ ಪ್ರಸಿದ್ಧ ವ್ಯಕ್ತಿಯನ್ನು ಕೈಯಲ್ಲಿ ತೆಗೆದುಕೊಂಡರು. ಅವರು ಹಳ್ಳಿಯ ಕಂಬಾರನಿಂದ ಎರಡು ದೇಶೀ ಪಿಸ್ತೂಲುಗಳನ್ನು ತಯಾರಿಸಿಕೊಂಡರು. ಅವುಗಳಲ್ಲಿ ಒಂದನ್ನು ಕಾರಖಾನೆಯ ಮೋಲ್ಡಿಂಗ್ ಶೆಡ್ಡಿನ ಎದುರು ಉಸುಕಿನ ಪಂಪಿನಲ್ಲಿ ಹುಗಿದಿಡುವಂತೆ ವ್ಯವಸ್ಥೆಯನ್ನು ಮಾಡಿದರು.

ಇಷ್ಟಾದನಂತರ ೧೯೪೩ ರ ಮಾರ್ಚ ೧೭ ರಂದು ಮುಂಜಾನೆ ೮॥ ಗಂಟೆಗೆ ಕಾರಖಾನೆಗೆ ಮುತ್ತಿಗೆ ಹಾಕಲು ೨೦೦ ಸಶಸ್ತ್ರ ಸಿಪಾಯರು, ೧೫-೧೭ ಸಬ್ ಇನ್‌ಸ್ಪೆಕ್ಟರುಗಳನ್ನು ಕರೆದುಕೊಂಡು ಡಿ. ಎಸ್. ಪಿ. ಯು ಅಕಸ್ಮಾತ್ತಾಗಿ ಬಂದನು. ಒಮ್ಮೆಲೆ ಶೀಟಿಯ ಕರ್ಕಶ ಶಬ್ದವು ಕೇಳಿಸಿತು. ರಾಯಫಲ್ ಧರಿಸಿದ ಪೋಲೀಸರು ಮೋಟಾರಿನಿಂದ ಭರಭರನೆ ಇಳಿಯತೊಡಗಿದರು. ಒಳಗೂ ಹೊರಗೂ ಕಾರಖಾನೆಯ ಸುತ್ತಲೂ ಕಾವಲಾಗಿ ನಿಂತರು.

ಈ ಪೋಲೀಸರು ಬರುವ ಹದಿನೈದು ನಿಮಿಷ ಮೊದಲು ಪಕ್ಕದ ಹಳ್ಳಿಯಿಂದ ಒಬ್ಬ ಹುಡುಗನು ಸಾಯಕಲ್ಲಿನಿಂದ ವಾಡಿಗೆ ಬಂದನು. ಅವನು ಕಾಗದದಲ್ಲಿ ಸುತ್ತಿದ ಒಂದು ಪುಡಿಕೆಯನ್ನು ತಂದಿದ್ದನು. ಅದನ್ನು ತೆಗೆದುಕೊಂಡು ಅವನು ಅನಂತರಾವ ಫಳಣೀಕರರ ಕಡೆಗೆ ಹೋಗಿ, ಅವರ ಹುಡುಗನ ಕೈಯಲ್ಲಿ ಕೊಟ್ಟು ಅದನ್ನೊಯ್ದು ಮನೆಯಲ್ಲಿಡಲು ಹೇಳಿದನು. ಅಷ್ಟು ಹೇಳಿದವನೇ ಅವನು ಎತ್ತಲೋ ಹೋಗಿಬಿಟ್ಟನು. ಅನಂತರಾಯರ ಹುಡುಗನಿಗೆ ಇದು ಚಮತ್ಕಾರವೆನಿಸಿದ್ದರಿಂದ ತೆರೆದು ನೋಡಲಾಗಿ ದೇಶೀ ಪಿಸ್ತೂಲಿನ ಒಂದೆರಡು ಕಚ್ಚಾ ಭಾಗಗಳಾಗಿದ್ದವು. ಅದರಿಂದಂತೂ ಅವನಿಗೆ ಇನ್ನಿಷ್ಟು ಸಂಶಯ ಬಂದಿತು. ಅವನು ಆ ಪುಡಿಕೆ ತೆಗೆದುಕೊಂಡು ಕಾರಖಾನೆಯ ಮ್ಯಾನೇಜರರ ಕಡೆಗೆ ಹೋದನು. ಅವರು ಅಲ್ಲಿರದ್ದರಿಂದ ಆ ಪುಡಿಕೆಯನ್ನು ಅವರ ಮೇಜಿನ ಮೇಲಿಟ್ಟು ಅವನು ಮನೆಗೆ ಮರಳಿದನು.

ಯೇಟ್ಸ ಹಾಗು ಪೋಲೀಸರಲ್ಲಿ ಭೂತ ಸಂಚಾರವೇ ಆಗಿರಬೇಕೆಂದು ನೋಡಿದವರಿಗೆ ಅನಿಸುವಂತಿತ್ತು. ಅವರ ಸೊಕ್ಕನ್ನು ವಿಚಾರಿಸುವವರಾರು? ಅವರು ಮೋಲ್ಡಿಂಗ ಶೆಡ್ಡನ್ನು ೨-೨॥ ತಾಸು ಪರೀಕ್ಷಿಸಿ, ಉಸುಕಿನ ಪಂಪಿನಲ್ಲಿಯ ಒಂದು ಪಿಸ್ತೂಲನ್ನು ಶೋಧಿಸಿ ? ತೆಗೆದರು ! ಅಷ್ಟರಲ್ಲಿ ಕೆಲವು ಪೋಲೀಸರು ಲಕ್ಷ್ಮಣರಾಯರ ಮನೆಯಲ್ಲಿ ನುಗ್ಗಿ ಪರೀಕ್ಷಿಸತೊಡಗಿದರು. ಮನೆಯಲ್ಲಿಯ ಸಾಮಾನುಗಳನ್ನು ಸಿಕ್ಕಾಬಟ್ಟೆ ಹರವಿ ಅವ್ಯವಸ್ಥೆಯನ್ನುಂಟು ಮಾಡಿದರು. ಸೂಕ್ಷ್ಮರೀತಿಯಿಂದ ನಿರೀಕ್ಷಣೆ ಮಾಡಿದರು.

ಲಕ್ಷ್ಮಣರಾಯರು ವ್ಹರಾಂಡಾದಲ್ಲಿ ಕುರ್ಚಿಯಮೇಲೆ ಕುಳಿತು ಪೋಲೀಸರು ಮಾಡುವ ಅನರ್ಥವನ್ನು ನೋಡುತ್ತಿದ್ದರು. ಪೋಲೀಸರ ಕರ್ತವ್ಯವೆಂದರೆ ಎರಡನೆಯವರ ಮಾಲನ್ನು ಸಂರಕ್ಷಿಸುವದು. ಅವನ್ನು ಹಾಳು ಮಾಡುವದಲ್ಲ. ಅವರೇ ಲೂಟಿಗೆ ನಿಂತಮೇಲೆ ಇನ್ನಾರಿಗೆ ಹೇಳಿಕೊಳ್ಳಬೇಕು?

ಪೇಲ್ಹಿಂಗಶೆಡ್ಡಿನ ಕೆಲಸ ತೀರಿಸಿ ಡಿ. ಎಸ್. ಪಿ.ಯು ಅನಂತರಾಯರ ಮನೆಯ ಕಡೆಗೆ ನಡೆದನು. ಅಲ್ಲಿ ಎಲ್ಲವನ್ನೂ ಅವ್ಯವಸ್ಥಿತಗೊಳಿಸಲು ಹಿಂದೆ ಮುಂದೆ ನೋಡಲಿಲ್ಲ. ಉಪ್ಪಿನಕಾಯಿಯ ಭರಣಿಯನ್ನು ಡಬ್ಬು ಹಾಕಿದರು. ಯಾತಕ್ಕಾಗಿ ಹೀಗೆ ಮಾಡುತ್ತಾರೆಂಬ ಕಲ್ಪನೆ ಯಾರಿಗೂ ಬರಲಿಲ್ಲ. ಮಧ್ಯಾಹ್ನ ೩-೪ ಗಂಟೆಯಾದರೂ ಆಕ್ಷೇಪಕಾರಕವಾದುದೇನೂ ಸಿಗದ್ದರಿಂದ ಸಾಹೇಬನ ಪಿತ್ತ ನೆತ್ತಿಗೇರಿತು. ಅದೇ ಸಿಟ್ಟಿನಿಂದ ಹೊರಟೂ ಹೋದನು. ಅಂದೇ ಕಾರಖಾನೆಯ ೨೦-೨೨ ಕೆಲಸಗಾರರನ್ನು ಬಂಧಿಸಲಾಯಿತು. ಆ ನಂತರ ಅವನು ದಾರಿಹಿಡಿದರು.

ಈ ಎಲ್ಲ ಅನರ್ಥಕಾರಕ ದೃಶ್ಯದಿಂದ ವ್ಯಥಿತ ಮನಸ್ಕರಾಗಿ ವ್ಯವಸ್ಥಾಪಕರು ಸಾಯಂಕಾಲ ಮನೆಗೆ ಬಂದರು. ಅಷ್ಟರಲ್ಲಿ ಅನಂತರಾಯರ ಮಗನು ಬಂದು ತಮ್ಮ ಮನೆಯಲ್ಲಿ ನಡೆದ ಸಂಗತಿಯನ್ನು ಅವರಿಗೆ ತಿಳಿಸಿದನು. ಅವನನ್ನು ಕರೆದುಕೊಂಡು ಅವರು ಪುನಃ ಕಚೇರಿಗೆ ಬಂದರು. ಮೇಜಿನ ಮೇಲಿರಿಸಿದ್ದ ಕಾಗದವ ಪುಡಿಕೆ ತೆರೆಯಲಾಗಿ, ಪೋಲೀಸರು ಬೆಳಿಗ್ಗೆ ಜಪ್ತ ಮಾಡಿಕೊಂಡು ಹೋದಂಥ ಮಾದರಿಯ ಪಿಸ್ತೂಲಿನ ಎರಡು ಭಾಗಗಳು ಅವರ ದೃಷ್ಟಿಗೆ ಬಿದ್ದವು. ಕೂಡಲೇ ಅವರಿಗೆ ಯಾವುದೋ ನೆನಪಾದಂತೆ ಕಂಡಿತು. ಪೋಲೀಸರ ಕಾರಸ್ಥಾನ ಹೊರಬಿದ್ದಿತು. ಪೋಲೀಸರ ಪರೀಕ್ಷೆಯಲ್ಲಿ ಈ ಭಾಗಗಳು ಅನಂತರಾಯರ ಮನೆಯಲ್ಲಿ ಸಿಕ್ಕದ್ದಾಗಿದ್ದರೆ ಚಾಲಕರನ್ನು ಇದರಲ್ಲಿ ಸಿಗಿಸಿ, ಪೋಲೀಸರು ಏನು ಬೇಕಾದ್ದನ್ನು ಮಾಡಬಹುದಾಗಿತ್ತೋ ? ಎಂದು ಅವರ ಎದೆ ನಡುಗಿತು.

ಈ ಪಿಸ್ತೂಲಿನ ಪ್ರಕರಣದ ವಿಚಾರಣೆಯು ನಿಷ್ಪಕ್ಷಪಾತದಿಂದ ನಡೆಯಬೇಕೆಂದು ಸಂಸ್ಥಾನವು ವರಿಷ್ಠ ಅಧಿಕಾರಿಗಳನ್ನು ನಿಯಮಿಸಿತು. ಈ ಕೆಲಸದಲ್ಲಿ ಎ. ಜಿ. ಸಾಹೇಬರ ಪೋಲೀಸ ಖಾತೆಯ ವರಿಷ್ಠ, ರಾ. ಸಾ. ಜೋಶಿ ಮತ್ತು ಹಿಂದುಸ್ಥಾನ ಸರಕಾರದ ಪೂರೈಕೆ ಖಾತೆಯ ಮಿ| ಕ್ಲಾರ್ಕ ಎಂಬ ಅಧಿಕಾರಿಯನ್ನು ನಿಯಮಿಸಲಾಯಿತು. ಅವರು ಸಾದರ ಪಡಿಸಿದ ವರದಿಯನ್ನು ನೋಡಿ, ರಾಜೇಸಾಹೇಬರು ಮುಂದೆ ಕಾಣಿಸಿದಂತೆ ನಿರ್ಣಯವನ್ನಿತ್ತರು.

"ಜಪ್ತಮಾಡಿದ ಪಿಸ್ತೂಲಿನ ಆಕಾರದ ವಸ್ತುವನ್ನು ಬೇಕಾದ ಹಳ್ಳಿಯ ಕಂಬಾರನು ಮಾಡಬಲ್ಲನು. ಸಾವಿರಾರು ಜನರು ದುಡಿಯುವಂಥಲ್ಲಿ ಇಂಥ

ಸಾಮಾನು ತಯಾರಿಸುವದು ಅಸಂಭವನೀಯವಾದುದು. ಪೋಲೀಸ ದಳವು ಬರುವದಕ್ಕಿಂತ ಮೊದಲೇ ಯಾವನೋ ಒಬ್ಬನು ಇದೇ ಮಾದರಿಯ ಪದಾರ್ಥವನ್ನು ವರ್ಕ್ಸ್‌ಮ್ಯಾನೇಜರ ಅನಂತರಾವ ಫಳಣೀಕರರ ಮನೆಯಲ್ಲಿ ಡಲು ಯತ್ನಮಾಡಿದನು. ಈ ಎಲ್ಲ ಸಂಗತಿಗಳ ಮೇಲಿಂದ ನೋಡಲಾಗಿ



**ಇವೇ ಆ ಪೋಲೀಸರ ಕಾರಸ್ಥಾನದಲ್ಲಿ ದೊರೆತ ಪಿಸ್ತೂಲುಗಳು**

ಈ ಪದಾರ್ಥಗಳು ಕಿರ್ಲೋಸ್ಕರ ಕಾರಖಾನೆಯಲ್ಲಿ ತಯಾರಾಗಿರುವದಿಲ್ಲ. ಕಾರಖಾನೆಯ ಹಿತಶತ್ರುಗಳು, ಕಾರಖಾನೆಯ ಚಾಲಕರನ್ನು ಸಂಕಟಕ್ಕೀಡು ಮಾಡಬೇಕೆಂದು ರಚಿಸಿದ ಕಾರಸ್ಥಾನ ಇದಾಗಿರುವದೆಂಬದು ತೀರ ಸ್ಪಷ್ಟವೇ ಆಗಿದೆ."

೧೯೪೨ ರ ಆಂದೋಲನದಲ್ಲಿ ಪೋಲೀಸರು ಅಸಂಖ್ಯ ಸ್ಥಾನಗಳಲ್ಲಿ ಮುತ್ತಿಗೆ ಹಾಕಿ ಅನನ್ವಿತ ಕಾರ್ಯ ಮಾಡಿದರು. ಕಿರ್ಲೋಸ್ಕರವಾಡಿಯ

ಪಿಸ್ತೂಲದ ಪ್ರಕರಣದಲ್ಲಿ ಮಾತ್ರ ಪೋಲೀಸರ ಫಜೀತಿಯೇ ಆಯಿತು. ಡಿ. ಎಸ್. ಪಿ. ಗೆ ಮುಖ ತೋರಿಸಲು ಸ್ಥಾನವೇ ಉಳಿಯಲಿಲ್ಲ. ಸರಕಾರವು ಅವನನ್ನು ಡಿ. ಎಸ್. ಪಿ. ಯ ಸ್ಥಾನದಿಂದ ಬಿಡಿಸಿ, ನಾಸಿಕದ ಪೋಲೀಸ ಶಾಲೆಯಮೇಲೆ ನಿಯಮಿಸಿತು.

ಈ ಪ್ರಕರಣವನ್ನು ಪೂರ್ತಿಗೊಳಿಸುವ ಮೊದಲು ಇದಕ್ಕೇ ಸಂಬಂಧ ಪಟ್ಟ, ಎರಡು ಘಟನೆಗಳ ಉಲ್ಲೇಖ ಮಾಡುವದು ಯುಕ್ತವಾಗಿದೆ.

ಕಾರಖಾನೆಯ ಉಮಾ ಶಂಕರ ಪಂಡ್ಯಾನು ಇಸ್ಲಾಮಪುರದ ಗೋಳೀ ಬಾರಿಗೆ ಆಹುತಿಯಾದನು. ಅದರಂತೆ ಸದುಭಾವೂ ಪೆಂಢಾರಕರ ಅವರ ಭೂಗತಕಾರ್ಯವು ಸಾಗಿರುವಾಗ ಅವರು ಪೋಲೀಸರ ಕೈಗೆ ಸಿಕ್ಕು ಶಿಕ್ಷಿಸಲ್ಪಟ್ಟು, ಸೆರೆಮನೆಗೆ ತೆರಳಿದರು. ಸದುಭಾವೂ ಅವರ ಪ್ರಕೃತಿಯು ನಿರೋಗಿಯಾಗಿದ್ದರೂ ಸೆರೆಮನೆಯೊಳಗಿನ ಪೀಡೆಯಿಂದ ಅವರು ಅಕಾಲಿಕ ಮೃತ್ಯುವಿಗೆ ತುತ್ತಾಗಬೇಕಾಯಿತು. ಅವರು ತೀರಿಕೊಂಡ ಸುದ್ದಿಯು ಹತ್ತುತ್ತಲೆ ೧೩–೪–೧೯೪೬ ರಂದು ಕಾರಖಾನೆಯ ಕೆಲಸವು ಸ್ಥಗಿತವಾಯಿತು; ಕಾಮಗಾರರು ಅವರಿಗೆ ಶ್ರದ್ಧಾಂಜಲಿಯನ್ನರ್ಪಿಸಿದರು.

ಈ ಹುತಾತ್ಮರಿಬ್ಬರ ಸ್ಮರಣಾರ್ಥವಾಗಿ ಕಿರ್ಲೋಸ್ಕರವಾಡಿಯಲ್ಲಿ ಒಂದು ಕೀರ್ತಿ-ಕಂಬವು ನಿಲ್ಲಿಸಲ್ಪಟ್ಟು, ಅದರ ಉದ್ಘಾಟನೆಯನ್ನು ತಾ|| ೧೯ನೇ ಅಗಸ್ಟ ೧೯೫೭ ರಂದು ಮುಂಬಯಿ ರಾಜ್ಯದ ·ಮುಖ್ಯ ಮಂತ್ರಿ ಮತ್ತು ಸದುಭಾವೂ ಅವರ ಆ ಕಾಲದ ಸಹಕಾರಿ ಶ್ರೀ. ಯಶವಂತರಾವ ಚವ್ಹಾಣ ಇವರ ಹಸ್ತದಿಂದ ಬಹು ಗೌರವಪೂರ್ವಕವಾಗಿ, ಸಂಸ್ಮರಣೀಯವಾಗಿ ಪೂರೈಸಲಾಯಿತು. ಈ ಸಮಾರಂಭಕ್ಕೆ ಪೆಂಢಾರಕರರ ಬಂಧು–ಭಗಿನಿಯರು ಮತ್ತು ಪಂಡ್ಯಾ ಅವರ ಹೆಂಡತಿ ಹಾಗೂ ಬಂಧು–ಭಗಿನಿಯರು ಉಪಸ್ಥಿತರಾದ್ದರಿಂದ ಅದಕ್ಕೆ ಸಹಜವಾಗಿ ಅತ್ಯಂತ ಉದಾತ್ತ ಮತ್ತು ಹೃದಯಸ್ಪರ್ಶಿಯಾದ ಸ್ವರೂಪವು ಪ್ರಾಪ್ತವಾಯಿತು.

ಈ ಆಂದೋಲನವು ನಾಲ್ಕು ವರ್ಷ ನಡೆದಮೇಲೆ ಸರಕಾರ ಹಾಗೂ ಕಾಂಗ್ರೆಸ್ಸುಗಳ ನಡುವೆ ಒಪ್ಪಂದವಾಯಿತು. ಕಾರ್ಯಕರ್ತರೆಲ್ಲರೂ ಸೆರೆಮನೆಯಿಂದ ಬಿಡುಗಡೆ ಮಾಡಲ್ಪಟ್ಟರು. ಭೂಗತರಾಗಿ ಬ್ರಿಟಿಶ್ ಸರಕಾರವನ್ನು ಹಣ್ಣಿಗೆ ತಂದಂಥ ಕ್ರಾಂತಿವೀರರೂ ಪ್ರಕಟವಾದರು. ಅಲ್ಲಲ್ಲಿ ಅವರ ಸ್ವಾಗತ ಸಮಾರಂಭಗಳು ಜರುಗತೊಡಗಿದವು. ಈ ಮುಂದಾಳುಗಳ ಮೆರವಣಿಗೆಯ

ಸ್ವೇನು ವರ್ಣಿಸುವದು? ಅದರಲ್ಲಿ ಆ ಭೂಗತ ಚಳುವಳಿಯ ಸೂತ್ರಧಾರರಾದ ಶ್ರೀ ನಾನಾ ಪಾಟೀಲರ ದರ್ಶನಕ್ಕೆಂದು ಅಪೂರ್ವ ಜನಸಮೂಹ ನೆರೆಯಿತು. ಅವರೀಗ ಒಬ್ಬ ಐತಿಹಾಸಿಕ ಪುರುಷರೇ ಆಗಿದ್ದಾರೆ. ಕಿರ್ಲೋಸ್ಕರವಾಡಿಗೆ ಈ ಕ್ರಾಂತಿವೀರನ ಆಗಮನವು ೧೨-೫-೧೯೪೬ ನೇ ದಿನ ಆಯಿತು. ಅವನ ಸ್ವಾಗತಕ್ಕಾಗಿ ಸಾವಿರಾರು ಜನರು ನೆರೆದರು.

ಈ ಮಂಡಳಿಯ ಸ್ವಾಗತವಾದಮೇಲೆ ನಾನಾ ಪಾಟೀಲರು ತಮ್ಮ ಕಾರ್ಯಕ್ಕೆ ಜನತೆಯು ಯಾವ ರೀತಿಯಿಂದ ನೆರವಾಯಿತೆಂಬದನ್ನು ಸ್ವಲ್ಪದ ರಲ್ಲಿಯೇ ವಿವರಿಸಿ ಹೇಳಿದರು. ತಮ್ಮ ಸತ್ಕಾರ ಮಾಡಿದವರ ಆಭಾರವನ್ನು ಮಾಡಿದರು. ಆ ಮೇಲೆ ತಮ್ಮ ಸಹಕಾರಿಗಳೆಲ್ಲರನ್ನು ಕರೆಕರೆದು ಅವರವರ ಪರಿಚಯವನ್ನು ಮಾಡಿಕೊಟ್ಟರು. ಅವರು ಮಾಡಿತೋರಿಸಿದ ಪರಾಕ್ರಮದ ವರ್ಣನೆಯನ್ನು ಸ್ವಲ್ಪದರಲ್ಲಿಯಾದರೂ ಚನ್ನಾಗಿ ವರ್ಣಿಸಿ ಹೇಳಿದರು. ಅದ ರಲ್ಲಿ ಧುಳೆಯ ಖಜಾನಿಯ ಲೂಟಿ, ಲೋಣಂದ ಬ್ಯಾಂಕಿನ ದರೋಡೆ, ಶೆಣೋಲಿ ಸ್ಟೇಶನದ ಹತ್ತಿರವಿರುವ ಪೇ. ಸ್ಪೇಶಲ್‌ದ ಲೂಟಿ, ಸುರಲಯಖಿಂಡಿಯಲ್ಲಿ ಮಾಡಿದ ಕೆಲಸ, ಪೋಲೀಸರ ಶಸ್ತ್ರಾಸ್ತ್ರಗಳನ್ನು ಮುತ್ತಿದುದು, ರಹದಾರಿ ದಾರಿಯ ಬಂಗಲೆಯನ್ನು ಸುಡುವದು— ಇತ್ಯಾದಿಗಳ ಸಂಗತಿಗಳನ್ನು ವಿವರಿಸಿದರು. ನಂತರ ಕಾರಖಾನೆಯ ಚಾಲಕರು, ಈ ಕಾರ್ಯಕರ್ತರ ಕೊರಳಲ್ಲಿ ಮಾಲೆಯನ್ನು ಹಾಕಿ, ಕೈಗೆ ಗುಚ್ಛವನ್ನು ಕೊಟ್ಟರು. ಕರತಾಡ ನವು ಒಂದೇಸವನೆ ನಡೆದೇ ಇತ್ತು.

ಈ ಪರಿಚಯದ ವಿಧಿಯು ನಡೆದಿರುವಾಗ ಒಬ್ಬ ಹೊಸ ವೀರನು ಮುಂದೆ ಬಂದನು. ಅವನ ಕಡೆಗೆ ನೋಡುತ್ತ ನಾನಾ ಪಾಟೀಲರು 'ಈ ಸ್ವಾರಿಯ ಪರಿಚಯವನ್ನು ನಿಮಗೆ ಯಾತಕ್ಕಾಗಿ ಮಾಡಿಕೊಡಬೇಕು? ಅವರು ನಿಮ್ಮೊಳಗಿನವರೇ. ಅವರು ತಮ್ಮ ಕೆಲಸವನ್ನು ನಿಮ್ಮ ಕಣ್ಮುಂದೆಯೇ ಇಲ್ಲಿಯೇ ಮಾಡಿ ತೋರಿಸಿದ್ದಾರೆ"

ಚಾಲಕರು ಅವರ ಮುಖದ ಕಡೆಗೆ ನೋಡಿದರು.....ಅವರು ಕಿರ್ಲೋಸ್ಕರವಾಡಿಯ ಬ್ಯಾಂಕಿನ ಸಿಪಾಯಿಯಮೇಲೆ ಹಾಡೇಹಗಲೇಮುತ್ತಿ ೨೨,೫೦೦ ರೂಪಾಯಿಗಳನ್ನು ಲೂಟಿಮಾಡಿದ ಕೆಲಸಗಾರನೇ ಅವರ ಮುಂದೆ ನಿಂತ ವನು! ಅವನ ಕಡೆಗೆ ನೋಡಿ ಚಾಲಕರು ಸ್ವಲ್ಪ ನಕ್ಕರು. ಅವರು ಅವನ ಕೊರಳಲ್ಲಿಯೂ ಮಾಲೆಯನ್ನು ಹಾಕಿದರು.

ಹೊರಗಿನ ಜಗತ್ತಿನಲ್ಲಿ ಯಾವುದಾದರೂ ಕಾರಣಗಳಮೂಲಕ ಗೊಂದಲವೆದ್ದಿತೆಂದರೆ ಆ ಭಾಗದಲ್ಲಿಯ ಕಾರಖಾನೆಯನ್ನು ನಡೆಸುವವರಿಗೆ ಎಷ್ಟು ತೊಂದರೆಯಾಗುತ್ತದೆ! ಆ ಪ್ರಸಂಗಕ್ಕೆ ಎದೆಕೊಟ್ಟು ಹೇಗೆ ನಿಲ್ಲಬೇಕಾಗುವದೆಂಬ ಪ್ರತ್ಯಕ್ಷ ಚಿತ್ರವೇ ಇದಾಗಿದೆ. ಅದರಿಂದ ಇಂಥವೇಳೆಯಲ್ಲಿ ಈ ಕಾದಾಟದಿಂದ ಅಲಿಪ್ತರಾಗಿದ್ದುಕೊಂಡು ತಮ್ಮ ಕೆಲಸವನ್ನು ಮಾಡುತ್ತಿರುವದು ಈ ಕಾರಖಾನೆದಾರರಿಗೆ ಮನಸ್ಸಿದ್ದರೂ ಅದನ್ನು ಮಾಡುವದು ಅಶಕ್ಯವಾಗಿರುತ್ತದೆ. ಇಷ್ಟರಿಂದಲೇ ತಾಟಸ್ಥ್ಯದ ತತ್ವವು ಎಷ್ಟೋ ಉದಾತ್ತವೂ ಶ್ರೇಯಸ್ಕರವೂ ಆಗಿದ್ದರೂ ಅದು ಯಾವಾಗಲೂ ಉಪಯುಕ್ತವಾಗಲಾರದೆಂಬ ಬೋಧವನ್ನು ತೆಗೆದುಕೊಳ್ಳತಕ್ಕದ್ದು.

ಈ ಎಲ್ಲ ಸಂಕಟಗಳಿಂದ ಲಕ್ಷ್ಮಣರಾಯರು ಪಾರುಗಂಡಿದ್ದರೂ ಅದರಿಂದ ಅವರ ಎಲ್ಲ ತೊಂದರೆಗಳು ತಪ್ಪಿದವೆಂದು ಮಾತ್ರ ಆಗಲಾರದು. ಅವರು ಈ ವರೆಗೆ ಎದೆಗೊಟ್ಟು ನಿಲ್ಲಬೇಕಾದುದು ಹೊರಗಿನ ಅನುವು ಆಪತ್ತುಗಳಿಗೇ ಮಾತ್ರ. ಮುಂದೆ ಅವರು ಅಂತರಂಗಿಕ ವಿರೋಧವನ್ನು ಎದುರಿಸಬೇಕಾಯಿತು. ಅದರ ಮುಂದೆ ಅವರ ಆಟವು ಸಾಗದೆ, ಅದಕ್ಕೆ ಬಗ್ಗಿ ನಡೆಯಬೇಕಾಯಿತು.

೨೩

# ಕೂಲಿಕಾರರ ಪಪ್ಪಾ ! (ತಂದೆ)

ಕಿರ್ಲೋಸ್ಕರವಾಡಿಯ ಪೂರ್ವಕ್ಕೆ ಒಂದೂವರಿ ಮೈಲಿನ ಮೇಲಿರುವ ಹಳ್ಳವೊಂದರ ಬದಿಗೆ ಒಂದು ಚಿಕ್ಕ ಹಳ್ಳಿಯಿದೆ. ಅಲ್ಲಿಯ ಜನರೆಲ್ಲರೂ ಒಕ್ಕಲಿಗರೆ. ಈ ಹಳ್ಳಿಗೆ ಒಂದು ಕಥೆಯೇ ಇದೆ. ಅದನ್ನು ಹೀಗೆ ಹೇಳುತ್ತಾರೆ:— ಹಿಂದೆ ಯಾವಾಗಲೋ ಒಮ್ಮೆ ಈ ಸ್ಥಳದಲ್ಲಿ ಎರಡು ಕೋಣಗಳ ಕಾದಾಟ ನಡೆಯಿತು. ಅದನ್ನು ಇಲ್ಲಿಯ ಭೀಮಸೇನನೊಬ್ಬನು ಬಿಡಿಸಿದನು. ಅದಕ್ಕಾಗಿ ಈ ಹಳ್ಳಿಗೆ 'ರೇಡೇವಾಡಿ' (ಕೋಣನೂರು) ಎಂಬ ಹೆಸರು ಬಿದ್ದಿತು. ಅದರಂತೆ ಅಲ್ಲಿ ವಾಸಿಸುವವರಿಗೆ 'ರೇಡಾ' ಎಂಬ ಅಡ್ಡ ಹೆಸರೂ ಬಿದ್ದಿತು.

ಕಿರ್ಲೋಸ್ಕರವಾಡಿಯಲ್ಲಿಯ ಕೆಲಸಗಾರರಲ್ಲಿ ಬಹು ಸಂಖ್ಯಾಕರು ಈ ಹಳ್ಳಿಯವರು. ಅವರನ್ನು ಇದೇ ಹೆಸರಿನಿಂದ ಕರೆಯಲಾಗುತ್ತಿತ್ತು. ಈ ಹೆಸರಿನಲ್ಲಿ ಏನಾದರೂ ಅಪಮಾನಾಸ್ಪದವಿದೆ ಎಂದು ಯಾರಿಗೂ ಅನಿಸುವಂತಿರಲಿಲ್ಲ.

ಆದರೂ ಲಕ್ಷ್ಮಣರಾಯರಿಗೆ ಮಾತ್ರ ಈ ಕೆಲಸಗಾರರಿಗೆ 'ರೇಡಾ' (ಕೋಣ) ಎಂದು ಸಂಬೋಧಿಸುವದು ಅನುಚಿತವೆಂದೆನಿಸಿತು. ಅದರಿಂದ ಅವರು ಈ ಅಡ್ಡಹೆಸರನ್ನು ಬದಲಾಯಿಸಲು ನಿಶ್ಚಯಿಸಿ ಕೆಲಸಗಾರರ ಮನವನ್ನು ಒಲಿಸಿ 'ಸಾವಂತ' ಎಂಬ ಅಡ್ಡಹೆಸರಿನಿಂದ ಕರೆಯಲು ಉದ್ಯುಕ್ತರಾದರು. ಹಳೆಯ ಹೆಸರಿನಿಂದ ಕರೆಯುವವರಿಗೆ ಪ್ರತಿಯೊಂದು ಸಲಕ್ಕೆ ಅರ್ಧ ಆಣೆಯಂತೆ ದಂಡ ತೆರಬೇಕಾಗುವದೆಂದು ಆಜ್ಞೆ ಹೊರಡಿಸಿದರು. ಅದರಿಂದ ಈ ಎಲ್ಲ ರಹಿವಾಸಿಗಳು ಈಗ ಹೊಸ ಅಡ್ಡಹೆಸರಿನಿಂದ ಕರೆಯಲ್ಪಡಹತ್ತಿದ್ದಾರೆ. ಅಷ್ಟೇ ಅಲ್ಲದೆ ಆ ಹಳ್ಳಿಗೂ 'ಸಾವಂತಪುರ' ಎಂಬ ಹೆಸರನ್ನಿಡಲಾಗಿದೆ.

ನಿಜವಾಗಿ ನೋಡಿದರೆ ಲಕ್ಷ್ಮಣರಾಯರಿಗೆ ಕೆಲಸಗಾರರ ಹಿತದ ಬಗ್ಗೆ ಎಷ್ಟು ಕಳಕಳಿಯೆನಿಸುತ್ತಿತ್ತೆಂಬುದರ ಊಹಾಪೋಹವನ್ನು ಇಲ್ಲಿ ಮಾಡುವ ಪ್ರಯೋಜನವಿಲ್ಲ. ಅದರ ಪ್ರತ್ಯಕ್ಷ ಸಾಕ್ಷಿ ಬೇಕಾಗಿದ್ದರೆ, ಕಿರ್ಲೋಸ್ಕರವಾಡಿಯೇ ಇದಕ್ಕೆ ಸಾಕ್ಷಿ. ನಮ್ಮ ಕೆಲಸಗಾರರ ಜೀವನವು ಸುಖಸಮಾಧಾನ

ಡ್ಡಾಗಬೇಕೆಂಬ ದೃಷ್ಟಿಯಿಂದಲೇ ಅಲ್ಲಿಯ ಮನೆಗಳನ್ನು ಕಟ್ಟಲಾಗಿದೆಯೆಂದು ಕಾಣುವದು. ಅಲ್ಲಿಯ ನಾಗರಿಕರಿಗೆ ಪೂರೈಸುವಂಥ ಅನುಕೂಲತೆಗಳು ಒಂದು ವೇಳೆ ಅಷ್ಟೊಂದು ಹೊಸವೆನಿಸಿರಲಿಕ್ಕಿಲ್ಲ. ಆದರೆ ೪೦–೫೦ ವರುಷಗಳ ಮೊದಲು ವಿದ್ಯುತ್‌ಶಕ್ತಿ, ನಲ್ಲಿ ಮೊದಲಾದವು ನಿಜಕ್ಕೂ ಅಭಿನವವೆನಿಸಿದ್ದವು. ಅಲ್ಲದೆ ಅಲ್ಲಿಯ ಬಾಲ–ಬಾಲಕಿಯರ ಮ್ಯಾಟ್ರಿಕ್‌ವರೆಗಿನ ಶಿಕ್ಷಣದ ಅನುಕೂಲತೆ, ಹೆರಿಗೆಯ ಆಸ್ಪತ್ರೆ, ದವಾಖಾನೆ, ಕ್ರೀಡಾಂಗಣ, ಸಮಾಜಮಂದಿರ ಮೊದಲಾದವುಗಳು ಏನನ್ನು ಸೂಚಿಸುತ್ತವೆ ?

ಹಾಗೆ ನೋಡಿದರೆ, ದಾರಿಯ ಒಳಬದಿಗಿರುವ, ಪಟ್ಟಣದಿಂದ ದೂರಿರುವ, ಕಿರ್ಲೋಸ್ಕರವಾಡಿಯಂಥ ಸ್ಥಳದಲ್ಲಿ ಕಾರಖಾನೆ ಹಾಕುವದು ಉದ್ಯೋಗದ ದೃಷ್ಟಿಯಿಂದ ಅಷ್ಟು ಅನುಕೂಲವಾದುದಲ್ಲ. ಇಂಥ ಕಾರಖಾನೆಯಿಂದ ನಿಜವಾಗಿ ಲಾಭವಾಗುವದು ಸುತ್ತುಮುತ್ತಲಿರುವ ಹಳ್ಳಿಗಳಿಗೆ. ಅಲ್ಲಿಯ ಜನರಿಗೆ ತಮ್ಮ ಹೊಲಗಳನ್ನು ನೋಡಿಕೊಂಡು, ತಮ್ಮ ಸ್ವಂತ ಉತ್ಪನ್ನವನ್ನು ಹೆಚ್ಚಿಸಿಕೊಳ್ಳಲು ಕಾರಖಾನೆಯೊಳಗಿನ ನವಕರಿಯು ಬಹಳ ಉಪಯುಕ್ತವಾಗುವದು. ಕಿರ್ಲೋಸ್ಕರ ಕಾರಖಾನೆಯೊಳಗಿನ ಎಷ್ಟೋ ಕೆಲಸಗಾರರು ಇಂಥ ಎರಡೂ ಕೆಲಸಗಳನ್ನು ಮಾಡಬಲ್ಲವರಾಗಿದ್ದಾರೆ, ಲಾಭವನ್ನು ಪಡೆಯುತ್ತಿದ್ದಾರೆ; ಕೃಷ್ಣಾ ರಾಮಾ ಸಾವಂತ ಅವನ ಹೇಳಿಕೆಯೇ ಇದಕ್ಕೆ ಸಾಕ್ಷಿ.

"ನಾನು ಕೆಲಸ ಮಾಡಹತ್ತಿ ೩೦–೩೨ ವರುಷಗಳಾದವು. ನಾವು ಏಳು ಮಂದಿ ಅಣ್ಣ–ತಮ್ಮಂದಿರು. ೫–೬ ಎಕರೆ ಸ್ವಂತ ಹೊಲವಿದೆ. ನಾನು ಕಾರಖಾನೆಯ ಕೆಲಸ ಹಿಡಿದಂದಿನಿಂದ ಕೆಲವೊಂದು ಹಣವನ್ನು ಕೂಡಿಸತೊಡಗಿದೆ. ಆಗ ಹೊಲದಲ್ಲಿ ಬಾವಿ ತೋಡಿಸುವ ಇಚ್ಛೆಯಾಯಿತು. ಈ ಕೆಲಸಕ್ಕಾಗಿ ಪಪ್ಪಾ ಅವರ ಕಡೆಯಿಂದ ೩೫೦ ರೂ. ದೊರೆತವು. ಅಲ್ಲದೆ ನೀರು ತೆಗೆಯಲು ಇಂಜಿನ್, ಪಂಪ ಕೊಟ್ಟದ್ದರಿಂದ ಮನಸ್ಸಿಗೆ ತಕ್ಕಂತೆ ಕೆಲಸವು ಪೂರ್ಣವಾಯಿತು."

"ಪಪ್ಪಾ ನಮಗೆ ಹಿರಿಯರಾಗಿದ್ದರು. ಅವರಿಂದ ನಮಗೆ ಸಹಾಯ ಸಿಗುತ್ತದೆಂದ ಮೇಲೆ ನಾವು ಬಾವಿಯ ನೀರನ್ನುಪಯೋಗಿಸಿಕೊಂಡು ಕಬ್ಬನ್ನು ಹಚ್ಚಿದೆವು. ಈ ಕಾರಖಾನೆಯಿಂದ ನಮ್ಮ ಮನೆಯಮೇಲೆ ಮಂಗಳೂರಿನ ಹಂಚುಗಳು ಬಂದವು. ಈಗ ೬ ಎಕರೆಯ ಬದಲಾಗಿ ೬೦ ಎಕರೆ ಭೂಮಿ



ಮೇಲಿನದು:- ಕಿರ್ಲೋಸ್ಕರ ಬ್ರದರ್ಸ ಲಿಮಿಟೆಡ್, ಕಿರ್ಲೋಸ್ಕರವಾಡಿ
ಕೆಳಗಿನದು:- ಮೈಸೂರ ಕಿರ್ಲೋಸ್ಕರ ಲಿಮಿಟೆಡ್, ಹರಿಹರ





ಮೇಲಿನದು:– ಕಿರ್ಲೋಸ್ಕರ ಆಯಿಲ್ ಇಂಜಿನ್ಸ ಲಿಮಿಟೆಡ್, ಪುಣೆ.
ಕೆಳಗಿನದು:– ಕಿರ್ಲೋಸ್ಕರ ಇಲೆಕ್ಟ್ರಿಕ್ ಕಂಪನಿ ಲಿಮಿಟೆಡ್, ಬೆಂಗಳೂರ
(ಟ್ರ್ಯಾನ್ಸಫಾರ್ಮರ ವಿಭಾಗ)




ಪುಣೆಯಲ್ಲಿ ಹಡಪಸರದ ಔದ್ಯೋಗಿಕೇಂದ್ರದಲ್ಲಿರುವ ಕಿರ್ಲೋಸ್ಕರ
ನ್ಯೂಮಾಟಿಕ್ ಕಂಪನಿಯ ಕಾರಖಾನೆ

ಯಾಗಿದೆ. ಇದರಲ್ಲಿ ಅಣ್ಣ-ತಮ್ಮಂದಿರೆಲ್ಲರೂ ದುಡಿಯುತ್ತೇವೆ. ವಾರ್ಷಿಕ ಉತ್ಪನ್ನವು ೧೦-೧೫ ಸಾವಿರ ರೂಪಾಯಿಯಾಗಿದೆ. ನಾವು ಮಾತ್ರ ಕಾರ ಖಾನೆಯಲ್ಲಿಯೇ ಕೆಲಸ ಮಾಡುತ್ತೇವೆ."

ಕೃಷ್ಣಾ ಸಾವಂತನ ಉದಾಹರಣೆಯು ಕಣ್ಣಲ್ಲಿ ತುಂಬುವಂತಿರುವದ ರಿಂದ ಅದನ್ನಿಲ್ಲಿ ಕೊಡಲಾಗಿದೆ. ಅದರಿಂದ ಸ್ವಂತ ಭೂಮಿಯುಳ್ಳ ಪ್ರತಿಯೊಬ್ಬ ಕೆಲಸಗಾರನು ಇದೇ ರೀತಿಯಲ್ಲಿ, ಪ್ರಮಾಣದಲ್ಲಿ ಸುಧಾರಿಸಿದ್ದಾನೆಂದು ಯಾರೂ ತಿಳಿದುಕೊಳ್ಳಬಾರದು. ಈ ಸಂಗತಿಯು ಆಯಾಯ ಕೆಲಸಗಾರರ ಶಕ್ತಿ, ಧೈರ್ಯ, ಹಿಡಿತಗಳ ಮೇಲೆ ಅವಲಂಬಿಸಿದೆ. ಆದರೂ ತಮ್ಮ ಮನೆ-ಮಾರು ಬಿಟ್ಟು, ಹೊಟ್ಟೆಯ ಪಾಡಿಗಾಗಿ ಪಟ್ಟಣಕ್ಕೆ ಹೋಗುವ ಕೂಲಿಕಾರರಗಿಂತಲೂ ಗ್ರಾಮೀಣ ಭಾಗದೊಳಗಿನ ಕಾರಖಾನೆಗಳಲ್ಲಿ ಕೆಲಸ ಮಾಡುವವರ ಜೀವನವು ಎಷ್ಟು ಸುಖಕರವೂ ಲಾಭದಾಯಕವೂ ಆಗುವದೆಂಬ ಮಾತು ಲಕ್ಷದಲ್ಲಿ ಬಂದರೆ ಸಾಕು.

ಈಗ ವಾಡಿಯಲ್ಲಿಯೇ ನೆಲೆಸಿರುವ ಮೊಲ್ಡಿಂಗದಲ್ಲಿ ಕೆಲಸ ಮಾಡುವ ಬಹಿರೋಬಾ ವಿಠೋಜಿ ಕಾಳೋಜಿಯವರ ಹೃದ್ಗತವಿಂತಿದೆ.

"ಕೈ. ತೀ. ಪಪ್ಪಾ ಅವರ ಬೋಧಾಮೃತದಿಂದ ನನ್ನ ಹಾಗೂ ಇನ್ನಿತರ ಕಾಮುಗಾರರ ಸಂಸಾರವು ಸುಖ-ಸಮಾಧಾನಗಳಿಂದ. ಸಾಗಿದೆ.ಪ್ರತಿಯೊಬ್ಬ ಕೂಲಿ ಕಾರನು ತಮ್ಮ ಕುಟುಂಬದಲ್ಲಿಯ ಒಬ್ಬನೆಂದು ಅವರ ತಿಳಿವಳಿಕೆಯಾಗಿತ್ತು. ಅದ ರಿಂದ ಚೈತ್ರಮಾಸದೊಳಗಿನ ಅರಿಶಿಣ-ಕುಂಕುಮ ಮೊದಲಾದ ಪ್ರಸಂಗಗಳಿಗೆ ಅವರು ಎಲ್ಲ ಕಾಮುಗಾರರನ್ನು ಮನೆಗೆ ಆಮಂತ್ರಿಸಿ, ಕೋಸಂಬರಿ ಮತ್ತು ರಸಪಾನದ ಕಾರ್ಯಕ್ರಮವನ್ನು ಏರ್ಪಡಿಸುತ್ತಿದ್ದರು. ಈ ಹೊತ್ತಿಗೆ ಇವನು ಬ್ರಾಹ್ಮಣ, ಇವನು ಹೊಲೆಯ, ಇವನು ಮೊಚ್ಚೆಗಾರ,— ಎಂಬ ಭೇದ-ಭಾವವನ್ನು ಅವರು ಮಾಡುತ್ತಿದ್ದಿಲ್ಲ. ಎಲ್ಲರನ್ನೂ ಒಂದೇ ಪಂಕ್ತಿಯಲ್ಲಿ ಕುಳ್ಳಿರಿಸಿ ಪ್ರತಿಯೊಬ್ಬರಿಗೂ ಆಗ್ರಹ ಮಾಡಿ ರಸವನ್ನೂ ಕೋಸಂಬರಿ ಯನ್ನೂ ಬಡಿಸುತ್ತಿದ್ದರು.

"ಹೊಸ ಪ್ಯಾಟರ್ನ್ ಸುರುವಲು ಬಂದಾಗ, ಅದನ್ನು ತೆಗೆದುಕೊಂಡು ನನ್ನ ಕಡೆಗೆ ಬಂದು ಅವರು, ಈ ಕೆಲಸ ಚನ್ನಾಗಿ ಆಗಬೇಕು. ನೀನು ನಿನ್ನ ಕೆಲಸವನ್ನು ಒಳ್ಳೇರೀತಿಯಿಂದ ಮಾಡುತ್ತ ಹೋಗು. ಅಂದರೆ ನಿನ್ನ ಕಲ್ಯಾಣವಾಗುವದು."

"ನನ್ನ ಮದುವೆಯಲ್ಲಿ ಆಶೀರ್ವದಿಸುವದಕ್ಕಾಗಿ ಪಪ್ಪಾ ಮತ್ತು ಕೈ. ಸೌ|| ಮಮ್ಮಾ ಇಬ್ಬರೂ ಬಂದಿದ್ದರು. ಇವರಿಬ್ಬರ ಆಶೀರ್ವಾದದಿಂದಲೆ ನನ್ನ ಹುಡುಗ–ಹುಡಿಗೆಯರು ಆನಂದದಲ್ಲಿವೆ."

"ಕೈ. ಸೌ. ಮಮ್ಮಾ ಅವರು ಈ ಕಾರಖಾನೆಯ ಒಡತಿ. ಆದರೆ ಅವರಿಗೆ ತಾವು ದೊಡ್ಡವರೆನ್ನುವ ಗರ್ವವಿರಲಿಲ್ಲ. ವಾಡಿಯಲ್ಲಿ ಯಾರಾದರೂ ಬೇನೆಬಿದ್ದರೆ ಅಥವಾ ಇನ್ನಾವುದೋ ತೊಂದರೆಯಲ್ಲಿ ಸಿಕ್ಕರೆ, ಅವರು ಅವರ ಮನೆಗಳಿಗೆ ಹೋಗಿ ವಿಚಾರಿಸುತ್ತಿದ್ದರು. ಏನಾದರೂ ಬೇಕಿದ್ದರೆ ತಮ್ಮ ಮನೆಯಿಂದ ಕಳಿಸಿಕೊಡುತ್ತಿದ್ದರು. ಅವರು ಚರಕದಿಂದ ನೂಲುತ್ತಿದ್ದರು; ಗಾಳಿ, ಮಳೆ ಚಳಿ ಏನೇ ಇದ್ದರೂ ಪ್ರಭಾತಫೇರಿಗೆ ೫ ಗಂಟೆಗೆ ನಿಯಮಿತವಾಗಿ ಬರುತ್ತಿದ್ದರು. ಅದರಿಂದ ಅವರಲ್ಲಿ ಸ್ವಾತಂತ್ರ್ಯದ ಬಗ್ಗೆ ಎಂಥ ಪ್ರೇಮವಿತ್ತೆಂಬುದು ಕಂಡು ಬರುತ್ತದೆ."

ಲಕ್ಷ್ಮಣರಾಯರಿಗೆ ಕಿರ್ಲೋಸ್ಕರವಾಡಿಯೊಳಗಿನ ಕೆಲಸಗಾರರ ಹಾಗೂ ರಹಿವಾಸಿಗಳ ಯೋಗಕ್ಷೇಮವನ್ನಷ್ಟೇ ತೆಗೆದುಕೊಂಡರೆ ಸಮಾಧಾನವೆನಿಸುತ್ತಿದ್ದಿಲ್ಲ. ಯಾವಾಗಾದರೊಮ್ಮೆ ಅವರು ಎರಡನೆಯ ಊರಿನ ಕೆಲಸಗಾರರಿಗೂ ನೆರವಾಗುತ್ತಿದ್ದರು. ಇಂಥವರಲ್ಲಿ ಪಲೂಸ ಎಂಬ ಊರಲ್ಲಿರುವ ಜ್ಞಾನೂ ಬಾಬುರಾವ ಪಾಟೀಲ ಎಂಬುವವರು ಹೇಳಿದ ಅನುಭವವನ್ನು ಕೇಳಿರಿ:–

"ನಮ್ಮ ಪಲೂಸಕ್ಕೆ ಒಮ್ಮೆ ಕಾಲರಾ (ಮಾರಿಬೇನೆ) ಸುಂಕರೋಗವು ಹಬ್ಬಿತು. ನನಗೂ ಆ ರೋಗವು ಗಂಟುಬಿದ್ದಿತು. ಈ ಸುದ್ದಿ ಪಪ್ಪಾಅವರಿಗೆ ತಿಳಿದೊಡನೆ, ಅವರು ಅನಂತರಾವ ಫಳಣೀಕರ, ಅವರ ಹೆಂಡತಿ ಸೌ. ಇಂದಿರಾ ಬಾಯಿ ಮತ್ತು ಡಾ. ದಿವಾಣ ಎಂಬವರನ್ನು ನನ್ನ ಉಪಚಾರಕ್ಕಾಗಿ ಕಳುಹಿಸಿ ಕೊಟ್ಟರು. ಅವರು ಬಂದ ಹೊತ್ತಿಗೆ ನಾನು ಬಹಳ ಹೈರಾಣಾಗಿದ್ದೆನು. ನಾಡಿಯೂ ಹತ್ತುತ್ತಿದ್ದಿಲ್ಲ. ಚುಚ್ಚುಮದ್ದು (ಇಂಜಕ್ಶನ್) ಹಾಕಬೇಕೆಂದರೆ ನರಗಳೇ ಸಿಗಲಿಲ್ಲ. ಆದಕಾರಣ ಏಳು ಕಡೆಗೆ ಚುಚ್ಚಬೇಕಾಯಿತು. ಅದರಿಂದ ಮೆಲ್ಲಮೆಲ್ಲನೆ ಒಳಿತೆನಿಸತೊಡಗಿತು. ಜೀವಕ್ಕೆ ಬಂದ ಕುತ್ತಿನಿಂದ ಪಾರಾದೆನು. ಪಪ್ಪಾನು ನನಗೆ ಪುನರ್ಜನ್ಮವನ್ನು ಕೊಟ್ಟರೆಂದು ನಾನು ಅವರನ್ನು ಪಿತೃಸ್ಥಾನ ದಲ್ಲಿರಿಸಿರುವೆನು. ಆದರೆ ಅವರು ನನಗಷ್ಟೇ ಪಪ್ಪಾ ಆಗಿರದೆ, ಇನ್ನೂ ಅನೇ ಕರಿಗೆ ಪಪ್ಪಾ ಆಗಿರುವ ಮಾತನ್ನು ನಾನು ನನ್ನ ಸ್ವಾನುಭವದಿಂದ ಹೇಳುತ್ತೇನೆ."

ಇದು ದೊಡ್ಡವರ ಬಗ್ಗೆಯಾಯಿತು. ಬಾಲಬಾಲಕಿಯರ ಬಗ್ಗೆ ಅವರಿಗೆ ಎಷ್ಟು ಪ್ರೇಮವೆನಿಸುತ್ತಿತ್ತೆಂಬುದನ್ನು ಶ್ರೀ ತುಕಾರಾಮ ಮೋಹಿತೆ ಎಂಬುವವರ ಧರ್ಮಪತ್ನಿಯಾದ ಸೌ. ಮುಕ್ತಾಬಾಯಿಯವರ ಮಾತು ಕೇಳಿರಿ—

"೧೯೩೫ ರಲ್ಲಿಯ ಸಂಗತಿ. ನನಗಾಗ ಹೆಣೆಯುವ ಹೌಸು ಬಹಳ. ಆದರೆ ವಾಡಿಯಲ್ಲಿಯ ಅಂಗಡಿಗಳಲ್ಲಿ ಹೆಣೆಯುವ ಸೂಜಿ ದೊರೆಯುತ್ತಿರಲಿಲ್ಲ. ಆಗ ನನಗೊಂದು ಕಲ್ಪನೆ ಹೊಳೆಯಿತು. ಕಾರಖಾನೆಯಲ್ಲಿ ಕಾಟ್ಸ ತಯಾರು ಮಾಡುವ ಖಾತೆಯಲ್ಲಿ ಹೋದೆನು. ಅಲ್ಲಿ ಚೆಲ್ಲಿದ್ದ ತಂತಿಯ ಎರಡು ತುಂಡುಗಳನ್ನು ತೆಗೆದುಕೊಂಡೆ. ಅಷ್ಟರಲ್ಲಿ ಪಪ್ಪಾ ಅಲ್ಲಿ ಬಂದರು. ನನ್ನ ಕೈಯಲ್ಲಿಯ ತಂತಿಯನ್ನು ನೋಡಿ, ಅವರು "ನಿನಗೆ ಸೂಜಿಯನ್ನು ತಯಾರಿಸಿ ಕೊಳ್ಳಬೇಕಾದಂತೆ ಕಾಣುತ್ತದೆ.' ಎಂದು ಕೇಳಿದರು. ಅದಕ್ಕೆ ನಾನು 'ಅಹುದು' ಎಂದೆ. ಆ ಕೂಡಲೆ ಅಲ್ಲಿಯ ಫೋರಮನ್ನನಿಗೆ ಹೇಳಿ, ಆ ತಂತಿಗೆ ತುದಿಯನ್ನು ಮಾಡಿಸಿಕೊಟ್ಟರು. ಆ ಸೂಜಿಯನ್ನು ನನ್ನ ಕೈಯಲ್ಲಿಡುತ್ತ ಅವರು 'ಸ್ವೇಟರ ಆದಕೂಡಲೇ ತೋರಿಸಬೇಕು ಹಾ !' ಎಂದಂದರು. ನನ್ನ ದುರ್ದೈವ, ನಾನು ಚಿಕ್ಕವಳಾದ್ದರಿಂದ ಸ್ವೇಟರನ್ನು ತಯಾರಿಸಿ ಅವರಿಗೆ ತೋರಿಸುವದಾಗಲಿಲ್ಲ. ಆದರೆ ಇಂದು ನಾನು ಎಂಥದೇ ಹೆಣಿಗೆಯ ಕೆಲಸ ಕೈಕೊಂಡರೆ ನನಗೆ ಪಪ್ಪಾನ ನೆನಪು ಆಗದೆ ಉಳಿಯುವದಿಲ್ಲ."

ಈ ಎಲ್ಲದರಲ್ಲಿ ಶ್ರೀ ಗೋವಿಂದರಾವ ಖೋತ ಇವರ ನಿವೇದನೆಯು ಮಹತ್ವದ್ದಾಗಿದೆ. ಶ್ರೀ ಖೋತ ಇವರು ಕಿರ್ಲೋಸ್ಕರವಾಡಿಯ ದಕ್ಷಿಣಕ್ಕೆ ೪ ಮೈಲುಗಳ ದೂರವಿರುವ ಆಮಣಾಪುರ ಎಂಬ ಊರಿನವರು. ೪೨ ರ ಆಂದೋಲನದಲ್ಲಿ ಪ್ರಮುಖ ಪಾತ್ರಧಾರಿಗಳು. ದಕ್ಷಿಣ ಸಾತಾರಾ ಜಿಲ್ಹೆಯ ಕಾಂಗ್ರೆಸ ಕಮಿಟಿಯಲ್ಲಿಯೂ ಸಾಕಷ್ಟು ಗೌರವವಿದ್ದ ವ್ಯಕ್ತಿಯಾಗಿದ್ದರು. ಕಿರ್ಲೋಸ್ಕರ ಕಾರಖಾನೆಯ ಮೋಲ್ಡಿಂಗ್ ಶೆಡ್‌ದಲ್ಲಿ ಅವರು ಚಾರ್ಜಮನ್ ಎಂದು ಕೆಲಸ ಮಾಡುತ್ತಾರೆ. ಕೂಲಿಕಾರರ ಮುಖಂಡರು. ಅವರು ತಮ್ಮ ಹಳೆಯ ನೆನಪುಗಳನ್ನು ತೆಗೆಯುತ್ತ"ಶ್ರೀ ಲಕ್ಷ್ಮಣರಾವಜಿ ಕಿರ್ಲೋಸ್ಕರ (ಪಪ್ಪಾ) ಇವರ ನೆನಪಾಯಿತೆಂದರೆ, ನನ್ನ ಅಂತಃಕರಣವು ತುಂಬಿಬಾರದೇ ಇರುವದಿಲ್ಲ. ಅವರ ಮೂಲಕವೇ ನನ್ನ ಜೀವನಕ್ಕೆ ಒಂದು ಯೋಗ್ಯ ಮಾರ್ಗವು ದೊರೆಯಿತು; ಮತ್ತು ಅದಕ್ಕಾಗಿ ನಾನು ಅವರನ್ನು ನನ್ನ ಪಿತಾಮಹರೆಂದು ಮನ್ನಿಸುತ್ತೇನೆ."

"ನಾನು ೧೯೨೩ರಲ್ಲಿ ಮರಾಠಿ ೭ನೇ ಇಯತ್ತೆಯನ್ನು ಪಾಸಾದೆ. ಒಂದು ದಿವಸ ತಿರುಗಾಡುತ್ತ ಕಿರ್ಲೋಸ್ಕರವಾಡಿಯ ಕಡೆಗೆ ಕೆಲವು ಗೆಳೆಯರೊಂದಿಗೆ ಹೋದಾಗ ನಮ್ಮನ್ನು ಅನಂತರಾಯರು ನೋಡಿ "ಕೆಲಸಕ್ಕೆ ಬರುವಿರೇನು ?" ಎಂದು ವಿಚಾರಿಸಿದರು. ನಾವು ಅದಕ್ಕೆ 'ಹೋ' ಎಂದು ಒಪ್ಪಿ ಮರುದಿನದಿಂದಲೆ ಕೆಲಸಕ್ಕೆ ಆರಂಭಮಾಡಿದೆವು."

"ಮುಂದೆ ಹೋಳೀಹುಣ್ಣಿವೆ ಬಂದಿತು. ಕರಿಯ ನಿಮಿತ್ತ, ಒಬ್ಬರಿಗೊಬ್ಬರು ರಾಡಿ ಒಗೆಯುವದು, ಸೆರೆ ಕುಡಿಯುವದು, ಭೀಭತ್ಸ ಹೊಲಸು ಮಾತಗಳನ್ನಾಡುವದು, ಅಂದು ನಡೆಯತಕ್ಕುವೆ. ಆದರೆ ಅಂದೇ ಕಾರಖಾನೆಯ ಹುಟ್ಟುಹಬ್ಬವಿದ್ದುದರಿಂದ ಅದನ್ನು ಬಹು ಉತ್ಸಾಹದಾಯಕವಾಗಿಯೂ ಮಾದರಿಯಾಗುವಂತೆಯೂ ಆಚರಿಸಲಾಯಿತು. ಆ ದಿವಸ ವಾಡಿಯಲ್ಲಿ ಬೇರೆ ಬೇರೆ ತರದ ಶರ್ಯತ್ತುಗಳು, ಚಮತ್ಕಾರಿಕ ಆಟಗಳು ನಡೆದವು. ನನಗೂ ಇಂಥ ಕಾರ್ಯಕ್ರಮವೆಂದರೆ ಬಲು ಪ್ರೀತಿ. ಆ ಮೇಲೆ ಕೇಳುವದೇನು ? ಹುಡುಗಿ ಆಟಗುಳಿ, ಬಂದದ್ದು ನಾಗರ ಪಂಚಮಿ ಹಬ್ಬ ಎಂಬಂತೆ ನನ್ನ ಅವಸ್ಥೆಯಾಯಿತು."

"ನಾನು ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿದೆನು. ಅಲ್ಲಿಯ ಶಿಸ್ತು ಮತ್ತು ಸುಸಂಸ್ಕೃತತನವು ನನ್ನ ಮನಸ್ಸಿನ ಮೇಲೆ ಬಹಳ ಪರಿಣಾಮವನ್ನುಂಟು ಮಾಡಿತು. ಮುಂದೆ ಬಹುಮಾನ ವಿತರಣ ಹಾಗೂ ಸಪ್ಪಾ ಅವರ ಭಾಷಣ ನಡೆದವು. ನಾವು ನಮ್ಮ ನಮ್ಮ ಸುಧಾರಣೆಗಾಗಿ ಯಾವ ಯಾವ ಸಂಗತಿಗಳ ಕಡೆಗೆ ಲಕ್ಷ್ಯ ಹಾಕಬೇಕು ಎಂಬುದನ್ನು ಅವರು ಹೇಳಿದರು. ಅದರಂತೆ ನಡೆಯಲು ನಾನು ಯತ್ನಿಸತೊಡಗಿದೆನು."

"ಕೆಲಸಗಾರರು ಸುಖಿಗಳಾದರೆ, ಕಾರಖಾನೆಯೂ ಸುಖಿಯಾಗಿರುವದು. ಕಾಮಗಾರರು ನಿರ್ವ್ಯಸನಿಗಳಾದರೆ, ಕಾರಖಾನೆಯು ಸ್ವಚ್ಛವಾಗಿರುವದು. ಹೀಗೆ ಅವರು ಯಾವಾಗಲೂ ತಮ್ಮ ಭಾಷಣದಲ್ಲಿ ಹೇಳುತ್ತಿದ್ದರು. ಕೆಲಸಗಾರರಲ್ಲಿ ಸುಧಾರಣೆಯಾಗುತ್ತ ಹೋಗಿ, ಸುತ್ತಮುತ್ತಲಿನ ಹಳ್ಳಿಗಳಿಗೂ ಅದೇ ಮುದ್ರೆ ಬೀಳತೊಡಗಿತು. ಅದರಿಂದ ಕಿರ್ಲೋಸ್ಕರವಾಡಿಯು ಹಳ್ಳಿಗಳನ್ನು ಸುಸಂಸ್ಕೃತವನ್ನಾಗಿ ಮಾಡುವ ಕೇಂದ್ರವೆನಿಸಿಕೊಂಡಿತು."

"ಹೀಗೆ ಕಾರಖಾನೆಯು ನಡೆದಿರುವಾಗ ೧೯೪೦ ರಲ್ಲಿ ಕೆಲವು ಸಾಮಾನ್ಯ ಮಾತುಗಳ ಬಗ್ಗೆ ಮತಭೇದವಾಗಿ ಕೆಲಸಗಾರರು ಸಂಪು ಹೂಡಿದರು. ಆದರೆ

ಅದು ಒಂದೇ ದಿನದಲ್ಲಿಯೇ ಒಪ್ಪಂದವಾಗಿ ಕಾರಖಾನೆಯು ಸುಸೂತ್ರವಾಗಿ ನಡೆಯತೊಡಗಿತು."

"ಇಂಥ ಮತಭೇದದ ಪ್ರಕಾರಗಳು ಪುನಃ ಉದ್ಭೂತವಾಗಬಾರದೆಂದೂ ಮತ್ತು ಕಾರಖಾನೆಯಲ್ಲಿ ಈಗ ೧೭೦೦ ರ ವರೆಗೆ ಕೆಲಸಗಾರರಾಗಿರುವದರಿಂದ ಅವರ ಅನುವು–ಆಪತ್ತುಗಳನ್ನು ತಿಳಿದುಕೊಳ್ಳುವದು ಸುಲಭವಾಗಲೆಂದೂ ಚಾಲಕರು ಸ್ವತಃ ಕೆಲಸಗಾರ 'ಕೌನ್ಸಿಲ'ದ ಸ್ಥಾಪನೆಯನ್ನು ಮಾಡಿದರು. ಈ ಕೌನ್ಸಿಲ್‌ದಲ್ಲಿ ಕಾಮುಕಾರರು ಆರಿಸಿಕೊಟ್ಟ ೨೦ ಪ್ರತಿನಿಧಿಗಳು ಇದ್ದರು. ಅವರ ಹಾಗೂ ಚಾಲಕರ ಸಭೆಯು ತಿಂಗಳಿಗೊಮ್ಮೆ ಕೂಡುತ್ತಿತ್ತು. ಅಲ್ಲಿ ಕೂಲಿ ಕಾರರ ಬೇರೆ ಬೇರೆ ಪ್ರಶ್ನೆಗಳನ್ನು ಬಿಡಿಸಲಾಗುತ್ತಿತ್ತು. ಕಾಮುಗಾರರ ಪ್ರಶ್ನೆ ಮಂಡಿಸುವ ಕೆಲಸವು ಮುಖ್ಯವಾಗಿ ನನಗೆ ಮಾಡಬೇಕಾದ್ದರಿಂದ ನನ್ನ ಹಾಗೂ ಚಾಲಕರ ನಿಕಟ ಸಂಬಂಧವು— ಬರತೊಡಗಿತು."

"ಕೆಲಸಗಾರರಲ್ಲಿ ಶಿಸ್ತು ಬೇಕೆಂದು ಪ್ರತಿ ಶನಿವಾರ ಮುಂಜಾನೆ ಎಲ್ಲ ಕೂಲಿಕಾರರ ಡ್ರಿಲ್ ನಡೆಯುತ್ತಿತ್ತು. ಈ ಡ್ರಿಲ್‌ನ್ನು ಕಲಿಸುವ ಕೆಲಸವನ್ನು ಶಂಕರರಾಯರು ಮಾಡುತ್ತಿದ್ದರು. ಕೊನೆಗೆ ಶ್ರೀ ಪಪ್ಪಾ ನಮಗೆ ಶಿಸ್ತಿನ ಬಗ್ಗೆ ನಾಲ್ಕು ಮಾತು ಹೇಳುತ್ತಿದ್ದರು. ಈ ಸೈನಿಕ ಶಿಕ್ಷಣದ ಶಿಸ್ತು ೧೯೪೨ ರ ಚಳವಳಿಯಲ್ಲಿ ಉಪಯೋಗವಾಯಿತು."

"ಕೆಲಸಗಾರರಿಗೆ ಕುಸ್ತಿಯು ಬಹಳ ಸೇರುತ್ತದೆಂದು ತಿಳಿದು ರಾಯರು ಒಂದು ಗರಡೀಮನೆಯನ್ನು ಕಟ್ಟಿಸಿದರು. ಕಾರಖಾನೆಯನ್ನು ನೋಡಲು ಬಂದ ಅತಿಥಿಗಳು ನಮ್ಮ ಧೃಡಕಾಯವನ್ನು ಕಂಡು ಬಹಳ ಹಿಗ್ಗುತ್ತಿದ್ದರು."

"ರಾಯರ ಈ ಬಗೆಯ ಕೆಳಗಿನ ಜನರನ್ನು ಮೇಲಕ್ಕೆತ್ತುವ ಪ್ರಯತ್ನ ಗಳನ್ನು ನೋಡಿದ ನನಗೆ, ಕಾರಖಾನೆಯನ್ನು ಪಟ್ಟಣದಲ್ಲಿ ತೆರೆಯದೆ ಹಳ್ಳಿ ಗಳಲ್ಲಿ ತೆರೆದರೆ, ರಾಷ್ಟ್ರದ ಪ್ರಗತಿಯು ಭರದಿಂದ ಸಾಗುವದೆಂದು ಅನಿಸುತ್ತದೆ."

"ಮುಂದೆ ಕೂಲಿಕಾರ ಸಂಘದ ಸ್ಥಾಪನೆಯಾಯಿತು. ಅದರ ಸರ್ವ ಸೂತ್ರ ನನ್ನ ಕೈಯಲ್ಲಿದ್ದವು. ನಾನು ಕೂಲಿಕಾರರ ಮುಂದಾಳಾಗಿದ್ದರೂ ಚಾಲಕರ ಮನಸ್ಸಿನಲ್ಲಿ ನನ್ನ ಬಗ್ಗೆ ಭಿನ್ನ ಭಾವನೆ ಇರಲೇಯಿಲ್ಲ. ನನಗೆ ಪಪ್ಪಾ ಅವರು "ನಿಮಗೆ ಹಣ ಬೇಕಾಗಿದ್ದರೆ, ಬೇಡಿ ಇಸಿದುಕೊಳ್ಳಿರಿ. ಕಾರ ಖಾನೆಯು ನಿಮ್ಮದೇ ಇದೆ ಎಂಬುದನ್ನು ಮರೆಯಬೇಡಿರಿ. ಚಾಲಕ ಮತ್ತು

ಕಾಮಗಾರ ಇವರಲ್ಲಿ ದ್ವೇಷವನ್ನುಂಟು ಮಾಡಬೇಡಿರಿ. ಯಾಕಂದರೆ ಇಬ್ಬರ ಬಡಿದಾಟದಲ್ಲಿ ಮೂರನೆಯವರಿಗೆ ಲಾಭವಾಗುತ್ತದೆಂಬುದು ನಿಶ್ಚಿತ ಅನುಭವ ವಾಗಿದೆ. ಇಂಥ ಪ್ರಸಂಗಗಳಲ್ಲಿ ಕೋರ್ಟುಕಚೇರಿಗಳಿಗೆ ಹೋಗುವದನ್ನು ಮನಸ್ಸಿನಲ್ಲಿ ತರಬೇಡಿರಿ ಎಂದು ಹೇಳುತ್ತಿದ್ದರು. ಆದರೆ ಮನುಷ್ಯನ ಮನಸ್ಸಿ ನಲ್ಲಿಯ ಎಲ್ಲ ಇಚ್ಛೆಗಳು ಎಲ್ಲಿ ಸಫಲವಾಗುವವು?

ನಮ್ಮ ಕೆಲಸಗಾರ ಮತ್ತು ನಾವು— ಎಲ್ಲರೂ ಒಂದೇ ಕುಟುಂಬದವರು ಎಂಬ ಭಾವನೆಯಿಂದ ಲಕ್ಷ್ಮಣರಾಯರು ಅವರೊಡನೆ ನಡೆಯುತ್ತಿದ್ದರು. ಕೆಲಸಗಾರಲ್ಲಿಯೂ ಅವರ ಬಗ್ಗೆ ಇದೇ ತರಹದ ಪ್ರೇಮಾದರದ ಬುದ್ಧಿಗಳಿ ದ್ದವು. ಇಬ್ಬರಲ್ಲಿಯೂ ಪೂರ್ಣ ಗೆಳೆತನವಿತ್ತು. ಆದರೆ ಇದು ಕಿರ್ಲೋಸ್ಕರವಾಡಿ ಯಂಥ ಚಿಕ್ಕ ಜಗತ್ತಿನಮಾತು. ಹೊರಗೆಲ್ಲಿ ಈ ಸ್ಥಿತಿ ಉಳಿದಿತ್ತು? ಅಲ್ಲಿ ಪ್ರಚಂಡ ಬಿರುಗಾಳಿ ಬೀಸುತ್ತಿತ್ತು. ಅದರಿಂದ ಕಿರ್ಲೋಸ್ಕರವಾಡಿಗೂ ಅದು ಬಡಿದುಕೊಂಡಿತು.

ಎರಡನೆಯ ಮಹಾಯುದ್ಧವು ಸುರುವಾದಂದಿನಿಂದ ಜಗತ್ತಿನಲ್ಲಿ ಹೊಸ ಗಾಳಿಯೇ ಬೀಸಿತು. ಬಾಂಬಿನಿಂದ ಕಟ್ಟಡಗಳೂ ಕಾರಖಾನೆಗಳಷ್ಟೇ ನಷ್ಟ ವಾಗದೆ ಹಳೆಯ ಕಲ್ಪನೆ, ಹಳೆಯ ಮೌಲ್ಯ, ಹಾಗು ಸಂಸ್ಥೆಗಳ ದಿವಾಳಿ ಎದ್ದಿತು. ವರ್ಗಕಲಹದ ಹೊಸ ತತ್ವಜ್ಞಾನವು ತಲೆಯೆತ್ತಿ ಸಮಾಜವಾದದ ಕಾಳಿಯು ಊದತೊಡಗಿತು. ಕೂಲಿಕಾರರು ದುರ್ಬಲರು ಎಂಬ ಕಲ್ಪನೆಯು ಮಾಯವಾಗಿ, ಅವರಿಗೆ ತಮ್ಮ ಸಂಘಶಕ್ತಿಯ ದರ್ಶನವಾದ್ದರಿಂದ ಅವರ ದೈನ್ಯವೃತ್ತಿಯ ಸ್ಥಾನವನ್ನು ಧೀರವೃತ್ತಿಯು ಆಕ್ರಮಿಸಿತು. ಅವರು ತಮ್ಮ ಬೇಡಿಕೆಗಳನ್ನು ಧೈರ್ಯದಿಂದ ಮಂಡಿಸಹತ್ತಿದರು. ಒಡೆಯನ ಭೀತಿಯು ಇಲ್ಲ ದಂತಾಯಿತು. ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಸಂಪಿನ ಶಸ್ತ್ರವು ಅವರ ಕೈಸೇರಿತು.

ದೇಶದಲ್ಲಿ ಆರಂಭವಾದ ಚಳವಳಿಯು ಕೂಲಿಕಾರವರ್ಗದಲ್ಲಿ ಉದಯ ವಾದ ಒಡೆಯರ ವಿರುದ್ಧ ವೃತ್ತಿಗೆ ಪೋಷಕವಾಯಿತು. ತಮ್ಮ ಹಕ್ಕುಗಳಿಗಾಗಿ ಕಾಯದೇಭಂಗಮಾಡಲು, ವರಿಷ್ಠರನ್ನು ಅನಾದರಿಸಲು, ಜನತೆಗೆ ಉತ್ತೇಜನ ಸಿಕ್ಕಮೇಲೆ ಆ ಮಂತ್ರವು ರಾಜಕೀಯ ಕ್ಷೇತ್ರದಂತೆ ಎಲ್ಲ ಕಡೆಗೂ ಉಪಯೋಗಿ ಸಲ್ಪಡಹತ್ತಿತು. ಬ್ರಿಟೀಶ ಸರಕಾರವನ್ನು ಕೂಡ ಬಗ್ಗಿಸಲು ಸಾಧ್ಯವೆಂದು ತಿಳಿದೊಡನೆ ಆ ಶಕ್ತಿಯನ್ನು ಎಲ್ಲಕ್ಷೇತ್ರಗಳಲ್ಲಿ ಉಪಯೋಗಿಸತೊಡಗಿದರು.

ಬೇರೆಡೆಯಲ್ಲಿ ಏನೇ ನಡೆಯಲಿ, ಕಿರ್ಲೋಸ್ಕರವಾಡಿಯಲ್ಲಿ ಸಂಪಿನಗಾಳಿಯು ಬೀಸ ಬಾರದೆಂದು ಕಲ್ಪನೆಯಿದ್ದಿತು. ಆದರೆ ಅದು ಸುಳ್ಳಾಯಿತು.

ಕಿರ್ಲೋಸ್ಕರವಾಡಿಯೊಳಗಿನ ಕೆಲಸಗಾರರು ಕಾರಣವನ್ನೇ ಕಾಯು ತ್ತಿದ್ದರು. ಅದು ದೊರೆಯುತ್ತಲೆ ೧೩–೯–೪೫ ರಿಂದ ೨೫–೧೦–೪೫ ರ ವರೆಗೆ ಅವರು ಸಂಪನ್ನು ಹೂಡಿದರು. ಕಾರಖಾನೆಯು ಪೂರ್ಣ ನಿಂತಿತು. ಮೊದ ಮೊದಲು ಈ ಸಂಪು ಶಾಂತತೆಯಿಂದ ನಡೆಯಿತು. ಆದರೆ ಮುಂದೆ ಅದು ಬೆದರಿಕೆಯ ರೂಪ ತಾಳಿತು. ವಾಡಿಗೆ ಬರುವ ಕಾಯಿಪಲ್ಯ, ಹಾಲು-ಮೊಸರು ಬರದಂತೆ ಮಾಡುವದು, ನೀರಿನ ಪೂರೈಕೆ ಕೆಡಿಸುವದು, ಸಂಪಿಗೆ ಸೇರದ ಕೆಲಸಗಾರರನ್ನು ಬೆದರಿಸುವದು— ಹೀಗೆ ಅತ್ಯಾಚಾರ ಆರಂಭವಾದ ಮೇಲೆ ಎಲ್ಲ ವಾತಾವರಣವು ಒಮ್ಮೆಲೆ ಕೆಟ್ಟುಹೋಯಿತು. ಕಾರಖಾನೆಯು ಸಂಕಟಕ್ಕೆ ಸಿಕ್ಕಿತು.

ಹೊಸ ಕಾರಖಾನೆಯನ್ನು ಆರಂಭಿಸುವವರು ಪಟ್ಟಣದಲ್ಲಿ ಸ್ಥಾಪಿಸದೆ ಗ್ರಾಮೀಣ ಭಾಗದಲ್ಲಿ ತೆರೆಯಬೇಕು— ಎಂಬ ಸದುಪದೇಶ, ಅನೇಕ ಸರಕಾರೀ ವ್ಯಕ್ತಿಗಳ ಬಾಯಿಂದ ಕೇಳಬರುತ್ತದೆ. ವ್ಯಾಪಕ ದೃಷ್ಟಿಯಿಂದ ವಿಚಾರ ಮಾಡಿದಾಗ ಈ ಕಲ್ಪನೆಯು ಹಿತಪ್ರದವೂ ಅಹುದು. ಆದರೆ ಕಾರಖಾನೆ ದಾರರಿಗೆ ಬರುವ ಸಂಕಟಗಳನ್ನು, ತೊಂದರೆಗಳನ್ನು ಇವರಾರೂ ವಿಚಾರ ಮಾಡಿದಂತಿಲ್ಲ. ಹಳ್ಳಿಗಳಲ್ಲಿ ಆವಶ್ಯಕವಿರುವ ಸಂಕಟ ನಿವಾರಣೆಯ ಕ್ರಮಗಳ ವ್ಯವಸ್ಥೆಯಾಗದೆ, ಈ ಕಲ್ಪನೆ ಜೀವನದಲ್ಲಿ ಬಂದೀತೆಂದು ನಮಗನಿ-ಸುವದಿಲ್ಲ.

ಕೂಲಿಕಾರರು ಹೀಗೆ ಜಾಗರೂಕರಾದ ಮೇಲೆ ಅವರ ಹಿತದ ಬಗ್ಗೆ ಅನೇಕ ಕಾಯದೆಗಳನ್ನು ಸರಕಾರವು ಮಾಡಬೇಕಾದುದು ಕ್ರಮಪ್ರಾಪ್ತ. ಅವರ ಬೇಡಿಕೆ ಹಾಗೂ ತಕರಾರುಗಳನ್ನು ವಿಚಾರಿಸುವ ಸಲುವಾಗಿ ಸ್ವತಂತ್ರ ನ್ಯಾಯ ಕೋರ್ಟ ಸ್ಥಾಪಿತವಾಯಿತು. ಈಗ ಒಡೆಯ ಹಾಗೂ ಕೂಲಿಕಾರರು ಒಂದೇ ಕುಟುಂಬದೊಳಗಿನವರಾಗಿರುವದಿಲ್ಲ. ಅವರು ವಾದೀ–ಪ್ರತಿವಾದಿ ಗಳಾಗಿದ್ದಾರೆ.

ಇಂಥ ಪರಿಸ್ಥಿತಿಯಲ್ಲಿ ಕಾರಖಾನೆಯೊಳಗಿನ ಮೊದಲಿನ ಶಿಸ್ತು ಅಥವಾ ನಿಯಂತ್ರಣವು ಹೇಗೆ ಉಳಿದೀತು ? ಲಕ್ಷ್ಮಣರಾಯರಿಗೆ ಈ ಮಾತು ಮೇಲಿಂದಮೇಲೆ ಬಾಧಿಸುತ್ತಿತ್ತು. ಕೂಲಿಕಾರರ ಯೋಗ–ಕ್ಷೇಮ ಈಗ

ಸರಕಾರವು ತೆಗೆದುಕೊಳ್ಳತೊಡಗಿದೆ. ಅವರಿಗೆ ಕಾಯಿದೆಯಿಂದಲೇ ಅನೇಕ ಸವಲತ್ತುಗಳೂ ಮಹತ್ವದ ಹಕ್ಕುಗಳೂ ದೊರೆತಿವೆ. ಇದು ಒಳ್ಳೆಯದೇ! ಆದರಿಂದಲೂ ಕೂಲಿಕಾರರ ನಿಜವಾದ ಕಲ್ಯಾಣವು ಆಗಲು ಶಕ್ಯವಿಲ್ಲ ಎಂಬುದು ತಿಳಿದು ಬಂದಮೇಲೆ ಲಕ್ಷ್ಮಣರಾಯರು ಬಹಳ ವಿಚಾರಪರರಾದರು.

ಮೊದಲು ಕಾಮಗಾರನಿಗೆ ಅಪಘಾತದಿಂದ ನೋವು ಆಗಿದ್ದರೆ ಸಹಾನುಭೂತಿಯಿಂದ ಅವನನ್ನು ನಿರುದ್ಯೋಗದಿಂದ ರಕ್ಷಿಸುವ ದಾರಿಯನ್ನು ಚಾಲಕರು ತೆಗೆಯುತ್ತಿದ್ದರು. ಆದರೆ ಈಗ ಕಾಯದೆಯಂತೆ ನುಕಸಾನು ಭರಪಾಯಿ ಆದರೆ ಆ ಪ್ರಶ್ನೆ ಮುಗಿಯಿತು. ಯಾವನಾದರೊಬ್ಬ ಕೂಲಿಕಾರನು ಬೇನೆಯಿಂದ ಸತ್ತರೆ, ಅವನ ಕುಟುಂಬ ಪೋಷಣೆಯನ್ನು ಮಾಡಲು ಚಾಲಕರು ಮುಂದಾಗುತ್ತಿದ್ದರು. ಈಗ ಹಾಗೆ ಸಹಾನುಭೂತಿ ತೋರಿಸಲು ಅವಕಾಶವೇ ಇಲ್ಲ. ಯಾಕಂದರೆ ಒಬ್ಬನಿಗೆ ಔದಾರ್ಯ ತೋರಿಸಿದರೆ ಇನ್ನೊಬ್ಬನು ಹಕ್ಕಿನಿಂದ ಬೇಡುವಂಥ ಕಾಯಿದೆಗಳು ಬಂದವು. ಒಟ್ಟಿನಲ್ಲಿ ಈ ಕಾಯಿದೆಗಳು ಮಾನವತ್ವದ ಮೊದಲನೆಯ ಆಹುತಿಯನ್ನು ತೆಗೆದುಕೊಂಡವು.

ಕಾರಖಾನೆಯಲ್ಲಿ ಈಗ ವಕೀಲರ ಪ್ರಸ್ಥವು ಬಹಳ ಬೆಳೆದಿದೆ. ಯಾವುದೇ ಪ್ರಶ್ನೆಯನ್ನು ಕಾಯದೆಗಳಿಂದಲೇ ಬಿಡಿಸಬೇಕಾದ ಪ್ರಸಂಗ ಬಂದು ಕುಳಿತಿದೆ. ಕೇಸು ನಡೆಯದ ಒಂದು ದಿನವೂ ಇಲ್ಲ.

ತಮ್ಮ ಕೈಕೆಳಗಿನ ಜನರೊಡನೆ ಒಡೆಯನು ಹೇಗೆ ನಡೆದುಕೊಳ್ಳಬೇಕು. ಎಂಬ ಬಗ್ಗೆ ತುಕಾರಾಮ ಮಹಾರಾಜರ ಒಂದು ಸುಂದರ ಅಭಂಗವಿದೆ. ಅವರು ಅನ್ನುತ್ತಾರೆ. "ದಯಾ ಕರೀ ಪುತ್ರಾಸಿ, ತೇಚಿ ದಾಸಾ ಆಣಿ ದಾಸೀ' ಎಂದು. ಆದರೆ ಈ ತತ್ವವು ಇಂದು ಯಾವ ಕೆಲಸದ್ದು! ಏಕೆಂದರೆ ಇಂದು ಕೂಲಿಕಾರರಿಗೆ ದಯೆ ಬೇಕಾಗಿಲ್ಲ. ಅವರಿಗೆ ಬೇಕಾದುದು ಹಕ್ಕು. ಅವರು ಕೃತಜ್ಞತೆಗೆ ಬೆಲೆ ಕೊಡಲಾರರು. ಹೀಗಾದಮೇಲೆ ಚಾಲಕರ ಸಹಾನುಭೂತಿಯು ಅವಶ್ಯಕತೆಯಾದರೂ ಅವರಿಗೆಲ್ಲಿ ಬೇಕಾಗಿದೆ?

ಲಕ್ಷ್ಮಣರಾಯರು ಹಳ್ಳಿಯಲ್ಲಿ ಹೋಗಿ ಅಲ್ಲಿಯ ಜನತೆಯ ಕಲ್ಯಾಣಕ್ಕಾಗಿ ಎಷ್ಟು ಶ್ರಮಿಸಿದರೆಂಬುದನ್ನು ನೀವು ನೋಡಿದ್ದೀರಿ. ಅವರು ಅವರೊಡನೆ ಅತ್ಯಂತ ಆತ್ಮೀಯತೆಯಿಂದ ವರ್ತಿಸುತ್ತಿದ್ದರು. ಅದರಿಂದ ಅಲ್ಲಿಯ ರೈತನೊಬ್ಬನು ಅವರ ಬಗ್ಗೆ ಪ್ರೇಮೋದ್ಗಾರಗಳನ್ನು ತೆಗೆದನು: 'ಒಡೆಯನು ನಮ್ಮ ಕೃಷ್ಣ. ನಾವೆಲ್ಲರೂ ಗೋಪಾಲಕರು'

ಆದರೆ ಅವನು ದ್ವಾಪರ ಯುಗದೊಳಗಿನ ಕೃಷ್ಣ. ಅವನಿಂದು ಮಥುರೆಗೆ ಬಂದರೆ ಅವನಿಗೆ ಯಾವ ತರದ ಸಂಭಾವನೆಯು ದೊರೆಯುವದೆಂಬುದು ನಿಮಗೆ ಗೊತ್ತಿದೆಯೇ? ಕೃಷ್ಣನ ಕೊಳಲನ್ನು ಕೇಳುತ್ತಲೇ ಅವನ ಕಡೆಗೆ ಅವನ ಸಂಗಡಿಗರು ಆಗಿನಂತೆ ಈಗ ಓಡಿಬರಲಾರರು. ಬಹಳವಾದರೆ ಅವನಿಗೆ ಅವರಿಂದ ಒಂದು ಪತ್ರ ಬಂದೀತು, ಅಷ್ಟೇ! ಅದರಲ್ಲಿ 'ಕೃಷ್ಣನು ಅವರ ಮೇಲೆ ಮಾಡಿದ 'ಅನ್ಯಾಯ'ದ ಸಲುವಾಗಿ ತಕರಾರು ಮಾಡಿ, ಈ ಅನ್ಯಾಯಗಳ ಪ್ರತೀಕಾರ ಮಾಡುವದಕ್ಕಾಗಿ ತಮ್ಮ ಯೂನಿಯನ್ ಸ್ಥಾಪಿಸಲ್ಪಟ್ಟಿದೆ ಎಂದು ಘೋಷಿಸುವರು. ಇಲ್ಲದಿದ್ದರೆ ಆಕಳು ಕಾಯುವ ಕೆಲಸವನ್ನು ಶ್ರಮಪಟ್ಟು ಮಾಡುವದು— ಗೋಪಾಲಕರ ಕೆಲಸ. ಬೆಣ್ಣೆಯನ್ನು ತಿನ್ನುವದು ಕೃಷ್ಣನ ಕೆಲಸ. ಇಂತಹ ಟೊಪ್ಪಿಗೆಯ ಕೆಲಸ ಇನ್ನು ಮುಂದೆ ನಡೆಯಲಾರವು. ಗೋವರ್ಧನ ಪರ್ವತವೆತ್ತಿ ಗೋಪಾಲಕರ ಮೇಲೆ ದೊಡ್ಡ ಉಪಕಾರ ಮಾಡಿದನೆಂದು ಅವರಿಗೆನಿಸುತ್ತಿರಬಹುದು. ಆದರೆ ತಮ್ಮೆಲ್ಲರ ನೆರವು ಅವನಿಗೆ ಇತ್ತೆಂದು ಈ ಕೆಲಸವಾಯಿತು. ಆದ್ದರಿಂದ ಇನ್ನು ಮುಂದೆ ಕಾಯದೆಯಂತೆ ಕೆಲಸದ ತಾಸು ನಿಶ್ಚಯಿಸಿ, ಸಂಬಳ, ತುಟ್ಟಿಭತ್ತೆ, ಗ್ರ್ಯಾಚ್ಯುಯಿಟಿ, ಬಿಡುವಿನ ದಿನ ಮೊದಲಾದವುಗಳ ಬಗ್ಗೆ ಗೋಪಾಲರ ಬೇಡಿಕೆಯು ಮಾನ್ಯವಿದ್ದರೆ ಮಾತ್ರ ಅವರು ಕೆಲಸಕ್ಕೆ ಬರತಕ್ಕವರು. ಇಲ್ಲದಿದ್ದರೆ ಇದೇ ಸಂಪಿನ ನೋಟೀಸೆಂದು ಕೃಷ್ಣನು ತಿಳಿದುಕೊಳ್ಳಲಿ' ಎಂದು ಬರೆದಿರುವರು. ಅದರಂತೆ ಸಂಪು ಹೂಡಿದನಂತರ ಕೃಷ್ಣನು ಒತ್ತಾಯದಿಂದ ನಿರುದ್ಯೋಗವನ್ನು ಹಬ್ಬಿಸಿದನೆಂದು ಎಲ್ಲ ಕಡೆಗೂ ಡಂಗುರ ಸಾರಲಾಗುವದು.

ಇದೊಂದು ವಿನೋದೀ ಕಲ್ಪನಾ ಚಿತ್ರವಿದ್ದರೂ ಹಾಗೆ ಪ್ರತ್ಯಕ್ಷ ಸಂಭವಿಸಿದರೂ ಅದರ ಬಗ್ಗೆ ಯಾರಿಗೂ ಆಶ್ಚರ್ಯವೆನಿಸಲಾರದು. ಅಥವಾ ಇಂಥ ಪರಿಸ್ಥಿತಿಯ ನಿರ್ಮಾಣದ ಬಗ್ಗೆ ಯಾರೂ ಯಾರಿಗೂ ಹೆಸರಿಡುವಂತಿಲ್ಲ. ಕಾಲಚಕ್ರದಂತೆ ಸಂಭವಿಸುವ ಈ ಪರಿಣಾಮವು ಅಪರಿಹಾರ್ಯ. ಕೂಲಿಕಾರರ ಮುಖಂಡರು ವಾಡಿಗೆ ಬಂದು ಭಾಷಣ ಬಿಗಿದು ಕೂಲಿಕಾರರ ತಲೆ ಕೆಡಿಸಿದರೆ ಏನು ಗತಿ? ಎಂಬ ವಿಚಾರಗಳು ರಾಯರ ತಲೆತಿನ್ನಹತ್ತಿದವು.

ಈ ಕಾರಖಾನೆಯನ್ನು ಆರಂಭಿಸಬೇಕಾದರೆ ಲಕ್ಷ್ಮಣರಾಯರು ತಮ್ಮ ಎಲುಬುಗಳನ್ನು ಎಷ್ಟು ಸವಿಸಬೇಕಾಯಿತು? ಈ ಕಾರಖಾನೆಯಿಂದ ಸರ್ವರ ಕಲ್ಯಾಣವಾಗಲೆಂದು ಹೇಗೆ ಅವರು ಪ್ರಯತ್ನಿಸಿದರು? ಮತ್ತು ಇಂಥ ಕಾರಖಾನೆ

ಯಿಂದ ದೇಶಕ್ಕೆ ಎಂಥ ಲಾಭವಿದೆ? ಎಂಬುದು ಈ ಮುಂದಾಳುಗಳಿಗೆ ಕಲ್ಪನೆ ಯಾದರೂ ಇದೆಯೇ? ಯದ್ಯಪಿ ಈ ಕಲ್ಪನೆ ಇದ್ದುದಾದರೆ ಅವರು ಇದನ್ನು ಕೂಲಿಕಾರರ ಮುಂದೇಕೆ ಮಂಡಿಸುವರು? ಕಾರಖಾನೆದಾರರೆಂದರೆ ಬಂಡವಳು ಗಾರರ ಪ್ರತಿನಿಧಿ. ಬಂಡವಲಶಾಹಿ ಎಂದರೆ ಕೂಲಿಕಾರರನ್ನು ಹಿಂಡುವ ಸಂಸ್ಥೆ. ಆದಕಾರಣ ಕಾರಖಾನೆದಾರರು ಕಾಮುಗಾರರ ಹಿತವನ್ನು ಮಾಡು ವದು ಹೇಗೆ ಶಕ್ಯವಿದೆ! ಎಂಬುದೇ ಅವರ ಸಿದ್ಧಾಂತ. ಅವರ ನಿಜವಾದ ಕೈವಾರಿಗಳೆಂದರೆ ಈ ಮುಂದಾಳುಗಳು. ಮುಂದಾಳುಗಳು ಹೇಳಿದಂತೆ ಕುಣಿದು, ಒಡೆಯರನ್ನು ದಾರಿಯಮೇಲೆ ತರಲು ಕೂಲಿಕಾರರು ಟೊಂಕ ಕಟ್ಟಿ ನಿಲ್ಲುವದೇ ಅವರ ಕೆಲಸ.

ಈ ಭಾಷಣವನ್ನು ಕೇಳಿ ಲಕ್ಷ್ಮಣರಾಯರು ಬಹಳ ಕಳವಳಗೊಂಡರು. ಇದೆಲ್ಲವನ್ನು ಮೀರಿಸುವ ಅತ್ಯಂತ ಅನುಚಿತವಾದ ಇನ್ನೊಂದು ಘಟನೆಯು ನಡೆಯಿತು. ಒಬ್ಬ ಭಾಷಣಕಾರನು ತುಂಬಿದ ಸಭೆಯಲ್ಲಿ ಲಕ್ಷ್ಮಣರಾಯರ ಮುಂದೆಯೇ ಅವರಿಗೆ ಅಪಮಾನವಾಗುವಂತಹ ಉದ್ಗಾರಗಳನ್ನು ತೆಗೆದನು. ಮಾತುಗಳು ತೀರ ತೂಕ— ತಪ್ಪಿದವು. ಅವನ ಬಡಬಡಿಕೆಯನ್ನು ಕೇಳಿ ಕೆಲಸಗಾರರೂ ಚಕಿತರಾದರು. ಲಕ್ಷ್ಮಣರಾಯರಿಗಂತೂ ನಖಶಿಖಾಂತ ವ್ಯೈ ಉರಿಯಹತ್ತಿತು. ಅವರು ನೆಟ್ಟಗೆ ಮನೆಗೆ ಬಂದು ತಮ್ಮ ಕೋಣೆಯಲ್ಲಿ ಸುಮ್ಮನೆ ಕುಳಿತರು, ಅಂದು ಅವರಿಗೆ ಊಟವಿಲ್ಲ! ನಿದ್ರೆಯಿಲ್ಲ.

ಮರುದಿನ ಅವರು ತಮ್ಮ ಕೈಕೆಳಗಿನವರನ್ನೆಲ್ಲ ಕರೆದು ತಮ್ಮ ನಿಶ್ಚಯ ವನ್ನು ಸಾರಿದರು. “ಇಲ್ಲಿಯವರೆಗೆ ಪಾಡಿಯಲ್ಲಿಯ ಹಿರಿ—ಕಿರಿಯರ ಹಿತವನ್ನು ಮಾಡಲು ಎಷ್ಟು ನನ್ನಿಂದ ಶಕ್ಯವಿದ್ದಿತೋ ಅಷ್ಟೆಲ್ಲ ಮಾಡಿರುವೆ. ಆದರೆ ಇದೆಲ್ಲ ರೀತಿಯನ್ನು ನೋಡಿದರೆ, ಇನ್ನು ಮುಂದೆ ನನ್ನ ಅವಶ್ಯಕತೆಯು ವಾಡಿಗೆಯಿದೆ ಎಂದು ನನಗೆ ಅನಿಸುವದಿಲ್ಲ. ಆದುದರಿಂದ ಇಲ್ಲಿದ್ದು ಅಪಮಾನ ಮಾಡಿಸಿಕೊಳ್ಳುವದಕ್ಕಿಂತ, ಬೇರೆ ಕಡೆಗೆ ಹೋಗುವದೇ ಲೇಸು.” ಎಂದು ಹೇಳಿದರು. ಮಾತಾಡುವ ಧೈರ್ಯ ಯಾರಿಗೂ ಆಗಲಿಲ್ಲ— ಮತ್ತು ಆ ಪ್ರಕಾರವಾಗಿ ಸಾಯಂಕಾಲದ ಎಕ್ಸಪ್ರೆಸ್ ಗಾಡಿಯಿಂದ ಅವರು ಹರಿಹರಕ್ಕೆ ಹೊರಟರು. ಅವರನ್ನು ಕಳಿಸಿಕೊಡಲು ನಿಕಟವರ್ತಿಯಾದ ೨–೩ ಜನರನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಕಿರ್ಲೋಸ್ಕರವಾಡಿಯಿಂದ ಅವರು

ಕೊನೆಯದಾಗಿ ಹೊರಡುವವರಿದ್ದರು. ಆದರೆ ಅವರಿಗೆ ಯಾವ ಬಗೆಯ ಸತ್ಕಾರವಾಗಲಿಲ್ಲ!

ಗಾಡಿಯು ಬಿಟ್ಟಮೇಲೆ ಅವರು ತಮ್ಮ ಕಣ್ಣೆದುರಿನಿಂದ ದೂರವಾಗುತ್ತಿರುವ ವಾಡಿಯ ಕಡೆಗೆ ನೋಡುತ್ತಲಿದ್ದರು. ಆ ಕಾರಖಾನೆಯ ಎತ್ತರವಾದ ತಗಡಿನ ಶೆಡ್ಡು, ಆ ನೆರಳಿನಲ್ಲಿ ಹಣಿಕಿ ಹಾಕುತ್ತಿರುವ ಮನೆಗಳ ಹಾಗೂ ಶಾಲೆಗಳ ಕಟ್ಟಡಗಳು ಮತ್ತು ಎದುರಿಗಿನ ಬೈಲಿನಲ್ಲಿ ನಡೆದಿರುವ ಮಕ್ಕಳ ಕ್ರಿಕೆಟ್ ಆಟ, ಇದೇ ಈ ಸ್ಥಳದಲ್ಲಿ ೩೬ ವರ್ಷಗಳ ಕೆಳಗೆ ಕಾಲಿಟ್ಟಾಗ ಇದು ನಿರ್ಜನ ಹಾಗೂ ಗಿಡ-ಗಂಟಿಗಳಿಂದ ತುಂಬಿದ್ದಿತಲ್ಲವೆ? ಆದರೆ ಅದೇ ಸ್ಥಲದಲ್ಲಿ ಈಗ ಎಷ್ಟು ರಮಣೀಯವಾದ ದೃಶ್ಯವು ಕಾಣುತ್ತಿದೆ! ಮತ್ತು ಈ ಎಲ್ಲ ಕೃತ್ಯಗಳು ಯಾರ ಧ್ಯೇಯದಿಂದ, ಕಲ್ಪನೆಯಿಂದಾದವೋ ಮತ್ತು ಯಾರು ಅವಿಶ್ರಾಂತವಾಗಿ ದುಡಿದು ಅವುಗಳನ್ನು ನಿರ್ಮಾಣ ಮಾಡಿದರೋ ಅವರು ಇವೆಲ್ಲವುಗಳನ್ನು ಬಿಟ್ಟು ಒಬ್ಬರೇ ಹೊರಗೆ ಹೊರಟಿದ್ದರು! "ಕರ್ಮಣ್ಯೆವಾಧಿಕಾರಸ್ತೆ ಮಾಫಲೇಷು ಕದಾಚನ!"

ಲಕ್ಷ್ಮಣರಾಯರು ನಾಲ್ಕು ವರ್ಷಗಳವರೆಗೆ ವಾಡಿಯ ಕಡೆಗೆ ತಿರುಗಿ ಸಹ ನೋಡಲಿಲ್ಲ. ಅವರು ವಾಡಿಯನ್ನು ಬಿಟ್ಟು ಹೋದದ್ದನ್ನು ಅವರ ಆಪ್ತರ ಹೊರತು ಯಾರೂ ಆಗ ಲಕ್ಷ್ಯಕ್ಕೆ ತಂದಿರಲಿಲ್ಲ. ಆದರೆ ದಿನಗಳು ರುಳಿದಂತೆ ಎಲ್ಲರಿಗೂ ಅವರ ನೆನಪು ಹೆಚ್ಚು ಹೆಚ್ಚಾಗಿ ಆಗತೊಡಗಿತು. ಅವರು ಹೋದುದು ವಾಡಿಯಲ್ಲಾಗಲಿ, ಕಾರಖಾನೆಯಲ್ಲಾಗಲಿ, ಒಂದು ಕೊರತೆಯಾಗಿ ಪರಿಣಮಿಸಹತ್ತಿತು. ಯಾವ ಸಮಾರಂಭವೂ ಅವರಿಲ್ಲದ್ದರಿಂದ ಶೋಭಿಸದಂತಾಯಿತು. ಅವರ ಅಗಲುವಿಕೆಯು ವಿಶೇಷವಾಗಿ ಹಳೆಯ ಕೂಲಿಕಾರರಿಗೆ ನೋವನ್ನುಂಟುಮಾಡಿತು. ಲಕ್ಷ್ಮಣರಾಯರ ಕೈಯಲ್ಲಿ ದುಡಿದ ಜನರಿಗಂತೂ ಬಹು ವ್ಯಥೆಯಾಯಿತು.

೧೯೩೦ ನೇ ಇಸ್ವಿಯು ಬಂದಿತು. ಕಿರ್ಲೋಸ್ಕರವಾಡಿಯು ಸ್ಥಾಪನೆಯಾಗಿ ನಾಲ್ವತ್ತು ವರುಷಗಳು ನೋಡು ನೋಡುವಷ್ಟರಲ್ಲಿ ಕಳೆದವು. ಈ ಸಾರೆಯ ಹುಟ್ಟುಹಬ್ಬವನ್ನು ಲಕ್ಷ್ಮಣರಾಯರ ಅಧ್ಯಕ್ಷತೆಯಲ್ಲಿ ಒಳ್ಳೇ ಹುರುಪಿನಿಂದ ಆಚರಿಸಬೇಕೆಂದು ಕೂಲಿಕಾರರೆಲ್ಲ ನಿಶ್ಚಯಿಸಿ, ಆದರಂತೆ ಲಕ್ಷ್ಮಣರಾಯರಿಗೆ ಆಗ್ರಹದ ಆಮಂತ್ರಣವನ್ನು ಕಳಿಸಿದರು.

ಆದರೆ ಲಕ್ಷ್ಮಣರಾಯರು ಅದಕ್ಕೆ ಒಪ್ಪಲಿಲ್ಲ. ಕಿರ್ಲೋಸ್ಕರವಾಡಿಗೆ ಬರುವದು ಎಳ್ಳಷ್ಟೂ ಮನಸ್ಸಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದರು. ಅದನ್ನು ಕೇಳಿ ಎಲ್ಲರಿಗೂ ಸಂಕಟವಾಯಿತು. ಮುಂದೆ ಮಾಡುವದೇನು ?

ಆದರೂ ಕೆಲಸಗಾರರು ಪಪ್ಪಾನನ್ನು ಇಲ್ಲಿಗೆ ಕರೆಸದೆ ಬಿಡುವಂತಿಲ್ಲವೆಂದು ನಿಶ್ಚಯ ಮಾಡಿದರು. ಅವರು ಈ ಕೆಲಸಕ್ಕಾಗಿ ಗೋವಿಂದರಾವ ಖೋತ, ಸಖಾರಾಮ ಠಾಣೇಕರ ಮತ್ತು ವಸಂತರಾವ ಜೇನಾಡೀಕರ ಈ ಮೂವರನ್ನು ತಮ್ಮೆಲ್ಲರ ಪ್ರತಿನಿಧಿಗಳನ್ನಾಗಿ ಅನಂತರಾವ ಫಳಣೀಕರರೊಡನೆ ಈ ಕೆಲಸಕ್ಕಾಗಿಯೇ ಪುಣೆಗೆ ಕಳಿಸಿದರು.

ಲಕ್ಷ್ಮಣರಾಯರಿಗೆ ಈ ಹಳೆಯ ಜನರ ಭೆಟ್ಟಿಯಿಂದ ಬಹಳ ಆನಂದವಾಯಿತು. ಅವರು ಇವರೆಲ್ಲರ ಸ್ವಾಗತವನ್ನು ಮಾಡಿ ಬಹಳ ಪ್ರೀತಿಯಿಂದ ತಮ್ಮಹತ್ತಿರ ಕರೆದು ಕೂಡಿಸಿಕೊಂಡರು. ಆ ಮಾತು ಈ ಮಾತುಗಳಾದ ಮೇಲೆ ಗೋವಿಂದರಾಯರು “ನಾವು ನಿಮ್ಮನ್ನು ವಾಡಿಗೆ ಕರಕೊಂಡು ಹೋಗಲು ಬಂದಿದ್ದೇವೆ! ನೀವಿಲ್ಲದೆ ಹುಟ್ಟುಹಬ್ಬವನ್ನು ಆಚರಿಸುವದೆಂತು ? ನಮ್ಮ ಮೇಲೆ ತಮಗೆ ಸಿಟ್ಟು ಬಂದಿದ್ದರೆ, ಈಗ ಅದನ್ನು ಮರೆತುಬಿಡಬೇಕು. ಮತ್ತು “ಆಗಲಿ” ಎನ್ನಿರಿ. ನೀವು ಒಪ್ಪದ ಹೊರತು ನಾವು ಇಲ್ಲಿಂದ ಏಳಲಾರೆವು.” ಎಂದರು.

ಕೆಲಸಗಾರರ ಈ ನಿಸ್ಸೀಮ ಪ್ರೀತಿಯನ್ನು ನೋಡಿ ಲಕ್ಷ್ಮಣರಾಯರು ಸದ್ಗದಿತರಾದರು. ಅವರ ಕಂಠದಿಂದ ಮಾತುಗಳೇ ಹೊರಡಲಿಲ್ಲ. ನಂತರ “ಒಳ್ಳೇದು ನೀವು ಹೊರಡಿರಿ. ನಾನು ಬರುವೆನೆಂದು ಎಲ್ಲರಿಗೂ ಹೇಳಿರಿ!” ಎಂದರು.

ಕಿರ್ಲೋಸ್ಕರವಾಡಿಗೆ ಈ ಸುದ್ದಿಯು ಮುಟ್ಟಿದ ಕೂಡಲೆ ಎಲ್ಲರ ಅಂತಃಕರಣವು ಪ್ರಫುಲ್ಲಿತವಾಯಿತು. ಅವರೆಲ್ಲ ಲಕ್ಷ್ಮಣರಾಯರ ಸ್ವಾಗತಕ್ಕಾಗಿ ದೊಡ್ಡ ಸಿದ್ಧತೆ ಮಾಡಹತ್ತಿದರು. ಈ ಸುಪ್ರಸಂಗದಲ್ಲಿ ರಾಮೂಅಣ್ಣಾ ಇವರೂ ಇರಲೇಬೇಕೆಂದು ತಿಳಿದು ಅವರನ್ನು ಮೋಟಾರು ಕೊಟ್ಟು ಕರೆಸಲಾಯಿತು. ಒಬ್ಬರು ೯೧ ವರ್ಷದವರು. ಇನ್ನೊಬ್ಬರು ೮೧ ವರ್ಷದವರು. ಕಾರಖಾನೆಯ ಮೂಲಪುರುಷರಾದ ಈ ಇಬ್ಬರೂ ಈ ಸಮಾರಂಭಕ್ಕೆ ಉಪಸ್ಥಿತ ಇರುವದೆಂದರೆ ಅದೊಂದು ಅಪೂರ್ವವಾದ ಯೋಗ.

ಲಕ್ಷ್ಮಣರಾಯರನ್ನು ಕರಕೊಂಡು ಮುಂಜಾನೆ ೧೧ ಕ್ಕೆ ಶಂತನುರಾವ ಮತ್ತು ಯಮುನಾತಾಯಿಯವರು ವಾಡಿಯ ಪ್ರವೇಶ ದ್ವಾರದ ಬಳಿಗೆ ಬಂದರು. ಅವರು ಬಂದಾಗ ಜನರಿಗಾದ ಆನಂದವನ್ನು ವರ್ಣಿಸುವದು ಯಾರಿಗೆ ಸಾಧ್ಯ? ಅವರಿಗೆಲ್ಲರಿಗೆ ಸುವಾಸಿನಿಯರು ಪಂಚಾರತಿಯನ್ನು ಬೆಳಗಿದ ನಂತರ, ಅವರು ರಾಧಾಬಾಯಿಯವರ ಮೂರ್ತಿಗೆ ಪೂಮಾಲೆಯನ್ನು ಹಾಕಿದರು. ಆನಂತರ ರಸ್ತೆಯ ಎರಡೂ ಬದಿಯಲ್ಲಿ ಶಿಸ್ತಿನಿಂದ ನಿಂತು ತಮ್ಮನ್ನು ಅಭಿವಂದಿಸುವವರನ್ನು ಮನ್ನಿಸುತ್ತ, ಅವರು ತಮಗಾಗಿಯೇ ಬುದ್ಧಿಪೂರ್ವಕವಾಗಿ ಸಿದ್ಧಮಾಡಿದ ಸುಶೋಭಿತವಾದ ವಾಹನದ ಕಡೆಗೆ ತಿರುಗಿದರು. ಝೂಲುಗಳನ್ನು ಧರಿಸಿದ ೪೦ ಎತ್ತುಗಳನ್ನು ಹೂಡಿದ ರಥವು ಅವರ ಸ್ವಾಗತಕ್ಕಾಗಿ ಸಿದ್ಧವಾಗಿತ್ತು.

ಮೆರವಣಿಗೆಯು ಸುರುವಾಯಿತು. ಅದರೊಡನೆ ಬಜಂತ್ರಿ–ತುತೂರಿಗಳ ನಿನಾದವಲ್ಲದೆ ಸಾವಿರಾರು ಜನರ ತಂಡದಿಂದ "ಲಕ್ಷ್ಮಣರಾವ ಕಿರ್ಲೋಸ್ಕರರಿಗೆ ಜಯವಾಗಲಿ" ಎಂಬ ಜಯಘೋಷವು ಹೊರಟು ವಾತಾವರಣವನ್ನು ದುಮುದುಮಿಸಿತು. ಕೂಲಿಕಾರರ ಇಂಥ ಅದ್ಭುತ ಪ್ರೇಮವನ್ನು ಗಳಿಸಿದ ಲಕ್ಷ್ಮಣರಾಯರು ಧನ್ಯರು.

ವಾಡಿಯ ೪೦ ನೇ ಹುಟ್ಟುಹಬ್ಬವು ವಿಜೃಂಭಣೆಯಿಂದ ಆಚರಿಸಲ್ಪಟ್ಟು ಲಕ್ಷ್ಮಣರಾಯರಿಗೆ ಅಪೂರ್ವ ಸ್ವಾಗತವನ್ನೀಯಿತು. ಆನಂತರ ಲಕ್ಷ್ಮಣರಾಯರು ಪುಣೆಗೆ ಹೊರಟರು. ಅಲ್ಲಿರುವಾಗ ಲಕ್ಷ್ಮಣರಾಯರು ಕಾರಖಾನೆಯಲ್ಲಿಯ ಪ್ರತಿಯೊಂದು ಖಾತೆಯ ಬದಲಾವಣೆಗಳನ್ನು ನಿರೀಕ್ಷಿಸಿ, ಕಾಮಗಾರರ ಬೆನ್ನು ಚಪ್ಪರಿಸಿದರು. ಲಕ್ಷ್ಮಣರಾಯರ ಪ್ರೇಮದ ಹಸ್ತಸ್ಪರ್ಶದಿಂದ ಕೆಲಸಗಾರರಿಗೆಲ್ಲ ಆನಂದವಾಗಿ ರೋಮಾಂಚನವೇಳುತ್ತಿದ್ದವು.

ಕೆಲಸಗಾರರ ಮನಸ್ಸಿನಲ್ಲಿ ಲಕ್ಷ್ಮಣರಾಯರ ಬಗ್ಗೆ ಎಷ್ಟು ಅಪ್ರತಿಮವಾದ ಪ್ರೀತಿ ಇದ್ದಿತೆಂಬುದು ಇದರಿಂದ ವ್ಯಕ್ತವಾಗುತ್ತದೆ. ಅವರು ಅವರ ಮೊದಲಿನ "ಪಪ್ಪಾ" ಇದ್ದರು. ಈಗಲೂ ಹಾಗೇ ಇದ್ದಾರೆ.

ಯಾವಾಗಲೂ ಮನುಷ್ಯನ ಮನಸ್ಸನ್ನು ಪ್ರೇಮದಿಂದ ಗೆದೆಯಬೇಕಲ್ಲದೆ ಕಾಯಿದೆಯಿಂದ ಗೆದೆಯಲು ಶಕ್ಯವೇ ಇಲ್ಲ.

೨೪

# ಕೊನೆಯ ಹಂತ

ಕಿರ್ಲೋಸ್ಕರವಾಡಿಯ ೪೦ ನೆಯ ಹುಟ್ಟುಹಬ್ಬವು ಮುಗಿದೊಡನೆ ಲಕ್ಷ್ಮಣರಾಯರು ಪುಣೆಗೆ ಹೊರಟುಬಿಟ್ಟರು. ಇಷ್ಟೊಂದು ವರುಷಗಳ ತರುವಾಯ ವಾಡಿಗೆ ಬಂದಿದ್ದ ಅವರು, ಇನ್ನೂ ಹತ್ತುಹದಿನೈದು ದಿನಗಳಾದರೂ ಇಲ್ಲಿರಬೇಕೆಂದು ಎಲ್ಲರ ಅಪೇಕ್ಷೆಯಾಗಿತ್ತು. ಆದರೆ ಆ ಇಚ್ಛೆಯನ್ನು ಪೂರೈಸುವುದು ಅವರಿಗೆ ಸಾಧ್ಯವಾಗಲಿಲ್ಲ.

ಅವರಿಷ್ಟು ಅವಸರದಿಂದ ಹೊರಡುವದಕ್ಕೂ ಒಂದು ಕಾರಣವಿತ್ತು. ಮೊದಲು ಕಿರ್ಲೋಸ್ಕರವಾಡಿಯನ್ನು ಬಿಟ್ಟು ತೆರಳುವಾಗ ಅವರ ಮನಸ್ಸು ವಿಷಾದಗೊಳ್ಳುವದು ಸ್ವಾಭಾವಿಕವಾಗಿತ್ತು. ಆದರೆ ಅಷ್ಟರಿಂದ ಅವರು ಕೊಂಚವೂ ಹತಾಶರಾಗಲಿಲ್ಲ. ಬದಲಾದ ಪರಿಸ್ಥಿತಿಯಲ್ಲಿ ಕಾರಖಾನೆಯ ಸೂತ್ರಗಳನ್ನು ಕೆಳಗಿಡುವುದು ಅವರಿಗೆ ಕ್ರಮಪ್ರಾಪ್ತವೇ ಆಗಿತ್ತು; ಆದರೂ ಅವರ ಪ್ರಯತ್ನಗಳು ಮಾತ್ರ ಎಷ್ಟೂ ನಿಂತುಹೋಗಲಿಲ್ಲ. ಕಾರಖಾನೆಯ ಉದ್ಯೋಗ ಬಿಟ್ಟರೆ ಹೊಲದ ಉದ್ಯೋಗ ಅವರೆದುರು ಸಿದ್ಧವಾಗಿತ್ತು. ಅದನ್ನು ಕೈಕೊಳ್ಳಬೇಕೆಂದು ಅವರು ನಿರ್ಧರಿಸಿದರು.

ಕಾರಖಾನೆಯಿರಲಿ, ಬೇಸಾಯವೇ ಇರಲಿ, ಎರಡರ ಕಾರ್ಯವೂ ಒಂದೇ–ಉತ್ಪಾದನೆ. ಉತ್ಪಾದನೆಯನ್ನು ಯಂತ್ರದಿಂದ ಮಾಡುವುದಾದರೆ ಉತ್ತಮ. ಇಲ್ಲದಿದ್ದರೆ ಭೂಮಿಯಿಂದ ಹುಟ್ಟಿಸುವುದರಲ್ಲಿಯೂ ಅಷ್ಟೇ ಆನಂದ ಲಭಿಸಬಲ್ಲದು, ಎಂಬ ಅನುಭವವನ್ನು ಅವರು ಪಡೆದಿದ್ದರು. ಆದುದರಿಂದ ಪುಣೆಗೆ ಬಂದಮೇಲೆ ತಾವು ಕೈಕೊಂಡ ಬೇಸಾಯದಲ್ಲಿ ಮಗ್ನರಾದರು; ಆ ಕೆಲಸವಿಲ್ಲದೆ ನಾಲ್ಕು ದಿನಗಳನ್ನು ಕಳೆಯುವುದೂ ಅವರಿಗೆ ಕಷ್ಟಕರವಾಗಿತ್ತು. ಇದಕ್ಕೇ ಕರ್ಮಯೋಗವೆನ್ನೋಣವೇ ?

ಹೀಗಿದ್ದುದರಿಂದಲೇ, ಕಿರ್ಲೋಸ್ಕರವಾಡಿಯನ್ನು ಬಿಟ್ಟು ಹರಿಹರದಲ್ಲಿ ಕಾಲಿಟ್ಟೊಡನೆ, ಒಂದು ದಿನವೂ ಸ್ವಸ್ಥವಾಗಿ ಕುಳ್ಳಿರದೆ ಬೇಸಾಯಕ್ಕೆ ತೊಡಗಿದರು. ತುಂಗಭದ್ರಾನದಿಯು ಕಾರಖಾನೆಯ ಬದಿಯಲ್ಲಿಯೇ ಹರಿಯುತ್ತದೆ.

ಅದರ ದಂಡೆಯು ಬಹಳಷ್ಟು ಭೂಮಿ ಕಾರಖಾನೆಯ ಒಡೆತನಕ್ಕೆ ಸೇರಿದ್ದು. ಆದರೆ, ಆಶ್ಚರ್ಯದ ಮಾತೆಂದರೆ ಇಂತಹ ಉತ್ತಮ ಸೌಕರ್ಯವನ್ನು ನಿಸರ್ಗವು ಎದುರಿನಲ್ಲೇ ಇಟ್ಟಿದ್ದರೂ ಎಲ್ಲರಿಗೂ ಸುಗ್ರಾಸ ಭೋಜನ ಸಿಕ್ಕುವುದೇ ಮಹಾ ದುಸ್ತರವಾಗಿತ್ತು. ರೇಶನಿಂಗ್ ದಿನಗಳವು! ಸಿಕ್ಕಂತಹ ಕಾಳುಕಡಿಯಿಂದ ಹೊಟ್ಟೆತುಂಬಿಕೊಳ್ಳುವದು ನಡೆದಿತ್ತು.

ಮರುದಿನವೇ ಲಕ್ಷ್ಮಣರಾಯರ ರಂಟೆಹೊಡಿತು. ಜೊತೆಯಲ್ಲೇ ನದಿಯ ದಡಕ್ಕೆ ಪಂಪುಕೂಡಿಸುವ ಕೆಲಸವೂ ನಡೆಯಿತು. ಬಿತ್ತುವುದಕ್ಕಾಗಿ ಅವರೊಂದು ಸುಧಾರಿಸಿದ ಕೂರಿಗೆಯನ್ನು ತಯಾರಿಸುವ ಪ್ರಯೋಗವನ್ನು ಕೈಕೊಂಡಿದ್ದರು. ಇಲ್ಲಿ ಬಂದಮೇಲೆ ಅದನ್ನು ಮುಂದುವರಿಸಿದರು. ಆ ಕೂರಿಗೆಯಿಂದಲೇ ಒಂದೂವರೆ ಅಡಿ ಅಂತರದಿಂದ ಬೀಜ ಬಿತ್ತಲಾಯಿತು.

ಲಕ್ಷ್ಮಣರಾಯರ ಕೈಯಾಡಿದ ಭೂದೇವಿ ಪ್ರಸನ್ನಳಾಗಲಿಲ್ಲವೆಂದರೇ ಹೇಗೆ? ಅವರು ಬೆಳೆದ ಬೆಳೆಯನ್ನು ನೋಡಲು ಸುತ್ತುಮುತ್ತಲಿನ ಒಕ್ಕಲಿಗರು ಬರತೊಡಗಿದರು. ಅವರಿಗೆ ಇಲ್ಲೊಂದು ಒಳ್ಳೆಯ ಮಾದರಿ ದೊರೆಯಿತು. ಗೋವಿನಜೋಳ, ಜೋಳ ಮೊದಲಾದ ಧಾನ್ಯಗಳನ್ನೂ ತೊಂಡೆ, ಬದನೆ, ಚಪ್ಪರಬದನೆ ಮೊದಲಾದ ಕಾಯಿಪಲ್ಲೆಗಳನ್ನು ಲಕ್ಷ್ಮಣರಾಯರು ಬೆಳೆದರು. ಲಕ್ಷ್ಮಣರಾಯರು ಹರಿಹರದಲ್ಲಿದ್ದುದರಿಂದ ಅಲ್ಲಿಯ ಕಾರಖಾನೆಯ ಚಾಲಕರಿಗೆ ಅವರ ಸಲಹೆ ಸೂಚನೆಗಳ ಲಾಭವಷ್ಟೇ ಸಿಕ್ಕಲಿಲ್ಲ, ಅವರ ಆಹಾರ ಸಮಸ್ಯೆಯೂ ಬಿಟ್ಟಿತು.

ಅಲ್ಲಿಂದ ಲಕ್ಷ್ಮಣರಾಯರು ಬೆಂಗಳೂರಿಗೆ ಹೋದರು. ಅಲ್ಲಿ ಅವರ ಮೂರನೆಯ ಮಗ ಶ್ರೀ ಪ್ರಭಾಕರಪಂತರು ಒಂದು ಫಾರ್ಮನ್ನು ಆರಂಭಿಸಿದ್ದರು. ನಗರದಿಂದ ಏಳೆಂಟು ಮೈಲು ದೂರದ ನಾಗಸಂದ್ರ ಎಂಬ ಹಳ್ಳಿಯಲ್ಲಿ ಅವರ ಹೊಲವಿತ್ತು. ಹೊಲದಲ್ಲೇ ಮನೆ ಕಟ್ಟಿಕೊಂಡು ಪ್ರಭಾಕರಪಂತರು ತಮ್ಮ ಹೆಂಡತಿ ವಿನೋದಿನಿಬಾಯಿಯೊಂದಿಗೆ ಇರುತ್ತಿದ್ದರು. ನೆರೆಹೊರೆಯಲ್ಲಿ ಅವರ ಮೂರು ನಾಲ್ಕು ಕುಳಗಳ ಗುಡಿಸಲುಗಳಲ್ಲದೆ, ಬೇರೆ ವಸತಿಯಿರಲಿಲ್ಲ.

ಲಕ್ಷ್ಮಣರಾಯರು ಅಲ್ಲಿಗೆ ಹೋದ ಕೆಲ ದಿನಗಳಲ್ಲಿ ಪ್ರಭಾಕರಪಂತರಿಗೆ ಕರುಳುಬೇನೆ (ಅಪೆಂಡಿಸಾಯಟಿಸ್) ವಿಕಾರ ಉಂಟಾಗಿ, ಅವರು ಶಸ್ತ್ರಚಿಕಿತ್ಸೆಗಾಗಿ ಹೆಂಡತಿಯೊಡನೆ ಪುಣೆಗೆ ಹೋಗಬೇಕಾಯಿತು. ಫಾರ್ಮಿನ ವ್ಯವಸ್ಥೆ

ಲಕ್ಷ್ಮಣರಾಯರೊಬ್ಬರ ಕೈಗೇ ಬಂದಿತು. ಆಗವರು ಫಾರ್ಮನ್ನು ಸರ್ವಾಂಗೀಣವಾಗಿ ಸುಧಾರಿಸಿ ಉತ್ಪನ್ನವನ್ನು ಹೆಚ್ಚಿಸುವ ಕೆಲಸವನ್ನು ವ್ಯವಸ್ಥಿತವಾಗಿ ನಡೆಯಿಸಿದರು. ಅವರು ಆಳುಗಳೊಡನೆ ಕನ್ನಡದಲ್ಲಿ ಮಾತನಾಡುತ್ತಿದ್ದರು; ಅದು ಗಡಿನಾಡಿನ ಕನ್ನಡ. ಆ ಜನಕ್ಕೆ ಅದು ಸರಿಯಾಗಿ ತಿಳಿಯುತ್ತಿರಲಿಲ್ಲ. ಅದರಿಂದಾಗಿ ಎಷ್ಟೋಸಲ ಅವರ ಸಂಭಾಷಣೆಯಲ್ಲಿ ವಿನೋದ ಉಂಟಾಗುತ್ತಿತ್ತು.

ಫಾರ್ಮಿನಲ್ಲಿಯ ಹಾಲು, ಮೊಸರು, ತತ್ತಿ, ಕಾಯಿಪಲ್ಲೆ ಮೊದಲಾದವನ್ನು ಬೆಳಿಗ್ಗೆ ಬೇಗ ನಗರಕ್ಕೆ ತಲುಪಿಸಬೇಕು. ಅದಕ್ಕಾಗಿ ಲಕ್ಷ್ಮಣರಾಯರು ನಸುಕಿನ ೪ ಗಂಟೆಗೇ ದನಗಳನ್ನು ಕರೆಯಿಸಿ, ಹಾಲು ಮತ್ತು ಇತರ ವಸ್ತುಗಳನ್ನು ಜಟಕಾದಲ್ಲಿ ಸಾಗಿಸುತ್ತಿದ್ದರು. ಅವರು ಒಮ್ಮೆ ಕೆಲಸ ಕೈಕೊಂಡರೆಂದರೆ ಅದು ದಿನಾಲು ಗಡಿಯಾರದಂತೆ ನಡೆಯತಕ್ಕದ್ದೇ. ಬೇಸರು ಎಂಬುದೇ ಅವರಿಗೆ ಗೊತ್ತಿಲ್ಲ. ಎಪ್ಪತ್ತೈದು ವರುಷದ ಮನುಷ್ಯನ ಈ ಪರಿಶ್ರಮವನ್ನು ಕಂಡು ಆಳುಹೋಳುಗಳು ಚಕಿತರಾಗುತ್ತಿದ್ದರಂತೂ ಸರಿಯೆ; ಅಲ್ಲದೆ, ತಮ್ಮ ಈ ಉದ್ಯೋಗದಿಂದ ಅವರು ಆ ಜನಗಳ ವಿಲಕ್ಷಣ ಪ್ರೇಮವನ್ನೂ ಗಳಿಸಿಕೊಂಡರು.

ಆಳುಗಳಲ್ಲಿ ಮಾರಣ್ಣನೆಂಬವನಿಗಂತೂ ತನ್ನೀ ಸ್ವಾಮಿಯಲ್ಲಿ ಅಪಾರ ಭಕ್ತಿ. ಪ್ರಭುರಾಮಚಂದ್ರನ ಮುಂದೆ ಹನುಮಂತನು ಕೈಮುಗಿದುಕೊಂಡು ನಿಂತಂತೆ, ಆತನು ಯಾವಾಗಲೂ ಅವರು ಏನು ಹೇಳಿದರದನ್ನು ಮಾಡಲಿಕ್ಕೆ ಸಿದ್ಧ. ಮಾರಣ್ಣನ ಊರು ಬೊಗಲಗುಂಟೆ; ಅದು ಈ ಹೊಲದಿಂದ ಮೂರು ಮೈಲು ಅಂತರದಲ್ಲಿತ್ತು. ಅಲ್ಲಿ ಪ್ರತಿ ರಾಮನವಮಿಗೂ ಉತ್ಸವವಾಗುತ್ತದೆ. ಅಂದು ಸ್ವಾಮಿ ತನ್ನ ಮನೆಗೆ ಬರಬೇಕು, ತನ್ನಲ್ಲಿ ಉಣ್ಣಬೇಕು ಎಂದು ಅವನ ಮನಸಿನ ಹಾರಯಿಕೆ. ಆದರೆ ಅವರನ್ನು ಕೇಳುವುದು ಹೇಗೆ? ಅವರಾದರೊ ಒಡೆಯರು, ಮೇಲೆ ಬ್ರಾಹ್ಮಣರು! ಆದರೆ ಮನಸ್ಸು ತಡೆಯದೆ ಧೈರ್ಯಮಾಡಿ ಲಕ್ಷ್ಮಣರಾಯರಿಗೆ ಆತನೆಂದ "ಸ್ವಾಮಿ, ದಯವಿಟ್ಟು ತಾವು ನಮ್ಮ ಊರಿಗೆ ಬರಬೇಕು, ನಮ್ಮ ಊರ ಹಬ್ಬ. ನಮ್ಮ ಮನೆಯಲ್ಲಿ ಊಟ ಮಾಡಬಹುದೊ."

ಲಕ್ಷ್ಮಣರಾಯರು ತಟ್ಟನೆ ಉತ್ತರವಿತ್ತರು. "ಮಾಡತೇನಪ್ಪಾ, ಇಲ್ಲ ಯಾಕ? ನೀ ನಮ್ಮನ್ನ ಕರದುನೋಡು. ನಮಗೆ ಎಲ್ಲಾ ನಡೀತದೆ."

ಲಕ್ಷ್ಮಣರಾಯರು ತಮ್ಮ ಮಾತನ್ನು ನಡೆಸಿದರು. ತಮ್ಮ ಪರಿವಾರ ದೊಡನೆ ಅವರು ಮಾರಣ್ಣನ ಮನೆಗೆ ಹೋದರು. ಅವರು ತನ್ನ ಔತಣವನ್ನು ಸ್ವೀಕರಿಸಿದ್ದರಿಂದ ಮಾರಣ್ಣನ ಆನಂದಕ್ಕೆ ಮುಗಿಲು ಸಾಲಲಿಲ್ಲ.

ಹೊಲದಲ್ಲಿ ಒಂದೇ ಬಾವಿಯಿತ್ತು. ಭೂಮಿಗೆ ನೀರು ಸಾಕಾಗುತ್ತಿರ ಲಿಲ್ಲ. ಇನ್ನೊಂದು ಬಾವಿಯನ್ನು ತೋಡಿಸಬೇಕೆಂದು ನಿರ್ಧರಿಸಿದರು. ಅಗಿ ಯುವ ಕೆಲಸವು ಬೆಳಗಿನ ೭ಕ್ಕೆ ಆರಂಭವಾಗುತ್ತಿತ್ತು. ಆಗಿನಿಂದ ಹೊತ್ತು ಮುಳುಗುವವರೆಗೆ ಕೈಯಲ್ಲಿ ಊರುಗೋಲು ಹಿಡಿದುಕೊಂಡು ಅವರು ಸತತ ವಾಗಿ ಆ ಕೆಲಸದ ಮೇಲ್ವಿಚಾರಣೆ ಮಾಡುತ್ತಿದ್ದರು.

ಬಾವಿಗೆ ಚನ್ನಾಗಿ ಸೆಲೆಬಿತ್ತು. ಒಮ್ಮೆ ಪ್ರಭಾಕರಪಂತರು ತಮ್ಮ ಕೆಲ ಗೆಳೆಯರನ್ನು ಕೂಡಿಕೊಂಡು ಈಸಾಡಬೇಕೆಂದು ಗೊತ್ತು ಮಾಡಿದರು. ಅವರ ಜಲಕ್ರೀಡೆಯನ್ನು ಲಕ್ಷ್ಮಣರಾಯರು ದಂಡೆಯಮೇಲೆ ಕುಳಿತು ನೋಡುತ್ತಲಿದ್ದರು. ಆದರೆ ಅಷ್ಟರಿಂದ ಅವರಿಗೆ ಸಮಾಧಾನವಾಗಲಿಲ್ಲ. ಮೈಮೇಲಿನ ಬಟ್ಟೆಗಳನ್ನು ತೆಗೆದು ನೀರಿಗೆ ಹಾರಿಬಿಟ್ಟರು! ಮೊದಲು ಅವರ ಕಡೆಗೆ ಯಾರ ಗಮನವೂ ಹೋಗಿರಲಿಲ್ಲ. ನೀರಲ್ಲಿ ಬಂದಮೇಲೆ ಮಿಕ್ಕ ಈಜುಗಾರರೆಲ್ಲ ಆದರಮಿಶ್ರಿತ ಆಶ್ಚರ್ಯದಿಂದ ಅವರತ್ತ ನೋಡತೊಡ ಗಿದರು.

ಈ ಗಡಿಬಿಡಿಯಲ್ಲಿ ಒಂದು ಮೋಜಾಯಿತು ನೀರಿಗೆ ಜಿಗಿಯುವಾಗ ಲಕ್ಷ್ಮಣರಾಯರು ಕನ್ನಡಕ ತೆಗೆದಿಡುವುದನ್ನೇ ಮರೆತಿದ್ದರು. ಅದು ನೆನ ಪಾದೊಡನೆ ಅವರು “ಏ ಪ್ರಭಾ, ನನ್ನ ಚಾಳೀಸೋ !” ಎಂದು ಕೂಗಿ ಕೊಂಡರು. ಅಂದವರು ಇತರರೊಂದಿಗೆ ಮನಸೋಕ್ತವಾಗಿ ಈಸಿದರು. ಮರುದಿನ ಪಂಪಿನಿಂದ ಬಾವಿಯನ್ನು ತೆರವು ಮಾಡಿದಾಗ, ಕನ್ನಡಕವು ಸುರ ಕ್ಷಿತ ಸ್ಥಿತಿಯಲ್ಲಿ ದೊರೆಯಿತು. ಅಲ್ಲಿಯ ವರೆಗೆ ಅವರ ಕೆಲಸಕ್ಕೆ ಬಹಳ ತಡೆ ಯಾಗಿತ್ತು.

ದನಕರುಗಳ ಸುಖಸೌಕರ್ಯಗಳ ಕಡೆಗೆ ಲಕ್ಷ್ಮಣರಾಯರ ಲಕ್ಷ್ಯ ಬಹಳ. ಅವುಗಳಿಗೆ ಹಾಕುವ ಮೇವನ್ನು ಸಣ್ಣಾಗಿ ಕೊರೆದು, ಉಪ್ಪು ಮತ್ತು ಹಿಂಡಿಗಳ ಮಿಶ್ರಣವನ್ನು ಅದರಮೇಲೆ ಸಿಂಪಡಿಸಿದೆಯೋ ಇಲ್ಲವೋ ಎಂಬುದನ್ನು ಅವರು ಸ್ವತಃ ನೋಡುತ್ತಿದ್ದರು. ಹಕ್ಕೆಯನ್ನು ಕಟ್ಟಿಸುವಾಗ ದನಗಳಿಗೆ

ಬೇಕಾದಾಗ ಸಾಕಷ್ಟು ನೀರು ಕುಡಿಯಲಾಗುವಂತೆ ಅವುಗಳ ಹತ್ತಿರ ಸ್ವತಂತ್ರ ವಾದ ಹೌದನ್ನು ಮಾಡಿದ್ದರು.

ಲಕ್ಷ್ಮಣರಾಯರ ಬೇಸಾಯ ಹೀಗೆ ನಡೆದಿರುವಾಗ ಒಂದು ದಿನ, ನಗರಕ್ಕೆ ಹಾಲು–ಪಲ್ಲೆಗಳನ್ನು ಒಯ್ಯುತ್ತಿದ್ದ ಅವರ ಜಟಕಾ ನಡುದಾರಿಗೇ ತಿರುಗಿ ಬಂದಿತು. ಜನಸಮೂಹವು ದಾರಿಯಲ್ಲಿ ಅದನ್ನು ತರುಬಿ, ಜಟಕಾಕ್ಕೆ ಮೂರು ಬಣ್ಣದ ಧ್ವಜವನ್ನು ಹಚ್ಚಿದ್ದಲ್ಲದೆ ಬಿಡುವುದಿಲ್ಲವೆಂದು ಹಿಂದಕಟ್ಟಿ ದ್ದರು. ರಾಷ್ಟ್ರೀಯ ಚಳವಳಿಯ ಕಾಲವದು. ಈ ಬಗೆಯ ನಿದರ್ಶನಗಳು ಎಲ್ಲ ಕಡೆಗೆ ನಡೆದಿದ್ದವು. ಈ ವಿಷಯದಲ್ಲಿ ಜನರೊಡನೆ ದರ್ಪ ನಡೆಯದೆಂದು ಅರಿತ ಲಕ್ಷ್ಮಣರಾಯರು ತ್ರಿವರ್ಣ ಧ್ವಜವೊಂದನ್ನು ತಯಾರಿಸಿ ಜಟಕಾಕ್ಕೆ ಹಚ್ಚಿ ಕಳಿಸಿದರು.

ಮುಂದೆ ೧೯೪೬ ರಲ್ಲಿ ಕಿರ್ಲೋಸ್ಕರ ಇಲೆಕ್ಟ್ರಿಕ್ ಕಂಪನಿಯನ್ನು ಆರಂಭಿ ಸುವುದಕ್ಕಾಗಿ ಲಕ್ಷ್ಮಣರಾಯರ ಕಿರಿಯ ಮಗ ಶ್ರೀ. ರವೀಂದ್ರರು ಬೆಂಗಳೂರಿಗೆ ಬಂದರು. ಈ ಹೊತ್ತಿಗೆ ಪ್ರಭಾಕರಪಂತರಿಗೆ ಕಿರ್ಲೋಸ್ಕರ ಸೇಲ್ಸ್ ಡಿಪೋದ ವ್ಯವಸ್ಥೆಯನ್ನು ಒಪ್ಪಿಸಿದ್ದರಿಂದ ಅವರೂ ನಗರದಲ್ಲೇ ಮನೆ ಮಾಡಿದರು. ಎಲ್ಲರ ಬಿಡಾರ ಒತ್ತಟ್ಟಿಗೇ. ಲಕ್ಷ್ಮಣರಾಯರಿಗೆ ಈ ಹೊಸ ಕಾರಖಾನೆ ಯನ್ನು ಸ್ಥಾಪಿಸುವ ಮನಮೆಚ್ಚಿನ ಕೆಲಸ ಸಿಕ್ಕುತ್ತಲೇ ಅದರಲ್ಲಿ ಅವರ ವೇಳೆ ಸರಸರ ಹೋಗತೊಡಗಿತು. ಆ ಕಾರಖಾನೆಯ ಅಡಿಗಲ್ಲನ್ನು ಅವರ ಹಸ್ತ ದಿಂದಲೇ ಇಡಿಸಲಾಯಿತು. ೧೯೪೭ ರಿಂದ ಅದರಲ್ಲಿ ಇಲೆಕ್ಟ್ರಿಕ್ ಮೋಟರುಗಳು ತಯಾರಾಗಿ ಹೊರಬೀಳತೊಡಗಿದವು. ಇಷ್ಟು ಶೀಘ್ರದಲ್ಲಿ, ಇಷ್ಟು ಯಶಸ್ವಿ ಯಾಗಿ ಕಾರಖಾನೆ ಆರಂಭವಾದುದನ್ನು ಕಂಡು ಲಕ್ಷ್ಮಣರಾಯರಿಗೆ ತುಂಬಾ ಸಮಾಧಾನವಾಯಿತು.

ಅಷ್ಟರೊಳಗೆ ಪುಣೆಯಲ್ಲಿ ಆಯಿಲ್ ಇಂಜಿನಿನ ಕಾರಖಾನೆಯೂ ಆಕಾರಕ್ಕೆ ಬರತೊಡಗಿತ್ತು. ಅದರ ಸರ್ವ ವ್ಯವಸ್ಥೆ ಶಂತನುರಾಯರ ಕಡೆಗಿತ್ತು. ಕಿರ್ಲೋಸ್ಕರ ಸಂಸ್ಥೆಯ ನೇತೃತ್ವವೂ ಪರಂಪರೆಯಿಂದ ಅವರ ಕಡೆಗೇ ಬಂದಿತು. ೧೯೪೭ರ ಎಪ್ರಿಲಿನಲ್ಲಿ ಅವರು, ಪತ್ನಿ ಸೌ॥ ಯಮೂತಾಯಿಯೊಂದಿಗೆ ಪುಣೆಯಲ್ಲಿ ಬಂದು ವಾಸಮಾಡಿದರು. ನಡುವೆ ೩–೪ ವರ್ಷಗಳ ಹೊರತಾಗಿ ಲಕ್ಷ್ಮಣ ರಾಯರು ಇರುತ್ತಿದ್ದುದು ತಮ್ಮ ಹಿರಿಯ ಮಗನಲ್ಲಿಯೆ. ಆದುದರಿಂದ ಶಂತನು ರಾಯರು ಪುಣೆಯಲ್ಲಿ ಮನೆ ಮಾಡಿದಮೇಲೆ, ನೀವೂ ಪುಣೆಯಲ್ಲಿ ಬಂದಿರಬೇ

ಕೆಂದು ಲಕ್ಷ್ಮಣರಾಯರನ್ನು ಆಗ್ರಹದಿಂದ ಕರೆಯತೊಡಗಿದರು. ಅದಕ್ಕೆ ಅವರಿಂದ ನಿರ್ದಿಷ್ಟವಾದ ಉತ್ತರ ದೊರೆಯುತ್ತಿತ್ತು—"ನಿಮ್ಮ ಕಾರಖಾನೆಯಲ್ಲಿ ಇಂಜಿನ್ ಹೊರಬರುವವರೆಗೆ ನಾನು ಪುಣೆಗೆ ಬರುವುದಿಲ್ಲ." ಎಂದು.

ಕೈಕೆಳಗಿನ ಜನರ ಉತ್ಸಾಹವನ್ನು ಹೆಚ್ಚಿಸುವುದಕ್ಕಾಗಿ ಲಕ್ಷ್ಮಣರಾಯರು ಹೀಗೆಲ್ಲ ಮೋಜಿನ ಪಣ ಇಡುತ್ತಿದ್ದರು. ಇಂತಹ ಉತ್ತರ ಬಂದಿತೆಂದರೆ ಆ ಜನಗಳು ವಿಶೇಷ ಈರ್ಷೆಯಿಂದ ಕೆಲಸ ಮಾಡುತ್ತಿದ್ದುದೂ ಅಷ್ಟೇ ನಿಜ.

ಪುಣೆಯ ಕಾರಖಾನೆಯ ಸ್ಥಾಪನೆ, ಯಂತ್ರಗಳ ಜೋಡಣೆ, ಇತರ ಸಲಕರಣೆಗಳ ಏರ್ಪಾಟವಾಗಿ, ೧೯೪೮ ರ ಡಿಸೆಂಬರಿನಲ್ಲಿ ಮೊದಲನೆಯ ಇಂಜಿನ್ನು ಅಲ್ಲಿಂದ ಹೊರಬಿದ್ದೊಡನೆ ಲಕ್ಷ್ಮಣರಾಯರಿಗೆ ಈ ಆನಂದದವಾರ್ತೆಯನ್ನು ತಂತಿಯಿಂದ ತಿಳಿಸಿದರು. ಮತ್ತು ಅದರ ಹಿಂದೆಯೇ ಅವರನ್ನು ಕರೆದುಕೊಂಡು ಹೋಗಲು ಶಂತನುರಾಯರೂ ಯಮೂತಾಯಿಯೂ ಹೊರಟರು.

ಈ ಮೂವರೂ ಪುಣೆಗೆ ವಿಮಾನಿನಲ್ಲಿ ಹೊರಟರು. ಮೋಜೆಂದರೆ, ಅವರ ವಿಮಾನ ಆ ದಿನ ಕಿರ್ಲೋಸ್ಕರವಾಡಿಯ ತೀರ ನೆತ್ತಿಯ ಮೇಲಿಂದಲೇ ಹೋಯಿತು. ಹವೆಯೂ ಸ್ವಚ್ಛವಾಗಿತ್ತು. ಆದರಿಂದ, ಅಷ್ಟು ಎತ್ತರದ ಮೇಲಿಂದ ಕಿರ್ಲೋಸ್ಕರವಾಡಿಯೂ ಕಾರಖಾನೆಯೂ ಒಂದು ಮಾದರಿಯನ್ನು ಇಟ್ಟಂತೆ ಗೋಚರಿಸಿತು. ವಾಡಿಯ ನೀಟಾದ ಬೀದಿಗಳು, ಸಾಲುಗೊಂಡಿರುವ ಮನೆಗಳು, ಸಾಲೆ, ಆಸ್ಪತ್ರಿಗಳು, ಕಾರಖಾನೆಯ ಕಟ್ಟಡ— ಎಲ್ಲವೂ ಕೂಡಿ ಎಂಥಹ ಚೊಕ್ಕವಾದ, ಆಕರ್ಷಕವಾದ ಚಿತ್ರ! ತಮ್ಮ ಕಲ್ಪನೆಯೊಳಗಿಂದ ಹುಟ್ಟಿ, ತಮ್ಮ ಪರಿಶ್ರಮದಿಂದ ತಲೆಯೆತ್ತಿ ನಿಂತ, ಆ ಪುಟ್ಟ ಉದ್ಯೋಗ ನಗರವನ್ನು ನೋಡುತ್ತಿರುವಾಗ, ಲಕ್ಷ್ಮಣರಾಯರಿಗೆ ಅದೆಷ್ಟು ಸಮಾಧಾನ ಎನಿಸಿರಬೇಡ!

ಲೋಹಗಾವದ ವಿಮಾನ ನಿಲ್ದಾಣದಲ್ಲಿ ಅವರ ಆಪ್ತೇಷ್ಟರು ಹಾರ-ತುರಾಯಿಗಳೊಂದಿಗೆ ಸ್ವಾಗತಕ್ಕಾಗಿ ಬಂದಿದ್ದರು. ಅಲ್ಲಿಂದ ಮನೆಗೆ ಬಂದ ಬಳಿಕ ಲಕ್ಷ್ಮಣರಾಯರು ವಿಶ್ರಾಂತಿಯಲ್ಲಿ ದಿನಗಳೆದರು. ಮರುದಿನ ಮುಂಜಾನೆ ಕಾರಖಾನೆಗೆ ಹೋಗಿ, ಅಲ್ಲಿ ನಡೆದಿರುವ ಮೊದಲನೆಯ ಪೆಟರ್

ಕಿರ್ಲೋಸ್ಕರ್ ಇಂಜಿನನ್ನು ಅವರು ನೋಡಿ, ಆ ಕಾರ್ಯಸಾಧನೆಗಾಗಿ ಎಲ್ಲರಿಗೂ ಮೆಚ್ಚಿಕೆಯ ಮಾತನ್ನಾಡಿದರು.

ಲಕ್ಷ್ಮಣರಾಯರು ಪುಣೆಗೆ ಬಂದರೂ ತಮ್ಮದೇ ಆದ ಕೆಲಸವಿಲ್ಲದಿದ್ದರೆ ಅವರೆಂತು ಸ್ವಸ್ಥ ಕುಳಿತಾರು? ಅಂತಹದೊಂದು ಉದ್ಯೋಗವನ್ನು ಹುಡುಕಿಕೊಳ್ಳಲೂ ಅವರಿಗೆ ತಡವಾಗಲಿಲ್ಲ. ಇಲ್ಲಿಯ ಕಾರಖಾನೆಯ ಬದಿಯಲ್ಲಿಯೂ ಹೊಳೆ, ದೊಡ್ಡ ಬಯಲು ಸ್ಥಳ ಇತ್ತು. ಮನೆಯಲ್ಲಿ ನೋಡಿದರೆ, ರೇಶನಿಂಗಿನದೆಸೆಯಿಂದಾಗಿ ಎಂತಹದೋ ಅಕ್ಕಿಯ ಅಥವಾ ಗೋವಿನಜೋಳದ ನುಚ್ಚಿನ ಅನ್ನವನ್ನು ತಿನ್ನುವ ಪಾಳಿ ಬಂದಿತ್ತು. ಆದ್ದರಿಂದ ಇಲ್ಲಿಯೂ ಹೊಲ ಮಾಡಬೇಕೆಂಬ ವಿಚಾರವನ್ನು ಅವರು ಮಗನೆದುರು ಎತ್ತಿದರು. 'ಹೊಲ ಮಾಡುವದೇ ಆದರೆ ಬತ್ತವನ್ನು ಬೆಳೆದರೆ ಬಹಳ ಒಳ್ಳೆಯದಾಗುವುದು' ಎಂದು ಯಮೂತಾಯಿ ಎಂದಳು.

"ಜೋಳ, ಗೋದಿ, ನೆಲಗಡಲೆ ಬೆಳೆಯುವುದು ನನಗೆ ಗೊತ್ತಿದೆ. ಕಿರ್ಲೋಸ್ಕರವಾಡಿಯಲ್ಲಿ ದ್ರಾಕ್ಷೆಯ ತೋಟವನ್ನೂ ಮಾಡಿದ್ದೇನೆ. ಬತ್ತ ಬೆಳೆಯುವ ಅನುಭವ ನನಗಿಲ್ಲ. ಆದರೂ ನಾನು ಮಾಡಿ ನೋಡುತ್ತೇನೆ. ಬೆಳೆದರೆ ನಿಮ್ಮದು, ಕೆಟ್ಟರೆ ನನ್ನದು." ಎಂದರು ಲಕ್ಷ್ಮಣರಾಯರು.

ಎತ್ತು–ಮುಟ್ಟಿಗಳನ್ನು ಅಣಿ ಮಾಡಿಕೊಂಡು, ಆಳನ್ನು ನಿಯಮಿಸಿಕೊಂಡು ಅವರು ಕೆಲಸಕ್ಕೆ ತೊಡಗಿದರು. ಭಾಜೆ ಎಂಬಲ್ಲಿಯ ಶ್ರೀ. ದಾದಾಸಾಹೇಬ ಚಿತಳೆ ಎಂಬವರು ಈ ವಿಷಯದಲ್ಲಿ ಬಲ್ಲವರೆಂದು ಕೇಳಿ, ಅವರನ್ನು ಕಂಡು ವಿಚಾರಿಸಿ ಅವರ ಸಲಹೆಯಂತೆ ಬೀಜ ಕೊಂಡು ಬತ್ತವನ್ನು ಬಿತ್ತಿದರು.

ಮೊದಲ ವರ್ಷ ಬೆಳೆ ಚೆನ್ನಾಗಿ ಬರಲಿಲ್ಲ. ಆದರೆ ಮನೆಯಲ್ಲಿ ಊಟಕ್ಕೆ ಉತ್ತಮ ಪ್ರತಿಯ ಅಕ್ಕಿಯು ಸಾಕಷ್ಟು ದೊರೆಯಿತು. ಅದರಿಂದ ಎಲ್ಲರಿಗೂ ಸುಗ್ರಾಸ ಭೋಜನದ ತೃಪ್ತಿ ಉಂಟಾಯಿತು.

ದಿನಾಲು ಮುಂಜಾನೆ ಲಕ್ಷ್ಮಣರಾಯರು ಶಂತನುರಾಯರೊಂದಿಗೆ ಕಾರಖಾನೆಗೆ ಹೋಗಿ ಅಲ್ಲಿ ಕೆಲ ಹೊತ್ತು ಕಳೆಯುತ್ತಿದ್ದರು; ಉಳಿದ ಹೊತ್ತ ನೆಲ್ಲ ಗದ್ದೆಯಲ್ಲಿ ಕಳೆಯುತ್ತಿದ್ದರು.

ಆ ಕಾಲದಲ್ಲಿ ಭಾರತದ ಆಹಾರ ಸಮಸ್ಯೆಯನ್ನು ಬಿಡಿಸುವುದಕ್ಕಾಗಿ ಗೆಣಸಿನ ಹುಟ್ಟುವಳಿಯನ್ನು ಹೆಚ್ಚಿಸಬೇಕೆಂದು ಸರಕಾರದ ಪ್ರಚಾರ ಜೋರಾಗಿ

ಸಾಗಿತ್ತು. ಲಕ್ಷ್ಮಣರಾಯರು ಆ ಸೂಚನೆಯನ್ನು ಕೃತಿಗಿಳಿಸಲು ನಿರ್ಧರಿಸಿ, ಕೆಂಪು, ಬಿಳಿ, ಜಾಂಬಳಿ ಬಣ್ಣದ ಗೆಣಸುಗಳ ನಮೂನೆಗಳನ್ನು ದೊರಕಿಸಿ, ಅವನ್ನು ಬೆಳೆಯುವ ವಿಧಾನವನ್ನು ಅಭ್ಯಾಸಮಾಡಿದರು. ಎಂದ ಮೇಲೆ ಕೇಳುವುದೇನು ? ಬೆಳೆ ಚೆನ್ನಾಗಿಯೇ ಬಂದಿತು. ಕರ್ಮಧರ್ಮ ಸಂಯೋಗ ದಿಂದ ಅದೇ ವೇಳೆಗೆ, ೧೯೫೦ ರ ಜಾನೆವರಿ ೨೬ಕ್ಕೆ ಭಾರತದ ಪ್ರಧಾನಮಂತ್ರಿ ಪಂಡಿತ ಜವಾಹರಲಾಲರು ಪುಣೆಗೆ ಬಂದರು. ಆಗವರು ಪುರಸತ್ತು ಮಾಡಿ ಕೊಂಡು ಕಿರ್ಲೋಸ್ಕರ ಆಯಿಲ್ ಇಂಜಿನಿನ ಕಾರಖಾನೆಯನ್ನು ಸಂದರ್ಶಿಸಿ ಆನಂದಿತರಾದರಲ್ಲದೆ, ಲಕ್ಷ್ಮಣರಾಯರು ಬೆಳೆದ ಗೆಣಸನ್ನು ನೋಡಿ, ಮತ್ತ ವರ ನಿರಾಲಸ ಪ್ರಯತ್ನವನ್ನು ಕಂಡು ಅತ್ಯಂತ ಸಂತುಷ್ಟರಾದರು.

ಲಕ್ಷ್ಮಣರಾಯರಿಗೆ ತಮ್ಮ ಆಳುಹೋಳುಗಳಮೇಲೆ ಅತಿಶಯ ಪ್ರೀತಿ ಇತ್ತು. ಆತನಿಗೂ ನೆಹರೂ ದರ್ಶನವಾಗಬೇಕೆಂದು, ಅವನಿಗಾಗಿ ಪಾಸು ತೆಗೆಸಿ ತಮ್ಮ ಕಾರಿನಲ್ಲೇ ಆತನನ್ನು ಕರೆದೊಯ್ದರು. ಇಲ್ಲದಿದ್ದರೆ ಪೋಲಿಸರ ಸರ್ಪ ಗಾವಲಿನಲ್ಲಿ ಪಾಪ, ಅವನೇನು ನೆಹರು ಅವರನ್ನು ಕಾಣುತ್ತಿದ್ದ.

ಶಂತನುರಾಯರು ಹಿಂದಕ್ಕೊಮ್ಮೆ ಭಾರತ ಸರಕಾರದ ಕೆಲಸಕ್ಕಾಗಿ ಜರ್ಮನಿಗೆ ಹೋಗಿದ್ದರು. ಆಗಲ್ಲಿ ಸ್ಟಾಕ್ ಎಂಬ ಇಂಜಿನಿಯರರ ಪರಿಚಯ ವಾಯಿತು. ಅವರು ಒಂದು ಹೆಸರುವಾಸಿಯಾದ ಕಾರಖಾನೆಯಲ್ಲಿ ತಜ್ಞರೆಂದು ಕೆಲಸ ಮಾಡುತ್ತಲಿದ್ದರು. ಬಾಂಬುದಾಳಿಯಲ್ಲಿ ಆ ಕಾರಖಾನೆಯು ಉಧ್ವಸ್ತ ವಾದುದಲ್ಲದೆ, ಸ್ಟಾಕರ ಏಕಮಾತ್ರ ಪುತ್ರನೂ ಯುದ್ಧದಲ್ಲಿ ತೀರಿಕೊಂಡನು. ಶಂತನುರಾಯರು ಅವರ ಯೋಗ್ಯತೆಯನ್ನೂ ಮನಃಸ್ಥಿತಿಯನ್ನೂ ಅರಿತು, ಅವರನ್ನು ಭಾರತಕ್ಕೆ ಕರೆತಂದು ತಮ್ಮ ಪುಣೆಯ ಕಾರಖಾನೆಯಲ್ಲಿ ಅವರಿಗೆ ಕೆಲಸ ಕೊಟ್ಟರು. ಅವರೂ ಸಂತೋಷದಿಂದ ಒಪ್ಪಿ ಭಾರತಕ್ಕೆ ಬಂದರು. ಅವರಿಂದ ಪುಣೆಯ ಕಾರಖಾನೆಗೆ ತುಂಬಾ ಉಪಯೋಗವಾಯಿತು.

ಸ್ಟಾಕರು ತಮ್ಮ ತಲೆಯಲ್ಲಿ ಮೂಡಿದ ಕಲ್ಪನೆಯನ್ನು ಮೊದಲು ಲಕ್ಷ್ಮಣರಾಯರಲ್ಲಿ ಹೇಳುತಿದ್ದರು. ಅವರಿಗೆ ಇಂಗ್ಲಿಷ ಜ್ಞಾನ ಅಷ್ಟಕ್ಕಷ್ಟೇ ಇತ್ತು. ಆದ್ದರಿಂದ ಹಾವಭಾವದಿಂದಲೂ ಕಾಗದದಮೇಲೆ ಡ್ರಾಯಿಂಗ್ ತೆಗೆದೂ ಲಕ್ಷ್ಮಣರಾಯರೊಡನೆ ಅವರು ಚರ್ಚಿಸಬೇಕಾಗುತ್ತಿತ್ತು. ಆದರೂ ಇಬ್ಬರೂ ಕಲ್ಪಕರು. ಆದುದರಿಂದ ಆ ಇಬ್ಬರ ಜೊತೆ ಚೆನ್ನಾಗಿ ಕೂಡಿತ್ತು.

ಹಾಗೆ ನೋಡಿದರೆ ಲಕ್ಷ್ಮಣರಾಯರಿಗೀಗ ಯಾವ ಪ್ರತ್ಯಕ್ಷ ಅಧಿಕಾರವೂ ಉಳಿದಿರಲಿಲ್ಲ. ೧೯೪೫ ರಿಂದ ಅವರು ತಮ್ಮ ಹೊಣೆಗಾರಿಕೆಯಿಂದ ಔಪಚಾರಿಕ ವಾಗಿ ಮುಕ್ತರಾಗಿದ್ದರು. ಆದರೂ, ನಾಲ್ಕಾಣೆಯ ಸದಸ್ಯರೂ ಅಲ್ಲದ ಮಹಾತ್ಮಾಜಿಯವರಿಗೆ ಇದ್ದ ಸ್ಥಾನ–ಮಾನಗಳು, ಅಖಿಲ ಕಿರ್ಲೋಸ್ಕರ ಸಂಸ್ಥೆ ಯಲ್ಲಿ ಲಕ್ಷ್ಮಣರಾಯರಿಗಿದ್ದವು.

ಶಂತನುರಾಯರ ಮಗ ಚಂದ್ರಕಾಂತರಾಯರು ಅಮೇರಿಕೆಯಲ್ಲಿ ಇಂಜ ನಿಯರಿಂಗ್ ಶಿಕ್ಷಣ ಪಡೆದು ಬಂದು, ಆಯಿಲ್ ಇಂಜಿನ್ ಕಾರಖಾನೆಯಲ್ಲಿ ಅವರ ಅಸಿಸ್ಟಂಟರಾದರು. ಒಂದೇ ಸಂಸ್ಥೆಯಲ್ಲಿ ಮೂರು ಪೀಳಿಗೆ ಕೆಲಸಮಾಡು ತ್ತಿರುವ ಈ ದೃಶ್ಯ ಒಳ್ಳೇ ಮನೋವೇಧಕವಾಗಿತ್ತು. ೧೯೫೬ರಲ್ಲಿ ಚಂದ್ರ ಕಾಂತರಿಗೆ ಗಂಡು ಹುಟ್ಟಿದಾಗಂತೂ ಅತ್ಯಂತ ಭಾಗ್ಯಶಾಲಿಯೋಗ. ಶಂತನು ರಾಯರೂ ಯಮೂತಾಯಿಯವರೂ ಲಕ್ಷ್ಮಣರಾಯರ ಮೇಲೆ ಚಿನ್ನದ ಹೂ ಸುರಿದು, ಈ ಸಮಾರಂಭವನ್ನು ಅತ್ಯುತ್ಸಾಹದಿಂದ ಜರುಗಿಸಿದರು.

ಲಕ್ಷ್ಮಣರಾಯರ ಎರಡನೆಯ ಮಗ ರಾಜಾರಾಮಪಂತರ ಮಗಳು ಪದ್ಮಾತಾಯಿಯ ವಿವಾಹವು ಆಗಿನ ಮುಂಬಯಿ ರಾಜ್ಯದ ಮುಖ್ಯಮಂತ್ರಿ ಶ್ರೀ ಮೋರಾರಜಿ ದೇಸಾಯಿಯವರ ಮಗ, ಕಾಂತಿಲಾಲರೊಡನೆ ಆದುದೂ ದೊಡ್ಡ ಅಭಿನಂದನೀಯಸುಯೋಗ !

ಇಷ್ಟೆಲ್ಲ ಆಯಿತು, ಇನ್ನು ಯಾತರ ಕೊರತೆಯೂ ಯಾವ ಚಿಂತೆಯೂ ಲಕ್ಷ್ಮಣರಾಯರಿಗೆ ಉಳಿದಿರಲಿಲ್ಲ. ಆದರೂ ಲಕ್ಷ್ಮಣರಾಯರ ದೈನಂದಿನ ಆಯುಷ್ಯಕ್ರಮವು ಮೊದಲಿನಂತೆಯೆ ಸಾಗಿತ್ತು. ತಮ್ಮ ಬೇಸಾಯದ ವ್ಯಾಸವನ್ನು ಅವರು ಇನ್ನೂ ಬೆಳೆಯಿಸಿದ್ದರು; ಅವರ ಹೊಸಹೊಸ ಪ್ರಯೋಗ ಗಳೂ ನಡೆದೇ ಇದ್ದವು. ಅವರ ಕೊಟ್ಟಿಗೆಯಲ್ಲೀಗ ೧೩–೧೪ ಎಮ್ಮೆ, ಆಕಳುಗಳಾಗಿದ್ದವು. ದನಗಳ ತಳಿಯನ್ನು ಉತ್ತಮಗೊಳಿಸುವುದಕ್ಕಾಗಿ ಪಾಶ್ಚಾತ್ಯದೇಶಗಳಲ್ಲಿ ಕೃತ್ರಿಮ ಗರ್ಭಧಾರಣೆಗೆ ಮಾಡಿಸಲಾಗುತ್ತದೆಂದು ಅವರು ಓದಿದ್ದರು. ಈ ಬಗ್ಗೆ ಶೋಧಿಸಲಾಗಿ ಇಂತಹದೊಂದು ಕೇಂದ್ರ ಪುಣೆಯಲ್ಲಿಯೇ ಮರಿಆಈ ಗೇಟಿನ ಬಳಿ ಇದೆ ಎಂದು ತಿಳಿಯಿತು. ಅಲ್ಲಿಯ ಪ್ರಮುಖರಾದ ಡಾ. ಸಾನೆಯವರನ್ನು ಕಂಡು ಅವರಿಂದ ಬೇಕಾದ ಮಾಹಿತಿ ಯನ್ನು ಪಡೆದುಕೊಂಡರು. ಮತ್ತು ತಮ್ಮ ಆಕಳು, ಎಮ್ಮೆಗಳನ್ನು ಅಲ್ಲಿಗೆ ಒಯ್ಯತೊಡಗಿದರು. ಆ ಆಕಳಿಗೆ ಅತ್ಯಂತ ಸುಂದರವೂ ಸದೃಢವೂ ಆದ

ಕರುಗಳು ಹುಟ್ಟಿದವು. ಮುಂದೆ ಆ ಕರುಗಳು ದೊಡ್ಡವಾದಮೇಲೆ ಅವುಗಳಿಗೂ ಅದೇ ಪ್ರಜೋತ್ಪಾದನ ಕ್ರಮವನ್ನು ಅನುಸರಿಸಲಾಯಿತು. ಲಕ್ಷ್ಮಣರಾಯರು ಅನುಸರಿಸಿದ ಈ ಆಧುನಿಕ ಪದ್ಧತಿಯು ಯಶಸ್ವಿಯಾದುದನ್ನು ಕಂಡು, ಇತರರೂ ಅವರನ್ನು ಅನುಕರಿಸತೊಡಗಿದರು.

ಇದರೊಂದಿಗೇ ಅವರು ಜೇನು ಸಾಕಿದರು. ಅದಕ್ಕಾಗಿ ಮಹಾಬಳೇಶ್ವರದಿಂದ ಪೆಟ್ಟಿಗೆಗಳನ್ನು ತರಿಸಿ, ತಮ್ಮ ಬಂಗಲೆಯ ಸುತ್ತಲೂ ಹೊಲದಲ್ಲಿಯೂ ಇಟ್ಟರು. ಮತ್ತು ವಿಧ್ಯುಕ್ತವಾಗಿ ಜೇನುತುಪ್ಪ ತೆಗೆಯತೊಡಗಿದರು. ಸ್ವಲ್ಪದರಲ್ಲಿ ಹೇಳುವುದೆಂದರೆ, ಭೂಮಿ, ಅದರಲ್ಲಿಯ ಕೆಲಸ ಇದರಲ್ಲಿಯೇ ಲಕ್ಷ್ಮಣರಾಯರ ಇಡೀ ಹಗಲು ಕಳೆಯುತ್ತಿತ್ತು.

ಅವರಿಗೀಗ ೮೫ ನೆಯ ವರುಷ. ಸಹಜವಾಗಿಯೇ ಅವರೀಗ ಅತ್ಯಂತ ನಿರಿಚ್ಛರಾಗತೊಡಗಿದರು. ಯಾರಾದರೂ ಅವರನ್ನು ಕಾಣಲು ಬಂದರೆ ಆ ಪ್ರಸಂಗ ಅವರಿಗೆ ಬೇಡವೆನಿಸುವುದು. "ಇತ್ತೀಚೆಗೆ ನನ್ನ ಮರೆವು ಹೆಚ್ಚಿದೆ, ಅಲ್ಲದೆ ಚೆನ್ನಾಗಿ ಕಿವಿ ಕೇಳಿಸುವುದೂ ಇಲ್ಲ. ಹೀಗಾಗಿ ನಾನು ಯಾರನ್ನಾದರೂ ಗುರುತಿಸದೆ ಹೋದರೆ ಅವರಿಗೆ ಸುಮ್ಮನೆ ಕೆಟ್ಟೆನಿಸಬಹುದು. ಆದ್ದರಿಂದ ನನ್ನ ಮೇಲೆ ಅಂತಹ ಪ್ರಸಂಗ ಯಾಕೆ ತರುತ್ತೀರಿ? ನನ್ನ ಹೊಲ, ನನ್ನ ಆಳು ನನ್ನ ಹೋರಿ— ಇವುಗಳ ಹೊರತು ಬೇರಾವ ಗೋಜೂ ನನಗೆ ಬೇಕಾಗಿಲ್ಲ" ಎನ್ನುತ್ತಾರೆ ಅವರು.

ಪುಣೆಯ ಮರಾಠಾ ಚೇಂಬರ್ ಆಫ್ ಕಾಮರ್ಸ ಆ್ಯಂಡ್ ಇಂಡಸ್ಟ್ರೀಜ ಸಂಸ್ಥೆಯು ಲಕ್ಷ್ಮಣರಾಯರಿಗೆ ತನ್ನ ಸನ್ಮಾನ್ಯಸದಸ್ಯತ್ವವನ್ನು ಕೊಡಬೇಕೆಂದು ನಿರ್ಣಯಿಸಿದಾಗ, ಅದು ಅವರಿಗೆ ಒಪ್ಪಿಗೆಯಾಗದಿದ್ದುದೂ ಇದಕ್ಕಾಗಿಯೆ. ಇಂತಹ ಮಾನ–ಸನ್ಮಾನ ಮಾಡಿಸಿಕೊಳ್ಳುವ ಇಚ್ಛೆ ತಮಗೆ ಎಷ್ಟು ಮಾತ್ರವೂ ಇಲ್ಲವೆಂದು ಅವರು ಆ ಸಂಸ್ಥೆಗೆ ಸ್ಪಷ್ಟವಾಗಿ ತಿಳಿಸಿದರು. ಆದರೆ ಸಂಸ್ಥೆಯವರು ಈ ಸಮಾರಂಭದ ಸಿದ್ಧತೆಯನ್ನು ಮಾಡಿಬಿಟ್ಟರು. ಸಮಾರಂಭದ ಅಧ್ಯಕ್ಷತೆಯನ್ನು ಭಾರತೀಯ ನಿಯೋಜನದ ದ್ರಷ್ಟಾರರಾದ ಅ. ಭಾ. ಕಾರಖಾನೆದಾರ ಸಂಘದ ಅಧ್ಯಕ್ಷರಾದ ೯೩ ವರ್ಷದ ಸರ್ ಮೋಕ್ಷ ಗುಂಡಂ ವಿಶ್ವೇಶ್ವರಯ್ಯನವರು ವಹಿಸಲಿದ್ದುದರಿಂದ ಅದಕ್ಕೆ ಹೆಚ್ಚಿನ ಮಹತ್ವ ಪ್ರಾಪ್ತವಾಗಿತ್ತು. ಆದರೆ, ಲಕ್ಷ್ಮಣರಾಯರೇ ಒಪ್ಪದಿದ್ದಾಗ ಮಾಡುವುದೇನು?

ಚೇಂಬರಿನ ಸಂಚಾಲಕರು ಬಹಳವಾಗಿ ಹೇಳಿಕೊಂಡು ಅಂತೂ ಲಕ್ಷ್ಮಣರಾಯರ ಮನವೊಲಿಸಿದರು. ೧೯೫೩ ನೆಯ ಆಗಸ್ಟ್ ೨ ರಂದು ಈ ಸಮಾರಂಭ ನೆರವೇರಿತು. ಮಹಾರಾಷ್ಟ್ರದ ಅನೇಕ ಕಾರಖಾನೆದಾರರೂ ಪ್ರಮುಖ ಸ್ತ್ರೀ–ಪುರುಷರೂ ಈ ಸಮಾರಂಭಕ್ಕೆ ಬಂದಿದ್ದರು; ಅಖಿಲ ಭಾರತದ ಅನೇಕ ಮಹಾ ವ್ಯಕ್ತಿಗಳಿಂದ ಸಂದೇಶಗಳು ಬಂದಿದ್ದವು— ವ್ಯಾಸಪೀಠದ ಮೇಲೆ ವಿರಾಜಮಾನರಾಗಿದ್ದ ಔದ್ಯೋಗಿಕ ಕ್ಷೇತ್ರದ ಈ ಭೀಷ್ಮ–ದ್ರೋಣರ ಜೋಡಿಯನ್ನು ನೋಡಿ ಪ್ರತಿಯೊಬ್ಬ ಪ್ರೇಕ್ಷಕರೂ ಹರ್ಷಭರಿತರಾದರು. ಏಕೆಂದರೆ ಈ ಸ್ಥಳವು ಅದರಂತೆಯೇ ಅಪೂರ್ವವೂ ಐತಿಹಾಸಿಕವೂ ಆಗಿತ್ತು.

ಅಧ್ಯಕ್ಷರು ಲಕ್ಷ್ಮಣರಾಯರನ್ನು ಗೌರವಿಸುತ್ತ ಅವರ ಕರ್ತೃತ್ವವನ್ನು ಸಾದ್ಯಂತವಾಗಿ ತಿಳಿಸಿದರು. ತಮ್ಮ ಭಾಷಣದ ಸಮಾರೋಪದಲ್ಲಿ ಅವರು "ಈ ಅಸಾಮಾನ್ಯ ಗೃಹಸ್ಥರ ಜೀವನ ವೃತ್ತಾಂತ ಸ್ವಲ್ಪದರಲ್ಲಿ ಹೀಗಿದೆ. ಇವರು ತೋರಿದ ವಿಧಾಯಕ ಕರ್ತೃತ್ವ ಇತರತ್ರ ದುರ್ಮಿಳ. ಇವರು ಒಂದರ ಹಿಂದೊಂದರಂತೆ ಕಾರಖಾನೆಗಳನ್ನು ತೆರೆದರು. ಅವುಗಳ ವಿಕಾಸವೂ ಚೆನ್ನಾಗಿ ಆಗಿದೆ. ಇದೆಲ್ಲವೂ ಇವರ ದೂರದರ್ಶಿತ್ವದ ಹಾಗೂ ಕುಶಲ ಮಾರ್ಗ ದರ್ಶನದ ಫಲವಾಗಿದೆ."

"ನಾನಾ ತೊಂದರೆಗಳಲ್ಲಿ ದಾರಿಯನ್ನು ತೆಗೆಯುವಲ್ಲಿ ಇವರು ತೋರಿದ ಕರ್ತೃತ್ವ–ಬುದ್ಧಿಮತ್ತೆಗಳು, ವ್ಯಾಪಾರಿಗಳಿಗೂ ಕಾರಖಾನೆದಾರರಿಗೂ ನಿಜ-ವಾಗಿಯೂ ಮಾರ್ಗದರ್ಶಕವಾಗಿವೆ. ನಮ್ಮ ದೇಶದಲ್ಲಿ ಯಂತ್ರನಿರ್ಮಿತಿಯೂ ಯಾಂತ್ರಿಕ ಉತ್ಪಾದನೆಯೂ ಇನ್ನೂ ಬಾಲ್ಯಾವಸ್ಥೆಯಲ್ಲಿವೆ. ಇಂತಹ ಪರಿಸ್ಥಿತಿಯಲ್ಲಿಯೂ ಇವರು ಈ ಕ್ಷೇತ್ರದಲ್ಲಿ ಯಶಸ್ವಿಯಾಗಿ ಕಾಲುದಾರಿ ಮಾಡಿಕೊಟ್ಟು ದೇಶಕ್ಕೆ ಮಹಾ ಸೇವೆ ಸಲ್ಲಿಸಿದ್ದಾರೆ. ಇದರೊಡನೆಯೇ ಕಾರಖಾನೆಗಳ ಮೂಲಕವಾಗಿ ಸಾವಿರಾರು ಜನರಿಗೆ ಉದ್ಯೋಗವನ್ನೊದಗಿಸಿ ಅವರ ಆರ್ಥಿಕ ಸ್ವಾಸ್ಥ್ಯಕ್ಕೆ ಸಹಾಯ ಮಾಡಿದ್ದು ಒಂದು ಮಹಾ ಕಾರ್ಯವೇ! ಇಂತಹ ಪುರುಷರ ಸ್ಫೂರ್ತಿದಾಯಕ ಚರಿತ್ರವು, ವಿದ್ಯಾರ್ಥಿಗಳ ಕ್ರಮಿಕ ಪುಸ್ತಕಗಳಲ್ಲಿ ಸಮಾವಿಷ್ಟಗೊಳಿಸಲು ತಕ್ಕುದಾಗಿದೆ. ಇವರಿಗೆ ದೀರ್ಘಾಯುರಾರೋಗ್ಯಗಳು ಲಭಿಸಲಿ ಎಂದು ನಾನು ಹಾರ್ದಿಕವಾಗಿ ಹಾರಯಿಸುತ್ತೇನೆ."

ಚೇಂಬರಿನ ಅಧ್ಯಕ್ಷ ಶ್ರೀ. ಗಂ. ಲ. ನಾತೂ ಕಾರ್ಯದರ್ಶಿ ಶ್ರೀ. ಆ. ರಾ. ಭಟ್ಟರೂ ಇದೇ ಆಶಯದ ಭಾಷಣ ಮಾಡಿದರು. ಲಕ್ಷ್ಮಣರಾಯರ ಮನಸ್ಸು



ಅಂತ್ಯಸಂಸ್ಕಾರದ ಮೊದಲು ಜನರ ಶ್ರದ್ಧಾಂಜಲಿ



ಸತ್ತರೂ ಕೀರ್ತಿರೂಪದಿಂದ ಜೀವಿಸಬೇಕು

ಈ ಎಲ್ಲ ಸಮಾರಂಭದಿಂದ ಅತಿಶಯ ಭಾವಪರವಾಗಿದ್ದಿತು; ಉತ್ತರ ರೂಪವಾಗಿ ಮಾತನಾಡಲು ಎದ್ದು ನಿಂತ ಅವರು, "ನಾನು ತಮಗೆ ಅತ್ಯಂತ ಆಭಾರಿಯಾಗಿದ್ದೇನೆ" ಎಂಬ ಒಂದೇ ವಾಕ್ಯವನ್ನು ನುಡಿದು, ತಮ್ಮ ಆಸನದ ಮೇಲೆ ಕುಳಿತುಬಿಟ್ಟರು.

ಲಕ್ಷ್ಮಣರಾಯರ ಆಯುಷ್ಯದಲ್ಲಿ ಇದಕ್ಕಿಂತ ಉತ್ಕಟ ಆನಂದದ ಒಂದು ಗಳಿಗೆ ಬರುವುದಿತ್ತು. ಆ ಪ್ರಸಂಗವೆಂದರೆ, ಪುಣೆಯ ಕಾರಖಾನೆಯಲ್ಲಿ ತಯಾರಾದ ಡೀಜಲ್ ಇಂಜನುಗಳನ್ನು ಪರದೇಶಕ್ಕೆ ಕಳಿಸುವ ಸುಯೋಗ. ಭಾರತದ ಔದ್ಯೋಗಿಕ ಕ್ಷೇತ್ರದಲ್ಲಿ ಇದೊಂದು ಅಪೂರ್ವ ವಿಕ್ರಮವೆಂದೇ ಹೇಳಬೇಕು. ಡೀಜಲ್ ಇಂಜಿನ್ನಿನ ಜನ್ಮಭೂಮಿ ಜರ್ಮನಿ. ಆ ಜರ್ಮನಿಗೇ ಭಾರತದಲ್ಲಿ ತಯಾರಾದ ಈ ೨೦ ಡೀಜಲ್ ಇಂಜಿನುಗಳನ್ನು ಕಳಿಸುವ ಶ್ರೇಯಸ್ಸು ಕಿರ್ಲೋಸ್ಕರ ಕಂಪನಿಗೆ ದೊರೆತದ್ದು ಎಂತಹ ಅಸಮಾನ್ಯಯಶ! ಈ ಪೆಟ್ಟಿಗೆಗಳನ್ನು ಟ್ರಕ್ಕಿನಲ್ಲಿ ಹೇರಿ ಸಾಗಿಸುವ ಸಮಾರಂಭವು ಶ್ರೀ ಮೋರಾರಜಿ ದೇಸಾಯಿಯವರ ಹಸ್ತದಿಂದ ತಾ|| ೨೭ ನೇ ಫೆಬ್ರುವರಿ ೧೯೫೫ ರಂದು ಜರುಗಿತು.

ಲಕ್ಷ್ಮಣರಾಯರ ಬಾಳು ಸಾರ್ಥಕವಾಯಿತು; ಅವರ ಎಲ್ಲ ಮನಃಕಾಮನೆಗಳು ಪೂರ್ತಿಯಾದವು. ಅವರ ಉದ್ದೇಶ ಸಫಲವಾಯಿತು. ಎಂತೆಯೋ ಏನೊ, ಮೆಲ್ಲಮೆಲ್ಲನೆ ಅವರು ಈ ಜಗತ್ತಿನಿಂದ ನಿರೋಪ ತೆಗೆದುಕೊಳ್ಳುವ ಸಿದ್ಧತೆಯಲ್ಲಿ ತೊಡಗಿದರು.

ತಾ. ೭ನೆ ಅಗಸ್ಟ ೧೯೫೬ರಂದು ನಿತ್ಯದಂತೆ ಸ್ನಾನತೀರಿಸಿಕೊಂಡು, ಕಾಫಿ ಕುಡಿದು ಅವರು ಕಾರಖಾನೆಯ ಕಡೆಗೆ ಹೋದರು. ಆದರೆ ಹೊಲಕ್ಕೆ ಹೋಗಿ ಅಲ್ಲಿಯ ಕೆಲಸವನ್ನು ನಿರೀಕ್ಷಿಸುತ್ತಿರುವಾಗಲೇ ಎದೆಯಲ್ಲಿ ಬೇನೆಯುಂಟಾಗಿ ಅವರು ಅತ್ಯಂತ ಅಸ್ವಸ್ಥರಾದರು. ಸುದೈವದಿಂದ ಡಾ. ಕಾನಿಟಕರರ ದವಾಖಾನೆಯು ಎದುರಿಗೇ ಇದ್ದುದರಿಂದ, ಅವರು ಬಂದು ತತ್ಕಾಲದಲ್ಲಿ ಚಿಕಿತ್ಸೆ ಮಾಡಿದರು. ಆದರೂ ಅವರನ್ನು ಮೂರ್ಛಿತ ಸ್ಥಿತಿಯಲ್ಲಿಯೇ ಮನೆಗೆ ತರಬೇಕಾಯಿತು. ಅವರ ಅಸ್ವಾಸ್ಥ್ಯದ ಸ್ವರೂಪದ ಅರಿವಾಗುತ್ತಲೇ ಎಲ್ಲರೂ ಚಿಂತಾಮಗ್ನರಾದರು. ಎಲ್ಲ ಕಡೆಗೂ ತಂತಿಕೊಟ್ಟು ಎಲ್ಲ ಮಕ್ಕಳನ್ನು ತ್ವರೆಯಿಂದ ಪುಣೆಗೆ ಕರೆಸಿಕೊಂಡರು.

ಡಾ. ಮೋದಿಯವರ ಉಪಚಾರ ನಡೆಯಿತು. ವಯಸ್ಸು ೮೭ ಆಗಿದೆ, ಜಡ್ಡು ಹೃದಯವಿಕಾರ. ಎಂದಮೇಲೆ ಅವರಾದರೂ ಏನೆಂದು ಭರವಸೆ ಕೊಡ ಬಲ್ಲರು ? ಆದರೂ ನಿದಾನವಾಗಿ ಪ್ರಕೃತಿ ಗುಣಮುಖವಾಗುತ್ತ ಬಂದಿತು.

ಇಷ್ಟರಲ್ಲಿ ಕಾರಖಾನೆಯ ಒಂದು ಮಹತ್ವದ ಕೆಲಸಕ್ಕಾಗಿ ಶಂತನು-ರಾಯರು ವಿಲಾಯತಿಗೆ ಹೋಗಬೇಕಾಗಿ ಬಂದಿತು. ತಂದೆಯನ್ನು ಈ ಸ್ಥಿತಿ ಯಲ್ಲಿ ಬಿಟ್ಟು ಹೇಗೆ ಹೋಗುವುದೆಂದು ಅವರು ವಿಚಾರದಲ್ಲಿ ಬಿದ್ದರು. ಮಗನ ಮನಸಿನ ಹೊಯ್ದಾಟವನ್ನು ಕಂಡು ಲಕ್ಷ್ಮಣರಾಯರು "ನೀನು ನಿರ್ಧರಿಸಿದಂತೆ ಅವಶ್ಯವಾಗಿ ಹೋಗು. ಕಾರಖಾನೆಯ ಕೆಲಸ ಹಿಂದೆ ಬೀಳ ಲಾಗದು. ನಮ್ಮ ದೇಶದಲ್ಲಿ ಇನ್ನೂ ಅನೇಕ ಕಾರಖಾನೆಗಳು ಹುಟ್ಟಿದುದನ್ನು ನಾನು ನೋಡಬೇಕಾಗಿದೆ. ಅದಕ್ಕಾಗಿ ನಾನು ಬದುಕುವವನಿದ್ದೇನೆ. ಇಲ್ಲಿ ಯಮೂತಾಯಿ ಚೆನ್ನಾಗಿ ನನ್ನ ಕಾಳಜಿ ತೆಗೆದುಕೊಳ್ಳುತ್ತಾಳೆ. ನೀನು ಮರಳುವಷ್ಟರಲ್ಲಿ ನಾನು ಪೂರ್ಣ ಗುಣ ಹೊಂದಿರುವುದನ್ನು ಕಾಣುವೆ." ಎಂದು ಹೇಳಿದರು.

ಶಂತನುರಾಯರು ಹೋದಾಗ ಅವರ ತಮ್ಮಂದಿರಲ್ಲಿ ಒಬ್ಬೊಬ್ಬರು ತಂದೆಯ ಹತ್ತರವಿದ್ದು, ಅವರ ಶುಶ್ರೂಷೆ ಮಾಡುವುದೆಂದು ಗೊತ್ತುಮಾಡಿ ಕೊಂಡು ವಿಲಾಯತಿಗೆ ತೆರಳಿದರು.

ಲಕ್ಷ್ಮಣರಾಯರ ಪತ್ನಿಯಾದ ರಾಧಾಬಾಯಿಯವರು ಸ್ವರ್ಗಸ್ಥರಾಗಿ ೨೩ ವರ್ಷಗಳು ಸಂದಿದ್ದವು. ಅವರು ಹೋದುದರಿಂದ ಲಕ್ಷ್ಮಣರಾಯರ ಒಂದು ಪಾರ್ಶ್ವವೇ ಊನವಾದಂತಾಗಿತ್ತು. ಆದರೂ ಅವರೆಂದೂ ತಮ್ಮ ದುಃಖವನ್ನು ತೋರ್ಪಡಿಸಲಿಲ್ಲ, ಅಥವಾ ಉದಾಸೀನರೂ ಆಗಲಿಲ್ಲ. ಆದರೆ ಈ ಕೊನೆಯ ಜಡ್ಡಿನಲ್ಲಿ ಮಾತ್ರ ಮೇಲಿಂದ ಮೇಲೆ "ಎಲ್ಲಿ ಹೋದೆಯೆ ನೀನು ?" ಎಂದು ಅವರನ್ನು ನೆನೆಸತೊಡಗಿದರು. ಅದನ್ನು ಕೇಳಿ ಜನಕ್ಕೆ ಬಹಳ ದುಃಖ ವಾಗುತ್ತಿತ್ತು.

ಲಕ್ಷ್ಮಣರಾಯರು ಹೀಗೆ ಶರಪಂಜರದ ಮೇಲೆ ಮಲಗಿದ್ದರೂ ನಿತ್ಯ ಕಾರ್ಯದ ಕಡೆಗೆ ಅವರ ಲಕ್ಷ್ಯ ಕಡಿಮೆಯಾಗಿರಲಿಲ್ಲವೆಂಬುದು ಆಶ್ಚರ್ಯ. ದಿನಾಲು ಸಂಜೆಗೆ ಕಾರಖಾನೆಯಿಂದ ಹುಡುಗರು ಬಂದಕೂಡಲೆ, ಇಂದು ಎಷ್ಟು ಇಂಜಿನುಗಳು ಸಿದ್ಧವಾದವು ? ಎಷ್ಟು ಟೆಸ್ಟಾದವು ? ಎಷ್ಟು ಬೇಡಿಕೆ

ಬಂದಿವೆ ? ಎಂಬುದನ್ನೆಲ್ಲ ಕೇಳುತ್ತಿದ್ದರು. ಹಾಗೆಯೇ ಹೊಲದ ವರದಿಯನ್ನೂ ವಿಚಾರಿಸಿ, ಮರುದಿನದ ಕೆಲಸದ ಬಗ್ಗೆ ಸಲಹೆ ಕೊಡುತ್ತಿದ್ದರು.

ಒಂದೊಂದೇ ದಿನ ಹೀಗೆಯೇ ಕಳೆಯುತ್ತಿತ್ತು. ಎಲ್ಲರ ಕಣ್ಣುಗಳೂ ಶಂತನುರಾಯರ ಹಾದಿ ನೋಡುತ್ತಿದ್ದವು. ಆದರೆ ಅಂತ್ಯಕಾಲಕ್ಕೆ ಲಕ್ಷ್ಮಣ ರಾಯರಿಗೆ ಅವರ ದರ್ಶನಯೋಗವಿರಲಿಲ್ಲ. ಸಪ್ಟಂಬರ್ ೨೬ನೆಯ ತಾರೀಖಿನ ರಾತ್ರಿ ಲಕ್ಷ್ಮಣರಾಯರನ್ನು ಬೇನೆಯು ಜೋರಾಗಿ ಆಕ್ರಮಿಸಿದ್ದರಿಂದ ಅದರಲ್ಲಿಯೇ ಅವರ ಅಂತ್ಯವಾಯಿತು.

ಟೆಲಿಫೋನಿನಿಂದ ಈ ದುಃಖದ ಸಮಾಚಾರವು ಕಿರ್ಲೋಸ್ಕರವಾಡಿಗೆ ತಿಳಿಯುತ್ತಲೇ ಎಲ್ಲರೂ ದುಃಖಸಾಗರದಲ್ಲಿ ಮುಳುಗಿದರು. ಕೂಡಲೆ ಕಾರಖಾನೆಯನ್ನು ಬಂದು ಮಾಡಲಾಯಿತು. ಹಾಗೆಯೆ ಪುಣೆ, ಹರಿಹರ, ಬೆಂಗಳೂರುಗಳಲ್ಲಿಯ ಕಾರಖಾನೆಗಳನ್ನೂ ಬಂದಿಡಲಾಯಿತು.

ಲಕ್ಷ್ಮಣರಾಯರ ಮರಣವಾರ್ತೆಯು ವಿದ್ಯುದ್ವೇಗದಿಂದ ಪುಣೆಪಟ್ಟಣದಲ್ಲಿ ಹಬ್ಬಿತು. ಅವರ ಸನ್ಮಾನಸೂಚಕವಾಗಿ ನಗರದ ಬಹುಶಃ ಎಲ್ಲ ಕಾರಖಾನೆಗಳೂ ಮುಚ್ಚಿದವು. ಪುಣೆಯ ಕಿರ್ಲೋಸ್ಕರ ಆಯಿಲ್ ಇಂಜಿನ್ಸ್ ಕಾರಖಾನೆಯ ಕೆಲಸಗಾರರ ಸಮೂಹವಂತೂ ಸರಿ, ಊರ ಅನೇಕ ಪ್ರತಿಷ್ಠಿತರೂ ಪ್ರಮುಖರೂ ಲಕ್ಷ್ಮಣರಾಯರ ನಿವಾಸಸ್ಥಾನಕ್ಕೆ ಬಂದು, ಅವರಿಗೆ ಶ್ರದ್ಧಾಂಜಲಿಯನ್ನರ್ಪಿಸಿದರು.

ಕೈ. ಲಕ್ಷ್ಮಣರಾಯರ ಪಾರ್ಥಿವಶರೀರವನ್ನು ತೆಗೆದುಕೊಂಡು ಹೊರಟ ಮೋಟಾರು, ರಾತ್ರಿ ೧೧ ಗಂಟೆಗೆ ಕಿರ್ಲೋಸ್ಕರವಾಡಿಯನ್ನು ತಲುಪಿತು. ಮರುದಿನ ಪ್ರಚಂಡ ಪ್ರೇತಯಾತ್ರೆ ಹೊರಟು, ವಾಡಿಯ ಅಗಸೆಯ ಹತ್ತಿರ, ಕೈ. ಸೌ. ರಾಧಾಬಾಯಿಯವರ ಪುತ್ಥಳಿಯಿಂದ ಕಿರಿದಂತರದಲ್ಲಿ ವಿಧ್ಯುಕ್ತವಾಗಿ ಅಗ್ನಿ-ಸಂಸ್ಕಾರ ಕೊಡಲಾಯಿತು.

ಅದಕ್ಕೆ ಮುಂಚೆ, ಉಪಸ್ಥಿತರಿದ್ದವರಲ್ಲಿ ಶಂಕರರಾವ ಕಿರ್ಲೋಸ್ಕರ, ಡಾ. ಭಾವುಸಾಹೇಬ ಸರದೇಸಾಯಿ, ಶ್ರೀ ಸಿ. ಬಿ. ಜೋಗ, ಪಂಡಿತರಾವ ದಾಂಡೇಕರ, ಭಾವೂಸಾಹೇಬ ವೈದ್ಯ, ಶ್ರೀ.ಕುಲಕರ್ಣಿ, ಶ್ರೀ. ಗಾವಡೆ, ಕೆ. ಜಿ. ಮರಾಠೆ, ವಿಷ್ಣುಪಂತ ವೇಳಣಕರ, ಶಂಕರರಾವ ಓಗಲೆ, ಕಾಮಗಾರ ಸಂಘದ ಅಧ್ಯಕ್ಷ ಶ್ರೀ. ಆನಂದರಾವ ಕುಂಬಾರ, ಕುಂಡಲದ ಮುಂದಾಳು ಜಿ.ಡಿ. ಲಾಡ, ರಾಮಭಾವು ಪವಾರ, ಕೃಷ್ಣರಾವ, ಕುರ್ಪಾಡೆ, ಹರಿಜನ ಕಾಮಗಾರ

ಶ್ರೀ. ಕಾಂಬಳೆ– ಇವರೆಲ್ಲ ಲಕ್ಷ್ಮಣರಾಯರ ವಿವಿಧ ಗುಣವರ್ಣನೆಮಾಡಿ ಅವರಿಗೆ ತಮ್ಮ ಶ್ರದ್ಧಾಂಜಲಿಯನ್ನರ್ಪಿಸಿದರು.

ಲಕ್ಷ್ಮಣರಾಯರ ಮೂವರು ಮಕ್ಕಳಾದ ರಾಜಾರಾಮಪಂತ, ಪ್ರಭಾಕರಪಂತ ಮತ್ತು ರವೀಂದ್ರರು ಚಿತೆಗೆ ಅಗ್ನಿಕೊಟ್ಟರು.

ಹೀಗೆ ಲೋಕೋತ್ತರರೀತಿಯಲ್ಲಿ ಲಕ್ಷ್ಮಣರಾಯರು ತಮ್ಮ ಇಹಲೋಕ ಯಾತ್ರೆಯನ್ನು ಪೂರೈಸಿದರು !

ಲಕ್ಷ್ಮಣರಾಯರ ನಶ್ವರಶರೀರವನ್ನು ಕಣ್ಣೆದುರಿನಲ್ಲಿ ಅಗ್ನಿಯು ಆಹುತಿಗೊಳ್ಳುತ್ತಿತ್ತು. ಆದರೆ, ಆ ಹೊಗೆಯೊಳಗಿಂದ, ಆ ಜ್ವಾಲೆಗಳೊಳಗಿಂದ, ಲಕ್ಷ್ಮಣರಾಯರ ನವ್ಯ ಭವ್ಯಮೂರ್ತಿಯೊಂದು ಹೊರಗೆಬಂದು ಎಲ್ಲರಿಗೂ ದಿವ್ಯಸಂದೇಶವನ್ನು ಕೊಡುತ್ತಿದ್ದಿತೋ ಏನೋ. ನಿಸರ್ಗ ಕ್ರಮವನ್ನನುಸರಿಸಿ ಲಕ್ಷ್ಮಣರಾಯರ ದೇಹವೂ 'ಮಣ್ಣು ಮಣ್ಣಲ್ಲಿ ಕೂಡಿತು' ಎಂಬಂತೆ ಅಂತರ್ಧಾನವಾಗುತ್ತಿತ್ತು. ಆದರೆ, ಮಣ್ಣಲ್ಲಿ ಹೊನ್ನು ತೆಗೆದು ತೋರಿದವರ ಜೀವನಮಂತ್ರವು ಮಾತ್ರ ಆ ಮಣ್ಣಲ್ಲಿ ಸೇರದೆ, ಪ್ರತಿಯೊಬ್ಬರ ಅಂತಃಕರಣದಲ್ಲಿ ಪ್ರತಿಧ್ವನಿಗೊಡುತ್ತಲಿತ್ತು.

"ಕೆಲಸ ಮಾಡುತ್ತ ಹೋಗಿರಿ. ಸತತವಾಗಿ ಮುಂಪಡಿಯಿಡುವುದಕ್ಕೆ ಹೆಣಗಿರಿ; ಎಂದರೆ ಗೆಲವಿನ ಹಣ್ಣು, ನಿಮ್ಮ ಉಡಿಯಲ್ಲಿ ಬೀಳದಿರುವುದಿಲ್ಲ."

ಇದೇ ಆ ಯಂತ್ರಯೋಗಿಯ ಜೀವನಮಂತ್ರ !

ारतीय तरुणानां श्री लक्ष्मणराव किर्लोस्कर यांचा हस्ताक्षरांतील संदेश

कोणत्याही तरुणानें मला विचारल्यास मी त्यास हें एकच उत्तर देईन कीं बाबारे न बोलतां मनापासून काम कर. बोलण्याची शक्ती करण्यांत खर्ची घाल. उगीच थैमान घालून कडकडणारी वीज धड प्रकाशही देत नाहीं. यंत्रांत दाबून ठेविलेली वीज पहा कशी मुकाट्यानें काम करते. तुम्ही हेंच शिकलें पाहिजे. मुकाट्यानें काम केल्यावर तें जगाला समजेल कसें याची काळजी करण्याचें कारण नाहीं. आपलें काम नेटानें व आनंदानें करीत असतांनासुद्धां इतक्या अडचणी येतात कीं जणूं काय या तुमच्या धैर्याची व चिकाटीची परिक्षाच घेत असतात. ह्या परिक्षेंत जरा जरी नापास झाल्यास तरी तुमच्या महत्वाकांक्षेचें ध्येय तुमच्यापासून दूर दूर जाऊं लागतें. म्हणून काम हें कर्तव्य म्हणून करीत जा. काम करण्यानें जगामध्यें आपली किंमत वाढते. जर तुम्हाला जगामध्यें यशस्वी व्हायचें असेल तर स्वतःला विसर आणि काम कर.

लक्ष्मण काशीनाथ किर्लोस्कर

ಹಿಂಬದಿಯ ಪುಟದಲ್ಲಿಯ ಮರಾಠಿ ಸಂದೇಶದ ಕನ್ನಡ ಅನುವಾದ

# ಭಾರತೀಯ ತರುಣರಿಗೆ ಲಕ್ಷ್ಮಣರಾಯರ ಹಸ್ತಾಕ್ಷರ ಸಂದೇಶ

ತರುಣರು ಯಾರಾದರೂ ಬಂದು ನನ್ನನ್ನು ಕೇಳಿದರೆ, 'ತಮ್ಮಾಗೀರಾ! ಮಾತನಾಡದೆ ಮನಃಪೂರ್ವಕ ಕೆಲಸಮಾಡಿರಿ. ಮಾತನಾಡುವಶಕ್ತಿಯನ್ನು ಮಾಡುವದರಲ್ಲಿ ಬಳಸಿರಿ.

ಗುಡುಗಿನ ಧ್ವನಿಯಲ್ಲಿ ಮಿಂಚಿಹೋಗುವ ವಿದ್ಯುತ್ತು ಪ್ರಕಾಶವನ್ನು ಕೊಡಬಲ್ಲದೆ? ಅದನ್ನೇ ಯಂತ್ರದಲ್ಲಿ ಹಿಡಿದಿಟ್ಟ ವಿದ್ಯುತ್ತು ಗದ್ದಲವಿಲ್ಲದೆ ಪ್ರಕಾಶವನ್ನು ಕೊಡುವದಿಲ್ಲವೇ? ಅದರಂತೆ, ನೀವೂ ಕಲಿಯಬೇಕು. ಮಾತಿಲ್ಲದೆ ಕಾರ್ಯಮಾಡಿದ ಮೇಲೆ, ಅದು ಜಗತ್ತಿಗೆ ತಿಳಿಯಬೇಕು. ಹೇಗೆ ಎಂಬ ವಿಚಾರಮಾಡುವ ಕಾರಣವಿಲ್ಲ.

ನಾವು ನಮ್ಮ ಕೆಲಸವನ್ನು ಆನಂದದಿಂದ ಕುಶಲತೆಯಿಂದ ಮಾಡುತ್ತಿದ್ದರೂ ಕೂಡ ಅನೇಕ ವಿಘ್ನಪರಂಪರೆಗಳು ಬಂದು ನಮ್ಮ ಧೈರ್ಯದ ಸ್ಥೈರ್ಯದ ಪರೀಕ್ಷೆಯನ್ನೆ ಮಾಡುತ್ತವೆ. ಒಂದು ವೇಳೆ ಈ ಪರೀಕ್ಷೆಯಲ್ಲಿ ನಾವು ಉತ್ತೀರ್ಣರಾಗದಿದ್ದರೆ, ನಾವು ನಮ್ಮ ಧ್ಯೇಯದಿಂದ ದೂರವಾದವೆಂದೇ ತಿಳಿಯಬೇಕು. ಆದ್ದರಿಂದ ಕೆಲಸವೇ ಕರ್ತವ್ಯವೆಂದು ತಿಳಿದು ಕಾರ್ಯಮಾಡುತ್ತ ಹೋಗಿರಿ. ಕಾರ್ಯಮಾಡುವದರಿಂದ ಜಗತ್ತಿನಲ್ಲಿ ನಮ್ಮ ಬೆಲೆ ಹೆಚ್ಚುತ್ತದೆ. ಈ ಜಗತ್ತಿನಲ್ಲಿ ನೀವು ಯಶಸ್ವಿಯಾಗಬೇಕೆಂದು ಬಯಸುತ್ತಿದ್ದರೆ ನಿನ್ನನ್ನು ಮರೆ. ಕಾರ್ಯಮಾಡು, ಎಂದೇ ನನ್ನ ಉತ್ತರ.

**ಲಕ್ಷ್ಮಣ ಕಾಶೀನಾಥ ಕಿರ್ಲೋಸ್ಕರ**

# ಪರಿಶಿಷ್ಟ

## ಕಿರ್ಲೋಸ್ಕರ ಉಪಶಾಖೆಗಳ ಅಲ್ಪ ಪರಿಚಯು

೧. ಮೈಸೂರ ಕಿರ್ಲೋಸ್ಕರ ಲಿಮಿ-
ಟೆಡ್, ಹರಿಹರ.

೨. ಕಿರ್ಲೋಸ್ಕರ ಇಲೆಕ್ಟ್ರಿಕ್ ಕಂಪನಿ
ಲಿಮಿಟೆಡ್, ಬೆಂಗಳೂರ.

೩. ಕಿರ್ಲೋಸ್ಕರ ಆಯಿಲ್ ಇಂಜಿನ್
ಲಿಮಿಟೆಡ್ ಕರ್ಕಿ, ಪುಣೆ-೩

೪. ಕಿರ್ಲೋಸ್ಕರ ವಾಯುವಿಜ್ಞಾನ
(ನ್ಯೂಮ್ಯಾಟಿಕ್) ಕಂಪನಿ ಲಿ.,
ಹಡಪಸರ, ಪುಣೆ-೧.

# ಮೈಸೂರ ಕಿರ್ಲೊಸ್ಕರ ಲಿಮಿಟೆಡ್, ಹರಿಹರ

ಶ್ರೀ. ಲಕ್ಷ್ಮಣರಾವ ಕಿರ್ಲೊಸ್ಕರ ಅವರು "**ಮೈಸೂರ ಕಿರ್ಲೊಸ್ಕರ ಲಿಮಿಟೆಡ್ ಹರಿಹರ**" ಇದರ ೧೦ನೇ ವಾರ್ಷಿಕೋತ್ಸವದಲ್ಲಿ ಮಾಡಿದ ಭಾಷಣ* (೮–೧೨–೧೯೭೧)

ಸನ್ಮಾನ್ಯ ಅತಿಥಿಗಳೇ, ಅಧಿಕಾರಿಗಳೇ ಹಾಗೂ ಕಾರ್ಯಕರ್ತರೇ !

ಈ ಸಮಾರಂಭವನ್ನು ಕಂಡು ಆನಂದದಿಂದ ನನ್ನ ಹೃದಯವು ತುಂಬಿ ಬಂದು ಮಾತನಾಡಲಾರದವನಾಗಿದ್ದೇನೆ. ನನ್ನ ಹೃದಯವು ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಲಿದೆ. ನಾವೆಲ್ಲರೂ ಇಂದು ಹರಿಹರದಲ್ಲಿರುವ ಕಿರ್ಲೊಸ್ಕರ ಕಾರಖಾನೆಯ ೧೦ನೆಯ ವಾರ್ಷಿಕೋತ್ಸವಕ್ಕಾಗಿ ನೆರೆದಿದ್ದೇವೆ. ಈ ಸಮಾರಂಭವು ಕಾರಖಾನೆಯ ಇತಿಹಾಸದಲ್ಲಿ ಮೈಲುಗಲ್ಲಿಸಂತಿದ್ದರೂ ದೇಶದ ಔದ್ಯಮಿಕ ಇತಿಹಾಸದಲ್ಲಿಯೂ ಒಂದು ಮಹತ್ವದ ಹೆಜ್ಜೆಯಾಗಿದೆ.

ಹತ್ತು ವರ್ಷಗಳೆಂದರೆ ಅತ್ಯಲ್ಪ ಅವಧಿಯು. ಆದರೂ ಇಷ್ಟೇ ಸಮಯದಲ್ಲಿ ಇಲ್ಲಿ ಅದ್ಭುತ ಬದಲಾವಣೆಗಳನ್ನು ನೋಡುತ್ತಿದ್ದೇವೆ. ಹತ್ತು ವರ್ಷಗಳ ಕೆಳಗೆ ಇದು ಶಾಂತಮಯವಾದ ತುಂಗಭದ್ರೆಯ ತಟಾಕವಾಗಿದ್ದು, ಇಂದು ದೇಶದ ಔದ್ಯಮಿಕ ನಕಾಶದಲ್ಲಿ ಮಹತ್ವದ ಸ್ಥಾನವನ್ನು ಅಲಂಕರಿಸಿದೆ. ನಾವು ಇಲ್ಲಿ ದೇಶದ ಅತಿ ಮಹತ್ವದ ಯಂತ್ರಗಳ ಬಿಡಿ ಭಾಗಗಳನ್ನು ಉತ್ಪಾದಿಸುವ ಕಾರಖಾನೆಯನ್ನು ಕಟ್ಟಿದ್ದೇವೆ.

ಯಾಂತ್ರಿಕ ಕ್ಷೇತ್ರದಲ್ಲಿ ನೀವು ತೋರಿದ ಅದ್ವಿತೀಯ ಕಾರ್ಯಕೌಶಲ್ಯವು ಅಭಿನಂದನಾರ್ಹವೂ ಹೆಮ್ಮೆಪಡುವಂತಹದೂ ಆಗಿದೆ. ಈ ಕಾರ್ಯದಲ್ಲಿ ದುಡಿದ ಎಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ನಿಮ್ಮ ಹುಮ್ಮಸವು ನನ್ನಂತಹ ಮುದುಕನನ್ನು ತರುಣನಂತೆ ,ನಿಮ್ಮೊಡನೆ ಈ ಸಮಾರಂಭದಲ್ಲಿ ಭಾಗವಹಿಸಲು ಹಚ್ಚಿದೆ.

ನೀವು ಆಟಗಳಲ್ಲಿ ತೋರುತ್ತಿರುವ ಗುಂಪಿನ ಅಭಿಮಾನ ಹಾಗು ಉತ್ಸಾಹಗಳು ಯಾವುದೇ ಆಟವಿರಲಿ, ಅವು ಜೀವನವನ್ನು ರೂಪಿಸುವಲ್ಲಿ

---

* **ಈ ಭಾಷಣವು ರಾಯರ ಧ್ಯೇಯ ಧೊರಣಗಳನ್ನು ಸ್ಪಷ್ಟೀಕರಿಸುತ್ತದೆ.**

ಮಹತ್ವದಪಾತ್ರವನ್ನು ವಹಿಸುತ್ತವೆಂದು ನಾನು ಯಾವಾಗಲೂ ಭಾವಿಸುತ್ತೇನೆ. ಆಟಗಾರಿಕೆಯಲ್ಲಿಯ ಅದೇ ಉತ್ಸಾಹ, ಅದೇ ಸಾಂಘಿಕ ಪ್ರಯತ್ನಗಳನ್ನು, ಕಾರಖಾನೆಯ ಕಾರ್ಯದಲ್ಲಿಯೂ ನೀವು ತೋರುತ್ತಿರುವ ದೃಶ್ಯವನ್ನು ಈ ಹರಿಹರದಲ್ಲಿ ಕಂಡು ನಾನು ಉತ್ತೇಜಿತನಾಗಿದ್ದೇನೆ ಇಲ್ಲಿ ನಮ್ಮ ಕನಸು ನನಸಾಗಿದೆ.

ನಾನು ೫೦ ವರ್ಷಗಳ ಹಿಂದೆ, ಬೆಳಗಾವಿಯಲ್ಲಿ ಅಲ್ಪ ಸಾಧನಗಳಿಂದ ಪ್ರಾರಂಭಿಸಿದ ಕಾರಖಾನೆಯ ನೆನಪು ಈ ಸಂದರ್ಭದಲ್ಲಿ ನೆನಪಾಗುತ್ತದೆ. ಆಗ ನನ್ನ ಹತ್ತಿರ ಬಂಡವಲು ಇರದಿದ್ದರೂ ಉದಾತ್ತವಾದ ಧ್ಯೇಯ ಹಾಗೂ ಅದರ ಬಗ್ಗೆ ದುಡಿಯಬೇಕೆಂಬ ಮಹತ್ವಾಕಾಂಕ್ಷೆ ಮಾತ್ರ ಇತ್ತು. ದೇವರು ಸ್ವಾವಲಂಬಿಗಳಿಗೆ ಸಹಾಯ ನೀಡಬಲ್ಲನೆಂಬ ವಿಶ್ವಾಸವಿತ್ತು. ಆ ವಿಶ್ವಾಸವೇ ಇಂದು ಈ ರೂಪಗೊಂಡಿದೆ. ಬೆಳಗಾವಿಯಲ್ಲಿಯ ಚಿಕ್ಕ ಕಾರಖಾನೆಯು ಇಂದು ಭವ್ಯ ಸ್ವರೂಪವನ್ನು ತಾಳಿ, ಕಿರ್ಲೋಸ್ಕರವಾಡಿ, ಹರಿಹರ, ಪುಣೆ, ಬೆಂಗಳೂರ ಮತ್ತು ಲೋಣಾವಳಗಳಲ್ಲಿಯೂ ತನ್ನದೇ ಆದ ವಿವಿಧ ವಸ್ತುಗಳ ಉತ್ಪಾದನೆಯ ಕಾರ್ಯವನ್ನು ಮಾಡುತ್ತ ದೇಶದ ಅಭಿವೃದ್ಧಿಗೆ ಕಾರಣವಾಗಿದೆ.

ಈ ಹರಿಹರ ಕಾರಖಾನೆಯ ಹುಟ್ಟು ಹೇಗಾಯಿತೆಂಬುದನ್ನು ನಿಮ್ಮಲ್ಲಿ ಅನೇಕರು ಬಲ್ಲಿರಿ. ಇದರ ಹುಟ್ಟು ಕಿರ್ಲೋಸ್ಕರವಾಡಿಯಲ್ಲಿಯೇ ಆಗಿದೆ. ಒಕ್ಕಲುತನದ ನೂತನ ಉಪಕರಣಗಳ ಮೂಲಕ ಕಿರ್ಲೋಸ್ಕರವಾಡಿಯು ದೇಶದಲ್ಲೆಲ್ಲ ಚಿರಪರಿಚಿತವಾಗಿದೆ. ಒಕ್ಕಲಿಗರಿಗೆ ಸೇವೆಯನ್ನು ಸಲ್ಲಿಸುವಾಗ ಜನಾಂಗದ ಜೀವನದಲ್ಲಿ ಆಗುವ ಮಹತ್ವದ ಬದಲಾವಣೆಗಳನ್ನು ನಾವು ಎಚ್ಚರಿಕೆಯಿಂದ ನಿರೀಕ್ಷಿಸಿದ್ದೇವೆ. ನೂತನ ಔದ್ಯೋಗಿಕ ಬೆಳವಣಿಗೆಯ ಕಾಲದಲ್ಲಿ ಎಲ್ಲಿ ನೋಡಿದಲ್ಲಿ ನಮ್ಮ ಜನಾಂಗವು ತೋರುತ್ತಿರುವ ಯಂತ್ರತತ್ಪರತೆಯನ್ನು ನಾವು ಕಂಡುಕೊಂಡಿದ್ದೇವೆ. ಈ ವಿಚಾರವೇ ನಮ್ಮನ್ನು ಈ ಕಾರ್ಯಕ್ಕೆ ಪ್ರೇರಿಸಿದೆ. ಶೀಘ್ರದಲ್ಲಿಯೇ ದೇಶಕ್ಕೆ ಲೇಥ, ಡ್ರಿಲಿಂಗ ಮಶಿನ್, ಚಿಕ್ಕ ಇಂಜನಗಳು ಬೇಕಾಗುವವೆಂದೆನಿಸಿ ಆ ಸಂಶೋಧನೆಯಲ್ಲಿ ನಾವು ಮಗ್ನರಾದೆವು.

ಯುರೋಪದಲ್ಲಿ ೨ನೇ ಮಹಾಯುದ್ಧವು ಪ್ರಾರಂಭವಾಯಿತಷ್ಟೆ! ಆ ನಂತರ ಜಪಾನ, ಅಮೇರಿಕೆಗಳೂ ಅದರಲ್ಲಿ ಧುಮುಕಿದವು. ಈ ಪಾಶ್ಚಾತ್ಯ ರಾಷ್ಟ್ರಗಳಿಂದ ಬರುತ್ತಿದ್ದ ಯಂತ್ರ ಸಾಮಗ್ರಿಗಳ ಆಯಾತವು, ಯುದ್ಧದ

ಮೂಲಕ ಕಡಿಮೆಯಾಗುತ್ತ ಹೋಗಿ ಕೊನೆಗೆ ನಿಂತು ಹೋಯಿತು ಇದರ ಪರಿಣಾಮವು ಭಾರತೀಯ ಯಾಂತ್ರಿಕ ಉದ್ಯೋಗಗಳ ಮೇಲೆಯೂ ಸರಕಾರದ ಯುದ್ಧಸಾಮುಗ್ರಿಗಳನ್ನು ನಿರ್ಮಿಸುವ ಕಾರಖಾನೆಗಳ ಮೇಲೆಯೂ ಆಗುವದು ಸ್ವಾಭಾವಿಕವಿದ್ದಿತು. ಇದರಿಂದ ಸೈನ್ಯ ವಿಭಾಗಕ್ಕೆ ಬಲವಾದ ಪೆಟ್ಟು ಬಿದ್ದಿತು. ಸೂಕ್ಷ್ಮ ಲೇಥಗಳ, ಸೆಲ್ಸಗಳ ಅಭಾವದಿಂದ ರಾಷ್ಟ್ರದ ಭದ್ರತೆಯು ಆಗಲಾರದೆಂದು ಸೈನ್ಯಕ್ಕೆ ಭೀತಿಯುಂಟಾಯಿತು. ಭವಿತವ್ಯವೂ ಭಯಾನಕ ವೆನಿಸಹತ್ತಿತು.

ಇಂತಹ ರಾಷ್ಟ್ರದ ಸಂಕಟಕಾಲದಲ್ಲಿ ಕಿರ್ಲೋಸ್ಕರವಾಡಿಯು ತನ್ನ ಹೆಜ್ಜೆಯನ್ನು ಮುಂದೆ ಹಾಕಿ, ರಾಷ್ಟ್ರದ ಅಗತ್ಯದ ಬೇಡಿಕೆಗಳನ್ನು ಪೂರೈಸಲು ಸಂಕಲ್ಪಿಸಿತು. ಕಾರಖಾನೆಯ ಇಂಜಿನಿಯರರು ಅತ್ಯಂತ ಶ್ರಮವಹಿಸಿ, ತಮ್ಮ ಕುಶಲತೆಯಿಂದ ಸೂಕ್ಷ್ಮ ಹಾಗೂ ಯೋಗ್ಯ ಮಟ್ಟದ ಮಶಿನ್ ಟೂಲ್ಸ ಗಳನ್ನು ಸಿದ್ಧಪಡಿಸಿ, ನಮ್ಮ ವಿಶ್ವಾಸಕ್ಕೂ ಜನತೆಯ ಕೃತಜ್ಞತೆಗೂ ಪಾತ್ರ ರಾದರು. ಅದರ ಪರಿಣಾಮವಾಗಿ ಸರಕಾರದಿಂದ ಮಶಿನ ಟೂಲ್ಸಗಳ ದೊಡ್ಡ ದೊಡ್ಡ ಬೇಡಿಕೆಗಳು ಬಂದವಲ್ಲದೆ, ಅವು ದಿನದಿನಕ್ಕೆ ಬೆಳೆಯಹತ್ತಲು, ದೊಡ್ಡ ಪ್ರಮಾಣದಿಂದ ಮಶಿನ್ ಟೂಲ್ಸಗಳನ್ನು ಉತ್ಪಾದಿಸುವದು ಶಕ್ಯವೆಂದು ನಾವು ವಿಚಾರಮಾಡಿ, ಹೊಸ ಮಾದರಿಯ ಯಂತ್ರಗಳನ್ನು ನಿರ್ಮಿಸಲು ಮಾಡಿದ ಹತ್ತು ವರ್ಷದ ಪ್ರಯತ್ನದ ಫಲವೇ ಇದು.

ಈ ಕಾರಖಾನೆಯ ಯಶಸ್ಸಿನ ಬಹುಭಾಗಕ್ಕೆ ಕಾರಖಾನೆಯ ಕಾರ್ಯ ಕರ್ತರೇ ಕಾರಣರು. ಅದರಲ್ಲಿಯೂ ಹೆಚ್ಚಾಗಿ ಯಾಂತ್ರಿಕ ತಜ್ಞರೂ ಮಾರ್ಗ ದರ್ಶಕರೂ ಆದ ಶ್ರೀ. ಎಂ. ಬಿ. ಜಾಂಭೇಕರ ಹಾಗೂ ಶ್ರೀ. ರಾಜಾರಾಮ ಪಂತ ಕಿರ್ಲೋಸ್ಕರ ಇವರಿಗೇ ಇದು ಹೆಚ್ಚಾಗಿ ಸಲ್ಲುವದು ಪ್ರಗತಿಪರರಾದ ಮೈಸೂರ ಮಹಾರಾಜರು ಹರಿಹರದಲ್ಲಿ ಕಾರಖಾನೆಯನ್ನು ಸ್ಥಾಪಿಸಲು ಉತ್ತೇಜನವಿತ್ತುದಕ್ಕೆ ನಾನು ಅವರಿಗೆ ನನ್ನ ಕೃತಜ್ಞಗಳನ್ನು ಸಲ್ಲಿಸುವೆ. ಅದರಂತೆಯೇ ಎಲ್ಲಬಗೆಯಿಂದ ಸಹಾಯಮಾಡಿದ ಶ್ರೀ ಮಿರ್ಝಾ ಇಸ್ಮಾಯಿಲ್ ರನ್ನೂ ಶ್ರೀ ವೆಂಕಟನಾರಾಯಣಪ್ಪರವರನ್ನೂ ನಾನು ಮರೆಯಲಾರೆ. ಈ ಸಂಸ್ಥೆಯ ನಿರ್ಮಾಣಕ್ಕೂ ಬೆಳವಣಿಗೆಗೂ ಆಸ್ಥೆಯಿಂದ ನೆರವನ್ನಿತ್ತ, ಶ್ರೀ ವೆಂಕಟನಾರಾಯಣಪ್ಪನವರ ಅಗಲುವಿಕೆಯು ಈ ಪ್ರಸಂಗದಲ್ಲಿ ನಮಗೆ ವಿಷಾದವನ್ನುಂಟುಮಾಡಿದೆ. ದೇಶದ ಗಂಭೀರ ಪರಿಸ್ಥಿತಿಯಲ್ಲಿ ಯುದ್ಧ ಸಾಮುಗ್ರಿ

ಗಳನ್ನು ಒದಗಿಸಿಕೊಟ್ಟು, ರಾಷ್ಟ್ರದ ಅಮೌಲ್ಯ ಸೇವೆಯನ್ನು ಈ ಕಾರಖಾನೆಯು ಸಲ್ಲಿಸಿದ್ದಕ್ಕಾಗಿ, ಸರಕಾರವು ಶ್ರೀ. ಜಾಂಭೇಕರರಿಗೆ ರಾವಬಹಾದ್ದೂರ ಪದವಿಯನ್ನಿತ್ತು ಸನ್ಮಾನಿಸಿದೆ. ಶಾಂತಿಕಾಲದಲ್ಲಿ ಒಕ್ಕಲಿಗರಿಗೆ ಉಪಯುಕ್ತ ಸಾಧನೆಗಳನ್ನೂ ಯುದ್ಧಕಾಲದಲ್ಲಿ ಯುದ್ಧೋಪಕರಣಗಳನ್ನೂ ಸಲ್ಲಿಸಿ ಕಿರ್ಲೋಸ್ಕರ ಸಂಸ್ಥೆಯು ರಾಷ್ಟ್ರದ ಗೌರವ ಹಾಗು ರಕ್ಷಣೆಯನ್ನು ಮಾಡಿ ಅದು ರಾಷ್ಟ್ರದ ಸ್ವತ್ತೆಂದು ಸಿದ್ಧವಾಗಿದೆ.

ಸಾಮಾನ್ಯವಾಗಿ ಪ್ರತಿಯೊಂದು ಕಾರಖಾನೆಯು ಒಳ್ಳೇ ಅಗತ್ಯದ ಸರಕುಗಳನ್ನು ನಿರ್ಮಿಸಿ, ಯೋಗ್ಯಬೆಲೆಗೆ ಮಾರುವ ದೃಷ್ಟಿಯನ್ನಿಟ್ಟುಕೊಂಡಿರುತ್ತದೆ. ನಮ್ಮ ಕಾರಖಾನೆಯು ಸಮಾಜದ ಪ್ರಗತಿಯ ಮುಖವಾಗುವಂತೆ ನಾವೂ ಯತ್ನಿಸುತ್ತಿದ್ದೇವೆ. ಕೂಲಿಕಾರರೇ ನಮ್ಮ ಚಟವಟಿಕೆಯ ಅಡಿಗಲ್ಲು. ಈ ದೃಷ್ಟಿಯಿಂದ ಅವರ ಹಿತಸಂಬಂಧಗಳನ್ನು ರಕ್ಷಿಸಿ, ಅವರ ಆರ್ಥಿಕ ಸುಧಾರಣೆಗೆಂದು ಬೋನಸ್ಸ ಹಂಚಲಾಗುವದು. ಅಸ್ಪೃಶ್ಯ ಕೆಲಸಗಾರರ ಏಳಿಗೆಗಾಗಿ ವಿಶೇಷ ದಕ್ಷತೆ ವಹಿಸಲಾಗಿದೆ. ಅದರಂತೆಯೇ ಚಿಕ್ಕ ಚಿಕ್ಕ ಉದ್ಯಮಗಳು ಬೆಳೆಯಬೇಕೆಂಬ ದೃಷ್ಟಿಯಿಂದ ಅವುಗಳಿಗೆ ಮಶಿನ್‌ಟೂಲ್ಸ ಹಾಗು ಇತರ ಸಲಕರಣೆಗಳ ಸಹಾಯನೀಡುವ ಧ್ಯೇಯವನ್ನು ಈ ಸಂಸ್ಥೆಯು ಇಟ್ಟುಕೊಂಡಿದೆ. ದೊಡ್ಡ ಔದ್ಯಮಿಕ ಕೇಂದ್ರದಿಂದ ಚಿಕ್ಕ ಉದ್ದಿಮೆಗಳಿಗೆ ಸಹಾಯ ಸಹಕಾರಗಳು ದೊರಕುವದು ಅಗತ್ಯವೆಂದು ನನ್ನ ಸ್ಪಷ್ಟ ಅಭಿಪ್ರಾಯವಿದೆ. ಅದರಂತೆ, ಜನಾಂಗದಲ್ಲಿ ಪ್ರೀತಿ ವಿಶ್ವಾಸಗಳೂ ಐಕ್ಯತೆಯೂ ಬೆಳೆಯಬೇಕಾಗಿದೆ. ಶೈವ ವೈಷ್ಣವರ ಐಕ್ಯತೆಯ ಚಿನ್ಹವಾಗಿ,ತುಂಗಭದ್ರೆಯ ಧಡದಲ್ಲಿ ಶ್ರೀ ಹರಿಹರೇಶ್ವರನು ಮೂರ್ತಿಮಂತಾಗಿ ನಿಂತಿದ್ದಾನೆ. ಇಂದು ನಮ್ಮ ಕಾರಖಾನೆಯು ಅದೇ ಸಂದೇಶವನ್ನು ಜನಾಂಗಕ್ಕೆ ಬೀರುತ್ತ ಇಲ್ಲಿಯೇ ನಿಂತಿದೆ. ಕರ್ನಾಟಕ ಮಹಾರಾಷ್ಟ್ರಗಳೆರಡೂ ಈ ಸಂಸ್ಥೆಯ ಮುಖಾಂತರ ನಾವೆಲ್ಲರೂ ಭಾರತೀಯರು ಎಂಬ ಸಂದೇಶವನ್ನು ಆಶಿಸುವಂತಾಗಿದೆ. ನಮ್ಮ ಪ್ರಗತಿಗೆ ಇವೆಲ್ಲವೂ ಕಾರಣಗಳಾಗಿವೆ.

ಈ ಹರಿಹರ ಕಾರಖಾನೆಯು ನಿಜವಾಗಿಯೂ ಪ್ರಗತಿದಾಯಕವಾದ ಬಗ್ಗೆ ನನಗೆ ಅಭಿಮಾನವೆನಿಸುತ್ತದೆ. ಆದರೆ ಇಷ್ಟಕ್ಕೇ ತೃಪ್ತಿ ಹೊಂದಕೂಡದೆಂದು ನಾನು ಎಚ್ಚರಿಸಬಯಸುತ್ತೇನೆ. ಯಾವ ಕ್ಷಣವು ಪ್ರಗತಿಯಲ್ಲಿ ಮಂದವಾಗುವದೋ ಅದೇ ಕ್ಷಣವು ಅವನತಿಯ ದಾರಿಯನ್ನು ಹಿಡಿಯುವದು. ಆದ್ದರಿಂದ

ನಾವು ಕಟ್ಟುತ್ತಿರುವ ಒಳ್ಳೇ ಯಂತ್ರಗಳ ಬಗ್ಗೆ ತೃಪ್ತರಾಗದೆ, ನಿಂತಲ್ಲಿ ನಿಲ್ಲದೆ, ಸತತ ಪ್ರಯತ್ನದಿಂದ ಅತ್ಯುತ್ತಮ ಯಂತ್ರಗಳನ್ನು ನಿರ್ಮಿಸುವದರಲ್ಲಿಯೂ ಮತ್ತು ಕಾರಖಾನೆಯನ್ನು ಬೆಳೆಸುವದರಲ್ಲಿಯೂ ನಾವು ತೊಡಗಬೇಕು. ನಾವು ಇನ್ನೂ ಪಾಶ್ಚಿಮಾತ್ಯ ದೇಶಗಳಿಂದ ಪ್ರತಿ ವರ್ಷ ೫ ಕೋಟಿ ರೂಪಾಯಿಗಳಷ್ಟು ಯಂತ್ರಕ್ಕೆ ಸಲಕರಣೆಗಳನ್ನು ತರಿಸುತ್ತಿರುವೆವು. ಅಂಥ ದೇಶಗಳ ಯೋಗ್ಯತೆಗೆ ನಾವು ಬರಬೇಕಾದರೆ ಇನ್ನೂ ದೂರದ ದಾರಿಯನ್ನು ತುಳಿಯಬೇಕಾಗಿದೆ ಯೆಂಬುದನ್ನು ನಾವು ಮರೆಯಕೂಡದು. ಈ ಮಿಶನ್ನುಗಳ ಆಯಾತದ ಆರ್ಥಿಕ ವಿಚಾರಗಳನ್ನು ಬಿಟ್ಟರೂ ರಾಷ್ಟ್ರದ ಪುನರುಜ್ಜೀವನದ ಆವಶ್ಯಕತೆಯನ್ನು ಸ್ವಾತಂತ್ರ್ಯವು ಸಾರುತ್ತಿದೆ. ಇದು ಅತ್ಯಂತ ಮಹತ್ವದ ವಿಷಯವು. ಭಾರತವು ಮಶಿನ್ ಸರಕುಗಳನ್ನು ಇಂದಿನಕ್ಕಿಂತ ಸಾವಿರ ಪಟ್ಟು ಹೆಚ್ಚಿಸಿದರೂ ಸ್ವಾವಲಂಬಿಯಾದೀತೆಂದು ಹೇಳುವದು ಕಷ್ಟ. ಇನ್ನು ಮುಂದಿನ ೨೦ ವರ್ಷ ಗಳಲ್ಲಿ ಈ ಗುರಿಯನ್ನು ಸಾಧಿಸುವದು ಅಸಾಧ್ಯವೆಂದು ನನಗೆ ತೋರುವದಿಲ್ಲ. ಆದರೆ ನಾವು ನಮ್ಮ ಬುದ್ಧಿಮತ್ತೆ, ಹಾಗು ಕೌಶಲ್ಯಗಳನ್ನು ಉಪಯೋಗಿಸಿ ದುಡಿಯಬೇಕೇ ಹೊರತು, ಆಲಸ್ಯಕ್ಕೆ ಅವಕಾಶ ಕೊಡಕೂಡದು.

ನಮ್ಮ ದೇಶ, ನಮ್ಮ ಸಂಸ್ಥೆ, ಮತ್ತು ನಮ್ಮ ಮಕ್ಕಳ ಏಳ್ಗೆಗಾಗಿ ನಾವೆಲ್ಲರೂ ಒಂದುಗೂಡಿ, ಒಂದು ಶಕ್ತಿಯಾಗಿ ದುಡಿಯಬೇಕಾಗಿದೆ. ನಮ್ಮ ದೇಶಕ್ಕೆ ಸಿಕ್ಕ ಸಾತಂತ್ರ್ಯ ರಕ್ಷಣೆಗಾಗಿ ಪ್ರತಿಯೊಬ್ಬರೂ ತಮ್ಮ ಶಕ್ತಿಗನುಸಾರ ವಾಗಿ ಪ್ರಯತ್ನಿಸಲೇಬೇಕು. ನಮ್ಮ ಮಕ್ಕಳೇ ಮುಂದಿನ ಜೀವನರಂಗದಲ್ಲಿ ಮಹತ್ವದ ಪಾತ್ರವನ್ನು ವಹಿಸತಕ್ಕವರು. ಅವರಿಗಾಗಿ ನಾವು ದುಡಿಯ ಬೇಕು. ಈ ಕಾರಖಾನೆಯಲ್ಲಿ ಅನೇಕ ತರುಣ ಕಾರ್ಯಕರ್ತರು ಮದುವೆ ಯಾಗತಕ್ಕವರಿರುವರೆಂಬುದು ನನಗೆ ಗೊತ್ತಿದೆ. ಅವರು ಇದೇ ರೀತಿಯ ಜೀವನವನ್ನು ಬಹಳ ದಿನಗಳವರೆಗೆ ಕಳೆಯಲಾರರು. ಅವರು ಮಡದಿ–ಮಕ್ಕಳೊಂದಿಗೆ ತಮ್ಮ ಜೀವನವನ್ನು ಸಾಗಿಸತಕ್ಕವರಿರುವರು. ಹೊಸ ಜನಾಂಗವು ಬಂದು ಸೇರುವದರಲ್ಲಿಯೇ ಅವರ ಬುದ್ಧಿಮತ್ತೆಗೆ ತಕ್ಕಂತೆ, ಕಾರಖಾನೆಯ ಕೆಲಸವು ತ್ವರಿತದಿಂದ ಬೆಳವಣಿಗೆ ಹೊಂದಬೇಕು. ಇಲ್ಲದೆ ಹೋದಲ್ಲಿ ಒಂದು ದಿವಸ ಈ ಗಂಡಾಂತರವನ್ನು ಎದುರಿಸಲೇಬೇಕಾದ ಪ್ರಸಂಗವೂ ನಿಮಗೆ ಒದಗೀತು. ಯಾವ ಸಂಕಟವೇ ಬರಲಿ, ಅದು ಪ್ರಗತಿಗೆ ಅಡ್ಡ ಬರದಂತೆ ಕಾರಖಾನೆಯನ್ನು ಮುಂದುವರಿಸಿಕೊಂಡು ಬೆಳೆವಣಿಗೆಯನ್ನು

ಮಾಡುತ್ತಿರಬೇಕು. ಈ ಕಾರಖಾನೆಯು ನೂರಾರು ವರ್ಷಗಳವರೆಗೆ ಸತತ ವಾಗಿ ಅಭಿವೃದ್ಧಿ ಹೊಂದುತ್ತ ನಡೆಯಲೆಂದು ನಾನು ಹಾರೈಸುವೆ. ನಡೆಯುವ ದೆಂಬ ವಿಶ್ವಾಸವೂ ನನಗೆ ಇದೆ.

ನಿಮ್ಮ ಸತತೋದ್ಯೋಗ, ಕುಶಲತೆ, ಹಾಗೂ ಉತ್ತಮ ದರ್ಜೆಯ ಮಶಿನ್ನುಗಳ ಉತ್ಪಾದನೆಯ ಕಾರ್ಯಕ್ಕೆ, ಪ್ರಗತಿಯ ದೃಷ್ಟಿಯಿಂದ ಅವಧಿಯ ಮಿತಿಯಿಲ್ಲ. ನಿಮಗಾಗಿ ಹೇಳಬೇಕೆಂದರೆ, ನಿಮ್ಮ ಬಯಕೆಗಳು ಸಂಸ್ಥೆಯ ಬಯಕೆಗಳೊಡನೆ ಒಂದುಗೂಡಿವೆ, ಎಂದಿಷ್ಟೇ ಹೇಳಬಯಸುತ್ತೇನೆ. ಅನೇಕರು ಈ ಮಾತನ್ನೇ ಮರೆತುಬಿಡುತ್ತಾರೆ. ನಮ್ಮ ಬೆಳವಣಿಗೆಯು ನಮಗೆ ಸಂಬಂಧಿ ಸಿದ ಸಂಸ್ಥೆಯ ಬೆಳವಣಿಗೆಯನ್ನೇ ಅವಲಂಬಿಸಿರುತ್ತದೆನ್ನುವ ಮಾತು ಸತ್ಯ ಸಂಗತಿಯಾಗಿದೆ. ನಾವು ನಮ್ಮ ಕಾರಖಾನೆಯ ಪ್ರಗತಿಯನ್ನು ಹೆಚ್ಚಿಸಲು ಪ್ರಯತ್ನಿಸಿದರೆ ಮಾತ್ರ, ಖಂಡಿತವಾಗಿಯೂ ನಮ್ಮ ಪ್ರಗತಿಯು ಆಗುತ್ತದೆ.

ನನ್ನನ್ನು ಈ ಸಮಾರಂಭಕ್ಕೆ ಬರಮಾಡಿಕೊಂಡ ನಿಮ್ಮೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ. ನೀವೆಲ್ಲರೂ ಇಲ್ಲಿ ಸೇರಿದ್ದನ್ನು ನೋಡಿದಾಗ ನನ್ನ ಹೃದ-ಯವು ಅಭಿಮಾನದಿಂದ ತುಂಬಿ ತುಳುಕುತ್ತದೆ. ಐದು ಕಾರಖಾನೆಯ ಸದಸ್ಯ ರುಗಳೆಲ್ಲ ಒಂದೇ ಮನೆತನದ ಮಕ್ಕಳಂತೆಯೇ ಇಲ್ಲಿ ಸೇರಿದ್ದೀರಿ. ಅಜ್ಜನಂತೆ ನಿಮ್ಮ ಬಗ್ಗೆ ನನಗೆ ಪ್ರೀತಿಯುಂಟಾಗಿದೆ. ದೇವರು ನಿಮಗೆ ಕಲ್ಯಾಣವನ್ನುಂಟು ಮಾಡಲಿ ಎಂದು ಹೃದಯತುಂಬಿ, ಅಂತಃಕರಣಪೂರ್ವಕವಾಗಿ ಆತನಲ್ಲಿ ಪ್ರಾರ್ಥಿಸುತ್ತೇನೆ. “ದೇವರು ಸ್ವಾವಲಂಬನ ಮಾರ್ಗದಲ್ಲಿರುವವರಿಗೆ ಸಹಾಯ ಮಾಡುತ್ತಾನೆ” ಎಂಬುದನ್ನು ಮತ್ತೊಮ್ಮೆ ಹೇಳಬಯಸುತ್ತೇನೆ. ಹೆಚ್ಚಿನ ಶ್ರೇಯಸ್ಸು ನಿಮಗೆ ಸಿಗುವಂತೆಯೂ ವಿಶ್ವಾಸ-ಉತ್ಸಾಹಗಳೂ ಬೆಳೆಯು ವಂತೆಯೂ ಇಂದಿನ ಐತಿಹಾಸಿಕ ಸಮಾರಂಭವಾಗಲೆಂದು ಹಾರೈಸುವೆ. ನಿಮ್ಮೆಲ್ಲರಿಗೂ ಒಳ್ಳೆಯದಾದ ದಿನಗಳನ್ನು ನಾನು ನೋಡಬಯಸುತ್ತೇನೆ. ಕಾರ್ಯೋನ್ಮುಖರಾಗಿರಿ, ಮತ್ತು ಅದನ್ನು ಸಾಧಿಸಿರಿ.

**—: ಜೈ ಹಿಂದ :—**

# ಕಿರ್ಲೋಸ್ಕರ ಇಲೆಕ್ಟ್ರಿಕ್ ಕಂಪನಿ ಲಿ., ಬೆಂಗಳೂರ

ಭಾರತದಲ್ಲಿ ಕೈಗಾರಿಕೆಯ ಉದ್ಯಮಗಳ ಬೆಳವಣಿಗೆಯು ಕಳೆದ ಹದಿನೈದು ವರ್ಷಗಳಲ್ಲಿ ಅದ್ಭುತವಾಗಿ ಬೆಳೆದಿದೆ. ೨ನೆಯ ಮಹಾಯುದ್ಧದ ಕಾಲದಲ್ಲಿ ಆಯಾತ ವ್ಯಾಪಾರಕ್ಕೆ ತೊಂದರೆಯಾಗಿ, ಅನೇಕ ಕಾರಖಾನೆಗಳು ದೇಶೀಯ ವಸ್ತುಗಳನ್ನು ತಯಾರಿಸಲು ಪ್ರಾರಂಭಿಸಿದವು. ಅಂತಹ ಹೊಸ ಪ್ರಯತ್ನಗಳಲ್ಲಿ ವಿದ್ಯುತ್ ಮೋಟಾರುಗಳನ್ನು ತಯಾರಿಸುವ ಪ್ರಯತ್ನವನ್ನು ಕಿರ್ಲೋಸ್ಕರ ಬಂಧುಗಳು ಮಾಡಿದರು. ಯುದ್ಧಾನಂತರ ಬ್ರಿಟನ್ನಿನ ಅನೇಕ ಕಾರಖಾನೆದಾರರು ಭಾರತದಲ್ಲಿಯೇ ಈ ವಸ್ತುಗಳನ್ನು ತಯಾರಿಸಲು, ಸೂಕ್ತ ಸಂಬಂಧಗಳನ್ನು ಬೆಳೆಸಲು ಪ್ರಯತ್ನಿಸಿದರು. ಈ ಪ್ರಯತ್ನದ ಫಲವಾಗಿ ಬ್ರಿಟನ್ನಿನ ಬ್ರಷ್ ಇಲೆಕ್ಟ್ರಿಕ್ ಇಂಜನಿಯರಿಂಗ ಕಂಪನಿಗೂ ಕಿರ್ಲೋಸ್ಕರ ಸಂಸ್ಥೆಗೂ ೧೯೪೬ನೆಯ ಜುಲೈ ೨೬ರಲ್ಲಿ ಒಂದು ಒಪ್ಪಂದವಾಯಿತು. ಈ ಒಪ್ಪಂದದ ಪ್ರಕಾರ ಬೆಂಗಳೂರಿನಲ್ಲಿ ಮೋಟಾರುಗಳೂ ಟ್ರಾನ್ಸ್‌ಫಾರ್ಮರು ಗಳೂ ಆಲ್ಟರನೇಟರುಗಳೂ ಇತ್ಯಾದಿಯಾಗಿ ವಿದ್ಯುದುಪಕರಣಗಳನ್ನು ನಿರ್ಮಿಸುವ ಹೊಸ ಕಾರಖಾನೆಯೊಂದು ಸ್ಥಾಪಿತವಾಯಿತು.

ಪೂಜ್ಯ ಲಕ್ಷ್ಮಣರಾವ ಕಿರ್ಲೋಸ್ಕರರು ದಿನಾಂಕ ಡಿಸೆಂಬರ ೧೯೪೬ರಲ್ಲಿ ಹೊಸ ಕಾರಖಾನೆಯ ಅಸ್ತಿಭಾರವನ್ನು ಹಾಕಿದರು. ಮೈಸೂರು ಸರ್ಕಾರದಿಂದ ಕೊಡಲ್ಪಟ್ಟ ೨೦ ಎಕರೆಯ ಜಮೀನಿನಲ್ಲಿ, ಕೇವಲ ಎಂಟು ತಿಂಗಳಲ್ಲಿ ಈ ಹೊಸ ಕಾರಖಾನೆಯು ಕೆಲಸ ಮಾಡಲು ಪ್ರಾರಂಭಿಸಿತು. ಸಾಂಪ್ರದಾಯಿಕ ಪ್ರಾರಂಭೋತ್ಸವವು ದಿ. ೩–೬–೧೯೪೮ ರಂದು ಅಂದಿನ ಮೈಸೂರಿನ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್‌ರವರ ಹಸ್ತದಿಂದ ನೆರವೇರಿತು. ಇದರ ಸುಮಾರು ಹನ್ನೆರಡು ವರ್ಷಗಳ ಪ್ರಗತಿಯನ್ನು ಸೂಕ್ಷ್ಮವಾಗಿ ಕೆಳಗೆ ವಿವರಿಸಿದೆ.

**ವಿದ್ಯುತ್ ಮೋಟಾರುಗಳು:—** ಈ ಯಂತ್ರಯುಗದಲ್ಲಿ ಯಾವುದೊಂದು ಶಕ್ತಿಗೂ ವಿದ್ಯುಚ್ಛಕ್ತಿಯೇ ಮೂಲವಾಗಿದೆ. ವಿದ್ಯುತ್ತನ್ನು ಶಕ್ತಿಯಾಗಿ ಪರಿವರ್ತಿಸಿ ಪ್ರಯೋಜನ ಪಡೆಯಲು ಮೋಟಾರುಗಳು ಬೇಕು. ಇದೊಂದು

ಆವಶ್ಯಕ ಯಂತ್ರ. ಬೆಂಗಳೂರು ಕಾರಖಾನೆಯಲ್ಲಿ ೧೯೪೮ ರಿಂದ ೧೯೬೦ ರ ವರೆಗೆ ೧೦,೫೦,೦೦೦ ಅಶ್ವಶಕ್ತಿಯ ೧,೨೬,೦೦೦ ಮೋಟಾರುಗಳು ತಯಾ-ರಾಗಿವೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ವರ್ಷಕ್ಕೆ ೪೦೦೦೦೦ ಅಶ್ವಶಕ್ತಿಯ ಮೋಟಾರುಗಳನ್ನು ತಯಾರಿಸಲು ಯೋಜಿಸಲಾಗಿದೆ. ಈ ತಯಾರಿಕೆಯಲ್ಲಿ ½ ಅಶ್ವಶಕ್ತಿಯಿಂದ ೫೦೦ ಅಶ್ವಶಕ್ತಿಯ ವರೆಗೆ ಎಲ್ಲ ವಿಧದ ಮೋಟಾರುಗಳನ್ನೂ ಮಾಡಲು ಏರ್ಪಾಡಾಗಿದೆ. ಭಾರತದ ಎಲ್ಲ ಕಾರಖಾನೆಗಳ ತಯಾರಿಕೆಯ ಸುಮಾರು ⅓ ಭಾಗದಷ್ಟು ಬೆಂಗಳೂರಿನ ಕಿರ್ಲೋಸ್ಕರ ಕಾರಖಾನೆಯಲ್ಲಿ ತಯಾರಾಗುತ್ತಿದೆ.

**ಟ್ರಾನ್ಸ್ ಫಾರ್ಮರುಗಳು**:— ವಿದ್ಯುತ್ತಿನ ಸರಬರಾಜಿನ ವ್ಯವಸ್ಥೆಯಲ್ಲಿ ಮುಖ್ಯವಾಗಿ ಬೇಕಾದ ಮತ್ತೊಂದು ಯಂತ್ರವೆಂದರೆ ಟ್ರಾನ್ಸ್‌ಫಾರ್ಮರ್. ವಿದ್ಯುತ್ತಿನ ಒತ್ತಡವನ್ನು ಹೆಚ್ಚುಕಡಿಮೆಮಾಡಿ ಪ್ರವಾಹಕ್ಕೆ ಅನುಕೂಲವಾದ ಒತ್ತಡವನ್ನು ಹೊಂದಲು ವಿವಿಧ ಶಕ್ತಿಯ ಟ್ರಾನ್ಸ್‌ಫಾರ್ಮರುಗಳನ್ನು ಉಪ-ಯೋಗಿಸಲಾಗುತ್ತದೆ. ವಿದ್ಯುತ್ತಿನ ಉಪಯೋಗ ಹೆಚ್ಚಾದಂತೆ ಟ್ರಾನ್ಸ್‌ಫಾರ್ಮರುಗಳ ಬಳಿಕೆಯೂ ಹೆಚ್ಚುತ್ತಿದೆ. ೧೯೫೪ ರಲ್ಲಿ ಈ ತಯಾರಿಕೆಯು ಬೆಂಗಳೂರು ಕಿರ್ಲೋಸ್ಕರ ಕಾರಖಾನೆಯಲ್ಲಿ ಪ್ರಾರಂಭವಾಗಿ ೧೯೫೮ ರ ಹೊತ್ತಿಗೆ ವರ್ಷಕ್ಕೆ ೨,೦೦೦೦೦ ಕೆ. ವಿ. ಎ. ಅಷ್ಟು ಟ್ರಾನ್ಸ್‌ಫಾರ್ಮರುಗಳು ಸಿದ್ಧವಾದವು. ೫ ಕೆ. ವಿ. ಎ. ಯಿಂದ ೫೦೦೦ ಕೆ. ವಿ. ಎ. ವರೆಗೆ, ೨೨ ಕೆ. ವಿ. ಎ. ಒತ್ತಡದ ಟ್ರಾನ್ಸ್‌ಫಾರ್ಮರುಗಳನ್ನು ತಯಾರಿಸಲು ಎಲ್ಲ ಅನುಕೂಲತೆಗಳೂ ಈ ಕಾರಖಾನೆಯಲ್ಲಿವೆ. ಭಾರತದೇಶದ ನಾನಾ ಪ್ರಾಂತ್ಯ ಎಲಿಕ್ಟ್ರಿಸಿಟಿ ಬೋರ್ಡುಗಳು ಈ ಕಾರಖಾನೆಯ ತಯಾರಿಕೆಗೆ ವಿಶೇಷ ಮನ್ನಣೆಯಿತ್ತು, ಕಿರ್ಲೋಸ್ಕರ ಟ್ರಾನ್ಸ್‌ಫಾರ್ಮರುಗಳನ್ನು ಬಳಸುತ್ತಿದ್ದಾರೆ.

**ಆಲ್ಟರ್ ನೇಟರುಗಳು** (Alternators):— ದೇಶದಲ್ಲಿ ದೊಡ್ಡ ದೊಡ್ಡ ವಿದ್ಯುತ್ ಉತ್ಪಾದನಾ ಕೇಂದ್ರಗಳು ಹೆಚ್ಚಿದಷ್ಟೂ ಜನಕ್ಕೆ ವಿದ್ಯುತ್ತಿನ ಬಳಿಕೆಯ ಬಗ್ಗೆ ಅನುಭವ ಹೆಚ್ಚುತ್ತಲಿದೆ. ದೊಡ್ಡ ಪಟ್ಟಣಗಳು ಕೈಗಾರಿಕೆಯ ಕೇಂದ್ರಗಳು ಸಾಕಷ್ಟು ಪ್ರಮಾಣದಲ್ಲಿ ವಿದ್ಯುತ್ತನ್ನು ಬಳಸಬಹುದು. ಆದರೆ ನಮ್ಮ ನಾಡಿನ ಹಳ್ಳಿಹಳ್ಳಿಗೂ ವಿದ್ಯುತ್ ಬೇಕಾದರೆ, ಯಾವ ರೀತಿಯ ಸರಬ-ರಾಜು ಮಾಡುವುದು? ಅನೇಕ ತಾಂತ್ರಿಕ ಕಾರಣಗಳಿಂದ ನಮ್ಮ ದೇಶದಲ್ಲಿ

ಸಣ್ಣ ಉತ್ಪಾದನಾ ಕೇಂದ್ರಗಳೂ ಬೇಕಾಗುತ್ತವೆ. ಈ ಉತ್ಪಾದನಾ ಕೇಂದ್ರಗಳಿಗೆ ಅನುಕೂಲವಾದ ಜನರೇಟರುಗಳನ್ನು ಬೆಂಗಳೂರು ಕಾರಖಾನೆಯಲ್ಲಿ ತಯಾರಿಸಲಾಗುತ್ತಿದೆ. ೩ ಕೆ. ವಿ. ಎ. ಶಕ್ತಿಯಿಂದ ಹಿಡಿದು ಸುಮಾರು ೨೫೦ ಕೆ. ವಿ ಎ. ಶಕ್ತಿಯ ವರೆಗಿನ ಯಂತ್ರಗಳ ತಯಾರಿಕೆ ಸಾಗುತ್ತದೆ.

ಈ ಎಲ್ಲ ಯಂತ್ರಗಳ ಉತ್ಪಾದನೆಗೆ ಬೇಕಾದ ತಾಂತ್ರಿಕ, ಆರ್ಥಿಕ ಮತ್ತು ಮಾನವ ಸಂಪತ್ತು ಬೆಂಗಳೂರ ಕಾರಖಾನೆಯಲ್ಲಿ ಕಳೆದ ಹನ್ನೆರಡು ವರ್ಷಗಳಿಂದ ಬೆಳೆದು ಬಂದಿದೆ. ದೇಶೀಯ ಇಂಜಿನಿಯರ್‌ಗಳೂ ಕಾರ್ಮಿಕರೂ ಯಾವ ಕಾರ್ಯವನ್ನಾದರೂ ಸಾಧಿಸಬಲ್ಲರು, ಎಂಬುದಕ್ಕೆ ಬೆಂಗಳೂರು ಕಾರಖಾನೆಯು ಒಂದು ನಿದರ್ಶನ. ಸುಮಾರು ಒಂದು ಸಾವಿರ ಕೆಲಸಗಾರರು ತಿಂಗಳಿಗೆ ಇಪ್ಪತ್ತುನಾಲ್ಕು ಲಕ್ಷ ರೂಪಾಯಿ ಮೌಲ್ಯದ ವಿದ್ಯುತ್ ಸಾಮಾನುಗಳನ್ನು ತಯಾರಿಸುತ್ತಿದ್ದಾರೆ.

ಕಾರಖಾನೆಯಲ್ಲಿ ಒಂದು ಪ್ರತ್ಯೇಕ ಇಂಜನಿಯರಿಂಗ್ ಮತ್ತು ಡೆವಲಪ್‌ಮೆಂಟ್ ವಿಭಾಗವೂ ಪರಿಶೋಧನಾ ವಿಭಾಗವೂ ಇದೆ. ಈ ಎರಡೂ ವಿಭಾಗಗಳಲ್ಲಿ ನುರಿತ ಯಂತ್ರತಜ್ಞರು ಇಂದಿನ ಸಾಮಾನುಗಳ ಗುಣಗಳನ್ನು ಇನ್ನೂ ಹೆಚ್ಚು ಉತ್ತಮಪಡಿಸಲೂ ಹೊಸ ಸಾಮಾನುಗಳ ತಯಾರಿಕೆಗೆ ಹೊಸ ಡಿಸೈನುಗಳನ್ನು ತಯಾರು ಮಾಡುತ್ತಲೂ ಹೊಸ ಸಾಮಾನುಗಳ ಗುಣ ವಿಶೇಷಗಳನ್ನು ಪರಿಶೀಲಿಸಿ ಅದನ್ನು ಕಾರಖಾನೆಯಲ್ಲಿ ಉಪಯೋಗಿಸಲೂ ಆಮದು ಪದಾರ್ಥಗಳ ಬದಲು ದೇಶೀಯ ಕಚ್ಚಾಮಾಲುಗಳನ್ನು ಉಪಯೋಗಿಸುವುದರಲ್ಲಿಯೂ ಉಪಯುಕ್ತ ಪರಿಶೋಧನೆ ನಡೆಸುತ್ತಿದ್ದಾರೆ.

ಕಾರ್ಮಿಕರ ಯೋಗಕ್ಷೇಮವೂ ಬೆಂಗಳೂರು ಕಾರಖಾನೆಯಲ್ಲಿ ವಿಶೇಷ ಗಮನ ಪಡೆದಿದೆ. ಅತ್ಯುತ್ತಮ ಕ್ಯಾಂಟೀನ್, ವೈದ್ಯಕೀಯ ಸಹಾಯ ವಿಹಾರ ಮತ್ತು ಆಟ–ಪಾಟಗಳ ಕೂಟುಗಳು, ಇತ್ಯಾದಿ ಅನೇಕ ಸೌಲಭ್ಯಗಳಿವೆ. ಬೆಂಗಳೂರು ಕಾರಖಾನೆಯಲ್ಲಿ ಒಬ್ಬ ಕಾರ್ಮಿಕನ ಸರಾಸರಿ ತಿಂಗಳ ಸಂಬಳ ಸುಮಾರು ಇನ್ನೂರು ರೂಪಾಯಿಗಳಾಗುತ್ತದೆ. ನೌಕರರ ಉತ್ಪಾದನಾ ಶಕ್ತಿಯನ್ನನುಸರಿಸಿ ಅವರಿಗೆ ಬೋನಸ್ ಕೊಡಲಾಗುತ್ತದೆ. ಹದಿನಾಲ್ಕು ವರ್ಷಗಳ ಹಿಂದೆ ಶ್ರೀ. ಕಿರ್ಲೋಸ್ಕರ ಲಕ್ಷ್ಮಣರಾಯರವರ ಆಶೀರ್ವಾದದಿಂದ ಕೇವಲ ೨೫ ಲಕ್ಷ ಬಂಡವಾಳದಿಂದ ಪ್ರಾರಂಭವಾದ ಈ ಸಂಸ್ಥೆಯು ಇಂದು

೧೯೬೧ ರಲ್ಲಿ ೪೫ ಲಕ್ಷ ಬಂಡವಾಳದಿಂದ, ೪೦ ಎಕರೆ ಪ್ರದೇಶದಲ್ಲಿ ಸುವ್ಯವಸ್ಥಿತ ಆಧುನಿಕ ತಯಾರಿಕೆಯ ಕೇಂದ್ರವಾಗಿ ಬೆಳೆದಿದೆ. ವರ್ಷಕ್ಕೆ ಎರಡೂವರೆ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ಸಾಮಾನುಗಳ ತಯಾರಿಕೆ ಸಾಗಿದೆ. ಒಂದು ಸಾವಿರಕ್ಕೆ ಮೇಲ್ಪಟ್ಟು ಜನರಿಗೆ ಉದ್ಯೋಗ ಕಲ್ಪಿಸಿದೆ. ಆದಲ್ಲದೆ ಬೆಂಗಳೂರಿನ ಅನೇಕ ಸಣ್ಣ ಕೈಗಾರಿಕೆಯ ಉದ್ಯಮಿಗಳಿಗೆ ಕೆಲಸ ಕಲ್ಪಿಸಿ ಅವರಿಂದ ತಿಂಗಳಿಗೆ ಸುಮಾರು ಒಂದೂವರೆಲಕ್ಷರೂಪಾಯಿಗಳ ಸಾಮಾನುಗಳನ್ನು ಕೊಳ್ಳುತ್ತಿದೆ.

ದೇಶದ ಆರ್ಥಿಕ ಮತ್ತು ಕೈಗಾರಿಕೆಯ ಪ್ರಗತಿಯಲ್ಲಿ ತನ್ನಿಂದ ಸಾಧ್ಯವಾದ ಶ್ರಮವನ್ನು ಬೆಂಗಳೂರು ಕಿರ್ಲೋಸ್ಕರ ಕಾರಖಾನೆಯು ಸಾಧಿಸಲು ಪಣ ತೊಟ್ಟಿದೆ. ಈ ಕಾರ್ಯದಲ್ಲಿ "Miracles are brought about through work alone" ಎಂಬ ಶ್ರೀ. ಲಕ್ಷ್ಮಣರಾಯರ ಸಂದೇಶ ಎಲ್ಲರನ್ನೂ ಕಾರ್ಯೋನ್ಮುಖರನ್ನಾಗಿ ಮಾಡಿದೆ.

# ಕಿರ್ಲೋಸ್ಕರ ಆಯಿಲ್ ಇಂಜಿನ ಕಂಪನಿ ಲಿಮಿಟೆಡ್
# ಕಿರ್ಕಿ (Kirkee), ಪುಣೆ-೩

ಹೆಚ್ಚಿನ ವೇಗವುಳ್ಳ ಲಂಬಿ ಡೀಜೆಲ್ ಯಂತ್ರಗಳನ್ನು (Vertical High Spead Diesel Engines) ತಯಾರಿಸುವದಕ್ಕಾಗಿ ೧೯೪೬ನೇ ಇಸ್ವಿಯಲ್ಲಿ ಈ ಕಂಪನಿಯು ಸ್ಥಾಪಿಸಲ್ಪಟ್ಟಿತು. ೧೯೪೯ನೇ ಇಸ್ವಿಯಲ್ಲಿ ಅದಕ್ಕೆ ಬೇಕಾಗುವ ಬಿಡಿ ಭಾಗಗಳನ್ನೆಲ್ಲ ಸಿದ್ಧಪಡಿಸಿತು. ಬಿಡಿಭಾಗ (Set of Engines) ಕಡಿಮೆ ವೇಗದ ಹಾರಿಝಾಂಟಲ್ ಡಿಜೆಲ್ ಇಂಜಿನ್ನುಗಳೇ ಪ್ರಾಮುಖ್ಯವಾದ ಆ ಕಾಲದಲ್ಲಿ ಹೆಚ್ಚಿನ ವೇಗವುಳ್ಳ ವ್ಹರ್ಟಿಕಲ್ ಇಂಜಿನ್ನುಗಳನ್ನು ತಯಾರಿಸುವ ನಿಶ್ಚಯ ಅತ್ಯಂತ ಕಷ್ಟದಾಯಕವಾಗಿತ್ತು. ಆದರೂ ವ್ಹರ್ಟಿಕಲ್ ಎಂಜಿನ್ನು ಹಾರಿಝಾಂಟಲ್ ಎಂಜಿನ್ನಿಗಿಂತ ಶ್ರೇಷ್ಠವೆಂದು ನಿಶ್ಚಿತವಾದ್ದರಿಂದ ಮತ್ತು ಈ ವಿಷಯುವನ್ನು ಉಪಯೋಗಿಸುವವರಿಗೆ ತಿಳಿಸಿ ಕೊಡಬೇಕೆಂಬ ಉದ್ದೇಶದಿಂದ ಕಂಪನಿಯು ತನ್ನ ಯಂತ್ರಗಳ ತಯಾರಿಕೆಯನ್ನು ಮುಂದುವರಿಸಿತು ಜಗತ್ತಿನಲ್ಲಿಯ ಯಾವದೇ ಯಂತ್ರಕ್ಕೂ ಸರಿಸಮಾನವಾಗಿದ್ದ ಈ ಇಂಜಿನ್ನಿನ ಉತ್ತಮ ಗುಣ ಹಾಗೂ ದೇಶದಾದ್ಯಂತ ಅಚ್ಚುಕಟ್ಟಾದ ಮಾರಾಟ ಹಾಗೂ ಈ ಇಂಜಿನ್ನುಗಳ ದುರಸ್ತಿಗಳ ವ್ಯವಸ್ಥೆ ಇವುಗಳಿಂದ ಜನತೆಯ ಮನಸ್ಸಿನಲ್ಲಿ ಉತ್ತಮವೆಂದು ಪರಿಣಾಮ ಮಾಡಿದ ಹಾರಿಝಾಂಟಲ್ ಇಂಜಿನ್ನುಗಳೊತನೆ ಸ್ಪರ್ಧಿಸಿ, ಈ ಇಂಜನಗಳು ಯಶಸ್ವಿಯಾದವು. ಈ ವ್ಹರ್ಟಿಕಲ್ ಯಂತ್ರಗಳು ಹಾರಿಝಾಂಟಲ್ ಯಂತ್ರಗಳಿಗಿಂತ ಎಷ್ಟೋ ಪಟ್ಟು ಉತ್ತಮವೆಂದು ತಿಳಿದ ನಂತರ, ಸ್ವಲ್ಪ ಕಾಲದಲ್ಲಿಯೇ ಎಲ್ಲ ಪೇಟೆಯನ್ನು ಇವೇ ಆಕ್ರಮಿಸಿಕೊಂಡವು. ಕಿರ್ಲೋಸ್ಕರ ೪ ಬ್ರೇಕ್ ಅಶ್ವಶಕ್ತಿಯುಳ್ಳ, ಇಂಜಿನ್ನು ಪರದೇಶದಿಂದ ಆಯಾತ ಮಾಡಿದ ಅಷ್ಟೇ ಅಶ್ವಶಕ್ತಿಯುಳ್ಳ ಇಂಜಿನ್ನಿನಷ್ಟೇ ಉತ್ತಮವಾಗಿತ್ತಲ್ಲದೆ, ಕೆಲವು ಅಂಶಗಳಲ್ಲಿ ಅವುಗಳಿಗಿಂತಲೂ ಚೆನ್ನಾಗಿತ್ತು. ಅಲ್ಲದೆ ಅದರ ಬೆಲೆ ಅದೇ ವರ್ಗದ ಇಂಜಿನ್ನುಗಳಲ್ಲೆಲ್ಲ ಅತ್ಯಂತ ಕಡಿಮೆಯಾಗಿತ್ತು. ಕೊಳ್ಳುವವರಿಗೆ ತಾಂತ್ರಿಕ ಸಲಹೆ, ಸಹಾಯ, ಬಿಡಿಭಾಗ ಮೊದಲಾದವುಗಳು ಸುಲಭವಾಗಿ ಸಿಕ್ಕುವದಕ್ಕಾಗಿ ಕಂಪನಿಯು ಯೋಗ್ಯ ವ್ಯವಸ್ಥೆ ಮಾಡಿದ್ದರಿಂದ, ಕಂಪನಿಯ ಬಗ್ಗೆ ಕೊಳ್ಳುವವರಲ್ಲಿ ವಿಶ್ವಾಸವುಂಟಾಯಿತು.

ವ್ಹರ್ಟಿಕಲ್ ಇಂಜಿನ್ನು ಈ ರೀತಿಯಾಗಿ ಸ್ಥಿರವಾದ ಬೇಡಿಕೆಯನ್ನು ಸಂಪಾದಿಸಿತು.

೧೯೩೧–೩೨ ರ ವ್ಯಾಪಾರಿ ಇಳಿತದಿಂದ (Depression) ಕಂಪನಿಗೆ ಬಹಳ ಪೆಟ್ಟಾಯಿತು. ಮಾರಾಟವಾಗದೆ ಎಷ್ಟೋ ಇಂಜಿನ್ನುಗಳು ಉಳಿದವು. ಆದರೆ ಕಂಪನಿಯು ವ್ಯಾಪಾರದ ಇಳಿತದ ಆಚೆಗಿನ ಕ್ಷಿತಿಜದ ಕಡೆಗೆ ಲಕ್ಷ್ಯವಿಟ್ಟು ಹೊಸ ಪ್ರಗತಿಗಳನ್ನು ಪ್ರಾರಂಭಿಸಿತು.

ಈ ವ್ಯಾಪಾರ ಇಳಿಕೆಯ ವರ್ಷಗಳಲ್ಲಿ ಸುಧಾರಿಸಿದ AV 1, Ser. 2 ಮತ್ತು ಹೊಸದಾದ ತೆಳ್ಳಗಿನ ಕವಚಗಳುಳ್ಳ ಲೋಹದ ಬೇರಿಂಗುಗಳು ಜನ್ಮ ತಾಳಿದವು. ಸಂಶೋಧನೆ ಮತ್ತು ಅಭಿವೃದ್ಧಿಯ ಕೆಲಸಗಳು ಒಂದಕ್ಕೊಂದು ಪೂರಕವಾಗಿ ಸಾಗಿದ್ದರಿಂದ ವ್ಯಾಪಾರಿಇಳಿಕೆಯ ನಂತರದ ವರ್ಷಗಳಲ್ಲಿ 13/20 BHP B2 (ಬ್ರೇಕ್ ಅಶ್ವಶಕ್ತಿಯುಳ್ಳ) ಇಂಜಿನ್ನು ೧೦ ಅಶ್ವಶಕ್ತಿಯುಳ್ಳ ಒಂದೇ ಬ್ಲಾಕಿನ ಇಂಜಿನ್ನು (10 BHP Monoblock Engine) ಮತ್ತು ೨– ಸಿಲೆಂಡರಿನ ೧೦ ಅಶ್ವಶಕ್ತಿಯುಳ್ಳ ಎ. ವ್ಹಿ.–೨ ಇಂಜಿನ್ನುಗಳನ್ನು (2 Cylinder 10 H P. AV 2 Engine) ತಯಾರಿಸುವದು ಸಾಧ್ಯವಾಯಿತು. ೪೦ ಬ್ರೇಕ್ ಅಶ್ವ ಶಕ್ತಿಯುಳ್ಳ ಬಿ–೪ ಇಂಜಿನನ್ನು (40 BHP B 4 Engine) ತಯಾರಿಸಲಾಯಿತು. ಮತ್ತು ಅದರ ಟ್ರ್ಯಾಕ್ಶನ್ ಮಾದರಿಯಾದ ಬಿ–೪–ಟಿ (Traction Model the B 4 T) ಇಂಜಿನ್ನನ್ನು, ಸಹೋದರಿ ಸಂಸ್ಥೆಯಾದ ಕಿರ್ಲೋಸ್ಕರ ವಾಯು ವಿಜ್ಞಾನ ಕಂಪನಿಯು ತಯಾರಿಸಿದ ರೋಟರಿ ವಾಯು ಒತ್ತಡ ಯಂತ್ರಕ್ಕೆ ಜೋಡಿಸುವದರಲ್ಲಿ ಯಶಸ್ಸು ಸಿಕ್ಕಿತು.

ತೆಳ್ಳಗಿನ ಕವಚಗಳುಳ್ಳ ಲೋಹದ ಬೇರಿಂಗುಗಳು ಅವುಗಳಿಗೆ ಬಹಳ ಬೇಡಿಕೆಯಿದ್ದ ದೇಶೀಯ ಮೋಟಾರ ಗಾಡಿಯ (Automobile) ಉದ್ಯೋಗದಲ್ಲಿ ಬಹಳ ಉಪಯುಕ್ತವಾಗಿ ಪರಿಣಮಿಸಿವೆ. ವ್ಯಾಪಾರದ ಇಳಿಕೆಯ ನಂತರದ ವರ್ಷಗಳಲ್ಲಿ ಇಂಜಿನ್ನುಗಳ ಉತ್ಪಾದನೆಯು ಎಷ್ಟೋ ಪಟ್ಟು ಹೆಚ್ಚಿತು. ೧೯೩೫ ರಲ್ಲಿ ಈ ಇಂಜಿನ್ನುಗಳ ಇತಿಹಾಸದಲ್ಲಿಯೇ ಮೊದಲನೆಯ ಸಲ ಒಂದು ಕ್ರಾಂತಿಕಾರಕ ಘಟನೆ ಸಂಭವಿಸಿತು ಅದೆಂದರೆ, ಜರ್ಮನಿಗೆ ಇಂಜಿನ್ನುಗಳನ್ನು ನಿರ್ಯಾತ ಮಾಡಿದ್ದು. ಮುಂದಿನ ನಂತರದ ವರುಷ

ಗಳಲ್ಲಿ ಮಧ್ಯ ಪ್ರಾಚ್ಯ, ಮತ್ತು ದೂರ ಪ್ರಾಚ್ಯ ದೇಶಗಳಿಗೆ ಇಂಜಿನ್ನುಗಳನ್ನು ನಿರ್ಯಾತ ಮಾಡಲಾಯಿತು. ಮತ್ತು ಕಳೆದ ಕೆಲವು ವರ್ಷಗಳಿಂದ ನ್ಯೂಝಿಲಂಡ, ಆಸ್ಟ್ರೇಲಿಯಾ ಹಾಗೂ ·ಲ್ಯಾಬಿನ್ ಅಮೇರಿಕೆಗೂ ಇಂಜಿನ್ನು ಗಳನ್ನು ರಫ್ತ ಮಾಡಲಾಗಿದೆ.

ಒಂದು ಅಭಿವೃದ್ಧಿಯ ಯೋಜನೆಯನ್ನು ತಯಾರಿಸಿ, ಮೊದಲಿನಕ್ಕಿಂತ ಒಂದೂವರಿಪಟ್ಟು ದೊಡ್ಡದಾದ ಕಾರಖಾನೆಯ ಕಟ್ಟಡವನ್ನು ಕಟ್ಟಲಾಯಿತು. ಭವಿಷ್ಯಕಾಲದಲ್ಲಿ ಪ್ರಸಿದ್ಧವಾದ M. A. N. ಇಂಜಿನ್ನುಗಳನ್ನು ತಯಾರಿಸ ಲಾಗುವದು. ೧೦೦ ರಿಂದ ೧೦೦೦ ಅಶ್ವಶಕ್ತಿಯ ಈ ಇಂಜಿನ್ನುಗಳು ಭಾರತದಲ್ಲಿಯೇ ತಯಾರಾದ ಇಂಜಿನ್ನುಗಳಲ್ಲಿ ಅತಿ ದೊಡ್ಡವು. ಇದಲ್ಲದೆ ಮುಖ್ಯವಾಗಿ ಒಕ್ಕಲುತನಕ್ಕೆ ಉಪಯೋಗವಾಗಲಿರುವವು ೩ ಅಶ್ವಶಕ್ತಿ ಯುಳ್ಳ ಒಂದು ಚಿಕ್ಕ ಇಂಜಿನ್ನನ್ನು ತಣ್ಣಗಾಗುವ (Air-Cooled) AVA—1 ಪ್ರಕಾರದ ಇಂಜಿನ್ನುಗಳನ್ನು ತಯಾರಿಸುವ ಯೋಜನೆ ಇದೆ.

ಈ ರೀತಿ ವ್ಹರ್ಟಿಕಲ್ ಇಂಜಿನ್ನುಗಳನ್ನು ತಯಾರಿಸುವ ಕಂಪನಿಯ ಸಾಹಸದ ಹಾಗೂ ಧೈರ್ಯದ ಧೋರಣೆಯು ಅನೇಕ ವಿರೋಧಗಳನ್ನೆದುರಿಸಿ ಭಾರತವನ್ನು, ಡಿಜೆಲ್ ಇಂಜಿನ್ನುಗಳನ್ನು ನಿರ್ಯಾತ— ಮಾಡುವ ದೇಶವ ನ್ನಾಗಿ ಮಾಡುವದರಲ್ಲಿ ಅತ್ಯಂತ ಯಶಸ್ವೀಯಾಯಿತು. ಈ ಸಾಧನೆಯಿಂದ ಕಂಪನಿಯು, ಮೂಲಶೋಧಕರೆಂಬ ಸಮೂಹದ ಕೀರ್ತಿಗೆ ತನ್ನ ಅಳಿಲು ಸೇವೆಯನ್ನು ಸಲ್ಲಿಸಿದೆ.



3 M. V. A. ಪಾವರಿನ ಟ್ರ್ಯಾನ್ಸಫಾರ್ಮರ 33/11 K. V.



ಟ್ರ್ಯಾನ್ಸಫಾರ್ಮರ ಶಾಪ್



3 K. W. ಸ್ಕ್ವೇರ ಪಾಥ ಆಲ್ಟರನೇಟರ 230 ವೊಲ್ಟ್ಸ ಸಿಂಗಲ್ ಫೇಸ



150 H. P. 1440 R. P. M. ಸ್ಲಿಪ್ರಿಂಗ ಮೋಟಾರ

# ಕಿರ್ಲೋಸ್ಕರ ವಾಯುವಿಜ್ಞಾನ (ನ್ಯೂಮ್ಯಾಟಿಕ್) ಕಂಪನಿ ಲಿ.

## ಹಡಪ್ಸರ ಔದ್ಯಮಿಕ ಕ್ಷೇತ್ರ ಪುಣೆ–೧.

೧. **ಸಾಮಾನ್ಯ ವಿಷಯ**:— ಕಿರ್ಲೋಸ್ಕರ ನ್ಯೂಮ್ಯಾಟಿಕ್ ಕಂಪನಿಯು ಕಿರ್ಲೋಸ್ಕರ ಬ್ರದರ್ಸ ಲಿಮಿಟೆಡ್ ಇದರ ಅಂಗ ಸಂಸ್ಥೆ. ಕಿರ್ಲೋಸ್ಕರವಾಡಿಯನ್ನು ಮಾರ್ಚ ೧೯೫೮ ರಲ್ಲಿ ಸಂಘೀಕರಿಸಲಾಗಿದೆ. ಅದರ ಅಧಿಕೃತ ಬಂಡವಲು ೫೦ ಲಕ್ಷರೂಪಾಯಿಗಳು. ಆದರಲ್ಲಿ ೧೦,೦೦೦ ಕ್ಯೂಮುಲೇಟಿವ್ಹ ರಿಡೀಮಬಲ್ ಪ್ರಿಪರನ್ಸಶೇರ್ಸ ರೂ. ೧೦೦/– ರದು. ಹಾಗೂ ೪೦,೦೦೦ ಇಕ್ವಿಟಿ ಶೇರ್ಸ ಪ್ರತಿಯೊಂದು ಶೇರು ೧೦೦/– ರದು.

ಬಂಡವಲು ೨೫ ಲಕ್ಷ ರೂಪಾಯಿ. ಅದರಲ್ಲಿ ೧೦,೦೦೦ ಪ್ರಿಫರನ್ಸ ಶೇರುಗಳು, ೧೫,೦೦೦ ಇಕ್ವಿಟಿ ಶೇರುಗಳು. ಇವುಗಳನ್ನು ೧೯೫೮ ನೇ ಮೇ ತಿಂಗಳಲ್ಲಿ ತೆಗೆಯಲಾಯಿತು. ಮತ್ತು ಪೂರ್ಣವಾಗಿ ಹಣ ಬಂದಿದೆ.

**ಡಾಯರೆಕ್ಟರರು**:—(೧) ಸರ್. ಶ್ರೀ ರಾಮ (೨) ಶ್ರೀ. ಎಸ್. ಎಲ್. ಕಿರ್ಲೋಸ್ಕರ (೩) ಶ್ರೀ ವ್ಹಿ. ಪಿ. ವರ್ದೆ (೪) ಶ್ರೀ. ಎಸ್. ಬಿ. ಖೇರ (೫) ಸರದಾರ ಜಗನ್ನಾಥ ಮಹಾರಾಜ ಪಂಡಿತ (೬) ಶ್ರೀ. ಟಿ. ವ್ಹಿ. ಧಾರಪ.

**ಮ್ಯಾನೇಜಿಂಗ ಎಜೆಂಟ್ಸ**: ಮೇಸರ್ಸ ಕಿರ್ಲೋಸ್ಕರ ಇಂಡಸ್ಟ್ರೀಜ, ಪುಣೆ.

**ಚೀಫ ಎಕ್ಝಿಕ್ಯೂಟಿವ್ಹ**: ಮೇಜರ ಜನರಲ್ ಎಚ್. ಎಮ್. ಮೋಹಿತೆ. (ರಿಟಾಯರ್ಡ)

ಯುನಾಯಿಟೆಡ್ ಕಿಂಗಡಮ್‌ದ ಮೆಸರ್ಸ ಬ್ರೂಮ ಆ್ಯಂಡ ವಾಡೆ ಲಿಮಿಟೆಡ್ ಇವರ ನೆರವಿನಿಂದ ಕಂಪನಿಯು ಏಅರ ಕಾಂಪ್ರೆಸರ್ಸ, ರಾಕ್ ಡ್ರಿಲ್ ಮತ್ತು ನ್ಯೂ ಮ್ಯಾಟ್ರಿಕ್ ಟೂಲ್ಸಗಳ ಉತ್ಪಾದನೆಯಲ್ಲಿ ತೊಡಗಿದೆ. ಕಂಪನಿಯ ಕಾರಖಾನೆಯು ಪುಣೆಯ ಹಡಪ್ಸರದ ಔದ್ಯಮಿಕ ಕ್ಷೇತ್ರದಲ್ಲಿದೆ.

೨. **ಉತ್ಪಾದನೆ**:— ವಾಯು ಒತ್ತಡ ಯಂತ್ರದ (Air compressor) ಬೆಳವಣಿಗೆ ಹಾಗೂ ಚಿಕ್ಕ ಪ್ರಮಾಣದ ಮೇಲೆ ಉತ್ಪಾದನೆಯ

ಕಾರ್ಯವು ೧೯೫೮ ನೇ ನವ್ಹೆಂಬರದಿಂದ ಆರಂಭವಾಯಿತು. ಅಂದಿನಿಂದ ಕಾರಖಾನೆಯು ಸಾಕಷ್ಟು ಪ್ರಮಾಣದಲ್ಲಿ ಪ್ರಗತಿಯನ್ನು ಸಾಧಿಸಿದೆ.

ವಾಯುವತ್ತಡ ಯಂತ್ರದ ಬಿಡಿ ಭಾಗಗಳನ್ನು ದೇಶದಲ್ಲಿಯೇ ತಯಾರಿಸುವ ವಿಷಯದಲ್ಲಿ ಅಪೂರ್ವ ಪ್ರಗತಿಯನ್ನು ಸಾಧಿಸಲಾಗಿದೆ. ಮತ್ತು ಸ್ಟ್ಯಾಂಡರ್ಡ ಪೋರ್ಟೆಬಲ್ ರೋಟರಿ ಏಅರ ಕಾಂಪ್ರೇಸರ ಯಂತ್ರದಲ್ಲಿಯ ೧೦೦ ಕ್ಕೆ ೯೫ ಕ್ಕೂ ಮೇಲ್ಪಟ್ಟ ಭಾಗಗಳು ದೇಶೀಯವಾಗಿದೆ. 'ಕಿರ್ಲೋಸ್ಕರ— ಬ್ರೂಮವಾಡ'ರಿಂದ ತಯಾರಾದ ಬಹಳಷ್ಟು ಯಂತ್ರಗಳು ದೇಶದ ನಾನಾ ಭಾಗಗಳಲ್ಲಿ ಬಳಸಲ್ಪಡುತ್ತವೆ. ಮುಖ್ಯವಾಗಿ ಸರಕಾರದವರು ಹಾಗೂ ಗುತ್ತಿಗೆದಾರರು `ಹಾಗೂ ಕಾಲುವೆ ಕಟ್ಟುವ ಮತ್ತು ಬಾವಿ ತೋಡುವ ಯೋಜನೆಗಳಲ್ಲಿ ಈ ಉಪಕರಣಗಳನ್ನು ಉಪಯೋಗಿಸುತ್ತಿದ್ದಾರೆ. ಅಚಲ ಮಾದರಿಗಳು (Immovable models) ಉದ್ಯೋಗಗಳಲ್ಲಿ ಸೇವೆ ನೀಡುತ್ತವೆ ಎತ ರ ಪ್ರದೇಶಗಳಲ್ಲಿ ರಸ್ತೆ ನಿರ್ಮಿಸುವದಕ್ಕಾಗಿ ಮೆ|| ಡಾಯರೆಕ್ಟರ ಜನರಲ್— ಬಾರ್ಡರ ರೋಡ್ಸ ಇವರಿಗೆ ಸಾಕಷ್ಟು ಯಂತ್ರಗಳನ್ನು ಒದಗಿಸಲಾಗಿದೆ. ಸಧ್ಯಕ್ಕೆ ಕೆಳಗೆ ಕಾಣಿಸಿದ ಯಂತ್ರಗಳನ್ನು ಕಂಪನಿಯು ಉತ್ಪಾದಿಸುತ್ತದೆ.

## ಪೋರ್ಟೆಬಲ್ ಡ್ರಿವ್ಹನ್ ರೋಟರಿ ಕಾಂಪ್ರೆಸರ್ಸ
## (Portable Diesel Driven Rotary Compressors)

(೧) ಟೈಪ WR–120 'ಕಿರ್ಲೋಸ್ಕರ B 4 T' ಇಂಜಿನ್ನಿಗೆ ಜೋಡಿಸಿದ್ದು ಇದು ನಿಮಿಷಕ್ಕೆ ೧೨೦ ಘನಫೂಟ ಹವೆಯನ್ನು ಕೊಡುತ್ತದೆ.

(೨) ಟೈಪ WR–120 'ಪರ್ಕಿನ್ಸ' P–6 ಇಂಜಿನ್ನಿಗೆ ಜೋಡಿಸಿದ್ದು. ಇದು ನಿಮಿಷಕ್ಕೆ ೧೨೦ ಘನಫೂಟ ಹವೆಯನ್ನು ಕೊಡುತ್ತದೆ.

(೩) ಟೈಪ WR–120 'ಪರ್ಕಿನ್ಸ' P–4 ಇಂಜಿನ್ನಿಗೆ ಜೋಡಿಸಿದ್ದು. ಇದು ನಿಮಿಷಕ್ಕೆ ೧೨೦ ಘನಫೂಟ ಹವೆಯನ್ನು ಕೊಡುತ್ತದೆ.

(೪) ಟೈಪ WR–210 'ಲೇಲ್ಯಾಂಡ' UE–350 ಇಂಜಿನ್ನಿಗೆ ಜೋಡಿಸಿದ್ದು. ಇದು ನಿಮಿಷಕ್ಕೆ 210 ಘನಫೂಟ ಹವೆಯನ್ನು ಕೊಡುತ್ತದೆ.

## ಅಚಲ ವಿದ್ಯುಚ್ಚಾಲಿತ ಒತ್ತಡ ಯಂತ್ರಗಳು
## (Stationary Electrically Driven Compressors)

(೫) ಟೈಪ WR–120 'ಕಿರ್ಲೋಸ್ಕರ ವಿದ್ಯುತ್ ಮೋಟರ ಚಾಲಿತ ರೋಟರಿ ಒತ್ತಡ ಯಂತ್ರ' ಇದು ಒಂದು ನಿಮಿಷಕ್ಕೆ ಸರಾಸರಿ ೧೦೦ ಘನಫೂಟ ಹವೆಯನ್ನು ಕೊಡುತ್ತದೆ.

(೬) ಟೈಪ WR–210 'ಕಿರ್ಲೋಸ್ಕರ ವಿದ್ಯುತ್ ಮೋಟರ ಚಾಲಿತ ರೋಟರಿ ಒತ್ತಡ ಯಂತ್ರ.' ಇದು ಒಂದು ನಿಮಿಷಕ್ಕೆ ಸರಾಸರಿ ೨೧೦ ಘನಫೂಟ ಹವೆಯನ್ನು ಕೊಡುತ್ತದೆ.

(೭) ಟೈಪ N. A. ವಿದ್ಯುತ್ ಮೋಟರ ಚಾಲಿತ ರೆಸಿಪ್ರೋಕೆಟಿಂಗ (Reciprocating) ಒತ್ತಡ ಯಂತ್ರ. ಇದು ಸರಾಸರಿ ನಿಮಿಷಕ್ಕೆ ೨ ಘನಫೂಟ ಹವೆಯನ್ನು ಕೊಡುತ್ತದೆ.

(೮) ಟೈಪ N–3, 3 HP, 4 HP, 5 HP. ವಿದ್ಯುತ್ ಮೋಟಾರ ಚಾಲಿತಒತ್ತಡ ಯಂತ್ರಗಳು. ಇವು ಅನುಕ್ರಮವಾಗಿ ನಿಮಿಷಕ್ಕೆ ೯.೮ ಘನಫೂಟು, ೧೨ ಘನಫೂಟು, ೧೪.೮ ಘನಫೂಟು ಹವೆಯನ್ನು ಕೊಡುತ್ತವೆ.

## ರಾಕ್‌ಡ್ರಿಲ್ಸ್ (Rock Drills)

(೧) ಟೈಪ CB–250 ೩೮ ಪೌಂಡ ಭಾರವುಳ್ಳದ್ದು.
(೨) ಟೈಪ CB–600 ೪೫ ,, ,,

ಬಳಕೆದಾರರ ನಿರ್ದಿಷ್ಟವಾದ ಬೇಡಿಕೆಗೆ ತಕ್ಕಂತೆ ಕೆಲ ವಿಶೇಷ ಕೆಲಸಗಳನ್ನು ಮಾಡಿಕೊಡಲಾಗಿದೆ.

ಈಗ ಕಂಪನಿಯು ನಿಮಿಷಕ್ಕೆ ೧೦೦ ರಿಂದ ೬೦೦ ಘನಫೂಟ ಹವೆ ಕೊಡುವ ಅನೇಕ ವರ್ಗಗಳ ಅಚಲ ರೆಸಿಪ್ರೊಕೆಟಿಂಗ ಯಂತ್ರಗಳನ್ನು ಅಭಿವೃದ್ಧಿಸುವದರಲ್ಲಿ ತೊಡಗಿದೆ. ಈ ಯಂತ್ರಗಳು ಈ ವರ್ಷವೇ ಪೇಟೆಗೆ ಬರಬಹುದು. ನಿಮಿಷಕ್ಕೆ ೩೮೦ ಘನಫೂಟ ಹವೆ ಕೊಡುವ ದೊಡ್ಡ ರೋಟರಿ ಯಂತ್ರವನ್ನು ಈ ವರ್ಷವೇ ತಯಾರಿಸುವ ಯೋಜನೆಯಿದೆ.

ಒತ್ತಡ ಯಂತ್ರಗಳ ತಯಾರಿಕೆಯ ಮೊದಲನೆಯ ವರ್ಷವೇ ಮಾರಾಟ

ದಿಂದ ೨೨ ಲಕ್ಷ ರೂ. ಗಳು ಬಂದವು. ಮತ್ತು ಎರಡನೇವರ್ಷ ಅಂದರೆ ಈ ವರ್ಷ ಮೊದಲಿನ ಹತ್ತು ತಿಂಗಳಲ್ಲಿಯೇ ಕಂಪನಿಯು ಒಂದು ಕೋಟಿ ರೂಪಾಯಿಯ ಗುರಿಯನ್ನು ಮುಟ್ಟಿದೆ. ಮತ್ತು ಒಟ್ಟು ಮಾರಾಟವು ೧–೨೫ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಾಗುವದೆಂದು ನಿರೀಕ್ಷಿಸಲಾಗಿದೆ.

'ಕಿರ್ಲೋಸ್ಕರ–ಬ್ರೂಮವಾಡ' ದಿಂದ ಉತ್ಪಾದಿಸಲಾಗುವ ವಸ್ತುಗಳ ಮಾರಾಟವನ್ನು ಹಂಚಿಕೆದಾರರಾದ ಮೆಸರ್ಸ ಪ್ಲೋಲ್ಪಾಸ ಲಿಮಿಟೆಡ್ ಇವರೇ ನೋಡಿಕೊಳ್ಳುತ್ತಾರೆ.

**೪. ಕೆಲಸಗಾರರ ಸಂಖ್ಯಾಬಲ**:— ಕಂಪನಿಯಲ್ಲಿ ೫೦೦ ಕ್ಕೂ ಮೇಲ್ಪಟ್ಟು ಕೆಲಸಗಾರರಿದ್ದಾರೆ.

**೫. ನಿರ್ಯಾತ** (Export):— ಕಂಪನಿಯು ಸರಕುಗಳಿಗೆ ನೆರೆ ರಾಷ್ಟ್ರಗಳಲ್ಲಿರುವ ಬೇಡಿಕೆಗಳನ್ನು ಅನುಲಕ್ಷಿಸಿ ಆಯಾ ದೇಶಗಳಿಗೆ ಸರಕುಗಳನ್ನು ನಿರ್ಯಾತ ಮಾಡಲು ಪ್ರಯತ್ನ ಮಾಡಲಾಗುತ್ತಿದೆ.

೬. **ಬೆಳವಣಿಗೆ** (Expansion):— ಮೇಲೆ ಹೇಳಿದಂತೆ ಅನೇಕ ವರ್ಗಗಳ ರೆಸಿಪ್ರೋಕೇಟಿಂಗ ಕಾಂಪ್ರೆಸರುಗಳನ್ನು ಉತ್ಪಾದಿಸುವದಲ್ಲದೆ ಕಂಪನಿಯು ಬ್ರೆಕರ್ಸ (Breakers), ಡ್ರಿಲ್‌ಲೆಗ್ಜ (Drill, legs), ಗ್ರೈಂಡರ್ಸ (Grinders), ಮೊದಲಾದ ವಾಯುವಿಜ್ಞಾನದ ಸರಕುಗಳ ಮತ್ತು ರೋಟರಿ ವೈಬ್ರೇಟರ (Rotary Vibrator), ಸಂಪ ಪಂಪುಗಳ (Sump Pumps) ತಯಾರಿಕೆಯನ್ನು ಕೈಕೊಳ್ಳಲಿರುವದು. ಇವುಗಳ ತಯಾರಿಕೆಗೆ ಬೇಕಾಗುವ ಪರವಾನಿಗೆಯನ್ನು ಸರಕಾರದಿಂದ ಈಗಾಗಲೇ ಪಡೆದುಕೊಳ್ಳಲಾಗಿದೆ.

ಒಂದು ಪ್ರಸಿದ್ಧ ಪರದೇಶಿ ಕಂಪನಿಯೊಡನೆ, ಭಾರತದಲ್ಲಿ ಅವರ ಪರವಾನಿಗೆಯಿಂದ ೧೨ ಅಶ್ವಶಕ್ತಿಯುಳ್ಳ ಏಅರ ಕಂಡಿಶನಿಂಗ ಯುನಿಟ್ಟುಗಳನ್ನು ತಯಾರಿಸಲು ಮಾತುಕತೆ ನಡೆದಿದ್ದು ಅದು ಕೊನೆಯ ಘಟ್ಟದಲ್ಲಿದೆ. ಇದಲ್ಲದೆ ಮತ್ತೊಂದು ಯುರೋಪಿಯನ ಕಂಪನಿಯೊಡನೆ ಭಾರತದಲ್ಲಿ ರೆಫ್ರಿಜಿರೇಟಿಂಗ ಕಾಂಪ್ರೆಸರಗಳನ್ನು ಉತ್ಪಾದಿಸಲು ಪರವಾನಿಗೆಯ ಮಾತುಕತೆಗಳ ಬಗ್ಗೆ ಚರ್ಚೆ ನಡೆದಿರುತ್ತದೆ.